ವಿಜಯ ವೆಂಕಟರಮಣ ಕವಿಯ

ಶ್ರೀ ಭಗವಚ್ಚರಿತ್ರೆ

ಅರ್ಪಣೆ

ಲಕ್ಷ್ಮೀ ವೆಂಕಟೇಶ್ವರ, ಶೇಷಾದ್ರೀಶ
ವಿಜಯ ವೆಂಕಟರಮಣ ಕವಿಯ ಹೃದಯದಿಂದ ಹೊರಹೊಮ್ಮಿದ
ಈ ಪದ್ಯ ಪುಷ್ಪಮಾಲಿಕೆಯನ್ನು ಶ್ರೀ ಸೀತಾರಾಮಚಂದ್ರ
ರೂಪಿಯಾಗಿ ಇಲ್ಲಿ ನೆಲಸಿರುವ ನಿನ್ನ ಪವಿತ್ರ ಚರಣ
ಕಮಲಗಳಲ್ಲಿ ಅತಿ ಪ್ರೇಮದಿಂದ ಅರ್ಪಿಸು
ತ್ತಿದ್ದೇವೆ. ಸ್ವೀಕರಿಸಿ ಅನುಗ್ರಹಿಸು ದೇವ.

ಇತಿ
ಭಗವತ್ಸೇವಾ ಸಮಿತಿ
ಚಿಕ್ಕಹೆಜ್ಜಾಜಿ

Sri Sri Sringeri Jagadguru Mahasamsthanam,
Sringeri Math Sharada Peetham

P. O. SRINGERI - KADUR (Mysore State)

Y. M. Krishnamoorthy, B.Sc,
Private Secretry

Camp ಕೆ-3 ಗ್ರೀನ್‌ಪಾರ್ಕ್ ಎಕ್ಸ್‌ಟೆನ್‌ಷನ್
ನವದೆಹಲಿ-16

BL. No. 6/16/66/67 *Date 28-12-1966*

ಶ್ರೀ ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆಶೀರ್ವಾದಗಳು.

ನೀವು ನಿಮ್ಮ ವಂಶದ ಪೂರ್ವಿಕರಾದ ಚಿಕ್ಕಹೆಜ್ಜಾಜಿ ಶ್ರೀ ವಿಜಯ ವೆಂಕಟ ರಮಣ ಎಂಬ ಕವಿಯು ಸುಮಾರು ಮೂರುನೂರು ವರ್ಷಗಳ ಕೆಳಗೆ ರಚಿಸಿದ "ಭಗವಚ್ಚರಿತ್ರೆ" ಎಂಬ ಅಪ್ರಕಟಿತವಾದ ಪದ್ಯಕಾವ್ಯದ ಕೈಬರಹದ ಪ್ರತಿಯನ್ನು ಕಾಪಾಡಿಕೊಂಡು ಬಂದು ಈಗ ಮುದ್ರಿಸುತ್ತಿರುವ ಸಂಗತಿ ಶ್ರೀ ಶ್ರೀ ಶ್ರೀ ಗುರುಗಳವರು ತಿಳಿದು ಸಂತೋಷಿಸಿ ಕಾವ್ಯವನ್ನು ಅವಲೋಕಿಸಿದರು.

ಈ ಕಾವ್ಯದ ಪ್ರಕಟಣೆಯಿಂದ ಬರುವ ಉತ್ಪತ್ತಿಯನ್ನು ಕವಿಯ ಜನ್ಮ ಸ್ಥಳವಾದ ಚಿಕ್ಕಹೆಜ್ಜಾಜಿ ಗ್ರಾಮದ ಶ್ರೀ ಸೀತಾರಾಮ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಪೂಜಾಕಾರ್ಯಗಳಿಗೆ ಮೀಸಲಾಗಿ ಇಡುವ ನಿಮ್ಮ ಉದ್ದೇಶವು ಶ್ಲಾಘನೀಯವಾಗಿದೆ. ಕಾವ್ಯವು ಸರಳವಾಗಿ ನೀತಿ ಬೋಧಕವಾಗಿ ರಸಭರಿತವಾಗಿ ಎಲ್ಲರೂ ಓದಲು ಯೋಗ್ಯವಾಗಿರುತ್ತೆ. ಇದನ್ನು ಮುದ್ರಿಸಿ ಹೊರತಂದು ಕನ್ನಡ ವಾಙ್ಮಯಕ್ಕೆ ಸೇವೆಸಲ್ಲಿಸಿರುತ್ತೀರಿ.

ಶ್ರೀ ಶ್ರೀ ಗಳವರು ನಿಮ್ಮ ಉದ್ದೇಶ ಸಫಲವಾಗಿ ನಿಮಗೆ ಕೀರ್ತಿ ಮತ್ತು ಪುಣ್ಯ ಲಭಿಸಲಿ ಎಂದು ಅನುಗ್ರಹಿಸಿ ಕೊಟ್ಟಿರುವ ಶ್ರೀ ಶಾರದಾ ಚಂದ್ರಮೌಳೀಶ್ವರರ ಪ್ರಸಾದ ಮತ್ತು ಆಶೀರ್ಮಂತ್ರಾಕ್ಷತೆಗಳನ್ನು ಸಹ ಕಳುಹಿಸಿರುತ್ತೇನೆ.

ನಮಸ್ಕಾರಗಳು

Y.M. ಕೃಷ್ಣಮೂರ್ತಿ

Keerthanakesari, Dasarathna
BHADRAGIRI KESHAVADAS, B.A.,LL.B.,
Founder President

"Dasashrama"
Rajajinagar, Bangalore-10
Mysore State, South India

Date 11-11-66

"ರವಿ ಕಾಣದುದನ್ನು ಕವಿ ಕಾಣಬಲ್ಲ." ರಸಋಷಿಯಾದ ಕವಿಯು ಲೋಕೋದ್ಧಾರಾರ್ಥ ಕವಿತೆಗಳನ್ನು ಮಾಡಿ ತಾನೂ ಆನಂದಪಟ್ಟು ಲೋಕವನ್ನೂ ಆನಂದಪಡಿಸುವ. ಯಾವೆಡೆ ಯಾವ ಮಹಾತ್ಮನ ಉದಯವಾಗುವುದೆಂಬುದನ್ನು ತಿಳಿಸುವುದು ಸಾಧ್ಯವಿಲ್ಲ. ಕರ್ನಾಟಕದ ಚಿಕ್ಕಹೆಜ್ಜಾಜಿ ಮಹಾಕವಿಯೋರ್ವನಿಗೆ ಜನ್ಮ ಕೊಟ್ಟಿತು ವಿಜಯ ವೆಂಕಟರಮಣ ಕವಿಯೇ ಈ ಮಹನೀಯ. ವಾರ್ಧಕ ಷಟ್ಪದಿಯಲ್ಲಿ ಶ್ರೀ ಭಗವಚ್ಚರಿತ್ರೆಯನ್ನು ನವರಸ ಭರಿತವಾಗಿ ಬರೆದು ಇವರು ಲೋಕಕ್ಕೆ ಮಹದುಪಕಾರ ಮಾಡಿದ್ದಾರೆ. ಭಕ್ತಿ ಸ್ತೋತ್ರದ ಸ್ರೋತ ನಿತ್ಯ ನಿರಂತರ ಹರಿದಿದೆ ಈ ಮಹಾಕಾವ್ಯದಲ್ಲಿ. ಓದಿಯೇ ಇದರ ಸವಿಯನ್ನು ತಿಳಿಯಬೇಕಾದುದು. ಈ ಕವಿಯ ವಂಶಸ್ಥರೂ ಮತ್ತು ಅದೇ ವಂಶಸ್ಥರಾದ ನಮ್ಮ ಪ್ರಿಯಶಿಷ್ಯ ಶ್ರೀ ಕೃಷ್ಣಮೂರ್ತಿಯವರೂ ಈ ಮಹಾಗ್ರಂಥವನ್ನು ಪ್ರಕಟಿಸಿ ಕರ್ನಾಟಕದ ಆಸ್ತಿಕರಿಗೆ ಮಹದುಪಕಾರ ಮಾಡಿದ್ದಾರೆ. ಕವಿಯ ವಂಶಸ್ಥರೆಲ್ಲರಿಗೂ ಮತ್ತು ಶ್ರೀ ಕೃಷ್ಣಮೂರ್ತಿಯವರಿಗೂ ಅವರ ಕುಟುಂಬಕ್ಕೂ ಶ್ರೀ ಅನುಗ್ರಹ ವಿಠಲನು ಅನಂತವಾಗಿ ಆಶೀರ್ವದಿಸಲೆಂದು ಭಗವಂತನನ್ನು ಬೇಡುತ್ತೇವೆ.

ಇಂತೀ, ಆಶೀರ್ವಾದಗಳೊಂದಿಗೆ

ಭದ್ರಗಿರಿ ಕೇಶವದಾಸ್

ಶ್ರೀ ಭಗವಚ್ಚರಿತ್ರೆ

ವಿಜಯ ವೆಂಕಟರಮಣ ಚಿಕ್ಕಹೆಜ್ಜಾಜಿಯಲ್ಲಿ ಹುಟ್ಟಿ ಬೆಳೆದು ಕವಿಯಾಗಿ ಸುತ್ತಣ ಜನರಿಗೆ ಆಧ್ಯಾತ್ಮಿಕವಾದ ಭೋಧೆ ಮಾಡುತ್ತ ಮಾರ್ಗದರ್ಶಕರಾಗಿದ್ದ ರೆಂಬುದು ಆ ಕಡೆಯ ಜನರಿಗೆ ಚಿರಪರಿಚಿತವಾಗಿದೆ. ಈ ಕವಿಯ ಕಾಲ ಸುಮಾರು ೧೭೦೦ ಇರಬೇಕೆಂದು ಕವಿಚರಿತೆಕಾರರು ಊಹಿಸಿದ್ದಾರೆ. ಈತನ ಶ್ರೀ ಭಗವಚ್ಚರಿತ್ರೆ ಎಂಬ ಗ್ರಂಥದಲ್ಲಿಯೂ ಕಾಲದ ಬಗ್ಗೆ ನಿರ್ಣಾಯಕವಾದ ಹೇಳಿಕೆಗಳಿಲ್ಲ. ಅಷ್ಟೇ ಅಲ್ಲ ಈ ಗ್ರಂಥದಲ್ಲಿ ಯಾವೊಂದು ವಿವರಗಳಿವೆಯೆಂಬು ದನ್ನು ಪರಿಶೀಲಿಸಲು ಆಗ ಮುದ್ರಣವೂ ಆಗಿರಲಿಲ್ಲ. ಈಗ ಕವಿಗಳ ವಂಶಸ್ಥರ ಮತ್ತು ವಂಶೀಕರಾದ ಶ್ರೀ ಕೃಷ್ಣಮೂರ್ತಿಗಳ ಶ್ರದ್ಧೆಯಿಂದ ಈ ಕಾವ್ಯವು ಮುದ್ರಿತವಾಗಿ ರಸಿಕರ, ವಿದ್ವಾಂಸರ ಕೈ ಸೇರುತ್ತಿದೆ. ಇದೊಂದು ಸಂತಸದ ವಿಚಾರ.

ಭಕ್ತಿಯೇ ಪ್ರಧಾನವಾದ ಈ ಕವಿತೆಯಲ್ಲಿ ಕಾವ್ಯದ ಹಿರಿಮೆಯನ್ನು ಹೆಚ್ಚಿಸುವ ಅಲಂಕಾರಾದಿಗಳೂ ನವರಸಪೂರ್ಣವಾದ ವರ್ಣನೆಗಳೂ, ಚಮ ತ್ಕಾರಗಳೂ ಒಟ್ಟುಕೂಡಿವೆ. ಹದಿನಾರನೆಯ ಶತಮಾನದ ಕನ್ನಡ ಕಾವ್ಯದ ಎಲ್ಲ ಗುಣಗಳೂ ಈ ಕಾವ್ಯದಲ್ಲಿ ತಲೆದೋರಿವೆ.

ಕವಿಯ ಬಗ್ಗೆ ಆತನ ವಂಶೀಕರಲ್ಲಿ ಅನೇಕ ದಂತ ಕಥೆಗಳು ಬೆಳೆದು ಬಂದಿವೆ. ಅದೆಲ್ಲವನ್ನೂ ಸಂಗ್ರಹಿಸಿ ಒಂದೆಡೆ ಕೊಟ್ಟರೆ ಅವುಗಳ ಸ್ವಾರಸ್ಯವನ್ನು ಓದುಗರು ಮೆಚ್ಚಬಹುದು.

ಈ ಕವಿಯು 'ಆಂಜನೇಯ ದಂಡಕ' ಮತ್ತು 'ಭೋಜನ ರಗಳೆ' ಎಂಬ ಮತ್ತೆರಡು ಕೃತಿಗಳನ್ನು ಬರೆದಿರುವಂತೆ ಕಂಡುಬರುತ್ತದೆ. ಈ ಎರಡು ಕೃತಿಗಳ ಬಗ್ಗೆಯು ಕತೆಗಳಿವೆ. ಇವೂ ಪ್ರಕಟವಾದರೆ ಕವಿಯ ಕಾಲ ನಿರ್ಣಯಕ್ಕೂ ಸಾಮರ್ಥ್ಯ ನಿರ್ಣಯಕ್ಕೂ ಹೆಚ್ಚು ಅನುಕೂಲವಾಗುತ್ತದೆ.

ವಿದ್ವದ್ರಸಿಕರು, ಕಾವ್ಯಪ್ರೇಮಿಗಳು ಈ ಕೃತಿಗಳಿಗೆ ತಕ್ಕ ಸಹಾಯವನ್ನು ಒದಗಿಸಿದರೆ ಸಾಹಿತ್ಯ ಸೇವೆಗೆ ಉಚಿತವಾದ ಪ್ರೋತ್ಸಾಹವನ್ನು ನೀಡಿದಂತಾಗುತ್ತದೆ. ವಿನಯವಂತನಾದ ಈ ಕವಿಯ ಭಕ್ತಿಯು ಓದುಗರಿಗೆ ಮಾರ್ಗದರ್ಶಕವಾಗಲಿ. ಕಾವ್ಯಮಥನದಿಂದ ಸದ್ಬುದ್ಧಿ ತಲೆದೋರಲಿ.

ಮಥನಿಸದೆ ಮಲಯಜಮದನುಲೇಪಕನುವಹುದೆ
ಮಥನಿಸದೆ ತಿಲವನದು ಬೆಳಗಿಗಿನ್ನೊಳವಹುದೆ
ಮಥನಿಸದೆ ಪುಂಡ್ರೇಕ್ಷುವಿನಿಗೆ ಸಾಧನವಹುದೆ ಮಥನವೇ ಮುಖ್ಯಮದರಿಂ
ಮಥನಿಸದೆ ವಿದ್ಯಂಗಳರಿವಿಂಗೆ ನೆರವಹುದೆ
ಮಥನಿಸದೆ ಸತ್ಕಾವ್ಯ ಮತಿಗೆ ಸಾರಥಿಯಹುದೆ
ಮಥನಗೈದೀ ಕೃತಿಯೊಳೊರೆವ ಸಾರವ ಸವಿದು ಪೊರೆವುದುತ್ತಮ ಪುರುಷರು

ಜಿ. ವೆಂಕಟಸುಬ್ಬಯ್ಯ

ನಾಲ್ಕು ಮಾತು

ಪ್ರೊ॥ ಎಸ್. ಕೆ. ರಾಮಚಂದ್ರರಾವ್

ಕನ್ನಡದ ಸಾಹಿತ್ಯಸ್ರೋತ ಹರಿದು ಬಂದ ದಾರಿಯೆಲ್ಲ ಸ್ಪಷ್ಟವಾಗಿಲ್ಲ. ಕಣ್ಣಿಗೆ ಕಾಣಿಸದೆ ಗುಪ್ತಗಾಮಿನಿಯಾಗಿ ಈ ನದಿಯು ಹರಿದ ನಿದರ್ಶನಗಳು ನೂರಾರು. ಇಂಥವುಗಳಲ್ಲಿ ಚಿಕ್ಕಹೆಜ್ಜಾಜಿ ವಿಜಯ ವೆಂಕಟರಮಣ ಕವಿಯ ಸಾಹಿತ್ಯಸೃಷ್ಟಿ ಸೇರಿದೆ. ಈ ಕವಿಯು ಜೀವಿಸಿದ್ದ ಕಾಲ ಸುಮಾರು ಮುನ್ನೂರು ವರ್ಷಗಳಷ್ಟು ಹಿಂದೆ; ಈತನ ಪ್ರೌಢಕಾವ್ಯವಾದ ಭಗವಚ್ಚರಿತ್ರೆ ಇಲ್ಲಿಯ ವರೆಗೆ ಅಚ್ಚು ಕಾಣದೆ ಅಡಗಿದ್ದಿತು. ಕರ್ಣಾಟಕ ಕವಿ ಚರಿತ್ರೆಯ ಸಂಪಾದಕರಿಗೇನೊ ಈ ಕವಿಯಿದ್ದುದೂ ಅವನ ಕಾವ್ಯದ ವಸ್ತುವೂ ತಿಳಿದಿದ್ದುವು. ಕವಿಯ ವಂಶೀಕರ ಆಸ್ಥೆಯಿಂದ ದುರ್ಲಭವಾಗಿದ್ದ ಆ ಕಾವ್ಯ ಇಂದು ಬೆಳಕು ಕಾಣುತ್ತಿದೆ. ಕನ್ನಡನಾಡಿನ ಅಂತರಾಳದಲ್ಲಿ ಹೀಗೆ ಅಡಗಿಕೊಂಡಿರುವ ಕೃತಿಗಳು ಇನ್ನೆಷ್ಟಿವೆಯೋ ಯಾವ ಕಾಲಕ್ಕೆ ಯಾರ ಶ್ರದ್ಧೆಯಿಂದ ಅವು ಹೊರಬರಬೇಕೋ ?

ಪ್ರಕೃತ, ಭಗವಚ್ಚರಿತ್ರೆಯೆನ್ನುವ ಈ ಗ್ರಂಥವು ಹದಿನೈದು ಅಧ್ಯಾಯಗಳ ಪದ್ಯಗ್ರಂಥ. 'ಭಾಗವತ ಹರಿಕಥಾಮೃತಶರಧಿ'ಯಿಂದ 'ಬೊಗಸೆ ಮಾತ್ರ' ವನ್ನು ಕವಿ ಇಲ್ಲಿ ಕೊಡಲೆಣಿಸಿದ್ದಾನೆ. 'ಷಟ್ಪದಿವರ್ಣಯುತ'ವಾದ ಇದು 'ಯತಿಗಣಗಳಿಂದೆ ಪೂಜಿತವಾಗಿ', 'ಭಾವಸಂಗತಿ ವೃತ್ತಿಯಿಂದೆ ಸೇವಿತವಾಗಿ', 'ಛಂದೋನುಗತವಾಕ್ಯದಿಂದೆ ಸಂಸ್ತುತವಾಗಿ', 'ಅಲಂಕಾರ ಗಂಭೀರವಾಗಿ' ಮೆರೆಯುತ್ತಿರುವ ಪ್ರಬಂಧ. ಹರಿವಿಚಾರವೇ ಮುಖ್ಯ ವಸ್ತುವಾದರೂ ನವರಸಗಳನ್ನು ಕವಿಯು ಬಳಸಿಕೊಂಡಿದ್ದಾನೆ. ಶಾಂತರಸದಂತೆ ಭಕ್ತಿರಸದಲ್ಲಿಯೂ ಎಲ್ಲ ರಸಗಳ ಸಮಾವೇಶವನ್ನು ಕಾಣಬಹುದಷ್ಟೆ.

ಕವಿಯ ವಿಚಾರವಾಗಿ ಖಚಿತವಾಗಿ ತಿಳಿದುಬಂದಿರುವ ವಿವರಗಳು ಅಷ್ಟಾಗಿ ಇರದು. ಅವರ ವಂಶೀಕರು ಕೆಲವಾರು ದಂತಕಥೆಗಳನ್ನು ಉಳಿಸಿಕೊಂಡಿದ್ದಾರೆ. ಊರ ಹಿರಿಯರ ನೆನಪಿನಲ್ಲಿ ಉಳಿದಷ್ಟು ವಿಚಾರಗಳನ್ನು ಕವಿಯ ವಂಶದಲ್ಲಿ ಬಂದಿರುವ ಗೆಳೆಯ ಕೃಷ್ಣಮೂರ್ತಿ ಸಂಗ್ರಹಿಸಿದ್ದಾರೆ.

ಈ ಆಧಾರದ ಮೇಲೆ ಮುಂದೆ ಕಾಣುವಷ್ಟು ವಿವರಗಳು ನಿಂತಿವೆ. ಗ್ರಂಥದ ಪೀಠಿಕಾಧ್ಯಾಯದಲ್ಲಿಯೇ ಕವಿಯು ತಾನು ಚಿಕ್ಕಹೆಜ್ಜಾಜಿ ವೆಂಕಟಪ್ಪನ ಮಗನೆಂದೂ, ನಾಗರಸಯ್ಯನ ಮೊಮ್ಮಗನೆಂದೂ, ತನ್ನದು ಆತ್ರೇಯಸ ಗೋತ್ರ ಋಕ್ಶಾಖೆಯೆಂದೂ, ತನ್ನ ಗುರುವು ಹುಚ್ಚಾರೂಢ ಚಿನ್ಮಯಾನಂದ ನೆಂದೂ ಕಾಣಿಸಿದ್ದಾನೆ.

ಚಿಕ್ಕಹೆಜ್ಜಾಜಿ ದೊಡ್ಡಬಳ್ಳಾಪುರಕ್ಕೆ ಒಂಬತ್ತುಮೈಲು ದೂರದಲ್ಲಿರುವ ಹಳ್ಳಿ. ಕವಿಯ ವಂಶದವರು ಇಂದಿಗೂ ಅಲ್ಲಿ ವಾಸಿಸುತ್ತಿದ್ದಾರೆ. ಅವರು ಸ್ಮಾರ್ತ ಬಡಗನಾಡು ಪಂಗಡದವರು. ಕವಿಯ ಕಾಲ ಕ್ರಿಸ್ತಾಬ್ದ ೧೬೦೦ ರಿಂದ ೧೭೦೦ ರ ಸುಮಾರೆಂದು ಕರ್ಣಾಟಕ ಕವಿಚರಿತೆಯ ಸಂಪಾದಕರ ಎಣಿಕೆ. ಅಜ್ಜನಾದ ನಾಗರಸಯ್ಯನ ವಿಚಾರವಾಗಿಯಾಗಲೀ, ತಂದೆ ವೆಂಕಟಪ್ಪನ ವಿಚಾರ ವಾಗಿಯಾಗಲೀ, ಏನೂ ತಿಳಿದು ಬಂದಿಲ್ಲ. ಹಳ್ಳಿಯ ಶಾನುಭೋಗವೃತ್ತಿ ಅವರಿಗಿದ್ದಿತಂತೆ; ಅನುಕೂಲಸ್ಥರಾಗಿದ್ದರಂತೆ. ವೆಂಕಟಪ್ಪನಿಗೆ ಬಹು ಕಾಲ ಮಕ್ಕಳಿಲ್ಲದೆ, ಮನೆದೇವರಾದ ತಿರುಪತಿ ವೆಂಕಟೇಶ್ವರನನ್ನು ಮಂಡಲಸೇವೆಯಿಂದ ಮೆಚ್ಚಿಸಿ ನಾಲ್ಕು ಮಂದಿ ಮಕ್ಕಳನ್ನುಪಡೆದನಂತೆ. ಕಡೆಯ ಮಗನೇ ಕವಿಯೆಂದೂ, ವೆಂಕಟಪ್ಪನಿಗೆ ಕನಸಿನಲ್ಲಿವೆಂಕಟೇಶ್ವರನು ಕಾಣಿಸಿಕೊಂಡು ಈ ಮಗುವನ್ನು ತನಗೆ ಸಮರ್ಪಿಸತಕ್ಕದ್ದೆಂದು ವಿಧಿಸಿದನೆಂದೂ ಐತಿಹ್ಯವಿದೆ.

ಪ್ರಕಾಶಕರು ಸಂಗ್ರಹಿಸಿದ ಕಥೆ ಹೀಗಿದೆ: ಮಗು ಹುಟ್ಟಿದ ಎಂಟೊಂಬತ್ತು ವರ್ಷಗಳ ವರೆಗೂ ಮಂಕಾಗಿ, ಮೂಕಾಗಿ ಇದ್ದಿತು. ತಂದೆತಾಯಿಯರಿಗೆ ಇದರಿಂದ ಕೊರಗು ಹೆಚ್ಚಿತು. ಎಂಟನೆಯ ವರ್ಷದಲ್ಲಿ ಮಗನಿಗೆ ಮುಂಜಿ ಮಾಡಬೇಕೆಂದು ತಂದೆ ಮನಸ್ಸು ಮಾಡಿದರು. ಈ ಶುಭ ಸಂದರ್ಭದಲ್ಲಿ ಹುಚ್ಚಾರೂಢ ಚಿನ್ಮಯಾನಂದ ಗುರುಗಳು ಮನೆಗೆ ದಯಮಾಡಿಸಿದರು. ಈ ಗುರುಗಳು ಯಾರು, ಎಲ್ಲಿಯವರು, ಅವರ ಪರಂಪರೆ ಏನು, ಅವರ ಸಂಪ್ರದಾಯ ಯಾವುದು ಮುಂತಾದ ವಿವರಗಳು ತಿಳಿದುಬರುವುದಿಲ್ಲ. ಕವಿಯು ಪೀಠಿಕಾ ಧ್ಯಾಯದಲ್ಲಿ ಶಂಕರಾಚಾರ್ಯರನ್ನು ಸ್ಮರಿಸಿ, ಗುರುಕೃಪೆಯಿಂದ ಅವಿದ್ಯಾಂಧ ಕಾರವು ತೊಲಗುತ್ತದೆಯೆಂದು ಹೇಳಿರುವುದನ್ನು ನೋಡಿದರೆ ಅದ್ವೈತ ಸಂಪ್ರದಾಯವಿದ್ದಿರಬಹುದು. ಆದರೆ "ಜೀವನೇ ಶಿಷ್ಯ, ಪರಮಾತ್ಮನೇ

ಗುರುವೆಂಬ ಭಾವದಿಂದಾಂತರ್ಯದೊಳ್ ಭಜಿಪ ಭಕ್ತ" ರನ್ನೂ ಪ್ರಸ್ತಾಪ ಮಾಡಿರುವುದು ಭಾಗವತ ಸಂಪ್ರದಾಯದ ನಿಷ್ಠೆಯನ್ನು ತೋರಿಸುತ್ತದೆ. ದೊಡ್ಡಬಳ್ಳಾಪುರದಲ್ಲಿಯೇ ಹುಚ್ಚಾರೂಢ ಮಠವೆಂಬುದೊಂದು ಮೊನ್ನೆ ಮೊನ್ನೆಯ ವರೆಗೂ ಇದ್ದಿತೆಂದು ಹೇಳುತ್ತಾರೆ. ಅಂತೂ ಇವರೇ ಈ ವಂಶದ ವರಿಗೆ ದೀಕ್ಷಾಗುರುಗಳಿದ್ದಿರಬಹುದು; ಉಪನಯನದ ವೇಳೆಗೆ ಅವರನ್ನು ಮನೆಗೆ ಕರೆಸಿಮದೂ ಇದೇ ಕಾರಣದಿಂದ ಇರಬಹುದು.

ಈ ಸಂದರ್ಭದಲ್ಲಿ ತಂದೆಯು ಮಗನ ಮಂಕುತನವನ್ನು ಗುರುಗಳಿಗೆ ಹೇಳಿದಾಗ ಅವರು ಇವನು ಅಪೂರ್ವವಾದ ಹುಡುಗನೆಂದೂ ಅವನಿಗೆ ಭಗವತ್ಕೃಪಾವಿಶೇಷವಿದೆಯೆಂದೂ ಹೇಳಿದರು. ಅಷ್ಟು ಮಾತ್ರವಲ್ಲ, ಅವನನ್ನು ತಮ್ಮೊಂದಿಗೆ ತಮ್ಮ ಸಂಚಾರ ಕಾಲವಲ್ಲಿ ಕರೆದೊಯ್ದರು. ಮುಂದೆ ಎಂಟು ವರ್ಷಗಳು ವೆಂಕಟರಮಣನು (ಇದೇ ಹುಡುಗನ ಹೆಸರು) ಈ ಅವಧೂತ ಗುರುಗಳೊಂದಿಗೇ ಊರೂರು ತಿರುಗುತ್ತ ಇದ್ದುಬಿಟ್ಟನು. ಎಳೆಯ ವಯಸ್ಸಿ ನಲ್ಲಿಯೇ ಒದಗಿದ ಈ ಅವಧೂತ ಪ್ರಭಾವವು ಬಾಳಿನಲ್ಲಿ ಬಲವಾಗಿ ಕುಳಿತಿತು.

ಊರಿಗೆ ಹಿಂದಿರುಗಿದಾಗ ತಂದೆ ತೀರಿಕೊಂಡಿದ್ದರು. ತಾಯಿಯೂ ಅಣ್ಣಂದಿರೂ ವೆಂಕಟರಮಣನನ್ನು ಆದರದಿಂದ ಬರಮಾಡಿಕೊಂಡರು. ಆದರೆ ಮನೆಯ ವಿಚಾರದಲ್ಲಿ ಹುಡುಗನಿಗೆ ಅಷ್ಟೇನು ಆಸಕ್ತಿಯಿರಲಿಲ್ಲ. ಯಾವ ಕೆಲಸವನ್ನೂ ಮಾಡದೆ, ಮೊದಲಿನಂತೆ ಮಂಕಾಗಿಯೇ ಕುಳಿತಿರುತ್ತಿದ್ದನು. ಅಣ್ಣಂದಿರೇ ಹಳ್ಳಿಯ ಶಾನುಭೋಗರಾಗಿದ್ದರಷ್ಟೆ. ಮನೆಯಲ್ಲಿ ಅನುಕೂಲ ವಿದ್ದಿತು. ಒಂದು ಶ್ರಾವಣ ಮಾಸದ ಕಡೆಯ ಶನಿವಾರ ವೆಂಕಟರಮಣನು ಪದ್ಧತಿಯಂತೆ ಪಡಿಬೇಡಿಕೊಂಡು ಬರಲು ಹೊರಟು, ಮನೆಗೆ ಹಿಂದಿರುಗಿ ಬರುತ್ತ ದಾರಿಯಲ್ಲಿ ಅರಳೀಕಟ್ಟೆಯ ಬಳಿ ನಿಂತವನು ಅಲುಗಾಡದೆ ಕಣ್ಮುಚ್ಚಿ ಅಲ್ಲಿಯೇ ನಿಂತುಬಿಟ್ಟನಂತೆ. ಎಷ್ಟು ಹೊತ್ತಾದರೂ ಹೀಗೆಯೇ ನಿಂತ ಇವನ ಸುತ್ತ ಊರ ಜನರೆಲ್ಲ ನೆರೆದು, ಅವನನ್ನು ಎಚ್ಚರಗೊಳಿಸಲು ಯತ್ನಿಸಿ ವಿಫಲರಾದರು. ತಾಯಿಯೂ ಅಣ್ಣಂದಿರೂ ಇದನ್ನು ತಿಳಿದು ಓಡಿಬಂದರು. ತಾಯಿಯು ಮೈಮುಟ್ಟಿದೊಡನೆ ಅವನಿಗೆ ಎಚ್ಚರವಾಯಿತು. ಮನೆಗೆ ಮರಳಿದನಾದರೂ ಅವನ ವರ್ತನೆ ವಿಚಿತ್ರವಾಯಿತು. ಕುಂಡಲಿನಿಯು ಜಾಗ್ರತವಾದಂತೆ ತೋರು ತ್ತಿದ್ದಿತು. ಮನೆಯಲ್ಲಿಯೇ ಅವಧೂತನಂತೆ ಇರಲಾರಂಭಿಸಿದನು.

ಮುಂದೆ ಇನ್ನೊಂದು ಶ್ರಾವಣ ಮಾಸದ ಕಡೆಯ ಶನಿವಾರದಂದೇ ವೆಂಕಟರಮಣನು ತಾಯಿಗೆ ತಾನು ಮುಳ್ಳು ಹರಿವೆ ಸೊಪ್ಪಿನ ಬಸಿದೆಸರು ತಿನ್ನಲು ಬಯಸುವೆನೆಂದು ಹೇಳಿದನು. ಎಂದೂ ಏನನ್ನೂ ಕೇಳದ ಮಗನು ಹೀಗೆ ಕೇಳಲು ಆಕೆಗೆ ಆಶ್ಚರ್ಯವಾಯಿತು. ಮಾಡುವೆನೆಂದು ಹೇಳಿ ಆಕೆ ಅಡುಗೆಗೆ ಸಿದ್ಧವಾದಳು. ಮಗನು ನೀರು ತರುವೆನೆಂದು ಹೇಳಿ ಹೊರಗೆ ಹೊರಟನು. ಅವನ ಮನಸ್ಸು ಎಂದಿನಂತೆ ಇರಲಿಲ್ಲ, ತೀವ್ರವಾದ ಧ್ಯಾನದ ಅಗತ್ಯ ಅವನಿಗೆ ಕಂಡು, ದಾರಿಯಲ್ಲಿ ಹಳ್ಳಿಯ ಕಣಜದ ಕಟ್ಟೆಯನ್ನು ಸೇರಿ ಅಲ್ಲಿ ಕುಳಿತು ಬಿಟ್ಟನು. ಪ್ರಶಾಂತವಾದ ಈ ಸ್ಥಳ ಅವನ ಧ್ಯಾನಕ್ಕೆ ಯೋಗ್ಯವೆಂದು ತೋರಿತು. ಎಷ್ಟು ಹೊತ್ತಾದರೂ ಇವನು ಮನೆಗೆ ಬರದಿದ್ದುದನ್ನು ನೋಡಿ ತಾಯಿಯೂ ಅಣ್ಣಂದಿರೂ ಹುಡುಕಲಾರಂಭಿಸಿದರು. ಎಲ್ಲಿಯೂ ಕಾಣಲಿಲ್ಲವಾಗಿ ಹುಚ್ಚಾರೂಢಸ್ವಾಮಿಗಳೇನಾದರೂ ಬಂದು ಅವನನ್ನು ಕರೆದೊಯ್ದಿದ್ದಾರೋ ಎಂದು ಬಗೆದು ಸುಮ್ಮನಾದರು. ಮುಂದಿನ ತಿಂಗಳು, ಭಾದ್ರಪದ ಮಾಸದಲ್ಲಿ, ಹುಚ್ಚಾರೂಢಸ್ವಾಮಿಗಳು ಊರಿಗೆ ಬಂದಿದ್ದಾಗ ವೆಂಕಟರಮಣನ ವಿಚಾರ ಪ್ರಸ್ತಾಪ ಮಾಡಲು ಅವನನ್ನು ತಾವು ಕಾಣಲಿಲ್ಲವೆಂದುಬಿಟ್ಟರು. ಮತ್ತೆ ಮನೆಯವರು ಹುಡುಕಲಾರಂಭಿಸಿದರು. ಅವರ ಯತ್ನವೆಲ್ಲ ವಿಫಲವಾಯಿತು. ವೆಂಕಟರಮಣನು ಎಲ್ಲಿಯೂ ಕಾಣಲಿಲ್ಲ.

ಇದಾದ ಐದು ತಿಂಗಳ ನಂತರ ಸುಗ್ಗಿಯ ಕಾಲ ಬಂದಾಗ ಹಳ್ಳಿಯವರು ಕಣಜದಲ್ಲಿ ಭತ್ತ ಸುರಿಯಲಾರಂಭಿಸಿ ಅಲ್ಲಿ ಕುಳಿತಿದ್ದ ವೆಂಕಟರಮಣನನ್ನು ಕಾಣದೆ ಅವನ ಮೇಲೇ ಸುರಿದುಬಿಟ್ಟರು. ಧ್ಯಾನದಲ್ಲಿ ಮೈಮರೆತು ಕುಳಿತಿದ್ದ ಹುಡುಗನ ಮೇಲೆ ಆಳೆತ್ತರದ ಭತ್ತದ ರಾಶಿ ಬೆಳೆಯಿತು. ಮುಂದಿನ ತಿಂಗಳು ಸರಕಾರಕ್ಕೆ ಸಲ್ಲಬೇಕಾಗಿದ್ದ ಭತ್ತವನ್ನು ಪಡೆಯಲು ಆಂಗ್ಲ ಅಧಿಕಾರಿಯೊಬ್ಬನು ಬಂದನು. ಅವನ ಮುಂದೆ ಭತ್ತವನ್ನು ಅಳೆಯಲು ಆರಂಭಿಸಿದರು. ಹಾಗೆ ಮಾಡುತ್ತಿರುವಾಗ ವೆಂಕಟರಮಣನ ತಲೆಗೂದಲು ಒಬ್ಬನಿಗೆ ತಾಕಿತು. ಅವನು ಹೌಹಾರಿ ಇದೇನು ಭೂತವೋ ಎಂದು ಬೆದರಿ ಓಡಿಬಿಟ್ಟನು. ಉಳಿದವರು ಪಂಜುಗಳನ್ನು ಹೊತ್ತಿಸಿ ತಂದು ಭತ್ತವನ್ನು ಕೆದಕಿ ನೋಡಲು ಮನುಷ್ಯನೊಬ್ಬನು ಕಾಣಿಸಿದನು. ಇದು ಯಾರೆಂದು ಯಾರಿಗೂ ತಟ್ಟನೆ ತಿಳಿಯಲಿಲ್ಲ.

ಕ್ರಮೇಣ ಅವನ ಅಣ್ಣ ಶಾನುಭೋಗನಾಗಿದ್ದವನು ಬಂದು ಇವನನ್ನು ವೆಂಕಟರಮಣನೆಂದು ಗುರುತಿಸಿದನು. ಆಗಲೂ ಧ್ಯಾನಾಸಕ್ತನಾಗಿದ್ದ ಅವನಿಗೆ ಪರಿವೆಯೇ ಇರಲಿಲ್ಲ. ಅವನು ಸತ್ತಿದ್ದಾನೆಂದೇ ಎಲ್ಲರೂ ತಿಳಿದರು. ಈ ಸುದ್ದಿಯು ತಾಯಿಯನ್ನೂ ಮುಟ್ಟಿ ಆಕೆ ಅಳುತ್ತ ಓಡಿಬಂದರು; ಮಗನ ಹೆಸರು ಹಿಡಿದು ಕೂಗಿದೊಡನೆ ಅವನು ಕಣ್ಣು ತೆರೆದು ಎಚ್ಚರವಾದನು. ಮನೆಗೆ ಕರೆದೊಯ್ದಾಗ ವೆಂಕಟರಮಣನು ತಾಯಿಯನ್ನು ಮುಳ್ಳು ಹರಿವೇ ಸೊಪ್ಪಿನ ಸಾರನ್ನು ಬಡಿಸುವಂತೆ ಕೇಳಿದನು. ತಾನು ತಾಯಿಗೆ ತಿಳಿಸಿದ ದಿನದಿಂದ ಅಂದಿಗೆ ಆರುತಿಂಗಳು ಕಳೆದುದು ಅವನಿಗೆ ತಿಳಿದಿರಲಿಲ್ಲ. ಧ್ಯಾನದಲ್ಲಿ ಅವನಿಗೆ ಹೊತ್ತು ಹೋದುದು ಗಣನೆಗೆ ಬಂದಿರಲಿಲ್ಲ. ಆಗಲೇ ನಿದ್ರೆಯಿಂದ ಎಚ್ಚೆತ್ತವನಂತೆ ಬಹಿರ್ಮುಖನಾದನು.

ಇದು ಮನಸ್ಸಿನ ವಿಕಾರವೆಂದು ಮನೆಯವರು ಬಗೆದು ಮದುವೆ ಮಾಡಿದರೆ ಸರಿಯಾದೀತೆಂದು ಅವನಿಗೆ ಮದುವೆಯನ್ನೂ ಮಾಡಿದರು. ಆದರೆ ಅವಧೂತವೃತ್ತಿಯೇನು ಕುಗ್ಗಲಿಲ್ಲ. ಕೆಲಸವಿಲ್ಲದೆ ಸೋಮಾರಿಯಾಗಿರುವುದು ಈ ಅನಾಸಕ್ತಿಗೆ ಕಾರಣವೆಂದು ಬಗೆದು ಅಣ್ಣಂದಿರು ಊರ ಹೊರಗೆ ಅವನಿಗಾಗಿ ಬೇರೊಂದು ಗುಡಿಸಲನ್ನು ಕಟ್ಟಿಕೊಟ್ಟು ಅಲ್ಲಿ ಅವನು ತನ್ನ ಸಂಸಾರ ನಿರ್ವಹಣೆಯನ್ನು ಸ್ವತಂತ್ರವಾಗಿ ನಡೆಸುವಂತೆ ವ್ಯವಸ್ಥೆ ಮಾಡಿದರು. ಅವನನ್ನು ತುಂಬ ಪ್ರೀತಿಸುತ್ತಿದ್ದ ಅವನ ತಾಯಿಯೂ ಅವನೊಡನೆ ಇರಲಾರಂಭಿಸಿದರು.

ಮತ್ತೊಂದು ಶ್ರಾವಣ ಮಾಸದ ಕಡೆಯ ಶನಿವಾರದಂದು ಇಡೀ ದಿನ ಉಪವಾಸವಿದ್ದು ಧ್ಯಾನಾಸಕ್ತರಾದರು. ಅದೇ ಸಂಜೆ ಸ್ವಯಂಸ್ಫೂರ್ತಿಯಿಂದ ಕಾವ್ಯರಚನೆ ಮಾಡಲಾರಂಭಿಸಿದರು. ಪದವಿಟ್ಟು ಅಳಿಸದೆ ಧಾರೆ ಧಾರೆಯಾಗಿ ಭಗವಚ್ಚರಿತ್ರೆ ಹದಿನೈದು ಅಧ್ಯಾಯಗಳಲ್ಲಿ ಹೊರಬಂದುದು ಇದೇ ಸಮಯದಲ್ಲಿ ಎಂದು ಹೇಳುತ್ತಾರೆ. ಈ ಕಾವ್ಯದಿಂದಾಗಿ ವೆಂಕಟರಮಣನು ಊರಿನಲ್ಲಿ ಪ್ರಸಿದ್ಧನಾದನು. ಹಲವಾರು ಪವಾಡಗಳನ್ನೂ ಮಾಡಿ ಜನರನ್ನು ಅಚ್ಚರಿಗೊಳಿಸಿದನು. ಚಿಕ್ಕಬಳ್ಳಾಪುರದ ಪಾಳ್ಳೇಗಾರನೂ ಇವರಲ್ಲಿ ಗುರುಭಕ್ತಿಯನ್ನಿಟ್ಟುಕೊಂಡಿದ್ದನಂತೆ. ಇದೇ ಕವಿಯು ರಚಿಸಿರುವ ಎಂಟು ಕಂದಪದ್ಯಗಳ ಆಂಜನೇಯ ಸ್ತೋತ್ರವು ಈ ಪಾಳ್ಳೇಗಾರನು ಕಟ್ಟಿಸಿದ ಕೋಟೆ ಆಂಜನೇಯ ದೇವಸ್ಥಾನದಲ್ಲಿ ರಚಿಸಿದುದೆಂದು ಹೇಳುತ್ತಾರೆ.

ಈ ಕವಿಗೆ ನಾಲ್ವರು ಗಂಡುಮಕ್ಕಳಿದ್ದರಂತೆ. ಅವರು ವಯಸ್ಸಿಗೆ ಬಂದ ಮೇಲೆ ವಿಜಯವೆಂಕಟರಮಣಕವಿಯು ವೈರಾಗ್ಯ ತಾಳಿ, ತಿರುಪತಿಗೆ ಬಂದು ಅಲ್ಲಿಯೇ ನೆಲಸಿದ್ದು ತೀರಿಕೊಂಡರಂತೆ. ಇವರಿಗೆ ವೆಂಕಟೇಶ್ವರನು ಸಾಕ್ಷಾತ್ಕಾರವಾಗಿದ್ದನೆಂದು ಪ್ರತೀತಿ. ಒಮ್ಮೆ ತಾಯಿಯು ತಿರುಪತಿಗೆ ಹೋಗಬೇಕೆಂದು ಬಯಸಿ ವೃದ್ಧಾಪ್ಯದ ದೌರ್ಬಲ್ಯದಿಂದ ನರಳುತ್ತಿದ್ದಾಗ ಕವಿಯು ಆಕೆಗೆ ತಿರುಪತಿಯಲ್ಲಿ ನಡೆಯುವ ಸುಪ್ರಭಾತ - ಸೇವೆಯಿಂದ ಶಯನೋತ್ಸವದ ವರೆಗೆ ದಿನದ ಎಲ್ಲ ಕೈಂಕರ್ಯಗಳನ್ನೂ ತನ್ನ ಅಂಗೈಯಲ್ಲಿಯೇ ಕಾಣಿಸಿದನೆಂದು ಒಂದು ದಂತಕಥೆಯಿದೆ. ಊರಿನವರು ತಿರುಪತಿಗೆ ಹರಕೆ ಹೊತ್ತಾಗ ಈ ಕವಿಯಲ್ಲಿಯೇ ಸಲ್ಲಿಸುವ ವಾಡಿಕೆಯಿದ್ದಿತಂತೆ.

ಅಂತೂ ಮಂಕನಾಗಿ, ಮೂಕನಾಗಿ ಬೆಳೆದ ವೆಂಕಟರಮಣಯ್ಯನು ಗುರುವಿನ ಕಟಾಕ್ಷದಿಂದ, ಸಂಸ್ಕಾರದ ಬಲದಿಂದ ಪವಾಡಪುರುಷನಾಗಿ, ವರಕವಿಯಾಗಿ ಮಾರ್ಪಟ್ಟುದು ಐತಿಹ್ಯದ ವಿಶೇಷವಿವರ. ಇಂತಹ ಪುಣ್ಯಜೀವಿಯ ಸಾರಸ್ವತ ಸೃಷ್ಟಿಯಾದ ಭಗವಚ್ಚರಿತ್ರೆಯು ಈಗ ಮತ್ತೆ, ಮುನ್ನೂರು ವರ್ಷಗಳ ನಂತರ, ಬೆಳಕು ಕಾಣುತ್ತಿರುವುದು ಸಂತೋಷದ ಸಂಗತಿ. ಅದು ನಮ್ಮ ಪುಣ್ಯವೆಂದರೆ ಉತ್ಪ್ರೇಕ್ಷೆಯಲ್ಲ. ಇದನ್ನು ಒದಗಿಸಿ ಕವಿಯ ವಂಶೀಕರು ನಮಗೆಲ್ಲ ಉಪಕಾರ ಮಾಡಿದ್ದಾರೆ. ಕನ್ನಡ ಪದ್ಯವಾಙ್ಮಯದಲ್ಲಿ ಇನ್ನೊಂದು ರಸಘಟ್ಟ ಈಗ ಸಹೃದಯರಿಗೆ ದೊರಕಿರುವುದು ಇನ್ನೊಂದು ವಿಶೇಷ. ಭಾಷೆಯಲ್ಲಿ ಗಾಂಭೀರ್ಯವಿದೆ, ಚಮತ್ಕಾರವೂ ಅಲ್ಲಲ್ಲಿ ಕಾಣಿಸುತ್ತದೆ. ಕವಿಯು ದ್ವಿತೀಯಾಕ್ಷರ ಪ್ರಾಸವನ್ನು ಪ್ರಯಾಸವಿಲ್ಲದೆ ಸಾಧಿಸಿದ್ದಾನೆ. "ಪರಗತಿಯ ಸಡಗರವ ಸುಲಭದಿಂದೈದು"ವುದೇ ಈ ಕಾವ್ಯದ ಮುಖ್ಯ ಪ್ರಯೋಜನವಾದರೂ ಕವಿಹೃದಯಕ್ಕೆ ಸಹಜವಾದ ಪ್ರಕೃತಿ ವರ್ಣನೆ ವಿಶೇಷವಾಗಿ ಮೂಡಿಬಂದಿದೆ. ನಿದರ್ಶನಕ್ಕೆ ಮೂರನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ, ರಸಭರಿತವಾಗಿ ಬಂದಿರುವ ಬದರಿಕಾಶ್ರಮವರ್ಣನೆ. "ಪುರುಷಾರ್ಥಬಸಕೆ ಕುಸುಮಾಕರನೋ"- ಎಂಬಂತಿದ್ದ ಈ ಆಶ್ರಮವನ್ನು ನೋಡಿ ದೇವರ್ಷಿಯಾದ ನಾರದನಿಗೂ ಆಶ್ಚರ್ಯವಾಯಿತಂತೆ! ವರ್ಣನೆಯನ್ನು ನೋಡಿ ನಮಗೂ ಆಶ್ಚರ್ಯವಾಗುತ್ತದೆ. ಕುಗ್ರಾಮವಾದ ಚಿಕ್ಕ ಹೆಜ್ಜಾಜಿಯಲ್ಲಿಯೇ ಬಾಳನ್ನು ಕಳೆದ ಕವಿಯ ಕಲ್ಪನಾಶಕ್ತಿ ಅದ್ಭುತವಾದುದು.

ಸಂದರ್ಭದ ಸೆರೆ, ಸನ್ನಿವೇಶದ ಒತ್ತಾಸೆಗಳು ಕವಿಯ ಹೃದಯವನ್ನು ಬಳಲಿಸ ಲಾರವು ಎನ್ನುವ ಮಾತಿಗೆ ಈ ಕವಿಯ ಈ ಸಾರಸ್ವತ ಖಂಡವೊಂದು ನಿದರ್ಶನ.

ಕಡೆಯದಾಗಿ, ಈ ಕವಿಯ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯಬೇಕೆಂದು ಹೇಳಬೇಕು. ದಂತಕಥೆಗಳೂ ವೃತ್ತಾಂತಗಳೂ ಈ ಕೊರತೆಯನ್ನು ನೀಗಿಸ ಲಾರವು. ಕನ್ನಡಜನರಿಗೆ ಅಭಿಮಾನಧನರೆಂಬ ಕೀರ್ತಿ ಉಳಿಯಬೇಕೆಂದರೆ ಇಂತಹ ಅಜ್ಞಾತ, ಅಪ್ರಖ್ಯಾತ ಕವಿಗಳನ್ನು ಬೆಳಕಿಗೆ ತರಬೇಕಲ್ಲವೆ? ಅವರ ಬಾಳಿನ ಮೇಲೆ ಬೆಳಕನ್ನು ಬೀರಲು ಯತ್ನಿಸಬೇಕಲ್ಲವೆ? ಕವಿಗಳ ಸಾರಸ್ವತ ಸುಧೆಗೆ ಸಂಶೋಧನೆಯ ಆಸವವನ್ನೂ ಸೇರಿಸಿದರೆ ಸೊಗಸು ಹೆಚ್ಚು. ಪ್ರಕೃತ, ವಿಜಯವೆಂಕಟರಮಣ ಕವಿಯ ಗುರುವಿನ ವಿಚಾರವಾಗಿ, ದೀಕ್ಷೆಯ ವಿಚಾರ ವಾಗಿ, ಭಗವಚ್ಚರಿತ್ರೆಯ ಕವಿಸಮಯದ ವಿಚಾರವಾಗಿ, ಪ್ರತಿ ಅಧ್ಯಾಯದ ಕೊನೆಯ ಪದ್ಯದಲ್ಲಿಯೂ ಪ್ರಸ್ತಾಪಕ್ಕೆ ಬರುವ "ಕೌಂಡಿಣ್ಯ ಗುರು"ವಿನ ವಿಚಾರವಾಗಿ ಜಿಜ್ಞಾಸುಗಳು ತಮ್ಮ ದೃಷ್ಟಿಯನ್ನು ಹರಿಸಬೇಕು. ಮೂಲ ಭಾಗವತದಿಂದ ಈ ಭಗವಚ್ಚರಿತ್ರೆಯು ಎಷ್ಟು ಮೈದುಂಬಿದೆ ಎನ್ನುವುದೂ ವಿಚಾರ ಮಾಡಬೇಕಾದದ್ದೇ. ಕನ್ನಡ ನಾಡಿನಲ್ಲಿ ಭಾಗವತಪಂಥ ಹೇಗೆ ವಿಕಸಿತವಾಯಿತೆನ್ನಲು ಈ ಕಾವ್ಯವೂ ನೆರವಾಗಬಲ್ಲುದೋ ಏನೋ. ಅಂತೂ ಆಸಕ್ತಿಯನ್ನೂ ಆಸ್ಥೆಯನ್ನೂ ನಮ್ಮ ಜನ ತಳೆದು ಈ ಕವಿಯ ಉಪಕಾರವನ್ನು ಸಾರ್ಥಕ ಮಾಡಬೇಕು.

ಅರಿಕೆ

ನಿಗಮಕಲ್ಪತರೋರ್ಗಲಿತಂ ಫಲಂ
ಶುಕಮುಖಾದಮೃತದ್ರವ ಸಂಯುತಂ
ಪಿಬತ ಭಾಗವತಂ.

ಗಿಣಿ ಕುಕ್ಕಿದ ಹಣ್ಣು ಹದವಾಗಿ ಮಾಗಿ ರಸತುಂಬಿ ಬಹು ರುಚಿಯಾಗಿರುತ್ತದೆ. ರಸವೊಸರುವ ಅಂಥ ಹಣ್ಣನ್ನು ಯಾರು ತಾನೆ ಬಯಸುವುದಿಲ್ಲ?

ಭಾಗವತ ಅಂಥ ಒಂದು ಹಣ್ಣಂತೆ. ಸಾಧಾರಣ ಮರದ ಹಣ್ಣಲ್ಲ; ಕಲ್ಪವೃಕ್ಷದ ಹಣ್ಣು. ಅದರಲ್ಲಿ ತುಂಬಿರುವುದು 'ಅಮೃತ' ರಸ. ಆ ರಸದ ರುಚಿ ನೋಡಿದವರಿಗೆ ಬಯಸಿದ್ದೆಲ್ಲ ದೊರೆಯುತ್ತದೆ.

ವೇದವೇ ಆ ಕಲ್ಪವೃಕ್ಷ. ಆ ವೃಕ್ಷದಲ್ಲಿ ಬಿಟ್ಟ ಮಾಗಿದ ಹಣ್ಣು ಭಾಗವತ. ಅದರಲ್ಲಿ ಉಕ್ಕುಕ್ಕಿ ಸುರಿಯುವ ಭಕ್ತಿಯ ಅಮೃತರಸವನ್ನು ಪಾನಮಾಡಿದವರು 'ಅಮೃತ ಪದವಿ' ಪಡೆಯುತ್ತಾರೆ; ಹುಟ್ಟುಸಾವುಗಳ ಕೋಟಲೆಯ ಕಡಲನ್ನು ದಾಟಿ ನಿತ್ಯಾನಂದದ ಬಿಡುಗಡೆಯ ಬೀಡಿನಲ್ಲಿ ನೆಲಸುತ್ತಾರೆ.

ಅಮೃತರಸ ತುಂಬಿದ್ದಾದರೂ ಹಣ್ಣು ಕೈಗೆಟುಕದಂತೆ ಮರದ ಮೇಲಿನ ಕೊಂಬೆಯಲ್ಲಿ ತೂಗಾಡುತ್ತಿದ್ದರೆ ಏನು ಪ್ರಯೋಜನ? ಸುಮ್ಮನೆ ನೋಡುತ್ತಾ ನಿಲ್ಲಬೇಕಾದೀತು. ರಸವನ್ನು ಗುರುತಿಸಬಲ್ಲ ಗಿಣಿ ಬಂದು ಕೂತು ಕೊಕ್ಕಿನಲ್ಲಿ ಕುಕ್ಕಿ ತೊಟ್ಟುಕಳಚಿ ಹಣ್ಣು ನಮ್ಮ ಕೈಮೇಲೆಯೇ ಬೀಳುವಂತಾದರೆ! ಸುಲಭವಾಗಿ ಸವಿದು ಸಂತೋಷ ಪಡಬಹುದಲ್ಲವೆ?

ಪರಮಗಹನವಾದ ವೇದವೃಕ್ಷದ ತುದಿಗೊಂಬೆಯಲ್ಲಿ ತೂಗಾಡುತ್ತಿರುವ ಭಾಗವತಾಮೃತ ಫಲ ಶುಕಮುಖದಿಂದ ಜಾರಿ ನಮ್ಮ ಕೈಯೊಳಗೇ ಬಂದು ಬಿದ್ದಿದೆ; ಗಿಣಿಯ ಬಾಯಿನಿಂದ ಬೀಳುವ ಹಣ್ಣಿನಂತೆ, ಪರಮಪೂಜ್ಯ ಶುಕಮುನಿಗಳ ನಿರೂಪಣೆಯಿಂದ ಸಾಮಾನ್ಯರಿಗೂ ಸುಲಭವಾಗಿ ದೊರೆಯುವಂತಾಗಿದೆ. ಯಾರು ಬೇಕಾದರೂ ಅದನ್ನೆತ್ತಿಕೊಂಡು ಭಗವದ್ಭಕ್ತಿಯ

ಅಮೃತವನ್ನುಂಡು ಕೃತಕೃತ್ಯರಾಗಬಹುದು. ಈ ಅಮೃತವನ್ನು ಕುಡಿಯಿರಿ; ಮತ್ತೆ ಮತ್ತೆ ಕುಡಿಯಿರಿ ; ಕುಡಿದು ಧನ್ಯರಾಗಿರಿ ಎಂದು ನಮ್ಮ ಹಿರಿಯರು ಸಾರಿ ಸಾರಿ ಹೇಳುತ್ತಿದ್ದಾರೆ.

ಪಿಬತ ಭಾಗವತಂ ರಸಂ,
ಮುಹುರಹೊ ! ಭುವಿ ಭಾವುಕಾಃ !

ಶುಕಾಚಾರ್ಯರ ಬಾಯಿಂದ ಬಂದ ಭಾಗವತ ಮಹಾಪುರಾಣ ಸಂಸ್ಕೃತ ಗ್ರಂಥ. ಸಂಸ್ಕೃತವನ್ನರಿಯದವರಿಗೆ ಪುರಾಣಿಕರ ಪ್ರವಚನದ ಮೂಲಕ ಅದರ ಅರಿವಾಗಬೇಕು. ಆ ಪ್ರವಚನಕಾರ್ಯ ಆದಿಕಾಲದಿಂದಲೂ ನಡೆಯುತ್ತಲೇ ಬಂದಿದೆ. ಅದರ ಜೊತೆಗೆ ದೇಶಭಾಷಾಕವಿಗಳು ತಮ್ಮ ತಮ್ಮ ಭಾಷೆಗಳಲ್ಲಿ ಈ ಪುರಾಣವನ್ನು ಗದ್ಯಪದ್ಯ ಕಾವ್ಯರೂಪವಾಗಿ ರಚಿಸಿ, ಜನಸಾಮಾನ್ಯಕ್ಕೆ ನೀಡುತ್ತಲೇ ಬಂದಿದ್ದಾರೆ. ಈ 'ಭಗವಚ್ಚರಿತ್ರೆ' ಅಂಥ ಕಾವ್ಯಗಳಲ್ಲಿ ಒಂದು. ಭಕ್ತಕವಿಯೊಬ್ಬನು ಸಂಸ್ಕೃತದ ಭಾಗವತಾಮೃತ ಪ್ರವಾಹವನ್ನು ಕನ್ನಡದ ಕಾಲುವೆಯಲ್ಲಿ ಹರಿಸಲು ಇಲ್ಲಿ ಪ್ರಯತ್ನ ಮಾಡಿದ್ದಾನೆ.

'ಭಗವಚ್ಚರಿತ್ರೆ' ಎಂಬ ಹೆಸರು ಗ್ರಂಥದಲ್ಲಿ ಎಲ್ಲಿಯೂ ಕಂಡು ಬರುವುದಿಲ್ಲ. ಕವಿ ಎಲ್ಲಿಯೂ ಆ ಹೆಸರನ್ನು ಹೇಳಿಲ್ಲ. 'ಎನ್ನೊಳಗಿರ್ದು ಪೇಳಿಸಿದನೀಕೃತಿಯ ಶೇಷಾದ್ರಿಯರಸ', 'ಪೇಳ್ದೆನೀ ಕೃತಿಯ ಶುಭಮತಿಯು ನಾಂತು', 'ಒರೆದೆನೀ ಸುಪ್ರಬಂಧಮಂ', 'ಈ ಕೃತಿಯೊಳೊರೆವ ಸಾರವ ಸವಿದು ಪೊರೆವುದು', 'ಕವಿಮುಖದೊಳುಸುರಿದಂ ಬಿಸಜಾಕ್ಷನೀ ಕೃತಿಯನು', 'ಅಸುರಾರಿಚರಿತೆಯೆನಲೀ ಕೃತಿಯಲೊಪ್ಪುವ ಚಮತ್ಕೃತಿಗಳಿರದೊಡೇನು'' ಎಂದು ಮುಂತಾಗಿ 'ಈ ಕೃತಿ' ಎನ್ನುತ್ತಾನೆಯೇ ಹೊರತು ಕೃತಿಗೆ ಯಾವ ಹೆಸರನ್ನೂ ಕೊಟ್ಟಿಲ್ಲ. ಅಧ್ಯಾಯಗಳ ಕೊನೆಯ ಪದ್ಯಗಳಲ್ಲಾಗಲಿ, ಅದರ ಮುಂದಿನ ವಚನಗಳಲ್ಲಿಯಾಗಲಿ ಯಾವೊಂದು ಹೆಸರೂ ಕಾಣುವುದಿಲ್ಲ. ಒಂದು ರೀತಿಯಲ್ಲಿ ಗ್ರಂಥಸಮಾಪ್ತಿಯ ಆಶೀರ್ವಚನದಂತೆ ತೋರುವ ೧೫ನೆಯ ಅಧ್ಯಾಯದ ಕೊನೆಯ ಪದ್ಯದಲ್ಲಿ, "ಧ್ರುವಚರಿತ್ರಾಮೃತವನುಂಡು ಸಂಭ್ರಮ ವೆರೆದ ಸುವಿವೇಕಿಗಳಿಗೆ ದೀರ್ಘಾಯುರಾರೋಗ್ಯ ವೈಭವ ಪುತ್ರಪೌತ್ರಾಭಿ ವೃದ್ಧಿಗಳ್....ಒದಗುವುವು " ಎಂದು ಧ್ರುವಚರಿತ್ರೆಯೆಂಬ ಹೆಸರಿದೆ. ಧ್ರುವ ಚರಿತ್ರೆಯ ನಿರೂಪಣೆಯಿರುವುದು ೧೨ ರಿಂದ ೧೫ರ ವರೆಗಿನ ಅಧ್ಯಾಯಗಳಲ್ಲಿ

ಮಾತ್ರ. ಸಮಗ್ರಗ್ರಂಥಕ್ಕೆ ಆ ಹೆಸರು ಸಲ್ಲುವುದಿಲ್ಲ. ೧೧ನೆಯ ಅಧ್ಯಾಯದ ಕೊನೆಯ ಪದ್ಯದಲ್ಲಿ, "ದ್ವಾಪರಾಂತದಲಿ ನರನರ್ಜುನಾಖ್ಯೆಯನಾಂತು ರೂಪಿಸುವನಂತು ನಾರಾಯಣನೆ ಕೃಷ್ಣನೆನಿಸುವನದರಿನಿತಿಹಾಸಮಂ ಈ ಪುರಾಣದೊಳೆ ಮುಂದೊರೆವೆ ಕೇಳು" ಎಂದಿರುವುದರಿಂದ ಕೃಷ್ಣಾವತಾರದ ಕಥೆ ಪೂರ್ತಿಯಾಗುವ ವರೆಗೂ ಗ್ರಂಥವನ್ನು ವಿಸ್ತರಿಸುವುದು ಕವಿಯ ಉದ್ದೇಶವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಈಗ ದೊರೆತಿರುವ ೧೫ ಅಧ್ಯಾಯಗಳು ಮಾತ್ರವಿರುವ ಗ್ರಂಥ ಅಪೂರ್ಣವೆನ್ನಬೇಕಾಗುತ್ತದೆ. ಪೀಠಿಕಾಧ್ಯಾಯದ ೧೨ನೆಯ ಪದ್ಯದಲ್ಲಿ "ಭಾಗವತ ಹರಿಕಥಾಮೃತಶರಧಿಯಂ ಪೀರ್ವುದು ಸತ್ಯವತ್ಯಾತ್ಮಜ ಶುಕಾದ್ಯರ್ಗೆ ಸಹಜ ತದ್ಭೃತ್ಯ ಭೃತ್ಯರ್ಗಳಾದೆವಗೆ ಸಲ್ವುದೆ?" ಎನ್ನುವ ಕವಿಯ ಮಾತನ್ನು ಗಮನಿಸಿದರೆ 'ಭಾಗವತ ಹರಿಕಥಾಮೃತ' ಅಥವಾ 'ಹರಿಕಥಾಮೃತ' ಎಂಬುದು ಕೃತಿಗೆ ಹೆಸರಾಗಿರಬಹುದೆಂದು ಊಹಿಸಬಹುದು. ಆ ಕವಿವಾಕ್ಯದ ತಾತ್ಪರ್ಯವನ್ನು ಗ್ರಹಿಸಿದವರು ಈ ಗ್ರಂಥವನ್ನು 'ಭಗವಚ್ಚರಿತ್ರೆ' ಎಂದು ಕರೆದರೆಂದು ತೋರುತ್ತದೆ.

ಗ್ರಂಥದ ಹೆಸರಿನಂತೆ ಕವಿಯ ಹೆಸರು ಸಂದೇಹಾಸ್ಪದವಾಗಿ ಉಳಿದಿಲ್ಲ. ಪೀಠಿಕಾಧ್ಯಾಯದ ೨೭ನೆಯ ಪದ್ಯದಲ್ಲಿ "ಆತ್ರೆಯಸ ಗೋತ್ರ ಋಕ್ ಶಾಖೆಪೆರೆದ ದ್ವಿಜವರ್ಣಜಾತ, ನಾಗರಸಾಖ್ಯ ಪೌತ್ರ, ಹೃದ್ವಿಜಯ ಚಿಕ್ಕಹೆಜ್ಜಾಜಿ ವೆಂಕಟಾಹ್ವಯಪುತ್ರ, ವಿಜಯ ವೆಂಕಟರಮಣಕವಿಮುಖದೊಳುಸುರಿದಂ ಬಿಸಜಾಕ್ಷನೀ ಕೃತಿಯನು" ಎಂಬಲ್ಲಿ ಕವಿಯ ಹೆಸರುಕುಲಗಳ ಸ್ಪಷ್ಟ ಉಲ್ಲೇಖವಿದೆ. ಇದರಿಂದ ತಿಳಿಯಬರುವ ಸಂಗತಿ ಇಷ್ಟು: 'ಚಿಕ್ಕ ಹೆಜ್ಜಾಜಿ' ಕವಿಯ ಊರು. ಆತನ ಹೆಸರು ವಿಜಯವೆಂಕಟರಮಣ. ತಂದೆ ವೆಂಕಟಪ್ಪ ಅಜ್ಜ ನಾಗರಸಯ್ಯ. ಅವರು ಆತ್ರೇಯಸಗೋತ್ರದ ಋಕ್‌ಶಾಖೆಯ ಬ್ರಾಹ್ಮಣರು. ಈ ವಿಜಯವೆಂಕಟರಮಣನು ಸುಜನರನ್ನು ಸೇವಿಸಿ ಉತ್ತಮ ಸಂಸ್ಕಾರ ಪಡೆದನು. ಸದ್ಗುರುವನ್ನು ಆಶ್ರಯಿಸಿ ಅವರ ಉಪದೇಶಗಳನ್ನು ಕೇಳಿ, ಅವರು ಹೇಳಿದಂತೆ ನಡೆದು ವಿಜ್ಞಾನಸಂಪನ್ನನಾದನು ; ಕವಿಯಾದನು. ಭಗವಂತನೇ ಕವಿಗೆ ಪ್ರೇರಕಶಕ್ತಿಯಾಗಿ ನಿಂತು ಅವನ ಮೂಲಕ ಈ ಕೃತಿಯನ್ನು ಹೇಳಿಸಿದನು.

೨೫ನೆಯ ಪದ್ಯದಲ್ಲಿ ಕವಿಯ ಸದ್ಗುರು ಯಾರೆಂಬುದರ ಸೂಚನೆಯಿದೆ. "ಗುರುದೇವ ಮಚ್ಚಾರೂಢ ಚಿನ್ಮಯಾನಂದನ ಕೃಪಾವಿಶೇಷದಲೊರೆದೆನೀ

ಸುಪ್ರಬಂಧಮಂ" ಎಂಬ ಮಾತಿದೆ. ಪ್ರತಿ ಅಧ್ಯಾಯದ ಕೊನೆಯ ಪದ್ಯದಲ್ಲಿಯೂ 'ಕೌಂಡಿಣ್ಯ ಗುರುವರ' ಎಂದು ಒಬ್ಬ ಗುರುವನ್ನು ಸ್ಮರಿಸುತ್ತಾನೆ ಕವಿ. ಹುಚ್ಚಾರೂಢರೂ ಕೌಂಡಿಣ್ಯ ಗುರುಗಳೂ ಒಬ್ಬರೇಯೋ ಬೇರೆ ಬೇರೆಯೋ ನಿರ್ಧರಿಸುವುದು ಕಷ್ಟ. ಆದರೂ ಒಬ್ಬರೇ ಇರಬೇಕೆಂದು ಭಾವಿಸುವುದು ಹೆಚ್ಚು ಸಮಂಜಸವೆನ್ನಬಹುದು. ಹುಚ್ಚಾರೂಢ, ಚಿನ್ಮಯಾನಂದ ಇವೆರಡರಲ್ಲಿ ಗುರುಗಳ ಹೆಸರು ಯಾವುದು? 'ಹುಚ್ಚ' ಎಂಬುದು ಹೆಸರಾಗಿರಬಹುದು. ಅವರು ಆರೂಢಯೋಗಿಗಳೆಂಬುದನ್ನು 'ಆರೂಢ' ಶಬ್ದ ಸೂಚಿಸುತ್ತಿರಬಹುದು, 'ಚಿನ್ಮಯಾನಂದ' ಎಂಬುದು ಅವರ ಆಶ್ರಮ ನಾಮವಾಗಿರಬಹುದು. 'ಕೌಂಡಿಣ್ಯ' ಆ ಗುರುಗಳ ಗೋತ್ರವಾಗಿರಬಹುದು. ಹುಚ್ಚಣ್ಣ, ಹುಚ್ಚಪ್ಪ, ಹುಚ್ಚೂರಾಯ ಎಂದು ಮುಂತಾಗಿ ಈಗಲೂ ಜನ ಹೆಸರಿಟ್ಟುಕೊಳ್ಳುವ ರೂಢಿಯಿದೆ. ಶಿವನನ್ನು 'ಹುಚ್ಚ' ಎಂದು ಸಂಬೋಧಿಸುವುದೂ ಉಂಟು. ಹರಿಹರನ ರಗಳೆಗಳಲ್ಲಿ ನಂಬಿಯಣ್ಣ (ಸುಂದರಮೂರ್ತಿ ನಾಯನಾರ್) 'ಪಿತ್ತನೇ, ಪರಮನೇ' ಎಂದು ಶಿವಸ್ತುತಿಯನ್ನು ಪ್ರಾರಂಭಿಸುತ್ತಾನೆ. ಪೂರ್ವಾಶ್ರಮದ ಹೆಸರನ್ನಾಗಲಿ, ಗೋತ್ರವನ್ನಾಗಲಿ ಸಂನ್ಯಾಸಾಶ್ರಮದಲ್ಲಿ ನೆಲಸಿದವರಿಗೆ ಅನ್ವಯಿಸಿ ಹೇಳಬಹುದೋ ಬಾರದೋ? ವ್ಯಕ್ತಿ ಪರಿಚಯಕ್ಕಾಗಿ ಕವಿ ಇವನ್ನು ಇಲ್ಲಿ ಎತ್ತಿ ಹೇಳಿದ್ದಾನೆಂದು ಬಾವಿಸಬಹುದು.

ತನ್ನ ಗುರುಪರಂಪರೆಯನ್ನು ಕವಿ ಹೀಗೆ ವಿವರಿಸುತ್ತಾನೆ: ಆದಿಗುರು ವಿಷ್ಣು—ಬ್ರಹ್ಮ—ವಸಿಷ್ಠ—ಶಕ್ತಿ—ಪರಾಶರ—ವ್ಯಾಸ—ಶುಕ—ಗೌಡಪಾದಾಚಾರ್ಯ—ಗೋವಿಂದ ಭಗವತ್ಪಾದ—ಶಂಕರಾಚಾರ್ಯ. ಇದರಿಂದ ಈತ ಅದ್ವೈತ ಮತದವನೆಂಬುದು ಸ್ಪಷ್ಟವಾಯಿತು. "ಜೀವನೇ ಶಿಷ್ಯ ಪರಮಾತ್ಮನೇ ಗುರುವೆಂಬ ಭಾವದಿಂದಾಂತರ್ಯದೊಳ್ ಭಜಿಪ", "ವಿಶ್ವಾಕೃತಿಯೆ ಹರಿಯ ಸದ್ರೂಪವೆನುತ" ಭಾವಿಸುವ ಭಾಗವತಸಂಪ್ರದಾಯವನ್ನನುಸರಿಸಿದವನು. ಇವನ ಇಷ್ಟದೇವತೆ ತಿರುಪತಿಯ ವೆಂಕಟರಮಣಸ್ವಾಮಿ. ಆ ದೇವನ ಕೃಪೆಯಿಂದಲೇ ತಾನು ಕಾವ್ಯರಚನೆ ಮಾಡಿದ್ದಾಗಿ ಮತ್ತೆ ಮತ್ತೆ ಹೇಳಿಕೊಂಡಿದ್ದಾನೆ, "ನಿಶ್ಚಳನ ಸೂಚಿಯನ್ನಯಸ್ಕಾಂತ ಕುಣಿಸುವ ಪೋಲೆನ್ನೊಳಗಿರ್ದು ಪೇಳಿಸಿದನೀ ಕೃತಿಯ ಶೇಷಾದ್ರಿಯರಸ ಸರಸರ್ ಮೆಚ್ಚಲು" ಎನ್ನುತ್ತಾನೆ. "ಶೇಷಾದ್ರೀಶ ಚರಿತೆಯಾದರ್ಕಜವ ಕೃತಿಯಿದಂ ನೋಡಿ ಸಂತಸಪಡದ"ವರು ಯಾರೂ ಇಲ್ಲವೆನ್ನುತ್ತಾನೆ. ಪ್ರತಿ ಅಧ್ಯಾಯದ

ಕೊನೆಯಲ್ಲಿಯೂ, ‘ಶೇಷಾದ್ರಿ ವೆಂಕಟೇಶ್ವರ, ಶೇಷಾದ್ರಿ ವೆಂಕಟರಮಣ, ಶೇಷಗಿರಿ ವೆಂಕಟೇಶ, ಶೇಷಗಿರಿ ವೆಂಕಟೇಶ್ವರ” ಎಂದು ಬಗೆಬಗೆಯಾಗಿ ತಿರುಪತಿಯ ವೆಂಕಟರಮಣನನ್ನು ಮರೆಯದೆ ಸ್ಮರಿಸುತ್ತಾನೆ. “ಶರಣು ಹೊಕ್ಕೆನು ದಾಸ ಸಲಹೆನ್ನ ಬಿಡದನಿಶ ಶೇಷಗಿರಿ ವೆಂಕಟೇಶ” ಎಂದು ಬೇಡುತ್ತಾನೆ.

ನಮ್ಮ ಕವಿ ಗ್ರಂಥಾರಂಭದಲ್ಲಿ,

ಆರ್ಯೆಯೆ ಲಸದಮೃತಫಲಗಳನ್ನೀವ ಶೃಂ
ಗಾರತರ ಶೇಷಾದ್ರಿ ನಂದನಸ್ಥಿತ ಭಾರ್ಗ
ವೀರಮಣನಹ ವೆಂಕಟೇಶ ಸುರಭೂಜಮೆಮ್ಮಿಷ್ಟಪದಗಳನೀಯಲಿ

ಎಂದು ವೆಂಕಟರಮಣ ಸ್ವಾಮಿಯನ್ನು ಸ್ತುತಿಸುತ್ತಾನೆ. ಆ ಮೇಲೆ ಅನುಕ್ರಮವಾಗಿ ಶಂಕರ, ವಿನಾಯಕ, ಸರಸ್ವತಿಯರನ್ನು ಪ್ರಾರ್ಥಿಸುತ್ತಾನೆ. ದೇವತಾಪ್ರಾರ್ಥನೆಯಾದ ಬಳಿಕ ಪೂರ್ವಕವಿಗಳನ್ನು ಸ್ಮರಿಸುತ್ತಾನೆ. ಈ ಸಂದರ್ಭದಲ್ಲಿ ಕವಿಯ ಮಾತು ಅನ್ಯಾದೃಶವಾಗಿ ಅರ್ಥಗರ್ಭಿತವಾಗಿದೆ.

ಅಚ್ಚರಿಂದಮೃಯ ಶ್ರುತಿಕಾಮಸುರಭಿಗಂ
ವತ್ಸರೂಪಾಗೆ ಸುವಿವೇಕವ ಸಮನಿಸ್ವಸಲ್
ಸತ್ಸತ್ಕವಿತ್ವಸಾರಕ್ಷೀರಮಂ ಕರೆದು ಭುವನದಲನೇಕ ವಿಧದಿಂ
ಉಚ್ಚರಿಪ ಭಾಷಾವಿಶೇಷ ಪಾತ್ರಗಳಿಂದೆ
ಪೆಚ್ಚಿರುವ ವಿದ್ವಜ್ಜನರ್ಗೆರೆದು ತೃಪ್ತಿಯಂ
ಬೆಚ್ಚ ವಾಲ್ಮೀಕಿ ವೇದವ್ಯಾಸ ಶುಕ ಕಾಳಿದಾಸಾದ್ಯರಂ ಭಜಿಸುವೆಂ

“ಶ್ರುತಿಗಳೇ ಕಾಮಧೇನು. ಕವಿಗಳು ಆ ಕಾಮಧೇನುವಿನ ಕರುಗಳು. ವೇದಾರ್ಥಸಾರವೇ ಕಾಮಧೇನುವಿನ ಕ್ಷೀರ. ಕವಿಗಳು ಆ ಕ್ಷೀರವನ್ನು ಕರೆದು, ಲೋಕದಲ್ಲಿ ಪ್ರಚಾರದಲ್ಲಿರುವ ನಾನಾ ಭಾಷೆಗಳೆಂಬ ಪಾತ್ರೆಗಳಲ್ಲಿ ಹಿಡಿದು ವಿದ್ವಜ್ಜನರಿಗೆ ಎರೆದು ತೃಪ್ತಿಯುಂಟು ಮಾಡುತ್ತಾರೆ” ಎಂಬ ಈ ಭಾವನೆ ಬಹು ಮನೋಹರವಾಗಿದೆ. ಕವಿಯ ಹಿರಿಯ ಹೊಣೆಗಾರಿಕೆ ಇದರಲ್ಲಿ ಚೆನ್ನಾಗಿ ನಿರೂಪಿತವಾಗಿದೆ.

ಇಲ್ಲಿ ಹೆಸರಿಸಿರುವ ವಾಲ್ಮೀಕಿ ವೇದವ್ಯಾಸ ಶುಕ ಕಾಳಿದಾಸರು ಸಂಸ್ಕೃತ ಕವಿಗಳು. ಮೊದಲ ಮೂವರು ಮಹರ್ಷಿಗಳು. ಉಳಿದ ಕವಿಸಮೂಹ

ವನ್ನೆಲ್ಲಾ ಕಾಳಿದಾಸನೊಬ್ಬನೇ ಪ್ರತಿನಿಧಿಸುತ್ತಿದ್ದಾನೆ. 'ಕಾಳಿದಾಸಾದ್ಯರಂ' ಎಂಬಲ್ಲಿನ 'ಆದ್ಯ' ಶಬ್ದದಿಂದ ಉಳಿದೆಲ್ಲ ಸಂಸ್ಕೃತ ಕವಿಗಳನ್ನು ಮಾತ್ರವೇ ಅಲ್ಲ; ಇತರ ದೇಶಭಾಷಾ ಕವಿಗಳನ್ನೂ ಸೂಚಿಸುತ್ತಾನೆ ನಮ್ಮ ಕವಿ. 'ಭುವನದಲನೇಕವಿಧದಿಂ ಉಚ್ಚರಿಪ ಭಾಷಾವಿಶೇಷಪಾತ್ರಗಳು' ಎಂದು ಸಾಮಾನ್ಯವಾಗಿ ಎಲ್ಲ ಭಾಷೆಗಳ ವಿಷಯವಾಗಿಯೂ ಹೇಳಿರುವ ಮಾತು, ಈ ಕವಿಗೆ ಚೆನ್ನಾಗಿ ಪರಿಚಯವಿರುವ ಕನ್ನಡಕ್ಕೆ ವಿಶೇಷವಾಗಿ ಅನ್ವಯಿಸುವುದೆಂಬು ದರಲ್ಲಿ ಯಾವ ಸಂಶಯವೂ ಇಲ್ಲ. ಈ ಪದ್ಯದಲ್ಲಿ ಕನ್ನಡದ ಪೂರ್ವಕವಿ ಗಳನ್ನೂ ಸ್ಮರಿಸಿದಂತಾಗಿದೆಯೆಂದು ಧಾರಾಳವಾಗಿ ನಂಬಬಹುದು. ಕವಿ ಗಳನ್ನು ವೈಯಕ್ತಿಕವಾಗಿ ನೆನೆಯದೆ ಕವಿಕರ್ಮದ ಹಿರಿಮೆಯನ್ನು ಸ್ಮರಿಸಿ ವಂದನೆ ಸಲ್ಲಿಸಿದ್ದಾನೆ ; ಅಷ್ಟೆ.

ಪೂರ್ವಕವಿಗಳ ಗ್ರಂಥರಾಶಿ ವಿಪುಲವಾಗಿರುವಾಗ ಮತ್ತೇಕೆ ಕಾವ್ಯ ರಚನೆಯ ಪ್ರಯತ್ನ? ಅದು ವ್ಯರ್ಥಶ್ರಮವಲ್ಲವೆ ?—ಎಂದರೆ ಅದಕ್ಕೆ ಕವಿಯ ಉತ್ತರ ಸಿದ್ಧವಾಗಿದೆ. ರುಚಿ ವಿಶೇಷದ ತೃಪ್ತಿಗಾಗಿ ಹೊಸ ರಚನೆ ಬೇಕಾಗುತ್ತದೆ. ಹೊಸ ಸಂದರ್ಭದಲ್ಲಿ ಉಪಯೋಗಿಸುವ ಸೌಕರ್ಯಕ್ಕಾಗಿ ನವೀನ ಸಾಧನ ಅವಶ್ಯವಾಗುತ್ತದೆ. ಪೂರ್ವ ಕವಿತಾ ಸಾರವಿದ್ದರೂ ಅದನ್ನು ಜಾಣ್ಮೆಯಿಂದ ಉಪಯೋಗಿಸಿಕೊಂಡು ಮಾಡಿದ ಹೊಸ ರಚನೆ ಸಹೃದಯರಿಗೆ ಹೃದಯಂಗಮವಾಗುತ್ತದೆ. ಮೊದಲೇ ಪಾಕಮಾಡಿ ಸಿದ್ಧಪಡಿಸಿದ ಬೆಲ್ಲ ವಿದ್ದರೂ ಅದನ್ನು ಬಳಸಿಕೊಂಡು ರುಚಿರುಚಿಯಾದ ಬಗೆಬಗೆಯ ಭಕ್ಷ್ಯ ಗಳನ್ನು ಮಾಡುವುದಿಲ್ಲವೆ? ಒಳ್ಳೆಯ ದಟ್ಟ ಬೆಳುದಿಂಗಳಿದ್ದರೂ ಆಗಲೂ ಕೈದೀಪ ಬೇಕಾಗುವುದಲ್ಲವೆ?

ಹೀಗೆ ಗ್ರಂಥರಚನೆಗೆ ತೊಡಗಿರುವ ತನ್ನ ಪ್ರಯತ್ನವನ್ನು ಸಮರ್ಥಿಸಿ ಕೊಂಡು ಭಾಗವತಹರಿಕಥಾಮೃತವನ್ನು ಕಾವ್ಯಕ್ಕೆ ವಸ್ತುವಾಗಿ ಆಯ್ದು ಕೊಂಡಿದ್ದಾನೆ. ಹರಿಕಥಾಮೃತಶರಧಿಯಲ್ಲಿ 'ಬೊಗಸೆ' ಮಾತ್ರವನ್ನೆತ್ತಿ ಕೊಂಡು, ತನ್ನ 'ಮತಿಗೆ ತೋರಿದಷ್ಟ'ನ್ನು ಮಾತ್ರ ಹೇಳುವುದಾಗಿ ತಿಳಿಸು ತ್ತಾನೆ. 'ಯತಿ ಗಣಗಳಿಂದ ಪೂಜಿತವಾಗಿ, ಛಂದೋನುಗತ ವಾಕ್ಯದಿಂದ ಸಂಸ್ತುತವಾಗಿ, ಷಟ್ಪದಿ ವರ್ಣಯುತವಾಗಿ, ನವರಸ ಶೋಭಿತವಾಗಿ ರಮಾಪತಿಯ ಮೂರ್ತಿಯಂತೆ ಪ್ರಕಾಶಿಸುವ' ಕಾವ್ಯವನ್ನು ರಚಿಸುವ ಸಂಕಲ್ಪ ಮಾಡುತ್ತಾನೆ. 'ಷಟ್ಪದಿ ವರ್ಣಯುತವಾಗಿ' ಎಂಬ ಮಾತಿನಿಂದ ಈ ಕಾವ್ಯ

ಕನ್ನಡದ 'ಷಟ್ಪದಿ' ಛಂದಸ್ಸಿನಲ್ಲಿ ರಚಿಸಿರುವುದೆಂಬುದನ್ನು ವ್ಯಕ್ತವಾಗಿ ಹೇಳಿದ್ದಾನೆ.

ಈ ಕಾವ್ಯ ಸಾಮಾನ್ಯವಾದದ್ದಲ್ಲ. ಲೋಕದಲ್ಲಿ ನೆಲಸಿದ 'ಕಲುಷ'ವನ್ನು ಕಳೆಯುತ್ತದೆ. ಲೋಕದ ಪಾಪವನ್ನು ಪರಿಹರಿಸಿ, ವಿಶೇಷ ಕಾಂತಿಯಿಂದ ಕಂಗೊಳಿಸುವಂತೆ ಮಾಡುತ್ತದೆ. ಎಲ್ಲೆಲ್ಲಿಯೂ ಸುಖ ಸಂತೋಷಗಳನ್ನು ನೆಲೆಗೊಳಿಸುತ್ತದೆ.

ಲೋಕಪಾವನವಾದ ಶ್ರೀಹರಿಯ ಚರಿತ್ರೆಯನ್ನು ಉತ್ತಮ ಕಾವ್ಯ ಲಕ್ಷಣಗಳಿಂದ ಕೂಡಿ ಮನೋಹರವಾದ 'ಸುಪ್ರಬಂಧ'ವಾಗಿ, 'ಬುಧರಿಗೂ' ಮೆಚ್ಚಾಗುವಂತೆ ರಚಿಸುವೆನೆಂಬ ನಂಬಿಕೆ ಕವಿಗಿರುವುದಾದರೂ ತಾನೇ ಸಮರ್ಥನೆಂಬ ಅಹಂಕಾರವಿಲ್ಲ. "ಗುರುದೇವ ಹುಚ್ಚಾರೂಢ ಚಿನ್ಮಯಾನಂದನ ಕೃಪಾವಿಶೇಷದಲೊರೆದೆಂ'' ಎನ್ನುತ್ತಾನೆ. "ಶಂಕರಾಚಾರ್ಯ ಗುರುವರ್ಯನಂ ಸಾದರದಿ ಭಜಿಸಿ ತತ್ಕೃಪೆವಡೆದು ಪೇಳ್ದೀಕೃತಿಯು ಶುಭಮತಿಯನಾಂತು" ಎಂದು ಅರಿಕೆ ಮಾಡುತ್ತಾನೆ. ಗುರುಕೃಪೆಯಂತೆಯೇ ಭಗವತ್ಕೃಪೆಯೂ ತನಗೆ ನೆರವಾಗಿದೆಯೆಂದು ನಂಬಿದ್ದಾನೆ. ಗುರುವೂ ಭಗವಂತನೂ ಬೇರೆ ಬೇರೆ ಅಲ್ಲ. "ಶ್ರೀ ಪರಮಶೇಷಾದ್ರಿ ವೆಂಕಟೇಶ್ವರ ರೂಪ ಕೌಂಡಿಣ್ಯ ಗುರು''ವನ್ನು ಭಕ್ತಿಯಿಂದ ಭಾವಿಸುತ್ತಾನೆ. "ಪರಮಾತ್ಮನೇ ಗುರುವೆಂಬ ಭಾವದಿಂದ ಅಂತರ್ಯದಲ್ಲಿ ಭಾವಿಸು"ತ್ತಿರುತ್ತಾನೆ. ಚಲಿಸದೆ ಜಡವಾಗಿ ಬಿದ್ದಿರುವ ಸೂಜಿಯನ್ನು ಅಯಸ್ಕಾಂತವು ಕುಣಿಸುವಂತೆ ಶೇಷಾದ್ರಿಯರಸನು ತನ್ನೊಳಗೆ ನೆಲಸಿ ತನ್ನಿಂದ ಈ ಕಾವ್ಯವನ್ನು ಹೇಳಿಸಿದನೆಂದು ಬಿನ್ನವಿಸಿ ತನ್ನನ್ನು ಭಗವಂತನಿಗೆ ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದಾನೆ.

ಗುರ್ವನುಗ್ರಹದಿಂದಲೂ ಭಗವತ್ಕೃಪೆಯಿಂದಲೂ ರಚಿಸಿರುವ ಈ ಸತ್ಕಾವ್ಯ ನವರಸಾಲಂಕಾರಭರಿತವಾಗಿ ತೇಜೋನ್ನತಿಯಿಂದ ಮೆರೆಯುತ್ತಿದೆ. ನಾನಾ ಬಗೆಯ ಚಮತ್ಕೃತಿಗಳಿಂದ 'ಬೆಡಗಾಂತಿದೆ'. ಒಂದು ವೇಳೆ ಚಮತ್ಕೃತಿಗಳಿಲ್ಲದಿದ್ದರೆ ತಾನೆ ನಷ್ಟವೇನು? 'ಅಸುರಾರಿ ಚರಿತ್ರೆ' ಇದು. ಹರಿಮಹಿಮೆಗಳ ವಿವರಣೆಯಿಂದ ತುಂಬಿ ಸಾರವತ್ತಾಗಿದೆ. ಆದ್ದರಿಂದ ಈ ಕಾವ್ಯವನ್ನು ಸಹೃದಯರು ಆದರದಿಂದ ಅವಲೋಕಿಸಿ ಚೆನ್ನಾಗಿ ವಿಚಾರ ಮಾಡಿ ರಸಾಸ್ವಾದನ ಮಾಡಬೇಕು.

ಮಥನಿಸದೆ ಮಲಯುಜಮದನುಲೇಪಕನುವಹುದೆ
ಮಥನಿಸದೆ ತಿಲವನದು ಬೆಳಗಿಗಿಸ್ನೊಳವಹುದೆ
ಮಥನಿಸದೆ ಪುಂಡ್ರೇಕ್ಷುವಿನಿಗೆ ಸಾಧನೆಯುಹುದೆ
ಮಥನವೇ ಮುಖ್ಯಮದರಿಂ
ಮಥನಿಸದೆ ವಿದ್ಯಂಗಳರಿವಿಂಗೆ ನೆರವಹುದೆ
ಮಥನಿಸದೆ ಸತ್ಕಾವ್ಯ ಮತಿಗೆ ಸಾರಥಿಯುಹುದೆ
ಮಥನಗೈದೀ ಕೃತಿಯೊಳೊರೆವ ಸಾರವ ಸವಿದು
ಪೊರೆವುದುತ್ತಮ ಪುರುಷರು

ಹೀಗೆಂದು ಓದುಗರನ್ನು ಪ್ರಾರ್ಥಿಸಿ ಕವಿ ಕಥೆಯನ್ನು ಪ್ರಾರಂಭಿಸುತ್ತಾನೆ.

ಕವಿ ಕಥೆಯನ್ನು ಪ್ರಾರಂಭಿಸಿದರೂ ಶುಕಮುಖದಿಂದ ಬಂದ ಭಾಗವತ ಕಥೆ ಪ್ರಾರಂಭವಾಗುವುದಿಲ್ಲ. ಅದಕ್ಕಿನ್ನೂ ಬಹಳ ದೂರವಿದೆ. ಆ ಕಥೆಗೆ ಪೀಠಿಕೆಯಾಗಿ ಮೊದಲು ಮತ್ತಷ್ಟು ಕಥೆ ಹೇಳಿ ಮುಗಿಯಬೇಕು.

ಭಾಗವತ ಕಥೆ ಹರಿದು ಬಂದ ಪರಂಪರೆ ಹೀಗಿದೆ: ಶುಕಮುನಿ ಪರೀಕ್ಷಿದ್ರಾಜನಿಗೆ ಶ್ರೇಯಸ್ಸಾಗಲೆಂದು ಭಾಗವತ ಪುರಾಣಕಥೆಯನ್ನು ಅವನಿಗೆ ವಿವರಿಸಿ ಹೇಳಿದನು. ಶುಕಮುನಿಗೆ ಅವರ ತಂದೆ ವೇದವ್ಯಾಸರು ಈ ಹರಿ ಪುರಾಣವನ್ನು ಅನುಗ್ರಹಿಸಿ ಕೊಟ್ಟರು. ವ್ಯಾಸರಿಗೆ ನಾರದರಿಂದ ಭಾಗವತ ಮೂಲಮಂತ್ರೋಪದೇಶವಾಯಿತು ನಾರದಮುನಿ ಲೋಕಕಲ್ಯಾಣ ಸಾಧನೆಗಾಗಿ ಬ್ರಹ್ಮನನ್ನು ಪ್ರಾರ್ಥಿಸಿ, 'ಶ್ರೀರಮಣ ಚರಿತೆಯುಹ ಭಾಗವತ ಮರ್ಮ'ವನ್ನು ಪಡೆದುಕೊಂಡರು. ಈ ಎಲ್ಲಾ ವಿವರಗಳನ್ನೂ ಸುಮಂತ ಮುನಿ ಜನಮೇಜಯನ ಪ್ರಾರ್ಥನೆಯ ಪ್ರಕಾರ ಅವನಿಗೆ ತಿಳಿಯ ಹೇಳಿದನು.

ನಮ್ಮ ಕವಿ ಈ ಕೊನೆಯಿಂದ, ಎಂದರೆ ಜನಮೇಜಯ ವೃತ್ತಾಂತದಿಂದ ಕಥಾರಂಭ ಮಾಡುತ್ತಾನೆ.

ಕಥೆ ಬಹು ಮಂದಗಮನದಿಂದ ಮುಂದೆ ಸಾಗುತ್ತದೆ. "ಈ ಕೃತಿಯ ಲೊಪ್ಪುವ ಚಮತ್ಕೃತಿಗಳಿರದಡೇನು" ಎಂದು ತನ್ನ ಕೃತಿಯಲ್ಲಿ ಯಾವ ಚಮತ್ಕಾರವೂ ಇಲ್ಲವೆಂದು ಸೂಚಿಸಿದ್ದಾನೆ, ಕವಿ. ಆದರೆ ಬಗೆಬಗೆಯ ಅಲಂಕಾರಗಳಿಂದಲೂ ಉಕ್ತಿಚಮತ್ಕಾರಗಳಿಂದಲೂ ತುಂಬಿ ಗ್ರಂಥ ಪ್ರೌಢ ವಾಗಿದೆ. ಮಾತಿನ ಮೋಡಿಯಲ್ಲಿ ಕಥೆಯ ಓಟ ತಡೆ ತಡೆದು ಮೆಲ್ಲನೆ ಮುಂದುವರಿಯುತ್ತದೆ. ನಿದರ್ಶನಕ್ಕೆ ಕಥೆಯ ಬೆಳವಣಿಗೆಯನ್ನು ಸ್ವಲ್ಪ

ಪರಿಶೀಲಿಸಿ ನೋಡೋಣ. ಎರಡನೆಯ ಅಧ್ಯಾಯದಲ್ಲಿ (ಪೀಠಿಕೆಯನ್ನು ಬಿಟ್ಟರೆ, ಇದೇ ಗ್ರಂಥದ ಮೊದಲನೆಯ ಅಧ್ಯಾಯ) ನಿರೂಪಿಸಿರುವ ವಿಷಯ ವಿವರ ಇದು :

ಭೂಮಿ, ಅದರ ಮಧ್ಯದಲ್ಲಿ ಜಂಬೂದ್ವೀಪ (೧-೨); ಅಲ್ಲಿ ಮೇರು ಪರ್ವತ (೩-೧೬); ಅದರ ದಕ್ಷಿಣದಿಕ್ಕಿನ ಭೂಮಿಯಲ್ಲಿ ಹಸ್ತಿನಾಪುರಿ (೧೭-೪೬); ಆ ರಾಜ್ಯದ ದೊರೆ ಜನಮೇಜಯ ರಾಜ (೪೭-೫೪); ಅವನ ರಾಜ್ಯ, ಕೀರ್ತಿ (೫೫-೬೩); ಸುಮಂತ ಋಷಿಯ ಆಗಮನ (೬೪-೬೬); ಋಷಿಗೆ ಸ್ವಾಗತ, ಸತ್ಕಾರ (೬೭-೭೨); ಮುನಿಯ ಮಾತು (೭೩); ಭಾಗವತವನ್ನು ಹೇಳಬೇಕೆಂದು ರಾಜನ ಪ್ರಾರ್ಥನೆ (೭೪-೭೯); ಮುನಿಯ ಉತ್ತರ; ರಾಜನ ಪ್ರಶಂಸೆ (೮೦-೮೧); ಭಾಗವತ ಮಹಿಮೆ (೮೨-೮೪); ವರ್ಣಾಶ್ರಮ ಧರ್ಮಬೋಧನೆ (೮೫-೧೦೨).

ಈ ಅಧ್ಯಾಯದ ನೂರೆರಡು ಪದ್ಯಗಳಲ್ಲಿ ಜನಮೇಜಯನ ಆಸ್ಥಾನಕ್ಕೆ ಸುಮಂತ ಮುನಿಗಳು ಬಂದು ರಾಜನ ಪ್ರಾರ್ಥನೆಯ ಪ್ರಕಾರ ಭಾಗವತವನ್ನು ಹೇಳಹೊರಟು ವರ್ಣಾಶ್ರಮ ಧರ್ಮಗಳನ್ನು ನಿರೂಪಿಸಿದರು—ಎಂಬಷ್ಟು ಮಾತ್ರ ಕಥೆ ಬಂದಿದೆ.

ಮೂರನೆಯ ಅಧ್ಯಾಯದಲ್ಲಿ ನಾರದರು ಭಾಗವತವನ್ನು ಪಡೆದು ಕೊಂಡ ಕಥೆಯಿದೆ. ನಾರದರು ಲೋಕಸಂಚಾರ ಮಾಡುತ್ತ (೧-೮) ಭೂಲೋಕಕ್ಕೆ ಬಂದರು. ಲೋಕದ ಜನ ಕರ್ಮಮಾರ್ಗದಲ್ಲಿ ಮುಳುಗಿ ತೊಳಲುತ್ತಿರುವುದನ್ನು ಕಂಡು ಮರುಗಿದರು ಅವರನ್ನು ಉದ್ಧರಿಸುವ ಸಂಕಲ್ಪ ಮಾಡಿ (೯-೧೩) ಸತ್ಯಲೋಕಕ್ಕೆ ಪ್ರಯಾಣ ಮಾಡಿದರು (೧೪-೧೫). ದೇವತೆಗಳ ಮತ್ತು ಸನಕಾದಿ ದೇವರ್ಷಿಗಳ ವಂದನೆಯನ್ನು ಸ್ವೀಕರಿಸಿ, ಬ್ರಹ್ಮ ಸಭೆಗೆ ಬಂದು ಬ್ರಹ್ಮನ ಅಡಿಗೆರಗಿದರು (೧೬-೩೨). ಬ್ರಹ್ಮನ ಪ್ರಶ್ನೆಗೆ ಉತ್ತರ ಕೊಡುತ್ತಾ ಲೋಕದ ಸಂಕಟವನ್ನು ಪರಿಹರಿಸುವುದಕ್ಕೆ ಸುಲಭೋ ಪಾಯವನ್ನನುಗ್ರಹಿಸಬೇಕೆಂದು ಪ್ರಾರ್ಥಿಸಿದರು (೩೩-೪೫). ಪಾಪಿಗಳ ಪಾಪ ಪರಿಹಾರ ಮಾಡಿ ಅವರನ್ನು ಉದ್ಧರಿಸುವುದಕ್ಕೆ 'ಇಪ್ಪತ್ತನಾಲ್ಕು ಮಹದವತಾರಗಳನ್ನೆತ್ತಿ ಲೀಲೆಯನ್ನು ಮೆರೆದ ಶ್ರೀರಮಣನ ಚರಿತ್ರೆಯಾದ ಭಾಗವತವೇ' ಸರಿಯಾದ ಸಾಧನವೆಂದು ಕಮಲಜನು ನಾರದಮುನಿಗೆ ಭಾಗ

ವತವನ್ನು ಉಪದೇಶಿಸಿ, 'ಜನರನ್ನು ಉದ್ಧರಿಸು' ಎಂದು ಅಪ್ಪಣೆಮಾಡಿ ಕಳಿಸಿಕೊಟ್ಟನು (೪೬-೪೯)

ಸತ್ಯಲೋಕದಿಂದ ಹೊರಟ ನಾರದರು ಭೂಲೋಕಕ್ಕೆ ಇಳಿದು ಬಂದು ಬದರಿಕಾಶ್ರಮವನ್ನು ತಲುಪಿದರು (೫೦–೫೧). ತಪಸ್ಸಿನ ಬೀಡಾಗಿ ಪುಣ್ಯದ ನೆಲೆಯಾದ ಬದರಿಕಾಶ್ರಮದಲ್ಲಿ (೫೨–೭೬) ಭಾರತಾಮೃತ ಕಿರಣವನ್ನು ಹರಡಿದರೂ ಅಂತರಂಗದ ಚಪಲತೆಯುಡುಗದೆ ಚಿಂತೆಯ ಕಲೆಯಿಂದ ಮಂಕಾಗಿದ್ದ ಬಾದರಾಯಣ ಮುನಿಯು ನಾರದಾಗಮನವನ್ನು ಕಂಡು ಸಂತೋಷಗೊಂಡು ಅವರನ್ನು ಆದರದಿಂದ ಬರಮಾಡಿಕೊಂಡು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ ಪೂಜಿಸಿದರು (೭೭-೮೧). ಕುಶಲ ಪ್ರಶ್ನೆಗಳಾದ ಮೇಲೆ ತನ್ನ ಮನಶ್ಚಾಂಚಲ್ಯವನ್ನು ಕಳೆದು "ಸುಲಭದಿಂ ಸುಗತಿಯನ್ನನುಗೊಳಿಪ ಸಾಧನೋಪಾಯಮಂ ಕರುಣಿಸುವುದೆಂದು ಪದವಿಡಿದ" ವೇದವ್ಯಾಸರಿಗೆ ನಾರದಮುನಿ ಭಾಗವತ ಮೂಲ ಮಂತ್ರವನ್ನನುಗ್ರಹಿಸಿ ವಿಸ್ತಾರವಾಗಿ ಕಥೆಯನ್ನು ಹೇಳಿ ತಪೋಲೋಕಕ್ಕೆ ಪ್ರಯಾಣ ಮಾಡಿದರು (೮೨-೮೯)

ನಾಲ್ಕನೆಯ ಅಧ್ಯಾಯದ ಮೊದಲ ಹತ್ತು ಪದ್ಯಗಳಲ್ಲಿ ಶುಕಮುನಿಗೆ ವ್ಯಾಸರು ಭಾಗವತವನ್ನು ಉಪದೇಶಿಸಿ ಆ ದಿವ್ಯಚರಿತ್ರೆಯನ್ನು ಹೇಳಿ ಲೋಕವನ್ನುದ್ಧರಿಸೆಂದು ನಿಯಮಿಸಿದ ಕಥೆಯಿದೆ. ಮುಂದಿನ ೧೦೫ ಪದ್ಯಗಳಲ್ಲಿ ಅರ್ಜುನನು ಹಸ್ತಿನಾವತಿಯಿಂದ ಹೊರಟು ದ್ವಾರಕಿಗೆ ಹೋಗಿ ಶ್ರೀಕೃಷ್ಣನನ್ನು ಕಂಡು ಸರಸ ಸಲ್ಲಾಪದಿಂದ ಸಂತುಷ್ಟನಾಗಿದ್ದನೆಂಬ ಕಥೆ ಹೇಳಿದೆ. ಇಲ್ಲಿ ಕಥೆಯ ಮುನ್ನಡೆಗಿಂತ ವರ್ಣನೆ ಅಲಂಕಾರ ಚತುರೋಕ್ತಿಗಳಿಗೇ ಅಗ್ರಸ್ಥಾನ ಸಂದಿದೆ:—ಯುಧಿಷ್ಠಿರನ ರಾಜ್ಯಭಾರ (೧೧-೧೯); ಯುಧಿಷ್ಠಿರನ ಅಪ್ಪಣೆಯ ಪ್ರಕಾರ ಅರ್ಜುನನು ದ್ವಾರಕಿಗೆ ಪ್ರಯಾಣ ಮಾಡಿದನು (೨೦-೨೧); ಅವನು ಕಂಡ ಸಮುದ್ರದ ಅತಿಶಯಗಳು (೨೨–೩೯); ದ್ವಾರಾವತಿಯ ವರ್ಣನೆ, ಮಹಿಮೆ (೪೦-೫೫); ಪುರಪ್ರವೇಶ (೫೬-೬೨); ಪಾರ್ಥನಿಗೆ ಸ್ವಾಗತ (೬೩); ಕೃಷ್ಣ ದರ್ಶನ. ಸ್ತುತಿ (೬೪-೭೨); ಕೃಷ್ಣ ಪಾರ್ಥರ ಸರಸ ಸಂಭಾಷಣೆ (೭೩-೮೫); ಸಂಜೆಗೆಂಪು, ಕತ್ತಲೆ (೮೬-೯೮); ನಕ್ಷತ್ರ (೯೯-೧೦೨); ರಾತ್ರಿವರ್ಣನೆ, ಕೃಷ್ಣ ಪಾರ್ಥರು ಸುಖ ಶಯ್ಯೆಯಲ್ಲಿ ಪವಡಿಸಿದರು (೧೦೩-೧೧೫).

ಐದನೆಯ ಅಧ್ಯಾಯದಲ್ಲಿ ಕಥೆ ಮುಂದುವರಿದು ಪರೀಕ್ಷಿತನ ಪಟ್ಟಾಭಿಷೇಕದ ವರೆಗೆ ತಲುಪುತ್ತದೆ. ಶ್ರೀ ಕೃಷ್ಣನು ಯೋಗನಿದ್ರೆಯಲ್ಲಿ ನೆಲಸಿದ್ದನು (೧-೩), ರಾತ್ರಿ ಕಳೆದು ಬೆಳಗಾಗಿ ಸೂರ್ಯನು ಮೂಡಿಬಂದು ಎಲ್ಲೆಡೆಯಲ್ಲೂ ಕಿರಣಗಳನ್ನು ಹರಡಿದನು (೪-೧೯), ಕೃಷ್ಣಾರ್ಜುನರು ನಿದ್ದೆ ತಿಳಿದೆದ್ದರು. ಪ್ರಾತಃಕೃತ್ಯಗಳನ್ನು ನೆರವೇರಿಸಿದ ಬಳಿಕ ಹಸ್ತಿನಾವತಿಗೆ ಹೊರಟು ನಿಂತ ಪಾರ್ಥನನ್ನು, ಶ್ರೀ ಕೃಷ್ಣನು ತಾನು ನಡಸಬೇಕೆಂದಿರುವ ದೇವತಾಸೇವೆ ಪೂರೈಸುವ ವರೆಗೂ ಇದ್ದು ಹೋಗಬೇಕೆಂದು ಹೇಳಿ ಜೊತೆ ಯಲ್ಲೇ ಉಳಿಸಿಕೊಂಡನು (೨೦-೨೫)

ಈ ಮೊದಲು ಯಾದವಯುವಕರು ಚೇಷ್ಟೆಗಾಗಿ ತಮ್ಮಲ್ಲೊಬ್ಬನಿಗೆ ಗರ್ಭಿಣಿಯಂತೆ ವೇಷ ಹಾಕಿ, ಸ್ನಾನಘಟ್ಟದಲ್ಲಿದ್ದ ಋಷಿಗಳ ಬಳಿ ಹೋಗಿ, ಅವಳಿಗೆ ಎಂಥ ಸಂತಾನವಾಗುತ್ತದೆಯೋ ಹೇಳಬೇಕೆಂದು ಪ್ರಾರ್ಥಿಸಿದರು (೨೬-೩೩). ಅವರು ಇವರ ಕುಚೇಷ್ಟೆಗೆ ಕೋಪಿಸಿಕೊಂಡು, 'ನಿಮ್ಮ ಯದುಕುಲವನ್ನೆಲ್ಲಾ ಸಂಹರಿಸುವ ಲೋಹ ಮುಸಲ್ವವೊಂದು ಹುಟ್ಟುವುದೆಂದು ನುಡಿದುಬಿಟ್ಟರು (೩೪-೩೫). ಅದರಂತೆ, ವೇಷಧಾರಿ ಗರ್ಭಿಣಿಯು ಬಸುರಿ ನಿಂದ ಕಬ್ಬಿಣದೊನಕೆ ಹುಟ್ಟಿಬಂತು. ಮಹಾ ಉತ್ಪಾತಗಳು ತಲೆದೋರಿದವು. ಶ್ರೀ ಕೃಷ್ಣನ ಸಲಹೆಯನ್ನು ಕೇಳಿ ಯದುಯುವಕರು ಆ ಮುಸಲವನ್ನರೆದು ಸಮುದ್ರದ ನೀರಿನಲ್ಲಿ ಕದರಿದರು. ಅದರಿಂದ ಒಂದು ಬಗೆಯ ಚೇಳಿ ಹುಲ್ಲು ಬೆಳೆಯಿತು. ನುರಿಯದೆ ಉಳಿದ ಸಣ್ಣ ಕಬ್ಬಿಣದ ತುಂಡು ಬೇಡನೊಬ್ಬನ ಕೈಗೆ ಬಿದ್ದು, ಅವನ ಬಾಣಕ್ಕೆ ಮೊನೆಯಾಗಿ ನಿಂತಿತು (೩೬-೩೯)

ದೇವತೆಯ ಹರಕೆಯನ್ನೊಪ್ಪಿಸುವುದಕ್ಕಾಗಿ ಯಾದವರೆಲ್ಲ ಸಮುದ್ರ ತೀರದಲ್ಲಿ ಸೇರಿ ವಿಹರಿಸತೊಡಗಿದರು (೪೦-೪೪) ಆ ಸಮಯದಲ್ಲಿ ನಿಷ್ಕಾ ರಣವಾಗಿ ಯಾದವ ವೀರರಲ್ಲಿ ಪರಸ್ಪರ ಕಲಹವು ಹುಟ್ಟಿಕೊಂಡಿತು. ಚೇಳಿ ಹುಲ್ಲನ್ನು ಸೆಳೆದುಕೊಂಡು ಅದರಿಂದ ಹೊಡೆದಾಡತೊಡಗಿದರು. ಹುಲ್ಲೇ ಕೂರಲಗಾಗಿ ಅದರ ಹೊಡೆತದಿಂದ ಯಾದವರೆಲ್ಲ ಒಬ್ಬರುಳಿಯದಂತೆ ಹತ ರಾದರು (೪೫-೪೮). ಕಡಲುಕ್ಕಿ ಬಂದು ದ್ವಾರಕಿಯನ್ನು ಮುಳುಗಿಸಿತು. ಶ್ರೀ ಕೃಷ್ಣನು ಸ್ತ್ರೀಜನರೊಡನೆ ಒಂದು ಮರದ ಕೆಳಗೆ ತಂಗಿದನು. ಪಾರ್ಥ ನನ್ನು ನೋಡಿ, "ಅಳಿದುದು ಐಶ್ವರ್ಯ ಪುತ್ರಾದಿಗಳ್. ಜಲಧಿಯೊಳ್ ಮುಳುಗಿದುದು ವಸತಿ. ನಿಲಲೆಡಮಿಲ್ಲ. ತರುಣಿಯರ್ ಬಳಸಿರ್ಪರ್

ಅಮಿತರ್. ಇನ್ನೆವಗೆ ಪೋಷಕರಾವರ್ ? ಏಗೈವೆವಿದಕೆ ? " ಎಂದನು. ಅರ್ಜುನನು ಅವನ ದೇವತ್ವವನ್ನು ಜ್ಞಾಪಿಸಿ, "ದೇವಾ, ಬಯಲಿಂಗೆ ಹಾನಿ ವೃದ್ಧಿಗಳುಂಟೆ ? ನಾವಜ್ಞರು. ಎಂದುದಂ ಕ್ಷಮಿಸುವುದು. ಭವದಂಘ್ರಿ ಸೇವಕರು ಗಡ ಧರ್ಮಜಾದಿಗಳು. ಹಸ್ತಿನಾಪುರಕೆ ತೆರಳುವುದು" ಎಂದನು. (೪೯–೫೨). ಆ ಸಮಯಕ್ಕೆ ಸರಿಯಾಗಿ ಬೇಟೆಗೆ ಬಂದ ಬೇಡನಿಗೆ ಕೃಷ್ಣನ ಹಿಮ್ಮಡಿ ಹುಲ್ಲೆಯ ಮುಸುಡಿಯಂತೆ ಕಂಡಿತು. ಕೂಡಲೆ ಒನಕೆತುಂಡಿನ ಮೊನೆಯಿದ್ದ ಬಾಣವನ್ನು ಬಿಲ್ಲಿಗೆ ಹೂಡಿ ಹೊಡೆದುಬಿಟ್ಟನು. ಅಚ್ಯುತನು ಅದೇ ನೆವದಿಂದ ಲಿಲಾತನುವತ್ನು ಪರಿಹರಿಸಿ ಜ್ಯೋತಿ ರೂಪವಾಗಿ ಪರಿಣಮಿಸಿದನು (೫೩–೫೫)

ಅರ್ಜುನನು ಕಿರಾತರನ್ನಡಗಿಸಲೆಂದು ಗಾಂಡೀವವನ್ನೆತ್ತಿಕೊಂಡನು. ಆದರೆ ಅದು ನಿಸ್ಸತ್ವವಾಯಿತು. ಕಿರಾತರು ನಾರಿಯರನ್ನು ಮುತ್ತಿ ಅವರ ಮಣಿಭೂಷಣಾದಿಗಳನ್ನು ಕಿತ್ತುಕೊಂಡು ನಡೆದು ಬಿಟ್ಟರು. ಆ ಮೇಲೆ ಅರ್ಜುನನು ಸ್ತ್ರೀ ಜನವನ್ನು ಸಂತೈಸಿ ಅವರನ್ನು ಕರೆದುಕೊಂಡು ಹೊರಟನು. ದಾರಿಯಲ್ಲಿ ಒಂದು ಕೊಳವನ್ನು ಕಂಡು ಬಾಯಾರಿ ಅದರ ನೀರು ಕುಡಿಯಲು. ಗೋಪಿಕಾ ಸ್ತ್ರೀಯರೆಲ್ಲ ಹೆಣ್ಣು ರೂಪು ಹೋಗಿ ಮುನಿರೂಪು ಪಡೆದರು. ಆ ಮೇಲೆ ಅವರೆಲ್ಲ ದಿಕ್ಕು ದಿಕ್ಕಿಗೆ ಹೋಗಿ ಬಿಟ್ಟರು. ನಡೆದ ಘಟನೆಗಳನ್ನೆಲ್ಲಾ ಕಂಡು ವಿಸ್ಮಿತನಾಗಿ, ವೈರಾಗ್ಯ ಹೊಂದಿ ಅರ್ಜುನನು ಒಂಟಿಯಾಗಿ ಹಸ್ತಿನಾವತಿಗೆ ಹಿಂದಿರುಗಿದನು (೫೬–೬೧)

ಇತ್ತ ಹಸ್ತಿನಾವತಿಯಲ್ಲಿ ನಾನಾ ಉತ್ಪಾತಗಳು ತಲೆದೋರಿದವು. ಅರ್ಜುನನು ದುಗುಡದಿಂದ ಬಂದು ನಡೆದ ಸಂಗತಿಯನ್ನೆಲ್ಲ ಧರ್ಮರಾಯನಿಗೆ ವಿಜ್ಞಾಪಿಸಿದನು. (೬೨-೬೫). ವಿವರವನ್ನೆಲ್ಲ ಕೇಳಿದ ಮೇಲೆ ಅರಸನ ವೈರಾಗ್ಯಭಾವ ಬಲವಾಯಿತು. "ದೇವದೇವನು ತನುವನ್ನು ಬಿಸುಟಮೇಲೆ ನಾವಿರುವುದೇನು ಘನ ? ವ್ಯರ್ಥವಾಗಿ ಬದುಕಿರುವುದು ಸರಿಯಲ್ಲ'' ಎಂದು ನಿಶ್ಚಯಿಸಿದನು. ತಮ್ಮಂದಿರೂ ಅದನ್ನೇ ಅನುಮೋದಿಸಿದರು. ಐವರೂ ಒಮ್ಮತವಹಿಸಿ, ಅಭಿಮನ್ಯುಕುಮಾರ ಪರೀಕ್ಷಿತನಿಗೆ ಪಟ್ಟಾಭಿಷೇಕ ಮಾಡಿ ತಪೋವನಕ್ಕೆ ತೆರಳಿದರು (೬೬–೭೦)

ಪರೀಕ್ಷಿದ್ರಾಜನು ಕಲಿಪುರುಷನನ್ನು ಕಟ್ಟಿ ಧರ್ಮವನ್ನು ನೆಲೆಗೊಳಿಸಿ ರಾಜ್ಯವಾಳಿದ ಕಥೆ ಆರನೆಯ ಅಧ್ಯಾಯದ ೯೧ ಪದ್ಯಗಳಲ್ಲಿ ವರ್ಣಿತವಾಗಿದೆ. ಪರೀಕ್ಷಿದ್ರಾಜನು ಧರ್ಮದಿಂದ ರಾಜ್ಯವಾಳುತ್ತಿರಲು "ಇಳೆಯರಸನ ಸಾಮ್ರಾಜ್ಯ ಸಾಯುಜ್ಯಪದವೆನಿಸಿತು" (೧-೯). ಹೀಗಿರಲು ಮೆಲ್ಲ ಮೆಲ್ಲನೆ ಕಲಿಪುರುಷನ ಕಾಲಾಟ ಕಾಣಿಸತೊಡಗಿತು. ಋಷಿಗಳನ್ನು ಬೆಸ ಗೊಳ್ಳಲು, ಅವರು, "ಇದು ಕಲಿ ಪುರುಷನ ಅಧಿಕಾರ ಕಾಲ. ಕೃಷ್ಣಭಗವಂತನ ಪಾದಸ್ಪರ್ಶ ಧರಣಿಗಿದ್ದಷ್ಟು ದಿನವೂ ಕಲಿ ಅಡಗಿದ್ದನು. ಈಗ ಲೀಲಾವತಾರ ಮುಗಿದದ್ದರಿಂದ ಭೀತಿಯನ್ನು ಬಿಟ್ಟು ಸಂಚರಿಸತೊಡಗಿದ್ದಾನೆ" ಎಂದರು. ಅದನ್ನು ಕೇಳಿ ಪರೀಕ್ಷಿತನು ಕಲಿಕುಹಕವನ್ನು ನಿಲ್ಲಿಸುವೆನೆಂದು ಸಂಕಲ್ಪಮಾಡಿ ಚತುರಂಗಬಲವನ್ನು ಕೂಡಿಸಿಕೊಂಡು ಕಲಿಯನ್ನರಸುತ್ತ ಹೊರಟನು (೧೦-೧೭)

ಪಡೆಸಹಿತ ಹೊರಟು, ಬಂಗಾಳ, ಸಿಂಧು, ಕಾಶ್ಮೀರ, ಘೂರ್ಜರ, ಗೌಡ, ವರಹಾಡ, ಕರಹಾಡ, ಕೊಂಕಣ, ಕಳಿಂಗ, ಕನ್ನಡ, ಮಹಾರಾಷ್ಟ್ರ, ಆಂಧ್ರ, ಮಲೆಯಾಳ, ಕೇರಳ, ಪಾಂಡ್ಯ, ಚೋಳ ಮೊದಲಾದ ನಾನಾ ದೇಶಗಳಲ್ಲಿ ಸುತ್ತಿ ಹುಡುಕಿದರೂ ಕಲಿ ಕಾಣಿಸಲಿಲ್ಲ (೧೮-೬೪). (ಇಲ್ಲಿ ಈ ದೇಶಗಳ ವಿಸ್ತಾರವಾದ ವರ್ಣನೆಯಿದೆ). ಕಲಿ ಸಿಕ್ಕಲಿಲ್ಲವಲ್ಲಾ ಎಂದು ಚಿಂತಿಸುತ್ತಿರುವಾಗ, ರಾಜನಿಗೆ ಒಂದು ಹಸುವೂ ಒಂದು ಎತ್ತೂ ಕಾಣಿಸಿ ದವು. ಎತ್ತು ಮೂರು ಕಾಲು ಮುರಿದು ಒಂದೇ ಕಾಲ ಮೇಲೆ ನಿಂತು ಸಂಕಟ ಪಡುತ್ತಿತ್ತು. ಹಸು ಕಣ್ಣೀರು ಸುರಿಸುತ್ತ ಅದನ್ನು ಸಂತೈಸುತ್ತಿತ್ತು. ಪರೀಕ್ಷಿತನು ಅವರ ಬಳಿ ಹೋಗಿ, 'ಹೀಗೆ ಕಾಲ್ಮುರಿದು ಕಷ್ಟಪಡಿಸಿದ ದುಷ್ಟರು ಯಾರೆ'ಂದು ಕೇಳಿದನು. ವೃಷಭನೇ ಧರ್ಮವೆಂದೂ, ಗೋವೇ ಭೂಮಿ ಯೆಂದೂ ತಿಳಿಯಿತು. ಕಲಿಮಹಿಮೆಯಿಂದ ಜನರ ಪಾಪವರ್ತನೆಗಳು ಹೆಚ್ಚಿದ್ದರಿಂದ ವೃಷಭನ ಕಾಲ್ಮುರಿದವೆಂದೂ, ಶ್ರೀಕೃಷ್ಣನ ಸಾನ್ನಿಧ್ಯ ತಪ್ಪಿ ಪಾಂಡವರು ತೊರೆದು ಹೋದ ಬಳಿಕ ತಮಗೆ ರಕ್ಷಕರಿಲ್ಲವಾಯಿತೆಂದೂ ಮರುಗಿ ಭೂದೇವಿ ಅಭಿಮನ್ಯುಕುಮಾರನಲ್ಲಿ ತಪೋಬಲವಿಲ್ಲವೋ ಏನೋ ಎಂದು ಶಂಕಿಸಿದಳು. ಆ ಮಾತನ್ನು ಕೇಳಿ ರಾಜನು ತಾನೇ ಆ ಅಭಿಮನ್ಯು ಕುಮಾರನೆಂದು ತಿಳಿಸಿ, 'ಕಲಿಯನ್ನು ಹುಡುಕುತ್ತ ಅಲೆದಲೆದು ಸಾಕಾದರೂ ಅವನು ಸಿಕ್ಕಲಿಲ್ಲ. ಏನು ಮಾಡಲಿ?' ಎಂದನು. ತಪಶ್ಶಕ್ತಿಯಿದ್ದರೆ ಮಾತ್ರ

ಕಲಿಯನ್ನಡಗಿಸಬಹುದೆಂಬ ಭೂದೇವಿಯ ನುಡಿಯನ್ನು ನೆನೆದು 'ಲಕ್ಷ್ಮೀಪತಿಯನ್ನು ನೆನೆಯುವುದೇ ತಪಸ್ಸು. ಹೀಗಿರುವಾಗ ಕಲಿ ಕಾಣಿಸದಿದ್ದರೆ ಶೂಲಮುಖದಿಂದ ದೇಹವನ್ನು ತೊರೆದು ಬಿಡುತ್ತೇನೆ' ಎಂದು ಶಪಥ ಮಾಡಿದನು (೬೫-೭೬)

ಆ ಶಪಥಕ್ಕೆ ಹೆದರಿ ಕಲಿ ಕಾಣಿಸಿಕೊಂಡನು : ಕರಿಮೈಯ ಕೊಳಕು ಮನುಷ್ಯ. ಬಡಕಲು ಮೈಯಿನ ತಾಯಿಯ ಕೈಲಿ ತನ್ನ ಪಾದರಕ್ಷೆಯನ್ನು ಹಿಡಿಸಿಕೊಂಡು ಅವಳ ತಲೆಯ ಮೇಲೆ ದೊಡ್ಡ ಹೊರೆ ಹೊರಿಸಿದ್ದಾನೆ. ಪ್ರಾಯದ ಹೆಂಡತಿಯನ್ನು ಎತ್ತಿನ ಮೇಲೆ ಕೂರಿಸಿಕೊಂಡು ಬರುತ್ತಿದ್ದಾನೆ. ಪರೀಕ್ಷಿದ್ರಾಜನು ಅವನನ್ನು ಕಂಡು ಮಾತಾಡಿ, ದುರ್ನಡತೆಯನ್ನು ಖಂಡಿಸಿದನು. ಹೆಂಡತಿಯನ್ನು ಕೆಳಗಿಳಿಸಿ ತಾಯಿಯ ಹೊರೆಯನ್ನು ಅವಳ ಮೇಲೆ ಹೊರಿಸಿ ತಾಯಿಯನ್ನು ಎತ್ತಿನ ಮೇಲೆ ಕೂರಿಸಬೇಕೆಂದು ಅಪ್ಪಣೆ ಮಾಡಿದನು. ಅಪ್ಪಣೆ ನಡಸದಿದ್ದರೆ ಶಿಕ್ಷಿಸುವೆನೆಂದನು. "ಇವತ್ತೋ ನಾಳೆಯೋ ಸಾಯಲಾಗಿರುವ ತಾಯಿಗೇಕೆ ಉಪಚಾರ? ಭೋಗ ವಂಶಾಭಿವೃದ್ಧಿಗಳಿಗೆ ಸಾಧನವಾಗಿರುವವಳು ಹೆಂಡತಿ. ಅವಳಿಗೇ ಉಪಚಾರಕ್ಕೆ ಅರ್ಹತೆ. ನನ್ನ ರಾಜ್ಯದಲ್ಲಿ ಇದೇ ನ್ಯಾಯ'' ಎಂದು ಕಲಿ ವಾದಿಸಿದನು. ತಾನೇ ಲೋಕಕ್ಕೆ ಶಿಕ್ಷಾಕರ್ತನಾಗಿರುವಾಗ ತನಗೆ ಶಿಕ್ಷೆಯೆಂದರೇನೆಂದು ಪ್ರತಿಭಟಿಸಿದನು (೭೭-೮೪).

ಆಗ ಪರೀಕ್ಷಿದ್ರಾಜನು ನಾರಾಯಣಾಸ್ತ್ರವನ್ನು ಪ್ರಯೋಗಿಸಿ ಕಲಿಯನ್ನು ಕಟ್ಟಿಹಾಕಿದನು. ತಪೋಮಹಿಮೆಗೆ ತಗ್ಗಿ ತಲೆಬಾಗಿ ಪ್ರಾರ್ಥಿಸಿದ ಕಲಿಯ ವಾಸಕ್ಕೆ ಸ್ಥಾನವನ್ನು ಗೊತ್ತುಮಾಡಿ, ಅಲ್ಲಿ ಹೊರತು ಬೇರೆಲ್ಲಿಯೂ ಕಾಲಿಡಬಾರದೆಂದು ಕಟ್ಟಪ್ಪಣೆ ಮಾಡಿದನು. ಆಗ ಧರ್ಮವೃಷಭನ ಕಾಲುಗಳು ನೆಟ್ಟಗಾದವು. ಭೂಗೋವಿನ ಮೈ ತುಂಬಿಕೊಂಡಿತು. ಎಲ್ಲೆಡೆಯಲ್ಲೂ ಸುಖಸಮೃದ್ಧಿಗಳು ನೆಲಸಿದವು (೮೫-೯೧)

ಪರೀಕ್ಷಿದ್ರಾಜನಿಗೆ ಶಾಪ ಬಂದ ಸಂಗತಿಯೂ, ಪ್ರಾಯೋಪವೇಶದಲ್ಲಿದ್ದ ಆತನಿಗೆ ಶುಕಮುನಿಗಳು ಭಾಗವತಪುರಾಣವನ್ನು ಹೇಳಿದ್ದೂ ಮುಂದಿನ ಅಧ್ಯಾಯದ ವಸ್ತು :

ಕಲಿಯನ್ನು ಕಟ್ಟಿದ ಮೇಲೆ ಪರೀಕ್ಷಿದ್ರಾಜನು ದೇಶಸಂಚಾರವನ್ನು ಮುಂದುವರಿಸಿ ಗಂಗಾತೀರಕ್ಕೆ ಬಂದನು (೧-೮). ಗಂಗೆಯ ಅಂದ ಚೆಂದಗ

ಳನ್ನು ಕಂಡು ಹಿಗ್ಗಿ, ಮಿಂದು ಪೂಜಿಸಿ ಸ್ತುತಿಸಿ ಸಂತುಷ್ಟನಾದನು (೯-೨೨). ಅಲ್ಲಿಂದ ಮುಂದೆ ಕುರುಕ್ಷೇತ್ರಕ್ಕೆ ಹೋಗಿ, ಭಾರತವೀರರು ಪರಾಕ್ರಮವನ್ನು ಮೆರೆದ ಸ್ಥಾನಗಳನ್ನು ಸಂದರ್ಶಿಸಿದನು (೨೩-೨೫). ಅಷ್ಟರಲ್ಲಿ ಹಿಮವತ್ಕಾಲ ಬಂತು (೨೬-೩೯). ಆಗ ರಾಜನು ಹಸ್ತಿನಾವತಿಗೆ ಹಿಂದಿರುಗಿ ರಾಜ್ಯಭಾರದಲ್ಲಿ ತೊಡಗಿದನು. ಜನಮೇಜಯನ ಜನನವಾಯಿತು. ಮಗನಿಗೆ ಐದು ವರ್ಷಗಳಾಗುವ ವರೆಗೂ ಆನಂದದಿಂದ ಕಾಲ ಕಳೆಯಿತು (೪೦-೪೩)

ದೇಶದಲ್ಲಿ ದುಷ್ಟಮೃಗಗಳ ಹಾವಳಿ ಹೆಚ್ಚಿ ಅವುಗಳನ್ನಡಗಿಸಲೆಂದು ರಾಜ ಬೇಟೆಗೆ ಹೊರಟನು. ಬೇಟೆಯಲ್ಲಿ ಒಂದು ಹುಲಿಯನ್ನು ಬೆನ್ನಟ್ಟಿ ಪರೀಕ್ಷಿತನೊಬ್ಬನೇ ಅಡವಿಯಲ್ಲಿ ನಡೆದುಬಿಟ್ಟನು (೪೪-೫೮). ಹುಲಿ ಮರೆಯಾಗಿ ದಾರಿತಪ್ಪಿ ಅಲೆಯುತ್ತಿದ್ದ ರಾಜನು ಒಬ್ಬ ಮುನಿ ಕಣ್ಮುಚ್ಚಿ ಕುಳಿತಿರುವುದನ್ನು ಕಂಡು, ಬಾಯಾರಿ ಬಳಲಿ ನೀರು ಬೇಕೆಂದು ಬೇಡಿದನು. ಧ್ಯಾನದಲ್ಲಿ ಮೈಮರೆತ ಮುನಿ ಮಾತಾಡದಿರಲು ಕೋಪಗೊಂಡು ಅವನ ಕೊರಳಿಗೆ ಸತ್ತ ಹಾವೊಂದನ್ನು ಸುತ್ತಿ ಹಿಂದಿರುಗಿದನು. ಹುಡುಕಿಕೊಂಡು ಬಂದ ಸೇನೆಯೊಡನೆ ರಾಜಧಾನಿಗೆ ಬಂದು ಸೇರಿದನು (೫೯-೬೫)

ಇತ್ತ ಕಾಡಿನಲ್ಲಿ ಆಶ್ರಮಕ್ಕೆ ಹಿಂದಿರುಗಿದ ಮುನಿಪುತ್ರನು ತಂದೆಯ ಕೊರಳಿನಲ್ಲಿ ಹಾವು ಸುತ್ತಿರುವುದನ್ನು ಕಂಡು ಹೆದರಿ, ಅದು ಸತ್ತ ಹಾವೆಂದರಿಯದೆ, 'ಹೀಗೆ ಹಾವು ಸುತ್ತಿದವನು ಏಳು ದಿನಗಳೊಳಗಾಗಿ ಹಾವು ಕಚ್ಚಿ ಸಾಯಲಿ' ಎಂದು ಶಪಿಸಿದನು ಶಪಿಸಿ ಅಳತೊಡಗಿದನು. ಮುನಿ ಬಹಿರ್ಮುಖನಾಗಿ ಸಂಗತಿಯನ್ನು ತಿಳಿದು ಮಗನ ದುಡುಕಿಗೆ ಮರುಗಿ, 'ಧಾರ್ಮಿಕನಾದ ರಾಜನಿಗೆ ಶಾಪಕೊಟ್ಟು ನೀನು ಲೋಕವನ್ನು ಕೊಂದೆ' ಎಂದು ಬೈದನು. ಬಳಿಕ ಶಾಪವೃತ್ತಾಂತವನ್ನು ಪರೀಕ್ಷಿತನಿಗೆ ಹೇಳಿ ಕಳಿಸಿದನು (೬೬-೭೨)

ಈ ಶಾಪವಾರ್ತೆ ಲೋಕದಲ್ಲೆಲ್ಲಾ ಹರಡಿತು. ದೇಶವೆಲ್ಲಾ ಮರುಗಿತು. ಋಷಿಮುಖ್ಯರೆಲ್ಲಾ ಹಸ್ತಿನಾವತಿಗೆ ಬಂದು ಸೇರಿದರು. ತನ್ನ ಅನುಚಿತ ವರ್ತನೆಗೆ ಮೊದಲೇ ಕೊರಗುತ್ತಿದ್ದ ಪರೀಕ್ಷಿದ್ರಾಜನು ಶಾಪವನ್ನು ಸ್ವಾಗತಿಸಿದನು. ಭಗವದ್ಧ್ಯಾನದಲ್ಲಿ ಕಡೆಗಾಲವನ್ನು ಕಳೆಯಬೇಕೆಂದು ನಿಶ್ಚಯಿಸಿ ಗಂಗಾತೀರದಲ್ಲಿ ದರ್ಭಾಸನದ ಮೇಲೆ ಮಂಡಿಸಿ ಪ್ರಾಯೋಪವೇಶಕ್ಕೆ ಸಂಕಲ್ಪ ಮಾಡಿದನು (೭೩-೮೩). ಆ ಸಮಯಕ್ಕೆ ಸರಿಯಾಗಿ ಶುಕಮುನಿ

ಅಲ್ಲಿಗೆ ದಯಮಾಡಿಸಿದರು (೮೪-೮೯). ಪರೀಕ್ಷಿದ್ರಾಜನು ಶುಕರ ಪಾದಕ್ಕೆರಗಿ, ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿದನು. ಶಾಪವೃತ್ತಾಂತವನ್ನು ತಿಳಿಸಿ ತನ್ನ ಬಾಳಿಗೆ ಏಳುದಿನದ ಅವಧಿ ಮಾತ್ರವಿರುವುದಾಗಿ ಬಿನ್ನವಿಸಿಕೊಂಡನು. ಶುಕಮುನಿ ರಾಜನನ್ನು ಸಂತೈಸಿ, 'ಭಾಗವತವೆಂಬ ಹರಿಕಥೆಯ ಮಹಿಮೆ ಅಪಾರ. ಅರೆಗಳಿಗೆಯ ಅವಕಾಶವಿದ್ದರೆ ಸಾಕು, ಮುಕ್ತಿ ಪದವಿಯನ್ನು ವಶಮಾಡಿಕೊಡುತ್ತದೆ' ಎಂದು ನುಡಿದು. ತಮ್ಮ ತಂದೆಯಿಂದ ಪಡೆದುಕೊಂಡ ಆ ಪುಣ್ಯಪುರಾಣವನ್ನು ಪರೀಕ್ಷಿದ್ರಾಜನನ್ನು ಉದ್ಧರಿಸುವುದಕ್ಕಾಗಿ ವಿಸ್ತಾರವಾಗಿ ವಿವರಿಸ ತೊಡಗಿದರು (೯೦-೯೮)

ಕವಿಯ ಪೀಠಿಕೆಯಾದ ಮೇಲೆ ೨ ರಿಂದ ೭ರ ವರೆಗಿನ ಆರು ಅಧ್ಯಾಯಗಳು ಭಾಗವತ ಪುರಾಣಕ್ಕೆ ಪೀಠಿಕೆ. ಮುಂದೆ ಶುಕಮುಖದಿಂದ ಭಾಗವತಾಮೃತ ಹರಿಯ ತೊಡಗುತ್ತದೆ. ಇಲ್ಲಿಗೆ ನಮಗೆ ದೊರಕಿರುವ ಭಗವಚ್ಚರಿತ್ರೆಯ ೧೫ ಅಧ್ಯಾಯಗಳಲ್ಲಿ ೭ ಅಧ್ಯಾಯ, ಒಟ್ಟು ೧೨೮೧ ಪದ್ಯಗಳಲ್ಲಿ ೫೯೩ ಪದ್ಯ ಆಯಿತು; ಸ್ವಲ್ಪ ಕಡಮೆ ಗ್ರಂಥದ ಅರ್ಧಭಾಗ ಮುಗಿಯಿತು.

“ಪರಮ ಪುರುಷೋತ್ತಮನೆ ಭುವನಮಂ ಪೊರೆಯಲ್ ವಿಲಾಸದಿಂ ಪೊತ್ತ ಲೀಲಾವತಾರಗಳ ಚರಿತೆಯನು ಒರೆವೆ ಕೇಳ್ ಇಪ್ಪತ್ತುನಾಲ್ಕವತಾರ ಕಥನಂಗಳಂ ಕ್ರಮದೊಳು” ಎಂದು ಶುಕರು ಕಥಾರಂಭಮಾಡುತ್ತಾರೆ. ಮೊದಲು ಬರುವುದು ವರಹಾವತಾರದ ಕಥೆ. ಎಂಟನೆಯ ಅಧ್ಯಾಯ ಪೂರ್ತ ಆ ಕಥೆಯಿದೆ. ಮುಂದಿನೆರಡು ಅಧ್ಯಾಯಗಳಲ್ಲಿ ಕಪಿಲಾವತಾರದ ಚರಿತ್ರೆ ನಿರೂಪಿತವಾಗಿದೆ. ಒಂಬತ್ತನೆಯ ಅಧ್ಯಾಯದಲ್ಲಿ ಸೃಷ್ಟಿ ವಿಕಾಸದ ವಿವರಣೆ, ಮನುಸಂತಾನದ ನಿರೂಪಣೆ, ಕರ್ದಮ ದೇವಹೂತಿಯರ ವಿವಾಹ—ಇವನ್ನು ವಿವರಿಸಲಾಗಿದೆ. ಹತ್ತನೆಯ ಅಧ್ಯಾಯದಲ್ಲಿ ಕಪಿಲಾವತಾರದ ಕಥೆ ಬರುತ್ತದೆ. ಕಪಿಲರು ತಾಯಿ ದೇವಹೂತಿಗೆ ಮಾಡಿದ ಜ್ಞಾನಬೋಧೆ ವಸ್ತುಸ್ಥಿತಿಯನ್ನು ಚೆನ್ನಾಗಿ ತಿಳಿಸಿ ಪರಮಾರ್ಥಸಾಧನೆಯ ಮಾರ್ಗವನ್ನು ಬೆಳಗಿ ತೋರಿಸುವ ಕೈದೀವಿಗೆಯಾಗಿದೆ.

ಹನ್ನೊಂದನೆಯ ಅಧ್ಯಾಯ ನರನಾರಾಯಣರ ಮಹಿಮೆಗೆ ಮೀಸಲು. ಅನಸೂಯಾ ಚರಿತ್ರೆಯ ಮೂಲಕ ದತ್ತಾತ್ರೇಯಾವತಾರ ವಿವರಣೆಯೂ ಈ ಅಧ್ಯಾಯದ ಮೊದಲಿನಲ್ಲಿ ಹೇಳಲಾಗಿದೆ.

ಮುಂದಿನ ನಾಲ್ಕು ಅಧ್ಯಾಯಗಳಲ್ಲಿ ಧ್ರುವಚರಿತ್ರೆಯನ್ನು ವಿವರವಾಗಿ ನಿರೂಪಿಸಿದ್ದಾರೆ. ಧ್ರುವನೂ ಮಹಾವಿಷ್ಣುವಿನ ಒಂದು ಅವತಾರವೆಂದೇ ಭಾವಿಸಲಾಗಿದೆ. ಧ್ರುವಚರಿತ್ರೆಯ ಕೊನೆಯೇ ಈಗ ನಮಗೆ ದೊರೆತಿರುವಂತೆ ಈ ಭಗವಚ್ಚರಿತ್ರೆಯ ಕೊನೆ. ಮೂಲ ಭಾಗವತ ಪುರಾಣದಲ್ಲಿ ಇಷ್ಟು ಕಥೆ ನಾಲ್ಕನೆಯ ಸ್ಕಂಧದ ಅಂತ್ಯಕ್ಕೆ ಹತ್ತಿರ ಹತ್ತಿರ ಬರುತ್ತದೆ.

ಲೋಕಪ್ರಸಿದ್ಧವಾದ ದಶಾವತಾರಗಳಲ್ಲಿ ಒಂದೇ ಒಂದು—ವರಾಹಾವತಾರ—ಮಾತ್ರ ಇಲ್ಲಿ ರೂಪುಗೊಂಡಿದೆ ಉಳಿದವೂ ಕವಿಯ ಮನೋಭೂಮಿಕೆಯಲ್ಲಿ ಮೂಡಿದ್ದವೆಂಬುದಕ್ಕೆ ಸಾಕ್ಷಿಯಾಗಿ, ೧೦ನೆಯ ಅಧ್ಯಾಯದ ಕೊನೆಯ ಪದ್ಯದಲ್ಲಿ, “ ಭೂಪ ಲಾಲಿಸುವುದು. ದ್ವಾಪರಾಂತದಲಿ ನರನರ್ಜುನಾಖ್ಯೆಯನಾಂತು ರೂಪಿಸುವನ್. ಅಂತು ನಾರಾಯಣನೆ ಕೃಷ್ಣನೆನಿಸುವನ್. ಅದರಿನಿತಿಹಾಸಮಂ ಈ ಪುರಾಣದೊಳೆ ಮುಂದೊರೆವೆ ಕೇಳು ” ಎಂಬ ಮಾತು ಕಾಣಬರುತ್ತದೆ. ಈಗ ಈ ಗ್ರಂಥದಲ್ಲಿ ವರಾಹಾವತಾರ, ಯಜ್ಞಾವತಾರ, ಕಪಿಲಾವತಾರ, ದತ್ತಾವತಾರ, ನರನಾರಾಯಣಾವತಾರ, ಧ್ರುವಾವತಾರ—ಈ ಆರು ಅವತಾರ ಚರಿತ್ರೆಗಳು ಮಾತ್ರ ದೊರೆತಿವೆ. ದೊರೆಯದೆ ಮರೆಯಾಗಿರುವ ಭಾಗದೊಡನೆ ಹೋಲಿಸಿದರೆ ದೊರೆತಿರುವುದು ಕೇವಲ ಕಥಾಪ್ರಾರಂಭವೆಂದೇ ಭಾವಿಸಬೇಕಾಗಿದೆ. ಕವಿ ಅಕಾಲ ಮರಣ ಅಥವಾ ಬೇರೆ ಯಾವುದಾದರೂ ಕಾರಣದಿಂದ ಗ್ರಂಥವನ್ನು ಮುಗಿಸಲಾಗದೆ ಅಪೂರ್ಣವಾಗಿಯೇ ಬಿಟ್ಟು ಹೋದನೋ. ಗ್ರಂಥ ಪೂರ್ಣವಾಗಿದ್ದರೂ ಉಳಿದ ಭಾಗ ನಷ್ಟವಾಗಿ ಇಷ್ಟು ಮಾತ್ರ ನಮಗೆ ದೊರಕಿದೆಯೋ ಹೇಳಲಾಗುವುದಿಲ್ಲ. ಈ ಗ್ರಂಥದ ಓಲೆ ಪ್ರತಿಯೊಂದನ್ನಿಟ್ಟುಕೊಂಡಿರುವ ಸದ್ಗೃಹಸ್ಥರೊಬ್ಬರು—ಅವರೂ ಕವಿಯ ವಂಶದಲ್ಲಿ ಹುಟ್ಟಿಬಂದವರೇ—ಆ ಪ್ರತಿಯನ್ನು ನೋಡಗೊಡಲು ಒಪ್ಪಲಿಲ್ಲವೆಂದು ತಿಳಿಯ ಬಂತು. ಆ ಪ್ರತಿಯಲ್ಲೇನಾದರೂ ಗ್ರಂಥ ಮುಂದುವರಿದಿರುವ ಕುರುಹು ಸಿಕ್ಕೀತೋ ನೋಡಬೇಕು. ಈ ಒಂದು ಆಸೆಯಿರುವುದಾದರೂ ಕವಿಚರಿತ್ರಕಾರರಾದ ದಿವಂಗತ ರಾವ್ ಬಹದ್ದೂರ್ ನರಸಿಂಹಾಚಾರ್ಯರ ಗಮನಕ್ಕೆ ಬಂದದ್ದೂ ಈಗಿನ ಈ ೧೫ ಅಧ್ಯಾಯಗಳು ಮಾತ್ರವೇ ಎಂಬುದನ್ನು ನೆನೆದರೆ ಹೆಚ್ಚು ಭರವಸೆ ಉಳಿಯುವುದಿಲ್ಲ.

ಇಂಥ ಪ್ರೌಢಕಾವ್ಯ ಅಪೂರ್ಣವಾಗಿ ಉಳಿದಿರುವುದು ಕನ್ನಡಿಗರ ದೌರ್ಭಾಗ್ಯ. ಅಪೂರ್ಣವಾದರೂ ಬಹು ಮನೋಹರವಾದ ಇಷ್ಟು ಭಾಗವಾದರೂ ಕೈಗೆ ಸಿಕ್ಕಿತಲ್ಲಾ ಎಂದು ಸಹೃದಯರು ಸಂತೋಷಪಡಬೇಕು.

ಭಾಗವತ ಮಹಾಪುರಾಣದಲ್ಲಿ ಕೆಲವೇ ಪ್ರಕರಣಗಳನ್ನು ಮಾತ್ರ ವಿವರಿಸುತ್ತಿರುವ ಈ ಸ್ವಲ್ಪ ಭಾಗದಲ್ಲಿಯೇ ನವರಸಗಳೂ ಉಕ್ಕಿ ಹರಿಯುತ್ತಿವೆ. ಅನುಪ್ರಾಸ, ಶ್ಲೇಷೆ, ಯಮಕ, ಉಪಮಾನ, ರೂಪಕ, ಉತ್ಪ್ರೇಕ್ಷೆ, ಅತಿಶಯೋಕ್ತಿ ಮೊದಲಾದ ಶಬ್ದಾಲಂಕಾರ ಅರ್ಥಾಲಂಕಾರಗಳು ಹೃದಯಂಗಮವಾಗಿ ಮೂಡಿ ಬಂದಿವೆ ನಾಡು ಕಾಡು, ಹೊಳೆ ಬೆಟ್ಟ, ಬಾನು ಬಯಲು, ಸಾಗರ ದ್ವೀಪ. ಗಿಡ ಮರ ಬಳ್ಳಿ, ಊರು ಕೇರಿ, ಕೋಟೆ ಕೊತ್ತಳ, ಚಳಿ ಗಾಳಿ ಮಳೆ. ಬಿಸಿಲು ಬೆಳದಿಂಗಳು, ಉದಯಾಸ್ತಗಳು, ಹಗಲು ರಾತ್ರಿ, ಮನುಷ್ಯ ಮೃಗ ಪಕ್ಷಿಗಳು, ಹುಟ್ಟು ಸಾವುಗಳು, ರಾಗ ವಿರಾಗಗಳು, ವಿವಾಹ ವಿಹಾರಗಳು, ಸುಖಭೋಗಗಳು, ರಾಜ್ಯಭಾರ ದಿಗ್ವಿಜಯಗಳು, ವರ್ಣಾಶ್ರಮ ಧರ್ಮಗಳು, ತಪಸ್ಸು ತತ್ವಬೋಧೆಗಳು, ನಾನಾಬಗೆಯ ಮನುಷ್ಯ ವ್ಯಾಪಾರಗಳು ಇವುಗಳೆಲ್ಲದರ ಮನಮುಟ್ಟುವ ವರ್ಣನೆಗಳು ಗ್ರಂಥದುದ್ದಕ್ಕೂ ಕಂಡುಬರುತ್ತವೆ. ಕಥಾ ನಿರೂಪಣೆಯಲ್ಲಿ ಅಲ್ಲಲ್ಲೇ ಭಗವತ್ ಸ್ತೋತ್ರಗಳು ನೊಂದ ಮನ್ಸಿನ ಭಾರವನ್ನಿಳಿಸಿ ಪಾವನಗೊಳಿಸಿ ತಂಪೆರೆಯುತ್ತವೆ.

ಇವೆಲ್ಲಕ್ಕೂ ನಿದರ್ಶನಗಳನ್ನು ಒಂದೊಂದಾಗಿ ಎತ್ತಿ ತೋರಿಸುತ್ತ ಹೋದರೆ ಈ ಪೀಠಿಕೆ ಅತಿ ವಿಸ್ತಾರವಾದೀತು : ಗ್ರಂಥದ ಮುಖ್ಯ ಘಟ್ಟಗಳನ್ನೆಲ್ಲಾ ಪುನರುಕ್ತ ಮಾಡಿ ಹೇಳಬೇಕಾದೀತು ಆ ಸಾಹಸಕ್ಕೆ ಇಲ್ಲಿ ಕೈ ಹಾಕದೆ, ಒಂದೆರಡು ಸಂದರ್ಭ ಸೂಚನೆಗಳಿಗೆ ಮಾತ್ರ ಓದುಗರ ಗಮನ ಸೆಳೆಯಲಾಗಿದೆ: ದೇವ ಹೂತಿಯ ಜಲಕ್ರೀಡೆ (೧೦ನೆಯ ಅಧ್ಯಾಯ), ನರನಾರಾಯಣರ ತಪೋಭಂಗಕ್ಕೆ ಅಪ್ಸರೆಯರ ಪ್ರಯತ್ನ (೧೧ನೆಯ ಅಧ್ಯಾಯ), ಉತ್ತಾನಪಾದ ಸುನೀತಿಯರ ಪ್ರಣಯ—ಈ ಪ್ರಕರಣಗಳಲ್ಲಿ ಶೃಂಗಾರರಸ ಪುಷ್ಟಿಹೊಂದಿರುವುದನ್ನು ಕಾಣಬಹುದು. ವೀರರಸ ನಿರೂಪಣೆಗೆ ವರಾಹನಿಗೂ ಹಿರಣ್ಯಾಕ್ಷನಿಗೂ ನಡೆದ ಯುದ್ಧ (೮ನೆಯ ಅಧ್ಯಾಯ), ಧ್ರುವ ಕುಬೇರರ ಕಾಳಗ (೧೫ನೆಯ ಅಧ್ಯಾಯ)ಗಳನ್ನು ನಿದರ್ಶನವಾಗಿ ಹೇಳಬಹುದು. ಬದರಿಕಾಶ್ರಮ (೩ನೆಯ ಅಧ್ಯಾಯ),

ನರನಾರಾಯಣಾಶ್ರಮ (೧೧ನೆಯ ಅಧ್ಯಾಯ)ಗಳಲ್ಲಿ ತಪೋವನ ಮಹಿಮೆಯನ್ನು ಕಾಣಬಹುದು. ಅರ್ಜುನನು ದ್ವಾರಕಿಗೆ ಹೋಗಿ ಶ್ರೀಕೃಷ್ಣನನ್ನು ಕಂಡ ಸಂದರ್ಭದಲ್ಲಿ (ಅಧ್ಯಾಯ ೪) ಸಮುದ್ರ ನಗರ ರಾತ್ರಿ ವರ್ಣನೆಗಳ ಸವಿಯನ್ನಾಸ್ವಾದಿಸಿ ಆನಂದಿಸಬಹುದು. ಪರೀಕ್ಷಿತನು ಕಲಿಯನ್ನು ಹುಡುಕಿಕೊಂಡು ನಡೆಯುವ ದೀರ್ಘ ಪ್ರಯಾಣದಲ್ಲಿ (ಅಧ್ಯಾಯ ೬) ನಾನಾ ದೇಶಗಳ ಸ್ವರೂಪವನ್ನರಿಯಬಹುದು. ಕಪಿಲರು ತಾಯಿಗೆ ಮಾಡುವ ಬೋಧೆಯಲ್ಲಿ ಮುಕ್ತಿಮಾರ್ಗವನ್ನು ಕಂಡುಕೊಳ್ಳಬಹುದು (ಅಧ್ಯಾಯ ೧೦). ಮನಸ್ಸಿಟ್ಟು ಓದುವ ಸಹೃದಯರಿಗೆ ಈ ಪ್ರಕರಣಗಳಲ್ಲೂ ಗ್ರಂಥದ ಇತರ ಘಟ್ಟಗಳಲ್ಲಿಯೂ ರಸದೌತಣ ಕಾದಿದೆ.

ಕಾವ್ಯ ಪ್ರೌಢಶೈಲಿಯಲ್ಲಿ ಅಲಂಕಾರ ಚಮತ್ಕಾರ ಪೂರ್ಣವಾಗಿರುವುದರಿಂದ ಸುಲಭಗ್ರಾಹ್ಯವಾಗಿಲ್ಲ. ಸ್ವಲ್ಪ ಕಷ್ಟಪಟ್ಟೇ ಅರ್ಥಮಾಡಿಕೊಳ್ಳಬೇಕು. ಶ್ರಮವಹಿಸಿದರೆ ತಕ್ಕ ಪ್ರತಿಫಲವುಂಟು. ಸರಳ ಶೈಲಿಯಲ್ಲಿ ಬೇಗ ಮನಸ್ಸಿಗೆ ಹಿಡಿಯುವಂತಿರುವ ಸ್ವಾರಸ್ಯವಾದ ಪದ್ಯಗಳೂ ಪದ್ಯಪುಂಜಗಳೂ ಒಮ್ಮೊಮ್ಮೆ ಕಂಡು ಬರುತ್ತವೆ.

ಇದು ವಾರ್ಧಕಷಟ್ಪದಿಯಲ್ಲಿ ರಚಿತವಾಗಿರುವ ಗ್ರಂಥ. ಈ ಷಟ್ಪದಿಯಲ್ಲಿ ಮೊಟ್ಟಮೊದಲು ಗ್ರಂಥರಚನೆಮಾಡಿದ ರಾಘವಾಂಕ, ಈ ಛಂದಸ್ಸಿನ ಮಹೌನ್ನತ್ಯವನ್ನು ಮೆರಸಿ ಪಂಡಿತ ಪಾಮರರೆಲ್ಲರಿಗೂ ಏಕರೀತಿಯಾಗಿ ತೃಪ್ತಿಯುಂಟುಮಾಡಿದ ಲಕ್ಷ್ಮೀಶ—ಇವರ ರಚನೆಗಳಂತೆ ಕಿವಿಗಿಂಪಾಗಿ ಹೃದಯಮನೋಹರವಾದ ಎಷ್ಟೋ ಪದ್ಯಗಳನ್ನು ಭಗವಚ್ಚರಿತ್ರೆಯಲ್ಲಿ ಕಾಣಬಹುದು. ಪದಗುಂಫನದಲ್ಲೂ ಭಾವನಿರೂಪಣೆಯಲ್ಲೂ ಲಕ್ಷ್ಮೀಶನ ಜೈಮಿನಿ ಭಾರತವನ್ನು ನೆನಪಿಗೆ ತರುವ ಮಧುರವಾದ ಗಂಭೀರವಾದ ಸುಂದರ ಷಟ್ಪದಿಗಳಿಗೂ ಕೊರತೆಯಿಲ್ಲ. ಜೈಮಿನಿಭಾರತದ ಪದ್ಯಗಳಿಗೆ ಸಂವಾದಿಯಾದ ಪದ್ಯಗಳನ್ನು ಕಂಡು, ನಮ್ಮ ಕವಿ ಆ ನಾದಲೋಲನ ಗ್ರಂಥವನ್ನು ಕಂಡು ಭಕ್ತಿರಸವನ್ನುಂಡಿದ್ದರೂ ಇರಬಹುದೆನ್ನಿಸುತ್ತದೆ. ಆದರೆ, ಹೀಗೇ ಸರಿಯೆಂದು ನಿರ್ಧರಿಸುವಷ್ಟು ಪ್ರಬಲವಾದ ಸಾಮ್ಯ ಕಂಡುಬರುವುದಿಲ್ಲ.

ಈ ಕವಿಯ ಕಾಲ ನಿರ್ಣಯಕ್ಕೆ ಸಾಧಕವಾದ ಅಂಶಗಳು ದೊರಿತಿಲ್ಲ. ಗ್ರಂಥದಲ್ಲೆಲ್ಲಿಯೂ ಕಾಲದ ಉಲ್ಲೇಖವಿಲ್ಲ. ಪೂರ್ವಕವಿಗಳಲ್ಲಿ ಯೊರನ್ನೂ

ಈತ ಹೆಸರಿಸಿಲ್ಲ. ಕವಿಯ ವಂಶಜರಲ್ಲಿರುವ ವಂಶವೃಕ್ಷದಲ್ಲಿ ಕೂಡ ಖಚಿತವಾಗಿ ಗೊತ್ತಾಗುವುದಿಲ್ಲ. ಓಲೆಯಲ್ಲಿ ಬಳಸಿರುವ ಲಿಪಿ ಪ್ರಾಚೀನ ಲಿಪಿಯಂತೆ. ಕವಿಚರಿತ್ರಕಾರರಾದ ದಿವಂಗತ ಪ್ರಾಕ್ತನವಿಮರ್ಶವಿಚಕ್ಷಣ ರಾವ್ ಬಹದ್ದೂರ್ ರಾ. ನರಸಿಂಹಾಚಾರ್ಯರು ಈತನ ಕಾಲ ಸುಮಾರು ಕ್ರಿ. ಶ. ೧೭೦೦ ಎನ್ನುತ್ತಾರೆ. ಖಚಿತವಾದ ಸಾಕ್ಷ್ಯಾಧಾರ ಸಿಕ್ಕುವ ವರೆಗೂ ಇದೇ ಸರಿಯೆಂದು ಒಪ್ಪಿಕೊಳ್ಳಬಹುದು. ಸ್ಥೂಲವಾಗಿ ೧೭ನೆಯ ಶತಮಾನವೆಂದು ಇಟ್ಟು ಕೊಳ್ಳಬಹುದು.

ಈ ಕವಿ ಬೇರೆ ಯಾವುದಾದರೂ ಕಾವ್ಯವನ್ನು ರಚಿಸಿದ್ದಾನೋ ಇಲ್ಲವೋ ತಿಳಿಯದು. ಬೇರೆ ಕಾವ್ಯರಚನೆ ಮಾಡಿದನೆಂಬ ಪ್ರತೀತಿ ಈತನ ವಂಶಸ್ಥರಲ್ಲಿಯೂ ಕಂಡುಬರುವುದಿಲ್ಲ. 'ಭೋಜನರಗಳೆ' ಎಂಬ ಒಂದು ಖಂಡಕಾವ್ಯ ಮತ್ತು 'ಆಂಜನೇಯ ದಂಡಕ' ಎಂಬ ಒಂದು ಸ್ತೋತ್ರ— ಇವೆರಡೂ ಈ ಕವಿಯ ರಚನೆಗಳೆಂದು ಕವಿಯ ವಂಶಜರು ಹೇಳುತ್ತಾರೆ. ಭೋಜನರಗಳೆಯ ಪ್ರಾರಂಭದ ಓಲೆ ತುಂಬ ಶಿಥಿಲವಾಗಿದೆ; ಕಡೆಯ ಭಾಗದ ಓಲೆಗಳು ನಷ್ಟವಾಗಿವೆ. ಮೊದಲ ಓಲೆಯಲ್ಲಿ, "ಶ್ರೀಪುರಗಾದ್ರಿ ರಮಾವರ ಪ್ರಸನ್ನ ವೆಂಕಟೇಶ್ವರ ಗುರು ಗೋವಿಂದಾಯ ನಮಃ ಭೋಜನರಗಳೇ ಬರವುದಕ್ಕೆ ಅವಿಘ್ನಮಸ್ತು" ಎಂದು ಪ್ರಾರಂಭವಾಗಿ ಹೀಗೆ ಮುಂದುವರಿಯುತ್ತದೆ :

ಶೇಷಾದ್ರೀಶನ ಚರಣಕೆ ನಮಿಸುತ
ಶ್ರೀ ಸತಿಯಂನಾಂತರ್ಯದಿ ಭಜಿಸುತ ।
ಹರಗಿರಿ ಜಾತೆಯರಂ ನೆರೆ ಪಾಡುತ
ಕರಿಮುಖಗೊಂದಿಸಿ ಮತಿಯಂ ಬೇಡುತ ।
ತಿರುವೆಂಗಳ ವಿಠಲಾರ್ಯರ ಸ್ಮರಿಸುತ
ಹುಚ್ಚಾಚಾರ್ಯರ ಕರುಣವನೊದಗಿಸಿ
ತಚ್ಚರಣಂಗಳ ಹೃದಯದಿ ಭಾವಿಸಿ ।
ಶುಚಿಗಳು ಸಂತಸಗೊಳಿದಂ.........
ಪಂಚನಂದಿಗಳ ನಿಜ ನೆಲೆಯೆನಿಸಿಹ
ಭೂಕೈಲಾಸವೆನಿಸಿ ಸಂತತಮಂ
ಶ್ರೀಕರವಹ ಚಿಕಬಳ್ಳಾಪುರವಂ ।

ನೆರೆ ಪಾಲಿಸುತಿಹ ನಿರ್ಮಲ ಹೃದಯನು
ಧೀರ ಮೇಲುಭೂವರ ತನುಜಾತನು
ತಿಂಮ ಭೂಪನವನಿರಮಂ ನೋಡಲು ।
ಯಿಂ ಮಹಿಯಲಿ ಸರ್ವರು ಕೊಂಡಾಡಲು
ಸದ್ಧರ್ಮದ ಮೇರೆಗಳಂ ಮುರಿಯದೆ
ಪೊದ್ದಿದ ಜನ.............................
....
.......ಸಾಮ್ರಾಜ್ಯದ ಪರುತವಗಳಿಗೆಯುಂ
ನೆರೆ ತಾಣ್ಯವ ಬಲಿದಂದವುದಾಗಿಯುಂ ।
ಪುರ ಸಾಲಾಂತರ ಮಧ್ಯದಿ ನಿಟ್ಟಿಸಿ
ವರ ದೇವಸ್ಥಾನಂಗಳಂ ಕಟ್ಟಿಸಿ ।
ಪ್ರಸಂನ ನಂದೀಶ್ವರ ದೇವರನನಂ
ಪ್ರಸಂನ ಪಾರ್ವತಿ ಪರಶಕ್ತಿಯು........."

ಈ ಭಾಗದಲ್ಲಿ ಕವಿಯ ಇಷ್ಟದೇವತೆ ವೆಂಕಟೇಶ್ವರನ ಸ್ಮರಣೆಯೂ ಗುರು ಹುಚ್ಚಾರೂಢರ ಪ್ರಾರ್ಥನೆಯೂ ಇರುವುದರಿಂದ ಇದು ಭಗವಚ್ಚರಿತ್ರೆಯ ವಿಜಯ ವೆಂಕಟರಮಣ ಕವಿಯ ರಚನೆಯೇ ಆಗಿರಬಹುದೆಂದು ನಂಬಬಹುದು

ಚಿಕ್ಕಬಳ್ಳಾಪುರವನ್ನಾಳುತ್ತಿದ್ದ 'ತಿಮ್ಮಭೂಪನು' ತಿಮ್ಮಸಾಗರ ಕೆರೆಯೊತ್ತಿನಲ್ಲಿ ಆಂಜನೇಯ ದೇವಸ್ಥಾನದ ಸಮ್ಮುಖದಲ್ಲಿ 'ವೈವಾಹಿಕ ಚಪ್ಪರ'ವನ್ನು ನಿರ್ಮಿಸಿ, ದೇವತಾರಾಧನೆ ಮಾಡಿ ಪಾನಕ ಪೂಜೆ, ಬ್ರಾಹ್ಮಣ ಸಂತರ್ಪಣೆಗಳನ್ನು ನಡಸಿದ ವಿಷಯವನ್ನು ಈ ರಗಳೆಯಲ್ಲಿ ಕವಿ ವರ್ಣಿಸಿದ್ದಾನೆ. ಕಡೆಯ ಓಲೆಯಲ್ಲಿ ಆ ಸೇವೆ ನಡೆದ ಕಾಲ ಮೊದಲಾದ ವಿವರ ಸಿಕ್ಕುತ್ತಿತ್ತೋ ಏನೋ? ಚಿಕ್ಕಬಳ್ಳಾಪುರದ ತಿಮ್ಮ ಸಾಗರ ಕೆರೆಯನ್ನು ಕಟ್ಟಿಸಿ ದೇವಾಲಯ ಮಂಟಪಗಳನ್ನು ನಿರ್ಮಿಸಿದ 'ತಿಮ್ಮ'ಭೂಪನ ವಿಷಯವಾಗಿ ಹೆಚ್ಚು ಸಂಗತಿ ತಿಳಿಯಬಂದರೆ ಕವಿಯ ಕಾಲನಿರ್ಣಯಕ್ಕೆ ಸಹಾಯವಾಗುತ್ತದೆ.

ಈ ಭೋಜನಸರಗಳೆ ನಮ್ಮ ಕವಿಯ ರಚನೆಯೆಂದು ಒಪ್ಪುವುದಾದರೆ, ಆತನಿಗೆ ಕನ್ನಡದಲ್ಲಿ ಮಾತ್ರವಲ್ಲ, ಅದರ ಜೊತೆಗೆ ತೆಲುಗು, ತಮಿಳು, ಮರಾಠಿ ಭಾಷೆಗಳಲ್ಲಿಯೂ ವಿಶೇಷ ಪರಿಶ್ರಮವಿತ್ತೆಂದು ನಂಬಬೇಕಾಗುತ್ತದೆ.

ಗ್ರಂಥವನ್ನು ಪರಿಷ್ಕರಿಸಿ ಅಚ್ಚಿಗೆ ಸಿದ್ಧಪಡಿಸಿರುವುದರ ಬಗ್ಗೆ ಒಂದೆರಡು ಮಾತು ಹೇಳುವುದು ಉಚಿತವಾಗಿದೆ. ಕೈಯಕ್ಷರದ ಎರಡು ಪ್ರತಿಗಳು ಇದಕ್ಕೆ ಆಧಾರವಾದ ಮಾತೃಕೆಗಳು. ಒಂದು ಸುಮಾರು ನೂರು ವರ್ಷಕ್ಕೂ ಹಿಂದಿನ ಪ್ರತಿ; ಕೈಯಲ್ಲಿ ಮಾಡಿದ ಕೋರಿ ಕಾಗದದ ಮೇಲೆ ಬರೆದಿರುವುದು. ಅಕ್ಷರ ಸ್ಫುಟವಾಗಿ ಅಂದವಾಗಿದೆ; ಪಾಠ ಬಹುಮಟ್ಟಿಗೆ ಶುದ್ಧವಾಗಿದೆ. ಆದರೆ ಗ್ರಂಥಾರಂಭದಿಂದ ಮೂರನೆಯ ಸಂಧಿಯ ಮೂವತ್ತನೆಯ ಪದ್ಯದ ವರೆಗೂ ಬರೆದ ಹಾಳೆಗಳು ಹರಿದು ಕಳೆದು ಹೋಗಿವೆ. ಇನ್ನೊಂದು ಇತ್ತೀಚೆಗೆ ದಿವಂಗತರಾದ ಕರ್ಲಮಂಗಲಂ ಶ್ರೀಕಂಠಯ್ಯನವರು ಓಲೆ ಪುಸ್ತಕವೊಂದರಿಂದ ಎತ್ತಿ ಬರೆದ ಕಾಗದದ ಪ್ರತಿ. "ಅದೇ ವಂಶೀಯರಿಂದ ದೊರೆತ ಒಂದು ತಾಳೆ ಪತ್ರದ ಆಧಾರದಿಂದ ಈ ಪುಸ್ತಕವು ಬರೆಯಲ್ಪಟ್ಟಿದೆ. ಆ ಓಲೆ ಕವಳಿಗೆ ಯಲ್ಲಿದ್ದ ಕನ್ನಡ ಲಿಪಿಯನ್ನು ನೋಡಿದರೆ ಪ್ರಾಚೀನ ಲಿಪಿಯಾಗಿ ಕಂಡು ಬರುತ್ತದೆ" ಎನ್ನುತ್ತಾರೆ ಪ್ರತಿಕಾರರಾದ ಶ್ರೀ ಶ್ರೀಕಂಠಯ್ಯನವರು. ಆ ಓಲೆ ಪ್ರತಿಯನ್ನಿಟ್ಟುಕೊಂಡಿರುವವರು ಅದನ್ನು ಹೊರಕ್ಕೆ ತೆಗೆದುಕೊಡ ಲೊಪ್ಪದ್ದರಿಂದ ಅದರ ಪ್ರಯೋಜನವನ್ನು ಪಡೆಯಲಾಗಲಿಲ್ಲ. ಲಿಪಿ ಪರಿ ಶೀಲನೆಗೂ ಅವಕಾಶವಾಗಲಿಲ್ಲ. ಶ್ರೀಕಂಠಯ್ಯನವರು ಎತ್ತಿ ಬರೆದ ಪ್ರತಿ ಸಿಕ್ಕದಿದ್ದರೆ ಪ್ರಾರಂಭದ ಸಂಧಿಗಳಿಲ್ಲದೆಯೇ ಪುಸ್ತಕವನ್ನು ಅಚ್ಚುಮಾಡ ಬೇಕಾಗುತ್ತಿತ್ತು.

ಶ್ರೀಕಂಠಯ್ಯನವರ ಪ್ರತಿಯನ್ನು ಬೆರಳಚ್ಚು (ಟೈಪ್‌ರೈಟರ್) ಯಂತ್ರ ದಲ್ಲಿ ಅಂದವಾಗಿ ಮುದ್ರಿಸಿಕೊಂಡಿದ್ದ ಮತ್ತೊಂದು ಪುಸ್ತಕವನ್ನೂ ಉಪ ಯೋಗಿಸಿಕೊಳ್ಳಲಾಗಿದೆ. ಇದರ ಪಾಠಗಳನ್ನು ಪಂಡಿತರೊಬ್ಬರು ಅಲ್ಲಲ್ಲೇ ತಿದ್ದಿರುವುದು ಕಂಡು ಬಂತು. ಮೂಲದಲ್ಲಿ ಸ್ವಲ್ಪವೂ ಆಧಾರವಿಲ್ಲದ ಅಂಥ ತಿದ್ದುಪಡಿಗಳು ಎಷ್ಟೇ ಸಮರ್ಪಕವಾಗಿ ಕಂಡರೂ ಅಂಗೀಕಾರಕ್ಕೆ ಅರ್ಹವಲ್ಲ ವೆಂದು ಅವನ್ನು ಗಮನಕ್ಕೆ ತಂದುಕೊಂಡಿಲ್ಲ. ಅರ್ಥ ಸಂದಿಗ್ಧವಾದ ಕಡೆ

ಗಳಲ್ಲಿ ಎರಡು ಪ್ರತಿಗಳನ್ನೂ ಹೋಲಿಸಿ ನೋಡಿದಾಗ ಹಳೆಯ ಕಾಗದದ ಪ್ರತಿಯಿಂದ ಸಂದೇಹ ಪರಿಹಾರಕ್ಕೆ ಬಹುಮಟ್ಟಿಗೆ ಸಹಾಯವಾಯಿತು. ಪಾಠ ಭೇದಗಳಿದ್ದಲ್ಲಿ ಅಂಗೀಕಾರಾರ್ಹವೆಂದು ತೋರಿದ್ದನ್ನು ಗ್ರಂಥದಲ್ಲಿ ಸೇರಿಸಿ, ಉಳಿದದ್ದನ್ನು ಅಡಿ ಟಿಪ್ಪಣಿಯಲ್ಲಿ ಸೂಚಿಸಿದೆ. ಯಾವ ಪಾಠವೂ ಸಮರ್ಪಕ ವೆನ್ನಿಸದೆ ಹೋದಾಗ ಆ ಪಾಠಾಂತರಗಳ ಸಹಾಯದಿಂದ ಉಚಿತವರಿತು ತಿದ್ದ ಲಾಗಿದೆ. ಅಂಥ ತಿದ್ದುಪಡಿಗಳನ್ನು ಕಂಸಗಳೊಳಗೆ ಕೊಟ್ಟು ಸೂಚಿಸಲಾಗಿದೆ. ದೊರೆತ ಮಾತೃಕೆಗಳು ಎರಡೇ ಆದ್ದರಿಂದ ಪಾಠಾಂತರಗಳು ಬಹು ಮಿತ ವಾಗಿವೆ. ಓಲೆಯ ಅಥವಾ ಕಾಗದದ ಇನ್ನಷ್ಟು ಪ್ರತಿಗಳು ಸಿಕ್ಕಿದರೆ ಗ್ರಂಥ ಸಂಪಾದನೆಗೆ ಬಹಳ ಸಹಾಯವಾಗುತ್ತದೆ. ಗ್ರಂಥಪರಿಷ್ಕಾರ ಹೆಚ್ಚು ಸಮರ್ಪಕವಾಗುತ್ತದೆ.

ಅಕ್ಷರಸ್ಖಾಲಿತ್ಯಗಳನ್ನೂ ಲೇಖಕರ ಪ್ರಮಾದದಿಂದ ಆದದ್ದೆಂದು ಖಚಿತ ವಾದ ತಪ್ಪುಗಳನ್ನೂ ತಿದ್ದಲಾಗಿದೆ. ಅಂಥ ತಿದ್ದುಪಡಿಗಳನ್ನು ಯಾವ ರೀತಿ ಯಲ್ಲೂ ಸೂಚಿಸಿಲ್ಲ.

ಕವಿಪ್ರಯೋಗದ ಈ ಕೆಲವು ವೈಶಿಷ್ಟ್ಯಗಳನ್ನು ಗಮನಿಸಬಹುದು :

೧. ಅಕ್ಷರ ಸಂಯೋಜನೆಯಲ್ಲಿ ವ್ಯಂಜನಾದಿಯಾದ ಅನೇಕ ಶಬ್ದ ಗಳನ್ನು ಸ್ವರಾದಿಯಾಗಿ ಪ್ರಯೋಗಿಸಿರುವುದು ಕಂಡುಬಂತು. ಸಾಧಾರಣ ವಾಗಿ ಹಿಂದಿನವರ ಬರವಣಿಗೆಯಲ್ಲಿ, ಅದರಲ್ಲೂ ಅವ್ಯುತ್ಪನ್ನರಾದ ಪ್ರತಿ ಕಾರರ ಕೈಯ್ಯಲ್ಲಿ, ಇಂಥ ತಪ್ಪು ಸಹಜವೆಂದು ನೆನೆದು ಸಾಧ್ಯವಿದ್ದ ಕಡೆ ಗಳಲ್ಲೆಲ್ಲಾ ತಿದ್ದಿ ಸರಿಪಡಿಸಲಾಯಿತು. ಕವಿಯ ಮಾತುಗಳನ್ನು ಮಾರ್ಪಡಿಸಿ ದಲ್ಲದೆ ವ್ಯಂಜನಾದಿ ಪದವನ್ನು ಬಳಸಲಾಗದ ಸಂದರ್ಭಗಳೂ ಕೆಲವು ಗೋಚರವಾದವು. ಅಂಥ ಕಡೆ ಕವಿಯೇ ಹಾಗೆ ಪ್ರಯೋಗಿಸಿರಬೇಕೆಂದು ನಿರ್ಧರಿಸಬೇಕಾಗುತ್ತದೆ. ಕೆಲವು ನಿದರ್ಶನಗಳು :—ಸೃಷ್ಟಿಗೈವೆತನದಿಂದ (೮–೧೨); ದೇವತೆಗಳೊಂದಿಸಿದರು (೧೧–೮೯ 'ದೇವತೆಗಳ್ವಂದಿಸಿದರು' ಎಂದು ತಿದ್ದಿದೆ); ಪುಡಿಪಟ್ಟುದೆಕ್ಷಗಣಮಾಕ್ಷಣದೊಳು (೧೫–೧೭), ಪರಿದು ದೆಕ್ಷೇಶ ಬಲ (೧೫–೩೭); 'ಪರಿದುದೆಕ್ಷೋ ಭಟರ್ (೧೫–೩೮), ಪರಿದರೆ ಕ್ಷರ್ಕಳನೊಳು (೧೫–೩೯). 'ಪರಿದುದೆಕ್ಷೇಶಬಲ' ಎಂಬುದನ್ನು 'ಪರಿದು

[ದಾಯಕ್ಷ] ಬಲ' ಎಂದೂ, 'ಪರಿದು ದೆಕ್ಕೋೞಭಟರ್' ಎಂಬುದನ್ನು 'ಯಕ್ಷ ಭಟ ರೋಡಿದುದು' ಎಂದೂ ತಿದ್ದಿರುವುದನ್ನು ಗಮನಿಸಿ.

೨. ಒಡಂ, ಒಡೆ ಪ್ರತ್ಯಯಗಳ ಸ್ಥಾನದಲ್ಲಿ ಅಡಂ, ಅಡುಂ (ಅಡು, ಅಡೆ) ಎಂಬ ರೂಪಗಳು ಗ್ರಂಥದುದ್ದಕ್ಕೂ ತುಂಬಿವೆ. ಪ್ರಾರಂಭದಲ್ಲಿ ಸ್ವಲ್ಪ ದೂರ ತಿದ್ದ ಹೊರಟು, ಇದು ಕವಿಯ ಪ್ರಯೋಗವೆಂದು ತೋರಿದ್ದ ರಿಂದ ಆ ಕಾಲದ ಬಳಕೆಯ ರೂಪವೂ ಇರಲೆಂದು ಉಳಿಸಿಕೊಂಡಿದೆ: ಅಜನನೆನಿಸಿರ್ದಡಂ, ಲೋಕೋಪಕೃತಿಗೈದಡುಂ, ಬೇಕಾದಡುಂ, ಬಗೆ ಗೊಂಡಡುಂ, ಆರಿಗಾದಡು, ನೋಡಿದಡು, ನುಡಿಸಿದಡು, ಎಂದಡೆ, ಅಬ್ಬಿದಡೆ-ಇತ್ಯಾದಿ.

೩. ಸಮುಚ್ಚಯಾರ್ಥದ 'ಅಂ'ಗೆ ಬದಲಾಗಿ 'ಉಂ' ಪ್ರಯೋಗ ವಾಗಿದೆ: ಕರ್ಮಿಗಳಿಗುಂ.

೪. ಧಾತುಗಳ ಮೇಲೆ ಹತ್ತುವ 'ಅಂ' ಪ್ರತ್ಯಯಕ್ಕೆ ಬದಲಾಗಿ 'ಅವು' ಬಳಸಲಾಗಿದೆ: ಇರುತವು, ಮೋಹಕಂ ಗೊಳಿಸುತವು, ಚರಿಸುತವು, ಹಿಗ್ಗುತವು, ಬೀರುತವು, ಬೆಳಗುತವು, ಇತ್ಯಾದಿ.

೫. ದಾರಾಢ್ಯ (೧೧-೨೧), ಹಶು (೧೩-೬೬) ಎಂಬಂಥ ರೂಢಿಯ ಶಬ್ದರೂಪಗಳನ್ನು ಕವಿ ಧಾರಾಳವಾಗಿ ಬಳಸಿದ್ದಾನೆ.

೬. ಅರಿಸಮಾಸಗಳನ್ನು ಬಳಸುವ ವಿಷಯದಲ್ಲಿ ನಮ್ಮ ಕವಿಗೆ ಸ್ವಲ್ಪವೂ ಹಿಂಜರಿಕೆಯಿಲ್ಲ: ರವಿಕಿರಣತೋರ್ಕೆಯಿಂ, ಕೆಂಡಗಣ್ಪಂಚಾಸ್ಯ ಶೋಭೆಯಿಂ, ಮೇಘಪೆರ್ಮುಸುಕು, ವೀಣಾಮಿಡಿಗಳಿಂ, ಜಲಗುಂಪಿನಿಂ, ಅಮಳಾಭ್ರತುದಿ, ತದ್ವೆಸರ, ನಾಲ್ವಿಧೋತ್ಪನ್ನ ಬಹುಜೀವಿಗಳ್, ಪಕ್ವಫಲ ಗೊನೆ, ತರುಲತಾ ಹೊಗರು, ಉಸುರ್ಝಳತಪ್ತಲಕ್ಷ್ಮಕ, ಸಕೃದೊಡಂಬಡು, ಕೊಂಚನಡು, ಇತ್ಯಾದಿ.

೭. ಅರಿಸಮಾಸಗಳನ್ನು ಅಳುಕಿಲ್ಲದೆ ಪ್ರಯೋಗಿಸುವಂತೆಯೇ ಅರ್ಥ ವತ್ತಾದ ಅಚ್ಚಗನ್ನಡ ಪದಪುಂಜಗಳನ್ನೂ ಧಾರಾಳವಾಗಿ ಬಳಸಿದ್ದಾನೆ: ಹಿಡಿತೆ ಬಿಡಿತೆ, ಹೊಗತೆ ಮೊಗತೆ, ಕಮಲಕಳೆಗೆಡುಕತೆ, ಮುನಿನೇಮಗಡಿಕ, ಅಜ್ಞಾನ ಬಿಗುಹು, ವಂಶಬೆಳವಿಗೆ, ಇತ್ಯಾದಿ.

೮. ಛಂದಸ್ಸಿನ ಇಕ್ಕಟ್ಟಿಗೆ ಒಳಗಾಗಿಯೋ ಏನೋ ಸಮರ್ಥಿಸಲಾಗದ ಕೆಲವು ವಿಚಿತ್ರ ರೂಪಗಳನ್ನೂ ಕವಿ ಪ್ರಯೋಗಿಸಿದ್ದಾನೆ: ತಲೆಯೊಡ್ಗಳಂ ಬೇಗ್ಗೈದು (೮–೭೭), ಬಾಲಶಶಿಯ ಸೂಡ್ದಂತಿರಲ್ (೧೧-೬೫), ಸೂಡ್ಗಳಿಂ, ಸರಿಜೋಡ್ಗಳಿಂ, ಪಂಥಪಾಡ್ಗಳಿಂ, ನಾಡ್ಗಳಿಂ, ಸಾಧನೆಯ ಜಾಡ್ಗಳಿಂದ, ಪಟುಭಟರ ಬೀಡ್ಗಳ್, ವಂಶಗಾಡ್ಗಳಿಂಗೆ (೧೪-೫೮), ಕಿಡಿಗಣ್ಣನುರಿ ಮಾಲ್ಗಳ್ (ಉರಿಮಾಲೆಗಳ್), ಅಸಿಪತ್ರ ಜಾಲ್ಗಳ್ (ಜಾಲ ಗಳ್), ತುದಿಬಾಲ್ಗಳ್ (ಬಾಲಗಳ್) (೧೫-೩೯)

ಈ ಕಾವ್ಯವನ್ನು ಆಳವಾಗಿ ಅಭ್ಯಾಸಮಾಡಿ ವಿಮರ್ಶಿಸಿ ಇಲ್ಲಿ ತೋರಿ ಬರುವ ಭಾಷಾರೂಪವನ್ನೂ ವಿಶೇಷ ಪ್ರಯೋಗಗಳನ್ನು ಚೆನ್ನಾಗಿ ಪರಿಶೋಧಿಸುವುದರಿಂದ ಕನ್ನಡ ಭಾಷಾ ಸಾಹಿತ್ಯಗಳಿಗೆ ಅಪಾರ ಪ್ರಯೋಜನ ವಾಗುವುದೆಂಬುದರಲ್ಲಿ ಸಂಶಯವಿಲ್ಲ.

ಪೂರ್ವದ ಪ್ರೌಢಕಾವ್ಯಗಳಿಗೆ ಈಗಿನ ಹೊಸ ಸನ್ನಿವೇಶದಲ್ಲಿ ಆದರ ಕಡಮೆಯಾಗಿದೆ. ಪಾಂಡಿತ್ಯ ತುಂಬಿ ಅಲಂಕಾರ ನಿಬಿಡವಾಗಿದ್ದು ನಿದಾನ ವಾಗಿ ಓದಿ ಮತ್ತೆ ಮತ್ತೆ ಪರಿಭಾವಿಸಿ ಆನಂದಿಸಬೇಕಾದ ಆ ಕಾವ್ಯಗಳಿಗೆ ತಕ್ಕಷ್ಟು ಗಮನ ಕೊಡುವುದಕ್ಕೆ ಈಗಿನ ಜನಕ್ಕೆ ವ್ಯವಧಾನ ಸಾಲದು. ಓದಿದೊಡನೆ ಅರ್ಥವಾಗಿ ಮನಮುಟ್ಟಿ ಸಂತೋಷಕೊಡುವ ಸುಲಭ ಸಾಹಿತ್ಯ ವನ್ನೇ ಈಗಿನವರು ಅಪೇಕ್ಷಿಸುತ್ತಾರೆ. ಈ ಸನ್ನಿವೇಶದಲ್ಲಿ ಪೂರ್ವದ ಪ್ರೌಢ ಕಾವ್ಯವನ್ನು, ಅದರಲ್ಲೂ ಪದ್ಯಕಾವ್ಯವನ್ನು, ಪ್ರಕಟಿಸಹೊರಡುವುದು ಸಾಹಸವೇ ಸರಿ. ಅಂಥ ಸಾಹಸಕ್ಕೆ ಶ್ರೀ ಕೃಷ್ಣಮೂರ್ತಿಯವರು ಕೈಹಾಕಿ ದ್ದಾರೆ. ತಮ್ಮ ವಂಶದ ಹಿರಿಯರೊಬ್ಬರ ಕೃತಿಯೆಂಬ ಅಭಿಮಾನದಿಂದ ಪ್ರೇರಿತರಾಗಿ ಅವರ ಕೃತಿಯನ್ನು ಪ್ರಕಾಶಪಡಿಸುವುದರ ಮೂಲಕ ತಮ್ಮ ಕರ್ತವ್ಯವನ್ನು ನೆರವೇರಿಸಬೇಕೆಂಬ ಉದ್ದೇಶದಿಂದ ಅವರು ಈ ಕೆಲಸಕ್ಕೆ ಕೈಹಾಕಿದ್ದಾರೆ. ವಂಶಾಭಿಮಾನದಿಂದ ಅವರು ಮಾಡುತ್ತಿರುವ ಕೆಲಸ ಕನ್ನಡ ಸಾಹಿತ್ಯಕ್ಕೆ ಅಮೋಘ ಸೇವೆಯಾಗಿದೆ ; ಸಾಹಿತಿ ಸಹೃದಯರಿಗೆ ಪರಮೋಪ ಕಾರವಾಗಿದೆ. ಈ ಸೇವೆಯಲ್ಲಿ ತಮ್ಮೊಡನೆ ಪಾಲ್ಗೊಳ್ಳುವ ಅವಕಾಶವನ್ನು ನನಗೂ ಒದಗಿಸಿಕೊಟ್ಟಿದ್ದಾರೆ. ಅವರ ಔದಾರ್ಯಕ್ಕೆ ಋಣಿಯಾಗಿದ್ದೇನೆ.

ಕುಮಾರವ್ಯಾಸ ಭಾರತದ ಗದ್ಯಾನುವಾದವನ್ನು ಬರೆದು ಪೂರ್ತಿ ಮಾಡಿದ ಬಳಿಕ ನಾನಾ ಬಗೆಯ ಮನಃಕ್ಲೇಶಗಳಲ್ಲಿ ಸಿಲುಕಿ ತೊಳಲುತ್ತಿದ್ದಾಗ, ಭಕ್ತಕವಿಯ ಈ ಭಗವಚ್ಚರಿತ್ರೆಯನ್ನು ಪರಿಷ್ಕರಿಸಿ ಸಂಪಾದಿಸುವ ಪುಣ್ಯ ಕಾರ್ಯ ಭಗವತ್ಕೃಪೆಯ ಹಾಗೆ ನನ್ನನ್ನು ಹುಡುಕಿಕೊಂಡು ಬಂತು. ಈ ಪುರಾಣದ ಪ್ರಾರಂಭದಲ್ಲಿ ನಿರೂಪಿಸಿರುವ ಪ್ರಕಾರ ವೇದವ್ಯಾಸರ ಮನಃಸ್ಸಂಕಟವನ್ನು ಪರಿಹರಿಸಿ ಪ್ರಸನ್ನತೆಯನ್ನನುಗ್ರಹಿಸಿದ ಭಗವಚ್ಚರಿತ್ರೆಯ ಅಭ್ಯಾಸ ನನಗೂ ಸಮಾಧಾನ ಕೊಟ್ಟಿತು ; ಬಾಳ ದಾರಿಯಲ್ಲಿ ಬೆಳಕು ತೋರಿಸಿತು. ಆ ಬೆಳಕಿನಲ್ಲಿ ಕಂಡ ಮಟ್ಟಿಗೆ ಪರಿಷ್ಕರಿಸಿ ಕನ್ನಡಿಗರ ಮುಂದಿಡುತ್ತಿರುವ ಈ ಗ್ರಂಥ ಸಹೃದಯರಿಗೆ ತೃಪ್ತಿಕರವಾದೀತೆಂದು ನಂಬಿದ್ದೇನೆ.

ಎಲ್. ಗುಂಡಪ್ಪ,

ಬೆಂಗಳೂರು
೨೬-೩-೧೯೬೭

ಫಾಲ್ಗುಣ ಶುದ್ಧ ಪೂರ್ಣಿಮಾ
ಪರಾಭವ ಸಂವತ್ಸರ.

ಬಿನ್ನಹ

ಆಸ್ತಿಕ ಮಹಾಶಯರೇ,

ಕರ್ಣಾಟಕದ ಮಹಾ ಕವಿಗಳಲ್ಲಿ ಪ್ರಾಚೀನರೂ ವರ ಕವಿಗಳೂ ಆದ ಚಿಕ್ಕಹೆಜ್ಜಾಜಿ ಶ್ರೀ ವಿಜಯ ವೆಂಕಟರಮಣ ಕವಿಗಳಿಂದ ರಚಿತವಾಗಿರುವ ಈ ಕವಿತೆ ಈಗ ಅಚ್ಚಾದುದು ನಮ್ಮೆಲ್ಲರ ಭಾಗ್ಯವೇ ಸರಿ. ಭಗವಂತನ ಅಪಾರ ಕರುಣೆಯಿಂದಾಗಿ ನಮ್ಮ ವಂಶದಲ್ಲಿ ಅವತರಿಸಿ "ಶ್ರೀ ಭಗವಚ್ಚರಿತ್ರೆ" ಯೆಂಬ ಸುರಗಂಗೆಯಿಂದ ನಮ್ಮ ವಂಶಪಾವನಮಾಡಿದ ಶ್ರೀ ವಿಜಯ ವೆಂಕಟ ರಮಣ ಕವಿಗಳ ದಿವ್ಯ ಆಶೀರ್ವಾದಗಳು ನಮಗೆ ದೊರೆತಂತೆಯೇ ಆಯಿತು. ನನ್ನ ಬಾಲ್ಯದಿಂದ ಈ ಕವಿಯ ಮತ್ತು ಕವಿತೆಯ ಬಗ್ಗೆ ನನ್ನ ಮಾತೆಯ ವರಿಂದಲೂ ಪೂಜ್ಯರೂ ಹಿರಿಯರೂ ಆದ ನನ್ನ ತಂದೆ, ತಾತ ಮತ್ತು ದೊಡ್ಡಪ್ಪನವರಿಂದಲೂ, ಸಾಧು ಲಕ್ಷ್ಮಣರಾಯರಿಂದಲೂ ವೆಂಕಟನಾರಾ ಯಣರಾಯರಿಂದಲೂ, ಅನೇಕ ಭಕ್ತಿಪೂರಿತವಾದ ದಂತ ಕಥೆಗಳನ್ನು ಕೇಳಿ ಕೇಳಿ ಪುಲಕಿತನಾಗಿ, ಈ ಮಹಾ ಕಾವ್ಯವನ್ನು ನಾನೂ ಒಂದು ಪ್ರತಿ ಮಾಡಿಟ್ಟು ಕೊಳ್ಳಬೇಕೆಂಬ ಉದ್ದೇಶದಿಂದ ಬರೆದಿಟ್ಟುಕೊಂಡೆ. ಪೂಜ್ಯ ಗುರು ಶ್ರೀ ಕೇಶವದಾಸ್‌ಜೀಯವರು ಕಾವ್ಯವನ್ನು ನೋಡಿ ಸಂತೋಷಪಟ್ಟು ಆಶೀರ್ವದಿ ಸಿದರು. ನಮ್ಮ ಪರಮ ಸ್ನೇಹಿತರಾದ ಶ್ರೀ ನಾರಾಯಣಸ್ವಾಮಿಯವರು ಸಂತೋಷದಿಂದ ಬೆರಳಚ್ಚು ಪ್ರತಿಮಾಡಿಕೊಟ್ಟರು. ಕಾವ್ಯವನ್ನು ಅವ ಲೋಕಿಸಿದ ಪೂಜ್ಯರುಗಳಾದ ಶ್ರೀ ಜಿ. ವೆಂಕಟಸುಬ್ಬಯ್ಯನವರೂ ಶ್ರೀ ಎಸ್. ಕೆ. ರಾಮಚಂದ್ರರಾಯರೂ ಶ್ರೀ ಎಲ್. ಗುಂಡಪ್ಪನವರೂ ಶ್ರೀ ತಿ.ತಾ. ಶರ್ಮರವರೂ ಬಹಳ ಸಂತೋಷಪಟ್ಟು ಆಶೀರ್ವದಿಸಿದರು. ಕಾವ್ಯದ ಬಗ್ಗೆ ವಿದ್ವಾಂಸರಿತ್ತ ಸದಭಿಪ್ರಾಯಗಳನ್ನು ನಮ್ಮ ಊರಿನ (ಚಿಕ್ಕಹೆಜ್ಜಾಜಿಯ) ಹಿರಿಯರಿಗೆ ತಿಳಿಸಲಾಗಿ ಅವರು ಬಹಳ ಸಂತೋಷಪಟ್ಟು ಈ ಗ್ರಂಥವನ್ನು ಪ್ರಕಾಶನಗೊಳಿಸುವ ಸಂಕಲ್ಪ ಬಹಳ ವರ್ಷಗಳಿಂದಲೂ ಇದ್ದಿತೆಂದೂ ಈಗ ಇದನ್ನು ನೆರವೇರಿಸಬೇಕೆಂದೂ ಭಗವತ್ಸೇವಾ ಸಮಿತಿಯ ಆಶ್ರಯದಲ್ಲಿ ಈ ಪುಣ್ಯಕಾರ್ಯ ನಡೆಯಬೇಕೆಂದೂ ಮತ್ತು ಈ ಗ್ರಂಥದಿಂದ ಬರಬಹುದಾದ

ವಿಶಿಷ್ಟ ಆದಾಯಗಳನ್ನು ಕವಿಯು ಹುಟ್ಟಿದ ಇದೇ ಗ್ರಾಮದಲ್ಲಿರುವ ಶ್ರೀ ಸೀತಾರಾಮಚಂದ್ರದೇವರ ದೇವಾಲಯದ ಜೀರ್ಣೋದ್ಧಾರ ಹಾಗೂ ನಿತ್ಯ ಮತ್ತು ವಿಶೇಷ ಪೂಜೆಗಳಿಗಾಗಿ ಮೀಸಲಾಗಿಡಬೇಕೆಂದೂ ತೀರ್ಮಾನಿಸಿ ಈ ಗ್ರಂಥವನ್ನು ಪ್ರಕಾಶನಗೊಳಿಸುವ ಗುರುತರ ಜವಾಬ್ದಾರಿಯನ್ನು ನನಗೆ ವಹಿಸಿದರು. ಈ ಮಹತ್ಕಾರ್ಯ ಸಾಧನೆಯ ಸಮಸ್ತ ಭಾರವನ್ನೂ ಭಗವಂತ ನಿಗೆ ನಿವೇದಿಸಿ ಇದು ಭಗವತ್ಪ್ರಸಾದವೆಂದು ಸಂತೋಷದಿಂದ ಒಪ್ಪಿದೆ. ಈ ಬಗ್ಗೆ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಪ್ರಾರಂಭಿಸಿದ ದಿನದಿಂದ ಈವರೆ ವಿಗೂ ಸತತವಾಗಿ ಅದಾವುದೋ ದಿವ್ಯ ಅವ್ಯಕ್ತ ಶಕ್ತಿ ನನ್ನನ್ನು ನಿಮಿತ್ತ ಮಾತ್ರವಾಗಿಸಿಕೊಂಡು ತನ್ನದೇ ಆದ ಸೇವೆಗಳನ್ನು ಪಾಮರನಾದ ನನ್ನಿಂದ ಮಾಡಿಸಿಕೊಳ್ಳುತ್ತಿರುವುದನ್ನು ಕಾಣುತ್ತಿದ್ದೇನೆ. ದಯಾಮಯನಾದ ದೇವ ದೇವನು ತನ್ನ ಸೇವೆಗಳನ್ನು ಸತತವೂ ನನಗೆ ಒದಗಿಸಿಕೊಟ್ಟು ನನ್ನನ್ನು ಪುನೀತನನ್ನಾಗಿಸಿದರೆ ಸಾಕು. ಅಂತಹ ಭಾಗ್ಯದಿಂದ ನಾನು ಧನ್ಯನಾಗುತ್ತೇನೆ.

ನಮ್ಮ ಪೂರ್ವಿಕರು ಈವರೆವಿಗೂ ಕಾಪಾಡಿಕೊಂಡು ಬಂದಿರುವ ನಮ್ಮ ವಂಶ ವೃಕ್ಷದ ಆಧಾರದಂತೆ ಭಗವಚ್ಚರಿತ್ರೆಯ ಕರ್ತೃ ಶ್ರೀ ವಿಜಯ ವೆಂಕಟರಮಣ ಕವಿಗಳು ನಮ್ಮ ಹಿಂದಿನ ಎಂಟನೇ ತಲೆಯವರು. ಇವರ ಜೀವಿತ ಕಾಲವನ್ನು ಯಾರೂ ನಿರ್ಧರಿಸಿ ಹೇಳುತ್ತಿಲ್ಲ. ನಮ್ಮ ಪೂರ್ವಿಕರೂ ವಂಶಸ್ಥರೂ ಹೇಳಿ ಕೊಂಡು ಬರುತ್ತಿರುವಂತೆ ಈ ಕವಿ ವರ್ಯರಿಗೆ ಚಿಕ್ಕವಯಸ್ಸಿನಲ್ಲಿಯೇ ಪಿತೃ ವಿಯೋಗವಾಯಿತಂತೆ. ಇವರಿಗೆ ಅಣ್ಣಂದಿರೂ ಇದ್ದರಲ್ಲದೆ ಇವರನ್ನು ಬಹಳ ವಾಗಿ ಪ್ರೀತಿಸುತ್ತಿದ್ದ ಇವರ ತಾಯಿಯೂ ಇವರೊಂದಿಗಿದ್ದರಂತೆ. ಬಾಲ್ಯ ದಲ್ಲಿಯೇ ಗುರುಕೃಪೆ ಪಡೆದ ಇವರು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡ ಅನೇಕ ವರ್ಷಗಳ ನಂತರ ತಾಯಿಯ ಆಜ್ಞೆಯಂತೆ ಗೃಹಸ್ಥರಾಗಿ ಮುಪ್ಪಿನಲ್ಲಿ ಹೆಂಡತಿ ಮಕ್ಕಳನ್ನು ಸಂಪೂರ್ಣ ತ್ಯಜಿಸಿ ಅವಧೂತ ಹಂತವನ್ನಡರಿ ಇಷ್ಟ ದೇವರೂ ಮನೆದೇವರೂ ಆದ ತಿರುಪತಿ ಶ್ರೀ ಲಕ್ಷ್ಮಿವೆಂಕಟೇಶ್ವರಸ್ವಾಮಿಯ ದಿವ್ಯ ಸೇವೆಗಳಲ್ಲೇ ನಿರತರಾಗಿದ್ದು ತಮ್ಮ ಪತ್ನಿಯ ಅಂತ್ಯಕಾಲದಲ್ಲಿ ಅವರ ಪ್ರಾರ್ಥನೆಯಂತೆಯೇ ತಮ್ಮ ದರ್ಶನವಿತ್ತು ಅದೃಶ್ಯರಾದವರು ಮತ್ತೆ ಕಾಣ ದಾದರಂತೆ. ಇವರು ಅನೇಕ ಮಹಿಮೆಗಳನ್ನು ತೋರಿದ ಪವಾಡ ಪುರುಷ

ರಂತೆ. ಪ್ರಾಣಾಯಾಮದಲ್ಲಿ ಸಿದ್ಧಪುರುಷರಂತೆ. ಪ್ರಾಣಾಯಾಮದ ವರ್ಣನೆ ಈ ಕಾವ್ಯದಲ್ಲಿಯೂ ಒಂದೆರಡು ಕಡೆ ನಾವು ಕಾಣಬಹುದು. ಉದಾಹರಣೆಗೆ ನಾಲ್ಕನೇ ಅಧ್ಯಾಯದ ನವತ್ತಾರನೇ ಪದ್ಯ (ಪುಟ ೬೯) ಮತ್ತು ಹನ್ನೊಂದನೆ ಅಧ್ಯಾಯದ ಏಳನೇ ಪದ್ಯ (ಪುಟ ೨೨೧). ನಾವು ಕೇಳಿರುವಂತೆ ಈ ಕವಿಗಳು ಆಯುರ್ವೇದ ಮತ್ತು ಮೂಲಿಕಾ ಪ್ರಯೋಗಗಳ ಬಗ್ಗೆ "**ವೈದ್ಯಸಿಂಧು**" ವೆಂಬ ಆಯುರ್ವೇದ ಗ್ರಂಥವನ್ನೂ ಪ್ರಾಣಾಯಾಮ ಪದ್ಧತಿಗಳ ಮತ್ತು ಸಾಧನೆಗಳನ್ನೊಳಗೊಂಡ "**ರಾಜಯೋಗ**" ಎಂಬ ಗ್ರಂಥವನ್ನೂ ಬರೆದಿರುವರಂತೆ. ಈ ಕೃತಿಗಳು ಈ ವರೆವಿಗೆ ನಮಗೆ ದೊರೆತಿಲ್ಲ. ಇದೇ ಕವಿಯು ಚಿಕ್ಕಬಳ್ಳಾಪುರದಲ್ಲಿ ರಚಿಸಿರುವ "**ಶ್ರೀ ಆಂಜನೇಯಸ್ವಾಮಿ ದಂಡಕ**" ಮತ್ತು "**ಭೋಜನ ರಗಳೆ**" ಎಂಬ ಎರಡು ಕೃತಿಗಳೂ ನಮಗೆ ದೊರೆತಿವೆ ಈ ಕೃತಿಗಳನ್ನೂ ಸಹ ಮುದ್ರಣ ಮಾಡಿಸಬೇಕೆಂಬ ಸಂಕಲ್ಪ ಹೊಂದಿದ್ದೇವೆ. ಕವಿಯ ಮತ್ತು ಕವಿತೆಯ ಬಗ್ಗೆ ನಮ್ಮ ವಂಶಸ್ಥರೂ ಮತ್ತು ಪೂರ್ವಜರೂ ಹೇಳಿಕೊಂಡು ಬಂದಿರುವ ಹಲವಾರು ದಂತಕಥೆಗಳನ್ನು ಪೂಜ್ಯ ವೆಂಕಸುಬ್ಬಯ್ಯನವರ ಆಜ್ಞೆಯಂತೆ ಇದರ ಜೊತೆಯಲ್ಲಿ ಸಂಗ್ರಹಿಸಿ ಕೊಟ್ಟಿದ್ದೇನೆ. ಕೆಲವನ್ನು ಈಗಾಗಲೇ ಪೂಜ್ಯ ಎಸ್. ಕೆ. ರಾಮಚಂದ್ರರಾಯರೂ ಸಹ ಸಂಗ್ರಹಿಸಿ ಬರೆದಿರುತ್ತಾರೆ. ಭಕ್ತಿ ಪ್ರಧಾನವಾದ ಈ ಕಥೆಗಳನ್ನು ಓದಿ ಈ ಮಹಾತ್ಮನ ಆತ್ಮಶಕ್ತಿಯನ್ನು ಅರ್ಥಮಾಡಿಕೊಂಡರೆ ನಮ್ಮ ಶ್ರಮ ಸಾರ್ಥಕವಾಯಿತು.

ಈ ಕಾವ್ಯದಲ್ಲಿ ನಮಗೆ ದೊರೆತಿರುವ ಭಾಗಗಳನ್ನೆಲ್ಲಾ ಮುದ್ರಣ ಮಾಡಿಸಲಾಗಿದೆ. ವಿದ್ವಾಂಸರ ಅಭಿಪ್ರಾಯ ಮತ್ತು ಸಮರ್ಥನೆಗಳ ಪ್ರಕಾರ ಈ ಕಾವ್ಯದ ಇತರ ಭಾಗಗಳು ಇನ್ನೂ ಇರಬೇಕೆನ್ನಿಸುತ್ತದೆ. ಆದ್ದರಿಂದ ಈ ಕವಿಯಿಂದ ರಚಿತವಾಗಿರುವ ಯಾವುದೇ ಕಾವ್ಯಗಳಾಗಲೀ ಕೃತಿಗಳಾಗಲೀ ನಮ್ಮ ವಂಶಸ್ಥರಾದ ಯಾರ ಬಳಿಯಿದ್ದರೂ ಕೃಪೆಯಿಟ್ಟು ದೊರಕಿಸಿಕೊಟ್ಟಲ್ಲಿ ಅಂತಹವರು ಕವಿಯ ಮತ್ತು ಸಾಹಿತ್ಯಸೇವೆ ಮಾಡಿದಂತಾಗುವುದಲ್ಲದೆ ಕವಿಯ ಮತ್ತು ಅವರ ಕಾವ್ಯಗಳ ಬಗ್ಗೆ ಹೆಚ್ಚು ಅಂಶಗಳು ಬೆಳಕಿಗೆ ಬರಲು ಅವಕಾಶ ಮಾಡಿದಂತಾಗುತ್ತದೆ. ಹಾಗೆ ಇದೇ ಕವಿಯಿಂದ ರಚಿತವಾಗಿರ

ಬಹುದಾದ ಇತರ ಕೃತಿಗಳು ದೊರೆತಲ್ಲಿ ಅವುಗಳನ್ನೂ ಪ್ರಕಟಿಸಿ ತನ್ಮೂಲಕ ಬರಬಹುದಾದ ಉತ್ಪತ್ತಿಗಳನ್ನೂ ಶ್ರೀ ಸೀತಾರಾಮಚಂದ್ರ ಸ್ವಾಮಿಯ ಸೇವೆಗಳಿಗಾಗಿ ಮೀಸಲಾಗಿಡಬೇಕೆಂದು ತೀರ್ಮಾನಿಸಿರುವುದರಿಂದ ಅಂತಹ ಕೃತಿಗಳನ್ನು ಒದಗಿಸಿಕೊಟ್ಟವರು ಭಗವತ್ಕೈಂಕರ್ಯಗಳಲ್ಲಿ ಭಾಗವಹಿಸಿದಂತಾಗುತ್ತದೆ. ಸಹೃದಯರಾದ ನಮ್ಮ ವಂಶಸ್ಥರು ಈ ಬಗ್ಗೆ ಔದಾರ್ಯ ತೋರಿಸುತ್ತಾರೆ ಎಂಬ ಸಂಪೂರ್ಣ ನಂಬುಗೆ ನನಗಿದೆ.

ಈ ಕಾವ್ಯದ ಬಗ್ಗೆ ನಾನು ಅನೇಕ ವಿಷಯಗಳನ್ನು ವಿವರಿಸಬೇಕೆಂದು ಕುತೂಹಲಿಯಾಗಿದ್ದರೂ ಗ್ರಂಥವಿಸ್ತಾರದ ಭೀತಿಯಿಂದ ಕೇವಲ ಕೆಲವು ಅಂಶಗಳನ್ನಾದರೂ ಓದುಗರ ಮುಂದೆ ಇಡದಿದ್ದಲ್ಲಿ ಮನಸ್ಸಿಗೆ ಸಮಾಧಾನವಾಗಲಾರದು. ಆನಂದವು ಹಂಚಿದಷ್ಟೂ ಹೆಚ್ಚುವುದಲ್ಲವೇ ?

ಭಗವಚ್ಚರಿತ್ರೆ ಎಂದರೆ ಭಗವಂತನ ಚರಿತ್ರೆ ಎಂಬ ಅರ್ಥ. ಭಗವಂತನ ಚರಿತ್ರೆಯೇ ಭಾಗವತ. ಎಂತಹ ಮಧುರವಾದ ಕಥಾವಸ್ತು ! ಚತುರ್ವೇದಗಳಿಗೂ ಅಗೋಚರನಾದ ಮಧುರಾನಾಥನ ಮಧುರ ಚರಿತ್ರೆಯಲ್ಲವೇ ? ವಾತ್ಸಲ್ಯದಿಂದ ಕೂಡಿದ, ಎಂದೆಂದಿಗೂ ಬತ್ತದ, ಭಕ್ತಿರಸವೇ ಜೀವನದಿಯಾದ ಭಾಗವತಸುರಗಂಗೆಯ ನಿತ್ಯನಿರಂತರ ಸುಂದರ ಪ್ರವಾಹ ಭಕ್ತನ ನಿರ್ಮಲಾಂತಃಕರಣದಲ್ಲಿ ಹರಿದಾಗಲೇ ಅವನ ಜನ್ಮ ಪಾವನವಾಗುತ್ತದೆ. ಗೋವಿಂದ ನಾಮ ಸಂಕೀರ್ತನವೆಂಬ ಪರುಶ ಶಿಲೆಯು ಮಣ್ಣಿನಂತಹ ನಮ್ಮ ಹೃದಯ ಸ್ಪರ್ಶಿಸಿದರೆ ಸಾಕು ಅದು ಬಂಗಾರವಾಗುವುದರಲ್ಲಿ ಸಂಶಯವಿಲ್ಲ. " ನಾನು ದಾಸ ನೀನು ಈಶ " ಆದ್ದರಿಂದ ನಿನಗೆ ಶರಣುಬಂದರೆ ನನ್ನ ಕೆಲಸವಾಯಿತು ನನ್ನ ಹೊರೆ ನೀನೇ ಹೊರುವೆ ಎಂಬ ಭಾವನೆಯನ್ನು ಪ್ರಕಟವಾಗಿಸಲು ಅವರು "ಗೋವಿಂದ ನಿನಗೆ ನಾನು ಸಂಪೂರ್ಣ ಶರಣು ಬಂದಿದ್ದೇನೆ" ಎಂದು ಪೀಠಿಕಾಧ್ಯಾಯದ ಮಂಗಳ ಶ್ಲೋಕದಲ್ಲಿಯೇ ತಿಳಿಸಿಬಿಟ್ಟಿದ್ದಾರೆ.

ಶ್ರೀ ಭಗವಚ್ಚರಿತ್ರೆ ಪ್ರಾಚೀನ ಪ್ರೌಢ ಕಾವ್ಯಗಳಲ್ಲೊಂದಾಗಿದೆ. ಕಾವ್ಯದ ಇನ್ನೂ ಕೆಲವು ಭಾಗಗಳು ವಿದ್ವಾಂಸರ ಅಭಿಪ್ರಾಯದಂತೆ ಇನ್ನೂ ಇರಬೇಕೆನ್ನಿಸಿದರೂ ಕವಿಯ ಪ್ರೌಢಿಮೆ ಈಗಿರುವ ಹದಿನೈದು ಅಧ್ಯಾಯ

ಗಳಿಂದಲೇ ನಿರ್ಧರಿಸಬಹುದಾದ ವಿಷಯುವಾಗಿದೆ. ಕಾವ್ಯದಲ್ಲಿ ಬರುವ ಭಾಗವತ ಮಹಿಮೆವರ್ಣನೆ, ನೀತಿಭೋದೆ, ವರ್ಣಾಶ್ರಮಧರ್ಮ, ತಪಸ್ಸಿನ ವಿಧಗಳು, ಸಾತ್ವಿಕ ತಪೋಭೂಮಿ ವರ್ಣನೆ, ಸಮುದ್ರ ವರ್ಣನೆ, ದ್ವಾರಕಿ ವರ್ಣನೆ, ಸೂರ್ಯೋದಯ ಮತ್ತು ಸೂರ್ಯಾಸ್ತಮಯ ವರ್ಣನೆ, ಬೇಟೆ ವರ್ಣನೆ, ರಾಕ್ಷಸರಾಜ್ಯವರ್ಣನೆ, ಯುದ್ಧವರ್ಣನೆ, ಸ್ತ್ರೀ ವರ್ಣನೆ, ಋತುವರ್ಣನೆಗಳೇ ಮುಂತಾದ ಇನ್ನೂ ಅನೇಕ ವರ್ಣನೆಗಳನ್ನು ಒಂದು ಬಾರಿ ಅವಲೋಕಿಸಿದರೆ ಸಾಕು ಈ ಕವಿಯನ್ನು ಶಬ್ದಬ್ರಹ್ಮನೆನ್ನಬಹುದು. ಈ ಕವಿಯು ರಸಿಕನೂ ಹೌದು, ವಸಂತ ಋತುವಿನ ಮತ್ತು ಕಾಮಕೇಳಿ ವಿಲಾಸಗಳ ವರ್ಣನೆಯೇ ಇದಕ್ಕೆ ಆಧಾರ. ಬಸುರಿ ಬಾಣಂತಿಯರ, ಮಕ್ಕಳಾಟಿಕೆಗಳ ಮತ್ತು ಮಕ್ಕಳಿಗೆ ತೊಡಿಸುವ ಆಭರಣಗಳ ವರ್ಣನೆಗಳನ್ನು ಕಂಡರೆ ಇವರು ನಿಜವಾಗಿಯೂ ಗೃಹಸ್ಥಾಶ್ರಮಿಗಳು ಎಂಬುದರಲ್ಲಿ ಸಂದೇಹವೇ ಇರಲಾರದು.

ಎಲ್ಲದಕ್ಕೂ ಮಿಗಿಲಾಗಿ ಭಕ್ತನು ಭಗವಂತನನ್ನು ಪಡೆಯಲೋಸುಗ ಇರಬೇಕಾದ ಸಂಯಮ. ಭಗವಂತನ ದರ್ಶನಕ್ಕಾಗಿ ಅವನು ಪಡುವ ಆಶೆ ಆಕಾಂಕ್ಷೆ, ಭಕ್ತ ಭಗವಂತರ ನಡುವಣ ಸಂಬಂಧ ಇವುಗಳನ್ನು ವರ್ಜಿಸುವಾಗಲೂ ಭಕ್ತನ ಕಠೋರ ತಪಸ್ಸಿನ ಫಲವಾಗಿ ಭಗವಂತನನ್ನು ಕಡೆಗೆ ಕಂಡೊಡನೆಯೇ ಅವನಿಗಾಗುವ ಆತ್ಮಾನಂದದ ಅನುಭವ, ಸಾತ್ವಿಕಾಷ್ಟ ಭಾವಗಳ ಪ್ರಾಕಟ್ಯ ಇವುಗಳ ವರ್ಣನೆಗಳಂತೂ ಬಹಳ ಮುದ್ದಾಗಿವೆ. ಎಂತಹ ಪಾಷಾಣ ಹೃದಯಗಳೂ ತಮ್ಮ ಪಾಪ ಕಳೆದು ಕೊಳ್ಳುವುವೋ ಎಂಬಂತೆ ಕರಗಿ ನೀರಾಗಿ ಪರಮಾತ್ಮನ ದಿವ್ಯ ಪದ ಕಮಲಗಳನ್ನು ತೊಳೆದು ಪುನೀತವಾಗುವುದರಲ್ಲಿ ಸಂಶಯವಿಲ್ಲ. ಇಂತಹ ಸುಂದರ ಸನ್ನಿವೇಶಗಳಲ್ಲಿ ಭಕ್ತಿಯ ಹೊಳೆ ಹರಿಸು ವರಲ್ಲದೆ ನಮ್ಮ ಕಣ್ಣೆದುರಿನಲ್ಲಿಯೇ ಇಂತಹ ಮಧುರಮಯ ದೃಶ್ಯಗಳು ನಡೆಯುತ್ತಿವೆ ಎಂಬ ಪಾರವಶ್ಯತೆ ಉಂಟುಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾರೆ.

ಜರಾಮರಣಗಳೆಂಬ ಭಯಂಕರ ಬರಸಿಡಿಲಿನ ಆಘಾತಗಳಿಂದ ಜರ್ಝರಿತ ರಾಗಿ ಕರಾಳ ಭವಿಷ್ಯಗಳ ಕಾರ್ಗತ್ತಲೆಯಲ್ಲಿ ದಾರಿಕಾಣದೆ ದಿಕ್ಕುಗೆಟ್ಟು ನಿರಾಶ

ರಾಗಿ ಕಷ್ಟ ಕಾರ್ಪಣ್ಯಗಳ ದಟ್ಟಡವಿಯ ಮಧ್ಯೆ ಭಯಭೀತರಾಗಿರುವ ಅಸಂಖ್ಯಾಂತ ಜೀವರುಗಳ ಆತ್ಮೋದ್ಧಾರಕ್ಕಾಗಿ, ಕನ್ನಡಮ್ಮನ ಗುಡಿಯಲ್ಲಿ ಬೆಳಗುತ್ತಿರುವ ಪವಿತ್ರಕೃತಿಗಳೆಂಬ ನಂದಾದೀವಿಗೆಗಳ ಬೆಳಕಿನತ್ತ ನಡೆದಲ್ಲಿ ಶಾಶ್ವತ ಸುಖವನ್ನು ಪಡೆದಾರು ಎಂಬ ಆಶಾಭಾವನೆಯನ್ನು ಹೊಂದಿ ರಚಿಸಿರುವ ಇಂತಹ ಕೃತಿಗಳ ಅಗತ್ಯತೆ ಖಂಡಿತ ಈಗಿದೆ ಎಂಬ ಅಂಶ ಎಲ್ಲರೂ ಒಪ್ಪಬೇಕಾದ ಸತ್ಯ.

ನಮ್ಮ ಕವಿಯು ಜೀವನ ಕಾನನದ ಮಲ್ಲಿಗೆಯಂತೆ ಯಾರಿಗೂ ತಿಳಿಯದಂದೆ ಅರಳಿ ತನ್ನ ಸೌರಭವನ್ನು ಹಿತವಾಗಿ ಬೀರಿ ಪ್ರಕೃತಿಯಲ್ಲಿ ಲೀನವಾಗುವ ತೆರನಂತೆ ಯಾವ ಕೀರ್ತಿ ಕನ್ಯೆಯ ಸುಖವನ್ನೂ ಅಪೇಕ್ಷಿಸದೆ ತನ್ನ ಕಾವ್ಯವನ್ನು ತನ್ನ ಆರಾಧ್ಯ ದೈವವಾದ ಶ್ರೀ ವೆಂಕಟೇಶ್ವರನ ಚರಣಾರವಿಂದಗಳಲ್ಲಿ ಅರ್ಪಿಸಿ ತಾವು ಸಂತೋಷ ಪಟ್ಟಿರುವರಲ್ಲದೆ ಮಾನವನು ನಿಮಿತ್ತ ಮಾತ್ರವೆಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಇಷ್ಟಾದರೂ ಈ ಕಾವ್ಯವನ್ನು ಯಾರ ಆತ್ಮೋದ್ಧಾರಕೋಸ್ಕರ ರಚಿಸಿದರೋ ಅವರು ಈವರೆವಿಗೆ ಅದನ್ನು ಒಮ್ಮೆ ಅವಲೋಕಿಸುವ ಮನಸ್ಸು ಮಾಡದಿದ್ದುದು ಕಂಡ ಅವರ ಹೃದಯ ಎಷ್ಟು ನೊಂದಿರಬೇಕು ? ಏಕೆಂದರೆ ಮನೆಯಲ್ಲಿ ನಮ್ಮ ಪುಟ್ಟ ಕಂದನೊಂದು ಸಣ್ಣ ಹೊಸ ಚೇಷ್ಟೆ ಮಾಡಿದರೆ ಅಥವಾ ಹೊಸಲು ದಾಟಿದರೆ ನಾವು ನಮ್ಮ ಹಿತೈಷಿಗಳಲ್ಲಿಯೂ ನೆರೆಹೊರೆಯ ವಿಶ್ವಾಸಿಗಳಲ್ಲಿಯೂ ಹೇಳಿ ಹೇಳಿ ಆನಂದ ಪಡುತ್ತೇವೆ. ಆದರೆ ಇಂತಹ ವೈಭವ ಪೂರಿತವಾದ ಪ್ರೌಢ ಕೃತಿರಚಿಸಿ ಭಗವದ್ದರ್ಶನ ಪಡೆದು ಪುನೀತರಾದ ಕವಿವರ್ಯರು ಅಮೃತರೂಪಿಯಾದ ಭಾಗವತವನ್ನು ನಮ್ಮೆಲ್ಲರ ಉದ್ಧಾರಕ್ಕೆ ಬರೆದಿಟ್ಟಿದ್ದರೂ ಇದನ್ನು ನೂರಾರು ವರ್ಷಗಳಿಂದ ಜನತೆ ನೋಡಿ ಅದರಿಂದ ಉಪಕಾರ ಪಡೆಯದಿದ್ದುದನ್ನು ಕಂಡ ಕವಿ ಹೃದಯ ಇನ್ನೆಷ್ಟು ನೊಂದಿದೆಯೋ ತಿಳಿಯದು. ಕನ್ನಡಮ್ಮನು ತನ್ನ ಕಂದನಿಗಾದ ಈ ಉಪೇಕ್ಷೆಯನ್ನು ಈವರೆವಿಗೆ ಹೇಗೆ ಸಹಿಸಿದಳೋ ತಿಳಿಯದಾಗಿದೆ. ಕವಿಯ ಹಿರಿಮೆ ಪ್ರೌಢಿಮೆ ನಾವು ಒತ್ತಿ ಹೇಳಬೇಕಾಗಿಲ್ಲ. ಅವರ ಕೃತಿಯೇ ಹೇಳುತ್ತದೆ. ಅಂದರೆ ಈಗಾಗಲೇ ಕನ್ನಡಮ್ಮನ ಗುಡಿಯ ಗೋಪುರದ ಮೇಲೆ ಪ್ರಕಾಶಿಸುತ್ತಿರುವ ಕೃತಿರತ್ನ ಕಲಶಗಳಲ್ಲೊಂದಾವ ಈ

ಕೃತಿ ಕಲಶವನ್ನು ನಿಧಾನವಾಗಿ ಈಗ ಗುರ್ತಿಸುತ್ತಿದ್ದೇವೆ. ಅದೇ ನಮ್ಮ ಸಂತಸ.

ಉಪಕಾರ ಸ್ಮರಣೆ

ಒಮ್ಮೆ ಗ್ರಾಮಕ್ಕೆ ದಯಮಾಡಿಸಿದ್ದಾಗ ಈ ಕಾವ್ಯವನ್ನು ಅವಲೋಕಿಸಿ ಅದರ ಪ್ರೌಢಿಮೆಯನ್ನು ಎಲ್ಲರಿಗೂ ತಿಳಿಯಪಡಿಸಿ ಈ ಕಾವ್ಯವನ್ನು ಮುದ್ರಣ ಮಾಡಿಸಲೇಬೇಕೆಂದು ನಮ್ಮ ಕರ್ತವ್ಯವನ್ನು ತಿಳಿಯ ಪಡಿಸಿದ ಪರಮ ಪೂಜ್ಯ ಗುರುವರ್ಯ ಗುಬ್ಬಿ ಶ್ರೀ ಚಿಂದಬರಸ್ವಾಮಿಯವರನ್ನು ನಾವು ಪರಮ ಭಕ್ತಿಯಿಂದ ಸ್ಮರಿಸುತ್ತೇವೆ.

ಆದಿಯಲ್ಲಿ ನಾವು ಪ್ರಾರ್ಥಿಸಿದೊಡನೆಯೇ ಸಂತೋಷದಿಂದ ಒಪ್ಪಿ ಬಹಳ ಅಕ್ಕರೆಯಿಂದ ಬೆರಳಚ್ಚು ಪ್ರತಿಯ ದೋಷಗಳನ್ನು ತಿದ್ದಿಕೊಟ್ಟು ನಮ್ಮ ಕಾರ್ಯವು ಯಶಸ್ವಿಯಾಗಲು ಪ್ರೋತ್ಸಾಹಿಸಿದ ಪೂಜ್ಯತಾತ ಶಿವ ರಾಮಯ್ಯನವರ ಉಪಕಾರವನ್ನು ನಾವು ಸದಾ ಸ್ಮರಿಸುತ್ತೀದ್ದೆವೆ. ಅವರ ಬಾಳು ವನಸುಮದೋಪಾದಿಯಲ್ಲಿ ಗುಪ್ತಗಾಮಿನಿಯಾಗಿದೆ. ಇವರಿಗೆ ಶ್ರೀ ಸೀತಾರಾಮಚಂದ್ರ ದೇವರು ಸಮಸ್ತ ಶುಭಗಳನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ಕಾವ್ಯದ ಬಗ್ಗೆ ಸಲಹೆಗಳನು ಪಡೆಯಲು ಪೂಜ್ಯ ಶ್ರೀ ಜಿ. ವೆಂಕಟ ಸುಬ್ಬಯ್ಯನವರಿಗೂ ಪೂಜ್ಯ ಶ್ರೀ ಎಸ್. ಕೆ. ರಾಮಚಂದ್ರರಾಯರಿಗೂ ಆಗಾಗ್ಗೆ ನಾನು ವಿಶೇಷ ತೊಂದರೆ ಕೊಡುತ್ತಿದ್ದರೂ ಅವರುಗಳು ಬಹಳ ಆತ್ಮೀಯತೆಯಿಂದ ಮಾರ್ಗದರ್ಶನ ಮಾಡಿದರಲ್ಲದೆ ಕವಿಯ ಮತ್ತು ಕಾವ್ಯದ ಬಗ್ಗೆ ನಾಲ್ಕು ಮಾತುಗಳನ್ನು ಬರೆದುಕೊಟ್ಟು ಈ ಕೃತಿಯು ಯಶಸ್ವಿಯಾಗಲು ಕಾರಣಕರ್ತರಾದ ಈ ಪೂಜ್ಯರೀರ್ವರಿಗೂ ನಾವು ಚಿರಋಣಿಗಳು. ಶ್ರೀ ಸೀತಾರಾಮಚಂದ್ರದೇವರು ಇವರುಗಳಿಗೆ ಸಮಸ್ತ ಮಂಗಳವನ್ನುಂಟು ಮಾಡಲಿ ಎಂದು ಪ್ರಾರ್ಥಿಸುತ್ತೇನೆ.

ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಕಾವ್ಯವನ್ನು ಚೆನ್ನಾಗಿ ಪರಿಶೀಲಿಸಿ ಅವರ ಪ್ರೌಢಿಮೆಯನ್ನು ಪ್ರಕಾಶನಗೊಳಿಸಿ ಮಮತೆಯಿಂದ ಮುನ್ನುಡಿ ಬರೆದುಕೊಟ್ಟ ಪೂಜ್ಯ ಶ್ರೀ ಎಲ್. ಗುಂಡಪ್ಪನವರಿಗೆ ನಾವು ಸದಾ ಋಣಿಗಳು. ಶ್ರೀ ಸೀತಾರಾಮಚಂದ್ರ ದೇವರು ಇವರಿಗೆ ಸಮಸ್ತ ಶುಭಗಳನ್ನೂ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇನೆ.

ಪಾರಮಾರ್ಥಿಕ ಸಾಧನವಾದ ಈ ಕೆಲಸವನ್ನು ಮಾಡುವಂತೆ ನನ್ನನ್ನು ಪ್ರೋತ್ಸಾಹಿಸಿದ್ದಲ್ಲದೆ ಭಾರತೀಯ ಆಧ್ಯಾತ್ಮ ದುಂದುಭಿ ಮೊಳಗಿಸಲು ಪಾಶ್ಚಾತ್ಯ ದೇಶಗಳಿಗೆ ಬೆಂಗಳೂರು ವಿಮಾನ ನಿಲ್ದಾಣದಿಂದ ತೆರಳುವ ಕೆಲವು ಘಂಟೆಗಳ ಮುನ್ನ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆ ನಮ್ಮ ಕುಟೀರಕ್ಕೆ ದಯಮಾಡಿಸಿ ಆಶೀರ್ವಾದ ಪತ್ರ ಬರೆದು ನಮ್ಮನ್ನು ಆಶೀರ್ವದಿಸಿದ ಪೂಜ್ಯ ಗುರುವರ್ಯ ಶ್ರೀ ಭದ್ರಗಿರಿ ಕೇಶವದಾಸಜೀಯವರಿಗೆ ನಾವು ಚಿರಋಣಿಗಳು. ಅವರು ಕೈಕೊಂಡಿರುವ ಪವಿತ್ರ ಭಗವತ್ಕಾರ್ಯದಲ್ಲಿ ಶ್ರೀ ಸೀತಾರಾಮ ದೇವರು ಯಶಸ್ಸು ದೊರಕಿಸಿ ಕೊಟ್ಟು ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ.

ಈ ಪವಿತ್ರ ಗ್ರಂಥವನ್ನು ನೋಡಿ ಆನಂದಿಸಿ ಶ್ರೀ ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳ ಸನ್ನಿಧಾನಂಗಳಿಗೆ ಈ ಕಾವ್ಯದ ಪ್ರತಿ ಕಳುಹಿಸಿ ಕೊಟ್ಟು ಶ್ರೀ ಶ್ರೀ ಮಹಾಸ್ವಾಮಿಗಳವರ ದಿವ್ಯ ಆಶೀರ್ವಾದಂಗಳನ್ನು ತರಿಸಿಕೊಟ್ಟು ಗುರುಕೃಪೆಗೆ ನಾವು ಪಾತ್ರರಾಗಲು ಕಾರಣರಾದ ಬೆಂಗಳೂರು ಶ್ರೀ ಶಂಕರಮಠದ ಮ್ಯಾನೇಜರ್ ಶ್ರೀ ಕೋಟೆ ಭಾಸ್ಕರರಾಯರಿಗೆ ನಾವು ಸದಾ ಋಣಿಗಳು. ಇವರಿಗೆ ಶ್ರೀ ಸೀತಾರಾಮ ದೇವರು ಮಂಗಳ ವನ್ನುಂಟುಮಾಡಲಿ ಎಂದು ಪ್ರಾರ್ಥಿಸುತ್ತೇನೆ.

ಇಡೀ ಕಾವ್ಯವನ್ನು ಅತಿ ಶ್ರದ್ಧೆಯಿಂದ ಬೆರಳಚ್ಚು ಮಾಡಿಕೊಟ್ಟ ನಮ್ಮ ಮಿತ್ರರಾದ ಶ್ರೀ ಹೆಚ್". ಎಲ್. ಕೆ. ನಾರಾಯಣಸ್ವಾಮಿಯವರಿಗೂ ನಾವು ಋಣಿಗಳು. ಅವರಿಗೆ ಸೀತಾರಾಮ ದೇವರ ಅನುಗ್ರಹವಾಗಲಿ ಎಂದು ಪ್ರಾರ್ಥಿಸುತ್ತೇನೆ.

ಕಾರ್ಯಾರಂಭದಿಂದ ಈವರೆವಿಗೂ ತಮ್ಮ ಕರ್ತವ್ಯವೆಂದು ಭಾವಿಸಿ ನನ್ನ ಬೆಂಗಾವಲಾಗಿ ನಿಂತು ಪ್ರತಿ ಘಟ್ಟಗಳಲ್ಲಿಯೂ ಕಾವ್ಯದ ಪ್ರಕಟಣೆಗೆ ಕಾರಣರಾದ ನಮ್ಮ ಸಮೀಪ ಬಂಧುಗಳಿಗೂ ಸ್ನೇಹಿತರುಗಳಿಗೂ ಶ್ರೀ ಸೀತಾರಾಮಚಂದ್ರ ದೇವರು ಸಮಸ್ತ ಸುಖಗಳನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ. (ಇವರೆಲ್ಲರೂ ಶ್ರೀ ಸೀತಾರಾಮಚಂದ್ರ ದೇವರ ಅಂತರಂಗ ಭಕ್ತರಾದ್ದರಿಂದ ಇವರುಗಳ ಹೆಸರುಗಳನ್ನು ನಮೂದಿಸಲಿಲ್ಲ).

ಕಾವ್ಯವನ್ನು ಮಮತೆಯಿಂದಲೂ ವಿಶೇಷ ಆಸಕ್ತಿಯಿಂದಲೂ ಸುಂದರವಾಗಿ ಮುದ್ರಿಸಿಕೊಟ್ಟ ಶ್ರೀ ಶಂಕರ ಪ್ರಿಂಟಿಂಗ್ ವರ್ಕ್ಸ್ ಮಾಲೀಕರಿಗೂ ಮತ್ತು ಶ್ರಮಿಕ ವರ್ಗಕ್ಕೂ ಸೀತಾರಾಮಚಂದ್ರ ದೇವರು ಸಮಸ್ತ ಅಭ್ಯುದಯಗಳನ್ನು ಕರುಣಿಸಲಿ ಎಂದು ಬೇಡುತ್ತೇನೆ.

ಶ್ರೀ ಭಗವತ್ಸೇವಾಸಮಿತಿಯ ಊರ ಹಿರಿಯರು ಈ ಕಾವ್ಯ ಪ್ರಕಾಶನದ ಜವಾಬ್ದಾರಿಯನ್ನು ನನಗೆ ವಹಿಸಿಕೊಟ್ಟುದು ನನ್ನ ಆತ್ಮೋದ್ಧಾರಕ್ಕೆ ಕಾರಣವಾಯಿತು. ನೂರಾರು ವರ್ಷಗಳ ಹಿಂದೆಯೇ ಬರೆಯಲ್ಪಟ್ಟ ಈ ಮಹಾಕಾವ್ಯವನ್ನು ಹೊರತರುವ ಸಾಮರ್ಥ್ಯ ನನ್ನಲ್ಲಿಲ್ಲ. ಮಾಧವನ ಕೃಪೆಯಿಂದ ಮಾತ್ರ ಮೂಗನು ಮಾತನಾಡಬಲ್ಲ, ಕುಂಟನು ಗಿರಿಯನ್ನೇರ ಬಲ್ಲ ಇದು ಕೇಶವನ ಕೃಪೆಯೇ ಹೊರತು ನನ್ನ ಸ್ವಸಾಮರ್ಥ್ಯವಲ್ಲ. ನಾನು ಮಾಡಿದ್ದು ಅಂಚೆಯಾಳಿನ ಕೆಲಸವೆಂದರೆ ತತ್ವತಃ ತಪ್ಪಲ್ಲ. ಆದರೆ ಇಂತಹ ಪುಣ್ಯ ಕಾರ್ಯದ ಅಂಚೆಯಾಳಾಗುವುದೂ ಸಹ ಸುಕೃತ ವಿಶೇಷ. ಇಂತಹ ಸದವಕಾಶ ಭಗವತ್ಪ್ರೇರಣೆಯ ಮೂಲಕ ನನ್ನ ಭಾಗಕ್ಕೆ ಬಂದುದು ಪೂಜ್ಯ ಕವಿವರ್ಯರ ದಿವ್ಯ ಆಶೀರ್ವಾದಗಳೆಂದೇ ಭಾವಿಸುತ್ತೇನೆ. ಈ ಕಾವ್ಯವು ನವ್ಯವಾಗಿ ಈಗ ಹೊರಬರಬೇಕಾದ್ದರಿಂದ ಸತತ ಶ್ರಮ ಪಟ್ಟರೂ ಮುದ್ರಣ ನಿಧಾನವಾದುದು ಅನಿವಾರ್ಯವೇ ಆಯಿತು. ಆದಷ್ಟೂ ತಪ್ಪಿಲ್ಲದಂತೆ ಮುದ್ರಣ ಮಾಡಿಸುವ ಸಂಕಲ್ಪವಿದ್ದುದೂ ಅನೇಕ ಕಡೆಗಳಿಂದ ಸಹಕಾರ ಪಡೆಯುವ ಅವಶ್ಯಕತೆ ಇದ್ದುದೂ ಇದಕ್ಕೆ ಕಾರಣವೆಂದು ಹೇಳಬಹುದು. ಅಂತೂ ಈ ಕಾರ್ಯ ನಿರ್ವಹಣೆಯ ಮೂಲಕವಾಗಿ ಭಗವತ್ಕೃಪೆಯೊದಗಿ, ಹರಿಗುರುಕೃಪೆಯೊದಗಿ

ಬಂದು ನನ್ನ ಆತ್ಮೋಧ್ಧಾರಕ್ಕೆ ನಾಂದಿಯಾಯಿತು ಎಂದರೆ ಅತಿಶಯೋಕ್ತಿಯಲ್ಲ. ಇಂತಹ ಪರಮ ಮಂಗಳ ಕಾರ್ಯದಲ್ಲಿ ನನ್ನ ಅಳಿಲು ಸೇವೆ ಸಲ್ಲಿಸಲು ಈ ಮೂಲಕ ಅವಕಾಶ ಮಾಡಿಕೊಟ್ಟ ಭಗವತ್ಸೇವಾ ಸಮಿತಿಯ ನಮ್ಮ ಎಲ್ಲ ಹಿರಿಯರಿಗೂ ನನ್ನ ಹೃತ್ಪೂರ್ವಕವಾದ ಅನಂತ ವಂದನೆಗಳನ್ನು ಸಲ್ಲಿಸುತ್ತೇನೆ. ಎಲ್ಲರ ಆತ್ಮಾಂತರ್ಗತ ಶ್ರೀ ಸೀತಾರಾಮಚಂದ್ರ ದೇವರು ಇದೇ ರೀತಿ ಇನ್ನು ಮುಂದೆಯೂ ತನ್ನ ದಿವ್ಯ ಸೇವೆಗಳನ್ನು ಈ ಪಾಮರನಿಂದ ಸದಾ ನಡೆಸಿಕೊಳ್ಳಲಿ ಎಂದು ಸತತವೂ ಅವನಲ್ಲಿ ಅತಿಭಕ್ತಿಯಿಂದ ನಿವೇದಿಸಿಕೊಳ್ಳುತ್ತಿದ್ದೇನೆ. ಅಲ್ಲದೆ ಸಮಿತಿಯ ಎಲ್ಲ ಸದಸ್ಯರಿಗೂ ಶ್ರೀ ಸೀತಾರಾಮಚಂದ್ರ ದೇವರು ಸಮಸ್ತ ಸೌಭಾಗ್ಯಗಳನ್ನೂ ಧರ್ಮಮಾರ್ಗದಲ್ಲಿ ನಡೆಯುವ ಬುದ್ಧಿಯನ್ನೂ ಅನುಗ್ರಹಿಸಲಿ ಎಂದು ಹೃದಯ ತುಂಬಿ ಬಂದು ಪ್ರಾರ್ಥಿಸುತ್ತಿದ್ದೇನೆ.

ಕವಿ ಮತ್ತು ಕಾವ್ಯದ ಬಗ್ಗೆ ನಾನು ಸಂಗ್ರಹಿಸಿದ ದಂತಕಥೆಗಳು ಅನೇಕವಿವೆ. ಅವುಗಳಲ್ಲಿ ಕೆಲವನ್ನು ಪೂಜ್ಯ ಶ್ರೀ ಎಸ್. ಕೆ. ರಾಮಚಂದ್ರರಾಯರು ವಿವರಿಸಿದ್ದಾರೆ. ಮತ್ತೆ ಕೆಲವನ್ನು ಈಗ ಓದುಗರ ಮುಂದೆ ಇಡುತ್ತಿದ್ದೇನೆ.

(೧) ಅಂದು ಗೋಕುಲಾಷ್ಟಮಿಯ ಶುಭದಿನ ಪೂಜ್ಯ ಕವಿವರ್ಯರು ಬೆಳಗಿನ ಜಾವ ಮೂರು ಘಂಟೆಗೇ ಎಚ್ಚರಗೊಂಡು ಸ್ನಾನಾದಿಗಳಿಂದ ಶುಚಿರ್ಭೂತರಾಗಿ ಪರಮಾತ್ಮನ ದಿವ್ಯನಾಮಗಳನ್ನು ಕೊಂಡಾಡುತ್ತಿದ್ದಾರೆ. ಕವಿಗಳ ಪತ್ನಿಯವರು ಪರಮಾತ್ಮನ ನಾಮ ಕೊಂಡಾಡುತ್ತಾ ಮನೆಯ ಮುಂದಿನ ಅಂಗಳ ಸಾರಿಸಿ ರಂಗವಲ್ಲಿ ಹಾಕಿದ್ದಾರೆ. ಸುಪ್ರಭಾತಗಳನ್ನು ಹಾಡುತ್ತಾ ಕವಿಗಳ ಮಾತೆ ಕುಳಿತಿದ್ದಾರೆ. ಶುಚಿರ್ಭೂತರಾಗಿ ಶುದ್ಧಮನಸ್ಸಿನಿಂದ ಪರಮಾತ್ಮನ ದಿವ್ಯ ಭಜನೆಗಳನ್ನು ಹೇಳುತ್ತ ಹೇಳುತ್ತ ತನ್ಮಯರಾದ ಮೂವರ ಕಣ್ಣುಗಳಿಂದ ಆನಂದಾಶ್ರು ಹರಿದಿದೆ. ತನ್ಮಯತೆಯಿಂದ ವೃದ್ಧ ಮಾತೆ ಮಗನನ್ನು ಪ್ರಶ್ನಿಸುತ್ತಾಳೆ. "ಮಗೂ, ಪರಮ ಪವಿತ್ರವಾದ ಭಾಗವತವನ್ನು ಹೇಗೆ ಬರೆದೆ?" ಕವಿಗಳು ನಿಧಾನವಾಗಿ ಹೇಳಿದರು "ಅಮ್ಮಾ, ವಾಸುದೇವನ ಲೀಲೆ ನಾಟಕದೋಪಾದಿಯಲ್ಲಿ ಮತ್ತೆ ತೋರಿಸಿದ". ತಾಯಿ

ಆಶ್ಚರ್ಯದಿಂದ ಕೇಳಿದರು. "ಅದು ಹೇಗೆ ಮಗು? ಎಂದೋ ನಡೆದ ಶ್ರೀ ಕೃಷ್ಣಲೀಲೆ ಕಾವ್ಯ ಬರೆಯುವಾಗ ಹೇಗೆ ನೋಡಿದೆ?" ಆನಂದಾಶ್ರು ಲೋಚನರಾದ ಕವಿವರ್ಯರು ಹೇಳಿದರು—"ಅಮ್ಮಾ ಭಗವಂತನನ್ನು ನಿನ್ನ ಲೀಲೆ ಮತ್ತೊಮ್ಮೆ ತೋರಬೇಕೆಂದು ಕಾಡಿ ಬೇಡಿದೆ. ಅವನ ಕೃಪೆಯಿಂದಾಗಿ ಅವನ ಲೀಲೆಯನ್ನು ನಾಟಕದ ದೃಶ್ಯಗಳೋಪಾದಿಯಲ್ಲಿ ಕಂಡೆ." ಭಕ್ತಿಯ ಪರಾಕಾಷ್ಠತೆಯಿಂದ ಮಗನನ್ನು ತಾಯಿ ಕೇಳಿಕೊಂಡರು—"ವಾಸುದೇವನ ಲೀಲಾವತಾರದ ಸುಂದರ ದೃಶ್ಯಗಳನ್ನು ಪಾಮರಳಾದ ನನಗೂ ತೋರಿಸ ಲಾರೆಯಾ ಕಂದಾ! ನನ್ನ ಮೋಕ್ಷಕ್ಕೆ ದಾರಿ ಮಾಡಿಕೊಡಲಾರೆಯಾ ನಾನು ನಿನ್ನ ತಾಯಿಯಲ್ಲವೇ ಮಗೂ ಈ ಭಾಗ್ಯವನ್ನು ಕರುಣಿಸಲಾರೆಯಾ? ಬಿಗಿದು ಬಂದ ಕಂಠದಿಂದ ಮಾತನಾಡಲಾರದವರಾಗಿ ಉತ್ತರವಿತ್ತರು "ಅಮ್ಮಾ ಇದು ಅವನ ಕರುಣೆಯಿಂದ ಮಾತ್ರ ಸಾಧ್ಯ ತಾಯಿ. ನಿನಗೋಸ್ಕರ ಭಗವಂತನ್ನು ಪ್ರಾರ್ಥಿಸುವೆ. ಭಕ್ತಾಭಿಮಾನಿಯಾದ ಅವನೇ ನಿಮ್ಮ ಇಚ್ಛೆ ಪೂರೈಸಲು ಶಕ್ತ" ಎಂದು ಹೇಳುತ್ತಾ ವಾಸುದೇವ! ಗೋವಿಂದಾ! ದಯಾಮಯ ನನ್ನ ತಾಯಿಗಾಗಿ ನಿನ್ನ ಲೀಲಾವಿನೋದಗಳ ಸುಂದರ ದೃಶ್ಯಗಳನ್ನು ಮತ್ತೊಮ್ಮೆ ನನ್ನ ಕೈಗಳಲ್ಲೇ ತೋರಿ ಅನುಗ್ರಹಿಸು ದೇವಾ! ಪ್ರಭು ಪ್ರಭು ಎಂದು ಮುಕ್ತ ಕಂಠದಿಂದ ಪ್ರಾರ್ಥಿಸಲಾಗಿ ಸುಂದರ ನಂದ ಗೋಕುಲದಲ್ಲಿ ಶ್ರೀಕೃಷ್ಣನ ಮುದ್ದು ಬಾಲ ಲೀಲೆಗಳನ್ನು ಕವಿವರ್ಯರ ತಾಯಿಯೂ ಮತ್ತು ಪತ್ನಿಯೂ ಕಂಡು ಇದೇ ವೈಕುಂಠ ದರ್ಶನವೆಂದು ಹೇಳಿ ದೇಹ ಭಾವ ಮರೆತರಂತೆ. ಪರಮಾತ್ಮನ ದಿವ್ಯ ಮಂಗಳ ಮೂರ್ತಿಯನ್ನೂ ಬಾಲಲೀಲೆಗಳನ್ನೂ ಕಂಡ ಅವರ ಮಾತೆಯೂ ಪತ್ನಿಯೂ ಇನ್ನೆಷ್ಟು ಧನ್ಯರು?

(೨) ಕವಿವರ್ಯರು ಜೀವಿಸಿದ್ದ ಕಾಲದಲ್ಲಿ ಒಮ್ಮೆ ಭಯಂಕರವಾದ ಕ್ಷಾಮ ಬಂತು. ಒಂದು ತಿಂಗಳಿಗಾಗುವಷ್ಟು ದವಸ ಧಾನ್ಯಗಳನ್ನು ಮಾತ್ರ ರೈತರು ಬೆಳೆದಿದ್ದರು. ಬಹಳ ಜನ ಮಕ್ಕಳನ್ನು ಪಡೆದಿದ್ದ ದೈವಭಕ್ತನಾದ ಬಡ ರೈತನೊಬ್ಬ ತನ್ನ ಹೆಂಡತಿ ಮಕ್ಕಳೊಡನೆ ಕಣದಲ್ಲಿ ರಾಗಿಯ ರಾಶಿಯನ್ನು ತೂರಿ ಶುದ್ಧಿಮಾಡದೆ ಸಂಜೆಯ ವೇಳೆ ತಮ್ಮ ಮುಂದಿನ ಜೀವನದ ಬಗ್ಗೆ ಚಿಂತಿಸುತ್ತಾ ನಿಟ್ಟುಸಿರು ಬಿಡುತ್ತಾ ಕುಳಿತಿದ್ದಾನೆ. ಜೀವನಾಧಾರವಾದ

ಧಾನ್ಯವಿಲ್ಲದಿದ್ದುದರಿಂದ ಗ್ರಾಮವನ್ನೇ ಬಿಟ್ಟು ಬೇರೆ ಊರಿಗೆ ಹೋಗಬೇಕೆಂದು ತನ್ನ ಹೆಂಡತಿ ಕೊಟ್ಟ ಸಲಹೆಯಂತೆ ರೈತ ತಾನು ಹುಟ್ಟಿ ಬೆಳೆದ ಮಮತೆಯ ಊರು ಬಿಡಲಾರೆನೆಂದು ಸಂಕಟಪಡುತ್ತಿದ್ದಾನೆ. ಅಷ್ಟರಲ್ಲಿ ಅವಧೂತರು (ಕವಿವರ್ಯರನ್ನು ಈ ಹೆಸರಿನಲ್ಲಿ ಊರಿನ ಜನ ಸಂಭೋದಿಸುತ್ತಿದ್ದರು) ತನ್ನ ಕಡೆಯೇ ಬರುತ್ತಿರುವುದನ್ನು ಕಂಡು ರೈತ ಜಗ್ಗನೆದ್ದು ನಮಸ್ಕರಿಸಿದ. ರೈತನ ಕುಟುಂಬದವರೂ ನಮಸ್ಕರಿಸಿದರು. ಒಮ್ಮೆ ಕಣವನ್ನೂ ರೈತನನ್ನೂ ನೋಡಿ "ಧಾನ್ಯವನ್ನು ಶುದ್ಧಿಮಾಡದೆ ಏಕೆ ಚಿಂತಿಸುತ್ತಾ ಸುಮ್ಮನಿದ್ದೀರಿ?" ಎಂದು ರೈತನನ್ನು ಪ್ರಶ್ನಿಸಿದರು. "ನಮ್ಮ ಬಡ ಕುಟುಂಬಕ್ಕೆ ಒಂದು ತಿಂಗಳಿಗೂ ಸಾಲದಾಗಿರುವ ಈ ಧಾನ್ಯರಾಶಿಯನ್ನು ಶುದ್ಧಿಮಾಡಿದರೆ ಪ್ರಯೋಜನವೇನು ಗುರುವೇ? ಇದೇ ಕಾರಣದಿಂದ ನಾವು ಈ ಗ್ರಾಮವನ್ನೇ ಬಿಡುವ ಯೋಚನೆ ಮಾಡುತ್ತಿದ್ದೇವೆ. ನಮಗೆ ಇನ್ನು ತಿರುಪೆಯೇ ಗತಿ" ಎಂದು ಗೋಳಾಡಿದ "ನನ್ನನ್ನೂ ನನ್ನ ಸಂಸಾರವನ್ನೂ ಉಳಿಸಿ ಕಾಪಾಡಿ ಗುರುವೇ" ಎಂದು ಬೇಡಿಕೊಂಡ. ಆ ಬಡ ಕುಟುಂಬದ ಬಗ್ಗೆ ಅವಧೂತರಿಗೆ ತುಂಬ ಸಂಕಟವಾಯಿತು. "ಗೋವಿಂದ! ಗೋವಿಂದ! ಶ್ರೀನಿವಾಸ! ಬಡ ಕುಟುಂಬವನ್ನು ಈ ಸಂಕಟದಿಂದ ಪಾರು ಮಾಡು ತಂದೆ" ಎಂದು ಒಂದುಕ್ಷಣ ತನ್ಮಯರಾಗಿ ನಂತರ ಬಹಿರ್ಮುಖರಾಗಿ "ಧಾನ್ಯಲಕ್ಷ್ಮಿ ಅಖಂಡವಾಗಿದ್ದಾಳೆ ಧಾನ್ಯವನ್ನು ಶುದ್ಧಿಗೊಳಿಸಿ! ದಯಾಮಯನಾದ ಭಗವಂತನ ಕೃಪೆ ಇದು" ಎಂದು ಕೂಗಿ ಹೇಳಿದರು. ದಿಗ್ಭ್ರಮೆಗೊಂಡ ರೈತನೂ ಅವನ ಕುಟುಂಬದವರೂ ಸುಮ್ಮನೆ ನಿಂತಿರಲು ತಾವೇ ಮೊರದಲ್ಲಿ ಧಾನ್ಯವನ್ನು ತುಂಬಿಕೊಂಡು ಶುದ್ಧಿಮಾಡಲು ಭಜನೆಗಳನ್ನು ಹೇಳಿಕೊಡುತ್ತಾ ಆರಂಭಿಸಿದರು. ನಂತರ ರೈತ ತಾನೂ ಮೊರದಲ್ಲಿ ಧಾನ್ಯ ತುಂಬಿಕೊಂಡು ಶುದ್ಧಿ ಮಾಡಲು ಅವಧೂತರು ಹೇಳಿಕೊಟ್ಟ ಭಜನೆ ಹೇಳುತ್ತಾ ಪ್ರಾರಂಭಿಸಿದ. ಮೊರಗಳಲ್ಲಿ ಧಾನ್ಯವನ್ನು ತುಂಬಿ ತುಂಬಿ ರೈತನ ಕುಟುಂಬವರ್ಗದವರೆಲ್ಲಾ ಕೊಡುತ್ತಿದ್ದಾರೆ. ರಾಶಿ ಅಕ್ಷಯವಾಗಿ ನಿಂತಿದೆ. ರಾತ್ರಿ ವೇಳೆಯಾದರೂ ಧಾನ್ಯ ಶುದ್ಧಿ ನಡೆಯುತ್ತಲೇ ಇದೆ. ಈ ಆಶ್ಚರ್ಯ ಪ್ರಸಂಗ ಕ್ಷಣಮಾತ್ರದಲ್ಲ ಗ್ರಾಮದಲ್ಲೆಲ್ಲಾ ಯಾರಿಂದಲೋ ಹಬ್ಬಿ ಗ್ರಾಮದ ಜನರೆಲ್ಲಾ ಓಡಿಬಂದು ಬೆರಗಾಗಿ ನೋಡುತ್ತಿದ್ದರು.

ಅನೇಕರು ಧಾನ್ಯ ಶುದ್ಧಿಮಾಡಲು ಮುಂದಾದರು. ಹೀಗೆ ಎಷ್ಟು ಜನ ಶುದ್ಧಿಗೈಯುತ್ತಿದ್ದರೂ ಧಾನ್ಯರಾಶಿ ಹಾಗೆಯೇ ಉಳಿದಿದೆ. ಊರಿನ ಜನತೆ ಭಕ್ತಿ ಭಾವ ಭಯಾಶ್ಚರ್ಯಗಳಿಂದ ಅವಧೂತರು ಹೇಳಿಕೊಡುತ್ತಿರುವಂತೆಯೇ ಹೇಳುತ್ತಿರುವ ಭಜನೆಯ ಶಬ್ದ ಭೋರ್ಗರೆಯುತ್ತಿದೆ ಗ್ರಾಮದ ಜನತೆಗೆ ಮುಂದಿನ ಬೆಳೆ ಬರುವವರೆಗೆ ಬೇಕಾಗುವಷ್ಟು ಧಾನ್ಯ ಶೇಖರಣೆಯಾದ ಅದ್ಭುತ ಪವಾಡ ಕಂಡ ಜನತೆ ಅವಧೂತರು ಹೇಳಿಕೊಟ್ಟ ಶಾಂತಿ ಮಂತ್ರ ದೊಂದಿಗೆ ಅವರ ಪದಧೂಳಿಯಲ್ಲಿ ಬಿದ್ದು ಹೊರಳಾಡಿ ಧನ್ಯರಾದರು.

(೩) ಗ್ರಾಮದ ಮನೆಯೊಂದರಿಂದ ಓರ್ವ ಕಟುಕನು ಮೋಸದಿಂದ ಒಂದು ಗೋವನ್ನು ಅಪಹರಿಸಿ ಅದನ್ನು ವಧಿಸಿ ಮಾಂಸಭಕ್ಷಣೆ ಮಾಡಿದ ಪ್ರಸಂಗ ವನ್ನು ಗೋವಿನ ಮಾಲೀಕನು ಅವಧೂತರಿಗೆ ವರದಿ ಮಾಡಿದ್ದು ಕೇಳಿ ಗೋವಧೆ ಗಾಗಿ ಸಂಕಟಪಟ್ಟು ಅವಧೂತರು ಕಟುಕನನ್ನು ಕರೆದು ಅವನ ಮೇಲೆ ಕೃಪಾ ದೃಷ್ಟಿ ಬೀರಿ “ಅಯ್ಯಾ ನಿನಗೆ ಮಾಂಸದ ಮೇಲೆ ಅಷ್ಟು ಆಸೆಯಾಗಿದ್ದರೆ ನನ್ನನ್ನೇ ಕೊಂದು ನನ್ನ ಶರೀರದ ಮಾಂಸವನ್ನಾದರೂ ತಿಂದು ಗೋವನ್ನು ಉಳಿಸಬಹುದಿತ್ತಲ್ಲಾ” ಎಂದು ಕಣ್ಣೀರಿಟ್ಟರಂತೆ. ತಾವು ವಾಸವಾಗಿದ್ದ ಗೋವಧೆಯಾದದ್ದು ಅವರ ಹೃದಯ ಹಿಂಡಿದಂತಾಗಿತ್ತು ಕಟುಕನಿಗೆ ಸದ್ಬುದ್ಧಿ ಗ್ರಾಮದಲ್ಲೇ ಕೊಡಲಾರೆಯಾ ದೇವ ಎಂದು ಎಳು ದಿನಗಳ ಪರ್ಯಂತ ಆಹೋರಾತ್ರಿಗಳು ಭಗವದ್ಭಜನೆ ಮಾಡತ್ತಾ ಗ್ರಾಮದ ಮುಂದಿನ ದೊಡ್ಡ ಅಶ್ವಥ್ಥ ವೃಕ್ಷದಡಿಯಲ್ಲಿ ಉಪವಾಸ ಹೂಡಿದರಂತೆ. ಮಗನು ಉಪವಾಸವಿದ್ದ ಪ್ರಯುಕ್ತ ಅವಧೂತರ ತಾಯಿಯೂ ಪತಿವ್ರತೆಯಾದ ಪತ್ನಿಯೂ ಸಹ ಉಪವಾಸ ಗೈದರಂತೆ. ಏಳನೇ ದಿನ ಬೆಳಗಿನ ಜಾವ ಕಟುಕನಿಗೂ ಅವನ ಹೆಂಡತಿ ಮಕ್ಕಳಿಗೂ ಶರೀರಾದ್ಯಂತ ಉರಿಯುಂಟಾಗಿ ಉಳಿಯಲಾರೆವೆಂದು ಗೋಳಿಡುತ್ತಾ ಅವಧೂತರ ಬಳಿ ಬಂದು ಮಣ್ಣಿನಲ್ಲೇ ಬಿದ್ದು ಹೊರಳಾಡಿ ದರು. ಇನ್ನು ಮುಂದೆ ತಮ್ಮ ಜನ್ಮಾರಭ್ಯ ಮಾಂಸ ಭಕ್ಷಣೆ ಮಾಡುವುದಿಲ್ಲ ವೆಂದೂ ತಮ್ಮ ಪ್ರಾಣಗಳನ್ನು ಉಳಿಸಿರೆಂದೂ ಪರಿಪರಿಯಾಗಿ ಬೇಡಿಕೊಂಡ ರಂತೆ. ನಂತರ ಅವಧೂತರಿಗೆ ಸಂತಸವಾಗಿ ಪರಮಾತ್ಮನಿಗೆ ಅಭಿಷೇಕ ಗೈದ ತೀರ್ಥವನ್ನು ಅವರಿಗೆ ಕುಡಿಸಲು ಕ್ಷಣ ಮಾತ್ರದಲ್ಲಿ ಅವರಿಗೆ ಉರಿ ನಿಂತಿತಂತೆ.

ನಂತರ ಕಟುಕನೂ ಅವನ ಕುಟುಂಬದವರೂ ಅವಧೂತರಿಗೆ ಋಣಿಗಳಾಗಿದ್ದ ರಂತೆ. ಅವರ ಜನ್ಮಾರಭ್ಯ ಮಾಂಸಭಕ್ಷಣೆ ಮಾಡಲಿಲ್ಲವಂತೆ.

(೪) ಒಮ್ಮೆ ಅವಧೂತರು ಪುಣ್ಯಕ್ಷೇತ್ರಗಳ ದರ್ಶನಗಳಿಗಾಗಿ ಹೊರ ಟರು. ಪುಣ್ಯಕ್ಷೇತ್ರಗಳಲ್ಲಿ ಪರಮಾತ್ಮನಿಗೆ ನಡೆಯುವ ಪೂಜಾದಿಗಳನ್ನು ನೋಡಲು ಒಬ್ಬೊಬ್ಬರೇ ಹೋಗುತ್ತಿದ್ದುದ್ದು ಅವರ ಮತ್ತೊಂದು ಇಚ್ಛೆ ಯಾಗಿತ್ತು) ಪುಣ್ಯಕ್ಷೇತ್ರಗಳಲ್ಲಿ ಹರಿಯುವ ಪವಿತ್ರ ತೀರ್ಥಗಳಲ್ಲಿ ಮಿಂದು ಪರಮಾತ್ಮನನ್ನು ಸ್ತುತಿಸುತ್ತಾ ದತ್ತಾತ್ರೇಯ ಜಯಂತಿಯ ದಿನ ಗಾಣಗ ಪುರಕ್ಕೆ ಬಂದರು, ತಮ್ಮದು ಆತ್ರೇಯಋಶ ಗೋತ್ರವೇ ಆದ್ದರಿಂದ ದತ್ತ ದೇವನ ಮೇಲೆ ವಿಶೇಷ ಭಕ್ತಿ ಇತ್ತು. ಭಕ್ತಿ ಪರವಶತೆಯಲ್ಲಿ ನದಿಯಲ್ಲಿ ಮಿಂದು ಆನಂದ ಭಾಷ್ಪಲೋಚನರಾಗಿ ದತ್ತನದರ್ಶನಕ್ಕಾಗಿ ಬಂದರು. ಇವರ ಪ್ರಭಾವವನ್ನರಿಯದ ಅರ್ಚಕನು ನಿನ್ನನ್ನು ನೋಡಿದರೆ ಸ್ನಾನಮಾಡಿ ಎಷ್ಟೋ ದಿನಗಳಾದಂತಿದೆ ನಿನ್ನನ್ನು ಒಳಗೆ ಬಿಡಲಾರೆ ಎಂದು ಅಡ್ಡಿ ಪಡಿಸಿದ ಪರ ಮಾತ್ಮನ ದರ್ಶನಲಾಭವಿಲ್ಲದುದಕ್ಕಾಗಿ ಹೃದಯ ಹಿಂಡಿ ಬಂತು. ಆಹಾರ ವನ್ನು ಸ್ವೀಕರಿಸದೆ ಪರಮಾತ್ಮ ! ಯಾವ ಅಪರಾಧಕ್ಕಾಗಿ ಈ ಶಿಕ್ಷೆ ಎಂದು ಪ್ರಾರ್ಥಿಸುತ್ತಾ ದೇವಾಲಯದ ಎದುರು ಭಾಗದಲ್ಲಿ ಭಗವಂತನ ದಿವ್ಯ ನಾಮ ಗಳನ್ನು ಕೊಂಡಾಡುತ್ತಾ ತನ್ಮಯತೆಯಿಂದ ಕುಳಿತುಬಿಟ್ಟರು. ರಾತ್ರಿಯಾ ಯಿತು. ದೇವಾಲಯದ ಬಾಗಿಲಿಗೆ ಬೀಗ ಹಾಕಿಕೊಂಡು ಅರ್ಚಕರು ಹೋದರು. ರಾತ್ರಿ ೧೨ ಘಂಟೆ ಸಮಯ. ಆನಂದದಿಂದ ಹೃದಯ ತುಂಬಿ ಬಂದಿದೆ. ಕಂಠ ಉಮ್ಮಳಿಸಿ ಬಂದು ಗದ್ಗದ ಸ್ವರದಲ್ಲಿಯೂ ಭಗವಂತನನ್ನು ಕೊಂಡಾಡುತ್ತಿದ್ದಾರೆ. ದೇವಾಲಯದ ಬೀಗ ಮುರಿದು ಬಿತ್ತು. ಬಾಗಿಲು ಗಳು ತಾವಾಗಿಯೇ ತೆರೆದವು. ದತ್ತದೇವನೆ ಸ್ವಯಂ ದೇವಾಲಯದಿಂದ ಅವಧೂತರ ಬಳಿ ಗೋವತ್ಸ ನ್ಯಾಯದಂತೆ ಓಡಿಬಂದ. ಭಕ್ತಿಯ ಆವೇಶ ದಲ್ಲಿ ಓಡಿಬಂದ ಅವಧೂತರು ದತ್ತದೇವನ ಕಾಲುಗಳನ್ನು ಭದ್ರವಾಗಿ ಹಿಡಿ ದರು. ವಧೂವರರನ್ನು ಸಂತೈಸಿ ದತ್ತದೇವನು ಭಕ್ತನನ್ನು ದೇವಾಲಯ ದೊಳಗೆ ಕರೆದೊಯ್ದು ಅತ್ರಿಋಷಿಗಳಾಶ್ರಮದಲ್ಲಿ ಮಾತೆ ಅನುಸೂಯಾ ದೇವಿಗೆ ತಾನು ಮಗನಾದ ದೃಶ್ಯವನ್ನು ಮತ್ತೆ ಭಕ್ತನಿಗೆ ತೋರಿಸಿದ. ಬೆಳ

ಗಾಗುವವರೆಗೂ ಅವಧೂತರು ದತ್ತದೇವನ ಬಳಿಯಲ್ಲಿಯೇ ಕಾಲಕಳೆದರಂತೆ. ಇತ್ತ ಅರ್ಚಕನಿಗೆ ಸ್ವಪ್ನದಲ್ಲಿ ಕೆನ್ನೆಗೆ ದತ್ತದೇವನಿಂದ ಚೆನ್ನಾಗಿ ಏಟು ಬಿದ್ದಿತಂತೆ. ತಕ್ಷಣ ಎಚ್ಚರಗೊಂಡ ಅರ್ಚಕನು ಅವಧೂತರ ಕ್ಷಮೆ ಯಾಚಿಸಲು ಓಡಿಬಂದನಂತೆ. ದೇವಾಲಯದಿಂದ ಆಗತಾನೆ ಹೊರಬರುತ್ತಿದ್ದ ಅವಧೂತರ ಕ್ಷಮೆ ಕೇಳಿದನಂತೆ. ಆ ದಿನ ಅವಧೂತರೇ ದತ್ತದೇವನನ್ನು ಅರ್ಚಿಸಿ ಆನಂದದಿಂದ ನರನಾರಾಯಣಾವತಾರದಲ್ಲಿ ದತ್ತಾತ್ರೇಯ ಅವತಾರವನ್ನು ತಾವು ಕಂಡಂತೆ ಬರೆದು ಸ್ವಾಮಿಯ ಚರಣಾರವಿಂದಗಳಿಗೆ ಅರ್ಪಿಸಿದರು.

(೫) ಕಾವ್ಯವನ್ನು ಧೃವಚರಿತ್ರೆಯವರೆಗೆ ಮುಂದುವರಿಸಿದರೂ ಪೀಠಿಕಾಧ್ಯಾಯದಲ್ಲಿ ೧೩ ಪದ್ಯಗಳನ್ನು ಮಾತ್ರ ಪ್ರಾರಂಭದಲ್ಲಿ ಬರೆದಿದ್ದ ರಂತೆ. ಧೃವಚರಿತ್ರೆಗೆ ಮಂಗಳ ಗೈದ ನಂತರ ಪೀಠಿಕಾಧ್ಯಾಯ ಪೂರ್ಣ ಮಾಡಬೇಕೆಂದು ಸಂಕಲ್ಪಿಸಿ ಶ್ರಾವಣಮಾಸದವರೆಗೆ ಕಾದಿದ್ದರು. ಮಾಸದ ಮೊದಲ ಮೂರು ಶನಿವಾರಗಳು ಕಳೆದುಹೋದರೂ ಅದನ್ನು ಪೂರ್ಣ ಗೈಯಲು ಸ್ಫೂರ್ತಿ ಬಂದಿರಲಿಲ್ಲ. ಕಡೆಯ ಶನಿವಾರವೂ ಬಂತು. ಮನೆ ದೇವರಾದ ಶ್ರೀನಿವಾಸನಿಗೆ ತಮ್ಮ ತಾಯಿ ಮಡದಿ ಮಕ್ಕಳಿಂದ ಕೂಡಿ ವಿಶೇಷ ಭಕ್ತಿಯಿಂದ ಅರ್ಚಿಸಿದ್ದಾರೆ. ಅಂದು ಹೇಗಾದರೂ ಸರಿ ಅಧ್ಯಾ ಯವನ್ನು ಬರೆದು ಮುಗಿಸಲೇಬೇಕೆಂದು ಕುಳಿತರು. ಲೇಖಣಿ ಹಿಡಿದು ಕುಳಿತರೂ ಸಹ ಸ್ಫೂರ್ತಿ ಇಲ್ಲದಾಗಿತ್ತು. ಒಳಗೆ ತಮ್ಮ ತಾಯಿ ಮತ್ತು ಮಡದಿ ಮಹಾ ನೈವೇದ್ಯದ ಅಡುಗೆಗೆ ಸಿದ್ಧಗೊಳಿಸುತ್ತಿದ್ದಾರೆ. ಭಗವಂತನು ಕೃತಿರಚಿಸಲು ಸ್ಫೂರ್ತಿ ಕೊಡಲಿಲ್ಲವಲ್ಲಾ ಎಂದು ದುಃಖಿಸು ತ್ತಿದ್ದಾರೆ. ಇದ್ದಕ್ಕಿದ್ದಂತೆಯೇ ಸ್ಫೂರ್ತಿ ಬಂದಂತಾಗಿ ೧೪ನೇ ಪದ್ಯದಲ್ಲಿ ಅರ್ಧ ಭಾಗ ಈ ರೀತಿ ಬರೆದರು :

ಅಮೃತಾಂಬುಧಿಯೆ ಸದನ ಮಾದವನ ಕೃಪೆಯಿಂದ
ಲಮೃತಮಂ ನಿರ್ಜರರ್ಗೆರೆದವನ ದಿವದಿಂದ
ಲಮೃತಮಂ ತಂಡವನ ನೇರ್ದವನ ಸಹಜದಿಂದಮೃತ ಜಾಂಬಕನಾದನ

ಆದರೆ ಕ್ಷಣ ಮಾತ್ರದಲ್ಲಿ ಸ್ಫೂರ್ತಿಯಡಗಿತಂತೆ. ದುಃಖದಿಂದ ಕೂಡಿದ ಅವಧೂತರು ತಮಗೆ ಏನೋ ಮೈಲಿಗೆಯಾಗಿರಬಹುದೆಂದು ಯೋಚಿಸಿ

ಮತ್ತೊಮ್ಮೆ ಸ್ನಾನಗೈದು ಶುದ್ಧರಾಗಿ ಬರಬೇಕೆಂದು ತೀರ್ಮಾನಿಸಿ ತಮ್ಮ ಹೆಂಡತಿಯನ್ನು ಕರೆದು "ಇಂದು ಬಹಳ ಪವಿತ್ರವಾದ ದಿನವಾಗಿದ್ದರೂ ನನಗೆ ಸ್ಫೂರ್ತಿ ಬರುತ್ತಿಲ್ಲ. ಸ್ನಾನಗೈದು ಶುದ್ಧನಾಗಿ ಬಂದು ಕಾವ್ಯರಚನೆ ಗೈಯುತ್ತೇನೆ" ಎಂದು ಹೇಳಿ ಮನೆಯಿಂದ ಹೊರಟುಬಿಟ್ಟರು. ಮರುಕ್ಷಣ ದಲ್ಲಿಯೇ ಮತ್ತೆ ಮನೆಗೆ ಬಂದರು. ಬಂದವರೇ ಲೇಖಣಿಯನ್ನು ಹಿಡಿದು ಕಾವ್ಯರಚನೆಗೆ ಮುಂದಾದರು. ಇದನ್ನು ಕಂಡ ಅವರ ಪತ್ನಿಯೂ ತಾಯಿಯೂ "ಇದೇನು ಇಷ್ಟು ಬೇಗ ಸ್ನಾನ ಮಾಡಿದ್ದಾಯಿತೇ" ಎಂದು ಅವಧೂತರನ್ನು ಪ್ರಶ್ನಿಸಿದರು. "ಸ್ನಾನಗೈಯಲು ಹೋಗುತ್ತಿರುವಾಗಲೇ ಕಾವ್ಯರಚನೆಗೆ ಸ್ಫೂರ್ತಿ ಬಂತು, ಸಂತೋಷದಿಂದ ಓಡಿ ಬಂದೆ" ಎಂದು ಹೇಳಿದವರೆ ಪದ್ಯದ ಉಳಿದರ್ಧ ಭಾಗವನ್ನು ಸರಸರನೆ ಬರೆದು ಪೂರ್ತಿ ಮಾಡಿ ಲೇಖಣಿ ಕೆಳಗಿಟ್ಟು ದಿಗ್ಗನೆದ್ದು ಹೊರಟುಬಿಟ್ಟರು. ಕಾವ್ಯ ಪೂರ್ತಿಯಾದುದಕ್ಕಾಗಿ ಸಂತೋಷ ಪಟ್ಟ ಅವಧೂತರ ಪತ್ನಿಯೂ ಮತ್ತು ತಾಯಿಯೂ ಇನ್ನೇನು ನೈವೇದ್ಯ ಸಿದ್ಧವಾಗಿದೆ ಮಹಾಮಂಗಳಾರತಿ ಮಾಡದೆ ಎಲ್ಲಿಯೋ ಹೊರಟಿರುವಿರಲ್ಲಾ ಎಂದು ಪ್ರಶ್ನಿಸಿದರು. "ನೀವು ಸಿದ್ಧಪಡಿಸಿಕೊಂಡ ಕೂಡಲೇ ಬಂದುಬಿಡು ತ್ತೇನೆ ಅಲ್ಲಿ ಯಾರೋ ಒಬ್ಬ ಭಕ್ತನು ನನ್ನನ್ನು ನೋಡಬೇಕೆಂದು ಕಾಯು ತ್ತಿದ್ದಾನೆ. ಹೊತ್ತಾದರೆ ಚಿಂತೆ ಪಡುತ್ತಾನೆ. ಈಗಲೇ ಬರುತ್ತೇನೆ" ಎಂದು ಬೇಗ ಬೇಗ ಮನೆಯಿಂದ ಹೊರಬಿದ್ದರು. "ಇಂದು ಶ್ರಾವಣ ಶನಿವಾರ ಊಟ ಕ್ಕಾಗಿ ಆ ಭಕ್ತನನ್ನೂ ಕರೆತನ್ನಿ" ಎಂದು ಹೇಳಿ ಇಬ್ಬರೂ ಒಳಗೆ ಹೋದರು. ಮರುಕ್ಷಣದಲ್ಲಿಯೇ ಪತ್ನಿಯನ್ನೂ ತಾಯಿಯನ್ನೂ ಅವಧೂತರು ಆನಂದ ದಿಂದ ಕೂಗಿ ಕರೆದರು. "ಸ್ನಾನ ಮಾಡುತ್ತಿದ್ದಂತೆಯೇ ನನಗೆ ಪದ್ಯದ ಉತ್ತರಾರ್ಧವು ಬಾಯಿಂದ ಹೊರಟಿತು, ಇದೋ ಓಡಿ ಬಂದೆ" ಎಂದು ಹೇಳಿ ಬರೆಯಲು ಕುಳಿತರು. ಅವಧೂತರ ಮಾತೆ ಮತ್ತು ಪತ್ನಿ ಆಶ್ಚರ್ಯ ಚಕಿತ ರಾದರು. ಅವಧೂತರ ಪತ್ನಿಯು "ಇದೇನು ಹೀಗೆ ಹೇಳುವಿರಿ ಸ್ವಲ್ಪ ಹೊತ್ತಿನ ಹಿಂದೆ ಸ್ನಾನಗೈಯಲು ಹೋದವರು ಮಾರ್ಗದಲ್ಲಿಯೇ ಸ್ಫೂರ್ತಿ ಬಂದಿತು ಎಂದು ಹೇಳಿ ಕಾವ್ಯ ಪೂರ್ತಿ ಗೈದು ಭಕ್ತನೊಬ್ಬನು ತಮಗಾಗಿ ಕಾದಿರುವನೆಂದೂ ನೈವೇದ್ಯ ಸಿದ್ಧಗೊಳಿಸಿಕೊಳ್ಳುವ ವೇಳೆಗೆ ಬಂದುಬಿಡುವು ದಾಗಿ ಹೇಳಿ ನೀವು ಹೋಗಲಿಲ್ಲವೆ? ಅಂತೂ ಕಾವ್ಯರಚನೆಯಲ್ಲಿ ಮೈಮರೆತ ನೀವು ಎಲ್ಲವನ್ನೂ ಮರೆತುಬಿಟ್ಟಿರಿ" ಎಂದರು. ಈ ಮಾತುಗಳನ್ನು ಕೇಳಿದ ಅವಧೂತರು "ಏನೆಂದೆ ನಾನು ಆಗಲೇ ಒಂದು ಕಾವ್ಯರಚನೆ ಗೈದೆನೇ?

ನಿನಗೇನು ಬುದ್ಧಿ ಕೆಟ್ಟಿತೆ ಈಗ ತಾನೆ ಸ್ನಾನಗೈದು ಬರುತ್ತಿದ್ದೇನೆ" ಎಂದರು. ಆಗ ಅವರ ತಾಯಿಯು "ಮಗು ನೀನು ಬಂದು ಕಾವ್ಯ ಬರೆದದ್ದು ನಾನೂ ನೋಡಿದೆನಲ್ಲ ಜ್ಞಾಪಿಸಿಕೊ" ಎಂದರು. ಭಯಾಶ್ಚರ್ಯಗಳಿಂದ ಕೂಡಿದ ಅವರು ಕಾವ್ಯವನ್ನು ತೆಗೆದು ನೋಡಿದರು. ಅಲ್ಲಿ ಹದಿನಾಲ್ಕನೆ ಪದ್ಯ ಈ ರೀತಿ ಪೂರ್ತಿಯಾಗಿದೆ :

ಅಮೃತಕರನಗ್ರಜೆಯು ನಾಳ್ದವನ ಶಾಶ್ವತದ
ಲಮೃತಸ್ವಭಾವ ತಾನಾದವನ ಬಗೆಗೊಂಬ
ರಮೃತ ವಾಕ್ಯದ ಫಲವನೆಣಿಸುವರೆ ತದ್ಭಾವನಾಮೃತದಿ ತೃಪ್ತಿವಡೆದು

ಆನಂದಾಶ್ರು ಲೋಚನರಾದ ಅವಧೂತರು ಗದ್ಗದ ಸ್ವರದಲ್ಲಿ ತಮ್ಮ ತಾಯಿ ಮತ್ತು ಪತ್ನಿಯನ್ನು ಕುರಿತು ಹೇಳಿದರು. "ನೀವೇ ಧನ್ಯಾತ್ಮರು. ಸಾಕ್ಷಾತ್ ಶ್ರೀನಿವಾಸನನ್ನು ಅನಾಯಾಸವಾಗಿ ಕಣ್ತುಂಬ ಕಂಡು ಮಾತನಾಡಿದಿರಿ. ಇಷ್ಟು ಕಾವ್ಯ ಬರೆದರೂ ಸ್ತುತಿಗೈದರೂ ಅವನು ನನಗೆ ಕಾಣಿಸಿಕೊಳ್ಳಲಿಲ್ಲ. ದೇವ ದೇವ ಈ ಕಿಂಕರನ ಮನೆಗೆ ಭಕ್ತ ಬಂಧುವಾದ ನೀನೇ ದಯಮಾಡಿಸಿದ್ದರೂ ನಿನ್ನನ್ನು ಕಂಡು ಪೂಜಿಸಲಿಲ್ಲ. ಪ್ರಭೂ, ಗೋವಿಂದ, ನಿನ್ನ ದಾಸನನ್ನು ಕ್ಷಮಿಸು ತಂದೆ" ಎಂದು ಗೋಳಾಡಿದರು. ಇತ್ತ ಅವಧೂತರ ಪತ್ನಿಯು ಗೋಳಿಡುತ್ತಾ ಪತಿಯ ಪಾದಗಳಿಗೆ ವಂದಿಸಿ "ನನ್ನನ್ನು ಕ್ಷಮಿಸಿ. ಚತುರ್ವೇದಗಳಿಗೂ ಅಗೋಚರನಾದ ಪರಮಾತ್ಮನೇ ಸ್ವಯಂ ತಾನೇ ಈ ಬಡವರ ಕುಟೀರಕ್ಕೆ ಬಂದರೂ ಅವನನ್ನು ಪೂಜಿಸದೆ ಬಿಟ್ಟುಬಿಟ್ಟೆವಲ್ಲಾ ಎಂತಹ ಕೆಲಸವಾಯಿತು ನಮ್ಮನ್ನು ಶ್ರೀನಿವಾಸನು ಕ್ಷಮಿಸುವನೇ" ಎಂದು ಕೇಳಿಕೊಳ್ಳುತ್ತಿದ್ದರು. ಗದ್ಗದ ಸ್ವರಗಳಿಂದ ಕೂಡಿದ ತಾಯಿಯೂ ಅವಧೂತರ ಬಳಿಗೆ ಬಂದು "ಕಂದ ನಿಮ್ಮಿಂದಾಗಿ ಆ ರೂಪದಲ್ಲಿಯಾದರೂ ಶ್ರೀನಿವಾಸನನ್ನು ಕಂಡೆ. ಇನ್ನು ನನಗೆ ಭವ ಬಂಧವಿಲ್ಲ, ಜರಾಮರಣವಿಲ್ಲ. ನಾನು ಜೀವನ್ಮುಕ್ತೆ ಜೀವನ್ಮುಕ್ತೆಯಾದೆ. ಮಗೂ ಏಳು ದೇವರಿಗೆ ಹಸಿವಾಗಿದೆ ನೈವೇದ್ಯಗೈದು ಮಹಾಮಂಗಳಾರತಿ ಬೆಳಗು" ಎಂದರು, ಎಲ್ಲರೂ ಎದ್ದರು. ಆನಂದಾಶ್ರುಲೋಚನರಾದ ಅವರೆಲ್ಲರೂ ಶ್ರೀನಿವಾಸನಿಗೆ ಮಂಗಳಾರತಿ ಬೆಳಗಿದರು. ಪರಮಾನಂದವಾಯಿತು. ಸಂತೋಷಭರಿತರಾದರು. ಭಕ್ತ ಮತ್ತು ಭಗವಾನರಿಗೆ ಜಯವಾಗಲಿ, ಮಂಗಳವಾಗಲಿ.

ಇತಿ ಸುಜನ ಪಾದಸೇವಕ,

ಶ್ರೀ ಕೇಶವಕೃಪ
ಜಯನಗರ ಬಡಾವಣೆ, ಬೆಂಗಳೂರು.

ಕೃಷ್ಣಶರ್ಮ
ಪರಾಭವ, ಫಾಲ್ಗುಣ ಬಹುಳ ಏಕಾದಶಿ.

ತಪ್ಪು- ಸರಿ ಪಟ್ಟಿ

(ಈ ತಪ್ಪುಗಳನ್ನು ತಿದ್ದಿಕೊಂಡು ಓದಬೇಕಾಗಿ ಕೋರಿಕೆ)

ಪುಟ	ಪದ್ಯ	ತಪ್ಪು	ಸರಿ
೧	೨	ದೀನಜನಸಂರಕ್ಷ	ದೀನಜನರಕ್ಷ
೪	೧೨	ಕಂಭಜಗೆ	ಕುಂಭಜಗೆ
೫	೧೬	ಕುಲುಷವುಂ	ಕಲುಷವುಂ
	೧೮	ಚರಿತೆಯನ	ಚರಿತೆಯೆನ
೧೦	೬	ನೆನಿಸಿತು	ನೆನಿಸುತು
೧೧	೧೦	ನಿಜಮುಂದರಂ	ನಿಜಮುಂದಿರಂ
೧೩	೧೭	ಮೆರೆದಪುದೆ	ನೆರೆದಪುದೆ
	೧೯	ತನ್ಮಾರ್ಗಮನುಳಿದು	ತನ್ಮಾರ್ಗಮನ್ನುಳಿದು
೧೫	೨೬	ನಾಳೀಕದವದನ	ನಾಳೀಕವದನ
೨೪	೬೦	ಗಜಫಟೆ	ಗಜಘಟೆ
	೬೧	ರುಲೂಕಮುಂ ಕರಡಿ	ರನುಲೂಖಮುಂ ಕಡಿ
	೬೨	ಬೆಳಗಳೀಂ	ಬೆಳಗಳಿಂ
೨೫	೬೪	ಮಿಗಿಲು	ಮಿಗಲು
೨೬	೭೧	ಅ ಪರಮ	ಆ ಪರಮ
೩೧	೯೦	ಕಡುವಳಿಕೆ	ಕಡುವಳಕೆ
೩೨	೯೨	ಕ್ಷುದ್ರರಪಮೆ	ಕ್ಷುದ್ರರುಪಮೆ
೩೬	೫	ರ್ಝೋಪಿನಿಂ	ರ್ಝೋಂಪಿನಿಂ
೪೪	೩೬	ವರ್ತನೆಗಂದ	ವರ್ತನೆಗಳಿಂದ
೪೫	೪೨	ತದ್ವೈಸೆರ	ತದ್ವೈಸರ
೪೬	೪೭	ಕೊಲಿಸಿದರ್ಭಕೆ	ಕೊಲಿಸಿದರ್ಭಕಗೆ

ಪುಟ	ಪದ್ಯ	ತಪ್ಪು	ಸರಿ
೪೭	೪೮	ಗೊಳಿಸಲಿಪ್ತುತ್ತು	ಗೊಳಿಸಲಿಪ್ಪುತ್ತು
	೫೦	ಲಾಭಂಸಮೋದದಿಂ	ಲಾಭಸಮ್ಮೋದದಿಂ
		ತಾನಾಡದುಂ	ತಾನಾದಡುಂ
೫೩	೭೨	ನಿಗಮವಿನದಂ	ನಿಗಮನಿನದಂ
೫೪	೭೮	ದಿಜ್ಞಾನಿನಿ	ದಿಜ್ಮಾನಿನಿ
		ಜ್ಞಾನನಿಧಿ	ಜ್ಞಾನನಿಧಿ
೬೮	೪೦	ಮುಕ್ತಿಸಕಿಯ	ಮುಕ್ತಿಸತಿಯ
೭೮	೮೨	ರಂಘ್ರಿಗೆರಗಿಡಡೆ	ರಂಘ್ರಿಗೆರಗಿದಡೆ
		ಸರಿಸಕ್ಕೆ	ಸರಿಸಕೆ
		ವಿಯವಿತರಣ	ವಿನಯವಿತರಣ
೮೧	೯೩	ಸಂಜೆವಿಣ್ಣಿಗೆ	ಸಂಜೆವೆಣ್ಣಿಗೆ
	೯೪	ಗಿರ್ದುಡುಂ	ಗಿರ್ದಡುಂ
೮೩	೧೦೨	ಸುರದೀನ	ಸುರನದೀ
೯೩	೨೫	ಜಾತುರಂಗ	ಚಾತುರಂಗ
೯೫	೩೫	ಆಕಟ	ಅಕಟ
೯೭	೪೨	ಬಳಿಕಲಮನೆಯ	ಬಳಿಕಲರಮನೆಯ
೧೦೨	೬೦	ಪೊದ್ದಿದದಿಶೆ	ಪೊದ್ದಿದರ್ದಿಶೆ
೧೦೬	೫	ಭವನಜನ	ಭುವನಜನ
೧೦೯	೧೯	ಲಿನ್ನೆಟವೊದಗದೆ	ಲಿನ್ನೆಡವೊದಗದೆ
೧೧೦	೨೩	ಜಿಗುರುಗೈ	ಚಿಗುರುಗೈ
೧೧೪	೩೬	ಬರುತೆರ್ದ	ಬರುತಿರ್ದ
೧೧೫	೪೩	ದೈವಮನೆ	ದೈವಮೆನೆ
		ದಾತನೆಂಬಂತಿರನ್	ದಾತನೆಂಬಂತಿರಲ್
೧೧೬	೪೪	ಜಾತಕಂಗಳ್	ಚಾತಕಂಗಳ್
೧೧೭	೪೯	ಚೆಲುವಾಂತದು	ಚೆಲುವಾಂತುದು
೧೨೦	೬೩	ಒಡಲುಚ್ಚುಮುಂದಿ	ಒಡಲುಬ್ಬುಮುಂದಿ

ಪುಟ	ಪದ್ಯ	ತಪ್ಪು	ಸರಿ
೧೨೪	೭೬	ವಂದಳೆದ	ಮುಂದಳೆದ
೧೩೩	೨೦	ತಮ್ಮೆದೆಗೆ	ತಮ್ಮೆಡೆಗೆ
೧೩೪	೨೫	ದತ್ತನುಕರ್ಣ	ದತ್ತನುವಿಕರ್ಣ
	೨೬	ಸ್ಕರಗಳಿಂ	ಸ್ವರಗಳಿಂ
೧೩೯	೪೪	ದುಮೃಗ	ದುರ್ಮೃಗ
೧೪೦	೪೮	ದುಳ್ಗಳಿಂ	ದುರುಳ್ಗಳಿಂ
		ಪೊಗೊನೆ	ಪೂಗೊನೆ
೧೪೧	೫೫	ಪೊರಡಿಯ	ಮೊರಡಿಯ
		ಮುಂಗಜಲಿಯ	ಮುಂಗುಲಿಯ
೧೪೪	೬೪	ಕೊಳುತಿಂದೆಂದು	ಕೊಳುತಿಂತೆಂದನು
೧೫೩	೨	ಹರರೂಪೆ	ಹರಿರೂಪೆ
೧೫೪	೬	ಸ್ಫಚಿಕ	ಸ್ಫಟಿಕ
೧೫೫	೮	ಭಿತ್ತಿಯನ್ನನುಗೆದು	ಭಿತ್ತಿಯನ್ನನುಗೈದು
೧೫೮	೨೨	ಮಹಿಮೆಯತೆಯಂ	ಮಹಿಮೆಯಳತೆಯಂ
೧೬೦	೨೮	ಸಸ್ಕ್ರುತು	ಸತ್ಕ್ರುತು
		ಸಜ್ಜರಿಗನುಗೈವ	ಸಜ್ಜನರಿಗನುಗೈವ
೧೬೮	೬೧	ವುರುಷ	ಪುರುಷ
೧೬೯	೬೭	ದಿಕ್ಪಾಬರೇಳಿಗೆ	ದಿಕ್ಪಾಲರೇಳಿಗೆ
೧೭೧	೭೨	ಭುಲೋಕ	ಭೂಲೋಕ
೧೭೩	೮೧	ಕಾದಿದುರ್ಸುರವ್ವೈರಿ	ಕಾದಿದರ್ಸುರವ್ವೈರಿ
೧೭೪	೮೪	ಚಕ್ರನ	ಚಕ್ರವ
೧೭೫	೩	ಲಕ್ಷ್ಮಿಯಿಂ	ಲಕ್ಷ್ಮಿಯಿಂ
೧೭೭	೮	ಬೆಂಬಿಡಡೆ	ಬೆಂಬಿಡದೆ
೧೭೮	೧೪	ರೋಚಿಪಳಿಂದೆ	ರೋಚಿಗಳಿಂದೆ
೧೮೦	೨೩	ಫನಭೂತವ್ವೈದ	ಫೆನಭೂತವ್ವೈದ
೧೮೧	೨೪	ಅನಿನಿಮಿಷರೆ	ಅನಿಮಿಷರೆ

ಪುಟ	ಪದ್ಯ	ತಪ್ಪು	ಸರಿ
೧೮೨	೩೧	ಸ್ವಾಧಿಯರ	ಸಾಧ್ವಿಯರೆ
೧೮೩	೩೩	ತಳೆದರು	ತಳಿದರು
೧೮೪	೩೯	ಮರದನಿಗಳಿಂ	ಮರದಿನಿಗಳಿಂ
೧೮೭	೪೯	ಫನಕುಂದ	ಫೆನಕುಂದ
	೫೧	ಸೊಂವೊರೆವ	ಸೊಂಪೊರೆವ
೧೯೩	೭೪	ದೊಸರುವುದೆನಿರ	ದೊಸರುವುದೆನಿಸ
೧೯೬	೮೫	ಪರಿಫಟಿತ	ಪರಿಘಟಿತ
೨೦೧	೧೬	ವೊಕ್ಕುಳಂ	ಪೊಕ್ಕುಳಂ
೨೦೨	೨೦	ಯಥೇಚ್ಛಾ	ಯಥೇಚ್ಛಾ
೨೦೪	೩೧	ಅವ	ಆವ
೨೧೧	೫೮	ಕರ್ಣಗಳ್	ಕರ್ಣಗಳೆ
೨೧೩	೬೬	ಫಟಿಮುಟಗ	ಘಟಿಮುಟಗ
		ತತ್ಪಕೃತಿ	ತತ್ಪ್ರಕೃತಿ
೨೧೮	೮೬	ಪಾವಿನುಬ್ಬಟೆ	ಪಾವಿನುಬ್ಬಟೆ
೨೨೦	೧	ಸ್ಫುರಿಪ	ಸ್ಫುರಿಪ
	೨	ಪರೀಕ್ಷಿನೃಪ	ಪರೀಕ್ಷಿನ್ನೃಪ
೨೨೨	೧೦	ಯನುಸೂಯೆ	ಯನಸೂಯೆ
	೧೧	ಅನುಸೂಯೆ	ಅನಸೂಯೆ
		ತಳುವಿಡಿದೆಮ್ಮ	ತಳುವಿದಡೆಮ್ಮ
೨೨೩	೧೨	ವಿಪ್ಣುರೂಪ	ವಿಷ್ಣುರೂಪ
	೧೩	ಪೋಪೆವಿನುಟ್ಟುದಂ	ಪೋಪೆವಿನ್ನುಟ್ಟುದಂ
	೧೪	ತಳಿಯುಳನುವಿನಿಂ	ತಳಿಯಲನುವಿನಿಂ
	೧೫	ಎಳರವೆಯು	ಎಳರಪಿಯ
೨೨೪	೧೬	ಭಾಷ್ಪದೊಳ್	ಬಾಷ್ಪದೊಳ್
	೧೭	ಶಿರೋವಮಾಲಗಳ್	ಶಿರೋಮಾಲಿಗಳ್
	೧೮	ಆಂಗ	ಅಂಗ

ಪುಟ	ಪದ್ಯ	ತಪ್ಪು	ಸರಿ
೨೩೨	೪೮	ಧಾರೆಣೆ	ಧಾರಣೆ
೨೩೩	೫೨	ತರೆಗಳ	ತೆರೆಗಳ
		ಮುಖಬಿಂಬಿಮಾದ	ಮುಖಬಿಂಬಮಾದ
೨೩೮	೭೪	ಲಘಿಲಮೆ	ಲಘಿಮೆ
೨೪೦	೮೧	ಜಘನದೆಡೆ	ಜಘನದೆಡೆ
೨೪೧	೮೪	ಯವಪುರುಷ	ಯುವಪುರುಷ
	೮೫	ವನಿತೆಯ	ವನಿತೆಯರ್
೨೪೮	೧೭	ಸುಪ್ರನನ್ನ	ಸುಪ್ರಸನ್ನ
೨೪೯	೨೨	ಪಾಥೆಯಂ	ವಾಥೆಯಂ
೨೫೦	೨೫	ನಕಾಣೆ	ನಾ ಕಾಣೆ
೨೫೨	೩೨	ಗೊಗೆ	ಗೊನೆ
೨೬೧	೭೦	ಮುಸುನಿ	ಮಿಸುನಿ
		ದೃಹಿಣ	ದ್ರುಹಿಣ
೨೬೩	೭೭	ಬಳಲುಮುಡಿ	ಬಳಲು ಮುಡಿ
	೭೮	ರಜ್ಜೆಗೆ	ರಚ್ಚೆಗೆ
೨೬೩	೭೯	ದುಗ್ದಾಬ್ಧಿ	ದುಗ್ಧಾಬ್ಧಿ
೨೬೪	೮೦	ದ್ರೃಹಿಣ	ದ್ರುಹಿಣ
	೮೩	ಬಲದು	ಬಲಿದು
೨೭೦	೧೩	ಸರ್ಪನೆಡೆ	ಸರ್ಪನಡೆ
	೧೪	ಕಳವಾಳ	ಕರವಾಳ
೨೭೫	೩೫	ವೊಳೆತುದಂ	ಮೊಳೆತುದಂ
೨೭೬	೩೭	ಸ್ಫುರಣಮನ್ನೈದಿ	ಸ್ಫುರಣಮನ್ನೈದಿ
೨೭೭	೪೨	ಬೆಳಸಿರ್ದ	ಬಳಸಿರ್ದ
೨೭೮	೪೫	ಬಲೆಗಳೆಯ	ಬಲೆಗೆಳೆಯ
೨೭೯	೪೯	ಜಾತಕಗಳ	ಚಾತಕಗಳ
೨೮೦	೫೩	ಧರಿಸಿಯುಂ ಬಳಸಿ	ಧರಿಸಿಯುಂ ಗಿರಿಗಳಂ ಬಳಸಿ

ಪುಟ	ಪದ್ಯ	ತಪ್ಪು	ಸರಿ
	೫೪	ಚೆಲುವಾಂತುದು	ಜೆಲುವಾಂತುದು
೨೮೪	೭೦	ನ್ನಶನಗೊಂಡುಮ	ನ್ನಶನಗೊಂಡುದು
		ಕಂಡಲಿಯ	ಕುಂಡಲಿಯ
೨೮೫	೭೨	ಯೋಗಿರಾಡ್ಛವ್ಯ	ಯೋಗಿರಾಡ್ಭಾವ್ಯ
		ದರ್ಜಿಸಿದನು	ದರ್ಚಿಸಿದನು
೨೮೭	೮೩	ಘೋರತರ	ಘೋರತರ
೨೮೮	೮೫	ಪೊರವಂಟ	ಪೊರವಂಟ
೨೯೧	ಸೂಚನೆ	ಸಸ್ನಾಹದಿಂ	ಸನ್ನಾಹದಿಂ
	೧	ಳಮಲದಿಂರೀಳಿಗೆಗ	ಳಮಲರಿಂಗೇಳಿಗೆಗ
೨೯೩	೧೦	ಜೈಸಿಯಂ	ಜೈಸಿಯುಂ
	೧೧	ಬೂಭಾರ	ಭೂಭಾರ
೨೯೪	೧೨	ಬೂಭಾರಮಂ	ಭೂಭಾರಮಂ
೨೯೭	೨೬	ಬಣ್ಪಿನಿಂ	ಬಿಣ್ಪಿನಿಂ
೨೯೮	೨೮	ಪಾಲ್ಲುಡಿಸಲು	ಪಾಲ್ಗುಡಿಸಲು
೨೯೯	೩೨	ರವಗಳೆದೆದಿರ್ದವು	ರವಗಳೆಸೆದಿರ್ದವು
೩೦೦	೩೬	ತೊಲದದ	ತೊಲಗಿದ
೩೦೩	೫೧	ಪಿಡೆದೆಳೆತರಲ್	ಪಿಡಿದೆಳೆತರಲ್
೩೦೪	೫೨	ಭೋಂಕಾರೆರವ	ಭೋಂಕಾರರವ
೩೧೦	೬	ಅಡಿಟಿಪ್ಪಣಿ, 1. ಡೆಕ್ಸ, ರಕ್ಷ	1. ದಡೆ, ದರೆ
೩೧೨	೧೪	ಪಲ್ಲಳಿರು	ಪಲ್ಗಳಿರು
೩೧೩	೧೬	ಸುಗಿಸಿದರ್	ಸುಗಿಸಿದರ್
	೧೯	ಕಿಡಿ	ಕಡಿ
		ಜೆಲ್ವರಿದು	ಚೆಲ್ವರಿದು
೩೧೫	೨೭	ದನುರ್ವೇದ	ಧನುರ್ವೇದ
೩೧೭	೩೨	ಡಾವಸಿರಿ	ಡಾವರಿಸಿ
೩೧೭	೩೪	ತುರುಗಖಂಡ	ತುರಗಖಂಡ

ಪುಟ	ಪದ್ಯ	ತಪ್ಪು	ಸರಿ
	೩೫	ಕಡೆಯೊಡೆದು	ಕಡಿಯೊಡೆದು
೩೧೮	೩೮	ಕ್ರೊಳುಗುಳುದಿ	ಕೊಳುಗುಳದಿ
೩೧೯	೪೩	ಪ್ರೊಹಸರ	ಪೂಹಸರ
೩೨೦	೪೭	ತದ್ಧ್ರುವ	ತದ್ಧ್ರುವ
೩೨೧	೪೮	ಸಮ್ಮುದಿಖ	ಸಮ್ಮುಖದಿ
	೪೯	ತೆಗೆದಚ್ಚ	ಕೆಗೆದೆಚ್ಚ
	೫೧	ನಿಚ್ಚಳಗೊಂಡು	ನಿಚ್ಚಳಗೈದು
೩೨೩	೫೩	ಹಿಂದಳವುತವು	ಹಿಂದಳಿವುತವ್ರು
೩೨೭	೭೩	ತಪೂಮಿರದು	ಪೂತಮಿರದು
		ಬಿಡುವುದಲೆ	ಬಿಡುವುದೆಲೆ

ವಿ ಷ ಯ ಸೂ ಚಿ ಕೆ

ಓಂ



ಶ್ರೀ ಭಗವಚ್ಚರಿತ್ರೆ

ಓಂ ಶ್ರೀ ಕೇಶವಾಯನಮಃ

ಹರಿಃ ಓಂ ಓಂ ಓಂ ಓಂ

ಶ್ರೀ ಗಣಪತಿ ಶಾರದಾ ಗುರುಭ್ಯೋ ನಮಃ

ಪೀಠಿಕಾಧ್ಯಾಯ

ಶ್ರೀರಮಣಿಯಳ ಮಂಗಳಾಂಗ ಲತೆಯಪ್ಪಿರುವ
ಚಾರು ಭುಜಶಾಖೆ ಕರಪಲ್ಲವಗಳೊಪ್ಪಿರುವ
ಭೂರಿವಿಜ್ಞಾನ ಸತ್ಪರಿಮಳವ ಪಸರಿಸುವ ಸುಮನೋನುರಾಗವೆಸೆವ
ಆರ್ಯೆಯೆ ಲಸದಮೃತ ಫಲಗಳನ್ನೀವ ಶೃಂ
ಗಾರತರ ಶೇಷಾದ್ರಿ ನಂದನಸ್ಥಿತ ಭಾರ್ಗ
ವೀರಮಣನಹ ವೆಂಕಟೇಶ ಸುರಭೂಜಮೆಮ್ಮಿಷ್ಟಪದಗಳನೀಯಲಿ ೧

ದೀನ ಜನ ಸಂರಕ್ಷನೇಕೋ ದೇವನೆಂದನಿಶ
ಗಾನಮಂ ಗೈವ ನಿಗಮೋಕ್ತಿ ನಿಶ್ಚಯದಲನು
ಮಾನಮೇಕಿನ್ನಿರುವರೈಸಲೇ ಪ್ರಹ್ಲಾದಕರಿದ್ರುಪದಜಾದ್ಯಮಿತರು
ಆ ನಿಶ್ಚಯವನಾಂತು ಶೇಷಾದ್ರಿವರಪದ
ಧ್ಯಾನಮನ್ನೊಳಗೆ ಬಲಿದಿರ್ಪೆನನವರತ ಮು
ನ್ನಾನತರನುದ್ಧರಿಸಿದಂತೆನ್ನ ಪೊರೆವನೆಂದೆಂಬ ನಂಬುಗೆಯ ವಹಿಸಿ ೨

ಶರಣಜನರಜ್ಞಾನತಿಮಿರಗಳ್ ತೆರಳುತಿರೆ
ವರಮೌನಿಜನರ ಹೃತ್ಪದ್ಮಂಗಳರಳುತಿರೆ
ಮೆರೆವ ವಿಜ್ಞಾನವಿಸಿಲೇರುತಿರೆ[1]....
ಚರಣತಲ ಕೋಕನದ ಕಾಂತಿ ಸಂಧ್ಯಾರಾಗ
ವೆರೆದ ಶೇಷಾಚಲಾವಾಸ ಪದ್ಮಾನಂದ
ಕರನುದಯವೆಮಗೀಯಲಮಲ ಸಮ್ಯಜ್ಞಾನ ಸಂಕಾಶಸಡಗರವನು ೩

ತುಹಿನಾದ್ರಿಜಾನನೋಜ್ಜ್ವಲ ಸುಧಾಕರನುದಯ
ಮಹಿಮೆಯಿಂದೇರ್ಗೊಂಬ ಶರಜನ್ಮನೆಲೆಯಪ್ಪ
ಬಹುಜೀವನಾಶ್ರಯಾಕರನೆನಿಪ ಸುರದೀರ್ಘಿಕಾಹಿಮಕರಂಗಳಾಂತ
ಸಹಜಮುಕ್ತಾಶ್ರಯಾತ್ಮಕನೆನಿಪ ಹಂಸಗಣ
ಸಹಿತ[1]ವಹ ವಿ[1]ಬುಧವಾಂಛಾಪ್ರದಾಯಕ ಶುಭಾ
ವಹನಪ್ಪ ಶಂಕರಾಮೃತಜಲಧಿ ಸರಸವಾಗ್ರತ್ನಂಗಳನ್ನೀವುದು ೪

ದೇವತೆಗಳನಿಬರ್ಗೆ ದೇವನದರಿಂ ಮಹಾ
ದೇವನೆನೆ ಪೆಸರಾದುದ್ದೈಸೆ ಗಾಯತ್ರಿಗಧಿ
ದೇವನಾದುದರಿಂದೆ ಭರ್ಗನೇ ಕುಲದೈವ ವಿಪ್ರಕುಲಕೆಂಬುದರಿದು
ಆ ವಿಮಲನಂಘ್ರಿಗಳನಂತರಂಗದೊಳು ಬಲಿ
ದಾವಗವು ಭಾವಿಸುವೆನದರಿನಿಂದಮಲಕರು
ಣಾವಲೋಕನದಿಂದಲೊದಗಿಸುವನಿಷ್ಟಮಂ ಶಂಕರಾಹ್ವಯನ್ನೈಸಲೆ ೫

ಯಾಚಿಪೊಡೆ ಧರ್ಮಮಂ ಧರ್ಮರಿಪುವೆನಿಸಿಹಂ
ಸೂಚಿಪೊಡೆ ಅರ್ಥಮಂ ಭಿಕ್ಷಾರ್ಥಿಯಾಗಿಹಂ
ವಾಚಿಪೊಡೆ ಕಾಮಮಂ ಕಾಮಾರಿಯೆಂಬುದನ್ನರಿದು ಕೇಳ್ವರೆ ಕುಶಲರು
ಈ ಚರಾಚರಕೆ ತಂಪನ್ನೆರೆವ ಲಸದಮೃತ
ಗೋಚಿಯಂ ಧರಿಸಿರ್ಪನದರಿನಿಂದಮೃತಪದ
ಯಾಚನೆಯೆ ಸಫಲಮಾದಪುದಲ್ಲಿ ಸಹಜಮೆಂದದನೆ ಬೇಡುವೆನಭವನಂ ೬

---

೩. [1]ಶೀಘ್ರಲಾನಗಳ ಪ್ರಕರಣ ಬಲಿಯಲು ; ಹಂಸಗತಿಗಾನಂದವೇರುತಿರಲು.
೪. ಕವಿ.

ಲಂಬಿಸಿದ ರುಚಿರಮಣಿಮಕುಟಮೇ ಶಿಖರ ದಾ
ನಾಂಬುಪ್ರವಾಹಮೆ ಲಸಜ್ಝರಿಗಳ ನಿಶಾನು
ಬಿಂಬಿಸಿದ ಕುಂಡಲದ ಮಣಿಮಿಳಿತ ಗಂಡಗಳೆ ರತ್ನಸಾನುಗಳೆನಿಸಿರೆ
ಲಂಬೋದರಾಲೋಲಯಜ್ಞೋಪವೀತ ಗಂ
ಗಾಂಬು ಪ್ರವಾಹಮೆನಿಸಿರೆ ಸುರಾಲಯದ ಬೆಡ
ಗಿಂಬಿಡಿದು ಸುಮನಸರ ಪೊರೆವ ನಿರ್ವಿಘ್ನದಾಯಕನೀಗೆ ಸನ್ಮತಿಯನು ೭

ಜಲಜಾತ[ಜಾ]ಮೋದಕಾರಿಯಂ ಸಂತತೋ
ಜ್ಜ್ವಲ ಹಂಸಗಣ ಸೇವ್ಯಮಾನೆಯನ್ನಮೃತಮಂ
ಜುಳಹೃದಯಳನ್ನನಿಮಿಷಾಗಾರೆಯಂ ಕುವಲಯಾನಂದವರ್ಧಿನಿಯುನು
ಕಲಿತ ಲಸದೂರ್ಮಿಕಾಕರೆಯನನವರತಮಂ
ಗಳಸುಪ್ರವಾಹೆಯಂ ಕಂಕಣಾಭರಣೆ ನಿ
ರ್ಮಲೆ ಸರಸ್ವತಿಯಹ ಸರಸ್ವತಿಯ ಭಜಿಪೆ ಕವಿಕುಲ ಜೀವನಪ್ರದೆಯನು ೮

ಕುಟಿಲಾಳಕಾಭ್ರದಿಂ ಕುಡಿನೋಟಮಿಂಚಿನಿಂ
ಪಟುಲಸದ್ಭ್ರೂ ಶಕ್ರ ಚಾಪದಿಂದನವರತ
ನಟಿಪ ಕಬರೀಮಯೂರೀ ಸಹಿತಮಾಗೆಸೆವ ಘನಮಹಿಮೆಯನ್ನಮರ್ಚಿ
ಚಟುಲವಿರಹಿತ ಸುವಿದ್ಯಾ ಸುಧಾಸಾರಮಂ
ಕುಟಿಲಮುಡಸದ ಸಾಧುಹೃದ್ದೇಶದೊಳ್ಕರೆವ
ನಟನೆಯೂ ಮನ್ಮತಿಗೆ ತೋರ್ಪುದಜರಾಣಿಯಜರಾನೀಕ ಪಕ್ಷತ್ರಾಣಿ ೯

ಅಚ್ಚರಿಂದವ್ಯಯ ಶ್ರುತಿಕಾಮಸುರಭಿಗಂ
ವತ್ಸರೂಪಾಗೆ ಸುವಿವೇಕವ ಸಮುನ್ವಿಸಲ್
ಸತ್ಸತ್ಕವಿತ್ವಸಾರಕ್ಷೀರಮಂಕರೆದು ಭುವನದಲನೇಕವಿಧದಿಂ
ಉಚ್ಚರಿಪ ಭಾಷಾವಿಶೇಷಪಾತ್ರಗಳಿಂದೆ
ಪೆಚ್ಚಿರುವ ವಿದ್ವಜ್ಜನರ್ಗೆರೆದು ತೃಪ್ತಿಯಂ
ಬೆಚ್ಚ ವಾಲ್ಮೀಕಿವೇದವ್ಯಾಸಶುಕಕಾಳಿದಾಸಾದ್ಯರಂ ಭಜಿಸುವೆಂ ೧೦

ಗುಡ ಪೂರ್ವಕೃತಪಕ್ವಮಾದೊಡಂ ಮತ್ತದರ
ಲಡಿಗೆ ಬಹುಭಕ್ಷ್ಯಗಳನನುಗೈವುತಿನಿಗೊಳಿಸು
ವಡುವಲಿಯ ಮಾಳ್ಕೆಯಿಂ ಪೂರ್ವಕವಿತಾಸಾರಮಿರ್ದೊಡಂ ತನ್ಮಹಿಮೆಯಿಂ
ಕಡುಜಾಣ್ಮೆಯಿಂದೆ ವಿಸ್ತರಿಸಲದರಿಂ ತೋಷ
ವಡೆಯರೇ ಸಜ್ಜನರು ಚಂದ್ರಿಕಾಸಾಂದ್ರಮಿರೆ
ಪಿಡಿದೀಪಮುಂ ನೆನೆವ ಪೆರ್ಮೆಯಿಂದೊಪ್ಪುಗೊಂಬುದು ಬುಧರ್ಮತ್ಕವಿತೆಯಂ ೧೧

ಅತ್ಯಧಿಕ ಮುಳಿಸಿನಂ ಸಾಗರವ ಪೀರ್ವ ತ
ತ್ಕೃತ್ಯಮದು ಕಂಭಜಗೆ ಸಹಜ ಮಾದಂತುಳಿದ
ಮರ್ತ್ಯರಿಂಗಕ್ಕುಮೇ ಭಾಗವತ ಹರಿಕಥಾಮೃತಶರಧಿಯಂ ಪೀರ್ವುದು
ಸತ್ಯವತ್ಯಾತ್ಮಜ ಶುಕಾದ್ಯರ್ಗೆ ಸಹಜ ತ
ದ್ಭೃತ್ಯಭೃತ್ಯಗ್ಗಳಾದೆವಗೆ ಸಲ್ವುದೆ ಬೊಗಸೆ
ಮಾತ್ರಮನ್ನಿಂಟೆ ದಾಹವ ಕಳೆವ ಪರಿಯಲುಸುರುವೆ ಮತಿಗೆ ತೋರ್ದ
ನಿತುಮಂ ೧೨

ವಿಷದಶನತಲ್ಪನಂ ವಿಮಲಸಂಕಲ್ಪನಂ
ವಿಷಹರಾರೂಢನಂ ವೇದತತಿಗೂಢನಂ
ವಿಷಕಂಠಮಿತ್ರನಂ ವಿಬುಧನುತಿಪಾತ್ರನಂ ವಿಷಪೂತನಾರಿ ಹರಿಯಂ
ವಿಷಯಾಬ್ಧಿಪೋತನಂ ವಿಜಯಪ್ರದಾತನಂ
ವಿಷಹೃದಯಶಿಕ್ಷನಂ ವಿಜಿತಾಕ್ಷಪಕ್ಷನಂ
ವಿಷಮಮತಿಗಳನು ಜರಿದಂಘ್ರಿವಿಡಿದರಿಗಿರದು ವಿಷವಾಕ್ಯದುಪಟಳಗಳು ೧೩

ಅಮೃತಾಂಬುಧಿಯೆ ಸದನಮಾದವನ ಕೃಪೆಯಿಂದ
ಲಮೃತಮಂ ನಿರ್ಜರರ್ಗೆರೆದವನ ದಿವದಿಂದ
ಲಮೃತಮಂ ತಂದವನನೇರ್ದವನ ಸಹಜದಿಂದಮೃತಜಾಂಬಕನಾದನ
ಅಮೃತಕರನಗ್ರಜೆಯನಾಳ್ದವನ ಶಾಶ್ವತದ
ಲಮೃತಸ್ವಭಾವ ತಾನಾದವನ ಬಗೆಗೊಂಬ
ರಮೃತವಾಕ್ಯದ ಫಲವನೆಣಿಸುವರೆ ತದ್ಭಾವನಾಮೃತದಿ ತೃಪ್ತಿವಡೆದು ೧೪

ಯತಿಗಣಗಳಿಂದೆ ಪೂಜಿತಮಾಗಿ ಭಾವಸಂ
ಗತಿ ವೃತ್ತಿಯಿಂದೆ ಸೇವಿತಮಾಗಿ ಛಂದೋನು
ಗತ ವಾಕ್ಯದಿಂದೆ ಸಂಸ್ತುತಮಾಗಿ ಲಸದಲಂಕಾರ ಗಂಭೀರಮಾಗಿ
ಸತತ ಷಟ್ಪದಿವರ್ಣಯುತಮಾಗಿ ನವರಸಾಂ
ಚಿತಕಳೆಗಳಿಂದೆ ಶೋಭಿತಮಾಗಿ ಸದ್ರಮಾ
ಪತಿಮೂರ್ತಿಯಂದಮಂ ಮೆರೆವ ಪ್ರಬಂಧಮನ್ನೊರೆವೆ ತತ್ಕರುಣಬಲದಿಂ ೧೫

ಜಲಹೃದಯನಿಕುರುಂಬಮಂ ವೇಗದಿಂದೆ ನಿ
ರ್ಮಲವನೆಸಗುವ ರಾಜಹಂಸಸಂದೋಹದು
ಜ್ಜ್ವಲವಿಲಾಸಾವಾಸಮಾಗಿರ್ಪ ಭುವನಗತ ಕುಲುಷಮಂ ಕಡೆಗೊಳಿಸುವ
ನಲವಿಂದೆ ಸರ್ವಲೋಕಾಳಿಗುರುಕಾಂತಿಯಂ
ಸುಲಲಿತ ಸುಖಂಗಳನ್ನನುಗೈವ ಕಾವ್ಯಮಂ
ಜುಲ ಶರತ್ಕಾಲಮಿದು ದ್ವಿಜರಾಜಮಂಡಲಕೆ ತೇಜೋನ್ನತಿಯನೆಸಗದೆ ೧೬

ಆ ಹರಿವಿಚಾರಮುಮರಿದೊಡಂ ಘನರಸಾ
ವಾಹ ಸಂಪತ್ಸಹಿತಮಾದೊಡಂ ಮಿಗೆ ಪಿರಿದು
ದಾಹದಿಂ ನಾನಾವಿಶೇಷ ಲೋಕದೊಳುಳ್ಳ ನವರಸಾಕಾಂಕ್ಷೆಯಿಂದೆ
ರೂಪಿಸುವ ಬಹುವರ್ಣ ಸಂಯುಕ್ತಮಾದ ಗೋ
ವ್ಯೂಹಗಳನೊಳಕೊಂಬ ಮಹಿಮೆಯಿಂದೊಪ್ಪುತಿಹ
ವಾಹಿನೀವರ ವಾಹಿನೀವರರ ಬೆಡಗಾಂತ ಕಾವ್ಯಮಿದನಾರೈವುದು ೧೭

ರಸರಹಿತ[ಮಾಗೆನುತ] ಮಣಿಮೌಕ್ತಿಕಂಗಳ
ನ್ನಸಿತಕಳೆಯಾಗೆ ಸಾಲಗ್ರಾಮ ಶಿಲೆಗಳಂ
ಪಸರಿಸುವ ಕರ್ಮಕ್ರಿಯಾರಹಿತಮಾಗೆ ತುರ್ಯಜ್ಞಾನದವಧೂತರಂ
ಲಸದಲಂಕಾರಭೂಷಣಗಣಗಳಿಲ್ಲಮೆಂ
ದೆಸೆವ ಯತಿವರ್ಯರಂ ಕಳೆವರೇ ಸುಜನರಂ
ತಸುರಾರಿ ಚರಿತೆಯನ[ಲೀಕೃತಿಯ] ಲೊಪ್ಪುವ ಚಮತ್ಕೃತಿಗಳಿರದಡೇನು ೧೮

---

೧೮. [1] ರಸರಹಿತ.

ಶ್ರುತಿಯು ಚತುರತ್ವದಿಂವರಸಿ ಕಾಣದೆ ತನ್ನ
ಚತುರತ್ವಮುಡಗಿ ಜಟೆಯಂ ವಹಿಸುತಿರಲು ವಾ
ಕ್ಪತಿ ಗರ್ವದಿಂದುದರಮಂ ಪೊಕ್ಕು ಹೆರೆಹಿಂಗಿ ಜಡಜಾತಮನ್ನೈದಲು
ಸತಿ ರಮಾದೇವಿ ವಕ್ಷವನ್ನೈದಿಯುಂ ತದು
ನ್ನತಿಯನರಿಯದೊಡೆ ವನಜಾತಮನ್ನೆರಗೆ ಮ
ನ್ಮತಿಮಾನಕಬ್ಬುವುದೆ ಹರಿಯ ಮಹಿಮಾಬ್ಧಿಯ[1][ನ್ನಳೆವುದೆಳ್ಳನಿತಿಸಳವೆ][1] ೧೯

ಕೊಳವಿಯಿಂ ರಾಗರಸರೀತಿಯಂ ಖಡ್ಗದಿಂ
ವಳವಿಯಂ ಗೆಲ್ದ ವಿಖ್ಯಾತಿಯಂ ಮರದ ತಿರು
ಗುಳಿಯಿಂದೆ ಕುಂಭಗಳ ಜಾತಿಯಂ ಹಲದಿಂದೆ ಹಲವು ಕೃಷಿಗಳ ಮಹಿಮೆಯಂ
ಅಳವಡಿಸಿ ತೋರ್ಪ ಚತುರರ ಪರಿಯ ವಹಿಸಿ ನಿ
ಶ್ಚಳನಸೂಚಿಯನಯಸ್ಕಾಂತ ಕುಣಿಸುವ ವೊಲಿ
ನ್ನೊಳಗಿರ್ದು ಪೇಳಿಸಿದನೀಕೃತಿಯ ಶೇಷಾದ್ರಿಯರಸ ಸರಸರ್ಮೆಚ್ಚಲು . ೨೦

ಅರ್ಕಬಿಂಬೋದಯವನೇ ಬಯಸಿ ತಿಮಿರಸಂ
ಪರ್ಕಕಳಲಿರ್ದ ಕಮಲಂಗಳಾ ರವಿಕಿರಣ
ತೋರ್ಕೆಯಿಂ ವಿಕಚತ್ವಮನ್ನೈದುತಾಮೋದ ಭರಿತಮಾಗದೆ ಮಾಣ್ಡಡೆ
ತರ್ಕಿಸುವೆನೆನ್ನ ಮನದೊಳಗಾನೆ ಸುಜನರೊಳ
ಗಿರ್ಕೆ ಭಾವಿಸುವ ಶೇಷಾದ್ರೀಶ ಚರಿತೆಯಾ
ವರ್ಕಜದ ಕೃತಿಯಿದಂ ನೋಡಿ ಸಂತಸಪಡದ ಬುಧರಿಳೆಯೊಳುಳ್ಳರೆಂದು ೨೧

ವಿಧುಬಿಂಬದುದಯದಿಂ ಕ್ಷೀರನಿಧಿಯುಬ್ಬದೊಡೆ
ಮಧುಮಾಸಪೂರಸಕೆ ಮಧುಪಂಗಳುಲಿಯದೊಡೆ
ಸುಧೆಯುಮರಿದಮರಗಣಮಾನಂದಮಾನದೊಡೆ ನವಮೇಘಬಿಂದುಚಯದ
ಮಧುರಮಂ ಚಾತಕಗಳೊಲ್ಲದೊಡೆ ಮೆರೆವ ನವ
ನಿಧಿಯಂ ಕುಬೇರನೊತ್ತರಿಸಿದೊಡೆ ರಂಜಿಸುವ
ಮಧುರಿಪುಚರಿತ್ರೆಯನ್ನರಿವಿಗರ್ಪಳಿವರಲ್ಲದೆ ಬೇರೆ ಪಳಿವರಿಹರೆ ೨೨

---

೧೯. [1]ನ್ನಳವಡುವಡೆನಿತಳವೆ; ನ್ನಳವುದೆಳದನಿತನಳವೆ.

ಕಲ್ಪತರುವಂ ಭಜಿಸಲದರ ನಿಜಗುಣದ ಸಂ
ಕಲ್ಪಸುಪ್ರದವಾದ ಮಹಿಮೆಯನ್ನುಳಿದು ಬಲಿ
ದಲ್ಪಮೇಧೆಯಲಿಂಧನವ ತರಿಯಲುಜ್ಜುಗಂಬಡೆವ ಕುಮತಿಗಳಂದದಿ
ಕಲ್ಪಶತಗಳನೊರೆದ ಹರಿಮಹಿಮೆ ಕವಿಗಳಿಂ
ಕಲ್ಪಿತಂಬಡೆಯೆ ಸಾರಗಳನುಳಿದೂಣೆಯುವ
ಕಲ್ಪಿಸುವ ಕುಜನರಿಂದೇನು ಕವಿತೆಗೆ ಕೊರತೆ ವ್ರಣವ ನೊಣನರಸುವಂತೆ ೨೩

ಮಥನಿಸದೆ ಮಲಯಜಮುದನುಲೇಪಕನುವಹುದೆ
ಮಥನಿಸದೆ ತಿಲವನದು ಬೆಳಗಿಗಿನ್ನೊಳವಹುದೆ
ಮಥನಿಸದೆ ಪುಂಡ್ರೇಕ್ಷುವಿನಿಗೆ ಸಾಧನೆಯಹುದೆ ಮಥನವೇ ಮುಖ್ಯಮದರಿಂ
ಮಥನಿಸದೆ ವಿದ್ಯಂಗಳರಿವಿಂಗೆ ನೆರವಹುದೆ
ಮಥನಿಸದೆ ಸತ್ಕಾವ್ಯ ಮತಿಗೆ ಸಾರಥಿಯಹುದೆ
ಮಥನಗೈದೀ ಕೃತಿಯೊಳೊರೆವ ಸಾರವ ಸವಿದು ಪೊರೆವುದುತ್ತಮಪುರುಷರು ೨೪

ಜೀವನೇ ಶಿಷ್ಯ ಪರಮಾತ್ಮನೇ ಗುರುವೆಂಬ
ಭಾವದಿಂದಾಂತರ್ಯದೊಳ್ ಭಜಿಪ ಭಕ್ತರ್ಗೆ
ತೀವಿದ ಅವಿದ್ಯಾಂಧಕಾರಮಂ ಸುಜ್ಞಾನಘನವೆಳಗಿನಿಂ ತೆರಳ್ಚಿ
ತಾವುಗಾಣಿಸಿ ನಿಜಾತ್ಮನ ನೆಲೆಯ ಪೊರೆದ ಗುರು
ದೇವ **ಹುಚ್ಚಾರೂಢ ಚಿನ್ಮಯಾನಂದನ** ಕೃ
ಪಾವಿಶೇಷದಲೊರೆದೆನೀ ಸುಪ್ರಬಂಧಮಂ ಬುಧರಿಗಂ ಮುದವೊದವಲು ೨೫

ಆದಿಗುರು[1]ವಹ[1] ವಿಷ್ಣು ಸ್ರಷ್ಟನ ವಶಿಷ್ಠನ
ನ್ನಾದರಿಸಿ ಶಕ್ತಿಯ ಪರಾಶರವ್ಯಾಸರಂ
ಶ್ರೀ ದಯಾನಿಧಿ ಶುಕಮುನೀಂದ್ರಗುಣಸಾಂದ್ರನಂ ಗೌಡಪಾದಾಚಾರ್ಯನಂ
ಬೋಧ ಗೋವಿಂದಭಗವಂತನುರುಶಾಂತನಂ
ವೇದವಿಚ್ಛಂಕರಾಚಾರ್ಯಗುರುವರ್ಯನಂ
ಸಾದರದಿ ಭಜಿಸಿ ತತ್ಕೃಪೆವಡೆದು ಪೇಳ್ದೆನೀ ಕೃತಿಯ ಶುಭಮತಿಯನಾಂತು ೨೬

---

೨೬. [1] ಶಿವ.

ಸುಜನಸೇವೆಯಲಿ ಪರಿಣಮಿಸಿ ಸದ್ಗುರುಪದಾಂ
ಬುಜವ ನೆರೆ ಸಾರ್ದು ತನ್ನಿಯಮಿತತದುಕ್ತಿಗಳ
ಭಜನೆಯಿಂ ವಿಜ್ಞಾನಸಮನ್ನೈದಿದಾತ್ರೇಯಸಗೋತ್ರ ಋಕ್‌ಶಾಖೆವೆರೆದ
ದ್ವಿಜವರ್ಣಜಾತ ನಾಗರಸಾಖ್ಯಪೌತ್ರ ಹೃ
ದ್ವಿಜಯ ಚಿಕ ಹೆಜ್ಜಾಜಿ ವೆಂಕಟಾಹ್ವಯಪುತ್ರ
ವಿಜಯ ವೆಂಕಟರಮಣಕವಿಮುಖದೊಳುಸುರಿದಂ ಬಿಸಜಾಕ್ಷ
ನೀಕೃತಿಯನು ೨೭

ಪರಮಮಂಗಳಮೂರ್ತಿ ಪಾವನಾಮಲಕೀರ್ತಿ
ನಿರುಪಮಾನಂದಮಯ ನೀಲಮಂಜುಳಕಾಯ
ವರರಮಾವೃತವಕ್ಷ ವಾರಿಜಾಸನಪಕ್ಷ ವೈಭವಪ್ರದಕಟಾಕ್ಷ
ಸರಸಸದ್ಗುಣಧಾಮ [1]ಸದಯಹೃನ್ನಿಧಿಸೋಮ[1]
ಕರುಣಾಮೃತಾಂಬೋಧಿ ಕಾಲಕೃತಕವಿಭೇದಿ
ಶರಣುಹೊಕ್ಕೆನು ದಾಸ ಸಲಹೆನ್ನ ಬಿಡದನಿಶ ಶೇಷಗಿರಿ ವೆಂಕಟೇಶ ೨೮

ಅಂತು ಅಧ್ಯಾಯ ೧ಕ್ಕಂ ಪದನು ೨೮ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ

---

೨೮. [1]ಸದಯ ನಿಧಿ ಸ್ತೋಮ.

೨. ವರ್ಣಾಶ್ರಮ ಧರ್ಮ

ಸೂಚನೆ:

ಬಾದರಾಯಣಶಿಷ್ಯನೆನಿಸಿದ ಸುಮಂತನ।
ನ್ನಾದರಿಸಿ ವರ್ಣಾಶ್ರಮಾಚಾರಧರ್ಮಗಳ।
ನಾದಯಾನಿಧಿಯಿಂದೆ ಕೇಳಿದಂ ಜನಮೇಜಯಾಧಿಪಂ ಪ್ರೀತಿ ಮಿಗಲು॥

ಉರ್ವಿತಲಮೆಂಬ ಪಟ್ಟಣಕೆ ಲೋಕಾಲೋಕ
ಪರ್ವತಮೆ ಸಾಲಾವಲಯಮಾಗಿ ರಂಜಿಸೆ ಸು
ಪರ್ವರೇ ತತ್ಪಾಲನೆಯ ಜನರು ಶರಧಿಗಳೆ ಪರಿಧಿಗಳು ರವಿಚಂದ್ರರೆ
ಸರ್ವದಾ ಸಂಚರಿಸಿ ಪಾರಿಯಂ ತಿರುಗುತಿರೆ
ಗೀರ್ವರನೆ ತತ್ಪುರಾಧಿಪನಾಗಿ ಸತತವು ಚ
ತುರ್ವಿಧದ ಜೀವಜಾತಂಗಳಂ ಪಾಲಿಸುತ್ತಿರ್ದ ಹರಿಯಾಜ್ಞೆಯಿಂದೆ ೧

ಈ ವಿಶೇಷಣದ ಭೂಪುರ ಮಧ್ಯದೇಶದೋಳ್
ತೀವಿದುದು ವಿಮಲಜಂಬೂದ್ವೀಪವಮಿತ ಪರು
ಠಾವದಿಂ ಮೆರೆವ ರಾಜಾಲಯದ ಸೊಬಗಿನಿಂ ತನ್ಮಧ್ಯ ದೇಶದೊಳಗೆ
ದೇವಾದ್ರಿ ರನ್ನದುಪ್ಪರಿಗೆಯೆನೆ ಧ್ರುವಪುರಿಯ
ನಾವರಿಸಿದುನ್ನತಿಕೆಯಿಂ ಸತ್ಯನಗರದಿಂ
ದಾ ವಿಧಿಯು ಭೂತಲಕ್ಕಿಳಿತರಲ್ ಕನಕಸೋಪಾನಮಂ ಬಲಿದಂತಿರೆ ೨

ತರಣಿಯುನ್ನತಿಯ ಸೈರಿಸದೆ ರಕ್ಕಸರು ತ
ತ್ಕಿರಣಗಳ ಸೋಹಿ ಪಿರಿ[1]ದೊಟ್ಟಿಲಾಡಿ[1]ದರೆನಲು
ಹರನ ಸಖ್ಯದ ಮಹಿಮೆಯಿಂ ಕುಬೇರನ ವಿತ್ತರಾಶಿ ಬೆಳೆದುಬ್ಬಿತೆನಲು
ಮೆರೆವ ಸೃಷ್ಟಿಗೆ ತಾನೆ ಕರ್ತೃ ಬೇರಿಲ್ಲವೆನೆ
ಸರಸಿಜಾಸನ ಬಲಿದ ಪೊಂಜಯಸ್ತಂಭಮೆನೆ
ಸಿರಿವಿಲಾಸದ ರನ್ನದುಪ್ಪರಿಗೆಯೆಂಬಂತೆ ಕನಕಾದ್ರಿ ಕಂಗೊಳಿಸಿತು ೩

---

೩. [1]ದಟ್ಟನೊರಸಿ.

ಹೇಮಗರ್ಭಂ ಸುಪರ್ವಾಲಯಂ ಸತತ ಸು
ತ್ರಾಮಾದಿ ದಿಕ್ಪಾಲಸೇವಿತಂ ಸದ್ವಂಶ
ರಾಮಣೀಯಕ ಶುಕ ಭರದ್ವಾಜ ಮುಖ ಸುದ್ವಿಜಾವೃತಂ ಪ್ರತಿದಿನದೊಳು
ಸೋಮಸೂರ್ಯ ಪ್ರದಕ್ಷಿಣೆಯನಾನುವ [ವೊಲು]
ದ್ದಾಮ ಮಹಿಮೆಯನಾಂತು ವಸುಧೆಗಾಧಾರದಿಂ
ತಾಮರಸಪೀಠನಿರವಂ ಪೋಲ್ದು ಮೇರುನಗವೊಪ್ಪಿರ್ದುದತಿಶಯಮೆನೆ ೪

ಮುಂಡೆಯೊಳ್ ಮಂದಾಕಿನಿಯ ವಹಿಸಿ ಗಳದಲೆಡೆ
ಗೊಂಡ ನಾಗಂಗಳ ವಿಹಾರದಿಂ ಶಿವಗಣೋ
ದ್ದಂಡಕೆಡೆಗೊಟ್ಟು ಸುಂದರ ಗುಹಾಶ್ರಯನಾಗಿ ತಾಪಸಾಲಯನೆನಿಸುತ
ಕೆಂಡಗಣ್ಪಂಚಾಸ್ಯಶೋಭೆಯಿಂದರೆವೈಯ
ಲುಂಡಿಸಿದ ಮೃದುಲತಾಪರ್ಣಾನುರಾಗದಿಂ
ಖಂಡಪರಶುವಿನ ಮಹಿಮೆಯನಾಂತ ಮೇರುಗಿರಿಯೆಸೆದುದಾಗಸವ ತುಡುಕಿ ೫

ನೀಲಕಂಠಾನಂದಕರನೆನಿಸಿತುಜ್ವಲಾ
ಲೋಲಲೋಹಿತ ಕಾಂತಿಯುತನೆನಿಸುತೆಸೆವ ವನ
ಜಾಲಮುನ್ನಾಂತು ತನ್ಮಹಿಮೆಯಿಂ ನೀಲಾಂಗನೆನಿಸುತುನ್ನತಿಕೆಯಿಂದೆ
ಆ ಲಸದ್ವಿಷ್ಣುಪದಚುಂಬಿಯಾಗುತ ದೃಷ
ನ್ಮಾಲೆಗಳನಳವಡಿಸಿ ಸರ್ವದಾ ಸಾರಂಗ
ಪಾಲನೆಯನಾಂತ ಸುಂದರಕನಕ ಜಿಮೂತ ಜೀಮೂತದಂತೆಸೆದುದು ೬

ಪರಿಕಿಸುವಡಷ್ಟಾಪದ ಸ್ವಭಾವಿಕವಾಗಿ
ಮೆರೆದಿರ್ದೊಡಂ ಮಹೋನ್ನತಿಯೆನಿಸಿ ಸತತ ರು
ಗ್ಭರಿತವಾಗಿಯು ಧಾತುಪುಷ್ಟಿ ಸಂಶೋಭಿತದಿ ನಿಜಸುರಾಲಯವಾದೊಡಂ
ವರತಪೋಜನರ ಕೋಶಮದೆನಿಸಿ ಮಾತಂಗ
ನೆರವಿಗೆಡವಾದೊಡಂ ಶತಯಾಗಸದನವಾ
ಗಿರುತವು ಸದಾ ಕಂಟಕಗಳಾಂತು ಚಿರತೆಯಿಂ ಮೆರೆವ ಪೊಂಗಿರಿಯೆಸೆದುದು ೭

ಗಗನದೊಳ್ ಚಂದ್ರಕಾಂತಾಲಂಕೃತದಿ ಮಹೋ
ರಗಪತಿಯ ತೆರದಿ ಭೂಧರನಾಗಿ ಭೂಮಿಪನ
ಸೊಗಸಿನಿಂ ಮಹಿಷೀಸಮನ್ವಿತದಿ ಸಾಕೇತದಂತರ್ಕ ವಂಶಸಿರಿಯಂ
ನೆಗಳಿಚುತ ರವಿಯಂತೆ ಘೃಷ್ಣಿ ಸಾಸಿರದಿ ಯಮ
ನಗರದಂದದಿ ರೌರವಾಧಾರಮೆನಿಸುತಂ
ಮಗಧಾರಿಯೆನೆ ವೃಕೋದರನಾಗಿ ತದ್ರತ್ನಸಾನು ಪರಿಶೋಭಿಸಿದುದು ೮

ವರಶೃಂಗ ಸಂಯುತಂ ವೃಷನಲ್ಲ ಪಂಚಾಸ್ಯ
ಧರನಹುದು ನಂದಿಕೇಶ್ವರನಲ್ಲ ಶಾರ್ದೂಲ
ಕರರುಹಾನ್ವಿತ ಸುಪ್ರದೇಶಮಹುದರ್ಭಕರ ಕಂಠಪ್ರದೇಶಮಲ್ಲ
ಗುರುನಿತಂಬಗಳಮರಿಯುಂ ಸತಿಯರಿರವಲ್ಲ
ಶರಜನ್ಮನೆಲೆಯಹುದು ಶರ್ವಾಣಿಯಲ್ಲಮಿ
ನ್ನರಿಯೆ ಪಾದಂಗಳೆರಗಿರ್ದೊಡಂ ಸಂಚಾರಿಯಲ್ಲಮೆನಿಸಿತು ಸುರಾದ್ರಿ ೯

ಅಕಳಂಕ ಫಲನಿಕರ ಜನಕಂಗಳಾಗಿರ್ಪ
ಸಕಲಾಗಮಾಳಿ ಸಂಸೇವ್ಯನಾಮೋದಕಾ
ರಕನನಿಶ ಸುಮನಸ್ಸಮೂಹ ನಿಜಮಂದರಂ ಕಮಲಗರ್ಭಂ ನಿರುತಮುಂ
ಪ್ರಕಟದಿಂ ನಿಜವಂಶ ಸಂಸೇವ್ಯ ಪಾದ ಗೋ
ನಿಕರ ವಿಶ್ರಮದೇಶನಚಲಸುರುಲೋಕಪಾ
ಲಕನೆನಿಸಿ ಮೆರೆವ ಶ್ರೀಹರಿಯ ಬೆಡಗೆಂಬಿನಂ ಮೇರುನಗಮೆಸೆದಿರ್ದುದು ೧೦

ಕುಮುದ ಬಾಂಧವನಂತೆ ಪುಷ್ಯರಾಗಾನ್ವಿತದಿ
ಕಮಲಾಕರೋಪಮದಿ ಪದ್ಮರಾಗಾನ್ವಿತದಿ
ಸಮನಿಸಿದ ಕಪಿಸೇನೆಯಂದದಿಂ ನೀಲಸಂಗತಮಾಗಿ ಶರಧಿಯಂತೆ
ಅಮರಿದ ಸುಮುಕ್ತಾಶ್ರಯ ಸ್ಥಾನಮಾಗಿ ಲಸ
ದಮರವತಿಯಂತೆ ವಜ್ರಪ್ರಭಾ ಮಂಡಿತದಿ
ವಿಮಲತರ ಮಣಿಕಾಂತಿಯಿಂ ವಿರಾಜಿಸಿತು ನಗರತ್ನಸಾನುವದೈಸಲೆ ೧೧

ವನಮಧ್ಯವಾಸಿ ನಗವಾಹಿ ಸತತವರಾಹ
ತನುಧಾರಿ ಸಿಂಹಮುಖಶೋಭಿ ಸುದ್ವಿಜ ಲೀಲೆ
ಯನುವಾಂತ ಸರಧಿ ಭೃಗುವಂಶಪಾಲನ ಸುಮತಿ ಕಪಿಲಾಶ್ರಯಾಮೂರುತಿ
ವಿನುತವಸುದೇವ ನಂದನ ಮಹೋನ್ನತಿ ಮಹಾ
ತ್ಮನು ದಿಗಂಬರಭರಿತ ಕೀರ್ತಿಸಂಯುತನು ಪಾ
ವನತರದ ಗಂಧರ್ವಯುತನೆನಿಸಿ ಹರಿದಶಾಕೃತಿಯಲೆಸೆದುದು ಸುರಾದ್ರಿ ೧೨

ಕಂದರ್ಪಹರನ ಧನುವಿಲ್ಲಿ ಕಾಮನ ಎಲಗ
ಮುಂದೋರದೆಂದೆರಗೆ ಯೋಗಿಗಳ್ ಕಾಲನಂ
ಕೊಂದವನ ಜಟೆಯುವನ ಮಾಲೆಯಿಹುದಿಲ್ಲಿ ಯಮುನಾಟಗಳ್ ನಾಟವೆಂದು
ಪೊಂದಿರೆ ವಿರಾಗಿಗಳ್ ಸೂರ್ಯಚಂದ್ರರ ಬಳಸಿ
ನಿಂದ ಕತ್ತಲೆಯೆರಗದೆಂದು ಸುಜ್ಞಾನಿಗಳ್
ಸಂದಿರಲ್ ಹರಿಹರರ ಸದನಮೆನೆ ಭಕ್ತಜನರೆರಗಿಹರ್ಸುರಗಿರಿಯೊಳು ೧೩

ಅರುಣಪಲ್ಲವಪಾಣಿಯರ್ ಕುಸುಮಗುಚ್ಛ ಪೀ
ವರ ಪಯೋಧರೆಯರೊಪ್ಪುವ ಕಲಿತರದನೆಯರ್
ಸುರುಚಿರಾಲೋಲ ರೋಲಂಬ ನೀಲಾಲಕಿಯರೆಸೆವ ಪತ್ರಾಳಿಯುತರು
ಮೆರೆವ ಕಲಕಂಠ ಕಂಠಾರಾವೆಯರ್ಸದಾ
ಮರುದಾಳಿ ಸಮ್ಮೋದಕರೆಯರಾವಗ ದೇವ
ತರುಣಿಯರ್ಶೋಭಿಸಿದರೆಸೆವ ಸುಂದರಲತಾಕನ್ನೆಯರ ಸೊಬಗನಾಂತು ೧೪

ಅಂಬರದಲ್ಲೆತಪ್ಪ ಶಶಿಗತ ಕುರಂಗಮುಂ
ಮುಂಬೆಟ್ಟದೊಳಗಿರುವ ಪುಲ್ಲೆಗಳ್ಕಂಡು ಕಿವಿ
ಕೊಂಬುಗಳನಿಗುಚಿ ಕಾಲ್ಗೆರೆದು ಕಾದಲ್ಕುಜ್ಜುಗಂಗೊಂಬವಾ ತಿಂಗಳ
ಬಿಂಬ ಮುಖಸರಿಸಕ್ಕೆತರೆ ಪ್ರೇಮದಿಂ ಸುರನಿ
ತಂಬಿನಿಸುರೆರಗಿ ಕನ್ನಡಿಯೆಂದು ನೋಡುವ
ರ್ನುಂಬರಿವ ತಾರೆಗಳ ಹಾರಮೆನೆ ತುಡುಕುವರ್ತನ್ನಗೋನ್ನತಿಯದೆಂತೋ ೧೫

ಕುಜಮಯಂ ವಾರಿವಾರಿಜಮಯಂ ಗೋಮಹಿಷ
ಗಜಮಯಂ ಸುರವಧೂವ್ರಜಮಯಂ ಸನ್ಮೃಗಾಂ
ಡಜಮಯಂ ಮಧುರ ಮಲಯಜಮಯಂ ಸೇರ್ದ ಗಜಬಜಮಯಂ ತಪದಲೆಸೆವ
ದ್ವಿಜಮಯಂ ಪಶುಬಂಧದಜಮಯಂ ನಿಬಿಡನಾ
ಕಜಮಯಂ ಬಗೆಗೊಳಲ್ಕಜರುದ್ರವಿಷ್ಣುಗಳ
ನಿಜಸದನಮೆನಿಸುತ್ತಲಜರಗಿರಿ ಚೆಲುವಿನಿಂ ತ್ರಿಜಗದ್ವಿಭವಮೆಸಿಸಿತು ೧೬

ಆ ಮೇರುಗಿರಿಯ ದಕ್ಷಿಣದಿಙ್ಮಹೀತಲದ
ಸೀಮೆಯೊಳ್ ರಾಜಿಸಿತು ಹಸ್ತಿನಾಪುರಿಯು ತ
ದ್ರಾಮಣೀಯಕಮಂ ಸಮರ್ಥಿಸಲ್ ಮೆರೆದಪುದೆ ನರಸುರಾದ್ಯರ್ಗಳರಿವು
ವ್ಯೋಮಮಂಡಲವನಂಡಲೆವ ಸಾಲಾವಲಯ
ವಾ ಮಹಾಶೇಷನಂ ಕಾಣ್ಬಡಿಸುವಗಳು ಸು
ತ್ರಾಮಪುರದಾಟಮಂ ಮೇಲಣಿಂದೀಕ್ಷಿಸುವ ಸೌಧಗಳ ಸೊಬಗಿಸಿಂದೆ ೧೭

ಭೋಗಪುರವನ್ನಗುವ ಗಜಪುರದ ತರುಣಿಯರ್
ಭೋಗಿಣಿಯರಂ ಪಳಿವರೆನೆ ಕೇಳ್ದು ನೋಳ್ಪೊಡಾ
ಭೋಗೀಶನುಜ್ಜುಗದಲೈತಂದು ನೋಡಿ ವಿಸ್ಮಿತನಾಗಿ ತತ್ಪುರದೊಳೆ
ಭೋಗಮಂ ಕುಂಡಲಿಸಿ ನಿಂದನೆನಲೆಸೆದುದಾ
ಭೋಗದಿಂ ಘನಸಾಲಮಿದಕೆಣೆಯೆ ಸುರಪುರದ
ಭೋಗಮಂ ನೋಳ್ಪೆನೆಂದೆತ್ತಿದ ಫಣಾಳಿಯೆನೆ ಸಾಲ್ದೆನೆಗಳೊಪ್ಪಿರ್ದುದು ೧೮

ಈಕ್ಷಿಪೊಡೆ ಸಾಲದುನ್ನತಿಕೆಯನ್ನಮಲಾಬ್ಜ
ಪಕ್ಷನಾವಗ ನಡೆವ ಮಾರ್ಗಮಂ ಬಿಗಿಯೆ ಜಗ
ದಕ್ಷಿಸಂಚರಿಸುವೊಡಶಕ್ಯದಿಂ ತನ್ಮಾರ್ಗಮನುಳಿದು ತತ್ಸಾಲದ
ದಕ್ಷಿಣದ ದಿಗ್ಭಾಗದೊಳ್ಗಮಿಸಲವನಿಗದು
ದಕ್ಷಿಣಾಯನಮಾಗಲುತ್ತರದ ಪಕ್ಕದ ನಿ
ರೀಕ್ಷಿಸುವೆನೆಂದೈದಲುತ್ತರಾಯಣಮಾದುದಾಗಬೇಕೆಂಬಂತಿರೆ ೧೯

ಮುಗಿಲ ಮುದ್ದಿಸುವ ಮಹದುನ್ನತಿಕೆಯಿಂದೆಸೆವ
ನಗರ ಸೌಧಾಳಿಯೊಳ್ ಬಲಿದಿರ್ಪ ವೈಜಯಂ
ತಿಗಳಾಶುಗಾಹತಿಗಳಿಂ ಚಲಾಚಲ ಪಟಾಂಚಲಗಳಿಂದಮರಿರಲ್ಕೆ
ನಗವಿರೋಧಿಯ ಪುರಾದಿಗಳಿಂದಲನಿಶಯಾ
ಗಗಳ ಭಾಗಗಳಿಗೈತಪ್ಪ ಬರ್ಹಿರ್ಮುಖರ
ಡಗೆಗಳಾಯಾಸಮಂ ಕಳೆವ ಪುರಸತಿಯ ಕೈವೀಸಣಿಗೆಯಂತೆಸೆದುದು ೨೮

ಜಾತರೂಪಸಬದ್ಧ ಹರ್ಮ್ಯಗಳಲುಲಿವ ಜಲ
ಜಾತಾಕ್ಷಿಯರ ಚಾರುಮುಖಚಂದ್ರ[1]ರೊಡನ[ಬ್ಧಿ][1]
ಜಾತನುರೆ ಸೆಳಸಿ ನಿರ್ವಹಿಸಲಮ್ಮದೆ ನೀರ ಪೊಕ್ಕು ಕಂಪಿಸುವಂತಿರೆ
ಶೀತಾಂಶುಕಾಂತಕೃತ ಸೋಪಾನ ಸರಸಿಗಳ
ಶೀತಾಂಬುರಂಗತ್ತರಂಗದೊಳ್ ಬಿಂಬಿಸಿದ
ಶೀತಾಂಶುಮಂಡಲಮುದುದಕ ಚಲನದ ಕಂಪನಂಬಡೆದು ಕಂಗೊಳಿಸಿತು ೨೯

ಜಂಭಾರಿನಿಭಮಹೀಧವ ದರ್ಶನಾಯಾತ
ಕುಂಭಿನೀಶರ ನೋಳ್ಪ ತವಕದಿಂದವೆ ಶಾತ
ಕುಂಭಚಿತ್ರಿತ ಗೋಪುರಂಗಳನ್ನಡರಿ ವಾತಾಯನಗಳಿಂ ನೋಡುವ
ಕುಂಭಕುಚೆಯರ ನೇತ್ರರುಚಿ ಮುಸಗಿ ಭೂವರಕ
ದಂಬಧವಳಚ್ಛತ್ರಗಳಲೆರಗೆ ಫುಲ್ಲಸುಸಿ
ತಾಂಭೋಜಗತ ಷಟ್ಪದಂಗಳೆಂಬೊಲ್ ವಿರಾಜಿಸುತಿರ್ದುದತಿಶಯಮೆನೆ ೩೦

ಪುರುಹೂತ ಪುರಮೆನಲ್ ಮಂಜುಘೋಷಾಂ[1]ಚಿ[1]ತದಿ
ಕುರುಸೈನ್ಯದಂತೆ ಗಾಂಗೇಯ [2]ಧೌಮ್ಯಾ[2]ನ್ವಿತದಿ
ಸುರಪನಂತಹಿತ ಬಲಭೇದಿ ಶತಕೋಟಿ ಗಂಧರ್ವಾಳಿ ಸಹಿತದಿಂದೆ
ಹರಿಪದಮೆನಲು ಕವಿಬುಧಾಳಿಸಂಶೋಭಿತದಿ
ನರಕಾರಿಯೋಲ್ ಸತ್ಯಭಾಮಾ ಸಮಾಶ್ರಯದಿ
ಶರಧಿಯಂತಹಿಮಕರಕಾಂತಗೃಹಸತ್ಕೀರ್ತಿಯಿಂ ನಗರಮೆಸೆದಿರ್ದುದು ೩೧

---

೨೯. 1. ಮರೊಡನರೆ. ೩೧. [1]ನ್ವಿ, [2]ಧಾಮಾ.

ಕಮಲಾಕರೋಪಮದಿ ರಾಜಹಂಸಾಶ್ರಯಂ
ಪ್ರಮಥೇಶನೆನೆ ಸರ್ವಮಂಗಳಾಲಂಕೃತಂ
ವಿಮಲಸಂಧ್ಯಾಸಮಯದಂದದಿಂ ದ್ವಿಜಕಲಕಲಾನ್ವಿತಂ ಪರಿಘಟಿಸಿದ
ಕಮನೀಯ ಮಧುರಾಪುರದ ತೆರದಿ ವಸುಯುತಂ
ದ್ಯುಮಣಿಯಂತಾವಗಂ ಶ್ರೀನಿಲಯಹಿತಕರಂ
ಸಮನಿಸಿದ ಶಶಿಯಂತೆ ರತ್ನಗರ್ಭಾನಂದಕರನೆನಿಸಿ ಪುರಮೆಸೆದುದು ೩೨

ವರಭುಜಂಗಾನಂದಕರವಾಗಿ ನಾಗಮುಂ
ದಿರಮಲ್ಲ ಸಿರ್ಜರೋಜ್ವಲವಾಗಿ ಕನಕಭೂ
ಧರಮಲ್ಲ ಪುಣ್ಯಜನವೆಗ್ಗಳ ಸ್ಥಲವಾಗಿ ಬಾಣಜನಪದವುದಲ್ಲ
ನಿರುತ ಧಾತ್ರೀ ವಿಲಾಸವನಾಂತೊಡಂ ವನದ
ಪರಿಯಲ್ಲ ಗೋಪಾಲನೆರವಿಯಿಂ ಸೇವ್ಯವಾ.
ಗಿರುತಲುಂ ಗೋಕುಲಮುದಲ್ಲೆನಿಸಿ ತತ್ಪುರವು ಕಂಗೊಳಿಸಿತತಿಚೆಲುವಿನಿಂ ೩೩

ಫೆನಶಿಲೀಮುಖಪತಿಯು ಕಮಲದೋಳ್ ಕರ್ಣನಾ
ಶನಕಥಾವಳಿ ಮಹಾಭಾರತದೊಳನಿಶ ಜೀ
ವನಭಂಗದೆಸಕಮಂಬುಧಿಗಳೊಳ್ ಕುಟಿಲತ್ವಮಹಿನಿಕರಧಾವನೆಯೊಳು
ವನವಾಸ ಚಕ್ರವಾಕಂಗಳೊಳ್ ಹಸ್ತಬಂ
ಧನವಾಜಿಗಳ್ ಮಾಲೆಗಾರರೊಳ್ ದ್ವಿಜಹತಿಯು
ವನಜಾಂಬಕಿಯರ ಮಧುರಾಧರದಲಲ್ಲದಾ ಜನಪದದೊಳಿರದೈಸಲೆ ೩೪

ಮೆರೆವ ಕಂಟಕಗಳಾರಣ್ಯದೊಳ್ ನಾಸ್ತಿಯೆಂ
ಬುರುನುಡಿಯು ಶೂನ್ಯವಾದಂಗಳೊಳ್ ಸಂತತಂ
ತರಳತನದೆಣಿಕೆ ಮುಕ್ತಾಹಾರತೊಡರಿನೊಳ್ ಮಿತ್ರಮಂಡಲವೈರಮೇ
ಪರಿಘಟಿತಕೌಶಿಕಾನೀಕದೊಳ್ ಕಠಿನತ್ವ
ದಿರಿಕೆ ಯುವತೀಪಯೋಧರಗಳೊಳ್ ಶೋಭಿಸುವ
ಕರಪತ್ರದಾರಣವು ಪದ್ಮವಿಸರದಲಲ್ಲದಾ ಪುರದೆಲೆಡೆಗೊಳದಲೇ ೩೫

ಕುಲಮಹೀಭೃದ್ವೈರಮಿಂದ್ರನಲಿ ವರ್ಣಸಂ
ಕಲಿತತ್ವ ಚಿತ್ರಾಂಬರಂಗಳಲಿ ರಾಜಮಂ
ಡಲವಿರೋಧವು ಪಂಕಜಂಗಳಲಿ ದಾನವಿಚ್ಛಿತ್ತಿ ಮತ್ತೇಭಗಳಲಿ
ಮಲಿನಾಂಬರತ್ವ ಪ್ರಾವೃಟ್ಕಾಲದಿವಸದಲಿ
ಚಲನಮಂದರಿಗಳೆಣಿಕೆಗಳೆಸೆವ ಪವನನಲಿ
ಬಲುಹಿಂ ಹಿರಣ್ಯಸಂಹರಣಕೃತ್ಯವು ನೃಸಿಂಹನೊಳಲ್ಲದಲ್ಲಿರದಲೆ ೩೬

ಸುರವಿರೋಧಿಗಳ ಕರಶಸ್ತ್ರಪ್ರಹಾರಂಗ
ಳೆರಗಿ ನೋಯಿಸುವ ಹರಿವಕ್ಷೋನಿವಾಸಮ
ನ್ನುರುಮಂದರಾದ್ರಿಪರಿಘಾತದಿಂ ಭಂಗಸಂಯುತವಾದ ದುಗ್ಧಾಬ್ಧಿಯಂ
ನಿರುತಮಾತಂಗಹಸ್ತಸ್ಪರ್ಶಸಂಮ್ಲಾನ
ಸರಸಿಜಾವಾಸಮನ್ನುಳಿದು ಲಕ್ಷ್ಮಿಯು ಹಸ್ತಿ
ಪುರದ ಚೆಸುವರದರಂಗಡಿನಿರ್ಭಯಸ್ಥಾನಮಂ ಸಾರ್ದಳೆನಿಸಿರ್ದುದು ೩೭

ಬಿಲ್ಗಾರರೆನಿಸುವರ್ಗಳೆಯರೊಳಗಸಮಬಲ
ಮೇಲ್ಗಯ್ಯ ಭಟನಪ್ಪ ಮದನವೀರನ ಕರದ
ಕೋಲ್ಗಳಂ ಸೆಳೆದು ವಿರಹವನೂರಲಿವಕೆ ಸಾಮರ್ಥ್ಯಮಿಲ್ಲೆಂದು ಜರಿದು
ಕಾಲ್ಗಳಂ ನಾರ್ಗಳಿಂ ಜಿಗಿದು ಮಾರುತ ವಿರಹ
ದೇಳ್ಗೆಯಂ ಕುಡಿನೋಟದಿಂ ಬಲಿವುತಂಗಡಿಯ
ಸಾಲ್ಗಳೊಳ್ ಪೂಗಾತಿಯರ್ಮೆರೆದರೆಡೆವರಿವ ಕಾದಲರ ಕಾಲ್ಗೆಡಿಸುತ ೩೮

ನಗೆಯೆ ಮಲ್ಲಿಗೆಯು ನಾಸಿಕವೆ ಚಂಪಕವು ಪ
ಲ್ಲುಗಳೆ ಮೊಲ್ಲೆಗಳು ಬಾಯ್ದೆರೆಯೆ ಬಂದುಗೆಯು ಸೆ
ಳ್ಳುಗುರೆ ಕೇತಕಿಗಳಂಗೈದಾವರೆಗಳು ನಿಡುಗಣ್ಣೆ ಕನ್ನೈದಿಲೆಗಳು
ನಿಗಿನಿಗಿಪ ತನುಲತೆಯದೊಂದರೊಳೆ ಸತತಮುಂ
ಬಗೆಬಗೆಯ ಪೂಗಳಂ ತೋರ್ಪಡಿಪ ಸೊಬಗಿಯರ
ಸೊಗಸಿನಂಗಾಂಗಸತ್ಸುಮಗಳಿರೆ ಕುಸುಮಮೆನಿಸವೆ ಮಿಕ್ಕ ಪೂಚಯಗಳು॥ ೩೯ ॥

ಈರಮಣಿಯರ ತನುಲತಾಂತಸತ್ಸುಮಗಳಿರೆ
ಬೇರೆ ಕುಸುಮಂಗಳಂ ನಿರ್ಮಿಸಿದ ಕಮಲಜಗೆ
ಬಾರ ದೇನಜವೆಸರು ನೀರೆರೆದು ಪೋಷಿಪರ್ಗಿರದೆ ಧರ್ಮಾತ್ಮಪೆಸರು
ಸಾರೆ ಮುಡಿವರ್ಗೆ ಸಮನಿಸದೆ ಭೋಗಿಯ ಪೆಸರು
ಓರಣದಿ ದೈವತಾರ್ಚನೆಗೈವ ಮನುಜರಿಂ
ಗೇರದೇ ಪುಣ್ಯಜನವೆಸರೆನಿಪ ಸುಂದರದ ಮಾಲೆಗಾತಿಯರೆಸೆದರು ೪೦

ಅಲಸದೇ ವಿಪ್ರಾಸ್ಥಿಯಂ ಧರಿಸಿದವನರಸು
ಬಲಮೇ ವಿಮಾನಾನ್ವಿತರ್ಸದಾ ವಿಬುಧಮಂ
ಡಲಮೆ ಸತ್ರಾನ್ನೋಪಜೀವಿಗಳ್ ನೆಟ್ಟಾಲಿನೆಗಳಿದವರೇ ಪ್ರಜೆಗಳು
ವಿಲಸತ್ರಿದಶಗೇಹಮದರೊಳು ಸುರಾಲಯವು
ಕುಲಮೇ ನಭೋಜನರು ಗಾಳಿಯಾಧಾರದಿಂ
ದೊಲೆವುತಿಹ ಶಕ್ರಪುರಮಂ ನಾಗನಗರಿಗಂ ಸರಿಯೆಂಬರೇ ಪ್ರಾಜ್ಞರು ೪೧

ದೊರೆ ಗೋತ್ರವೈರಿ ತನ್ಮಂತ್ರಿಯೇ ರಾಜರಿಪು
ಪರಿವಾರ ಪುಣ್ಯಜನವೈರಿಗಳ್ ತರುಣಿಯ
ರ್ನಿರುತವು ಸುರಾನಂದಕೇಳೀ ವಿಲಾಸಿಗಳು ರತ್ನಮೇ ಚಿಂತಾಮಣಿ
ಪುರಜನರ್ಗೆಲ್ಲ ಸಂತಾನಮೇ ಮರನು ಬನ
ಸಿರಿಗೆ ಪಂಚತ್ವವಿಖ್ಯಾತಿಯಿಂತಿಂತೊಪ್ಪ
ತಿರುವ ಸುರಪುರವನಮರಿದ ಹಸ್ತಿನಾಪುರಕೆ ಸರಿಸಮಂ ಸ್ಮರಿಸಲಹುದೇ ೪೨

ಮಿತ್ರಂ ಪ್ರತಾಪಯುತನಾದೊಡಂ ಕುವಲಯಾ
ಮಿತ್ರನಪ್ಪಂ ಶಶಿಯು ರಾಜನಹುದಾದೊಡಂ
ರಾತ್ರಿಪ್ರಭಾವನುಂ ಕುಟಿಲಸ್ವಭಾವನುಂ ಮೇಘನುನ್ನತಿಯಾದೊಡಂ
ಗಾತ್ರಸಂಭೃತವಿಶ್ವ ಜಿಷ್ಣುವಾದೊಡು ಸುರಪ
ಗೋತ್ರಾರಿಯೆನಿಸುತಿಹನೆಂದು ಜರಿಯುವ ರಾಜ
ಪುತ್ರಸಂದೋಹಮೆಸೆದಿರ್ದುದಾ ಪುರದೊಳುಜ್ಜ್ವಲಗುಣಾವಳಿಗಳಿಂದೆ ೪೩

ಶ್ರುತಿಹೀನನೆಂದಾದಿಶೇಷನಂ ನಗುವ ಬುಧ
ತತಿಯಿಂ ಪ್ರತಾಪಹೀನನವಂಶಗತರಿವರೆ
ನುತಭೀಮಪಾರ್ಥರಂ ಪಳಿವ ಭೂಭುಜರಿಂದೆ ತಿರುಕನೊಡನಾಡಿಯೆಂದು
ಸತತ ಧನಪನ ಜರಿವ ವೈಶ್ಯರಿಂ ಭೂಖನನ
ಯತನ ಕೆಲವೆಡೆಯಲ್ಲದನಿತುಮಿಲ್ಲೆನೆ ಸಗರ
ಸುತರಸಣಕಂಗೈವ ಶೂದ್ರರಿಂದಾ ರಾಜಧಾನಿ ನಗುವಂತಿರ್ದುದು ೪೪

ಅಶ್ವಂಗಳೋಳ್ಕೀರ್ತಿಯೊಂದಿದುಚ್ಚೈಶ್ರವಕೆ
ವಿಶ್ವರೂಪಾಲಂಬಮಾದುದೆಂಬಂತೆ ದಿ
ವ್ಯಾಶ್ವಕೋಟಿಗಳಿರಲ್ ದಿಗ್ಗಜಂಗಳೆ ಜರಾವಹದಿಂ ಬಳಲ್ದವೆಂದು
ವಿಶ್ವಪತಿ ಪೊಸಗಜಗಳಂ ಗೈದನೆನೆ ಕರಿಗ
ಳೈಶ್ವರ್ಯದಿಂದೆ ಕರಿಪುರವೆಸರ್ನೆಲೆಯಾಗೆ
ಪಶ್ವಾದಿಗಳ ಪದಾತಿಗಳೆಣಿಕೆ ಸೃಷ್ಟಿಸಿದ ಸ್ರಷ್ಟಗಸದಳವೆನಿಸಿತು ೪೫

ಕೊಳಗಳಿಂ ಸಂಭರಿತಜಳಗಳಿಂ ತಂಪುಬನ
ಕಳೆಗಳಿಂ ಚಿಗುರ್ದ ಚೆಂದಳಿರ್ಗಳಿಂ ಚೀರ್ವ ಕೋ
ಗಿಲೆಗಳಿಂ ಮೃದುನುಡಿಯ ಗಿಳಿಗಳಿಂ ಹಂಸೆಯೊಬ್ಬುಳಿಗಳಿಂ ಝೇಂಕರಿಸುವ
ಅಳಿಗಳಿಂ ಸೌಧಸಾಲ್ವಳಿಗಳಿಂ ವಿಪ್ರಜಂ
ಗುಳಿಗಳಿಂ ಜನರ ಕಳಕಳಗಳಿಂ ವಿಭವವೆ
ಗ್ಗಳಗಳಿಂ ಸತತಮಂಗಳಗಳಿಂದಾ ನಗರಮಳವಟ್ಟುದತಿಶಂಯುಮೆನೆ ೪೬

ಆ ರಾಜಧಾನಿ ಕರಿಪುರಕಧೀಶ್ವರನಾಗಿ
ಸಾರಂಗರಥನಂತೆ ಸುಂದರಕಳಾನ್ವಿತದಿ
ರಾರಾಜಿಪಂ ನೃಪತಿ ಜನಮೇಜಯಾಹ್ವಯಂ ಕುವಲಯಾನಂದಕರದಿಂ
ಸಾರತರಸದ್ಧರ್ಮ ಶರಧಿಯುಬ್ಬಲು ಜಡಜ
ಸಾರಸಂಗಳ್ ಕಳಲಲೆಸೆವ ದೋಷಾಳಿ ನಿ
ಸ್ಸಾರವಾಗಲು ಜನರ ದೃಕ್ಚಕೋರಂಗಳಾನಂದದಿಂ ಹೆಚ್ಚಳಿಸಲು ೪೭

ಗುರುವೈರಿಯೆನಿಸ ನಕ್ಷತ್ರವರನೆನಿಸ ನ
ಶ್ವರಕಳೆಯ ವಹಿಸ ದೋಷಾಕರಂ ತಾನೆನಿಸ
ಸಿರಿನಿವಾಸಕೆ ಕುಂದನೆಣಿಸ ನಾರ್ಯಭಿಘಾತಿಯೆನಿಸ ಜಡಜಾತನೆನಿಸಂ
ಗುರುಹಿತಂ ಕ್ಷತ್ರಪತಿ ಸತ್ಕಳಾಸಂಪೂರ್ಣ
ನುರುನಿರ್ಮಲಾತ್ಮ ಜನಹಿತಕಾರಿ ಶತ್ರುಸಂ
ಹರನು ಸದ್ವಂಶಭವ ಜನಮೇಜಯಂಗೆ ಶಶಿ ಸಮಮೆಂಬರೇ ಪ್ರಾಜ್ಞರು ೪೮

ವಿಕ್ರಮಾರ್ಜನೆಯಿಂದೆ ವಿಪ್ರನೆನೆ ಪರಸಂಪ
ದಾಕ್ರಮದ ಬಲುಹಿನಿಂ ಯೋಗಿಯೆನಲರಿವರ್ಗ
ವಕ್ರಪರಿಹರದಿಂ ವಿರಕ್ತನೆನೆ ದಿಗ್ಬಂಧನಾದಿಯಿಂ ಮಾಂತ್ರಿಕನೆನೆ
ಅಕ್ರೂರಹಿತನಾಗಿ ಕೃಷ್ಣನೆನೆ ಸಂತತ ಶ
ತಕ್ರತುವ ಪಾಲಿಸುತ ಬ್ರಹ್ಮನೆನೆ ಸತ್ವಕಾ
ಲಕ್ರಮಣೆ ಗೈವುತದರಿಂ ಶಿವನೆ ತಾನೆನಿಸಿ ಪೊರೆವಂ ಸದಾರ್ಯಾದ್ಯರಂ ೪೯

ಸುಪ್ರತಾಪಾಗ್ನಿಯಿಂ ಭಯಗೊಂಡು ವಿಮಲಾಗ್ನಿ
ವಿಪ್ರಮಂದಿರಹೋಮಕುಂಡದಲಡಂಗೆ ದಾ
ನ ಪ್ರಧಾರಾಸಾರಕಳುಕಿ ಮೇಘಾಸಾರಮುದು ನೀರಪೊಕ್ಕು ಬದುಕೆ
ದೀಪ್ರಖಡ್ಗದ ಘಾತಿಗದುರಿ ರಿಪುಕುಲಮೆ ಚರ
ಣ ಪ್ರದೇಶವಸಾರ್ದು ಜೀವಿಸಲ್ ಪರರ ದಾ
ನಪ್ರತಾಪವು ಖಡ್ಗಗಳ ಸಾರ್ದವಿಭಘಟೆಯ ವಿರಹಿಜನ ಗಿರಿತಟಗಳ ೫೦

ವಿಮಲತಾರೆಗಳೆ ಹಾರಗಳಾಗೆ ಸುರಪನು
ತ್ತಮ ಹಸ್ತಿಕರಬಾಹುಲತೆಯಾಗೆ ಸಂಪೂರ್ಣ
ಹಿಮಕರನೆ ಮುಖಮಾಗೆ ಕೌಮುದಿಯೆ ನಗೆಯಾಗೆ ಶಂಖಮೇ ಕಂಠಮಾಗೆ
ಸಮನಿಸಿದ ಸುಕ್ಷೀರನಿಧಿ ಕಾಂಚಿಯಾಗೆ ಸು
ಪ್ರಮಥೇಶಗಿರಿ ಪಯೋಧರಮಾಗೆ ಸುರನದಿಯೆ
ಸುಮನಸ್ಸು ಮಾಲೆವೆಡಗಾಗೆ ನೃಪಕೀರ್ತಿ ಸೊಬಗಾಗಿ ಶೃಂಗಾರಿಸಿದಳು ೫೧

ಸಾರಸಾರಿಯನಿಳುಹಿ ಹೆಚ್ಚಿಸುತಲುರೆ ಶುಭ್ರ
ಸಾರಸಂಗಳನಿರುಳು ಮುಚ್ಚಿಸುತ ಸಿತಪಕ್ಷ
ಸಾರಸಂಗಳನು ಪೊಗಚ್ಚಿಸುತ ಕುಮುದಂಗಳಂ ಪಗಲೆ ಮುಖಗೆಡಿಸುತ
ಸಾರಸಾಸನ ಸತಿಯನೊದರಿಸುತಲಹಿಪನಂ
ಸಾರಸಾಕ್ಷನ ಕೆಳಗೆ ಪುದುಗಿಸುತ ಮುಂಬರಿದು
ಸಾರಸಾಗಾರೆಯಯ್ಯನ ಭಂಗಗೊಳಿಸಿ ನೃಪಕೀರ್ತಿಮಾನಿನಿ ಮೆರೆದಳು ೫೩

ವಿಧುಬಿಂಬಮೆನಿಸಿ ರವಿಬಿಂಬಮಂ ಕಾಣ್ಬಡುವ
ಕುಧರಗಳನನಿತು ಬೆಳ್ಳಿಗಿರಿಗಳೆನ್ನಿಸಿ ವಾರಿ
ನಿಧಿಗಳಂ ಕ್ಷೀರಸಾಗರಗಳೆನ್ನಿಸಿ ನಿಖಿಳಫಣಿಗಳಂ ಶೇಷರೆನಿಸಿ
ಮಧುಸೂದನಾದ್ಯರಂ ಶಿವರೆನಿಸಿ ಮೆರವ ಬಹು
ವಿಧಗಜಂಗಳ ಸುರಕರಿಗಳೆನಿಸಿ ಪವನನಂ
ದದಿ ವಹಿಸಿ ಪಟ್ಟಣಂಗಳು ಪಾಂಡುಪುರಮೆನಿಸಿದುದು ಕೀರ್ತಿ ನರನಾಥನ ೫೪

ಹರಿಯಂತೆ ಶ್ರೀಧರಂ ಹರನಂತೆ ಶಂಕರಂ
ನರಸಿಜಾಸನನಂತೆ ಚತುರಾಸ್ಯನೆಸೆವ ದಿನ
ಕರನಂತೆ ದೋಷಾಪಹಂ ಧನಾಧಿಪನಂತೆ ರಾಜಶೇಖರಮಿತ್ರನು
ಧರೆಯಂತೆ ವಸುಯುತಂ ನಭದಂತೆ ಮುಗಿಲ ಮಂ
ದಿರನಬ್ಧಿಯಂತೆ ರತ್ನಾಕರಂ ತಾಂ ಸದಾ
ಪರಮ ಧಾರ್ಮಿಕನೆನಿಸಿ ಮೆರೆದಪಂ ಕುರುವಂಶಕುರುವಂಶ ಪಾಲನೆನಿಸಿ ೫೫

ಮತ್ತೆ ಕೇಳದ್ಭುತಪನರಸನ ಮಹೀತಲದಿ
ಚಿತ್ತವೈಕಲ್ಯ ಚಪಲತೆ ಚೌರ್ಯ ಮಾಂದ್ಯ ಮ
ದೋನ್ಮತ್ತತೆಯಹಂಕಾರ ಕಲಹ ಕಠಿನ ಕ್ರೋಧ ಕಾರ್ಪಣ್ಯ ದೈನ್ಯ ಮುಳಿಸು
ಕೃತ್ರಿಮಾನೃತ ಹಿಂಸೆ ದಂಭ ವಂಚನೆ ಭಯ ವಿ
ಪತ್ತು ಸಂಕಟ ದರಿದ್ರತೆ ರೋಷ ದುಶ್ಚರ್ಯ
ಹೃತ್ತಾಪ ಮಲಿನತೆ ಕಳಂಕ ವೈರಿಗಳ ಕುಲಮಂಕುರಿಸವೇಂ ಕುಶಲಮೋ ೫೬

ದಾನ ದಾಕ್ಷಿಣ್ಯ ಕಲ್ಯಾಣ ವೈಭವ ಸೌಖ್ಯ
ಮಾನ ಶಮ ದಮ ಶಾಂತಿ ಸಚ್ಚರ್ಯ ನೀತಿ ಸು
ಜ್ಞಾನ ಪರಹಿತ ವಿನಯ ವಿತರಣಂ ಸತ್ಯ ಸದ್ಭಕ್ತಿ ಹರಿಕೀರ್ತನೆಗಳ
ಗಾನ ಗಂಭೀರ ಗೌರವ ವಿಪ್ರಸೇವೆ ವಿ
ದ್ಯಾನಿಪುಣಮತಿ ವಿರತಿಯಾರೋಗ್ಯ ಸೌಭಾಗ್ಯ
ಮಾನಂದ ಕರುಣ ರುಚಿ ಸಕಲಸದ್ಗುಣದೇಳ್ಗೆಯುಬ್ಬಿತೆಡಮುಬ್ಬದೆನಿಸಿ ೫೬

ಅನಿಬರುಂ ಹರಿಪದಾಶ್ರಿತರು ಜಡಹೃದಯರ
ಲ್ಲನಿಬರುಂ ಭೋಗಸಂಗತರು ವಿಷವಕ್ತ್ರರ
ಲ್ಲನಿಬರುಂ ಪಸುವು ಬಲಭದ್ರಸತ್ವಾನ್ವಿತರ್ಜಾರಶೇಖರರಲ್ಲಲೆ
ಅನಿಬರುಂ ಸತ್ಕಳಾಪೂರ್ಣರ್ಕುಟಿಲರಲ್ಲ
ವನಿಬರುಂ ದಾನಕೋವಿದರು ಮತ್ತರ್ಗಳ
ಲ್ಲನಿಬರುಂ ದೋಷಾಳಿವರ್ಜಿತರ್ತಾಪಕರರೆನಿಸರಿನ್ನಾ ನಾಡೊಳು ೫೭

ವಿಷದಶನಕಂಟಕಂಗಳ ಭೀತಿ ವಿಫಲತೆಗ
ಳೆಸೆವ ಕೇತಕಿಯ ಗುಲ್ಮಂಗಳೊಳ್ ಕಂಪನೆಗ
ಳೆಸಕ ಹಿಮವತ್ಕಾಲಸಮಯದೊಳೆಸೆವ ದೇವಸಂಘಾತದಾ ಘೋಷಮೇ
ಪೊಸ ಯಜ್ಞಶಾಲೆಯೊಳ್ ಪರವಧೂಕಾಂಕ್ಷೆ ತಾ
ಮಸನಿಗ್ರಹಂಗಳವು ಮುನಿಗಳೊಳ್ ಶಂಕೆಗಳ
ಬೆಸುಗೆಯನುಮಾನ ಪರಿಹರದೆಣಿಕೆ ತರ್ಕಶಾಸ್ತ್ರದಲಲ್ಲದಲ್ಲಿರದಲೆ ೫೮

ತಿಳಿಯೆ ಚಂಚಲಗರ್ಜನೆ [1]..........[1]
ಬಳಕೆ ಮೇಘಂಗಳೊಳ್ ದ್ವಿಜರಾಜವೈರಗಳ
ತಳೆಮುದಾಸೀನತ್ವಮಬ್ಜದೊಳ್ ಕವಿಸುಪ್ರಭಾವಹರಣಮೆ ಹರಿಯೊಳು
ಅಳವಡದ ಮಧುಪಾನಮಳಿಗಳೊಳ್ ದುರ್ವರ್ಣ
ವಳಕೆಯಾ ಸ್ವರ್ಣಕಾರಕರೊಳ್ ವಸಂತರುತು
ಸುಳುಹಿನೊಳ್ ಜಾತಿಹೀನತ್ವಮಲ್ಲದೆ ಸಲ್ಲದನ್ಯಥಾ ತನ್ಮಹಿಯೊಳು ೫೯

೫೯. 1. ಯೀಷ್ಟೇದತ್ವಗಳ.

ಮದವೆ ಗಜಘಟೆಗಳಲಿ ಮಂದಮದು ಪವನನಲಿ
ಪದವಿಹೀನತ್ವಮುರಗಾಳಿಯಲಿ ಕಾಳಹತಿ
ಯದು ಯುವತಿಯರ ಚಾರುಕುಚಗಳಲಿ ಕುಟಿಲಗುಣಗಳ [1]ತಿಳಿಕೆ[1] ಚಾಪಗಳಲಿ
[2]ಬೆದರು[2] ಜಾರೆಯರ ಕಡೆನೋಟದಲಿ ನಕುಲದ
ಭ್ಯಯು ವನದೇಶದಲಿ ವಿಷಮ ಹರನೇತ್ರದಲಿ
ಒದಗುತಿಹ ಸಂತಾಪ ವಿರಹದೊಳಗಲ್ಲದಿನ್ನಿರದು ತದ್ರಾಜ್ಯದೊಳಗೆ ೬೦

ಅರಿಯೆಂಬರ್ಕೈ ತಿಳಿಗೊಳೆಂಬುದಂ ಲೋಹಘಟ
ದಿರವ ಕೊಡನೆಂಬರಾವಗ ಬೈಚಿಡೆಂಬುದ
ನ್ನಿರಿಸೆಂಬರೊಡೆದ ಪಂಚುಗಳನೋಡೆಂಬರುಲೂಕಮಂ ಕರಡಿಯೆಂಬರು
ಹರಿಯೆಂಬರಬ್ಜಾಕ್ಷನಂ ಹೇಮತಂತುವಂ
ತಿರಿಯೆಂಬರಸಿಶ ವಿಸ್ಫೋಟನೆಯ ರಜ್ಜುವಂ
ಹುರಿಯೆಂಬರತಿಬಲನ ಬಲಿಯೆಂಬರಲ್ಲದುಚ್ಚರಿಸರಿವನವನಿಯೊಳ್ ೬೧

ಅತಿಮನೋಹರದ ನಂದನಗಳಿಂ ಜನಗಳಿಂ
ಪ್ರತಿಯಿರದ ಸೊಬಗುಮಂದಿರಗಳಿಂ ಸಿರಿಗಳಿಂ
ಶ್ರುತಿಗಿಂಪನೆರೆವ ನಿಸ್ವನಗಳಿಂ ಮನಗಳಿಂಗುಲ್ಲಾಸಮಂ ಬೀರುವ
ಯತಿಯೋಗಿವಿಪ್ರನಿವಹಂಗಳಿಂ ಹೆಂಗಳಿಂ
ಸತತಮಾರೋಗ್ಯಸಂತಸಗಳಿಂ ಜಸಗಳಿಂ
ಕ್ಷಿತಿಗೆ ನಿಬಿಡೀಕರದ ಬೆಳೆಗಳೀಂ ಕಳೆಗಳಿಂದಾರಾಜ್ಯಸಿರಿ ಮೆರೆದುದು ೬೨

ವರ್ಣಧರ್ಮಗಳೇಳ್ಗೆ ಮುರಿಯದೋಲ್ ನಿಜವಾಕ್ಯ
ನಿರ್ಣಯಂಗಳ ಭಿತ್ತಿ ಜರಿಯದೋಲ್ ಸಿರಿಯ ಸಂ
ಪೂರ್ಣತೆಗೆ ಕುಂದು ಮುಂಬರಿಯದೋಲ್ ಹವ್ಯಕವ್ಯಾದಿಸತ್ಕೃತ್ಯಂಗಳು
ಜೀರ್ಣಿಸಿ ಸದಾಚಾರ ಸರಿಯದೋಲ್ ಹರಿಕಥಾ
ವರ್ಣನೋತ್ಸವದಳತೆ ಪರಿಯದೋಲ್ ಭೂಸುರಗು
ಣಾರ್ಣವಪರೀಕ್ಷಿದಾತ್ಮಜ ರಾಜ್ಯಭಾರದೊಳ್ ಸಂದಿರ್ದನತಿಶಯಮೆನೆ ೬೩

---

೬೦. 1. ಬಳಕೆ, 2. ಚೆದುರೆ.

ಸುವ್ಯಕ್ತಿಯಿಂದಲೀತೆರದಿ ಪರಿಶೋಭಿಸುವ
ಭವ್ಯಗುಣಭರಿತವಿಭಪುರಿಗೆ ಸದ್ವಿಮಲವೇ
ದವ್ಯಾಸ ಮುನಿವರನ ಕರಕಮಲ ಸಂಭವ ಸುಮಂತ ಸಲ್ಲೀಲೆ ಮಿಗಿಲು
ದಿವ್ಯಪುಣ್ಯಕ್ಷೇತ್ರ ನದಿಗಳಂ ಸೇವಿಸುತ
ಲವ್ಯಾಜದಿಂದಲ್ಲಿಗೈತಂದನೆರಡನೆಯ
ರವ್ಯುದಯಸಂಘಟಿಸಿತೆಂಬಂತೆ ವೈವೆಳಗನೆಂಟುದೆಸೆಯಂ ಮುಸುಕುತ ೬೪

ಉಟ್ಟ ವಲ್ಕಲಗಳಿಂದೆಸೆವಕ್ಷ ಮಾಲೆಗಳ
ಮೆಟ್ಟಿರ್ದ ಪಾದುಕೆಯ ಬಲಿದ ಭೂಲಕ್ಷ್ಯಗಳ
ಬೆಟ್ಟಲಮಗಿದ ಕುಶಪವಿತ್ರಚಿನ್ಮುದ್ರೆಗಳ ದಂಡುಗೋಲ್ ಜಪಸರಗಳ
ನೆಟ್ಟಾಲಿಯಿಂದಲಿಳಿವಾನಂದ ಬಾಷ್ಪಗಳ
ಇಟ್ಟರುದ್ರಾಕ್ಷ ಕಂಕಣಭಸ್ಮಲೇಪಗಳ
ಕಟ್ಟ ಹರಿಯಂಘ್ರಿಯೊಳ್ ಬಲಿದ ಹೃದ್ವೃತ್ತಿಗಳಲಾ ಮಹಾತ್ಮನು
ಬಂದನು ೬೫

ಧರಿಸಿದರುಣಾಂಬರವೊ ಬೆಳಗಿನರುಣಾಂಬರವೊ
ಪರಿಘಟಿತ ತನುರುಚಿಯೊ ಬಾಲರವಿಕರ ರುಚಿಯೊ
ಮೆರೆವ ಕರಕಮಲಗಳೊ ಕೆದರ್ದ ಕೆಂಗಮಲಗಳೊ ಸೂರಿವರನೋ ಸೂರ್ಯನೋ
ಅರಿಯೆ ಮೈವೆಳಗುಗಳೊ ಎಳೆಬಿಸಿಲ್ವೆಳಗುಗಳೊ
ಚರಿಸುವಳಿಯುಬ್ಬರವೊ ಚರ್ಮದುಡಿಸರಬರವೊ
ಪರಿಕಿಸುವಡರಿದಾಗೆ ಭಾಸ್ಕರೋದಯವೆಡಗ ಭಾಸಿಸಲ್ ನಡೆತಂದನು ೬೬

ಗಜರಾಜಗಂದು ಮುರಹರನೊಲಿದ ಮಾಳ್ಕೆಯಿಂ
ಗಜನಗರಿಗಾ ಮಹಿಮನೈತಂದ ವಾರ್ತೆಯಂ
ಗಜಬಜಿಸುತನಿಬರುಂ ಕೇಳ್ದು ಚೆಚ್ಚರದಿಂದಲೆಚ್ಚರಿಸಲವನೀಶಗೆ
ಗಜತುರಗ ರಥಪದಾತಿಗಳ ಸಂದಣಿಯಲಂ
ಗಜನ ನೆರೆಸೊಬಗನೇಳಿಸುವ ಜನಮೇಜಯಂ
ಗಜರೆ ನಿಸ್ಸಾಳ ಕಹಳಾತೂರ್ಯವಾದ್ಯದಿಂ ಪೊರವಂಟನಿದಿರುಗೊಳಲು ೬೭

ಭೂಪನೊಡನೈದಿದುದು ಜಂಗಮಕ್ಷೀರಾರ್ಣ
ವೋಪಮದಿ ಜನಜಾಲಕವನಿಯಡಮಬ್ಬದೆನೆ
ತಾಪಸನ ಕಾಣ್ಬ ಸದ್ಭಕ್ತಿಯಿಂ ಕೆಲರು ನೋಳ್ಪರ್ಥಿಯಿಂ ಕೆಲಕೆಲಬರು
ಗೋಪುರಂಗಳನಡರಿದಬಲೆಯರ ತನುರುಚಿ
ವ್ಯಾಪಿಸಿದ ಬಿಸಿಲ ಬೀರ್ವೆಳನೇಸರಂತೆ ನೃಪ
ನಾಪುರಬಹಿರ್ದೇಶಕೈತಂದು ಕಂಡೆರಗಿದಂ ಮುನಿಪದಾಬ್ಜಯುಗದಿ ೧೮

ಅಷ್ಟಾಂಗಯೋಗ ನಿರತಾರೂಢ ಮಹಿಮರಿಂ
ಗಷ್ಟಾಂಗಮಂ ಸಮರ್ಪಣೆಗೈವುದುಚಿತಮೆಂ
ದಷ್ಟಾಂಗವೆರಸಿ ವಂದನೆಗೈದು ಶ್ರುತಿಮತಸ್ತವನ ಸಂಘೋಷ ಮಿಗಲು
ಅಷ್ಟಾರ್ಘ್ಯಪಾದ್ಯಮೊದಲೆನಿಸಿ ಪೂಜೆಯಲೆಸೆಯು
ವಷ್ಟದ್ರವ್ಯಯೋಪಚಾರಂಗಳನ್ನೆಸಗಿ ಮಹ
ದಷ್ಟಮೂರ್ತಿಸ್ವರೂಪನೆ ರಕ್ಷಿಸೆಂದು ಪದಕೆರಗೆ ಮುನಿ ತುಷ್ಟಿಗೊಳಲು ೧೯

ಕಮಲದೊಳ್ ಹಿತವೆರೆದು ಮಿತ್ರವೆಸರಾಂತನಾ
ದ್ಯುಮಣಿ ತತ್ಕಂಜಗಳಿಗಹಿತಮಂ ನೆನೆಯಲಿನ
ಗಮರಿದುದು ದೋಷಾಕರಾಖ್ಯೆಯದ ಪರಿಹರಿಪೆನೆಂದು ಶಶಿಯುಜ್ಜುಗದೊಳು
ಗಮಿಸಿ ಪದ್ಮಗಳನಾಲಿಂಗಿಸಿದನೆನಲು ಭೂ
ರಮಣ ಮುಖವೊಪ್ಪಿದುದು ಮುನಿಪದಾಬ್ಜದಿ ಮಿತ್ರ
ಸಮಮುಕುಟ ಬಿಂಬಿಸೆ ಸಮಿತ್ರತ್ವಮಾದ ಕುರುಹಂ ತೋರ್ಪಡಿಸಿದಂತಿರೆ ೨೦

ಆ ಪರಮತಾಪಸಂ ಹರ್ಷರಸದುಬ್ಬಿಂ ದ
ಯಾಪರತೆಯನ್ನನುಗ್ರಹಿಪನೆಂಬಂತಿರಲು
ಭೂಪೋತ್ತಮಾಂಗಮಂ ಪಿಡಿದೆತ್ತಿ ಹರಸಿ ಮನ್ನಣೆಗಳಿಂ ತುಷ್ಟಿಪಡಿಸಿ
ರೂಪಿಸುವ ಕುಶಲವಾರ್ತಾದಿಗಳ ಸರಸ ಸ
ಲ್ಲಾಪಮಿಗೆ ರಾಜಮಂದಿರವನೊಳಪೊಕ್ಕು ಬಳಿ
ಕಾಪುರ ಜನಂಗಳೊಂದಿಸಿ ಕಾಣಿಕೆಗಳನಿತ್ತರು ಮಹೋತ್ಸವ ಮೆನಿಸಲು ೨೧

ಮರುದುಗ್ರಘಾತಿಯಿಂ ತೀವ್ರಗತಿಯಿಂದಲ್ಲೈ
ತರುವ ಸಾಗರತರಂಗೋಪಮದಿ ಮೇಲೆಮೇ
ಲೆರಗುತಿಹ ಪುರಜನರ ಮನ್ನಿಸುತಲವರವರ ತಾರತಮ್ಯಂಗಳರಿದು
ಹರಸಿ ಬೀಳ್ಕೊಟ್ಟು ಬಳಿಕೇಕಾಂತ ಮಿಗಲು ಕೇ
ಸರಿಪೀಠದೊಳ್ ಮುನಿಯ ಮಂಡವಿಸಿ ಸತ್ಕರಿಸೆ
ಲರಸನಂ ಮೊಗನೋಡಿ ನಸುನಗುತ ವಿನಯದಿಂದಾ ಮುನಿಪನಿಂತೆಂದನು ೭೨

ಜನನಾಥ ಕೇಳ್ನಿನ್ನ ಪೂರ್ವಾಶ್ರಿತದ ಕೀರ್ತಿ
ವನಿತೆಯಂ ನೀನು ವಾಕ್ಪಾಣಿವೈಶಾಲ್ಯದಿಂ
ಮನೆಯ ಪೊರವಡಿಸಲಾ ವಿಮಲಾಂಗಿಯೆರಗಿ ಮೂಲೋಕಮಂ ತೊಳಲಿ ಮತ್ತೆ
ಮನೆಮನೆಗೆ ನಿನ್ನ ಕೃತ್ಯಂಗಳಂ ದೂರಿಕೊಂ
ಬನುವ ಬಹುಮುಖಗಳಿಂ ಕೇಳ್ದಿಲ್ಲಿಗೈದಿಹೆವು
ಘನತೆಯಿದು ಪೂರ್ವಗತಧಾಯರಂತಲ್ಲವೀಕೃತ್ಯ ಪೊಸಪರಿಯೆಂದನು ೭೩

ದೇವ ಬಿನ್ನಹ ಜಗಚ್ಛಿಕ್ಷೆರಕ್ಷೆಗೆ ಭವ
ತ್ಪಾವನಾಂಘ್ರಿಗಳೆ ಕಾರಣವಪ್ಪವದರಿನಿಂ
ದಾ ವನಿತೆಯಂ ಪೊರೆದು ತತ್ಸತಿಯ ಪೊರವಡಿಸಿದವಗೆ ತಕ್ಕನುಮತಿಯನು
ತಾವುದೋರಿಸಿ ಜಗತ್ಸಂರಕ್ಷಣೆಯ ಮೆರೆವ
ಭಾವದಿಂದಿಲ್ಲಿಗೈತಂದ ತನ್ಮಹಿಮೆಯಿಂ
ಭೂವಲಯಕೇರ್ದ ಕಲ್ಮಷ ಜಾರದಿರ್ದಪ್ಪುದೆ ಧನ್ಯತಮರಾವೆಂದನು ೭೪

ಕೀರ್ತಿಬಹುಪುಣ್ಯವಿಜ್ಞಾನಂಗಳೇಕದಿಂ
ಮೂರ್ತೀಭವಿಸಿ ನಿಗಮಸಾರಜಲದಿಂದಲು
ದ್ವರ್ತನೆಯನಾಂತ ಭವದೀಯ ಶುಭವಿಗ್ರಹಮದೆನಗೆ ಗೋಚರವಾಗಲು
ಆರ್ತತ್ವಮಣಗಲೇನತಿಶಯಮೆ ಕುರಿತ ಪುರು
ಷಾರ್ಥಮೇ ತಾನಿದಿರ್ವಂದು ಲಭಿಸಿದುದೆನ್ನ
ಸಾರ್ಥಕ ಸುಜನ್ಮಕಿನ್ನೆಣೆಯೆ ನಿಜಮತವನುಸುರುವೆನು ಚಿತ್ತವಿಪುದೊಲಿದು ೭೫

ವಸುಧೆಯೊಳ್ ಕಲಿಯದಂಕುರವಾಗಿ ಮುಂಬೆಳೆವ
ದೆಸೆಯಿಂದ ಶುದ್ಧಸಾತ್ವಿಕದೇಳ್ಗೆ ಮಗ್ಗಿ ರಾ
ಜಸತಾಮಸಂಗಳುನ್ನತವಾಗಲದರಿನಿಂ ವರ್ಣಧರ್ಮಸ್ಥಿತಿಗಳು
ಸಸಿನವಾಗದೆ ಸಂಕರತ್ವಮೇರ್ಗೊಂಬ ತ
ದ್ದೆಸೆಯಿಂದೆ ನಿಜತಪಗಳಳವಡದೆ ವಿಷಯಪರ
ವಶತೆಯಿಂ ಸ್ವರ್ಗನರಕಂಗಳನ್ನೇರುವಾಯಾಸಮೆಡೆಗೊಂಡಿರ್ಪುದು ೭೬

ಮೊದಲೆಮ್ಮ ಬೊಪ್ಪನಿಂಗಮಲ ಶುಕಯೋಗೀಂದ್ರ
ಪದಸೇವೆಯಿಂ ಭಾಗವತಪುರಾಣಶ್ರವಣ
ಮೊದವಿತಾ ಕಾಲದೊಳ್ ಬಾಲ್ಯವೆಮಗದರಿನಿಂ ಮನನವೊಡಬಡದಾದುದು
ಅದರಿನೊಳ್ ತಚ್ಛ್ರವಣಮಾತ್ರದಿಂ ಭವಗಳಂ
ಸದೆದು ಸದ್ಗತಿಯನೈದುವ ಮಹಾಮಹಿಮೆಯೆಂ
ಬುದನು ಕೇಳಿದೆನಂದಿಗಿಂದಿಗುಂ ತನ್ಮನನತೃಷ್ಣೆಯಾವಹಿಸಿರ್ಪುದು ೭೭

ಮರೆದೊಮ್ಮೆ ನಾಲಿಗೆಗೆ ಬಂದೊಡಂ ಭವಕುಲವ
ನೊರಸಿ ನಿಜಪದವಿಯನ್ನನುಗೊಳಿಸಿ ಪೊರೆವ ಶ್ರೀ
ಹರಿಯಸಚ್ಚರಿತೆಯಹ ಭಾಗವತ ಪರಿಚರ್ಯಮನನ ಸಖ್ಯಂಗಳಿಂದೆ
ಪರಗತಿಗಳಂ ಸುಲಭದಿಂದ ಪರುಠವಿಸದಡೆ
ನರರೆಂತು ತರಿಸುವರು ಪಾರವಿಲ್ಲದ ಕರ್ಮ
ಗಿರಿಯನೆತ್ತಲು ನುಜುಗುಗಳಿಗಹುದೆ ಕರುಣದಿಂದುದ್ಧರಿಸಬೇಕೆಂದನು ೭೮

ಹಲವು ಮಾತೇನು ಸದ್ಭಾಗವತಕಥನಮ
ನ್ನೊಲಿದು ಸಂಕ್ಷೇಪದಿಂ ಕೃಪೆಗೈದು ಎನ್ನನುರೆ
ಸಲಹಲನುಗೈವ ತದ್ವ್ಯಾಜದಿಂ ಲೋಕೋಪಕೃತಿಗೈದಡಖಿಲ ಜನರು
ಕಲಿಮಲಂಗಳ ನೂಕಿ ಪರಗತಿಯ ಸಡಗರವ
ಸುಲಭದಿಂದೈದುವಭೂರ್ತಹಿತವೇ ತಮಗೆ
ಬಲಿದ ಸುವ್ರತವೈಸೆ ಕೃಪೆಗೈವುದೆಂದು ಪುನರಂಘ್ರಿಗಾನತನಾದನು ೭೯

ಕೇಳಿದಂ ಮುನಿಪನರಸನ ಭಕ್ತಿಗಚ್ಚರಂ
ದಾಳಿ ಮಧುರೋಕ್ತಿಯಿಂ ನುಡಿದನೆಲೆ ಭೂಪ ನಿ
ನ್ನಾಳುತನದಾಟೋಪಮಂ ವದಾನ್ಯತ್ವಮಂ ವಿನಯಸಂಪದ್ಗುಣಗಳ
ಏಳಿಗೆಗಳನ್ನೆಣಿಸೆ ಪೂರ್ವಗತನಿಖಿಳಭೂ
ಪಾಳಿಗಳ ಗುಣಚರಿತ್ರೆಯನೆಣಿಕೆಗೊಂಬವರ
ನೇಳಿಲಂಗೈವುತಿದೆಲಾ ನಿನಗೆ ಸಾಟಿಯೆನಿಸುವ ದೊರೆಗಳಾರೆಂದನು ೮೦

ಅತಿಭಯಂಕರ ಭೀಮನಪ್ಪೆ ನೀನಾವಗಂ
ಧೃತರಾಷ್ಟ್ರನಹೆ ಧರ್ಮಸುತನು ನೀನಾಗಿರ್ಪೆ
ನುತಪರಾಕ್ರಮಧನಂಜಯನೆನಿಪೆ ನಾಸತ್ಯನಾಗಿ ರಂಜಿಪೆ ನೋಡಲು
ಪ್ರತಿಯಿರದ ಗಾಂಗೇಯವರನಪ್ಪೆ ಸತತ ಶೋ
ಭಿತಪಾಂಡುಕೀರ್ತಿಸಂಯುತನೆನಿಪೆ ಸಂತತಾ
ರ್ಜಿತಗುಣಾಳಿಗಳಿಂದೆ ಸೋಮಾನ್ವಯದ ನಿಖಿಲರಾಯರಿರವಂ ಮೆರೆವೆಲೆ ೮೧

ಭಾಗವತಕಥನವನ್ನುದ್ಧರಿಸುವದು ಪರಮ
ಭಾಗವತವರ ನಾರದ ವ್ಯಾಸ ಶುಕರವರ
ಭಾಗಕೊಡಬಡುವುದಲ್ಲದೆಯಸ್ಮದಾದ್ಯರಿಂಗರಿವಹುದೆ ತನ್ಮರ್ಮವು
ಯೋ[1]ಗವತ[1]ರೆಂದೆನಿಸಿ ಹರಿ[2]ಶ[2]ರಣ ಸಂಗ ಸಂ
ಯೋಗದೊಳ್ ಪರಿಣಮಿಸಿ [3]ಸ[3]ರ್ವಚಪಲಂಗಳ ವಿ
ಯೋಗಮನ್ನೈದಿಸಿದ ಮಹಿಮರಿಂಗೊಲಿವುದೈಸಲೆ ತದ್ರಹಸ್ಯದರಿವು ೮೨

ಸರಸಿಜಾಸನವದನಕಲಶದಿಂದಿಳಿತಂದು
ಹರಜಟೋಪಮ ನಾರದರಲಿ ಗೊಪ್ಪಂಬಡೆದು
ಮರಳಿ ವೇದವ್ಯಾಸರತ್ನಸಾನುವಿಗಿಳಿದು ಶುಕರ ಹೃದ್ಭುವಿಯ ಸಾರ್ದು
ವರಪರೀಕ್ಷಿನ್ಮಹಾಕಾಶಿಗಂ [1]ಸರಿ[1]ತಂದು
ಹರಿಭಕ್ತರಹ ಭಗೀರಥವಂಶಜಾತರಹ
ನರರನುದ್ಧರಿಸಿ ನಿಜಗತಿಯಿತ್ತ ಭಾಗವತ ಸುರಗಂಗೆಗೆಣೆಯಿಪ್ಪುದೆ ೮೩

---

೮೨. 1. ಗಿವರ, 2. ಚ, 3. ಗ. ೮೩. 1. ನಡೆ.

ಮೋಹಾಂಧಕಾರಪ್ರಭಾಕರಂ ದುರಿತಸಂ
ದೋಹಘನವಿಪಿನ ವೈಶ್ವಾನರಂ ದುರ್ವಿಷಯ
ದಾಹಶಮನೆಯ ಸುಧಾಸಾಗರಂ ಕಾಲವಿಷದಂತಘನವಿಹಗೇಶ್ವರಂ
ಊಹಿಸಲ್ ಸರ್ವ [1ಸುರರಿಂ ವರಂ1] ವಿಜ್ಞಾನ
ವಾಹಿನೀಪತಿಗಂ ಸುಧಾಕರಂ ಮಾಂಗಲ್ಯ
ಗೇಹವೆಂದೆನಿಪ ಸದ್ಭಾಗವತಮಹಿಮೆಯನ್ನರಿವರಾರೀ ಜಗದೊಳು ೮೪

ಚದುರ ತಿಳಿ ದೇಹಸ್ವಭಾವಮಂ ಸುಳಿಗಾಳಿ
ಗೆದುರಿಸುವ ದೀಪದಂದದ ಬಾಳ್ಕೆ ಭೋಗಸಂ
ಪದವು ಕನಸಿನ ಸುಖಮದೆಂಬುದನ್ನರಿದು ತನುಮಮತೆಯಂ ನೂಕಿ ಮತ್ತೆ
ಒದಗುತಿಹ ಸೌಖ್ಯಭೋಗೋನ್ನತಿಗಳನಿತುಮಂ
ಪದುಮನಾಭಗೆ ಸಮರ್ಪಣಮೆನುತ ಸಜ್ಜನರ
ಪದಸೇವೆಯೊಳ್ ಸಂದು ತಥ್ಯಮಿಥ್ಯಂಗಳನ್ನರಿದು ಪರಿವರ್ತಿಸುವುದು ೮೫

ಈ ಜಗದ್ವ್ಯಾಪಾರದೊಳಗಿರ್ದು ಸಂಸ್ಕೃತಿ
ವ್ಯಾಜದಾಯಾಸದೊಳ್ ತಗುಲಿರ್ದು ಸಲೆ ಗೇರ
ಬೀಜದಂತಂಟಯಂಟದೆ ನಿಖಿಲಕರ್ಮಗಳ ಭಗವದರ್ಪಣೆಯಲೆಸಗಿ
ರಾಜರುಷಿಚರ್ಯಂಗಳಿಂದೆ ಸತ್ಕೀರ್ತಿ1ಯು1ಂ
ಮೂಜಗೇಶನ ಸಖತ್ವವ ಪಡೆದು ಪರಗತಿಯ
ಸೋಜಿಗವ ಸಾಧಿಸರೆ ಸಿಮ್ಮಸ್ವಯದ ಯುಧಿಷ್ಠಿರ ಭೀಷ್ಮ ಮುಖಭೂಪರು ೮೬

ಈ ರಾಜ್ಯಭಾರಮೆನ್ನದು ಸಕಲ ಕರ್ತೃತ್ವ
ಕಾರಣತ್ವಗಳೆನಗೆ ಸರಿಯಾವನೆಂಬಹಂ
ಕಾರ ಪರವಶತೆಯಿಂ ತೊಳಲುವನ್ನರಕದೊಳ್ ಸ್ವರ್ಗದೊಳ್ ಗರ್ಭಗಳೊಳು
ಆರೈದು ನೋಡಲಿನ್ನವನಿಗಂ ಶಶಿಸೂರ್ಯ
ರಾರಾಜ್ಞೆಯಿಂ ಬೆಳಗುಗೈವರುತ್ಪತ್ತಿ ಮೃತಿ
ಯಾರೂಹೆಯಿಂದಪ್ಪುವವನೆ ಭೂಪತಿಯಲ್ಲದುಳಿದರಿಂಗೊಡವಡುವುದೇ ೮೭

---

೮೪. 1. ಸುರವರಂ, ೮೬. 1. ಯಿಂ,

ಸುಳಿಸುವಂ ಲೀಲೆಯಿಂದಖಿಲಭೂತಂಗಳಂ
ಬೆಳಸುವಂ ತತ್ತತ್ಕೃತಂಗಳಹ ಕಷ್ಟಸುಖ
[1ದಳವಿಡಿದವೆರಡು ಪ್ರಾರಬ್ಧ2] ಭೋಗಂಗಳಂ ಪ್ರಾಣಿನಿಚಯಕೆ ಕಲ್ಪಿಸಿ
ತಿಳಿಸುವಂ ಹಿರಿದುಕಿರಿದೆಂದೆನಿಸಿ ಮೋಹಕಂ
ಗೊಳಿಸುತವು ಕೆಲವು ವಾಸರ ಕುಣಿಸಿ ಮತ್ತದ
ನ್ನಳಿಸಿ ನಿಚ್ಚಳದಲೊರ್ವನೆ ನಿಲ್ವ ತಂತ್ರಿಹರಿಯೇ ಕರ್ತೃವೆಂದರಿವುದು ೮೮

ಸುತನೆ ತಿಳಿಯೈ ಗೃಹಸ್ಥಾಶ್ರಮವು ಪರಿಕಿಸುವ
ಡಿತರಾಶ್ರಮಂಗಳೊಳಗುತ್ತಮವು ಮಾಂಗಲ್ಯ
ವತಿಮನೋಹರಮುಭಯ ಸೌಖ್ಯಸಾಧನಮಪ್ಪುದರಿವಿನಿಂದಾಚರಿಸಲು
ಸತಿಗೆ ಸ್ವತಂತ್ರಮಂ ಪುತ್ರಗೇ ಸಲುಗೆಯಂ
ಯತಿಯೋಗಿ ಗುರುಹಿರಿಯರಿಂಗೆ ಸಂಕ್ಲೇಶಮಂ
ಸತತ ಸೇವಕನೀಚಜನರಿಗಾಂತರ್ಯಮನ್ನೀಯಲಾಗದು ಕುಶಲರು ೮೯

ಕಡುಭಾಷೆ ಸಲ್ಲ ದೊರೆ ಗುರು ಬಾಲ ಸತಿಯರೊಳ್
ಕಡುಸಲಿಗೆ ಸಲ್ಲ ಕೃತ್ರಿಮ ಕುಟಿಲ ದುಷ್ಟರೊಳ್
ಕಡುವಳಿಕೆ ಸಲ್ಲ ದಾಯಾದ್ಯರಿಪುವರ್ಗದೊಳ್ ಮರೆದು ಕನಸಿನೊಳಾದಡುಂ
ಕಡುವಲಸು ಸಲ್ಲ ಶ್ರೀಹರಿವಿಪ್ರಸೇವೆಯೊಳ್
ಕಡುತೃಷ್ಣೆ ಸಲ್ಲದಿಂದ್ರಿಯ ವಿಷಯಭೋಗದೊಳ್
ಕಡುವೈರ ಸಲ್ಲ ಪಾಚಕ ವೈದ್ಯ ಕವಿಗಳೊಳ್ ನೀತಿಯಿದು ನೃಪಜನರ್ಗೆ ೯೦

ಮರೆಯಲಾಗದು ಗುರುಕೃಪಾಲಬ್ಧಮಂತ್ರಮಂ
ತೊರೆಯಲಾಗದು ಸಾಧುಸನ್ಮಾರ್ಗತಂತ್ರಮಂ
ಬೆರೆಯಲಾಗದು ಕುಜನಕುಹಕದ ಕುಮಂತ್ರಮನ್ನಾಲಸ್ಯಮದಗಳಿಂದೆ
ಪರಿಯಲಾಗದು ನಿತ್ಯನೈಮಿತ್ಯಕೃತಿಗಳಂ
ಮೆರೆಯಲಾಗದು ಪರರ ನಿಂದಾತ್ಮನುತಿಗಳಂ
ಮುರಿಯಲಾಗದು ವರ್ಣಧರ್ಮಪದ್ಧತಿಗಳಂ ವಾಙ್ಮನಃಕಾಯಗಳಲಿ ೯೧

---

೮೮. 1. ನೆಳವಿಡಿದ ಪಿಂದಾದ; ನಳವಡದನೆರಡು ಪ್ರಾರಬ್ಧ.

ಕ್ಷುದ್ರರಪಮೆಗಳಿಂಗೆ ಮನಗೊಡದೆ ವಿಪ್ರಾರ್ಜಿ
ತ ದ್ರವ್ಯಗಳಲಿ ಕಾಂಕ್ಷೆಯನಿಡದೆ ಮಿತ್ರ ದ್ರೈ
ವದ್ರೋಹಿಗಳ ಕೃತ್ಯಕೆಡೆವಿಡದೆ ದಂಭವಂಚನೆಗಳನ್ನನುಸರಿಸದೆ
ಉದ್ರೇಕದಿಂ ಪೆಚ್ಚಿ ವರ್ತಿಸದೆ ಮನಸಿಜೋ
ಪದ್ರದಿಂ ಚಿತ್ತಗತಿ ವಕ್ರಿಸದೆ ಸತತ ವಿಲ
ಸದ್ರಮಾವರನ ನೆನಹನ್ನಗಲದಾವಗಂ ರಾಜ್ಯಭಾರದಲೆಸೆವುದು ೯೨

ಆರುಷೇಯದ ವೈದಿಕಾಚಾರಮಲುಗದೊಲ್
ಪೌರುಷೇಯಾದಿ ಲೌಕಿಕತಂತ್ರ ತೊಲಗದೊಲ್
ಸಾರೆ ಸದ್ಧರ್ಮಭೀತಿಯ ಬೆಸುಗೆ ಸಡಿಲದೊಲ್ ನಿತ್ಯ ನೈಮಿತ್ತಿಕಗಳ
ಸೇರುವೆಯ ಕಾಲಕರ್ಮದ ಹಸುಗೆ ತಪ್ಪದೊಲ್
ಭೂರಿದಾನಕ್ರಿಯೆಗೆ ಪಲ್ಲಟಗಳೆರಗದೊಲ್
ಮೇರೆಯಂ ಮುರಿವ ನಿದ್ರಾರತಿಗಳೆಳೆಯದೊಲ್ ಸುಮತಿಯಿಂದಾಚರಿಪುದು ೯೩

ದೇಶದೊಳು ಯಜನಾದಿ ಹವ್ಯಕವ್ಯಗಳಿಂಗೆ
ಬೇಸರೊಂದಿರದಲೇ ಬಲವಂತದಿಂದೆ ಬಲು
ಗಾಸಿ ದುರ್ಬಲಜನರಿಗಿರದಲೇ ಪುಲಿಕರಡಿ ದುಷ್ಟಮೃಗದಲೆಯಿರದಲೇ
ಆಸುರಾಚಾರ ದುಷ್ಕರ್ಮಮೇರ್ಗೊಳದಲೇ
ಮಾಸಿ ವರ್ಣಾಶ್ರಮಾಚಾರ ಹಸಗೆಡದಲೇ
ನೀ ಸತತಮಿದರ ಶೋಧನೆಗಳಂ ಮರೆದಿರೆಯಲೇ ನೃಪತಿ ನಿನ್ನಿಳೆಯೊಳು ೯೪

ಭೂತಸಂತೃಪ್ತಿ ಋಷಿ ದೇವ ತರ್ಪಣಗಳ
ಸ್ನಾ ತೆರದಲಭ್ಯಾಗತಾದಿ ಸೇವನೆಗಳಂ
ನೀತಿಸನ್ಮಾರ್ಗ ಸತ್ಕರ್ಮ ನಿಯಮಂಗಳಂ ದೇವತಾರಾಧನೆಗಳಂ
ಪೂತ[1]ಪೂ[1]ವನಮಾರ್ಗ ತರುಪಾಲನಂಗಳಂ
ಬೀತಕೆರೆ ದೇವಾಲಯಾದಿಯುದ್ಧರಣಗಳ
[2]ನೀ[2]ತಿತಪ್ಪದೆ ನಡಸುತಿಹರಲೇ ನಿನ್ನಾಜ್ಞೆಗೋರೆಕೋರೆಗಳಿಲ್ಲದೆ ೯೫

---

೯೫. 1. ಪಾ. 2. ರೀ.

ದ್ವಿಜವರ್ಣಕಾಚಾರ ವೇದೋಕ್ತಕರ್ಮ ಹೃ
ದ್ವಿಜಯ ಶಮೆದಮೆ ತಪಂ ಶೌಚ ಸದ್ಧರ್ಮ ಭೂ
ಭುಜರಿಗಂ ವಿಪ್ರಪೋಷಣೆ ಸತ್ಯ ದಾನ ಯಜ್ಞಾದಿಗಳೆ ಸದ್ಧರ್ಮವು
ನಿಜಧರ್ಮ ವೈಶ್ಯರ್ಗೆ ವಾಣಿಜ್ಯ ಕೃಷಿಗಳವು
ಋಜುಗತಿಯು ಶೂದ್ರರಿಂಗಗ್ರ ವರ್ಣಾರ್ಚನೆಯು
ಭಜಿಸುವರಲೇ ವರ್ಣಧರ್ಮ ಕರ್ಮಂಗಳಂ ಸಂಕರತೆಯೆರಗದಂತೆ ೯೬

ಈ ಮಹಿಮೆಯಿಂದೆ ವರ್ಣೋಚಿತದ ಕರ್ಮಗಳ
ಕಾಮವಿರದಾರ್ಜಿಸಲ್ ಹರಿಯೊಲ್ಮೆಯಿಂ ಮುಕ್ತಿ
ಸೀಮೆಯನು ಸುಲಭದಿಂದೈದಿಸುವ ಸುಜ್ಞಾನಮುಳವಡುವುದಿಂತು ಮರೆದು
ತಾಮಸದಾಲಾರ್ಜಿಸಿದಡೊದಗದಮಲತ್ವಮಿಂ
ತೀ ಮರ್ಮವರಿದು ವರ್ಣಾಶ್ರಮಾಚಾರಗಳ
ನಾ ಮುಕುಂದಾರ್ಪಣೆಯನೆಸಗುತಾಚರಿಪಂತೆ ನಿಯಮಿಪುದು ನಿಖಿಳನುತಕೆ ೯೭

ಹರಿಯಲ್ಲದಿನ್ನೊಂದು ಪರದೈವವಿಲ್ಲವೆಂ
ಬರಿವ ನಿಶ್ಚಯಗೊಳಿಸಿ ಕರಣತ್ರಯಂಗಳಿಂ
ವಿರಚಿಸುವ ಕರ್ಮಗಳನೆಸಗಿ ನಿರ್ಮಮತೆಯಿಂ ಮುರಹರಂಗರ್ಪಣವನೆಸಗಿ
ಚರದೊಳುಂ ಚಿರದೊಳುಂ ಪರಿಪೂರ್ಣನೆಂಬುದ
ನ್ನರಿದು ಸರ್ವದೊಳು ಸಿರಿಧರನ ಸಂಭಾವಿಸು
ತ್ತೆರಗಿ ಸಂಹಿತಬುದ್ಧಿವೆರೆದು ನಿಸ್ಸಂಗದೊಳ್ ಪರಿಣಮಿಸಿ ಸುಖಿಯಪ್ಪುದು ೯೮

ಮನಸಿನಿಂ ಧ್ಯಾನಮಂ ವಾಕ್ಯದಿಂ ನುತಿಗಳಂ
ತನುವಿನಿಂ ಪರಿಚರ್ಯ್ಯಮಂ ಸಮನ್ವಿಸಿ ವಾಕ್ಯ
ಮನಸು ಕಾಯಗಳಾದ ಕರಣತ್ರಯಂಗಳೊಂದುಗೂಡಿ ನಿಜಭಕ್ತಿಯಿಂದೆ
ಮನನ ಶಮೆ ಶಾಂತಿ ತುಷ್ಟಿಗಳೆ ಮಾನಸ ತಪವು
ವಿನಯನುಡಿ ಸುತಿಶೂನ್ಯತೆಗಳೆ ವಾಙ್ಮಯ ತಪವು
ವಿನುತ ಹರಿಪೂಜೆ ಯಾತ್ರೆಗಳೆ ಕಾಯಕತಪವು ತಪಸನಿಂತಾಚರಿಪುದು ೯೯

ಚಿತ್ತ ಸುಜ್ಞಾನದೊಳ್ ವಾಕ್ಯ ಸದ್ಭಕ್ತಿಯೊಳ್
ಮತ್ತೆ ತನುಭೋಗವೆ ವಿರಾಗದೊಳ್ ಸತ್ಕರ್ಮ
ವೃತ್ತಿ ನಿಷ್ಕಾಮದೊಳ್ ದಾನ ನಿರಹಮ್ಮಿನೊಳ್ ಗೃಹಕೃತ್ಯ ನಿರ್ಮಮದೊಳು
ವಿತ್ತ ವಿತರಣಗಳೊಳ್ ವಿಜಯಮಿಂದ್ರಿಯಗಳೊಳ್
ಹೃತ್ತವಕ ಮುಕ್ತಿಸಾಧನಗಳೊಳ್ ನೆಲಸಿ ರಮಿ
ಸುತ್ತಿರಲು ರಾಜಋಷಿಯೆಂಬರಾ ಭೂಪನಂ ನೀನಂತು ವರ್ತಿಸುವುದು ೧೦೦

ಭೂಪ ಕೇಳೀ ತೆರದಲಖಿಲಕೃತ್ಯಂಗಳಂ
ಶ್ರೀಪತಿಯ ಚರಣಕೆ ಸಮರ್ಪಿಸುತ ಕರ್ಮನಿ
ರ್ಲೇಪನೆಂದೆನಿಸಿ ನಿಜರಾಜ್ಯಭಾರದಲೆಸಗಲಾವ ವೃತ್ತಿಯಲಿರಗಲು
ಆ ಪರಮಪುರುಷಪ್ರಸಾದದಿಂ ವಿಜ್ಞಾನ
ರೂಪಿಸುವುದಿದು ಸತ್ಯ ತಾನುತನದೆಂಬ ಮಾ
ಯೋಪಾಧಿಯುನ್ನಳಿದು ಸರ್ವಸಮಮತಿಯನಾಂತನಿಶ ಪರಿವರ್ತಿಸುವುದು ೧೦೧

ಈ ವಿಧದಿ ವರ್ಣಾಶ್ರಮಾಚಾರ ಧರ್ಮಗಳ
ಭೂವರಗನುಗ್ರಹಿಸಿ ಭಾಗವತ ಕಥನವಹ
ಶ್ರೀವರ ಪುರಾಣಮುನ್ನುಪದೇಶಮಂ ಗೈವ ಸುಪ್ರೇಮಮುನ್ನಾನುತ
ಆ ವಿಮಲ ಶೇಷಾದ್ರಿ ವೇಂಕಟೇಶ್ವರ ರೂಪ
ನಾವಗಂ ಪೊರೆವ ಕೌಂಡಿಣ್ಯಗುರುವರನ ಸಂ
ಭಾವಿಸುತ ತದ್ರೂಪನಾಂತಾ ಸುಮಂತ ಮುನಿವರನೆಸೆದನರ್ಥಿಮಿಗಲು ೧೦೨

ಅಂತು ಅಧ್ಯಾಯ ೨ ಕ್ಕಂ ಪದನು ೧೩೦ ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ.

೩. ನಾರದರು ಭಾಗವತವನ್ನು ಪಡೆದದ್ದು

ಸೂಚನೆ :

ಯೋಗಿವರ ನಾರದಂ ಕಮಲಭವನಿಂ ಲಸ |
ದ್ಭಾಗವತ ಹರಿಪುರಾಣವ ಪಡೆದು ಲೋಕಹಿತ
ವಾಗೆ ವೇದವ್ಯಾಸ ಮುನಿಗನುಗ್ರಹಿಸಿದಂ ವರಬದರಿಕಾಶ್ರಮದೊಳು ||

ವಸುಮತೀವರ ಲಾಲಿಸಾದಿಯೊಳ್ ವಿಧಿಯ ಮಾ
ನಸಪುತ್ರ ನಾರದಂ ಮೂಲೋಕ ಸಂಚಾರ
ವೆಸಗೆ ಚಿತ್ತದಲೂರಿ ಲೀಲೆಯಿಂ ಶಕ್ರಪುರವನ್ನೈದಿ ನೋಡಿ ಮತ್ತೆ
ಮಿಸುನಿಗಿರಿ ರಜತಾದ್ರಿ ಮಂದರಾಚಲಗಳೊಳ
ಗೆಸೆವ ಪುಣ್ಯಕ್ಷೇತ್ರ ವನಗುಹಾದಿಯಲಿ ಶೋ
ಭಿಸುವ ತಾಪಸರ ಮಹಿಮೆಗಳ ನೋಡುತ ಜಾಹ್ನವಿಯ ತೀರಕ್ಕೈತಂದನು ೧

ಗಂಗೆಯಂ ಭಜಿಸಿ ಯಮುನೆಯನು ಬಲಗೊಂಡು ಮಿಗೆ
ಕಂಗೊಳಿಪ ಸರಯು ಮಂದಾಕಿನಿಯು ಪೊಗಳಿ ಮುದ
ದಿಂ ಗಮಿಸಿ ನರ್ಮದೆಯ ನೆನೆದು ಗೋದಾವರಿಯ ಬಗೆಗೊಂಡು ಭೀಮರಥಿಯ
ಶೃಂಗಾರಮಂ ನೋಡಿ ಕೃಷ್ಣವೇಣಿಯ ಪಾಡಿ
ತುಂಗಭದ್ರೆಗೆ ನಮಸ್ಕರಿಸಿ ಕಾವೇರಿಯಂ
ಹಿಂಗದಾಂತರ್ಯದೊಳ್ ಭಾವಿಸುತ ದೇಶಕೋಶವ ನೋಡುತ್ತೈತಂದನು ೨

ಝುಣಝುಣತ್ಕಾರ ವೀಣಾಮಧುರನಿಸ್ವನಮೆ
ಪ್ರಣವನಾದದ ಸೊಂಪ ಪಸರಿಸಲ್ ಶೋಭಿತ
[1ಕ್ವಣನನಿ]1 ಸ್ವನದ ಪದ್ಮಾಕ್ಷಕರಕಂಕಣಮೆ ನಿಗಮಸೂತ್ರವನರುಪಲು
ನಣನಣದು ನಟಿಸುವಾನಂದಮದು ದೈತ್ಯಾ
ರಣರಣೋತ್ಸವ ಶಿವನ ನೃತ್ಯಮಂ ಸೂಚಿಸಲ್
ಮಣಿಮಣಿದು ನುತಿಪ ಭಕ್ತರನು ಪರಿಪಾಲಿಸುತಲಮರರ್ಷಿಯೈತಂದನು ೩

---

೩. 1. ಗ್ವಣಗಣ; ಕ್ವಣಕ್ವಣ.

ಅಡಿಯಿಡುವ ಮಹಿಮೆಯಿಂದವನೀಪವಿತ್ರಮಂ
ಕಡೆಗಣ್ಣ ನೋಟದಿಂ ಕಲುಷೋಪಶಮನಮಂ
ನುಡಿವ ಹರಿನಾಮಸಲ್ಲಾಪದಿಂ ಲೋಕಪಾವನತೆಯಂ ನೆರೆಬೆಳಗುತೆ
ಒಡಲ ಘನಕಾಂತಿಯಿಂ ವಿಶ್ವಪ್ರಕಾಶಮಂ
ಕಡು ಶಾಂತಕಳೆಗಳಿಂ ಕಲಿತಾಪಶಮನಮ
ನ್ನೊಡನೆ ಕಲ್ಪಿಸುತ ನಾರಾಯಣಪದಧ್ಯಾನಕೋವಿದಂ ನಡೆತಂದನು ೪

ತೊನೆತೊನೆದು ಕುಣಿಕುಣಿದು ಹರಿಗುಣಚರಿತ್ರೆಯಂ
ನೆನೆನೆನೆದು ನಲಿನಲಿವುತಾನಂದ ಬಾಷ್ಪದೊಳ್
ನನೆ ನನೆದು ಸುಳಿಸುಳಿದು ಸುಜ್ಞಾನರ್ಘೋಷಿನಿಂದರೆದೆರೆದ ಕಿರಿಗಂಗಳಿಂ
ಮಿನುಮಿನುಗಿ ಪೊಳೆಪೊಳೆವ ಕೋಮಲಶರೀರರುಚಿ
ಘನಘನದಿ ಕಳಕಳಿಪ ಮಿಂಚಿನಂತೆಸೆಯೆ ಮಿಗೆ
ತನತನಗೆ ಬಂದು ಬಂ[1]ದಡ[1]ಗೆಡೆವ ಭಕ್ತಜನಗಡಣದಿಂ ನಡೆತಂದನು ೫

ನೋಡಿ ಜವನುರುಬೆಯಂ ತರುಬಿದರ್ಕೆಲರು ಮಾ
ತಾಡಿ ಭವರುಜೆಗಳಂ ಗಜರಿದರ್ಕೆಲರು ಕೊಂ
ಡಾಡಿ ಪುಸಿಮೋಹಮಂ ಸೋಹಿದರ್ಕೆಲರು ತನ್ಮುನಿಮಹಾಮಹಿಮೆಗಳನು
ಪಾಡಿ ಪಾಪಂಗಳಂ ಹಿಂಗಿದರ್ಕೆಲರು ಮಿಗೆ
ಬೇಡಿ ಶೋಕಂಗಳಂ ನೂಕಿದರ್ಕೆಲರು ಮೊಡ
ನಾಡಿ ತಾಪತ್ರಯುವ ಜಯಿಸಿದರ್ಕೆಲರು ಹರಿಶರಣರುನ್ನತಿಕೆಯೆಂತೊ ೬

ಮನುಜರುಪಚರಣೆಗಂ ತೋಷಿಸುತ ಭೂಷಿಸುತ
ಲನಿಶ ವಲ್ಲಕಿಯಂ ನಿನಾದಿಸುತ ಬೋಧಿಸುತ
ವನಜಾಕ್ಷನಾಮಸಂಕೀರ್ತನೆಯ ನರ್ತನೆಯನನುವಿಡಿದು ತನುವ ಮರೆದು
ಮನಸಿಗಿಂಪಿನ ಮಧುರಸೂಕ್ತಿಯಿಂ ಭಕ್ತಿಯಿಂ
ನೆನೆವ ಸುಜನರನು ಪರಿಪಾಲಿಸುತ ಲಾಲಿಸುತ
ವಿನಯ ವಿಜ್ಞಾಪನೆಯ ಮೂಜಗಂ ಸೋಜಿಗಂಬಡುತಿರಲ್ ನಡೆತಂದನು ೭

---

೫. 1. ದೆಡೆ.

ಈ ತೆರದಿ ನೋಡುತ್ತೈತಂದನವನಿಯಲಿ ಜನ
ಜಾತ ಪರಿವರ್ತನೆಯ ಪರಿಕಿಸುತ ಜಡಕರ್ಮ
ರೀತಿಯುನ್ನತಿಕೆಯಂ ಮೆರೆವ ಮೀಮಾಂಸೋಕ್ತ ಕೃತ್ಯವೆಗ್ಗಳಮಲ್ಲದೆ
ಆತುಮಧ್ಯಾನಮಂ ಮೆರೆವ ವೇದಾಂತ ತ
ತ್ತ್ವಾತಿಶಯ ಯೋಗಂಗಳೆನಿಸುವಧ್ಯಾತ್ಮ ವಿ
ದ್ಯಾತಪೋನಿಯಮಗಳ್ ಹರಿಕಥನಗಳ್ಮಸುಳಿಸಿರಲದಂ ಕಂಡನಂದು ೮

ಅಕಟ ಬರಿಸಿದ ಬಾದರಾಯಣಂ ಭುವಿಗೆ ಕಾ
ಮಿಕದ ಕರ್ಮವನೂರಿ ಪುಲುಮನುಜರೆಂದಿಗೂ
ಮುಕುತಿಯನ್ನೈದಲೆಡೆಗೊಡದ ಘನಕರ್ಮಕಾನನವನುರೆ ಎಳಸಿ ಬಳಸಿ
ರಕುತ ಮಲಮೂತ್ರಪೂರಿತ ಗರ್ಭಕೆಳೆವ ಮೋ
ಹಕಗಳಂ ಬಲಿದು ಕೊಲುತಿಹನಲಾ ಲೋಕನು
ನ್ನಕುಟಿಲ ಸುಖೈಕ ನಿಃಶ್ರೇಯಸವ ನೀವ ಸುಲಭೋಪಾಯಮನ್ನೆಸಗದೆ ೯

ಅಡಸಿರ್ಪ ಭಂಗತನುವೆನಿಪ ಲವಣಾಬ್ಧಿಯಂ
ಬಿಡದಿನಿಗಳಂ ಬಲಿವ ವಿಷಯದಿಕ್ಷ್ವಬ್ಧಿಯುಂ
ತೊಡರಿ ದುರ್ವಾಸನೆಗಳಳಿಯದ ಸುರಾಬ್ಧಿಯಂ ಸ್ನೇಹಮೆಡೆಗೊಂಡಾವಗಂ
ಕಡೆಗೊಳದ ಪ್ರಾಕ್ಕರ್ಮವೆಂಬ ಸರ್ಪ್ಯಬ್ಧಿಯಂ
ಕಡುಮಾಂದ್ಯಮೆರಗಿ ಕದಲಿರದ ದಧ್ಯಬ್ಧಿಯಂ
ಕಡೆಗಂಡು ವಿಮಲ ಪರಗತಿಯ ದುಗ್ಧಾಬ್ಧಿಯ ನ್ನೈದುವರದೆಂತೊ ನರರು ೧೦

ಅಂತಮಿಲ್ಲದ ಕರ್ಮಕಾನನವನುತ್ತರಿಸಿ
ಮುಂತಳೆದು ಬದುಕಲಾಪರೆ ನರರು ಕಡೆಗೊಳುವ
ರೆಂತಾವಸಾಧನದಲಿದಕೆ ತರಣೋಪಾಯಮಾವ ದೆಸೆಯಿಂದಲೆನುತ
ಅಂತರಂಗದಲಿ ನಿಗಮೋದಿತರಹಸ್ಯಮಂ
ಚಿಂತಿಸಿ ವಿಚಾರದಿಂ ನಿಶ್ಚಯಂಗೊಂಡು ಶ್ರೀ
ಕಾಂತ ಭಜನೆಯಲಲ್ಲದನ್ಯ ಸಾಧನಮಿರದು ಸುಲಭಮಿದು ಸಾಕೆಂದನು ೧೧

ಹರಿ[1]ಪಾದ[1]ಪಾವಕಂ ದುರಿತವನದಾಹಕಂ
ಹರಿನಾಮ ಮೃಗವರಂ ಗರ್ವಮದಗಜ ಹರಂ
ಹರಿಭಾವನಾಂಜನಂ ಹೃತ್ತಮೋಭಂಜನಂ ಹರಿಭಕ್ತಿ ನಿಜವಿಮುಕ್ತಿ
ಹರಿಚರಣಸೇವನಂ ಗತವಿಷಯಜೀವನಂ
ಹರಿಗುಣಸಮೀರಕಂ ಕಲುಷಾಭ್ರಹಾರಕಂ
ಹರಿಯುಲ್ಲದಿನ್ನು ಭವ ಹರಿಯದೆನೆ ನಿಶ್ಚಯವನಾಂತು ಪುಲಕಿತನಾದನು ೧೨

ವೇದಶಾಸ್ತ್ರಾಗಮಂಗಳನರಸಿ ನೋಡಲಾ
ಶ್ರೀಧರಾಂಘ್ರಿಗಳ ಭಜನೆಯಲಲ್ಲದನ್ಯವಹ
ಸಾಧನದಲೊದಗದವ್ಯಯ ಮುಕ್ತಿಯೆಂದುಸುರಲದು ಮುಖ್ಯವಹುದೈಸಲೇ
ಆ ದಿವ್ಯಮೂರ್ತಿ ಸದ್ಗುಣಚರಿತಾಮೃತವ
ಹೋದಧಿಯುಲದ್ದುವೆಂ ಕರ್ಮತಪ್ತರನೆನು
ತ್ತಾದಯಾನಿಧಿ ನಾರದ ಬ್ರಹ್ಮನಾಗ ಸಂಕಲ್ಪಮಂ ತಳೆದನಂದು ೧೩

ಈ ತೆರದಿ ನಿಜನೇಮವನ್ನಾಂತು ತೊಡರಿ ಜನ
ಜಾತಮಂ ಮೋಹಿಸುವ ಕರ್ಮಮಂ ಕಳಚಲೆಂ
ಬಾತುರದಲಭ್ರಮನ್ನಡರಿದಂ ಪೂರ್ವಾದ್ರಿಯಂ ಬಾಲರವಿಯೇರ್ವವೋಲ್
ಪೂತಕಾಷಾಯಾಂಬರದ ಕಾಂತಿ ಕೆಮ್ಮುಗಿಲ
ರೀತಿಯನ್ನರುಹಲ್ಕೆ ಸುಜನ ಹೃತ್ಕಮಲಂಗ
ಳೋತು ಪೊರೆಯುಲ್ಕಲುಷ ತಮವ ನೂಕುತ ಸತ್ಯಲೋಕಮಂ
ಸಾರ್ದನಂದು ೧೪

ರಾಜಹಂಸೋಪಮದ ಶಾಂತ ತನುಕಾಂತಿಯಿಂ
ರಾಜಹಂಸೆಯನಡರಿ ಶರಣಜನ ಹೃತ್ಪದ್ಮ
ರಾಜಹಂಸಂ ಹರಿಸ್ಮರಣೆ ವಿಸ್ಮರಣೆ ಮಿಗಲಜನಗರಿಯನ್ನೈದಲು
ರಾಜರಾಜಾದಿ ದಿಗ್ವರರು ನಿರ್ಜರರುಗಳ
ರಾಜಿ ರಾಜಿಪ ಸಭಾಂತರದಿ ವಿಷ್ಟರದಿ ನೆರೆ
ರಾಜಿಸುವ ರಾಜೀವ ಪೀಠನಿಂಗರುಹಿದರ್ದೇವಋಷಿಯಾಗಮನಮಂ ೧೫

———

೧೨. 1. ದಾವ.

ಜೀಯ ಚಿತ್ತವಿಸು ನಮ್ಮೀ ನಗರಿಗಮರಮುನಿ
ರಾಯ ನಾರದವರ್ಯನಾಗಮನ ಸಂಘಟನ
ಮಾಯಿತಿಂದಿನಲೆಂದು ಬಿನ್ನವಿಸಲಾ ವಾರ್ತೆಯಂ ಕೇಳ್ದು ಹರ್ಷ ಮಿಗಲು
ಶ್ರೀಯರಸ ಲೀಲಾವತಾರನನ್ನಿದಿರುಗೊಳ
ಲೀ ಯಮಪುರಂದರಾನಲ ಧನಪವರುಣನಾ
ವಾಯುಮುಖ ದಿಕ್ಪಾಲಸನಕಾದಿ ಋಷಿಗಳ ನ್ನಟ್ಟಿದನಿದಿರುಗೊಳಲಜಂ ೧೬

ಗಂಗಾಪ್ರವಾಹದೊಳ್ ಬೆರೆವ ಯಮುನಾ ಮುಖ ತ
ರಂಗಿಣಿಯದೆಂಬಿನಿಂ ಸನಕಾದಿಯೋಗಿವರ
ರಂಗರೋಚಿಯ ವೀಚಿಗಳೆ ದೇವಮುನಿಯ ಮೈವೆಳಗುಪ್ರವಾಹದೊಡನೆ
ಸಂಗಮದಲೆರಗುತಿರಲಿಕ್ಕೆಲದಲೆಸೆವ ಸೌ
ಧಂಗಳೊಳು ನೋಳ್ಪ ಕಾಂತೆಯರ ಕಣ್ಬೆಳಗುಮ
ತ್ಸ್ಯಂಗಳೆಡೆವರಿವುತಿರಲೈತಂದು ತೊಡರಿ ವಂದನೆಗಳೊಳ್ ಸಂದರಂದು ೧೭

ಕೆಲಬರ್ಗೆ ಪುನರಪಿ ನಮಸ್ಕರಿಸಿ ಕೆಲಬರ್ಗೆ
ಬಲವಂದು ಭಾವದೊಳ್ ಗುರುಮನ್ನಣೆಯಲೆರಗಿ
ಕೆಲಬರಂ ಹರಸಿ ಕೆಲಬರನು ಕುಡಿನೋಟದಿಂ ಬಗೆಗೊಂಡು ವಿನಯ ಮಿಗಲು
ಕೆಲಬರಂ ಕೈಸನ್ನೆಯಿಂ ಸಂತಮಿಟ್ಟು ಮಿಗೆ
ಕೆಲಬಲದ ಜನಜಾಲ ಕಲಕಲವು ಮೊಳಗಲಿ
ಕ್ಕೆಲದ ಕರುವಾಡಾಗ್ರ ಸೊಬಗಿಯರ ನೇತ್ರರುಚಿ ಕವಚಯುತನೈತಂದನು ೧೮

ಪರಿಕಿಸಲು ಭೂರ್ಭುವಸ್ವರ್ಮಹೋಜನತಪಃ
ಪುರಮಹಾಲಕ್ಷ್ಮಿಯರ ಸೀಮಂತಮಣಿಯೆನಿಸಿ
ಪರಿಶೋಭಿಸುವ ಸತ್ಯಪುರಿಯ ಸೌಭಾಗ್ಯ ಸೌಂದರ್ಯಗಳನೆಣಿಕೆಗೊಳಲು
ಪರಿಮಿತಗಳಿಹುದೆ ಸಚರಾಚರವ ಸೃಷ್ಟಿಸುವ
ಗರುವನಾಸ್ಥಾನಮೆನಿಸಿರಲು ಲಾವಣ್ಯ ಬಂ
ಧುರ ಗೃಹಾರಾಮ ಸಿರಿ ಸೌಖ್ಯ ಶುಭವಿಭವದಚ್ಚರಿಯ ಬಗೆಗೊಳಲಕ್ಕುಮೆ ೧೯

ಶ್ರುತಿಯೆ ಪುರರೂಪಾಗಿ ನೋಡಲದರೊಳವ ಸಂ
ಹಿತೆಯೆ ಸಾಲಾವಲಯವಾಗಿ ಲಸದಷ್ಟಾಂಗ
ಮತಿಶಯದ ತವಗಂಗಳಾಗಿ ಮೇಣಜ್ಝುಕೊತ್ತಲಪನಸದೆನೆಗಳಾಗಿ
ಚತುರತರ ಋಕ್ಕುಗಳೆ ಸದನಪಂಕ್ತಿಗಳು ಶೋ
ಭಿತವಾಗಿ ಪದ ರಾಜಗೃಹವಾಗಿ ಕ್ರಮವೆ ವಾ
ಕೃತಿಯ ಓಲಗಶಾಲೆಯಾಗಿ ಜಟೆಯೇ ಶಯನದೆಡವಾಗಿ ರಂಜಿಸಿದುದು ೨೦

ವೇದಾಂಗವೆನಿಸಿಪ ಕಲ್ಪವೆ ಭೂತಸೃಷ್ಟಿ ಸಂ
ಪಾದನೆಯ ಸುಸ್ಥಳವು ಜೋತಿಷವೆ ಪಾಲನೆಯ
ಗೈದು ಬೆಳಸುವ ಕಾಲಹಸುಗೆಯಂಗಡಿ ಶಿಕ್ಷೆಯೇ ಶಿಕ್ಷೆಗೈವೆಡನದು
ಆ ದಿವ್ಯ ಛಂದಸ್ಸು ವಿಧಿನಿರ್ಣಯ ಸ್ಥಾನ
ಮಾದುದು ನಿರುಕ್ತಮೇಕಾಂತ ಮಂದಿರ ರೂಪ
ವೈದೆ ಸುವ್ಯಾಕರಣ ವಾಕ್ಯಪಲ್ಲಟ ವಿಚಾರಣೆಯ ಚಾವಡಿಯೆನಿಸಿತು ೨೧

ಆಗಮವೆ ನಿತ್ಯಕರ್ಮಾಚಾರ ಶಾಲೆಯದು
ಮೇಗೆಯಷ್ಟಾದಶ ಶ್ರುತಿಗಳಪರಾಧಂಗ
ಳಾಗುಹೋಗಿಂಗೆ ಪ್ರಾಯಶ್ಚಿತ್ತ ಚಾವಡಿ ಪುರಾಣಮೇ ಗಾನದೆಡನು
ಯೋಗವೇದಾಂತ ಮೀಮಾಂಸ ತರ್ಕಂಗಳೆ ಜ
ನೌಘದಧಿಕಾರಗಳ ಪರಿಕಿಸುತ್ತವರಿಗು
ದ್ಯೋಗಂಗಳೀವ ಸೊಬಗಿನ ಹಜಾರಗಳೆನಿಸಿತೇವೇಳ್ವೆನದ್ಭುತವನು ೨೨

ಎಲ್ಲರುಂ ಮಂಜುಳಾಕಾರಿಗಳ್ ತತ್ಪುರಜ
ರೆಲ್ಲರುಂ ಭೂತಹಿತಕಾರಿಗಳ್ ಹಿರಿಕರಿಯ
ರೆಲ್ಲರುಂ ತತ್ತ್ವಾಧಿಕಾರಿಗಳ್ ನಿರ್ಗತ ವಿಕಾರಿಗಳ್ ಪರಿಕಿಸಲ್ಕೆ
ಎಲ್ಲರುಂ ಸುಕೃತ ಸಹಕಾರಿಗಳ್ ಸತಿಪುರುಷ
ರೆಲ್ಲರುಂ ಲಸದಲಂಕಾರಿಗಳ್ ಗೃಹಿ ಗೃಹಿಗ
ಳೆಲ್ಲರುಂ ಭೋ[1][ಗೋಪ][1]ಕಾರಿಗಳ್ ಸದ್ಗುಣಾಕಾರಿಗಳ್ ಬಗೆಗೊಳ್ಳಲು ೨೩

---

೨೩. 1. ಗಪಾ.

ದಿವ್ಯಮಂದಿರಗಳಿಂ ದಿವ್ಯಬನಸಿರಿಗಳಿಂ
ದಿವ್ಯಸುರತರುಗಳಿಂ ದಿವ್ಯಗೋಪುರಗಳಿಂ
ದಿವ್ಯಸುಸ್ವರಗಳಿಂ ದಿವ್ಯವಿಷ್ಟರಗಳಿಂ ದಿವ್ಯಪರಿಕರಗಳಿಂದೆ
ದಿವ್ಯಮೃಗತತಿಗಳಿಂ ದಿವ್ಯಖಗರುತಿಗಳಿಂ
ದಿವ್ಯಮುನಿಯತಿಗಳಿಂ ದಿವ್ಯಸುವ್ರತಿಗಳಿಂ
ದಿವ್ಯಸತಿಪತಿಗಳಿಂ ದಿವ್ಯಮೂರುತಿಗಳಿಂ ದಿವ್ಯಮಂಗಳಮೆನಿಸಿತು ೨೪

ಈ ಜಸಂಗಳಲಿ ಪರಿಶೋಭಿಸುವ ತತ್ಪುರದ
ಸೋಜಿಗವ ನೋಡಿ ಹಿಗ್ಗುತಲಾಗ ನಾರದಂ
ರಾಜಮಾರ್ಗದಿ [1]ಋ[1]ಕ್ಷರಾಜನಂತೈದಿದಂ ದಂತರುಚಿಕೌಮುದಿಗಳಿಂ
ರಾಜಿಸುವ ಜನಜಲಧಿ ಪೊರೆದುಬ್ಬುತಿರೆ ಹಸ್ತ
ರಾಜೀವಗಳ್ಮುಕುಳಿತಂಬಡೆಯೆ ಭಕ್ತಜನ
ರಾಜಿ ಜಯಜಯಘೋಷಮೇರ್ಗೊಳಲ್ ನಡೆತಂದ ರಾಜಮಂದಿರ ಸರಿಸಕೆ ೨೫

ಅಜನ ಕಾಣ್ಬಾತುರದ ತೀವ್ರಗತಿಯಿಂದೆ ಪೊದೆ
ದಜಿನ ಸರಭಸರವದ ಮೋಡಿಯಿಂದನಿಶ ತಾ
ನಜನನೆನಿಸಿರ್ದಡಂ ಸಜನದಿಂದೈತಂದು ಬ್ರಹ್ಮಸಭೆಯನ್ನೇರಲು
ನಿಜಸುತನು ಬಂದುದಂ ಕಂಡು ವಾಣೀವರಂ
ನಿಜಸುತನುಪೊಣ್ಮೆಸಿಂದುಬ್ಬುತ ಮರೀಚಿ ಮೌ
ನಿಜಸುತನು ಕೈಗೊಡಲ್ ನಾರದಂ ನಡೆತಂದನಾಸ್ಥಾನಮಂಟಪದೊಳು ೨೬

ಮೇರೆಯಿಲ್ಲದ ಜೀವರಾಶಿಗಳನನುಗೈವ
ಧೀರ ತಾನಾದಡುಂ ಪೂರ್ವಕರ್ಮದ ಫಲವ
ನಾರಾದಡುಂ ಭೋಗಿಸದೆ ತೀರದೆಂಬುದಂ ಜನರಿಗುಪದೇಶಿಪಂತೆ
ಸಾರಿದ್ಯೈಸುಖದಲೊಂದಳಿದಡವನೊಡವಟ್ಟು
ತೋರಿ ಚತುರಾಸ್ಯ ರೂಪಿಂದೆ ಜಸವಡೆದ ಸರ
ಸೀರುಹಾಸನಸಂಘ್ರಿಯೊಳ್ ಪಣೆಯನೊಂದಿಸಿದನಾಗ ಜಯಘೋಷ
ಮಿಗಲು ೨೭

---

೨೫. 1. ಯ

ಧಾತ್ರೀಶ ಕೇಳ್ಕಮಲ [1][ಚಂದ್ರಗಳಿ][1] ವರ್ರೈ
ಕತ್ರದಿಂದೊಡಗೂಡಿ ಪೂರ್ವವೈರವನುಳಿದು
ಮಿತ್ರತೆಯಮರ್ದ ಸಂತಸದಲಿನ್ಮ್ಯೈಯಾಂತ ಪ್ರತ್ಯಕ್ಷ ತೋರುವಂತೆ
ಧಾತ್ರುಪದಲಾವಣ್ಯ ರಸದಿ ಮಗುಳುದಿಸಿ ಜೈ
ವಾತೃಕಾಯತಮುಖವು ತೋರ್ದುದದರಿಂ ಪರವಿ
ಚಿತ್ರವರ್ಣವನಾಂತು ತೋರಿದುದು ಪದಮಿದು ವಿಚಿತ್ರವರ್ತನೆಯಾದೊಲು ೨೮

ಇಂತು ಸನ್ನುತಿವೆರಸಿ ವಂದನೆಯಲೆಸೆವ ಸುತ
ನಂ ತೆಗೆದು ತಕ್ಕವಿಸಿ ಮನ್ನಿಸುತಲಾಗ ಸಮು
ಹಂತಿಯೊಳ್ ಕುಳ್ಳಿರಿಸಿ ಮಧುರೋಕ್ತಿ ಮಿಗೆ ಕುಶಲವಾರ್ತೆಯಿಂ ಮುನಿಮನವನು
ಸಂತೈಸಿ ಸಕಲೋಪಚಾರಮನ್ನನುಗೈದ
ಪಿಂತೆ ವಾಸವಮುಖ್ಯದಿಕ್ಪಾಲರೊದಗಿನಿಂ
ತಂತಮಗೆ ಕಾಣಿಕೆಗಳಿತ್ತೆರಗಿ ಪೊಗಳಿ ಹರಕೆಗಳಾಂತರುತ್ಸವಮೆನೆ ೨೯

ಪಾಲ್ಗಡಲಮಧ್ಯದೊಳ್ ಪರಿಶೋಭಿಸುವ ಶಾರ್ಙ
ಬಿಲ್ಗೈಯನೆನಿಪ ಹರಿನಾಮಕೀರ್ತನೆಗಳಂ
ಸಾಲ್ಗಳಿಂ ಮುಂಡಿಸಿದ ದೇವರ್ಷಿ ಶೋಭಿತಸಭಾವಲಯಮಧ್ಯದೊಳಗೆ
ಕಾಲ್ಗಳಿಂ ಪದ್ಮಾಸನವ ಬಲಿದು ಕಿನ್ನರಿಯ
ಮೇಲ್ಗೈಬೆರಳ್ ಸನ್ನೆಗೈಯಲಾ ಸ್ವರದಿನಿಗೆ
ಜೋಲ್ಗಿವಿಂಪಲಿರ್ದುದೆಲ್ಲಾ ಜನವು ನಿಶ್ಚಲನದಿಂ ಯೋಗಿನಿಕರದಂತೆ ೩೦

ವಾರಿಜಾಂಬಕನ ನಿಜನಾಮಕೀರ್ತನೆಗಳಂ
ವಾರಿಜಾಸನ ಸುತಂ ರಾಗರಂಜನೆಗಳಿಂ
ದಾರೋಹಣವನೆಸಗಲನಿಬರ ಮನೋವೃತ್ತಿಯಾರೋಹಮಾಗುತಿರಲು
ಸಾರಿ ನಿರ್ವೃತ್ತಿಯಂ ಸಮನಸ್ಕದಿಂದೆ ಸಂ
ಸಾರತಾಪಂಗಳನ್ನೊತ್ತರಿಸಿ ನೆರೆದಿರ್ದ
ಭೂರಿಜನಜಾಲಮೆ ಸಮಾಧಿಸ್ಥಮಾಯ್ತು ತಂಬೂರಿ ಸುಸ್ವರಮಹಿಮೆಯಿಂ ೩೧

---

೨೮. 1. ಮುಂಚಂದ್ರರೀ

ಈ ತೆರದಲಾರೋಹಣೆಯ ಗೈದ ಬಳಿಕಲಾ
ರೀತಿಯಿಂದವರೋಹಣೆಯನೆಸಗಲೆಲ್ಲರಿಂ
ಗಾತುಮಧ್ಯಾಸ ಪಿಂತಿರುಗಿದಂದದಲಿ ವಿಶ್ವಜ್ಞಪ್ತಿಯೊದಗಲಾಗ
ಪ್ರೀತಿಯಿಂ ಮುನಿವರನ ಪೊಗಳುತಿರಲಾ ಪದ್ಮ
ಜಾತನಚ್ಚರುವೊಂದಿ ನಾಲ್ಕುವೇದಗಳ ರೂ
ಪಾತಿಶಯ ಮುಖಗಳಿಂ ನುಡಿಸಿದಂ ಭುವನಗತ ಕಲುಷ ಪೊರವಡದಿರದೆನೆ ೩೨

ನಾರದನೆ ಕೇಳ್ ಭವನ್ಮುಖರಸವು ಸೂಚಿಪುದು
ದೂರಯಾತ್ರಾಯಾಸ ಭಾವಮಂ ಲೋಕೋಪ
ಕಾರಿ ದುರ್ಬಲರಿಗಾಧಾರಿ ಮೂಲೋಕ ಸಂಚಾರಿ ಸೀನಹೆಯ್ಯೈಸಲೆ
ಕಾರಿಯಮದಾವುದನು ಗೈವ ಸಂಕಲ್ಪವಿ
ನ್ನಾರಿಗೋಸುಗವು ಬಹುಭೂತಹಿತದೀಕ್ಷೆಯನೆ
ತೋರುತಿಹುದೆಮ್ಮ ಮತಿಗಾಗಮನದಭಿಮತಗಳಿರವ ಬಿತ್ತರಿಸೆಂದನು ೩೩

ತಾತ ಬಿನ್ನಹ ಹರವಿಲಾಸಮುನ್ನತಿಯ ನೋ
ಳ್ಪಾತುರದಿ ಕೈಲಾಸ ಗಿರಿಗೈದಿ ಶಂಭುಹಿಮ
ಜಾತೆಯರ ಬಲಗೊಂಡು ವೈಕುಂಠಪುರಕೈದಿ ಹರಿಲಕ್ಷ್ಮಿಯರನರ್ಚಿಸಿ
ತೂತುವೈಯ್ಯವನ ಪುರಮಂ ಸಾರ್ದು ಸುರಮುನಿ
ವ್ರಾತಕಭಿನಮಿಸಿ ಭಾಗೀರಥಿಯ ಬಗೆಗೊಳಲ್
ಭೂತಲಕ್ಕಿಳಿದು ಮರ್ತ್ಯರ ನೋಡಿ ಮನಗುಂದಿ ಬಂದೆನಿದು ಹದನೆಂದನು ೩೪

ನುಡಿಯಲಮ್ಮೆನು ಬಾದರಾಯಣಂ ಮನುಜರ್ಗೆ
ತೊಡಚಿದ ಮಹಾಗಾಧ ಕರ್ಮಮನ್ನನುಗೈದು
ಕಡೆಗಾಣಲರಿಯದಮರಿದ ಲೋಪದೋಷಂಗಳಿಂ ಸ್ವರ್ಗನರಕಗಳ್ಗೆ
ಎಡೆಯಾಡಿ ಪುಣ್ಯಪಾಪಂಗಳನುಸಾರನೂ
ಡೊಡಲನಾನುತ ಗರ್ಭನರಕದೊಳಗಾಳ್ದಿಳಿಗೆ
ಕೆಡೆದು ಬಹುಜನ್ಮಂಗಳನ್ನಿಂತು ತೊಳಲುವಾಯಾಸಮನ್ನೆಸಿತೊರೆವೆನು ೩೫

ಪುಸಿ ದಂಭ ವೈರ ವಂಚನೆ ಕುಟಿಲಗಳ್ ಮನದಿ
ಬೆಸುಗೆಗೊಂಡಿರಲವಂ ನೂಕಲರಿಯದ ಕರ್ಮ
ದೆಸಕಮುಂ ದಂಭವರ್ತನೆಗೆಂದನುಗೈದು ಸುಲಭಪಥಮನ್ನರಿಯದೆ
ನಸಿವ ಸುಖವಂ ನೆಚ್ಚಿ ಸಾತ್ವಿಕವನುಳಿದು ರಾ
ಜಸ ತಾಮಸದ ಸೇವೆಯನ್ನೆಸಿದಿ ಕರ್ಮವಂ
ಬಿಸಿಗೈವ ವಿಜ್ಞಾನವಹ್ನಿಯಂ ಪಡೆಯಲರಿಯದೆ ತೊಳಲಿ ಬಳಲುತಿಹರು ೩೬

ಸಾರಸಂಗ್ರಹಗಳಿರದನುಗೈವ ಸತ್ಕರ್ಮ
ಮಾರಿಗಾದಡು ಸುಖಪ್ರಾರಬ್ಧರೂಪಿನಿಂ
ದೂರುವುದು ತತ್ಪುಣ್ಯಫಲ ಭೋಗವಂ ಮತ್ತೆ ದುಷ್ಕರ್ಮಮನ್ನೆಸಗಲು
ದಾರಿದ್ರ್ಯ ರೋಗ ಡಾಮರಗಳೆನಿಸಿದ ಕಷ್ಟ
ಪ್ರಾರಬ್ಧರೂಪಿನಿಂದುಣಿಸುವುವು ತಿಳಿವಡಿಂ
ತೀ ರಚನೆಯಾದೆರಡು ಕರ್ಮಫಲಭೋಗಕೆನೆ ಹಲವು ಜನ್ಮಗಳಾಂಪರು ೩೭

ಅರಸ ಕೇಳ್ ಸತ್ಕರ್ಮಫಲಮಪ್ಪ ಸಾಮ್ರಾಜ್ಯ
ಸಿರಿಯನನುಭವಿಸಬೇಕಾದಡುಂ ಪೊಲೆಗರ್ಭ
ನರಕದೊಳ್ ಕುದಿದು ಯೋನಿದ್ವಾರದಿಂದುರುಳಿ ಬಾಲತ್ವದೆಡರ ನೂಕಿ
ಹರೆಯವೊದಗಿದ ಬಳಿಕಲೈಸಲೇ ಸಂಗಡಲೆ
ಬರುವುದತಿವಾರ್ಧಿಕ್ಯರೋಗಂಗಳಸಿತರೊಳ್
ಮರಣಸಂಕಟಗಳಿವು ಪುಣ್ಯಕರ್ಮಿಗಳಿಗುಂ ಬಿಡದೈಸೆ ಪರಿಕಿಸುವಡೆ ೩೮

ಬಾಲತನದೊಳ್ ಮೂಕವೃತ್ತಿಯಿಂ ತನುರುಜೆಯ
ಮೂಲಮನ್ನುಸುರಲರಿಯದೆ ರೋದಿಸುವ ದುಃಖ
ಮೇಲೆ ಯೌವನಮಡಸಲಿಂದ್ರಿಯಂಗಳ ವಿಷಯದಾಹವುಣಗದ ದುಃಖವು
ಕೀಲಿಸಿದ ಕೌಮಾರದೊಳ್ ಸತಿಸುತಾದಿಗಳ
ಮೇಲುಬೀಳಿನ ದುಃಖಮಿನ್ನು ವಾರ್ಧಿಕ್ಯದೊಳ್
ಕಾಲು ಕಣ್ಣುಡುಗಿ ಬಳಲುವ ದುಃಖವಿಂತು ಜೀವರು ಸದಾ ದುಃಖಿಗಳಲೇ ೩೯

ಈದುಃಖ ಶರಧಿಗಂ ಬಾಡಬೋಪಮವಾದ
ವೇದಾಂತ ವಿಜ್ಞಾನಮುನ್ನೂರದಿರ್ದಡಂ
ಓದಿ ಕೇಳಿದ ಮಾತ್ರದಿಂ ಭವಂಗಳನೊರಸಿ ನಿತ್ಯಸುಖಮುನ್ನೈದಿಪ
ಮಾಧವನ ಸಚ್ಚರಿತ್ರಾಮೃತವನೂಡಿಸದೆ
ಬಾದರಾಯಣನು ಕರ್ಮದ ಕಟ್ಟ ಬಿಗಿದಿಹಂ
ನೀ ದಯದಿ ಲೋಕಮನ್ನುದ್ಧರಿಸದಿರಲು ಲೋಕೇಶವೆಸರೇಕೆಂದನು ೪೦

ಪಾರವಿಲ್ಲದ ಕರ್ಮಮಂ ಸಮರ್ಥಿಪುದು ಮುನಿ
ವೀರರಿಗಸಾಧ್ಯಮೆನಿಸಲು ಕಲಿಯ ಮರ್ತ್ಯರ್ಗೆ
ಭೂರಿತಾಪತ್ರಯಗಳಡಸಿ ಕೊಲುತಿರಲು ಪಟುಕರ್ಮಕವಸರಮಿರ್ಪುದೇ
ವಾರಣನ ಪೊರೆಯ ಮೇಷಂಗಮುರ್ಚಲು ದೂರ
ದಾರಿಯಂ ನಡೆದಪುದೆ ತೆರಳಿಪೆಸರಿನ ಪುಳುವಿ
ನೋರಣದ ಮನುಜರಂ ಸುಲಭದಿಂ ಪೊರೆಯದಡೆ ಕಷ್ಟಮಂ ಕಳೆವರೆಂತೋ ೪೧

ತನುವಿಗಡಸಿದ ರೋಗಮಂ ನಂದಿಸದ ವೈದ್ಯ
ನನುದಿನವು ಪಿರಿದೌಷಧವ ಪೊತ್ತು ಫಲವೇನು
ತನಿವಳೆಯನೆರೆಯದಾವಗಲಬ್ಬರಿಪ ಮೋಡಮುಸುಕಿನಿಂ ಸಸಿನಮೇನು
ಜನರನಳಲಿಪ ಜನ್ಮಬಂಧದಾಯಾಸಗಳ
ನನುಗೆಡಿಸದಿರಲೀ ಪ್ರಜೇಶ್ವರಾಹ್ವಯತೆ ಬರ
ಡೆನಿಸದಿರದದರಿನಿಂ ಪ್ರಜೆಯನುದ್ಧರಿಸಿ ತದ್ವೆಸರ ಪಾಲಿಪುದೆಂದನು ೪೨

ಹರಿಚರಿತ್ರೆಯನು ಬೋಧಿಸಲು ಕೇಳ್ವರ್ಗೆ ಮನ
ಮೆರಕವಾಗದು ಎರಕಮಾದಡುಂ ಸಂಸಾರ
ತೆರಪುಗೊಡದಂತು ತೆರಪಾಗಿ ಬಗೆಗೊಂಡಡುಂ ನಂಬುಗೆಯು ನೆಲೆಯಾಗದು
ಎರಗಿ ನಂಬುಗೆ ಸುಮುಖಮಾದಡುಂ ತಾಪಂಗ
ಳುರುಬೆ ಸಾಧನಕೆ ಮಾರ್ಗಮನೀಯದದರಿನಿಂ
ನರರನುದ್ಧರಿಸುವಡೆ ಸುಲಭಪಥಮಂ ನಿಯಾಮಿಸಿ ರಕ್ಷಿಸುವುದೆಂದನು ೪೩

ಅರೆನಿಮಿಷಮೆಡವಿಲ್ಲವೀ ನರರಿಗದರಿಂದೆ
ಮರೆದೊಮ್ಮೆ ನೆನೆದಡುಂ ಸಾಂಗಕರ್ಮದ ಫಲವ
ಪರುಠವಿಸಿ ರಕ್ಷಿಸುವ ವಿಷ್ಣುಸಂಕೀರ್ತನೆಯ ತಚ್ಛ್ರವಣ ಮನನಂಗಳ
ಪರಿಚರ್ಯವೊದಗುವಂತನುಗೊಳಿಸಿ ದೀನರಂ
ಪೊರೆಯಲಿಚ್ಛೈಸುವಡೆ ಭಾಗವತ ಕಥನವಹ
ಹರಿಪುರಾಣವನನುಗ್ರಹಿಸಬೇಕೆಂದು ಪುನರಂಘ್ರಿಗಾನತನಾದನು ೪೪

ಆಡಲೇನಿನ್ನು ಮರ್ತ್ಯರ ಮಹಾಭವಣೆಯಂ
ನೋಡಿಯುಂ ತದ್ವ್ಯಥೆಗಳಂ ನೂಕದಡೆ ಸುಜನ
ರಾಡದಿದ್ದಪರೆ ಕಠಿನಾತ್ಮರೆಂದೆಮ್ಮನು ಪರೋಪಕೃತಿಯತಿಶಯಮೆನೆ
ನಾಡಿನೊಳ್ ಕಂಡುದನ್ನೊರೆದೆ ತನ್ನಿಷ್ಕೃತಿಯ
ಮೋಡಿಯನ್ನನುಗೈವ ಹರಿಬ ನಿಮ್ಮಡಿಗಳಂ
ಕೂಡಿದುದು ಕೃಪೆಗೈಯಬೇಕೆಂದು ಮುಗುಳೆ ಮುಗುಳೆರಗಿ ಸನ್ನುತಿಗೈದನು ೪೫

ಕೇಳಿದಂ ನಾರದೋಪನ್ಯಾಸ ಮತಗಳಂ
ತಾಳಿ ಕಡುಸಂತಸವ ನುಡಿದನೆಲೆ ತನಯ ಲೋ
ಕಾಳಿಯನ್ನಿಂತು ಬಹುಮುಖಗಳಿಂದುದ್ಧರಿಸಿ ಪರಗತಿಗಳಂ ಕಲ್ಪಿಸಿ
ಪಾಲಿಪುದೆ ನಿನ್ನೆಡೆಗೆ ಸಹಜಗುಣಮೆನಿಸಲಿ
ನ್ನೇಳಿಲಂಗೈಯಲಾಪೆನೆ ಭವದ್ವಾಂಛೆಯಂ
ಖೂಳರನ್ನುದ್ಧರಿಸಲಸುರಾರಿ ಕಥನಮಲ್ಲದೆ ಬೇರೆ ಗತಿಯಿಪ್ಪುದೆ ೪೬

ಕುಲಹೀನತನದಿ ತಲೆ ಕೊಲೆಗಡಿಕನಾದವಂ
ಗೊಲಿದು ಸದ್ಗತಿಯನೇರಿಸಿತು ನಿಜತಾತನಂ
ಕೊಲಿಸಿದರ್ಭಕೆ ಚಿರಪದವಿಯನ್ನೊದಗಿಸಿತು ಕರಿಯ ಕಷ್ಟವ ನೂಕಿತು
ಸುಲಿವ ಸೀರೆಯ ಬೆಳಸಿ ಸತಿಯಳಂ ರಕ್ಷಿಸಿತು
ಛಲದಿಂದಲಗ್ರಜನನಿರಿಸಿದನ ಪೋಷಿಸಿತು
ಕಲುಷಜನರಂ ಪೊರೆಯಲಸುರಾರಿವೆಸರಲ್ಲದಡಗಲಿನ್ನೆಡನಿಪ್ಪುದೇ ೪೭

ಆ ರಮೇಶಂ ಸಹಜಲೀಲೆಯಿಂದವನಿಯೊಳ್
ಕ್ರೂರ ಕರ್ಮಿಗಳ ಸಂಹರಿಸಿ ಸದ್ಧರ್ಮಯುತ
ಪಾರಮಾರ್ಥಿಕವನುನ್ನತಗೊಳಿಸಲಿಪ್ಪತ್ತನಾಲ್ಕು ಮಹದವತಾರಮಂ
ತೋರಿ ಸಲ್ಲೀಲೆಯಂ ಮೆರೆದ ಸತ್ಕಥನಮಂ
ಶ್ರೀರಮಣ ಚರಿತೆಯಹ ಭಾಗವತ ಮರ್ಮಮಂ
ನಾರದಗನುಗ್ರಹಿಸಿ ಜನರನುದ್ಧರಿಸೆಂದು ಕಮಲಜಂ ನಿಯಮಿಸಿದನು ೪೮

ಮೂಲಮಂತ್ರೋಪದೇಶವನೆಸಗಿ ಸತ್ಕರ್ಮ
ಶೀಲವೃತ್ತಿಯ ರಹಸ್ಯವನರುಹಿ ಭಕ್ತಜನ
ಜಾಲಮಂ ಪೊರೆಯೆಂದು ಹರಸಿ ಬೀಳ್ಕೊಡಲಾಗ ಮುನಿಸನಾನಂದ ಮುಗಲು
ಆ ಲೋಕನಾಥನಿಂಗಭಿನಮಿಸಿ ಸನಕಾದ್ಯ
ರಾಲಿಂಗನವನೊಪ್ಪಿ ಸುರರಿಗೊಂದಿಸುತ ದಿ
ಕ್ಪಾಲರಂ ಬಿಗಿಯಪ್ಪಿ ಪರಿಜನರ ಹರಸಿ ಪೊರವಂಟನಾ ಸತ್ಯಪುರಿಯಿಂ ೪೯

ದುರ್ಲಭ ಸುಧಾಕಲಶಲಾಭ ಂಸಮೋದದಿಂ
ಸ್ವರ್ಲೋಕದಿಂದಿಳಿವ ತಾರ್ಕ್ಷ್ಯಕನ ತೆರನಂತೆ
ನಿರ್ಲಿಪ್ತತಾನಾಡದುಂ ಭೂತಹಿತಕೆನಲ್ ಹರಿಕಥಾಮೃತವ ವಹಿಸಿ
ದುರ್ಲಕ್ಷಣರ ಪೊರೆಯಲೋಸುಗ ತಪೋಜನ ಮ
ಹರ್ಲೋಕಮಂ ಕಳೆದು ಸುರಸದನದಿಂದಲೆ ಭು
ವರ್ಲೋಕ ಸರಣಿಯಿಂ ಭೂಲೋಕಕಿಳಿತಂದನಿಳೆಯ ಸೌಭಾಗ್ಯದಂತೆ ೫೦

ಕಿಂಪುರುಷ ಧಾರುಣಿಯಲಿಳಿದು ಜಡ ಮರ್ತ್ಯಜನ
ರಂ ಪಾಲಿಸುವ ಮಹಾಸಂಕಲ್ಪಮಂ ಪೊರೆವ
ಲಂಪಟದಿ ಪಕ್ಷಿಣಕ್ಕೈತಂದ ಬದರಿಕಾಶ್ರಮ ತಪಃಪುಣ್ಯ ಬನಕೆ
ಜೊಂಪಿಸುವ ಫಲಪುಷ್ಪಪರಿಮಳದ ಪಟುಭಾರ
ಮಂ ಪೊರಲಶಕ್ಯದಿಂ ಬಳಲಿ ಮೃದು ಸುಳುಹಿನಿಂ
ದಿಂಪುಗೊಳಿಸುವ ಮಂದ ಗಂಧವಹ ಬಂಧುರಾನಂದವನಮೆನಿಸಿರಲ್ಕೆ ೫೧

ವರ ತಪೋಧನ ಮಣಿ ಕುಲಾಳಿ ರತ್ನಾಕರನೊ
ಮೆರೆವ ಸುಕೃತಾಬ್ಜ ಸಾಲ್ವಳಿಗೆ ಕಮಲಾಕರನೊ
ಪರಿಘಟಿತ ಕಲುಷ ತಿಮಿರಾಳಿಗೆ ದಿವಾಕರನೊ ಗರ್ವ ಪರ್ವತ ವಜ್ರಿಯೋ
ಸರಸವಿದ್ಯಾ ಕುಮುದ ರಾಜಿಗೆ ಸುಧಾಕರನೊ
ಗರಿಗೊಂಬ ಮೋಹಮಾರುತಗೆ ದರ್ವೀಕರನೊ
ಪುರುಷಾರ್ಥ ಬನಕೆ ಕುಸುಮಾಕರನೊ ಪೇಳೆನಲ್
ಬದರಿಕಾಶ್ರಮಮೆಸೆದುದು ೫೨

ಸಿರತ ರಂಭಾ ವಿರಾಜಿತಮಾಗಿ ಮಂಜುಳಾ
ಪ್ಸರಸರುಲುಹಿಂ ಮನೋಹರಮಾಗಿ ದಿವ್ಯ ಸುಂ
ದರ ಮಂಜುಘೋಷೆಗಾಶ್ರಯಮಾಗಿ ಸಂತತ ಶತಾಧ್ವರ ಸ್ಥಾನಮಾಗಿ
ಸುರಸಾಲದಿಂದೆ ಶೋಭಿತಮಾಗಿ ಸಂಭ್ರಮದ
ಸುರಭಿಯಿಂ ಸುಪ್ರತಿಷ್ಟಿತಮಾಗಿ ವಿಭುಧ ಜನ
ಭರಿತದಿಂದಮರಾವತಿಯ ಮಹಿಮೆಯನ್ನಾಂತು ತದ್ವನಂ ಕಂಗೊಳಿಸಿತು ೫೩

ಮಲಿನತ್ವಮೆಸೆವ ಧೂಮಾಳಿಯೊಳು ತೋರ್ಪ ಚಂ
ಚಲ ಭಾವವಗನು ಪತ್ರಂಗಳೊಳು ಬಂಧಗಳ
ಬಲುಹು ಹಟಯೋಗ ಪದ್ಧತಿಗಳೊಳು ರಾಗದುನ್ನತಿ ಕೋಕಿಲಾಕ್ಷಿಗಳೊಳು
ಬಲಿದ ಸಂಕಲೆ ಕಾಮಶಾಸ್ತ್ರದೊಳ್ ದ್ವಿಜ ಪತನ
ದುಲುಹು ಪಟುವೃದ್ಧರೊಳ್ ಜಾತಿಹೀನತ್ವ ಮಂ
ಜುಲ ಚೈತ್ರಕಾಲದೊಳಗಲ್ಲದಾ ಬದರಿಕಾಶ್ರಮ ವಾಸಿಗಳಲಿರದೆಲೇ ೫೪

ಸತತ ಭೋಗಾನಂದಮಹಿಗಳೊಳ್ ಬಿಡದಧೋ
ಗತಿ ವೃಕ್ಷಮೂಲಂಗಳೊಳ್ ಪಕ್ಷಪಾತ ಖಗ
ತತಿಗಳೊಳಗಾಕಾಂಕ್ಷೆಯುದು ಕಾವ್ಯಪಾಠದೊಳ್ ಗರ್ಜನೆಯೆ ಘನಚಯದೊಳು
ಕೃತ ರಾಜಸೇವೆಯುಡುಗಣಗಳೊಳ್ ಲಸದಲಂ
ಕೃತಿ ಕಾವ್ಯ ರಚನೆಯೊಳ್ ಶಕುನಿ ಸಂಹರಣ ಸಂ
ಗತಿ ಮಹಾಭಾರತ ಪುರಾಣದೊಳಗಲ್ಲದಿನ್ನಿರದು ತದ್ವನಜನದೊಳು ೫೫

ಗತನೇತ್ರಯುತರಾದಡುಂ ದೂರದರ್ಶಿಗಳ್
ಜಿತನರಕಭಯರಾದಡುಂ ಯಮಾನ್ವಿತರು ಸಂ
ತತಶಮಾನ್ವಿತರಾದಡುಂ ಮನ್ಯುಧರರು ರಾಮಾನುರಾಗಿಗಳಾದಡುಂ
ಜಿತಕಾಮಸಾಹಸಿಗಳನಿಶ ಸನ್ಮಾರ್ಗ ಶೋ
ಭಿತ ಸುದ್ವಿಜಾಧಿವರರಾದಡುಂ ಘನಚಕ್ರಿ
ಹಿತರೆನಿಸುತಂ ಪರಾಶರಜಾತನಾಶ್ರಮದ ಸಂಯಮಿಗಳೆಸೆದಿರ್ದಪರು ೫೬

ಕಲಶಸಂಭವನೊಲು ಕೃಪಾನ್ವಿತಂ ಕರ್ಜರಾ
ಚಲದೊಲು ಕ್ಷಮಾಭರಣಕಲ್ಯಂ ಸದಾಗಗನ
ತಲದಂತೆ ಮೃಗ ಕೃತ್ತಿಕಾನ್ವಿತಂ ಜಲದಮಂಡಲದಂತೆ ಕರಕಯುತನು
ಹಲಧರಾನುಜನಂತೆ ನರಕಕುಲವೈರಿಯು
ಜ್ಜ್ವಲರಾಜ ಭವನದೋಳ್ ಶುಕವಿಲಾಸಗಳ ಮಂ
ಜುಲತೆಯನ್ನಾಂತು ವೇದವ್ಯಾಸನೆಸೆದಿರ್ದನಾ ತಪೋಜನ ಮಧ್ಯದಿ ೫೭

ರಾಜೀವಭವಭವನದಿಂದಲಿಳಿತಂದಮಲ
ರಾಜಸಮಮುಖಿ ಸರಸ್ವತಿಯು ಕೃಪೆಯಿಂದೆ ಮುನಿ
ರಾಜ ವೇದವ್ಯಾಸ ವದನಾಬ್ಜಸದನದೊಳ್ ವಿಕಚಪಂಕೇರುಹಗಳ
ರಾಜಿಯೊಳ್ ಸಂತತಾನಂದದಿಂ ಕಮನೀಯ
ರಾಜಹಂಸಾಂಗನೆಯು ವಿಹರಿಸುವ ಬೆಡಗಿಂ ವಿ
ರಾಜಿಸುವಳದರ ಸನ್ಮಹಿಮೆಯಲ್ಲದಡಿನಿತು ವಾಗ್ವಿಲಾಸಗಳಿಪ್ಪುದೆ ೫೮

ವಿಕಚ ನೀಲಾಬ್ಜ ಕುಸುಮಗಳಂತೆ ಶಬಲ ಚಂ
ದ್ರಕಮನೋಹರ ಪಿಂಛಮಂ ನಾಗಕೇಕಿಗಳ್
ವಿಕಸನೆಯನೆಸಗಿಯೆಳೆವಿಸಿಲಿಗಂ ಪೈಗೊಟ್ಟು ನಲಿವುತಿರಲದನು ಕಂಡು
ಪ್ರಕಟದಿಂ ಶಾಡ್ವಲಮದೆನುತ ಫಣಿವಿಸರಗಳ್
ವಿಕಲಮಿಂದದ ಪೊಕ್ಕು ಸಕ್ರೀಡೆಯಾಂತಿರ್ಪ
ಅಖಿಲ ಜೀವಿಗಳಿಗಿಮ ನಿರ್ವೈರದೆಡೆಯೆಂಬ ಕುರುಹ ಕಾಣ್ಪಡಿಸುವಂತೆ ೫೯

ಒರೆಯುಲೇನಿನ್ನು ವತ್ಸಗಳನುಳಿದಾವಾತ್ರ
ಹರಿಣಗಳು ಮೇವಿಗೈದಿಸಡಾಗ ತಾಯಿಗಳ
ನರಸುತಂ ತತ್ಶಿಶುಗಳೆರಗಿ ಕಾಣದೆ ತೊಳಲುತಿರಲು ವನಮಧ್ಯದೊಳಗೆ
ಚರಿಪ ಕೇಸರಿ ಡಿಂಬಕಾಳಿಯೊಡನೈದುತಾ
ಮರಿಗಳೊಳ್ ಸಮರಸದಿ ಸಿಂಹೀಸ್ತನಂಗಳಿಂ
ದೊರೆವ ಪಾಲ್ಗುಡಿದು ಸಂತೃಪ್ತಿಯಿಂದಾಡುವುವು ಮುನಿಮಹಾಮಹಿಮೆ
ಯಂತೋ ೬೦

ಪ್ರಾಲೇಯಕರ ಕರಾಮಲಮಾದ ಹರಿಸಟಾ
ಮಾಲೆಯಂ ಮದಗಜಂಗಳ್ ಹರ್ಷದಿಂಪಬ್ಬ
ನಾಳವೆಂದೆಳೆವುತಿರ್ಪವು ತದ್ಗಜಂಗಳಂ ನೋಡಿ ಕಂಠೀರವಗಳು
ನೀಲಪರ್ವತಗಳೆಂದೆನುತ ಕುಂಭಸ್ಥಳದ
ಮೇಲೇರಿ ವಿಹರಿಸುವವಾ ಸಿಂಹವಂಪ್ಪುಗಳ
ನಾಲಸದ್ವಾನರಗಳಲುಗಿಸುವವಾಟದಿಂದೇನೆಂಬೆನತಿಶಯವನು ೬೧

ಹವನಧೂಮಗಳೆರಗಿ ಕೃಷ್ಣವರ್ಣವನಾಂತ
ಸವನ ಮಂದಿರಗಳಿಂ ಹೋಮಾಜ್ಯ ಗಂಧಯುತ
ಪವನಮೃದುಸುಳುಹಿನಿಂ ವ್ಯತ್ತಿಕಾಮಲಕ ಲೇಪಸ್ನಾನದಿಂ ಕದಡಿದ
ಭುವನಪೂರಿತ ಸರೋವರಗಳಿಂ ಕಂದ ಮೂ
ಲವನಗೆವ ಕುಳಿಯಾಂತ ನೆಲಗಳಿಂದಂದಿಗುಂ
ಜವನ ಜಾಜಡವಿರದ ಜನಗಳಿಂದಾ ತಪೋವಿಪಿನ ಮತಿಚೆಲುವಾಂತುದು ೬೨

ಗಂಧಪುಷ್ಪಾರ್ಚನೆಗಳೆರಗದಿಹ ಧೇನುಗಳ
ಬಂಧಿಸಿದ ವಟುದಂಡುಗೋಲ್ಗಳಿರವರಳಿಗಳ
ಚಂದ್ರ ಕುಂಕುಮ ಪೂಜೆಯಿರದ ಕಾಸಾರಗಳ ಸಮನಿಸಿದ ಪೂಜೆಯೊಡನೆ
ಸಂದಿರದಬಿಲ್ವ ವಟಧಾತ್ರಿ ಶಮಿಭೂಜಗಳ
ಛಿಂದಿಸವ ತುಲಸೀಪಲಾಶ ಖದಿರಾದಿಗಳ
ನೊಂದವನುಂ ತದ್ವನದಿ ಕಾಣದಾಶ್ಚರ್ಯದಿಂ ನಾರದಂ ಬರುತಿರ್ದನು ೬೩

ಮುಳ್ಳುಮೆಳೆಗಳು ಮೈಯಲೊಡೆಯೆ ಮುಂಡಿಸಿದವರ ।
ಬಳ್ಳಿಗಳ್ ಮೈಸುತ್ತಿ ಬೆಳೆಯೆ ಕುಳ್ಳಿರ್ಪವರ
ಹಳ್ಳ ಸಮವಾಗೆ ಮಸ್ತಕವೆ ತೋರ್ಪಡುವವರ ಹುತ್ತು ಮುತ್ತಿಸಮಹಿಮರ
ಉಳ್ಳ ಜಟೆಗಳಲಿ ಖಗಪಜನಮುಮಿರಿರ್ಪವರ
ಜಳ್ಳೊಡೆದು ಧಾತುಚಯಮುಸ್ಥಿ ಪೊರಸೂಸಿಹರ
ಡಿಳ್ಳಮಾಡುದರದೊಳ್ ಫಣಿಗಳಡಗಿರ್ಪವರ ನೋಡುತ್ತೈತರುತಿರ್ದನು ೬೪

ಒಪ್ಪಾದ ನಿಲವಿಗರನೂರ್ಧ್ವಬಾಹುಗಳವರ
ಸಪ್ಪುಗೈಯವರ ಹಿಂಗೈಬಂಧಮೆಸೆವವರ
ನೊಪ್ಪುವ ನಖಂಗಳುರೆ ಪರ್ಬಿ ಗಿಡಮಂ ಸುತ್ತಿ ಬಿಗಿಗೊಂಡ ಚಿನ್ಮಣಿಗಳ
ರೆಪ್ಪೆಗೆಸರ ಗಲ್ಲಕೀಲಿದವರ ಕಡುವೆಳೆಗ
ಳೊಪ್ಪದಿಂ ಗಡ್ಡ ನೆಲಕೀಳಿದವರನವನಿಯೊಳ್
ಕುಪ್ಪೆಗೆಡೆದಿಹ ಕಕ್ಷಗೇಶದ ತಪೋಧನರ ನೋಡುತವು ನಡೆತಂದನು ೬೫

ವರ ತಾರಕಜ್ಯೋತಿಯೊಡೆದು ನಡುಪುರ್ಬಿನೊಳ್
ಪೊರಸೂಸಿದುರುರಾಜಯೋಗಿಗಳನನಿಶ ಸಂ
ಚರಿಪ ನಿಜಹಂಸಗತಿ ನಿಲಲು ನಿರ್ವೃತ್ತಿಯನ್ನೈದಿರ್ಪ ಹಠನಿರತರ
ಮೆರೆವ ಸಂಧ್ಯಾನಿಯಮ ಜಪತಪೋನುಷ್ಠಾನ
ಪರಿಚರ್ಯ ಮುನಿವರರ ಕೃಚ್ಛ್ರಚಾಂದ್ರಾಯಣಾ
ಚರಣೆಗಳ ಋಷಿಗಳಂ ಕಾಣುತ ಮನೋವಂದನೆಗಳನೂರುತ ನಡೆದನು ೬೬

ಪತಿಸೇವೆಯೊಳು ಸಂದ ಋಷಿಪತ್ನಿಯರ ವತ್ಸ
ತತಿ ಪರ್ಣಶಾಲೆಯಿಂ ಪೊರವಂಟು ಕರಜಾನು
ಗತಿಗಳಿಂ ಮೆಳೆಮೆಳೆಯ ತೊಳಲುತಳುತಿತರಲಾನೆಗಳ್ಕಂಡು ಸುಂಡಿಲ್ಗಳಿಂ
ಹಿತದಿಂ ತೊಡದರ್ದು ತೂಗುವುದಂ ಪಿಕಂಗಳು
ನ್ನತಿಯಿಂದೆ ಜೋಗುಳವ ಪೇಳ್ವುದಂ ಕೀರ
ತತಿ ಮಧುರ ಫಲರಸವನುಣಿಪುದಂ ನೋಡಿ ವಿಸ್ಮಿತನಾಗುತ್ತೈತಂದನು ೬೭

ಹಸ್ತಿದಂತದ ಕರ್ಣಪತ್ರಗಳ ಮೆರೆವ ಖ
ಡ್ಗಾಸ್ಥಿ ಕಟಕಂಕಣದ ವಲ್ಕಲಾಂಬರದುಡೆಯು
ಪ್ರಸ್ತುತಾಲಂಕಾರ ಶೋಭೆಯಿಂ ಭೂವಿಲೋಕನ ದೃಗ್ವಿಲಾಸದಿಂದೆ
ಮಸ್ತಕದಲಾಂತ ಜಲಭರಿತ ಸೈಕತ ಕೊಡನ
ಲಸ್ತಮಂಯು ಮುದಯು ಕಾಲಂಗಳೊಳ್ ಮೃದುಲ ವಿ
ನ್ಯಸ್ತ ಪದಗತಿಗಳಿಂ ಋಷಿಪತ್ನಿಯರ್ಚರಿಸುತಿರ್ದರಾ ವನಮಧ್ಯದಿ ೬೮

ವಿಪುಲಾಪವಿತ್ರಮನ್ನೆಸಗುವ ತಪೋಬನದ
ನುಪಮಸಾಧ್ವಿಯರು ಪೆಡೆಮಣಿ ವಿರಾಜಿತ ಸರೀ
ಸೃಪಗಳಂ ಪಿಡಿದಮುವೆ ರತ್ನರಂಜಿತ ಚಾಮರೀವಾಲಭಾರಮೆನುತ
ಅಪರಿಮಿತಮೋಹದಿಂದೆತ್ತಿ ಕೈಶ್ಯವಸು ಬಂ
ಧಿಪರು ವನ ವೃಶ್ಚಿಕವೆ ಬಾಸಳಿಕೆಯೆಂದು ಶೋ
ಭಿಪ ಕುರುಳನುಂಪಿಡುವರಾಶೋಭನಾಂಗಿಯರ ಪತಿಭಕ್ತಿ ಬಲುಹದೆಂತೋ ೬೯

ಕಣ್ಣವೆಳಗಿಂದೆ ಕರ್ಣಿಕಗಳ್ಗೆ ದಂತರುಚಿ
ಪೊಣ್ಮೆನಿಂ ಮೊಲ್ಲೆಮಲ್ಲಿಗೆಗಳ್ಗೆ ತನುಕಾಂತಿ
ತಿಣ್ಣದಿಂದಮಲ ಚಂಪಕಗಳ್ಗೆ ಮುಖರೋಚಿಯಿಂದೆ ಪೊಂಗಮಲಗಳ್ಗೆ
ಪುಣ್ಯಾವಯವಗಳಿಂದಾಬನದ ಪೂಗಳ್ಗೆ
ಬಣ್ಣಮಂ ಸಾಧ್ವಿಯರ್ಬಗಿದರಲ್ಲದೆ ಸದಾ
ಹಣ್ಣಿರುವ ಹವನಪೊಗೆಯಿಂದೆ ಮಾಸಿದ ಪೂಗಳಿಂಗಿನಿತು ಕಾಂತಿಯಿಹುದೇ ೭೦

ಸಕಲಾಗಮಾಂತಮನ್ನಗಿದು ಫಲದಳವಾರಿ
ನಿಕರದಾಹಾರದಿಂದಿರುತ ಶೀತೋಷ್ಣ ಬಾ
ಧಕಗಳ್ಗೆ ತಲೆಗೊಡಹದನಿಶ ಶಾಖಾಲಂಬವೆರೆದು ಲುಬ್ಧಕ ಮರ್ತ್ಯರ
ಪ್ರಕಟದಿಂದುಳಿದು ವನಮನ್ನೈದಿ ವಿಷ್ಣುಪದ
ಸುಕರಗಾಮಿಗಳು ಸುದ್ವಿಜರಾವಿರಲ್ಕೆ ವಿ
ಪ್ರಕರೆಂತು ಸಲ್ಲಸದ್ವಿಜರಪ್ಪರೆಂಬ ವಿಹಗಾಳಿ ಪರಿಶೋಭಿಸಿದುದು ೭೧

ವಿಃಗವಕ್ಕಿ ಕುಲಮುದಾತ್ತಾನುದಾತ್ತ ಪ್ರಚಯ
ನಿಗಮ ವಿನದಂಗಳಿಂ ಕೂಗುವವು ಪರಿಮಳಗ
ಳಗರು ಚಂದನ ಮುಖ್ಯಗಂಧಗಳ್ ಹೋಮಘೃತ ಗಂಧಪೂರಿತಮಾದವು
ನಿಗಿನಿಗಿಪ ಕುಸುಮ ಫಲಪಲ್ಲವಾದಿಗಳನಿತು
ಪೊಗೆಬಣ್ಣಮೇರಿದವು ಭೂತಳದಿ ಮೃತ್ತಿಕೆಯ
ನಗೆಯ ತಾಳಪ್ರಮಾಣದಿ ಭಸ್ಮಮಲ್ಲದಲ್ಲಿರದು ಮೃತ್ಸ್ನೋಜಿಗಮಲೀ ೭೨

ಬನದಿ ವಿಶ್ರಾಂತ ಸುಸ್ವಾಹಾದಿಗಳ್ಗೆ ಮಾ
ರ್ದನಿಗೊಡುವ ಗಿರಿಗಳಿಂ ಸಾಮಗಾನಗಳಿನಿಗೆ
ತನುವ ಮರೆದೊಲೆವ ಹರಿಣಂಗಳಿಂದಸ್ತ್ರಾಯಘಟಿವ ಕರತಾಡನಗಳ
ನಿನದಕಂಜುತ ಪರಿವ ಖಗಗಳಿಂದುರುಭಕ್ತ
ಜನರು ಹರಿಪೂಜೆಗೈದಿದಿರಲನುಗೈವ ನ
ರ್ತನಕೆ ವೃಕ್ಷಗಳದುರಿ ಕೆಡೆವ ಕುಸುಮಂಗಳಿಂದಾ ತಪೋಬನಮೆಸೆದುದು ೭೩

ಎಲ್ಲಿಯುಂ ತೋರ್ವ ಸುವ್ರತಿಗಳಿಂ ಯತಿಗಳಿಂ
ದೆಲ್ಲಿಯುಂ ಕೃತಮಂತ್ರ ಜಪಗಳಿಂ ತಪಗಳಿಂ
ದೆಲ್ಲಿಯುಂ ಪರಿವ ವಾಹಿನಿಗಳಿಂ ಮುನಿಗಳಿಂ ಮಂಗಳ ಸ್ವನಗಳಿಂದೆ
ಎಲ್ಲಿಯುಂ ಸಂಚರಿಪ ಭಕ್ತರಿಂ ಮುಕ್ತರಿಂ
ದೆಲ್ಲಿಯುಂ ಹರಿಕಥಾಗಾನದಿಂ ಧ್ಯಾನದಿಂ
ದೆಲ್ಲಿಯುಂ ಭೂಸುರಾನಂದದಿಂ ಬೃಂದದಿಂದಾ ತಪೋಬನಮಿರ್ದುದು ೭೪

ಸ್ವರ್ಗದೊಳ್ ಸಂಚಿತವು ಸವೆದಡಾಕ್ಷಣ ನೂಕಿ
ಸಿರ್ಗಮನಗೊಳಿಸುವರು ನಿರುಪಮಾನಂದಾಪ
ವರ್ಗಮನ್ನೇರ್ದಡಾತ್ಮೈಕ್ಯ ಸುಖಮಲ್ಲದೈಹಿಕ ಸೌಖ್ಯಮನ್ನರಿಯರು
ಸ್ವರ್ಗಸುಖಮಿಹ ಸೌಖ್ಯ ವಿಷಯ ನಿರ್ವಿಷಯ ಸುಖ
ವರ್ಗಮಂ ಸಶರೀರದಿಂದೆ ಭೋಗಿಸುತಲಪ
ವರ್ಗ ಸುಖಮಂ ಸಮಾಧಿಯಲಿ ನೆರೆ ಭೋಗಿಪರ್ಬದರೀವನದ ಮಹಿಮರು ೭೫

ಇಂತು ತಾಪಸಯೋಗಿ ಗಣವೆಂಬ ನಕ್ಷತ್ರ
ಹಂತಿಯೊಳ್ ಚಂದ್ರನೆಸೆವಂತೆ ವಿಜ್ಞಾನ ಕಳೆ
ಯಂ ತಳೆದು ವದನಕಮಲಕೆ ಮುಗುಡನಾವಹಿಸಿ ಹೃಚ್ಚಕ್ರವಾಕಮಲಸೆ
ಪಿಂತೆ ಭಾರತಕಥಾಮೃತ ಕರವ ಹರಹಿಪಡು
ವಂತರಂಗದ ಚಪಲಮುಡುಗದಾಲೋಚನೆಯ
ಚಿಂತೆಯೇ ಸಕಳಂಕವಾಗಿರಲ್ ಬಾದರಾಯಣ ಮುನಿಪನೊಪ್ಪಿರ್ದನು ೭೬

ರಭಸದಿಂ ಮೊಳಗುತಿಹ ಋಗ್ಯಜುಸ್ಸಾಮಗಳ
ವಿಭವದಿಂದಿಂತು ಮುಂಡಿಸಿದ ಯತಿಗಣದ ಸ
ತ್ಸಭೆಗೆ ಸನ್ಮೋಹನಾಸ್ತ್ರವ ಬೀರ್ದ ಮಾಳ್ಕೆಯಿಂ ಮೈವೆಳಗಿನಿಂ ಮುಸುಕುತ
ತ್ರಿಭುವನದ ಪುಣ್ಯವೊಂದಾಗಿ ಮೈವಿಡಿದಂತೆ
ವಿಬುಧವಂದಿತನಿಳಿದನಾ ಸಭೆಯ ಸರಿಸದೊಳ್
ಶುಭದ ಸಂ[1]ಪು[1]ಟವಾಗಿ ಬಾದರಾಯಣನ ಸಂಕಲ್ಪದಧಿದೈವವೆನಿಸಿ ೭೭

ಏನಿದೆತ್ತಣ ಬೆಳಗಿನದ್ಭುತವು ಮುಸುಕಿತೆಂ
ದಾ ನೆರವಿ ಗಜಬಜಿಸಿ ಸಂಚಕಿತವೆರಗಿ ದಿ
ಜ್ಞಾನಿನಿಯರಂಗಕಾಂತಿಗೆ ಬೆಚ್ಚಿ ದೃಷ್ಟಿಯಿಂ ಬೆರೆತಿರ್ದರನಿತರೊಳಗೆ
ಜ್ಞಾನನಿಧಿ ನಾರದಂ ಯಜ್ಞಪುರುಷನ ಬೆಡಗ
ನಾನುತವು ಘಿಳಿ ಘಿಳಿ ಘಿಣಿಳಿರವದ ವಲ್ಲಕೀ
ಗಾನದಿಂ ಜನರ ಹೃದ್ವೃತ್ತಿ ಲಸದಾಜ್ಯದಾಹುತಿಗೊಳುತಲೈತಂದನು ೭೮

ಚಂಡಕಿರಣೋದಯದ ಸುಳುಹಿನಿಂದಾನಂದ
ದಂಡಿಯಿಂ ಮಳಲಿನೊಳ್ ಪೊರಳುತಿಹ ಕೋಕಗಳ
ತಂಡವೆನೆ ದೇವತಾಪ್ರಾರ್ಥನೆಯನೊಪ್ಪಿಸುವ ಉರುಳುಸೇವೆಯ ಬೆಡಗೆನೆ
ದಂಡಾಯಮಾನದಿಂ ಮುನಿಜನರ್ತನುವ ಭೂ
ಮಂಡಲದಿ ಹರಹಿದರ್ತಮತಮಗೆ ನಿಜಬಾಹು
ದಂಡಮನ್ನಮರಪೂಜಿತನಂಘ್ರಿಯೊಳ್ ಚಾಚಿ ನಿಗಮಸನ್ನುತಿ ಮೊಳಗಲು ೭೯

---

೭೭ 1 ಘ.

ಅನಿತರೊಳ್ ಬಾದರಾಯಣನೊದಗಿ ತದ್ದೇವ
ಮುನಿಯ ವಿಮಲಾಂಘ್ರಿಗಾನತನಾಗಲೋಸರಿಸಿ
ಪುನರಪಿ ನಮಸ್ಕರಿಸಿ ಮಧುರವಾಕ್ಯಂಗಳಿಂದುಪಚರಿಸಿ ಲೀಲೆಮಿಗಲು
ವನಜಾಕ್ಷನವತಾರ ಮೂರ್ತಿಯುಗ್ಮರು ಸರಸ
ವಿನಯೋಕ್ತಿಯಿಂದೊರ್ವರೊರ್ವರುಪಚರಿಸುತವು
ಜನಕೆ ಜೀವಾತ್ಮ ಪರಮಾತ್ಮ ಸಂವಾದಮಂ ತೋರ್ಪಡಿಸುತೈತಂದರು ೮೦

ಬಳಿಕಲುಳಿದಖಿಲ ತಾಪಸರನಾಲಿಂಗಿಸುತ
ಬೆಳವಿಗೆಯ ಸನ್ಮಾನದಿಂ ಕುಶಲಗಳನು ಹೆ
ಚ್ಚಳದಿಂದೆ ಬೆಸಗೊಂಡು ಸರಸ ಮಿಗಲೈದಿ ವೇದವ್ಯಾಸ ಮಂದಿರವನು
ಒಳಪೊಕ್ಕು ದರ್ಭಾಸನದಲಿ ಕುಳ್ಳಿರ್ದ ಮೇ
ಲಿಳೆಗೆ ಪಾವನಮಪ್ಪ ಚರಣಮಂ ತೊಳೆದು ಮುನಿ
ಕಳಕಳವು ಮೊಳಗುತಿರಲರ್ಘ್ಯ ಪಾದ್ಯಾಚಮ್ಯದಿಂದರ್ಚಿಸಂಗೈದನು ೮೧

ವ್ಯಾಸೋಪಚಾರಮನ್ನಂಗವಿಸಿ ಮೃದು ಪಲ್ಲ
ವಾಸನದಿ ಮಂಡಿಸಿ ಮುನೀಂದ್ರನಂ ಮೊಗನೋಡಿ
ಸೂಸುವೆಳನಗೆಯಿಂದ ನುಡಿದನೆಲೆ ಸುಮತಿ ಬಹುವಿಧಪುರಾಣಾದಿಗಳನು
ನೀಂ ಸಮರ್ಥಿಸಿ ವರ್ಣಧರ್ಮಗಳನುದ್ಧರಿಸಿ
ಭೂಸುಮನಸರ ತತಿಯ ಪೊರೆದ ಕೀರ್ತ್ಯಂಗನೆಗೆ
ಗಾಸಿಯಡಸಿರ್ಪ ಭಾವವನರುಪುತಿದೆ ನಿನ್ನಮುಖರಸಮದೇನೆಂದನು ೮೨

ಸುತಿರಾಯ ಮೂಜಗದ್ವ್ಯಾಪಾರದೊಳ್ ನಿನ್ನ
ಮತಿಗಗೋಚರ ರಹಸ್ಯಗಳಿಹವೆ ಪಿಂತೆ ಭಾ
ರತವನುದ್ಧರಿಸಿ ಬಹುವಿಧ ಪುರಾಣಾಗಮಸ್ಮೃತಿಗಳಂ ಸೇರ್ವೆಗೈದು
ಮತಧರ್ಮಗಳ ಬಲಿದು ವರ್ಣಾಶ್ರಮಾದಿಪ
ದ್ಧತಿಗಳನ್ನೊರಿ ಲೋಕೋಪಕೃತಿಗೈದಡುಂ
ಮತಿಯ ಚಂಚಲಮಣಗದಳಲಿಪುದು ಕಾರಣಮದೇನರುಹ ಬೇಕೆಂದನು ೮೩

ಲೇಸು ಲೇಸೈ ಮುನಿಪ ನಿಗಮಾಂತನೀತಿಗಪ
ಹಾಸವಾಗಿಹುದಲಾ ನಿನ್ನ ನುಡಿ ಬಹುಜೀವ
ರಾಶಿಗಳ್ ನಿನ್ನ ಮತವಿಡಿದು ವರ್ತಿಪರಲೇ ಸುಗತಿಗಿದುಸುಲಭಮೆನುತ
ನೀ ಸತತ ಚಪಲಮತಿಯಾಗಿ ಕುದಿಗೊಳುತಿರ
ಲ್ಕಾ ಸರಣಿಯಿಂ ನಡೆವ ಮರ್ತ್ಯರ ಮನೋವ್ಯಥೆಯ
ನೇಸು ಬಣ್ಣಿಸಲಹುದು ನಿನ್ನಮತವಿಡಿಯಲದು ಪರಿಭವದ ಕುರುಹಾಯ್ತಲೇ ೮೪

ಅಮಿತಜೀವಿಗಳಿಂತು ನಿನ್ನ ಮತವಿಡಿದು ದು
ರ್ಗಮಕರ್ಮಕಾನನವ ಕಳೆಯಲಮ್ಮದೆ ಪಟು
ಶ್ರಮಗೊಂಡು ಪರಗತಿಗಳೊದಗದಳಿದಳಿದು ದಿವಿನರಕಗಳಿಗೆಡೆಯಾಡುತ
ಕ್ರಿಮಿಕೀಟಮುಖ ಚರಾಚರ ಗರ್ಭಶತಗಳ್ಗೆ
ಗಮಿಸಿ ಕೋಟಲೆಗೊಳುವರಿಂತದರಿನಿಂ ದೋಷ
ಮಮರಿ ನಿನ್ನಸುಮತಿಗೆ ಚಂಚಲಮನೂರಿದುದು ನಿನಗೆ ಗೋಚರಮಿಪ್ಪುದೆ ೮೫

ಬಳಲಿ ನೀರಡಿಕೆಯಿಂ ಕುದಿವ ಪರ್ಜನ್ಯನೊಲ್
ಚಳಿಯಿಂದೆ ನಡುಗುತಿಹ ಘನ ವೀತಿಹೋತ್ರನೋ
ಲೆಳೆನಾಗರಗಿಪಡುಮ್ಮಳಿಸುವ ಸುಪರ್ಣನೋಲ್ ಕಡುದರಿದ್ರದಲೊರಲುವ
ಅಳಕಾಧಿನಾಥನೊಲ್ ಕ್ಷುದ್ವ್ಯಥೆಗಳಿಂ ತಾಪ
ಗೊಳುವ ಸುರಸುರಭಿಯೊಲ್ ನಿನ್ನನೆಂಡಲೆವ ಚಂ
ಚಳದಿಂದೆ ನೀನಲೆವುತಿಹೆ ನೋಡಲಿದಕೆ ನಿಷ್ಕೃತಿಯು ದುರ್ಘಟಮೆಂದನು ೮೬

ಎನಲು ವೇದವ್ಯಾಸ ನುಡಿದನೆಲೆ ದೇವ ಕೇ
ಳನಿಮಿಷರ್ಗಮೃತಕೊಡನೊದಗಿದೊಲ್ ಭವದಂಘ್ರಿ
ವನಜಗಳ್ ಸುಪ್ರಸನ್ನತೆಯಾಗಲೆನಗೆ ಭವರುಜೆಗೆ ಭೇಷಜಮೆನಿಸುತ
ಮನಕೆ ಚಾಪಲ್ಯಮಿನ್ನೆತ್ತಣದು ಮುಂದೆ ಪುಲು
ಮನುಜರನ್ನುದ್ಧರಿಸಿ ಸುಲಭದಿಂ ಸುಗತಿಯ
ನ್ನನುಗೊಳಿಪ ಸಾಧನೋಪಾಯಮಂ ಕರುಣಿಸುವುದೆಂದು ಪದವಿಡಿದನಂದು ೮೭

ಕೇಳಿ ವಿನಯೋಕ್ತಿಯಂ ವ್ಯಾಸನಂ ಸಂತೈಸಿ
ನಾಳೀಕಪೀಠ ತನಗೊಲಿದಿತ್ತ ಭಾಗವತ
ಮೂಲಮಂತ್ರವ ಮುನಿಗನುಗ್ರಹಿಸಿ ಪೇಳ್ದನೀ ಕಥನಮಂ ವಿಸ್ತಾರದಿಂ
ಭೂಲೋಕದೊಳ್ ಹರಹಿದಡೆ ಮರ್ತ್ಯರದ ನೋದಿ
ಕೇಳಿವಡೆ ಸದ್ಗತಿಗಳಮರಿ ತರಿಸುವರುತ
ನ್ಮೂಲದಿಂ ಚಪಲಮಳಿದಪುದೆಂದು ಬೆಸಸಿ ಸಂಕಲ್ಪಮಂ ಪೂರಿಸಿದನು ೮೮

ಈ ಪರಿಯಲುನ್ನತಿಯ ಸಾಧನವನರುಹಿ ಲೋ
ಕೋಪಕೃತಿಯನ್ನೆಸಗಿ ಮುನಿಮನ್ನಣೆಯ ನಾಂತು
ತಾಪಸ್ಕರನಿಬರಂ ಬೀಳ್ಕೊಂಡು ಹಂಸೆಯಂ ಹಲ್ಲಣಿಸಿ ವಾಘೆದಿರುಹಿ
ಶ್ರೀಪರಮ ಶೇಷಾದ್ರಿ ವೆಂಕಟೇಶ್ವರನ ಲೀ
ಲಾಪ್ರತಿಮಕೌಂಡಿನ್ಯ ಗುರುವರನ ವಾಳ್ಕೆಯಿಂ
ದಾ ಪುಣ್ಯನಿಧಿ ತಪೋಲೋಕಮನ್ನೈದಿದಂ ಸುರರು ಜಯಜಯಮೆನಲ್ಕೆ ೮೯

ಅಂತು ಅಧ್ಯಾಯ ೩ ಕ್ಕಂ ಪದನು ೨೮೯ ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ.

೪. ದ್ವಾರಕಿಗೆ ಅರ್ಜುನನು ಹೋದದ್ದು

ಸೂಚನೆ:

ಪೊಡವೀಶಧರ್ಮಜನ ನೇಮದಿಂದರ್ಜುನಂ
ನಡೆತಂದು ಸಾಗರದ ಚೆಲುವನೀಕ್ಷಿಸಿ ಕೀರ್ತಿ
ವಡೆದಸುದ್ವಾರಕಿಯನೈದಿ ಶ್ರೀ ಕೃಷ್ಣಪದನಳಿನಂಗಳಂ ಕಂಡನು

ಅಲಿಸೆಲೆ ಭರತಕುಲರನ್ನ ಜನಮೇಜಯ ನೃ
ಪಾಲ ನಾರದನಿಂದನುಗ್ರಹವ ಪಡೆದು ತ
ಚ್ಛೀಲಮನ್ನೆಡೆಪಿಡದೆ ಬಾದರಾಯಣನೆಸಗಿದಂ ಬ್ರಹ್ಮಭಾವನೆಯೊಳು
ಮೇಲೆ ಸಗುಣಗಳ ಸದಸದ್ವಿಷಯಮನ್ನುಳಿದು
ಕೀಲಿಸಿದ ನಿರ್ಗುಣಾಂತದ ಸಾಕ್ಷಿನೆಸಹಿನೊಳ್
ಮೂಲಕಾರಣ ಕಳಾಶಕ್ತಿಯುಂ ಮೀರಿದಾತ್ಮಾನುಸಂಧಾನ ಮಿಗಿಲು ೧

ನಿಂದಿಸಿದನೆಸಗಿರ್ದ ಚಪಲಮನ್ನಿಂದ್ರಿಯದ
ದಂದುಗವನಮಲಮತಿಯಿಂ ಬಿಗಿದು ತನ್ಮತಿಯ
ನೊಂದಿಸಿದ ನಿರ್ಗುಣಾನಂದದೊಳ್ ನಿರ್ಗುಣವನೆರಗಿಸಿದ ಸಾಕ್ಷಿಮುಖಕೆ
ನಿಂದು ಸಾಕ್ಷಿತ್ವದ ಸಗಾಢದೊಳ್ ನಿಖಿಲನು
ನ್ನೊಂದಾಗಿ ಹರಿರೂಪಮೊಂದೆಣಿಸಿ ಭಿನ್ನತೆಗೆ
ಸಂದುಗೊಡದದ್ವಯಾನಂದದೊಳ್ ನೆಲೆಗೊಂಡನಸಿಪದದ ಸೀಮೆವಿಡಿದು ೨

ಸಹಜಮಾಗುಷ್ಣಕರನಾದಡುಂ ಸೂರ್ಯಂಗೆ
ತುಹಿನ ಮುಸುಕಿಂದುಷ್ಣ ತೋರ್ಪಡದೆ ತತ್ತುಹಿನ
ಮಹಿಮೆಯೇ ಮುಂದೊರ್ವುದಸಿತರೋಳ್ ಘನವಸಂತನ ಸಹಾಯವು ಘಟಿಸಲು
ಮಿಹಿಕಾಳಿ ಗುಣಮಳಿಯೆ ಮುನ್ನಿನುಷ್ಣಮೆ ರವಿಗೆ
ವಿಹಿತಮಾದಂತೆ ಜಡಕರ್ಮದಿಂ ಮತಿಯನಾ
ವಹಿಸಿರ್ದ ಚಪಲಮಧ್ಯಾತ್ಮಬಲದಿಂದಣಗಲಿಂದಿನೋಲ್ ನಿಜಮಾಂತನು ೩

ಜಯಿಸಿ ರಿಪುವರ್ಗಮನ್ನಿದಿರು ತೋರ್ಪಡದ ನಿ
ಶ್ಚಯದಿಂದೆ ಸ್ವಸ್ಥ[1]ಮತಿಯಾಗುತಂ[1] ಮೇಲನ್ಯ
ಭಯಮಿರದೆ ಸಾಮ್ರಾಜ್ಯಮಂ ಗೈವ ಭೂನಾಥಸುತ್ಸವಗಳೇಳ್ಗೆಯಂತೆ
ಬಯಲು ವಿಷಯಂಗಳನ್ನೊತ್ತರಿಸಿ ವಿಶ್ವ ಸಂ
ಚಯಮೆ ನಾರಾಯಣನ ರೂಪೆಂಬ ತತ್ತ್ವ ನಿ
ರ್ಣಯವಿಡಿದು ಸುಖಿಸುತಿರ್ದನಿತರೊಳಗೊಂದು ದಿನ ಶುಕಮುನಿಪನೈತಂದನು ೪

ಕೂಟತ್ರಯಸ್ಥಾನಮನ್ನೇರ್ದ ನಿಶ್ಚಪಲ
ನೋಟಕೆರಡನೆಯ ದೃಶ್ಯಗಳಿರದೆ ನೆತ್ತಿಯೊಳ್
ನಾಟೆ ತನ್ಮಯವಾದ ಹೃದ್ವೃತ್ತಿಗೆರಡನೆಯ ವೃತ್ತಿಗಿಂನೆಡವೊದಗದೆ
ಪಾಟವಗಳಿರದಲಸಿದಿಂದ್ರಿಯ ಸಮೂಹದೆಡೆ
ಯಾಟಕವಸರವಿರದೆ ನಿಖಿಲ ವಿಷಯಾಲಯಕ
ವಾಟ ಬಂಧನವೊದವಲೈತಂದನಂಗಕಾಂತಿಗಳಿಂ ಧರೆಯುಮುಸುಕುತ ೫

ಬಂದು ಪಿತನಂಘ್ರಿಗಾನತನಾಗಲುಕ್ಕವಾ
ನಂದದಿಂ ತನಯನಂ ಪಿಡಿದೆತ್ತಿ ಮುಂಡಾಡಿ
ಬಂದ ಕಾರ್ಯವನು ಬೆಸಗೊಂಡಃ ಪ್ಯೈದಡಹುತಿರಲಾಗ ಶುಕಯೋಗೀಂದ್ರನು
ಕಂದೆರೆದು ಕರಣಗಳ್ ಪೊರಸೂಸಿ ಭಕ್ತಿಯಿಂ
ತಂದೆಯಂ ಮೊಗನೋಡಿ ನುಡಿದನೆಲೆ ತಾತ ನಿಮ
ಗೆಂದಿನಂತಿಲ್ಲವಾನನರುಚಿ ಪೊಸಬ್ರಹ್ಮತೇಜಮೆತ್ತಣದೆಂದನು ೬

ವತ್ಸ ಕೇಳಾವು ಮೀಮಾಂಸಮತಗತಿಯ ಪಿಡಿ
ದುಚ್ಚಕರ್ಮಾಚರಣೆಯಂ ವಹಿಸಲದರಿನಿಂ
[1]ಸ[1]ಚ್ಚರಿತ್ರಮೆ ಜಗದ್ವಳಕೆಗನುವಾಗಲಧ್ಯಾತ್ಮ ಪ್ರಯೋಜನಗಳು
ಮುಚ್ಚುಮರೆಯಾಗಿ ಮುಂದೋರದಿರಲಾಗ ವಿಧಿ
ಯುಚ್ಚರಿನ ಸುತ ನಾರದಂ ಭಾಗವತಮೆನಿ
ಪ್ಪಚ್ಯುತಪುರಾಣವನನುಗ್ರಹಿಸಲದರ ಮಹಿಮೆಯ ಬ್ರಹ್ಮರುಚಿಯೆಂದನು ೭

---

೪. 1. ಮಾನಸಿಯಾಗಿ ೭. 1. ತ

ಯೋಗಿವರನಾಜ್ಞೆಯಂ ಭಜಿಸಲದರಿಂ ಚಪಲ
ಪೋಗಿ ಚಿಪ್ರುಚಿಯೇರ್ದುದಾಸನಕೆ ಮುಂದೆ ತ
ದ್ಭಾಗವತಹರಿಚರಿತ್ರಾಮೃತವ ನೆರೆದು ಕಲಿತಪ್ತರಂ ಪೊರೆಪೆನೆನಲು
ಆಗ ಪುನರಂಪ್ರಿಗಾನತನಾಗಿ ವಿಮಲ ಶುಕ
ಯೋಗಿ ಬೆಸಗೊಂಡನೆಲೆ ತಾತ ಹರಿಕಥನಮಂ
ಮೇಗೆ ನಾಂ ವಿಸ್ತರಿಪೆನೆನಗನುಗ್ರಹಿಸಿ ರಕ್ಷಿಪುದೆಂದು ಭಕ್ತಿವಿಗಲು ೮

ಎನ್ನನೇ ವಿಸ್ತರಿಪುದೆಂದೊರೆದ ನಾರದನ
ತನ್ನಿಯಮಮಂ ಪಾಲಿಸುವದುಚಿತಮದರಿನಿಂ
ವರ್ಣಿಸುವೆನಚ್ಯುತಚರಿತ್ರೆಯನ್ನೆಂವಡಾ ಶುಕನನು ಕೇಳಿ ಮತ್ತೆ
ಪನ್ನಗಾರಿಧ್ವಜನ ಕಥನಮಂ ಪೊಗಳಿ ಪಿರಿ
ದುನ್ನತಿಯನೆಸಗಲಿಚ್ಛೈಸುವುದು ಮತಿಯೆನಗೆ
ಭಿನ್ನರೆನಿಸಿರಲೇ ತಾತ ತನಯರ್ಗಳದರಿಂ ಕರುಣಿಸುವುದೆಂದನು ೯

ಪಿತನೆ ಸುತನಾಗಿ ಜನಿಸುವನೆಂದು ಸರ್ವದಾ
ಶ್ರುತಿಗಳೊರೆಯುಲ್ಕೆ ಸಂಶಯಮೆತ್ತಣದು ರಮಾ
ಪತಿಯ ಸುಚರಿತ್ರಮಂ ವಿಸ್ತರಿಸಲಾನದುವೆ ಭವದೀಯ ಕೃತಿಯೆನಿಸದೆ
ಪತಿಕರಿಸಿ ಸಲಹಬೇಕೆನೆ ಹರಿಪುರಾಣಮಂ
ಸುತನಿಂಗನುಗ್ರಹಿಸಿ ಮುಂದೆ ನೀ ಮನುಜ ಸಂ
ತತಿಯನುದ್ಧರಿಪುದೀ ಕಥನಮನ್ನೊರೆದೆಂದುಹರಸಿ ಬೀಳ್ಕೊಟ್ಟನಂದು ೧೦

ಮತ್ತೆ ಕೇಳಿಂದು ಕುಲರನ್ನ ಜನಮೇಜಯ ನೃ
ಪೋತ್ತಮನೆ ಕುರುವಂಶ ದುರ್ಯೋಧನಾದ್ಯರ
ನ್ನೊತ್ತಿ ರಣಮುಖದಿಂದೆ ನಿರ್ವಹಿಸಿ ಸದ್ಗತಿಯ ಸಾರ್ಚೆ ತದನಂತರದೊಳು
ಪೊತ್ತ ದುಮ್ಮಾನದಿಂದವೆ ಯುಧಿಷ್ಠಿರ ಜನಪ
ನತ್ಯಧಿಕ ಸಾಮ್ರಾಜ್ಯಮಂಗೈದಡುಂ ಧರ್ಮ
ವೃತ್ತಿಯಂ ವಂಚಿಸದೆ ನಿರಹಮ್ಮಿನಿಂದೆಸಗಿದಂ ಹರಿಯೆ ಕರ್ತೃವೆನುತ ೧೧

ವನವಾಸದೊಳ್ ತನ್ನ ಪಿಂತೆ ಬಾರದೆ ಸುಯೋ
ಧನ ಪಕ್ಷಪಾತಮಂ ಮೆರೆದವೆನೆ ದುಗುಡನು
ನ್ನಸುವಿಡಿದು ಕಲಹ ಕರ್ಕಶ ಕುಟಿಲ ವೈರಮಾಗ್ರಹಮಲಸು ದಂಭ ಹಿಂಸೆ
ಮನಕತಾಶುಭ ರೋಗ ಡಾವರಾನೃತವು ವಂ
ಚನೆಯಹಂಕಾರಗಳಸೂಯಮೆಂಬಿನಿತುವಂ
ಮುನಿದು ತೆವರಿದನು ನಿಜ ರಾಜ್ಯದೊಳ್ ಕುರುಹುದೋರದ
ತೆರದೊಳೆಂಬೊಲಿಸೆಯೆ ೧೨

ತನ್ನೊಡನರಣ್ಯದೊಳ್ ನೆಲಸಿದ್ದ ಸದ್ಧರ್ಮ
ದುನ್ನತಿಯನೆಸಗಿ ನಿಜರಾಜ್ಯದೊಳ್ ನೆಲೆಗೈದು
ಮನ್ನಿಸಿದನೆಂಬಂತೆ ಕಲ್ಯಾಣ ವಿಭವಂಗಳುಬ್ಬಗೆಡಮುಬ್ಬಡೆನಿಸಿ
ಸನ್ನುತ ಯಯಾತಿಕುರು ದುಷ್ಯಂತ ಭರತಾದ್ಯ
ರನ್ನುತಿಸಲೆಳಸುವರಿಗಿನಿಸು ಗುಣಮಿರದೆನಿಸಿ
ತನ್ನ ಪೆಸರೆನಿಸಿದಂ ಭುವನ ಜನರನಿಬರ ನ್ನನ್ವರ್ಥಗುಣಗಳಿಂದೆ ೧೩

ವಾಸುಕಿಗೆ ಕೃಷ್ಣಪದಮುಭವಂಗೆ ಕರೆಗೊರಳ್
ವಾಸವ ಗಜಕೆ ದಾನ ಗಂಗೆಗೆಯಮುನೆ ಶಿವನಿ
ವಾಸಕಂ ಭೂತಗಣ ಚಂದ್ರಗೆ ಕಳಂಕ ವಾಗ್ದೇವಿಗೆ ಕನೀನಿಕೆಗಳು
ವಾಸುದೇವಂ ದುಗ್ಧ ವಾರಿಧಿಗೆ ತೋರ್ವ ಸಹ
ವಾಸಮಾಗಿರುವುವೆಂದೊತ್ತರಿಸಿ ಸತತಮುಂ
ಓಸರಿಸದಖಿಲ ಲೋಕಂಗಳಂ ಮುಸುಕಿದಳ್ ಕೀರ್ತಿ ಸತಿಯವನೀಶನ ೧೪

ಆ ಮಯೂರ ಧ್ವಜನಸುಪ್ರದಂ ದಾನ ನಿ
ಸ್ಸೀಮ ಬಲಿಯನ್ನೆಣಿಸೆ ಕುಪ್ರದಂ ಮುಂಜೆಸೆದ
ಭೂಮಿಧರವಾಸಶೈಲಪ್ರದಂ ತಿಳಿಯಲಿವರೈಸಲೇ ದಾನವರರು
ಕಾಮಿಸಲ್ ಬಂಧದಿಂ ಹಿಂಸೆಯಿಂ ಗರ್ಜಿಸುವ
ನೇಮಮುಲ್ಲದೆ ಕೊಡರು ಗಡ ಯುಧಿಷ್ಠಿರ ಜನಪ
ನೀ ಮೂರು ದುರ್ಗುಣಗಳಿರದೆ ಸುಪ್ರದನಹಂ ಸರಸ ಶಾಂತಂಗಳಿಂದೆ ೧೫

ಸಂಪದ್ವಿಶಿಷ್ಟ ಶತಮುಖನೆನಿಸಿ ಸತ್ಯಗುಣ
ಮಂ ಪೊರೆವ ದೇವವ್ರತನುಯೆನಿಸಿ ಕೃತದಾನ
ದಿಂ ಪುಣ್ಯಸಂಗ್ರಹದಿ ಬಲಿಯೆನಿಸಿ ಹರಿಭಕ್ತಿ ಭರಿತ ಪ್ರಹ್ಲಾದನೆನಿಸಿ
ತಂಪೆಸೆವ ಸತ್ಕಳಾನಿಧಿಯೆನಿಸಿಯವ್ಯಾಜ
ದಿಂ ಪರರಿಗುಪಕರಿಪ ಘನನೆನಿಸಿ ಪರಮಾತ್ಮ
ನಂ ಪ್ರಸನ್ನತೆಗೊಳಲ್ ಧ್ರುವನೆನಿಸಿ ಧರ್ಮಸುತನವನಿಯುಂ ಪಾಲಿಸಿದನು ೧೬

ಮಧುಪಾನರತರಿಗಾಪಡಿ ಬಿಡದು ಚಂಚಲಾ
ಸ್ಪದರಿಗೆಂದಿಗು ಬಂಧ ಕಡೆಗೊಳದು ಸಕಳಂಕ
ಹೃದಯರ್ಗೆ ಕೃಶರೋಗವೆಡೆವಿಡದು ಭೂತಸಂತಾಪವುಂ ಸಮನಿಸರ್ಗೆ
ಉದುಭವಿಸುತಾಳ್ದ ಕೋಟಲೆಗೆಡದು ಮಿತ್ರ ವೈ
ರದಲಿ ಚರಿಪರ್ಗಧೋಗತಿಯೆ ನಿಶ್ಚಯಮೆನು
ತ್ತದನಾಚರಿಸದವನ ಭುವಿಯೊಳಳಘನ ಚಂದ್ರ ಸೂರ್ಯ
ರಾಹುಗಳ ನೋಡಿ ೧೭

ತನ್ನ ಮಗ ಸಾಮ್ರಾಜ್ಯಮುಂ ಗೈವನೆಂದು ಯಮ
ಮನ್ನಿಸಿದನೆಡೆಗಾಲ ಮೃತಿಗಳಂ ಪ್ರೇಮದಿಂ
ತನ್ನಣುಗ ಯುವರಾಜನೆಂದು ಮಾರುತನು ಮೃದುಸುಳುಹಿನಿಂ ಹಿತಗೊಳಿಸಲು
ತನ್ನ ಸುತನಿಹುದರಿಂದಿಂದ್ರನೌಚಿತ ಸುಪ್ರ
ಸನ್ನ ವೃಷ್ಟಿಯನೆರೆಯೆ ಯಮಳಾಶ್ವಿನಿಯರು ರುಜೆ
ಯನ್ನಂಟಲೀಯರಾತ್ಮಜರಿರುವರೆಂದು ನೃಪಭುವನಮೋದಿನ ಮೆನಿಸಲು ೧೮

ನಿರುತಮುಂ ಹರಿಕಥಾಗಾನದಿಂ ಧ್ಯಾನದಿಂ
ಮೆರೆವ ಸಂತಾನ ಸೌಭಾಗ್ಯದಿಂ ಯೋಗ್ಯದಿಂ
ಪರಮ ಮಂಗಳ ಜನಾವಳಿಗಳಿಂ ಕಳೆಗಳಿಂ ವೈಭವೋತ್ಸವಗಳಿಂದೆ
ಪರಿಪರಿಯ ದಾನಸತ್ಕೃತಗಳಿಂ ವ್ರತಗಳಿಂ
ಪರಿಕಲಿತ ಸದನದಚ್ಚರಿಗಳಿಂ ಸಿರಿಗಳಿಂ
ಚಿರತರಾನಂದ ಸಂಪದಗಳಿಂ ಮುದಗಳಿಂದಾ ರಾಜ್ಯಸಿರಿ ಮೆರೆದುದು ೧೯

ಅಶ್ವಮೇಧ ಕ್ರತುವನನುಗೈದು ಮಲೆತ ಭೂ
ಮೀಶ್ವರರನೆರಗಿ ರಣದೊಳ್ ಗೆಲಿದು ಭೂಸುರ ನಿ
ಜೈಶ್ವರ್ಯದುನ್ನತಿಗಳಂ ಪೊಸೆದು ಭುವನದೊಳ್ ತನ್ನಾಜ್ಞೆಗಳನು ಬಲಿದು
ಶಾಶ್ವತದೊಳೊಪ್ಪಿರುತ ಬಳಿ [1][ಕೊಂದು][1] ದಿನ ವಿಮಲ
ವಿಶ್ವೇಶ ಕೃಷ್ಣನಂ ಕಂಡು ಬಸಲೆನೆ ಗಜರ
ಥಾಶ್ವಾದಿ ಗಡಣದಿಂದರ್ಜುನನ ಕಳುಹಿದಂ ದ್ವಾರಕಾಹ್ವಯ ನಗರಿಗೆ ೨೦

ಬಳಲಿ ನೀರಡಿಕೆಯಿಂದಲೆವನಂ ಪೀಯೂಷ
ಗಳಶಗಾವಲ್ಗೆ ನೇಮಿಸಿದಂತೆ ಕೃಷ್ಣಾಂಘ್ರಿ
ನಳಿನಸಂದರ್ಶನಾತುರದರ್ಜುನಂಗೆ ನಿಜವಾಂಛೆ ಕೈಗೂಡಿದಂತೆ
ಅಳವಟ್ಟ ಪೊಂದೇರನಡರಿ ಕರಿ ತುರಗ ಪಾ
ಯ್ದಳದ ಸಂದಣಿ ಮೆರೆಯಲಖಿಲ ಸನ್ನಾಹದಿಂ
ಬೆಳವಿಗೆಯ ಹರ್ಷದಿಂದಗ್ರಜಾಂಘ್ರಿಗೆ ನಮಿಸಿ ಪೊರವಂಟನರಮನೆಯನು ೨೧

ಕೇಳ್ವಾಕ್ಯಪೀನಾಥ ಧೃತರಾಷ್ಟ್ರ ಮುಖ್ಯರಂ
ಬೀಳ್ಕೊಂಡು ಮಾರ್ಗಮನ್ನೈದೆ ದೇಶಾಧೀಶ
ರಾಳ್ಕುದುರೆ ಸಹಿತ ಲೈತಂದು ಕಾಣಿಕೆಗಳನ್ನಿತ್ತೆರಗಲಾ ಭೂಪರ
ತಾಳ್ಕೆಯನ್ನರಿದು ಮನ್ನಿಸಿ ಕಳುಹಿ ನಿಸ್ಸಾಳ
ಸೂಳ್ಕವಿಯಲೈದುತಂ ಕಂಡ ತನ್ನಿದಿಗೊಂಬ
ಮಾಳ್ಕೆಯಿಂ ಮುಂದೆಸೆವ ನಿರವಧಿಯ ಸಕಲ ಸಂಪನ್ನಿಧಿಯ ವಾರಿಧಿಯನು ೨೨

ಅಡಗಿಸುವ ಗಿರಿಗಳುಲುಹುಗಳೈಸೆ ಜಲಕರಿಗ
ಳಿಡೆಯಾಟಮಲ್ಲ ಬಡಬಾನಳನ ಕಿರಣ ಕೆಂ
ಗಿಡಿಯೈಸೆ ರತ್ನದೀಧಿತಿಯಲ್ಲ ತೆರೆಗಳೊಳ್ ಪ್ರತಿಬಿಂಬಿಸಿದ ಸೂರ್ಯರ
ಪಡೆಯೈಸೆ ಮತ್ಸ್ಯವೈವೆಳಗಲ್ಲ ಸುರಸಿರಿಯ
ಪಡೆವ ಕೀರ್ತಿಸುಲತೆಯ ಕಂದಮ್ಮೆಸಲೆ ಕಂಬು
ವೆಡಗಲ್ಲ ಸುಳಿವ ನಾವೆಗಳೈಸೆ ಕಚ್ಛಪಗಳಲ್ಲೆ ನಿಸಿತಾ ಕಡಲೊಳು ೨೩

---

೨೦. 1. ಕಲೊಂ

ಪೆತ್ತವನು ಸಗರನಿವ ವಿಷಹೃದಯನದರಿಂ ಸು
ವೃತ್ತಿಯಳಿವಡದೆ ಜಡಭರಿತದಿಂ ಸ[1]ದ್ಘಸರಿ[1]
ಗಿತ್ತ ಜೀವನವ ಪುನರಪಿ ಬಯಸಿ ನಿಜಪತ್ನಿಯರ ಮೂಲದಿಂದೆ ತರಿಸಿ
ದತ್ತಾಪಹಾರಮಂ ಗೈದಡದರಿಂದಲಡ
ಸಿತ್ತೊಡಲೊಳಗ್ನಿ ಕೃಶರೋಗ ನಿಜತನುಜಂಗೆ
ಪತ್ತಿತಿನ್ನಿವನಸುವ ಹೀರೆಂದು ಗರ್ಜಿಸುತ ಘನ ಮುಸುಕಿತೆನಲೆಸೆದುದು ೨೪

ಘಟಜ ಶಿಷ್ಯಂ ಬಪ್ಪನೆಂದಳುಕಿನಿಂ ರೋಮ
ಪಟವ ಮುಸುಕಿಟ್ಟು ಮರೆಗೊಂಡುದೋ ಜಲಧಿಯು
ತ್ಕಟ ಸೂರ್ಯಕರಗಳುಪಟಳಕೆ ನೀರಂ ಪೊಗಲ್ ಬಂದುದೋ ಕತ್ತಲೆಯೆನೆ
ಪಟುತರದ ಬಡಬಸುರಿಯುಬ್ಬಸಕೆ ಸಲಿಲ ಗಜ
ಘಟೆಗಳಿರಲಮ್ಮದೋಡುವವೆನುತ ಪೊರವಡುವ
ನಟನವೋ ತಿಳಿಯದೆನಲೇಕದಿಂ ನೀಲಾಭ್ರ ಮುಸುಕಿರ್ದುದಬ್ಬರಿಸುತ ೨೫

ಹಿಂದೆ ವಜ್ರದ ಘಾತಿಯೆರಗಲಾ ಭೀತಿಯಿಂ
ಬಂದೆಮ್ಮ ಹಿಮಶೈಲಜಾತನಂ ತಲೆಗಾಯ್ದು
ನಂದೀ ಸರಿನ್ನಾಥನಿವನಿಗಾವಿಂದು ಪ್ರತ್ಯುಪಕೃತಿಯ ಮೆರೆವೆವೆನುತ
ಮಂದರಾದ್ಯಖಿಲ ಗಿರಿಕುಲಮೇಕ ಕಾಲದೊಳ್
ಬಂದಪವೊ ಮೇಘ ಮುತ್ತಿಗೆಯನೆಬ್ಬಿಸಲೆನಲ್
ಮುಂದುವರಿದೈತಪ್ಪ ತೆರೆಗಳುರುಬೆಗೆ ವೋಡವೋಡದಿರವೆಂಬೋಲೆಸೆಯೆ ೨೬

ವನಮಾಲೆಯನ್ನಾಂತು ಕಂಬುಚಕ್ರಂಗಳ
ನ್ನನುವಿನಿಂ ಧರಿಸಿ ಪದ್ಮಾಶ್ರಯಂ ತಾನಾಗಿ
ಘನನೀಲಕಾಂತಿಯುಜ್ವಲತೆಯಿಂ ಭುವನೋದರತ್ವದಿಂ ಕೀರ್ತಿವಡೆದು
ಅನಿಮಿಷಾಲಯನೆನಿಸಿ ಗೋತ್ರ ರಕ್ಷಕ ಬಿರುದ
ನನುಕರಿಸಿ ನವರತ್ನ ಭೂಷಿತಂ ತಾನಾದ
ವನಜನಾಭನ ಮೂರ್ತಿಯಂತೆಸೆದುದಾ ಶರಧಿ ಹರಿವೆಸರು ಸಾರ್ಥಕಮಲೆ ೨೭

---

೨೪. 1 ದ್ಬುಧರಿ

ಪರಿದ ಪವಳದ ಬಳ್ಳಿ ಕೆಂಜಡೆಗಳೆಂದುಲಿವ
ತೆರೆಮಾಲೆಯಂ ಪೊತ್ತ ಗಂಗೆಯೆಂದತಿಬಿಳಿದು
ನೊರೆಗಳಂ ಭೂತಿಲೇಪನವೆಂದು ಶೈವಾಲಮೇ ಹಸ್ತಿಚರ್ಮವೆಂದು
ಶರಧಿಯೇ ಶಿವಮೂರ್ತಿಯೆಂದೆನಿಸಿ ಮುಳಿದು ಮೀನ್
ಗರಿಗಳಿಂದಿರಿದು ಮಕರಿಯ ಮುಳ್ಗಳಿಂ ಚುಚ್ಚಿ
ಪರಮೆಯುಬ್ಬರಗಳಿಂ ಪೂಗಣೆಯ ಕೆದರಿದಂ ಮಾರಭಟನೆಂಬೊಲೆಸೆಯೆ ೨೮

ಭವಮೂರ್ತಿಯೋಲ್ ವಿಧೂಮಾಗ್ನಿ ಗಂಗಾಧಾರಿ
ದಿವದಂತೆ ಸುಮನಸ್ಸುರಭಿಗಳುನ್ನತಕಾರಿ
ರವಿಯೆನಲ್ ಮಕರ ಕರ್ಕಟ ಮೀನ ಸಂಚಾರಿ ಹರಿಯಂತೆ ಚಕ್ರಧಾರಿ
ನವನಿಧಿಪನೆನೆ ಶಂಖ ಪದ್ಮ ಕಚ್ಛಪ ಧಾರಿ
ಸವನಮಂದಿರಮೆನಲ್ ದ್ವಿಜಕಲಕಲಾಧಾರಿ
ಧವಳಾದ್ರಿಯೆಂಬಿನಂ ಸತತ ಮುಕ್ತಾಧಾರಿಯೆನಿಸಿ ಕಡಲೆಸೆದಿರ್ದುದು ೨೯

ಸಿರಿಯ ಪಡೆದವ ದರಿದ್ರದ ಭಂಗದುರುಬೆಗಳ
ಪೊರುವನೇ ಕಲ್ಪತರು ಕಾಮಧೇನುಗಳ ಪಡೆ
ದಿರುವಂಗೆ ದೀರ್ಘತೃಷ್ಣಾತುರಮೆ ಶಾಂತಕಳೆಯುದಿಸಿದೊಡಲುರಿಯಲೆವುದೇ
ಪರಿಕಿಸುವಡಮೃತಮುದ್ಭವಿಸಿದುದರದೊಳು ವಿಷ
ಭರಿತಮಾದಪುದೆಂತೊ ಶಿವಶಿವಾ ಕೌತುಕಮಿ
ದರಿಯಲಭವಂಗೆ ನಂಜೆರೆದ ಫಲವಾಗದಿರದೆಂಬ ಬೆಡಗಂ ಬೀರ್ದುದು ೩೦

ಪವಳರುಚಿಗೇಳ್ಗೆಯಿತ್ತಡಿಗಳಿಂದವೆ ನಿಖಿಲ
ಭುವನವುಂ ಸಂಗ್ರಹಿಸಿ ತನ್ನಗಾಧೋನ್ನತಿಯ
ಹವಣುಗಾಣಿಸದೆ ಸದ್ರತ್ನಗರ್ಭಾಧಾರನೆಂಬ ಕೀರ್ತಿವಡೆದು
ಕವಿಭಂಗಕುರುಹ ಕಣ್ಣಿಗೆ ತೋರಿ ಮೆರೆವ ವಾ
ಸವ ಮನೋಭೀಷ್ಟಮಂ ಪಡೆದಿತ್ತು ನಾಕವೈ
ಭವಮುನ್ನಮರ್ಚೆ ತ್ರಿವಿಕ್ರಮನ ಮಹಿಮೆಯಿಂದಾ ಶರಧಿ ಕಂಗೊಳಿಸಿತು ೩೧

ತಿಳಿಯೆ ಮುಕ್ತಾಶ್ರಯಮದಾಗಿಯು ಜಡಾಶ್ರಯವು
ಕಳಿತಾಮೃತೋದರಮದೆನಿಸಿಯು ವಿಷೋದರದಿ
ನಳಿನ ಜನ್ಮಸ್ಥಾನಮಾಗಿಯುಂ ನಳಿನಾರಿ ಜನ್ಮಸುಸ್ಥಾನ ಜಸದಿ
ತಳೆದಡುಂ ಶಾಶ್ವತವನಮಿತಭಂಗಾನ್ವಿತದಿ
ನಿಳೆಗೆ ಪಾವನ ಸಲಿಲಮಾದಡುಂ ವಿಪ್ರನೆಂ
ಜಳಿನ ಜಲಮೆಂದೆನಿಸಿ ಮೆರೆವ ಮಂಜುಳ ಮಹೋದಧಿಯನಿದಿರಲಿ ಕಂಡನು ೩.೨

ಘನ ಘನದಲ್ಲಾಂಕಿಯಸುಗುಡಿವುದಂ ತನ್ನ ಪಾ
ವನ ವನದಿ ಸುರೆಯಸುರೆ ಪಡೆದುದಂ ಸಕ್ಷೀಣ
ತನ ತನಯಗಡಸಿ ಕಳೆಯಳಿದುದಂ ನಿಜಪತ್ನಿಯಂ ಶಿವನು ಸೆರೆವಿಡಿದುದಂ
[1]ನೆನೆನೆನೆದು ಮಗಳೊಬ್ಬಳಲೆವುದಂ[1] ಮಧುರ ರಂ
ಜನ ಜನಕ್ಕೊಡಬಡದೆ ಕಳಿದುದಂ ನೆನೆದು ದು
[2]ಮ್ಮನಮನಕತಪ[2] ಲಬ್ಧಿ ಬಿಸುಸುಯ್ವ ಸುಯಿಲೆನಲ್
ಜಲಸೆಳೆಯ ರವಮೆಸೆದುದು ೩.೩

ಅತಿ ಮನೋಹರಗಳಿತ್ತಡಿಯಲೆರಗಿದ ವೃಕ್ಷ
ತತಿಗಳೊಳ್ ತೂಗುತಿಹ ಪೂಗೊನೆಗಳಬ್ಧಿಯೊಳ್
ಪ್ರತಿಫಲಿಸಿ ತೋರ್ಪಡಲ್ ಮಲ್ಲಿಗೆಯ ನೆರಳು ಭಾಗೀರಥಿಯ ಕೂಟದಂತೆ
ಸತತ ಕುರ್ವಕದ ನೆಳಲಿಮುನೆಯೊಡವೆರೆದಂತೆ
ನುತ ಜಪಾಕುಸುಮನೆಳಲೀರ್ದ ಜಲಮದು ಸರ
ಸ್ವತಿ ಕೂಡಿದಂತೆ ಸದಿವೆಣ್ಗಳರಸನನಪ್ಪಿದಾಯ ತೋರ್ಪಡುತಿದ್ದುದು ೩.೪

ಪರಿಪರಿಯ ಪೂವಣ್ಗಳ್ಮಸಗಿ ನವರತ್ನ
ನಿರುಪಮಚ್ಛವಿಗಳಂ ತಮಗುಚ್ಚನೀಚಮಂ
ಪರಿಕಿಸುವಡೆಂದಬ್ಧಿಯಂ ಪುಗಲು ನವರತ್ನ ರೋಚಿಗಳು ಪೂವಣ್ಗೆ
ಸರಿಸಮಾಗದೆ ನಾಚಿ ತಳಕಿಳಿದು ಶುಕ್ತಿಗಳ
ಮರೆಯೊಳಡಗಿತು ಮುತ್ತು ಪುಲ್ಗಚ್ಚಿದುದು ನೀಲ
ದರಿಯ ಸಾರ್ದುದು ಪವಳಮೆಂಬಂತೆ ಕುಸುಮರುಚಿಯುತ
ಸಲಿಲಮೆಸೆದಿರ್ದುದು ೩.೫

೩೩. 1. ಕನಕನದಿಯೊಡವೆರೆಯುದುಳಿದುದಂ, 2. ಮ್ಮಾನಮನಕೆನ.

ಸಾಲಗಳನಡರಿ ಪೂಸಾಯ್ದು ಪುರುಷಾಕೃತಿಯ
ಕೀಲಾಲದೊಳು ನೋಡಿ ಪಿಡಿದೆಳೆವ ತವಕದಿಂ
ಬಾಲಮಂ ಬಡಿವ ನಕ್ರಂಗಳಂ ಬಿಂಬಿಸಿದ ಲತೆಗಳಂ ಪಾವ್ಗಳೆಂದು
ಮೇಲಕುಪ್ಪರಿಸಿ ಕೆಡೆದೋಡುತಿಹ ಮೀನ್ಗಳಂ
ಜೋಲುಗೊನೆವೆರಸಿ ತೋರುವ ಕದಳಿಗಳ ನೆಳಲ
ಸಾಲ ಮುರಿಯಲು ಪರಿವ ಜಲಕರಿಗಳಾಟಮಂ ಕಂಡು ನಗುತ್ತೈತಂದನು ೩೬

ಕಡುಜವದಿ ನೆರೆಯಲ್ಕೈತಪ್ಪ ಪೊಳೆವೆಣ್ಗಳಂ
ಸಡಗರದಲಿದಿರುಗೊಳಲೆಂದು ಸಾಗರನುಬ್ಬಿ
ತಡಿಗಳಂ ಮೀರಿ ಮುಂಬರಿದು ತೆರೆಗೈಗಳಿಂ ತಳ್ಕವಿಸಿ ಕರೆದೊಯ್ವುತ
ತೊಡಿಸಿ ನವರತ್ನಭೂಷಣಗಳಂ ಹರ್ಷ ಮಿಗೆ
ಮುಡಿಸಿ ಕಂಜೋತ್ಪಲಸುಮಂಗಳಂ ಮೀನಾಕ್ಷಿ
ಕಡೆನೋಟದಿಂ ನೋಡಿ ಸಮರಸದಿ ಕೂಡಿದಿರವಂ ತೋರ್ದುದಬ್ಧಿಯಂದು ೩೭

ಎಸೆವ ಕಮಲಾಕ್ಷಮಾಲೆಯನಾಂತು ಪೂಧೂಳಿ
ಭಸಿತಮಂ ಪೂಸಿ ಸಾಲ್ದುಂಬಿ ಜಪಮಾಲೆಯ
ನ್ದೊಸೆದು ಮುತ್ತಿರುವ ಮೇಘಾಜಿನವ ಪೊದೆದು ಶೈವಾಲ ದರ್ಭಾಸನದೊಳು
ನಸುಬಿರಿದ ಕಮಲವೊಗ್ಗೆಗಳರ್ಧ ದೃಷ್ಟಿಗಳ
ಬೆಸುಗೆಯಿಂದವೆ ಜಲಾಹಾರದಿಂದಬ್ಧಿತಾ
ಪಸನೆಸೆದ ಹಾರುವರ ಕಲಕಲಾಮ್ನಾಯ ಘೋಷಮೆ ಘೋಷಮಾಗಿರಲ್ಕೆ ೩೮

ಬುದ್ಧಿಗಳವಡದತಿ ವಿಶಾಲದಿಂ ಕೂಲದಿಂ
ಪೊದ್ದಿರುವ ಪವಳಲತೆಗೆಂಪಿನಿಂ ಪೆಂಪಿನಿಂ
ಪೆದ್ದು ಪುಟನೆಗೆವ ಮೀನ್ಮ್ರಿಗಳಿಂ ಗಿರಿಗಳಿಂದಧಿಕ ಕರ್ಕಟಗಳಿಂದೆ
ಉದ್ದಗಾಣಿಸದ ಸಂತೋಷದಿಂ ಘೋಷದಿಂ
ಬದ್ಧಮಾಗೊಡವೆರೆವ ಪೊಳೆಗಳಿಂ ಕಳೆಗಳಿಂ
ಪದ್ದ ಸನ್ಮೌಕ್ತಿಕದ ಶುಕ್ತಿಯಿಂ ರಕ್ತಿಯಿಂದಾ ಕಡಲು ಚೆಲುವಾಂತುದು ೩೯

ಈ ತೆರದಲಬ್ಧಿಯ ವಿಚಿತ್ರಮಂ ನೋಡಿ ಜನ
ಜಾತ ಜಡಜನ್ಮ ಕರ್ಮಂಗಳಂ ತೊಳೆವ ಬಹು
ಭೂತ ಪ್ರವಾಹ ಜೀವನವನೊಳಕೊಂಬ ಕರುಣಾಂಬುಧಿಯ ಕಾಂಬೆನೆಂಬ
ಆತುರದಲೈತಂದು ಕಂಡನಿದಿರಿನಲಿ ಪರ
ಮಾತುಮ ಶ್ರೀಕೃಷ್ಣ ಭಾವನೋನ್ನತಿಯ ಮುನಿ
ಜಾತಕಂ ನಿಜ ಮುಕ್ತಿಸಕಿಯ ಸದ್ರತಿಯನೊದಗಿಸುವ ದ್ವಾರಾವತಿಯನು ೪೦

ಆಲಿಸೆಲೆ ಭೂಪ ಪರಮಾತ್ಮನೇ ಭುವನೈಕ
ಪಾಲನೆಯನಂಗವಿಸಿ ಮನುಜಾಕೃತಿಯಲೆಸೆವ
ಲೀಲಾವತಾರಮನ್ನಾಂತಿರಲ್ಕದರಿಸಿಂ ತನ್ನಿಜಾವಾಸಮಾದ
ಮೂಲ ವೈಕುಂಠಮೇ ದ್ವಾರಕಾಪುರಮೆನಿಸಿ
ಮೇಲೆ ತಜ್ಜನಮೆ ಪುರಜನಮೆನಿಸಿ ದೇವರುಷಿ
ಶೀಲರೇ ಗೋಪಿಕಾ[1]ಜನ[1]ಮೆನಿಸಿ ಮೆರೆದಿರ್ದರಲ್ಲಿ ಹರಿಸೇವೆಗಾಗಿ ೪೧

ಗರುವ ಕೇಳ್ ತತ್ಪುರಮೆ ತಿಳಿಯೆ ಬ್ರಹ್ಮಸ್ಥಾನ
ಸರಸಿಜವು ಸುತ್ತುಪೂಬನಮೇ ಸಹಸ್ರದಳ
ಮೆರಗಿರ್ಪ ಗುಲ್ಮವಲ್ಲಿಗಳೆ ಕೇಸರಗಳರಮನೆಯೆ ಕರ್ಣಿಕೆಯ್ಯೆಸಲೇ
ಸ್ವರದಿ ಘೋಷಿಪ ಸಾಮಗಾನಮೇ ನಾದ ಸಂ
ಚರಿಪ ಪರಿಜನಮೆ ಬಿಂದುಗಳೈಸೆ ಬೆಳಗುತಿಹ
ಪರಿಪರಿಯ ದೀಪಗಳೆ ಕಳೆಯೆನಿಸುತಿಹುದು ವರ್ಣಿಸಲಹುದೆ ತದ್ವಿಭವಮಂ ೪೨

ಮತ್ತೆ ಕೇಳಾ ಕೃಷ್ಣ ಹರಿಯೇ ಪರಬ್ರಹ್ಮ
ನತ್ಯಧಿಕ ಸಾಂಖ್ಯಯೋಗಮೆ ಪರಾಕೆಚ್ಚರಿಪ
ವೃತ್ತಿಯಂ ವಹಿಸಿರಲ್ ತಾರಕಮೆ [1][ಸೋ][1]ಮಯಾಜತ್ವಮಂ ಸಂಘಟಿಸಲು
ಪತ್ತಿದಮನಸ್ಕಮೇ ಪರಿಚರ್ಯಮಂ ಸಮನಿ
ಸುತ್ತಿರಲ್ ಲಂಬಿಕಾಯೋಗಮೇ ಶಯನ ನಿ
ವೃತ್ತಿಯಂತಸ್ಥದೂಳಿಗವನಾಂತಿರ್ಪುದಚ್ಚರಿಯನೇವಣ್ಣಿಸುವೆನು ೪೩

---

೪೧. [1]ಗಣ[1]. ೪೨, 1. ಸಾ.

ತಿಳಿಯಲಾವರಣ ಘನಶಕ್ತಿಯೇ ತತ್ಪುರವ
ಬಳಸಿಹುದು ಸಾಲಾವಲಯವಾಗಿ ಮೆರೆವ ಮುಂ
ಜುಳ ಪಂಚಭೂತಗಳೆ ತವಗಗಳ್ ಪಂಚವಿಂಶತಿ ತತ್ತ್ವ ಕೊತ್ತಲಗಳು
ಅಳವಟ್ಟ ಮಂತ್ರಯೋಗದ ಪಾರಿಯಿಂ ದ್ವಾರ
ಗಳ ಬಲಿವ ತೆಗೆವ ಪರಿಚರ್ಯ ಹಠಯೋಗಕಿ
ನ್ನೊಳಗಾವಲೆಸೆವ ಲಯ ಯೋಗಕವುರಿರೆ ರಾಜಯೋಗಕೆ ಪ್ರಧಾನತ್ವವು ೪೪

ಮೂಲಕಾರಣ ಮಹಾಶಕ್ತಿಯೇ ರುಕ್ಮಿಣಿಯು
ಮೇಲಷ್ಟ ಲಕ್ಷ್ಮಿಯರೆ ಮಹಿಷಿಯರು ವುಪನಿಷ
ದ್ಬಾಲೆಯರೆ ಪರಿಚರ್ಯೆ ಕೆಳದಿಯರ್ಲಸದಾದಿ ಶೇಷನೇ ಹಲಧರನಲೆ
ಬಾಲರೇ ವೈಕುಂಠಪುರ ದೇವತೆಗಳು ಪ್ರ
ಗೋಲನೇ ಪ್ರದ್ಯುಮ್ನ ಚೌಷಷ್ಟಿಯೋಗಿಣೀ
ಜಾಲಮೇ ವೈಗಾವಲಾಳಿಯರ್ವೇದಗಳೆ ಕೈವಾರ ಭಟ್ಟಜನರು ೪೫

ಅರಿಯಲೀಡಾ ಪಿಂಗಳೆಗಳೆ ತತ್ಪುರಜನ
ರ್ಚರಿಸುತಿಹ ರವಿ ಚಂದ್ರವೀಥಿಗಳ್ ಚಿತ್ಕಳಾ
ಭರಿತ ತ್ರಿಕೂಟವೋಲಗಶಾಲೆಯದರ ಮಾರ್ಗವೆ ಸುಷುಮ್ನಾದ್ವಾರವು
ಮೆರೆವ ಷಟ್ಚಕ್ರಗಳೆ ತತ್ಸಭೆಯನೇರ್ವ ಸುಂ
ದರದ ಸೋಪಾನಗಳ್ ಶೃಂಗಾಟಕವೆ ಕೃಷ್ಣ
ಪರಮಾತ್ಮನೆಸೆವ ಸಿಂಹಾಸನವು ಮಂಡಲತ್ರಯವೆ ತದ್ರಾಜ್ಯಸಿರಿಯು ೪೬

ಭದ್ರ ವಿಷ್ಟರದ ಮೊದಲಾವರಣ ಷಣ್ಮುಖೀ
ಮುದ್ರೆಯುಂ ತದ್ವಿತೀಯಾವರಣ ಖೇಚರೀ
ಮುದ್ರೆಯುಂ ತತ್ತೃತೀಯಾವರಣ ಶಾಂಭವೀ ಮುದ್ರೆಯಿಂತೀ ಪೀಠಕೆ
ಸದ್ರತ್ನಕಾಂತಿ ಪಂಚಾಕಾಶ ಮೇಲ್ಗಟ್ಟು
ತದ್ರಾಜಸಭೆಗೆ ಪ್ರತ್ಯಯ ಬಿಂದು ತಳುಕುಗಳ್
ಚಿದ್ರಸದ ಸಾರಣೆಯು ಷಟ್ಕಮಲ ತೋರಣದಲೊಪ್ಪಿದುದು
ಪರಮಕಳೆಯಿಂ ೪೭

ಅಣಿಮಾದಿ ಭೂತಿಗಳ್ ಲಸದಷ್ಟ ಸಿದ್ಧಿಗಳ್
ಪ್ರಣುತ ತತ್ವಾಧಿದೈವಂಗಳೊಪ್ಪುವ ಪಂಚ
ಪ್ರಣವಗಳ್ ಸನಕಾದಿ ಯೋಗಿಗಳ್ ನಿಖಿಲ ಶಕ್ತಿಗಳು ಸನ್ಮಾತೃಕೆಗಳು
ಗಣಿಸುವಡೆ ಗರುಡ ವಿಷ್ವಕ್ಸೇನ ಸಿದ್ಧ ಚಾ
ರಣ ಮಂತ್ರಮೂರ್ತಿಗಳ್ ಮುನಿಜನರ ಸಹಿತ ಯದು
ಗಣವೆನಿಸಿ ಬಂಧುವರ್ಗದ ವಗಾಳ್ಕೆಯಿಂದೆ ಸೇವಿಸುವರಾ ಕೃಷ್ಣ ಹರಿಯಂ ೪೮

ಪರಮಾತ್ಮನೇ ಮನುಜರೂಪನಾಂತಿರಲು ಸಿರಿ
ಧರಣಿಯರು ತಮ್ಮೊಳುಳ್ಳಖಿಲವಸ್ತುಗಳಿತ್ತು
ಪರಿಚರ್ಯಮಂ ಸಮನ್ವಿಸರೆ ಪೇಳಿಸಲು ಧನಕನಕ ಸಂಪದ್ವಿಭವಕೆ
ಪರಿಮಿತಿಗಳಿಹುದೆ ಸುಂದರಗೃಹಾರಾಮ ಸ
ತ್ಪರಿಮಳ ಸುವಸ್ತು ಫಲಪುಷ್ಪ ಧಾನ್ಯಾದಿಯಹ
ಪರಿಕರಂಗಳನೆಣಿಸಲಳವಹುದೆ ನಾಕಸೌರಂಭಮನ್ನೇಳಿಸಿದುದು ೪೯

ಆ ನಗರ ಪುರುಷರೊಳಗಿವ ಕೃಷ್ಣನೆಂಬುದಂ
ಮಾನಿನಿಯರೊಳಗೆ ರುಕ್ಮಿಣಿಯು ಇವಳೆಂಬುದಂ
ಶ್ರೀ ನಿಬಿಡ ಮಂದಿರಂಗಳಲಿದುವೆ ರಾಜಮಂದಿರಮೆಂಬ ಕುರುಹುಗಳನು
ಗಾನಗಳಲಿದುವೆ ತುಂಬುರ ಗಾನವೆಂಬುದ
ನ್ನಾನಂದಗಳಲಿ ಬ್ರಹ್ಮಾನಂದಮೆಂಬುದಂ
ಜ್ಞಾನವೃದ್ಧರ್ವಯೋವೃದ್ಧರಿವರೆಂಬುದನ್ನರಿಯಲಸದಳವೆನಿಸಿತು ೫೦

ಎಲ್ಲಿ ನೋಡಿದಡು ಸುಮ್ಮಾನಗಳ್ ಗಾನಗಳ್
ಸಲ್ಲಲಿತ ಪೂಗೊಳನ ತಂಪುಗಳ್ ಸೊಂಪುಗಳ್
ಚೆಲ್ವಿದೋರಿಸುವ ಫಲವೃಕ್ಷಗಳ್ ಪಕ್ಷಿಗಳ್ ಸೌಂದರ್ಯ ಸತಿಪತಿಗಳು
ಕಲ್ಯಾಣಗುಣಸದಾನಂದಗಳ್ ಛಂದಗಳ್
ನಿಲ್ಲದೆರಗಿದ ತೂರ್ಯವಾದ್ಯಗಳ್ ಚೋದ್ಯಗಳ್
ಬಲ್ಲಿದಹ ಸಂತತಾರೋಗ್ಯಗಳ್ ಭಾಗ್ಯಗಳ್ ನಿಖಿಲರಿಂಗಾ ಪುರದೊಳು ೫೧

ಅಷ್ಟ ಮಹಿಷಿಯರ ಸಂತೋಷದಿಂದೂರ್ವ ಸತಿ
ಗಷ್ಟ ಪುತ್ರರುಗಳ ವಿಲಾಸದಿಂದೀ ತೆರದ
ಲಷ್ಟವರಸೆಯ ಸುತ ವಿಶೇಷದಿಂದಾವೃತ ಸಮಷ್ಟಿ ಸೌಭಾಗ್ಯದಿಂದೆ
ಅಷ್ಟ ದಿಗ್ವ್ಯಾಪಿತ ಗುಣಾಳಿಯಿಂದನಿಶಯು
ಗ್ಮಾಷ್ಟ ಸಾಸಿರ ಗೋಪಿ [1][ಕಾ][1]ಳಿಯಿಂದೇಕವಾ
ಗಷ್ಟ ಮಹದೈಶ್ವರ್ಯ [2]ದಿಂದೆಸೆದ[2] ನಾಂತಿರ್ಪ ಮರ್ತ್ಯತೆಗೆ ಸಾರ್ಥವೆನಿಸಿ ೫೨

ಜನಮೇಜಯನೆ ಕೇಳ್ವುದಿಹ ವಿಷಯ ಭೋಗ ರಂ
ಜನವೇನುವಂ ಬಯಸದಚ್ಯುತಾಂಘ್ರಿದ್ವಯ ಭ
ಜನಮೇ ಸದಾತ್ತಜೀವನವಾಗಿ ವರ್ತಿಸುವ ದೆಸೆಯಿಂದಲಾ ನಗರದ
ಜನಮೇ ಸದಾ ಮುಕ್ತರೈಸೆ ಮುಖ್ಯ ಪ್ರಯೋ
ಜನಮೇ ಇದೆಂದು ಹರಿನಾಮ ಪೀಯೂಷ ಭೋ
ಜನಮೇ ನಿಜಾಹಾರವಾಗಿ ಸುಖಿಸುವರವರ ಭಾಗ್ಯದೇಳಿಗೆಯದೆಂತೋ ೫೩

ಗಳಲಗ್ನ ಚಿಲುಕಣ್ಣಿಯಂ ಕಳೆದು ಕರುವನಾ
ಕಳ ಮೊಲೆಯನೂಡಿಪನಿತರಲಿ ಬಿಡುಗೊಡದೆ ಕಳ
ವಳದಲಾತುರಗೊಂಬ ವತ್ಸನೋಲ್ ಭಗವದಂಘ್ರಿಯ ಕಾಣ್ಬ ತವಕದಿಂದೆ
ಚಳಕಚರಣನ್ಯಾಸದಿಂದೈದಿ ನಗರ ಪೊರ
ವಳಯದೊಳ್ ಚಾತುರಂಗವನಿಳಿಸಿ ಪಾರ್ಥ ಹೆ
ಜ್ಜಳದಿಂದೆ ಸಮಿತ ಜನದೊಡನೆ ತತ್ಪುರದ ಪೆರ್ವಾಗಿಲೆಡೆಗೈತಂದನು ೫೪

ದ್ವಾರದ ವಿಚಿತ್ರಮನ್ನೀಕ್ಷಿಸುತಲದು ಪುರ
ದ್ವಾರವೋ ಸಕಲ ಸೌಖ್ಯದ ಜನ್ಮಮಂದಿರ
ದ್ವಾರವೋ ನಿರುಪಮಾನಂದ ನಿಶ್ಶ್ರೇಯಸದ್ವಾರವೋ ಬಗೆಗೊಳಲ್ಕೆ
ದ್ವಾರರಕ್ಷಕರ ಭಾಗ್ಯಕ್ಕೆ ಸುರರಿದಿರೆ ಸ
ದ್ವಾರಾಂಗನೆಯರಿಗಪ್ಸರಿಯರೆಣೆಯಹರೆ ತ
ದ್ದ್ವಾರದ ಮಹಾಸೊಬಗಿನೀಪುರದ ಪೆಸರು ಸುದ್ವಾರಕಾಪುರವಾದುದು ೫೫

---

೫೨. 1. ಕೇ. 2. ಜಾಳಿಯಿಂ.

ಬೆಳವಿಗೆಯ ಸಂತಸದಲಾಪುರ ದ್ವಾರಮ
ನ್ನೊಳಪೊಕ್ಕು ರಾಜವೀಧಿಯಲ್ಲೈದಲಿಕ್ಕೆಲದಿ
ಪೊಳೆವ ಕನ್ನಡಿ ಕಲಶ ಸಹಿತದಿಂದೆಸೆವ ಶಶಿಕಾಂತಮಯ ಸೌಧಂಗಳೇ
ಇಳೆಯ ಸತ್ಕೀರ್ತಿಲತೆಗಳು ಪರ್ಬಿ ಗಗನಮಂ
ಬಳಸಿ ಪೂಮೊಗ್ಗೆಗಳನಾಂತವೆಂಬಂತೆ ಪೊಂ
ಗಳಶಂಗಳೆಸೆದಿರ್ದನವಮಳಾಭ್ರ ತುದಿಯನೇರಿದ ಸೂರ್ಯಬಿಂಬಗಳೆನೆ ೫೬

ಆ ಸೌಧದುದಿಗಳೊಳ್ ವಿಹರಿಸುವ ಮಂಜುಲ ಸು
ವಾಸಿನಿಯರಂಗ ದೀಧಿತಿ ಮಸಗಿ ವೀಧಿಯೊಳ್
ಸೂಸಿದುದು ತೇಜೋಂಬುಸಿಧಿಯೆನಿಸಿ ತನ್ನಯನವೆಳಗು ಮತ್ಸ್ಯಂಗ [1][ಳೆಸೆಯೆ][1]
ಭಾಸಿಸುವ ಮಣಿಭೂಷಣದ ಕಾಂತಿ ನವರತ್ನ
ರಾಸಿಯೆನಿಸಿರಲಿಂತು ಶೋಭಿಸುವ ಪಾಲ್ಗಡಲ
ನೀಸಿ ಬಹ ರಾಜಬಿಂಬಾನನದ ಫಲ್ಗುಣಂ ಬರುತಿರ್ದನತಿಭಕ್ತಿಯಿಂ ೫೭

ಬಡಬಾಗ್ನಿಯಿಂದುರಿದು ಕಳೆಯಳಿದವೆಂದು ಯಿಂ
ಗಡಲ ಮಣಿಗಳ ನಗುವ ನವರತ್ನರಾಶಿಯಂ
ಗಡಿಗಳಂ ಸತಿಪತೀ ಕಲಹಕಾರಿಗಳೆಂದು ಪಾರಿಜಾತವನು ಪಳಿವ
ಕಡುಚೆಲ್ವ ಪುಷ್ಪ ಹಸರಂಗಳಂ ಭೂಗತವ
ನೊಡೆಮುದು ಕುಬೇರನಿಧಿಯೆಂದೇಡಿಸುತ್ತ ಮುಂ
ಗಡೆಯುಲಿಸೆದಿಹ ಚಿನ್ನವರದ ಧನರಾಶಿಗಳ ನೋಡುತವು ನಡೆತಂದನು ೫೮

ಕುಂದಿರದ ಚೆಲ್ವ ಪಾರ್ಥನ ರೂಪುನೋಡಿ ಯುವ
ಸುಂದರಿಯರಿಂಗೆ ವಿರಹೋದ್ರೇಕಮೇಗೊಳಲ್
ಮುಂದುವರಿದನುರಾಗಮುಬ್ಬಿ ಪೊರಸೂಸಿ ಮುಸುಕಿದುದು ನಿಶ್ಚಯವೆಂಬೊಲು
ಸಂದಣಿಸಿ ನೋಡಲ್ಕೈತಂದ ಪುರಜನ ರಾಜ
ನಂದನರ ಕಟಕ ಮಕುಟಗಳ ಮಣಿಕಾಂತಿಚಯ
ಮೊಂದಾಗಿ ಕವಿದರ್ಜುನನ ರಕ್ತಕವಚಧರನೆನಿಸಿರ್ದುದತಿಶಯಮೆನೆ ೫೯

---

೫೭. 1. ಳುಲಿಯೆ.

ಇಂತು ಸಂದಣಿಸಿದಿಕ್ಕೆಲದ ಪುರಜನ ಜಾಲ
ಹಂತಿಯೊಳು ತಮತಮಗೆ ಭಯಭಕ್ತಿ ಭಾವಮು
ನ್ನಾಂತು ಕಾಣಿಕೆಯಿತ್ತು ಬೆರೆನವರ ತರುವವರ ಬರುವವರ ನೆನೆವವರನು
ನಿಂತು ನೋಡುತ ಮತ್ತೆ ಮುಂದೈದಿ ಕಂಡನು ಮು
ರಾಂತಕನ ಸದನ ತೇಜೋರೋಚಿ ವೀಚಿಗಳ್
ತೊಂತಿರುವ ಪಥದಲಿಡೆಯಾಡುವರ ಕೂಡುವರನಾಡುವರ ನೋಡುವರನು ೬೦

ಪದುಮನಾಭನ ಶರಣಪಾರ್ಥನಂ ನೋಡಲಾ
ಸದನಲಕ್ಷ್ಮಿಯು ಸಹಸ್ರಾಕ್ಷಿಗಳನಾಂತಳೆನ
ಲಿದಿರಲಿ ಗವಾಕ್ಷಂಗಳೆಸೆದಿರಲ್ ತದ್ರಮಾದರಹಾಸದಿಂ ತೋರುವ
ರದನ ಪಂಕ್ತಿಗಳಂತೆ ಮುಲಕುಗಳ್ ಮೆರೆಯೆ ಚಿ
ತ್ರದ ಲೋವೆ ತಳುಕುಗಳಲೊಂದಿಸಿದ ಮಣಿಗಳಿಂ
ದುದುರಿ ಭೂಲೋಟನೆಯಲಲಿವ ರತ್ನಕೆ ಸರಿಯೆ ಸುರರ ಚಿಂತಾಮಣಿಗಳು ೬೧

ಪಶದಷ್ಟಲಕ್ಷ್ಮಿಯರ ಮೋಗೆಲಸವಪರಿಮಿತ
ಷೊಸೆಯರಿಂದನುಗ್ರೈವ ಮನೆಗೆಲಸವುಪನಿಷ
ದ್ವಿಸಜಾಕ್ಷಿಯರ್ಗೈವ ಮೈಗೆಲಸ ಯೋಗಿಣಿಯರೆಸಗುತಿಹ ಪೊರೆಗೆಲಸವು
ಉಸುರಲಳವಲ್ಲದುನ್ನತಿಯ ಪುಸಿ ಸಂಸಾರ
ಬೆಸುಗೆಗೊಂಡಂತೆ ಜನಮನಕೆ ತೋರ್ವಡಿಸುತಿ
ರ್ಪ್ಪಸುರಾರಿಗರಿವಾದುದರ್ಜುನಾಗಮ ವಿಶ್ವಸಂಸಾರಿಯಹುದೈಸಲೆ ೬೨

ಅನಿತರೊಳ್ ಚರರು ಬಿನ್ನವಿಸಿದರ್ ಸುರರಾಜ
ತನಯನೈತಂದ ಶುಭವಾರ್ತೆಯಂ ನಸುನಗುತ
ದನುಜಾರಿ ಕೇಳ್ದರಿಯದಿರ್ದವನ ಮಾಳ್ಕೆಯಿಂ ಸರಲೀಲೆಯನ್ನಮಚಿ
ತನಗೆ ಮೊದಲೇಕೆ ಪೇಳಿದುದಿಲ್ಲವೆಂದು ಪರಿ
ಜನರನುರೆ ಗಜರಿ ಪ್ರದ್ಯುಮ್ನ ಕೃತವರ್ಮಾದಿ
ತನುಜಾತ ಮುಖ್ಯ ಸಾಮಂತರಂ ಕಳುಹಿದಂ ಪಾರ್ಥನನ್ನಿದಿರುಗೊಳಲು ೬೩

ಬಂದು ತಳ್ಕವಿಸಿಯುಪಚಾರ ವಂದನೆಗಳೊಳ್
ಸಂದು ಸಂತೋಷ ಸತ್ಸರಸ ಸಲ್ಲಾಪ ವಿಗ
ಲೊಂದಿಗೆಯ ಪರಿಜನರನುಳಿದು ಸಾಂಬಾದಿಗಳ ಪರಿಹಾಸಪರುಶವದೊಳು
ಮಂದಿರವನೊಳಪೊಕ್ಕು ಕಂಡಸಿದಿರಿಸಲಮೃತ
ಬಿಂದಿಗೆ ಪಿಪಾಸುವಿಗೆ ಭಕ್ಷ್ಯಮೆ ಬುಭುಕ್ಷುವಿಗೆ
ಸಂದಿಸಿದ ತೆರನಾಗೆ ರತ್ನವಿಷ್ಟರವಾಸ ವಾಸುದೇವಾಂಘ್ರಿಗಳನು ೬೪

ದೂರದಿಂ ಶ್ರವಣ ಮನನಂಗಳೊಳ್ ಸನ್ಮತಿಯ
ನೂರಿಯಂತರ್ಲಕ್ಷ್ಯನೆನಹು ಮಾತ್ರದಲಿ ಸಂ
ಸಾರಮಂ ನೂಕಿ ಮೋಕ್ಷಾಂಗನೆಗೆ ಕೈಸನ್ನೆಗೈವ ಸಲುಗೆಗಳಪ್ಪುದು
ಆರ ಭಜನೆಗಳಿಂದಲಾ ದಿವ್ಯ ಮೂರ್ತಿಯ
ನ್ನಾರೈದು ಚರ್ಮದೃಷ್ಟಿಗಳಿಂ ನಿರೀಕ್ಷಿಸಿ ವಿ
ಹಾರ ಸಲ್ಲಾಪವಳಿಕೆಗಳಾಂತ ಧನ್ಯರ ಪದಂಗಳನ್ನುಸುರಲಳವೆ ೬೫

ಅಂಡಿಸಿದ ಜನ್ಮಕರ್ಮಂಗಳಂ ಕಿತ್ತು ಭೂ
ಮಂಡಲದಲೀಡಾಡುವಂದದಿಂ ನಿಜತನುವ
ದಂಡದಂದದಿ ನೆಲಕೆ ಹರಹಿದಂ ಜವದೊಳುನ್ನತ ಬಾಹುಗಳನು ನೀಡಿ
ಗಂಡನಿಂಗೊರೆದೆನ್ನ ಭವವ ಪರಿಹರಿಪುದೆಂ
ದಂಡಲೆದು ಭೂಮಿಯುಂ ಬೇಡಿಕೊಂಬಂತಿರಲ್
ಪುಂಡರೀಕಾಕ್ಷ ಪುರುಷೋತ್ತಮ ಮಹಾತ್ಮ ಸಲಹೆಂದು ಸನ್ನುತಿಗೈವುತ ೬೬

ಕರಗಳಂ ಚಾಚಿ ಹಿಂಗಾಲ್ಗಳಂ ನಿಗುಚಿ ಭಾ
ಸುರ ಮಕುಟಮಣಿಗಳೀಡಾಡಲಿಮ್ಮೈಗಳಿಂ
ಬೊರಳಿ ಮಗುಳೆದ್ದು ವಂದಿಸುತಿಂತು ಶತನಮಸ್ಕಾರಂಗಳನ್ನೊಪ್ಪಿಸಿ
ಮರೆದು ತನುಭಾವಮಂ ಮತ್ತೆಚ್ಚರುತ ಕಣ್ಣೊ
ಲೊರೆವ ಸಂತಸಬಾಷ್ಪದಿಂದೆ ವೈನೆನೆದು ಶ್ರೀ
ಪರಿಪದಗಳಂ ನೇತ್ರಪುಷ್ಪಹೃತ್ಫಲಗಳಿಂದರ್ಚಿಸಿದನತಿಭಕ್ತಿಯಿಂ ೬೭

ಜಯ ಮಹೀಸಂರಕ್ಷ ಜಯ ಮಾಸಹಿತ ವಕ್ಷ
ಜಯ ಮಿತ್ರ ಶಶಿನೇತ್ರ ಜಯ ಮೀನವರ ಗಾತ್ರ
ಜಯ ಮುಕ್ತಹೃಚ್ಚಾರಿ ಜಯ ಮೂಲ ಮೂಲ ಹರಿ ಜಯ ಮೇಘವರ್ಣ ಶೌರೀ
ಜಯ ಮೈಥಿಲೀನಾಥ ಜಯ ಮೋಕ್ಷಫಲದಾತ
ಜಯ ಮೌನಿಜನಪೋಷ ಜಯ ಮಂಜುತರಭಾಷ
ಜಯ ಮಹದ್ವೈಭವಪ್ರದ ಸಚ್ಚಿದಾನಂದರೂಪ ಶಾಶ್ವತ ಮುಕುಂದಾ ೬೮

ಆಗ್ರಹಂಗಳ ನೂಕಿದಮಲಯೋಗಿಗಳ ನಯ
ನಾಗ್ರಮನ್ನೈದಿದೀಡಾಪಿಂಗಳಗಳು ನಾ
ಸಾಗ್ರದಿ ಸುಷುಮ್ನೆಯೊಡವೆರೆದ ತ್ರಿಕೂಟದೆಡಬಲ ಮಧ್ಯದೊಳಗೊಪ್ಪುವ
ಆ ಗ್ರಹಾಧೀಶಾಗ್ನಿ ವಿಧುಮಂಡಲ ತ್ರಯಗ
ಳಾಗ್ರವಹ ಕಳೆ ನಾದಬಿಂದು ಸಮರಸ ಪ್ರಣ
ವಾಗ್ರದೊಳ್ ದೀಪಿಸುವ ಚಿಜ್ಜ್ಯೋತಿ ಹರಿ ನಿನ್ನ ಪರಿಯ
ಸುರರರಿಯಲಳವೇ ೬೯

ಊಹೆಯಿಂ ಪ್ರಕೃತಿಯುಂ ಪಂಚಭೂತಂಗಳಂ
ರೂಹುಗೊಳಿಸುತಲದರಿನಿಂ ವಿಶ್ವಮಂ ಸೃಜಿಸಿ
ಹಾಹೆಗಳನೇಕಮನ್ನನುಗೈದು ತತ್ಕೃತ್ಯಕರ್ಮವಹ ಸೂತ್ರವಿಡಿದು
ಆಹಾರ ನಿದ್ರಾ ರತಿಗಳಾದಿಯಿಪ್ಪ ಸ
ನ್ನಾಹದಿಂ ಕೆಲವು ವಾಸರ ಕುಣಿಸಿ ಮಗುಳದಂ
ಸೋಹಿ ನಿಚ್ಚಳದಲೋರ್ವನೆ ನಿಲ್ವ ತಂತ್ರಿ ಚೇತನರೂಪ ರಕ್ಷಿಸುವುದು ೭೦

ವಿಶ್ವಕಲ್ಪಕ ಹೂಟಗಾರ ವಿಧಿ ನೀನಾಗಿ
ವಿಶ್ವನಟನೆಗಳಾಟಗಾರ ಹರಿ ನೀನಾಗಿ
ವಿಶ್ವಮಾರಣ ಮಾಟಗಾರ ಶಿವ ನೀನಾಗಿ ವಿಶ್ವಚೈತನ್ಯನಾಗಿ
ವಿಶ್ವವೆಳೆಗಳ್ಗೆ ಕೃಷಿಕರ್ತಾಬ್ಜಭವನಾಗಿ
ವಿಶ್ವರತಿ ವಿಟಗಾರ ವಿಷ್ಣುವುಂ ನೀನಾಗಿ
ವಿಶ್ವಸಮಿಧೆಯ ಹೋಮಗಾರ ಭವನಾಗಿಂತು ವಿಶ್ವಮಂ ಮೋಹಿಸಿದೆಲೇ ೭೧

ದೇವದೇವನೆ ರಕ್ಷಿಸೆಂದೆನುತ ಭಕ್ತಿವಿಗ
ಲೀವರಸೆಯಿಂ ನುತಿಪ ವಿಜಯನಂ ಪಿಡಿದೆತ್ತಿ
ಶ್ರೀವರಂ ತಳ್ಕವಿಸಿ ಗದ್ದುಗೆಯ ಪರಸಿನೊಳ್ ಕುಳ್ಳಿರಿಸಿ ಸರಸದಿಂದೆ
ಭಾವವ್ಯೆದುನತನದ ಕಲ್ಪನೆಯಸಂಗವಿಸಿ
ತೀವಿದತಿಪರಿಹಾಸಕಟಕಿಯಿಂದಾ ಸತ್ಯ
ಭಾಮೆಯರ ನೋಡಿ ನಸುನಗುತಲರ್ಜುನನ ತಾಂ ನುಡಿಸಿದಂ ಸಡಗರದೊಳು ೭೨

ಬಂದೆಯ್ಯೆ ಪಾರ್ಥ ಮಾರ್ಗಕೆ ಬುತ್ತಿಗೊಳಸೀ
ತಂದುದಿಲ್ಲಕಟ ಮತ್ತದರಿಂದೆ ಹಸಿದು ಬಲ
ಗುಂದಿ ಪಿರಿದಲಸಿ ಪೊರಳಿದೆ ಸಭಾವಲಯದೊಳ್ ಕಾಲ್ಮುರಿದ ಚೇಲಿಯಂತೆ
ನೊಂದುದೆಮ್ಮಯ ಮನವು ಮಾರ್ಗದೊಳೆ ಕೆಡೆದು ನೀ
ದಂದುಗಂಬಡದೆ ಬಹುಜನರಚ್ಚೆಯಲಿ ಕಣ್ಣ
ಮುಂದೆ ಬಿದ್ದುದೆ ನಮ್ಮಭಾಗ್ಯವ್ಯೆಸಲೆ ಸದಾಶಿವ ರಕ್ಷಿಸಿದನೆಂದನು ೭೩

ಬಲ್ಲೆವಾವಿನ್ನು ಬುತ್ತಿಯ ಕೊಳ ತರಲೆಮಗೆ
ಕಲ್ಲಿಗೋಲ್ಗಂಬಳಿಗಳನುಗೂಡಲಿಲ್ಲವಂ
ತಲ್ಲದಡೆ ಗೋವಳರ ಮೇಳಮಳವಡಲಿಲ್ಲ ತುರುಗಾಯ್ವುದರಿತುದಿಲ್ಲ
ಗೊಲ್ಲಪಾಲಿಂದೆ ಹಸಿವಂನೂಕಲಾವರಿತು
ದಿಲ್ಲ ಕಳವಿನ ಸರಣಿ ಸಾಹಿತ್ಯಮನ್ನಿಂತು
ಬಲ್ಲಮುಹಿಮುರಿಗಡುವೆ ಘಟಿಪುದಲ್ಲದೆ ಬಡವರಿಂಗೆಂತು ಬಹುದೆಂದನು ೭೪

ಭೂತಬಲಿಗೊದವಿಸಿದ ಕೂಳನಡಸಲ್ಕುದರ
ಘಾತ ಕಿರಿದೆವಗದರಿನಿಂದ ಲನುಗುಡದಸುರೆ
ಘಾತನಿಯ ರಕ್ತಮುಂ ಪೀರ್ದು ಸುಖಿಸುವಡೆವಗರೋಚಕವು ಭಾದಿಪುದಲೆ
ಪಾತಕ ಕುಚೇಲಸವಲಕ್ಕಿಯನ್ನೀಯನು ವಿ
ಜಾತಿ ವಿದುರನು ಪಾಲನೆರಯನೆವಗೆಣಿಸಲಿಂ
ನ್ನೇತರಿಂ ತೃಪ್ತಿಯಪ್ಪುದು ಭವದ್ದಿವ್ಯನಾಮಾಮೃತವ ಸವಿಯದಿರಲು ೭೫

ಅಡಸಿ ಬ್ರಹ್ಮಾಂಡ ಶತಗಳನುದರ ಕುಹರದೊಳ್
ಒಡಬಾಗ್ನಿ ರೂಪಿನಿಂದವು ಸಮುದ್ರೋದಕವ
ಕುಡಿದಡುಂ ಮತ್ತೆ ಸಚರಾಚರ ಪ್ರಾಣಿ ಬಹುಭೂತ ಸಂಘಾತಂಗಳ
ಒಡಲೊಳಾವಹಿಸಿ ಜಠರಾಗ್ನಿರೂಪಿಂದನಿಶ
ಕುಡಿವನ್ನಪಾನಗಳ್ ಸರಿದಡುಂ ನಿನ್ನಹಸಿ
ವಡಗಿರದೆ ಪಾಲ್ಬೆಣ್ಣೆಗಳವಿಗೆಳಸುವ ಮಹಿಮೆಯುದರಕಿದಿರಾರೆಂಡನು ೭೬

ಮಾರ್ಗದೊಳ್ ಕೆಡೆಯಲಾವಟವಿಯೊಳ್ ಪಳ್ಳಿಯಾ
ದೂರ್ಗಳಾವಾಸ[1]ಕುಂಜದ[1]ಶಯನವಿಲ್ಲ ಸಂ
ಸರ್ಗಮದು ನಿತ್ಯತೃಪ್ತನ ಸೇವೆಗಳಲಿ ನಮಗಾವ ಹಶುತೃಷ್ಣೆಯಿಲ್ಲ
ದುರ್ಗಮದ ಜಡ ಕರ್ಮಮಂ ನೂಕಿ ಹರಿಶರಣ
ವರ್ಗಮಂ ಭಜಿಸಲೆಳಸುವರ ಮನಮಂ ಕಡಿವ
ದುರ್ಗುಣದ ಮನುಜಾಖುಗಳ್ಗೆ ಚೀಲಿಗಳಾವು ತಮ್ಮ ನುಡಿ ಬಂಜೆಯಹುದೆ ೭೭

ಎಂದಡಾ ಹರಿ ನುಡಿದನಾಶ್ಚರ್ಯಮಂ ಕಂಡೆ
ವಿಂದಿನಲಿ ಬಕನ ಮೌನಧ್ಯಾನಮಹಿಮೆಯಂ
ಹಿಂದೆ ಗುರುಹಿರಿಯದಾಯಾದ್ಯರಂ ಕಾದಿ ಗೆಲಲಂಜಿ ಕೈತವಗಳಿಂದೆ
ಕೊಂದುದಂ ಮರೆದು ಕುಟಿಲದ ಭಕ್ತಿಭಾವದೊಳ್
ನಿಂದು ಡಾಂಭಿಕತೆಯಲಭಾವೇ ವಿರಕ್ತಿಯಂ
ಪೊಂದಿ ಮುಪ್ಪಡಸಿ ಪತಿಹಿತಳಾದ ಪುಂಶ್ಚಲಿಯನರರೆ ಸೋಜಿಗವೆಂದನು ೭೮

ನಿರುತ ಚೀಲಿಯ ವೃತ್ತಿಯನ್ನಾಂತು ಪೊಂಚಿತ
ಸ್ಕರತೆಯಿಂ ಗೊಲ್ಲಪಾಲ್ಗುಡಿದಡುಂ ಮಹದುದರ
ಭರಣಮಾಗದೆ ಪಾಂಡುನೃಪರಬಂಡಿಯ ಬೋವತನದಿಂದೆ ಹಿರಿಯರೆನಿಸಿ
ಪರಮಶುಚಿಗಳಲಿ ಕಲಹವ ಬೆಳಸಿ ಬಂಧುಗಳ
ನಿರಿಸಿದರು ಕೊಂಡೆಯದ ನಿಪುಣರಾವರೊ ಶಿವಾ
ನೆರೆ ಸೋಜಿಗದೆ ನುಡಿಯ ಕೇಳ್ದೆವಿಂದಿನೊಳೆಂದಳಾ ಸತ್ಯಭಾಮೆ ನಗುತ ೭೯

ನೊಲಿಯಸಿತ್ತವರಸಿರಿವರ ನೀತಿಶಾಸ್ತ್ರಗಳು
ಸುಲಭಮೆನಿಸದೆ ವತ್ಸಧೇನುವೃಷಭಾದಿಗಳ
ಕೊಲೆಗಳುಕದವರ ಹೃತ್ಕ್ಷೋಮಲತೆಗೆಣೆಯಹುದೆ ನೆರೆಯ ಸಂಸಾರಿಗಳನು
ಬಲುಹಿಸಿಂದಿರಿದವರ ಹೆಂಡಿರ್ಗಳಂ ತಂದು
ಕುಲಹೀನರೆನದವರ ಕೂಡುವರ ಶೀಲಮು
ನ್ನಳತೆಗೊಳಲಹುದೆ ಹಿರಿಯರ ನಡತೆ ಪಾಂಡವರ್ಗೆಂತು ಘಟಿಸುವುದೆಂದಳು ೮೦

ಈ ತೆರದ ಸತ್ಯಭಾಮಾ ಸರಸ ಸೂಕ್ತಿ ಮಧು
ರಾತಿಶಯ ಪರಿತುಷ್ಟಿಯಿಂದುಬ್ಬಿದಾನಂದ
ಚೇತೋ ವಿಲಾಸದಿಂ ನುಡಿದನೆಲೆ ಪಾರ್ಥ ಕೇಳ್ ಪರಿಹಾಸ ಯುದ್ಧದೊಳಗೆ
ಸೋತು ಪರಿಯಲು ಮಾರ್ಗಮಿಯದ ಲಜ್ಜಾ ನದಿಗೆ
ಸೇತುವಾದುದು ನಿನಗೆ ಸತ್ಯಳಸಹಾಯಮಿ
ನ್ನೇತಕಂಜುವೆ ಪರಿಯದಿರು ನಿನಗೆ ಸತ್ಯಾವಲಂಬವೇ ಬಲವೆಂದನು ೮೧

ಜೀಯ ಬಿನ್ನಹ ಸತ್ಯರಾಧಾರ ಮಾವರ
ಶ್ರೇಯಸಪ್ರದ ನಿನ್ನನೊಲಿಸುವಡೆ ಸತ್ಯದ ಸ
ಹಾಯಮಲ್ಲದೆ ಮೆರೆಯದೆಂಬುದದು ವೇದಸಮ್ಮತಿಯು ನಿಶ್ಚಯಮೈಸಲೇ
ಕಾಯಬೇಕೆಂದು ಪುನರಂಘ್ರಿಗೆರಗಿದಡೆ ನಾ
ರಾಯಣಂ ಸತ್ಕರಿಸಿ ನಿಮ್ಮ ಸರಿಸಕ್ಕೆ ಸಲ್ವ
ರಾಯರಿದ್ದಪರೆ ಮೂಲೋಕದೊಳ್ ವಿಯ ವಿತರಣ ಗುಣವಲೆಂದು ನಗುತ ೮೨

ಭೂಪಧರ್ಮಜ ಕುಶಲನೇ ಭೀಮಸೇನ ಮಾ
ದ್ರೀಪುತ್ರರುಗಳು ಸುಕ್ಷೇಮಿಗಳೆ ಕುಂತಿಯರ್
ದ್ರೌಪದಾದ್ಯನಿಬರುಂ ಸಸಿನರೇ ನೃಪತಿ ಗಾಂಧಾರಿಯರ್ಸಂತಮಿಹರೆ
ವ್ಯಾಪಿಸಿದ ಸಂಸಾರ ತೊಡಕಿನಿಂ ವಾರ್ಧಕ್ಯ
ತಾಪತ್ರಯಂಗಳಿಂ ಹಸ್ತಿನಾಪುರಿಗಾವು
ಭೂಪದರ್ಶನಕ್ಕೈದದಾದೆವಿಂದಿಗೆ ನಿನ್ನ ಬರವು ದುರ್ಲಭಮೆಂದವನು ೮೩

ಬಿಡೆದು ನಿಮಗಕಟ ಸಂಸಾರಮಡರಲೆಗಂಜಿ
ಮಡುಹಿನೊಳ್ ಕೆಡೆದಡುಂ ತಲೆ ಬೆನ್ನನಿಡಿದಡುಂ
ಒಡಲ ವಂಚಿಸಿ ರಸಾತಳಕಿಳಿದಡುಂ ಕೊರಳ ಕರುಳುರುಳಿನಿಂ ಬಿಗಿದಡುಂ
ಪೊಡವಿಯನ್ನಳಿದಡುಂ ಪೆತ್ತವಳ ಕಡಿದಡುಂ
ಮಡದಿಸಹ ವನವಾಸಗೈದಡುಂ ವಿಷದ ಪಾ
ಲ್ಗುಡಿದಡುಂ ವಿಶ್ವಸಂಸಾರ ಬೆಂಬಿಡದಾದುದೇಗೈವಿರಕಟೆಂದನು ೮೪

ದೇವ ಕೇಳ್ ನಿಮ್ಮ ಮಾಯಾರಚನೆ ಭವದಂಘ್ರಿ
ಸೇವಕರಲೊಪ್ಪುವುದೆ ತನುರಹಿತ ಶುದ್ಧಾತ್ಮ
ಗಾವಹಿಸುವುದೆ ಜರಾಕಿರುಕುಳವು ಸಂಸಾರ ಬಂಧ ನಿರ್ಲೇಪಗಿಹುದೆ
ನಾವರಿವೆವದರ ಮರ್ಮವನದಂತಿರಲಿ ಸ
ತ್ಪಾವನ ಚರಿತ್ರ ಭವದೀಯ ಸುಕಟಾಕ್ಷದಿಂ
ದಾವಗಂ ಕ್ಷೇಮಿಗಳ್ ಧರ್ಮನೃಪಭೀಮ ಯಮಳಾದ್ಯಖಿಲಬಂಧುಜನರು ೮೫

ಇಂತಿರ್ವರುಂ ಕುಶಲವಾರ್ತಾನುರಾಗಮ
ನ್ನಾಂತಿರಲ್ಕದ ನೋಡಿಯಪರ ದಿಕ್ಸುಂದರಿಯು
ತಾಂ ತಳೆದಳನುರಾಗಮನ್ನೆನಿಸಲೆಸೆವ ಕೆಂಮುಗಿಲಂಬರವ ಮುಸುಕಲು
ತೊಂತಿರ್ದ ಮಾರ್ಗಧಾವತಿಯಿಂದೆ ಕದಡಿರ್ಪ
ಕುಂತೀಸುತನ ನಯನಭಾವಮಂ ತೋರ್ಪಡಿಸು
ವಂತೆ ಕಮಲಗಳಲಸಿದವು ನೋಡಿ ನಗುವಂತೆ ನೈದಿಲೆಗಳೇರ್ಗೊಂಡವು ೮೬

ಪತಿಯನಗಲುವ ವಿರಹದಿಂ ದಿವಾಂಗನೆಗೆ ಲೋ
ಹಿತನೇತ್ರಮಾದವೆನೆ ತಂನರಸವೆಳಗಿನು
ನ್ನತಿಯ ಮುರಿಯಲು ಮುಳಿದ ರಾತ್ರಿ ಮಾನಿನಿಯ ಕೆಂಪೇರ್ದ ಕೋಪಾಕ್ಷಿಯೆನಲು
ಜತೆವೆರಸಿವ ವಿಟಜಾರೆಯರ ಮನೋರಾಗೆದು
ನ್ನತಿ ಪುಸುಕಿ ತೋರ್ವುದೆನೆ ವೀರಪ್ರತಾಪ ರತಿ
ಪತಿಯ ವಿಜಯಧ್ವಜದ ರಕ್ತಪಟಮೆಂಬಂತೆ ಸಂಜೆಗೆಂಪಡರಿರ್ದುದು ೮೭

ಮೆರೆವ ಕಾಷಾಯಾಂಬರವನುಟ್ಟು ನಸುಗೆಂಪು
ವೆರೆದ ತಾರಾಕ್ಷಮಾಲೆಯನಾಂತು ಸಮ್ಮಿಳಿತ
ವರುಣಕಾಮೇಘ ಕೆಂಜಡೆಗಳಂ ವಹಿಸಿ ಸೈವರಿವ ಹಂಸೆಗಳನೆಣಿಸೆ
ಧರಿಸಿದ ವಿಭೂತಿಯೆನಿಸಲ್ ನಗುವ ನೈದಿಲೆಗ
ಳರಳು ಪಾತ್ರೆಯಪಿಡಿದು ರಾತ್ರಿಸತಿಯೋಗಿಣಿಯು
ಹರನ ಬಲಗೊಂಬಳ್ ಪ್ರದೋಷದೊಳ್ ಪತಿರುಜೆಯ
ಪರಿಯೆನುತ್ತೆಂಬೊಲೆಸೆಯೆ ೮೮

ಶರಧಿಜೆಯ ತೆರದೊಳ್ ಗೃಹೀತ ಪೀತಾಂಬರೆ ಸು
ತರುಣಿಯೋಲ್ ಕುಂಕುಮಾಂಕಿತ ಪಯೋಧರೆ ಜಾರ
ತರಳಾಕ್ಷಿಯೋಲ್ ಪಲ್ಲವಪ್ರಚಯ ರಾಗಸಂಗತೆ ಪರಿವ್ರಾಜಿಕೆಯೆನೆ
ಅರುಣಾಂಬರಾವೃತೆ ಸುವಾಸಿನಿಯರಂತೆ ವಿ
ಸ್ಫುರಿತ ನಕ್ಷತ್ರ ಹಾರಾನ್ವಿತೆ ಸುಪದ್ಮಿನಿಯ
ತೆರದಿ ಲಸದನುರಾಗಹಂಸ ಸಂಗತೆ ಪ್ರತೀಚೀಕಾಂತೆ ರಂಜಿಸಿದಳು ೮೯

ಕಮಲಿನೀವದನ ಮಲಿನೀಭೂತಮಾಗುತಿರೆ
ಕಮಲಜಾಂಡಕಟಾಹಮಪ್ರಕಟಮಾಗುತಿರೆ
ಕಮಲಗತಬಂಭರ ಕುಟುಂಬಿನೀ ಕಂಠರವ ರವಳಿಯೆಳೆದಾಗುತಿರಲು
ಕಮಲಾಕ್ಷಿಯರ ಮನಸ ಮನಸಿಜಂ ಚುಚ್ಚುತಿರೆ
ಕಮಲಾಪ್ತಬಿಂಬಮುಪು ಕೆಂಚೇರ್ದು ಪಡುಗಡೆಯ
ಕಮಲನಿಧಿತಲ್ಪಲಂ ಸಾರ್ದು ತೋರ್ದುದು
ಲೋಕಕಮಲತ್ವಮಣಗಿ ಬರಲು ೯೦

ವಿಗಡ ಮಂದೇಹ ರುಧಿರದಲದ್ದ ರಥ ಚಕ್ರ
ಸೊಗಸಿನಿಂ ದಿತಿಸುತರ ಗುಂಜಿದಂಡೆಯು ತೆರದಿ
ಗಗನ ಗಂಗೆಯ ವಿಕಚ ಕೆಂಗಮಲದಂದದಿಂ ಪಶ್ಚಿಮಾಂಗನೆಯ ಕರದ
ಒಗುಮಿಗೆಯ ಕೆಂಬವಳ ಕೈಗಟ್ಟನಂದದಿಂ
ಮುಗಿಲೆಂಬ ಕರಿಯ ಪಕ್ಕಕೆ ರನ್ನಘಂಟೆಯಂ
ಬಿಗಿದಿರ್ಪರೆಂಬಿನಂ ಪಶ್ಚಿಮದ ರವಿಬಿಂಬ ತೋರ್ದುದರುಣಾಭಮಾಗಿ ೯೧

ವಾರುಣೀ ವಾರಾಂಗನಾ ರತ್ನಕುಂಡಲವೊ
ಚಾರುಗಗನಾಶೋಕ ತರುಕುಸುಮಗುಚ್ಛವೊ ನ
ಭೋ ರಮಣಿಯಳ ರತ್ನಮುಕುರವೋ ವರುಣನೃಪ ರಕ್ತಾತಪತ್ರದಿರವೋ
ವಾರಿಧಿಯ ರತ್ನಕಿರಣಾಮೃತವೊ ಮತ್ತದರ
ತೀರವಿದ್ರುಮಗೆಂಚಿನತಿಶಯವೊ ಪೇಳೆನಲ್
ನೀರೇಜ ಮಿತ್ರಮಂಡಲಮೆಸೆದುದರುಣಾಭದಿಂ ಚರಮಗಿರಿತಟದೊಳು ೯೩

ಅಂಜನಾಹ್ವಯ ದಿಕ್ಕರಟಿ ಕುಂಭರತ್ನಮಿದು
ರಂಜಿಪಸ್ತಾದ್ರಿ ಗೋಪುರದ ಮಣಿಕಲಶಮಿದು
ಸಂಜೆವೆಣ್ಣಗೆ ಸೂಡ್ದ ಸೀಮಂತರತ್ನಮಿದು ವರುಣಾರ್ಚನೆಯ ಸೊಬಗಿನ
ಮಂಜುಲದ ತಾಮ್ರ ಶ್ರೀ ಚಕ್ರಮಿದು ಪಡುಗಡಲ
ಮಂಜಿನೊಳ್ ತಲೆದೋರ್ವ ಬಡಬಾಗ್ನಿಯಿದು ದಿಶಾ
ಕಂಜಮುಖಿಯಳ ವೃತ್ತ ಸಿಂಧೂರ ತಿಲಕಮೆನಲಿನಬಿಂಬ ತೋರ್ವಡೆದುದು ೯೪

ಸಲ್ಲಲಿತ ರತಿರಸ ಕ್ರೀಡಾಭಿಲಾಷೆಯಿಂ
ದುಲ್ಲಾಸ ಹೃದಯಳಾಗಿರ್ದಡುಂ ಬಾಹ್ಯದೊಳ್
ಮೆಲ್ಲಮೆಲ್ಲನೆ ನಾಚುತಂ ಕೇಳಿಕಾಗೃಹವಸೇರ್ವ ನವಸುದತಿಯಂತೆ
ಬಲ್ಲಿದ ದಿನೇಶನಸ್ತಮಿಸುವುದೆ ಯಾಮಿನಿಗ
ದುಲ್ಲಾಸ ಕಾಲಮಹುದಾದಡುಂ ರವಿಕರಗ
ಳಿಲ್ಲದೆಡೆಗಳಲುಬ್ಬುತುಬ್ಬುತೇರ್ದುದು ಕತ್ತಲೆಯು ಮದನನಂ ಜನಿಸುತ ೯೫

ಪಾಕಾರಿ ದಿಗ್ವಧೂಕುಚಕಾಂತಿ ಮೇಚಕವೊ
ಕೋಕ ಹೃದ್ವಿರಹಾಗ್ನಿಗತ ಧೂಮ ಸಂಕುಲವೊ
ಲೋಕಮೋಹನ ಕರದ ಮದನಸಿದ್ಧಾಂಜನವೊ ವಿಕಚ ನೀಲೋತ್ಪಲಗಳ
ಪ್ರಾಕಟದ ರುಚಿರವೋ ಗಗನವೆಣ್ಣ ಳವಟ್ಟ
ಶ್ರೀಕರದ ದಿವ್ಯ ನೀಲಾಂಬರವೊ ಮುಳಿಸಿಂ ದಿ
ವಾಕರನ ತಡೆವ ರಕ್ಕಸರ ಮೈಗರಿದೊ ಪೇಳೆನೆ ತಿಮಿರಮಮರಿರ್ದುದು ೯೬

ಕಾಂಡಋಷಿ ಸಂಖ್ಯಾತನಸ್ತಮಿಸಲುಲ್ಲಸ
ತ್ಕಾಂಡ ಜಾತಾಳಿ ಮುಕುಳಿತಮಾಗಲರಿದಿದೇ
ಕಾಂಡಮಸ್ಮದ್ದ್ವಿಜಯುಕೆಂದಂಗಜಂ ವಿಕಚ ನೀಲೋತ್ಪಲಂಗಳೆಂಬ
ಕಾಂಡಜಾತವನುಗಿದು ವಿರಹಾಂಗನಾ ಜನ ಸು
ಕಾಂಡದೊಳ್ ಕರೆದನೆನಿಸಿರಲಂಧಕಾರ ಪ್ರ
ಕಾಂಡದಿಂ ಮುಸುಕಿರ್ದುದಭಿಸಾರಿಕಾಲಲನೆಯರಿಗದೃಶ್ಯಾಂಜನವೆನೆ ೯೬

ಮಂಗಳ ಪತಂಗ ಹಸ್ತಂಗಳಂ ಗೆಲ್ದು ಲೋ
ಕಂಗಳಳುಕಿಸಿ ಜನರ ಕಂಗಳಪಹರಿಸಿ ಕಮ
ಲಂಗಳಂ ಸವಟಿ ತಿಮಿರಂಗಳತಿಜವದಿ ಭುವನಂಗಳಂ ಮುಸುಕಿರಲ್ಕೆ
ಹೆಂಗಳಂ ಮದನಂ ಶರಂಗಳನ್ನುಗಿದು ಮ
ರ್ಮಂಗಳರಿದಿಡಲು ವಿರಹಂಗಳೇರ್ಗೊಂಡು ಸದ
ನಂಗಳನ್ನುಳಿದು ವಿಟರಂಗಳಂಗಳ ಸಾರ್ವರಂಗನಾಳಿಯರಂಜದೆ ೯೭

ಸರಿಸಿಜಾಸ್ತ್ರರನು ದಿನಾಧಿಪನಸ್ತದೊಳ್ ವಿರಹಿ
ಮರಣಹೋಮವ ಗೈವೆನೆಂದು ಸಂಪುಲ್ಲ ತಾ
ಮರಸಾಗ್ನಿಕುಂಡದೊಳ್ ಕಿಂಜಲ್ಕಹುತಭುಗಾಧಾನಮಂ ಮಾಡಿ ಮತ್ತೆ
ಒರೆವ ಮಕರಂದಾಜ್ಯಮನ್ನೆರೆದು ವಿಗಹ ಸು
ಸ್ವರಮಂತ್ರದಿಂದೆ ಭೃಂಗಾಹುತಿಯನೀಯಲಾ
ವರಯಜ್ಞ ಧೂಮ ಮುಸುಕಿದುದಾಗಬೇಕೆನಲ್ ಕತ್ತಲೆ ವಿಮೋಹಿಸಿದುದು ೯೮

ವಕ್ರ ಮಂದೇಹ ದಾನವ ದಾನ ಮತ್ತೇಭ
ಚಕ್ರಮಂ ರವಿಮೃಗಾಧಿಪನೆರಗಿ ಸೀಳ್ದುರು ಪ
ರಾಕ್ರಮದಲಾ ಕುಂಭಿಕುಂಭ ಮುಕ್ತಾಫಲಂಗಳ ನಭಕೆ ಹರಹಿದನೆನೆ
ಶಕ್ರನೀಲಾಭ ನಿಬಿಡಾಂಧಕಾರೋನ್ನತದ
ನಕ್ರಾಕರೋನ್ಮಜ್ಜದಖಿಲಾಬ್ಧಿ ಮೇಖಲಾ
ಚಕ್ರ ಸಂಕ್ಷೋಭರಾಜಿತ ಬುದ್ಬುದಂಗಳೆನಲುಡುವಿತತಿಯೆಸದಿರ್ದುದು ೯೯

ಅಭ್ರಮಾತಂಗ ಹಸ್ತೋಚ್ಚಲತ್ಸುರ ನದೀ
ಶುಭ್ರಕೀಲಾಲ ಕಣನಿಚಯಮೋ ಗಗನ ತಲ
ದಿ ಭ್ರಮರ ಕಚ ಸುರಾಂಗನೆಯರಾ ದ್ವಿಜರಾಜನೈತಪ್ಪ ಮಾರ್ಗಗಳಲಿ
ವಿಭ್ರಮಾಸ್ಪದಮಾಗಿ ಬರೆದ ರಂಗಗಳೊ ನಟ
ದಭ್ರಕೇಶನ ಜಟಾಜೂಟದೊಳ್ ಸಂತತ ಪ
ರಿಭ್ರಮದ್ಗಂಗಾಚಲತ್ಕಣಗಳೆಂಬಂತೆ ತಾರಕಾಗಣಮೆಸೆದುದು ೧೦೦

ಪತಿ ಜಗದ್ವಿಜಯಕೆನೆ ಪೊರಮಡುವ ಸಮಯದೊಳ್
ರತಿದೇವಿ ಮಂಗಳ ಸುಲಾಜೆಯನ್ನಂಜಲಿಯೊ.
ಳತಿಭಕ್ತಿಯಿಂದೆ ಸೂಸಿದಳೆನಲ್ ರವಿಯಸ್ತಗಿರಿಗೈದಲಭ್ರಚರರ
ಸತಿಯರುರುಮೋಹದಿಂ ಮಲ್ಲಿಕಾ ಕುಸುಮ ಸಂ
ತತಿಯ ನೆರೆ ಸೂಸಿ ಪೂಜಿಸಿದರೆನೆ ನಕ್ಷತ್ರ
ವಿತತಿ ಚೆಲುವಾದುದಂಬರ ಸರಿದ್ವರ ಮೌಕ್ತಿಕಾಳಿಯೆನಲತಿಶಯದೊಳು ೧೦೧

ಶತಪತ್ರ ಮಿತ್ರ ಮಂಡಲಮೆ ಪಡುಗಡಲಿನೊಳ್
ಪತನಮಾಗಲ್ಕೆ ಸಂಕ್ಷೋಭದಿಂದೂರ್ಧ್ವ ಕು
ತ್ಥಿತಮಾದ ವಾರಿ ಬಿಂದುಗಳೆನಲ್ ಪುಷ್ಕರಾಂತರ್ವೇಗಗಮನದಿಂದೆ
ಅತಿಧಾವತಿಯನಾಂತ ರವಿರಥಾಶ್ವಾಸ್ಯ ನಿ
ರ್ಗತ ಫೇನ ಕಣಿಕಂಗಳೆನಲಭ್ರಸುರ ದೀನ
ಗತ ಕುಮುದ ಕಾನನಮೆಸಲ್ ವಿರಾಜಿಸಿದವಂಬರತಲದಿ ತಾರಕಿಗಳು ೧೦೨

ಹರಿದಶ್ವಸಸ್ತಮಯ ಸಮಯದೊಳ್ ತಿಮಿರಚಯ
ಹರಿತಂದು ಭುವನಮಂ ವ್ಯಾಪಿಸಲ್ ಕುಮುದಿನಿಗೆ
ಹರಿಣಾಂಕದಯಿತನಾಗಮನವಾರ್ತೆಯನರುಹಲೈತಂದ ಸಖಿಯರೆನಲು
ಹರಿಸೀಲ ರುಚಿರ ಗಂಧಾಂಧಸಿಕುರುಂಬಗಳ್
ಹರಿಯುರಸಿ ಸದನಮನ್ನುಳಿದುತ್ಪಲಗಳೊಳ್ ವಿ
ಹರಿಸುತಿದ್ದವು ಕುಸುಮ ರಸಪಾನ ಸಂಭ್ರಮದಲುಬ್ಬಿ ಝೇಂಕಾರ ಮಿಗಲು ೧೦೩

ಬಿಸಜಾಪ್ತಬಿಂಬನಸ್ತಮಿಸಲತಿ ವಿರಹದಿಂ
ದಸನುಸಂತಪ್ತಳಾಗಿರುವ ಪದ್ಮಿನಿಯ ಕಂ
ಡೆಸೆವ ಕಾರುಣ್ಯದಿಂದಂತರಂಗದಲಾಕೆಯಾಸರಿನ ಸಂಕಟವನು
ಬೆಸಗೊಂಬ ಪ್ರಿಯಸಖೀ ಜನರ ಮೃದುನುಡಿಗಳೆನೆ
ರಸಪಾನಲೋಭ ಸಂಜಾತ ಬಂಧನ ತಾವು
ರಸ ಗರ್ಭನಿರ್ಭರಾರಾವ ಮಧುಪಾವಳಿಗಳೊಪ್ಪಿರ್ದವಾ ಸಮಯದಿ ೧೦೪

ನಿಜಕಾಂತನಭ್ಯುದಯಮಂ ಬಯಸಿ ಚಾರು ನೀ
ರಜ ಲತಾಕಾಂತೆ ವೈರಾಗ್ಯದಿಂದೆಸೆವ ಪಂ
ಕಜ ತಂತುಯಜ್ಞೋಪವೀತದಿಂ ಭ್ರಮರಾಕ್ಷಮಾಲೆಯಂ ಧರಿಸಿ ಮತ್ತೆ
ಅಜಸುರಾರ್ಚಿತ ಚರಣ ಕಂಜನಂ ಸಿತ ಗರು
ದ್ವಿಜ ವಳಕ್ಷಾಂಬರವನುಟ್ಟು ಜಲಮಧ್ಯದೊಳ್
ಭಜಿಸುವಳ್ ಪದ್ಮಕೋಶಕ ಕಮಂಡಲುವಿಡಿದು ವೈರಾಗ್ಯದಿಂದೆನಿಸಿರೆ ೧೦೫

ಕೋಕನದಮಿತ್ರನಸ್ತಮಿಸಲತಿ ವಿರಹದು
ದ್ರೇಕದಿಂ ತಪ್ತನೀರಜ ಲತಾನಾರಿ ನಾ
ಳೀಕಾಂತರಸ್ಥಿತ ಷಡಂಘ್ರಿ ದೀರ್ಘೋಚ್ಛ್ವಾಸದಿಂ ನರಳುತಿರಲು ನೋಡಿ
ಲೋಕಬಾಂಧವನಿಗಿದನರುಹಬೇಕೆಂದು ನಿಜ
ಶೋಕಮಂ ಮರೆದು ನಿರ್ಮಲಪುರುಷರಂದದಿಂ
ಕೋಕಗಳ್ ಪರಿವೃತಿರ್ದವು ಭುವಿಯಲುತ್ತಮರ್ನಿಜಸುಖಕೆ
ಮೈಗೊಡುವರೆ ೧೦೬

ಕರಸಹಸ್ರಂ ಮೇರುಮರೆಗೈದುತಿರಲು ತ
ತ್ಕಿರಣಮೊಂದೊಂದಾಗಿ ಸರಿವುತಿರಲದ ನೋಡು
ತರವಿಂದಿನೀಲತಾ ತರುಣಿ ಪಂಕಜಹಸ್ತಕೆರಗಿರುವ ಪತ್ರಮೆಂಬ
ಬೆರಳ ಮುದುಡುತ್ತಲೊಂದೆರಡು ಮೂರೆಂದೆಣಿಸಿ
ಪರಿಗಣಿಸುತಿಹಳೆಂಬ ತೆರನ ತೋರ್ವಡಿಸಿ ಪಂ
ಕರುಹದಳಗಳ್ ರವಿಯ ಚರಮಕಾಲದಿ ಮುದುಡಿ
ಬರುತಿರ್ದವತಿಶಯಮೆನೆ ೧೦೭

ಅಮರಬನದೊಳ್ ಸಂಚರತ್ಕೌಶಿಕಾನ್ವಿತದಿ
ಯಮಿಗಳೊಳ್ ತಾರಕಾಲಂಕೃತದಿ ವೀರಭೂ
ರಮಣ ಸೇನೆಯ ತೆರದಿ ಜಿತಸಮುಸ್ತ್ರಾಶಾ ವಿರಾಜಿತದಿ ಶೀತಕರನ
ಸಮವೆನಲ್ ನೀಲಾಂಬರಾವೃತದಿ ಗಗನಪಥ
ದಮರಿಕೆಯ ತೆರದಿ ಖದ್ಯೋತಸಂಯುತದಿ ನಿರು
ಪಮ ನಿಗಮವಂತೆ ಪರಿದೂಷಿತ ದಿಗಂಬರದಿ ನಿಶಿಯು ಪರಿಶೋಭಿಸಿದುದು ೧೦೮

ಕುವಲಯಾರಿಗೆ ಜಗದ್ಬಂಧುತ್ವಮಿಹುದೆ ಗುರು
ಕವಿಬುಧೋನ್ನತಿಗೆಡುಕ ಸನ್ಮಾರ್ಗವರ್ತಿಯೆ ನಿ
ಸುವನೆ ಸುದ್ವಿಜರಾಜ ತೇಜೋಪಹಾರಿಯವ ವಿಷ್ಣುಪದ ಸೇವಿಯಹನೆ
ಅವನಿಯೊಳ್ ಕೌಶಿಕದ್ವೇಷಿ ಸುರಸೇವ್ಯನಾ
ದವನೆ ಸಂತಾಪಕಾರಿಯು ಮಿತ್ರನಪ್ಪನೇ
ವಿವರಿಸಲ್ ಪಂಕಜಾತರ ನುಡಿಗಳೆಂದು ನಗುತಿರ್ದವಾ ಕೈರವಗಳು ೧೦೯

ತಾರಾನ್ವಿತದಿ ವಾಲಿಯನ್ನಮರ ಮಂತ್ರಿಯಂ
ಸಾರಿದ ವಿರಕ್ತತ್ವದಿಂದೆ ರಣಭೂಮಿಯತಿ
ಧೀರರಂ ಪತ್ರಾನ್ವಿತರ ಕಲಕಲಗಳಿಂದೆ ವನಸಭಾವಲಯಗಳನು
ಭೂರಿ ನೀಲಾಭದಿಂ ಮೇಘ ವಿಷ್ಣುಗಳಂ ವಿ
ಚಾರಿಸಲ್ ಭೀಕರವ ಬಲಿದು ರಕ್ಕಸರ ಪರಿ
ವಾರವಾ ಭೂತಗಣಗಳ ಪೋಲ್ದು ಸಂಧ್ಯಾಂತ ಜಪಕಾಲಮೆಸೆದಿರ್ದುದು ೧೧೦

ಪರಿಕಿಸಲ್ ನಕ್ಷತ್ರ ನಿಬಿಡಮಾಲೆಯನಾಂತು
ಮೆರೆದಪ್ಪುದು ಗಗನಮಂಡಲಮೆಂಬ ವಾಸಿಯಂ
ಧರಣಿಯುಂ ಧರಿಸಿದಳ್ ಚುಕ್ಕಿ ಮಾಲೆಯನೆನಲ್ ಸದನಪ್ರದೀಪಂಗಳು
ಪರಿಶೋಭಿಸಲು ದೈವಬಲಮೊದಗಲೈಶ್ವರ್ಯ
ಗರಿಗೂಡುವಂದದಿಂ ಗೋರಾಜಿಗಳ್ ಚತು
ಸ್ಸರಣಿಯಿಂ ಬರುತಿರ್ದವಾಗ ಸಾಯಾಹ್ನದೊಳ್ ಪಟು ತೀವ್ರಗತಿಗಳಿಂದೆ ೧೧೧

ಸಲಿದು ಭೂತಳದಾಟವುಂ ನೋಡಿ ಪಾತಾಳ
ಬಿಲವನೊಳಬೊಗುವಾದಿ ಶೇಷನ ಶಿರೋರತ್ನ
ಚೆಲುವೆನಲ್ ಮೆಲ್ಲಮೆಲ್ಲನೆ ಸರಿವುತರ್ಥ ಕಾಲ್ಬೆಂಬಗಳ ಕಾಣ್ಬಡಿಸುತ
ಬಲಿದ ಸಂಧ್ಯಾನಿಯಮವಾಂತ ಭೂಸುರರರ್ಘ್ಯ
ಜಲಬಾಣದಿಂ ರಕ್ಕಸರನಿರಿವುತವು ದುಷ್ಟ
ಖಲರ ಸಿರಿಯುಂದದಿಂ ನೋಡನೋಡಲು ಸರಿದ ಭಾನು ಮಣಿಸಾನು'ಮರೆಗೆ' ೧೧೨

ಪರಿಪರಿಯುಲರಚುತಿಹ ಖಗಗಳಿಂ ಮೃಗಗಳಿಂ
ಮರಳಿ ಮನೆಗೈತಪ್ಪ ತುರುಗಳಿಂ ಕರುಗಳಿಂ
ಮರುಗುತಂ ಮುಂಬರಿವ ಕೊಂಚೆಯಿಂದಂಚೆಯಿಂ ನಿಜಮಂದಿರಂಗಳಿಂದೆ
ಪೊರಪಡುವ ತಸ್ಕರಾನೀಕದಿಂ ಘೂಕದಿಂ
ಹೆರೆ ಹಿಗ್ಗುವಸುರ ಸಕ್ರೂರರಿಂ ಜಾರರಿಂ
ಮೆರೆವ ಸಾಯಾಹ್ನಚಿಹ್ನಂಗಳಿಂ ಕಂಗಳಿಂಗರಿದೆನಿಸಿ ತೋರ್ದುದಂದು ೧೧೩

ಈತೆರದಿ ವಾಸರಾಂತವು ಘಟಿಸಲುರುಮಣಿ
ಜ್ಯೋತಿಗಳು ಬೆಳಗಿದವು ಹರಿಸಭಾಂತರದಿ ಪರ
ಮಾತುಮಪ್ರತಿಬಿಂಬವೆನಿಸಿ ಜೀವಾತುಮರನೇಕರೆನೆ ತೋರುವಂತೆ
ಪ್ರೀತಿಯಿಂದರ್ಜುನಸಮೇತ ಸಂಧ್ಯಾವಂದ
ನಾತಿಶಯದಿಂ ಪೊರೆದ ಬಳಿಕ ಷಡ್ರಸಗಳಿಂ
ಮಾತೆಯುರ್ಬಡಿಸಲಾರೋಗಣೆಯ ಮಾಡಿ ಕರ್ಪೂರ ವೀಳ್ಯಮುಂ ಸವಿದರು ೧೧೪

ಈ ಪರಿಯ ಭೋಜನಾನಂತರದಿ ಸರಸಸ
ಲ್ಲಾಪ ಮಿಗಲಂತರಂಗವ ಗೃಹವನುಳಿದು ಬಳಿ
ಕಾ ಪಾರ್ಥಸಹಿತಲೇಕಸ್ಥಾನದೊಳಗೆ ನಿದ್ರಾಂಗನೆಯ ರತಿಯನಾಂತು
ಶ್ರೀಪರಮ ಶೇಷಾದ್ರಿ ವೆಂಕಟೇಶ್ವರದೇವ
ರೂಪ ಕೌಂಡಿನ್ಯಗುರು ಚಿನ್ಮೂರ್ತಿಯೆನಿಸ ತೇ
ಜಃ ಪೂರ್ಣ ಕೃಷ್ಣನೊಪ್ಪಿರ್ದ ಕ್ಷೀರಾಬ್ಧಿ ವರಶೇಷಶಾಯಿಯೆ ನಿಜಮಲೆ ೧೧೫

ಅಂತು ಅಧ್ಯಾಯ ೪ಕ್ಕಂ ಪದ್ಯನು ೩೩೪ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ.

---

೧೧೨. 1. ವೆಡೆಗೆ.

೫. ಪರೀಕ್ಷಿತನ ಪಟ್ಟಾಭಿಷೇಕ

ಸೂಚನೆ :

ಯಾದವರ್ವೆರಸಿ ಕೃಷ್ಣಾವತಾರವು ಪೂರ್ಣ
ಮಾದಡಾ ಪಾಂಡವರ್ಕುಂತಿ ಸಹಿತುತ್ತರದ
ಹಾದಿಯುನ್ನೈದಿದರ್ವರ ಪರೀಕ್ಷಿನ್ನೃಪಗೆ ಪಟ್ಟಾಭಿಷೇಕವೆಸಗಿ

ಜನನಾಥ ಕೇಳಂದು ವಟಪತ್ರಶಯನನಮ
ನ್ನನುವಿಡಿದು ವಿಶ್ವಮುನ್ನುದರದೊಳಗಿಂಬಿಟ್ಟು
ತನಗನ್ಯಮಿರದೆ ಲಸದೇಕಮೇವಾದ್ವಿತೀಯಂ ಬ್ರಹ್ಮ ಮತವನೆರಗಿ
ಚಿನುಮಯದ ಯೋಗನಿದ್ರಾನಂದಮಂ ಸಾರಿ
ದನುವನೆಲ್ಲರಿಗೆ ತೋರ್ಪಡಿಪಂತೆ ವಾರಿಜಾ
ಸನಪಿತಂ ಲೀಲಾಸುಷುಪ್ತಿಯಂ ತಳೆದಿರ್ದ ನರಲೀಲೆಗರಿದೆನಿಸಲು ೧

ನಿಜದಿಂ ಹೃಷೀಕೇಶನಾಗಲು ತದಾಜ್ಞೆಯಂ
ಭಜಿಸವೇ ಕರಣಂಗಳೆಂಬಂತೆ ಹೃದಯವಾ
ರಿಜದಲಣಗಿತು ಮನವು ಲಸದುನ್ಮನೀಸ್ಥಾನದೊಳ್ ನೆಲಸಿತಮಲಮತಿಯು
ರಜನಿವೆಳಗುಗಳ ತೊಡರಂಟದೆ ಗುಣತ್ರಯದ
ಗಜಬಜಗಳಿರದೆ ನಿರ್ಗುಣವ ಮೀರ್ದಾನಂದ
ನಿಜವೆಳಗಿನೊಳ್ ಭೇದಕೆಡವಿರದೆ ಪರತತ್ವಯೋಗನಿದ್ರೆಯಲೆಸೆದನು ೨

ತಿಳಿಯೆ ಜಾಗ್ರದ್ವಳಕೆಯೊಳು ನೇತ್ರಯುಗ್ಮಸು
ಸ್ಥಳದಲಿದ್ದರಿಕೆ ಕಂಠಸ್ಥಾನಕಿಳಿದಲ್ಲಿ
ತಳೆದು ಕನಸಂ ಮತ್ತೆ ಹೃದ್ದೇಶಕಿಳಿದಲ್ಲಿ ಸುಪ್ತಿಸುಖಮಂ ಸಾಧಿಸಿ
ಇಳಿದು ನಾಭೀಸ್ಥಳಕೆ ತುರ್ಯಸುಖಮಂ ತೋರಿ
ಬಳಿಕಲಾಧಾರ ಚಕ್ರವನೈದುತಲ್ಲಿ ಮಂ
ಗಳದ ತುರ್ಯಾತೀತ ಪೂರ್ಣಸುಖಮಂ ಪಡೆದ ಯೋಗನಿದ್ರೆಯಲೆಸೆದನು ೩

ಇಂತು ಭಾಸ್ವತ್ಸಮಾಧಿಯ ಯೋಗನಿದ್ರೆಯ
ನ್ನಾಂತಿರ್ದಡನಿತರೊಳ್ ಘನನಿಶಾಮಾನಿನಿಯ
ಳಂತರಂಗದ ತಾಪಗೆಂಡಮೆನೆ ಕೋಕಸಂಕುಲಜೀವರತ್ನಮೆನಲು
ಸಂತಸದಿ ತಲೆದೋರ್ವ ವಾಸರಾಂಗನೆಯ ಸೀ
ಮಂತಮಣಿಯೆನೆ ಪೂರ್ವದಿಗ್ವನಿತೆಯಳು ಫಣೆಯ
ಲಾಂತ ಮುತ್ತಿನ ಬೊಟ್ಟದೆಂಬಂತೆ ಬೆಳಗುತವು 'ಶುಕ್ರೋ'ದಯವು
ಸವೆದುದು ೪

ದಿನನಾಥ ಚೂಣಿ ಭೇರೀರವ ಮೊ ಘನರಾತ್ರಿ
ವನಿತೆಯುಬ್ಬಸವೆರೆವ ಹಾಪವವೊ ಜಾರವಿಟ
ಜನರಿಗೆಚ್ಚರಿಪ ಸಂಜ್ಞಾಸ್ವರವೊ ಚೋರಕೌಶಿಕಗಳೆದೆ ಭುಗಿಲೆನಲ್ಕೆ
ಧ್ವನಿಗೈವ 'ಪಾರಿ' ಘಂಟಾರವವೊ ವಾಸರಾಂ
ಗನೆಯ ಪರಿಣಯಕೆ ತೂರ್ಯಸ್ವನವೊ ಸತ್ಕೃತಿಯ
ಮುನಿಗಳ್ಗೆ ಕಾಲಸೂಚಕವೊ ಪೇಳೆನೆ ತಾಮ್ರಚೂಡಾರವಗಳೆಸೆದವು ೫

ಪರಿಪರಿಯ ಪೂವೊಗ್ಗೆಯರಳಿದವು ಮುಗಿಲಿನೊಳ್
ಪರಪಿರ್ದತಾರೆಗಳ್ ಮುಸುಳಿದವು ಕತ್ತಲೆಯ
ಬಿರುಹಿನೊಡ್ಡಿನ ಬಿಂಕ ಸಡಿಲಿದವು ಪುಂಶ್ಚಲಿಯರುಲ್ಲಾಸಗಳ್ ಮುಗ್ಗಿತು
ಸ್ಮರಕೇತುಪಟಪಂಡಮಿಳುಹಿದವು ಸೂರ್ಯಭೂ
ವರನ ಚೂಣಿಗಳು ಬಂದೊದಗಿದವು ಸುಜನರೆ
ಚ್ಚರುವುದೆಂದೆನಲುಷಃಕಾಲಮಂ ಪೇಳ್ವವೆನೆ ವಿಹಗಕಲಕಲಮೆಸೆದುದು ೬

ಪತಿಯ ಬರವಂ ದಿನಾಂಗನೆಗರುಹಲೆಂದು ಮುಂ
ಗತಿಯುಲ್ಲೈತಂದ ರವಿದೂತನೆನೆ ಶೀತಸಂ
ಯುತವಾದ ತಂಗಾಳಿ ಸುಳಿಯೆ ನಿಜರಾಜ್ಯಮಂ ರಜನಿ ಕೋಳ್ವಿಡಿದಳೆಂದು
ಅತಿವೇಗದಿಂ ನಡೆವ ರವಿರಥಾಶ್ವಗಳ ಖುರ
ಹತಿಯಿಂದೆ ಕೆಂಧೂಳು ಮುಸುಕಿತೆಂಬಂತೆ ಲೋ
ಹಿತವರ್ಣಮಾದುದಾಕಾಶ ಸುರಕಾಂತೆಯರ್ಗನುರಾಗಮೇರ್ದಂತಿರೆ ೭

---

೪. 1. ಸೂರ್ಯೋ. ೫. 1. ಯಾಮ.

ಪ್ರಾಚೀಘನಾಲಕಿಯ ಲಸದಧರ ರುಚಿ ಸರಿ
ದ್ವೀಚಿಗಳ್ ಪರಿದವೆನೆ ರವಿಗೆ ಮುಳಿದೆರಗುವ ನಿ
ಶಾಚರರ ಕೋಪಾರುಣಾಕ್ಷಿಗೆಂಚೆನೆ ತತ್ಸಮರವ ನೋಡಲ್ ಬಳಸಿದ
ಖೇಚರರ ಮಣಿಮುಕುಟ ದೀಪ್ತಿಯೆನೆ ಹರಿದಶ್ವ
ರೋಚಿಗಳ್ ಕತ್ತಲೆಯನಿರಿಯಲಾ ಕೆಂಜಲನೆ
ಭೂಚಕ್ರಗಗನಗಳ ಮುಸುಕಿತೆನಲುದಯಸಂಧ್ಯಾರಾಗಮೆಸದಿರ್ದುದು ೮

ರಕ್ತವತಿಯಾದ ದಿಕ್ಸತಿಯ ಸುರಸತಿಯರಾ
ಸಕ್ತಿಯಿಂದೆಳೆಕಿರಣಕುಂಕುಮೋದಕದಲಭಿ
ಷಿಕ್ತಳಂ ಮಾಡಿ ಪೀತಾಂಬರವನಳವಡಿಸಿ ಪದ್ಮರಾಗಾಭರಣಮಂ
ವ್ಯಕ್ತದಲಲಂಕರಿಸಿ ಸೀಮಂತಸರಣಿ ಸಂ
ರಕ್ತಾಭತರುಣಾರ್ಕ ಬಿಂಬಮಣಿಯಂ ಮುಡಿಸಿ
ರಕ್ತಿಯಿಂದೊಸಗೆಗೈವರ್ವಿಹಗ ಕಲಕಲ ಸುವಾದ್ಯ ಮಿಗಿಲೆಂಬೊಲೆಸೆಯೆ ೯

ಧರಣೀಶನಾವ ವರ್ಣಜನಾಗಲವನಾಳ್ವ
ಧರೆಯೊಳಗೆ ತದ್ವರ್ಣಮೇ ಪ್ರಬಲಮಪ್ಪಂತೆ
ಸಿರಿವಂತನಾದ ಸತ್ಪುರುಷನಾಶ್ರಿತರಿಗಾ ಸಿರಿಯೆ ನೆಲೆಯಪ್ಪ ತೆರದಿ
ಅರುಣೋದಯವು ಘಟಿಸಲಖಿಲದಿಗ್ಗಗನಂಗ
ಳರುಣಮಯವಾಗಿ ತೋರ್ವಡುತಿರ್ದುದಾಕಾಶ
ಸರಣಿಗಂ ಪಂಚವಣ್ಣಿಗೆಯ ತುಂಬಿದರು ಸುರಸತಿಯರೆಂಬಂದವಾಗಿ ೧೦

ಚಿತ್ರತರ ಕರಖಡ್ಗ ಝಳಪಿಂದೆ ನಾನಾ ಪ
ತತ್ರಿಕಲರವದ ಪೇರ್ಬಲದಿಂದೆ ವಿಕಚ ಶತ
ಪತ್ರ ಹರಿಗೆಗಳ ಸಾಲ್ವಳಿಯಿಂದೆ ರಾಜಿಪ ನಗಾರಿ ದಿಗ್ಭರಿತದಿಂದೆ
ಧಾತ್ರಿಯುಂ ಮುಗಿದ ತಮಮುನ್ನಿರಿದು ಭುವಿಗೆ ಸ
ನ್ಮಿತ್ರಸಿಶ್ಚಯಮೆನಿಸಿ ಪಟುಲಗ್ಗೆಯಿಂದುದಯ
ಗೋತ್ರಮನ್ನೇರ್ದನಾ ತರಣಿ ವಿಪ್ರಾರ್ಘ್ಯ ಜಲಶರದಲಸುರರಸಿರಿವೃತ ೧೧

ಕಮಲ ಕಾರಾಗೃಹಗಳಳಿಬಂಧಮಳಿವುತಿರೆ
ತಮದೊಡರು ಪರಿಭವದ ಮಹಿಮೆ ಮಹಿಗಣಗುತಿರೆ
ಹಿಮದಿ ಕಂಪಿಸುವ ರಂಜನಮೆ ಜನಕಡಗುತಿರೆ ನಿತ್ಯಕರ್ಮಾಚಾರದ
ವಿಮಲರ್ಗೆ ಕಾಲಗಳಕಾಲಗಳ್ ತೋರುತಿರೆ
ಸುಮಶರಾಧಿಪನ ವಿಕ್ರಮಮೆ ಕ್ರಮಮಳಿವುತಿರೆ
ಕಮನೀಯ ಧಾರ್ಮಿಕ ದಿನೇಶನೇರಿದನು ಲೋಕಂಗಳ್ಗೆ ಕಂಗಳಾಗಿ ೧೨

ನಗವೈರಿ ದಿಕ್ಸತಿಯಳಾಂತ ಮಣಿಪದಕಮಿದು
ಮುಗಿಲುವೆಣ್ಣಿನ ಜಡೆಯ ರತ್ನರೇಗಟಿಕಮಿದು
ಪಗಲುನಾರಿಯಳ ಪಂಜರ ರತ್ನದೋಲೆಯಿದು ಪ್ರಾಗ್ಗಿರಿಯ ಮಸ್ತಕದೊಳು
ಒಗುಮಿಗೆಯಲೊಡ್ಡಿರುವ ಘಡಿಯಾರಮಿದು ನಾಲ್ಕು
ಮೊಗನ ಸೃಷ್ಟಿಯ ಜೀವರಾಶಿಗಳ [1]ಹರಣಮಂ[1]
ನೆಗಳಿ ತೂಗುವ ರನ್ನದಕ್ಕಡಿಯೆನಲ್ ಮೂಡಲಿನಬಿಂಬ ಚೆಲುವಾಂತುದು ೧೩

ಜಮದಗ್ನಿಜಾತನೆನೆ ರಾಜತೇಜೋಹಾರಿ
ವಿಮಲಹರಿಯೆನಲು ಕಮಲಾನಂದಕಾರಿಯು
ಕ್ರಮಕಾರ್ತವೀರ್ಯನೊಲ್ ಕರಸಹಸ್ರಧಾರಿ ಮೆರೆವ ಸುರಗಂಗೆಯಂತೆ
ಸಮನಿಸಿದ ದೋಷಾಪಹಾರಿ ರಾಜಿಪ ಖಗೋ
ಕ್ರಮನಂತೆ ವಿಷ್ಣುಪದಸೇವಾಯಶೋದ್ಧಾರಿ
ಕಮನೀಯ ಮುನಿಗಳಂತಾತಪೋದ್ಧಾರಿ ತಾನೆನಿಸಿ ರವಿ ಮೆರೆದನಂದು ೧೪

ಕುವಲಯಾಮಿತ್ರನಾಗಿಯುಂ ಲೋಕಮಿತ್ರನೆನೆ
ಕವಿಬುಧರ ಕಳೆಗೆಡಿಸಿಯುಂ ಜಗದ್ಬಂಧುವೆನೆ
ತವೆ ಕೌಶಿಕರ ಕಣ್ಣ ಕಳೆದಡುಂ ಜಗದೈಕಚಕ್ಷುಃಪರಾತ್ಮನೆನುತ
ವಿವರಿಸಲ್ ಪಂಕಜ ಹಿತಾತ್ಮ ನಿರ್ದೋಷಿಯೆನೆ
ಭುವನ ಸಂತಾಪಕರನಾಗಿ ಸಚ್ಛಾಯಾ ವಿ
ಭವ ಸಹಿತನೆನೆ ಕೀರ್ತಿವಡೆವುದದು ವಿಷ್ಣುಪದ ಸೇವಾಮಹಿಮೆಯ್ಯೆಸಲೆ ೧೫

೧೩. 1. ಬದುಕನುಂ.

ನಿರುತಮಂಗಳದೇವತಾಲಯರು ತಾವೆನಿಸಿ
ಹರಿಮೈತ್ರಿಯುಂ ಪಡೆದ ಲಸದಮೃತವಾಸರ್ಗೆ
ಮೆರೆವ ಸಕಳಂಕ ಹೃತ್ಕುಟಿಲರಿಂದಾದ ಪರಿಭವ ನಿಲ್ವುದೇ ಪೇಳೆನೆ
ಅರಳಿವವು ಕಮಲಂಗಳಲ್ಲಿ ಬಿಗಿವಡೆದಿರ್ದ
ಪರಮೆ ಪೊರಸೂಸಿದವು ಮಧುಪರಿಂಗಾದಡುಂ
ಹರಿಮಿತ್ರರಾಶ್ರಯವು ಬಂಧಮಂ ಪರಿಯದಿದ್ದಪುದೆ ಭುವನದೊಳೆನಿಸಲು ೧೬

ಸಿರಿನಿಲಯು ಬ್ರಹ್ಮವಸತಿಗಳಿಗುಪಹತಿಯುನಾ
ಚರಿಪ ದೋಷಾನ್ವಿತರಿಗಡಸದೇ ಕ್ಷಯರೋಗ
ಮರಿಯೆ ತತ್ಸಂಪದಗಳಳಿಯುವೇ ಪೇಳೆನಲ್ ಚಂದ್ರಸಂಪತ್ಕಳೆಗಳು
ಸರಿದು ಪೋದವು ಸುಜನರಲಸಿಕೆಯ ಕಾಲದೊಳ್
ಪೊರೆದು ನಗುತಿರ್ದರುಬ್ಬಟೆಗಳಳಿಯುವೆ ಸೊಂಪು
ಮುರಿದು ಕಳಲಿದವು ಕುಮುದಂಗಳಾ ರವಿಕಿರಣ
ಸೋಂಕಿನಿಂದಾಕ್ಷಣದೊಳು ೧೭

ಈ ರವಿನೃಪಾಲನಾರಡಿಯುವರ ಬಂಧ ಪರಿ
ಹಾರಿಯುವನೀವ್ಯಾಪ್ತವಾದ ಪಟು ದೋಷಾಪ
ಹಾರಿ ಸದ್ವಿಜನಿಕರಕಾವಗಂ ಸಂತೋಷಕಾರಿಯೆಂದೆಂಟು ದೆಸೆಗಂ
ಸಾರಿ ಪೇಳುವವೆನಿಸಲೆರಗಿ ತುಂಬಿಗಳು ಝೇಂ
ಕಾರದಿಂ ಪೂಗಳಂ ಬಳಸಿದವು ಹಂಸಗಣ
ಸಾರಸವನೈದಿದವು ಸಕಲಮಿಗವಕ್ಕಿ ಚೆಲ್ಲಿದವಾಗ ಭೂತಲದೊಳು ೧೮

ಮತ್ತೆ ಕೇಳ್ ಕೂಟಸಾಕ್ಷಿಯು ನೂಕಿ ಪರಿವ ಸಂ
ಪತ್ತೆನಲ್ ಗೋಗಣಗಳೈದಿದವು ನಾಲ್ದೆಸೆಗೆ
ಚಿತ್ತದನುರಾಗದಿಂ ವಿಪ್ರರಾಹ್ನಿಕ ನಿತ್ಯಕೃತ್ಯಗಳಿಗನುವಾದರು
ಪತ್ತಿದುದಯಾದ್ರಿಯಂ ಮೀರಿ ಪೊಂಬಿಸಿಲ ಬೀ
ಯುತ್ತ ಮೇಲ್ವಾಯ್ದನಾದ್ಯುಮಣಿ ತತ್ಕಿರಣ ಝಳ
ಪೊತ್ತುಪೊತ್ತಿಗೆ ಪೆಚ್ಚುತಿರ್ದುದಾನಂದ ಬ್ರಹಜ್ಞರಿಂಗೇಗೊಂಬೊಲು ೧೯

ಇಂತು ಸೂರ್ಯೋದಯವು ಸಮನಿಸಲು ತಾವರೆಯ
ಹಂತಿಯರಳುವ ತೆರದಲಕ್ಷಿಯರಳಿದವು ಶ್ರೀ
ಕಾಂತಂಗೆ ಯೋಗಾಂಗನಾರತಿಯ ಸೊಬಗನುಪಸಂಹರಿಸಿ ಕರಣಂಗಳಂ
ಪಿಂತಿರುಗಲಮನಸ್ಕದಿಂದಲಿಂದ್ರಿಯ ಮುನ್ನಿ
ನಂತೆ ಲೀಲಾವ್ಯಾವಹಾರಿಕದ ಚೇಷ್ಟೆಗಳ
ನಾಂತಡಾ ವಾಸುದೇವಂ ನರನ ತೆರದಲಂಗೈ ನೋಡುತಿದ್ದನಂದು ೨೦

ಅನಿತರೊಳ್ ಪಾರ್ಥನೆಚ್ಚರುಗೊಂಡು ವಾಸುದೇ
ವನ ಚಾರುನಾಮ ಸದ್ಗುಣ ಚರಿತ್ರಂಗಳಂ
ನೆನೆವುತಂ ಮೈಮುರಿದು ಹರಿಚರಣಕೆರಗಿ ಹರಕೆಯನಾಂತ ಬಳಿಕಿರ್ವರುಂ
ವಿನುತ ಮಜ್ಜನ ಭೋಜನಾದ್ಯುಪಚಾರಗಳ
ನನುಕರಿಸಿ ಸತ್ಸಭಾಮಂಟಪವ ಸಾರ್ದ ಮೇ
ಲನಿಬರುಂ ಪಳೆಯಂತೆ ಸಂಧಿಸಿದರವರವರ ಸಹಜ ಪರಿಚರ್ಯಗಳೊಳು ೨೧

ನಳಿನಾಕ್ಷ ಚರಣ ಸೇವೆಯ ಸೌಖ್ಯ ಸಂತುಷ್ಟಿ
ಬೆಳವಿಗೆಯ ಚೇತೋವಿಲಾಸದಿಂದೀ ತೆರದಿ
ಕಳಿದವರೆಪಕ್ಷವಾಸರಗಳಾ ಬಳಿಕ ನರನಾಗ ನಿಜಪುರಿಗೈದಲು
ತಳೆದ ಸಂಕಲ್ಪದಿಂದಚ್ಯುತಾಂಘ್ರಿಗೆ ಮಣಿದು
ಕಳೆದುದರೆಪಕ್ಷಮಿನ್ನೆನಗನುಜ್ಞೆಯನಿತ್ತು
ಕಳುಹಬೇಕಣ್ಣನೆಡೆಗೆಂದು ಬೆಸಗೊಳಲಾಗ ಕಮಲಾಕ್ಷನಿಂತೆಂದನು ೨೨

ಪಾರ್ಥ ಕೇಳೆವಗೊಂದು ದೇವತೆಯ ಬಲಗೊಂಬ
ಪ್ರಾರ್ಥನೆಯದಿದ್ದಪುದು ಜನಪದದ ಜನಕೆ ಪುರು
ಷಾರ್ಥಕಾರಣವಾಗಿ ಪುರದ ಬಹಿರಾವರಣ ವನದೇಶದೊಳಗನಿಬರುಂ
ಸ್ವಾರ್ಥ ದೇವತೆಯನರ್ಚಿಸಿ ಭೂತ ಬಲಿಯಿತ್ತು
ಸಾರ್ಥಕವನನುಗೈವ ಸಂಕಲ್ಪ ನಿಜವಾಂಛೆ
ತೀರ್ಥಮಂ ಪೂರವಿಸಿ ಬಳಿಕ ಪೋಗೆನಲಾಗ ಹರಿಗೆ ನರನಿಂತೆಂದನು ೨೩

ಪೇಿವ ಬಿನ್ನಹ ನಿಖಿಲದೇವತಾತ್ಮಕ ದೇವ
ದೇವ ನೀನಾಗಿರಲ್ ನೀನು ಹರಕೆಯ [1][ತಳೆವ][1]
ದೇವರೊಂದಿನ್ನು ಬೇರಿದ್ದಪುದೆ ಪೂರ್ಣಕಾಮಗೆ ವಾಂಛೆಗೆಡನಿಪ್ಪುದೆ
ನಾವಂಜುವೆವು ಕೌಟನೆಯನುಡಿಗೆ ನಿಖಿಲಭುವ
ನಾವಳಿಯ ಸಚರಾಚರೈಕಚೇತನನೆನು
ತ್ತಾವಗಂ ವೇದಗಳ್ ಘೋಷಿಸವೆ ಸಾಕು ಬಡಡಿಂಗರಿಗೆ ತಾನೆಂದನು ೨೪

ಈ ತೆರದಿ ಹರಿಯಾಜ್ಞೆಯಂ ವಹಿಸಿ ಸಂಗಡೆದ
ಜಾತುರಂಗವನು ಗಜನಗರಿಗಂ ಕಳುಹಿ [1]ಬಳಿ
ಕಾತನುಳಿ[1]ದಂ ಕೆಲವು ದಿವಸವಾ ದ್ವಾರಕೆಯುಲರ್ಜುನಂ ಮೂಲೋಕದ
ಚೇತನಬ್ರಹ್ಮವೆಂದರಿಪಡುಂ ವಿಷ್ಣುವಾ
ಯಾತಿಮಿರ ಮುಸುಕಿನಿಂ ಮರೆಗೊಂಡು ಬಂಧುತ್ವ
ರೀತಿಯಿಂ ಸರಸವೆರಸಿಂದಲೊಡನಾಡಿಯಾಗಿರ್ದನವನೇಂ ಧನ್ಯನೋ ೨೫

ಒಂದು ದಿನ ವರಸರೋವರ ಜಲಕ್ರೀಡೆಯೋ
ಳೊಂದು ದಿಸವಾನಂದ ನಂದನ ವಿಹಾರದೋ
ಳೊಂದು ದಿನಮುದ್ರಿನ ಸಮುದ್ರ ಕೇಳಿಕೆಗಳೋಳಿರುತಿರ್ದನೀ ತೆರದೊಳ್
ಇಂದುಕುಲದರಸ ಕೇಳ್ ಯದುಕುಲಕೆ ಕಾಲಗತಿ
ಬಂದ ಗತಕಥನಮನ್ನೊರೆವೆ ಯಾದವ ತರಳ
ರೊಂದಾಗಿ ಕೇಳಿಯಿಂದೈತಂದರವನೀಸುರಸ್ನಾನ ಘಟ್ಟದೆಡೆಗೆ ೨೬

ಭಸಿತ ಮೂರೇಖೆ ರುದ್ರಾಕ್ಷಿ ಮಾಲಿಕೆಗಳ
ನ್ನೊಸೆದವರ ಭಸ್ಮಧೂಳಿಗಳ ಲೇಪಿಸಿದವರ
ಕುಶಪವಿತ್ರಾಭರಣ ರಂಜಿತಾಂಗುಲಿಯವರನಜಿನಾಂಬರವ ತಾಳ್ದರ
ಲಸದೂರ್ಧ್ವ ಪುಂಡ್ರ ಕಮಲಾಕ್ಷಿ ಕಂಕಣದವರ
ನೆಸೆವ ತುಲಸಿಯ ದಂಡೆಗಳ ಕೊರಳಲೊಲಿವವರ
ಪೊಸ ಕಕ್ಷಪಾಳಕಂಕುಳಿಲಿಸೆವ ವಿಪ್ರರಂ ನೋಡಿದರ್ತರಳರಂದು ೨೭

---

೨೪. 1. ನಾನ್ವ. ೨೫. 1. ತಾನೇತಳುವಿ

ನಡುನೀರಿನೊಳು ನಿಂದು ಕಣ್ಣ ಮುಚ್ಚುತ ಮತ್ತೆ
ಬಿಡುತಲೋಷ್ಠಗಳನಲುಗಿಸುವರಂ ತುದಿಮೂಗು
ವಿಡಿದುಸುರನೆಳೆದಾಸನಂಗಳಿಂ ನೀರನೇರಿಸಿ ಮತ್ತೆ ಬಿಡುತಿರ್ಪರಂ
ಎಡಬಲದಲಸಳಿಯುಂ ಬಳಸಿ ಪೊತ್ತಿನ ಮುಖ
ಕ್ಕಡಗೆಡೆವುತೀಳ್ವರನ್ನೆರಡುಗಲ್ಲಂಗಳಂ
ಬಡಿಬಡಿದು ಕೂಗಿ ಕುಣಿವವರಂಗಚೇಷ್ಟೆಗಳ ನೋಡಿ ನಗುತಿರ್ದರಂದು ೨೮

ಯತಿವರರ ಬೋಳುಮಸ್ತಕಗಳಂ ಯೋಗಿ ಸಂ
ತತಿಯ ಕೆಂಗುರುಳ ಜೋಲ್ವರಿಗಳಂ ಮೌನಿಜನ
ರತಿವೆಳೆದ ಕಕ್ಷಗೇಶಂಗಳನ್ನೊಲೆವ ಗಡ್ಡಗಳನಿಂಬಿನ ಜಡೆಗಳಂ
ಸತತ ನಿರ್ವಾಣಿಗಳ ರೋಮದಿರವಂ ಭಕ್ತ
ತತಿಯ ಪೇರ್ದನಿಯ ನುತಿನೃತ್ಯಂಗಳನಿತುವಂ
ಮತಿಹೀನತರಳರೇಡಿಸಿ ನಗುತ ವಾನರಾಯುತಿಯನಂಗವಿಸಿರ್ದರು ೨೯

ಆಡಲೇನಿನ್ನು ಜನಮೇಜಯ ನರೇಂದ್ರ ಕೇಳ್
ಕೂಡುಬಿದಿರಸಿಮಸೆಗಳಿಂದುದಿಸಿದಗ್ನಿ ಪೆ
ರ್ಗಾಡನೆಲ್ಲವ ಸುಡುವ ತೆರನಾಗಿ ಮಕ್ಕಳಾಟಗಳಿಂದ ಯದುವಂಶಕೆ
ಕೇಡೊದಗಿದರ್ಥಮನ್ನೊರೆವೆ ಕೇಳಿನ್ನಲ್ಲಿ
ಕೂಡಿರ್ದ ತರಳರಾಲೋಚಿಸಿ ಕುಮಂತ್ರಮಂ
ಪೂಡಿದರ್ವಿಷಪರೀಕ್ಷೆಯನೆಸಗುವಂತೆ ವಿಪ್ರರ ಪರೀಕ್ಷಿಪಯತ್ನಮಂ ೩೦

ಉರ್ವಿಯೊಳಗೀ ವಿಪ್ರರೆಲ್ಲಾ ರಹಸ್ಯಗಳ
ಪೂರ್ವಾಪರಾದಿ ಸಂಗತಿಗಳನ್ನರಿವೆವೆನೆ
ಗರ್ವದಿಂದನಿಬರ್ಗೆ ಗುರುಗಳೇ ತಾವೆಂದು ವಂದನೆಗಳಂ ಕೊಳ್ಳುತ
ಸರ್ವಂಕಷ ಪ್ರಜ್ಞೆಯೊಡ್ಡವಣೆಯಿಂ ಬೆರೆವ
ಪಾರ್ವರಂ ಕಾಂಬೆವೆನೆ ಸಾಂಬವೆಸರಿನಲೆಸೆವ
ನೊರ್ವ ತರಳಗೆ ಹೆಣ್ಣುವೇಷಮಂ ಕಲ್ಪಿಸಿದರೆಸೆವ ಗರ್ಭಿಣಿಯಂದದಿ ೩೧

ಕೆಚವ ನುಂಪೆಸಗಿ ತುರುಬನ್ನೊಡ್ಡಿ ಕಲ್ಪನೆಯೆ
ಕುಚಗಳನ್ನನುಗೊಳಿಸಿ ಕಂಚುಕವ ಬಿಗಿದುದರ
ರಚನೆಯಂ ಬೃಹದಾಕೃತಿಯಲೆಸಗಿ ನಿರಿಯಂಬರವನುಡಿಸಿ ಮುಸುಕನಿಟ್ಟು
ವಿಚಲ ಪದಗತಿಯ ವಂಚಿಸಿ ಬಳಲುಗತಿಯ ಸಂ
ಕುಚಿತ ನಡೆಯಿಂದೊರ್ವ ಪುರುಷನಂ ಜೊತೆಗೂಡಿ
ಶುಚಿಗಳೆಡೆಗಟ್ಟಿದರ್ ತವಕದಿಂದನ್ವಯವನಗ್ನಿಗೊಡೆನೂಕುವಂತೆ ೩೨

ಬಂದನವನಾ ಕುಟಿಲಗರ್ಭಿಣಿಯ ಕೈವಿಡಿದು
ಸಂದಣಿಯ ಋಷಿಗಳೆಡೆಯೊಳ್ ಕುಹಕ ಭಕ್ತಿಯಿಂ
ನಿಂದು ನುಡಿಸಿದನೆಲೆ ಮಹಾತ್ಮರಿರ ಮತ್ಸತಿಗೆ ಸಂತಾನ ಸಂಘಟಿಸದೆ
ಪೊಂದಿರ್ಪಳೀಗಲೀ ಗರ್ಭಧಾರಣೆಯನುವ
ಮುಂದೆನಗೆ ಸುತನಹನೊ ಪುತ್ರಿಯುದ್ಭವಿಸುವಳೊ
ಕಂದೆರವೆಗೈದು ರಕ್ಷಿಪುದೆಂದು ಪುಸಿವಿನಯದಿಂದೆರಗಿ ಬೆಸಗೊಂಡನು ೩೩

ಕಾಲತ್ರಯಜ್ಞಾನ ತಮಗುಂಟಲೇ ಪಿರಿದು
ಶೀಲರಿಪ್ಪೆಡನೆಂದು ಬಂದೆವಿಲ್ಲಿಗೆ ನಿಜದ
ಮೂಲಮಂ ಕರುಣಿಸುವುದೆಂದೆರಗಲಾ ವಿಪ್ರರದು ತಥ್ಯವೆಂದು ಬಗೆದು
ಕೀಲಿಸಿದ ವಿಜ್ಞಾನದೃಷ್ಟಿಯಿಂ ನೋಡಲ್ಕೆ
ಬಾಲೆಯಲ್ಲದೆ ಪುರುಷಧರ್ಮ ತೋರ್ವಡಲು ಮುಳಿ
ದಾಲಿಗಳ್ ಕೆಂಪೇರ್ದುವಾಗಲವನೀಸುರರ ಪರಿಹಾಸದುಶ್ಚರ್ಯಕೆ ೩೪

ಆಕಟ ಯಾದವರು ಕಡುವೆಳೆದ ಗರ್ವದಲಿ ಹರಿ
ಬಕುತ ಪರಿಹಾಸಕೆಳಸಿದರಿನ್ನು ಮನ್ನಿಸಲ್
ಸುಕರವಾಗದು ಮುಂದೆನುತ್ತಲರಿದೆಂದರೆಲೆ ಕುಮತಿ ಕೇಳೀ ವನಿತೆಗೆ
ಸಕಲರಂದದಿ ಪುತ್ರಪುತ್ರಿಯರ ಪಡೆವ ಬಾ
ಧಕವಿರದು ಯಾಮಮಾತ್ರದಿ ನಿಮ್ಮ ಯದುಕುಲಜ
ರಖಿಲರಂ ಸಂಹರಿಪ ಲೋಹಮುಸಲವು ಸಮುದ್ಭವಿಸುವುದು ಪೋಗೆಂದರು ೩೫

ಕಡುಮುಳಿಸಿನಿಂದಿಂತು ಪೇಳ್ದಡವರಿರ್ವರುಂ
ನಡನಡುಗುತತಿ ಜವದಿ ಪರಿತಂದರನಿತರೊಳ್
ಕೆಡಮದು ಮಹಾಲೋಹ ಮುಸಲಮೆಡೆಮಾರ್ಗದೊಳ್ ತತ್ತ್ರರಳಗರ್ಭದಿಂದೆ
ಪೊಡವಿ ಕಂಪಿಸೆ ಧೂಮಕೇತುಗಳ್ ಮೂಡೆ ಪಗ
ಲುಡುಗಣಂಗಳ್ ಬಳಸೆ ಘೂಕಂಗಳೊರಲೆ ಪಡು
ಗಡೆಯ ರವಿಯುದಿಸೆ ದಿಗ್ವಳಿಯು ಕತ್ತಲಿಸೆ ಮಹದುತ್ಪಾತಗಳ್ ತೋರ್ದುದು ೩೬

ಬಳಿಕಲಾ ದ್ವಾರಕಿಯುಲೆಸೆವ ಹರ್ಮ್ಯಗಳ ಮೇ
ಲ್ಗಳಶಂಗಳುರುಳಿದವು ಗಜರಥಾಶ್ವಗಳಿದ್ದ
ಬಳಿಯಲೇ ಕೆಡೆದುರುಳಿದವು ದುರ್ನಿಮಿತ್ತಗಳು ಮನೆಮನೆಯಲೇಕವಾಗಿ
ಬಳಸಿ ತೋರ್ದವು ಬರಸಿಡಿಲ್ಗಳೆರಗುತ ಜನ
ರ್ಕಳವಳದಿ ಬೆರೆತಿರಲ್ಕನಿತರೊಳ್ ಬಾಲಕರು
ಬಳಲಿ ಬಾಯಾರಿ ಪರಿತಂದು ಹರಿಗರುಹಿದರ್ ಮುಸಲಸಂಗತಿಯನುವನು ೩೭

ಕೇಳಿ ಲೌಕಿಕರಂದದಿಂದಲಾಶ್ಚರ್ಯಮಂ
ತಾಳಿ ತರುಣರ ಗಜರಿ ಪೇಳ್ದನೀ ಮುಸಲಮ
ನ್ನೇಳಿಲಂಗ್ಯೆಯಿಂದೆಲ್ಲವನರೆದು ನೀರಿನೊಳ್ ಕೂಡಿಸುವುದೀಗಲೆನುತ
ಪೇಳಿದಂತರೆದು ಜಲದೊಳ್ ಕಲಸಲದು ಬೆಳೆದು
ಚೇಳಿವೆಸರಿನ ತೃಣದ ಶಾಡ್ವಲಮುದಾಗಿರ್ದು
ದಾಲುತವು ಹಲಗಾಲ ಸಾರ್ಥಕವ ದಿನವ ಸಾಧಿಸುತಂಬುಧಿಯ ತಟದೊಳು ೩೮

ಮತ್ತದರಲರೆಗೆ ಸವೆಯದೆ ನಿಂತ ಲೋಹವಂ
ತತ್ತೀರದೊಳ್ ಬಿಸುಡಲದನೊಂದು ಮೀನೆರಗಿ
ತುತ್ತುಗೊಂಡಿರಲದಂ ಧೀವರರ್ಪಿಡಿದೊರ್ವ ಲುಬ್ಧಕಗೆ ವಿಕ್ರಯಿಸಲು
ಪತ್ತಿ ತದ್ಗರ್ಭದೊಳಗಿರೆ ಲೋಹಖಂಡಮುದ
ನೆತ್ತಿ ತನ್ನಂಬಿಗಲಗಂಗ್ಯೆದು ತೊಡಚಿ ನಿಜ
ಬತ್ತಳಿಕೆಯೊಳು ಸಾರ್ಚಿದಂ ತದ್ರಹಸ್ಯವನ್ನಾರರಿವರೀ ಭುವಿಯೊಳು ೩೯

ಅರಸ ಕೇಳಿಂತು ಬಹುವತ್ಸರಂಗಳ್ ಸರಿಯೆ
ಮರೆದು ಕಳೆದರ್ಜುನರು ಪೂರ್ವಗತಕಥನವಿದ
ನರಿವರಾರೀ ವಿಷ್ಣುಮಾಯೆಯಿಂ ಯದುವಂಶಕಾಸನ್ನದಿನವೊದವಲು
ಹರಿಯೊಂದು ದಿನ ಸಾತ್ಯಕಿಯ ಕರೆದು ದೇವತೆಯ
ಹರಕೆಯನ್ನೊಪ್ಪಿಸುವಡುತ್ತಮ ದಿಸವು ನಾಳೆ
ಪುರದೊಳನಿಬರು ಬನಕೆ ತೆರಳುವಂದದಿ ಸಾರಿ ಡಂಗುರವ ಪೊಯಿಸೆಂದನು ೪೦

ಶ್ರೀವರನ ನೇಮಮನ್ನಾಂತು ಸಾತ್ಯಕಿಯಾಗ
ದೇವತೆಯನೋನಲ್ಪೈದುವದೆಂದು ನಿಯಮಿಸಲ್
ತೀವಿದತಿಹರುಷದಿಂ ಬಾಲವೃದ್ಧರ್ಗಳೊಳಗೊರ್ವರುಂ ನಿಲ್ಲದಂತೆ
ಭಾವಮೈದುನ ಪುತ್ರಮಿತ್ರಬಾಂಧವರು ಸಹ
ಯಾವದ್ವಿಶಿಷ್ಟಜನರನುವಿನಿಂದಾಗ ಪುರ
ಗಾವಲಿಂಗೊರ್ವರಿಲ್ಲೆನಿಸಿ ಪೊರವಂಟರಳವಟ್ಟ ಮುಸ್ತಯಿದೆಯಿಂದೆ ೪೧

ಬಳಿಕಲಮುನೆಯ ನಾರೀನಿವಹದಂದಣಗ
ಳಳತೆಯನ್ನೆನಿಸು ಬಣ್ಣಿಸಲಹುದು ಪರಿಜನದ
ಬಳಗ ನಾರಾಯಣಮಹಾಸೇನೆ ತತ್ಪುತ್ರಪೌತ್ರಪಾರಂಪರೆಗಳ
ಅಳತೆಯನ್ನಾರರಿಯಲಹುದದಂತಿರಲಿ ಮ
ತ್ತುಳಿದ ಹದಿನಾರು ಸಾವಿರ ಗೋಪಿಯರ ನೆರವಿ
ಗಿಳೆಯುಬ್ಬದೆನಿಸಿರಲ್ ಪೊರವಂಟರಂಬುಧಿಯ ತೀರವನದೇಶಕಂದು ೪೨

ಇಂತು ಯಾದವಸಮೂಹಂಗಳಂ ಗೋಪಿಂಯರ
ಸಂತತಿಯ ಬಲುಸಡಗರಂಗಳಂ ಪುರಜನ
ಮೊರ್ಬಂತಾದವರ ಕಲಕಲಂಗಳಂ ಪೇರೊಂಟೆ ಬಂಡಿಗಳ ಪರಿಕರಗಳ
ಸಿಂತು ನೋಡುತಲವರ ನಿಜಗತಿಗೆ ಸಾರ್ಚಲೆಂ
ದಂತರಂಗದಲೆಣಿಸಿ ಬಳಿಕಲಾ ರುಕ್ಮಿಣೀ
ಕಾಂತ ತಾ ನಡೆತಂದು ಲಸದಷ್ಟಮಹಿಷಿಯರ ಸಾಲ್ಪಳಿಯ ಸಾರ್ದನಂದು ೪೩

ಬನಬನಂಗಳಲೆಲ್ಲಿಯುಂ ಯಾದವರ್ಮುತ್ತಿ
ತನತನಗೆ ಕೇಳೀವಿಲಾಸದಿಂ ಫಲಪುಷ್ಪ
ಗೊನೆಗೊನೆಗಳಂ ಬಾಗಿಸುತ್ತ ಸಂಚರಿಸುತಂ ಸರಸಸಲ್ಲಾಪ ಮಿಗಲು
ಜನಜನರು ಪಂಥಪಾಡುಗಳಿಂದೆ ಲತೆಗಳಂ
ತೊನೆತೊನೆದು ಪೂಗಳಂ ಸೆಳೆದು ಮಕರಂದದೊಳ್
ನೆನೆನೆನೆದು ಹಿಗ್ಗುತಂ ಮತ್ತೆ ಕೆಲಬರ್ವಾರಿಧಿಯ ತೀರಕ್ಕೈತಂದರು ೪೪

ಜನಪ ಕೇಳಾಶ್ಚರ್ಯಕಥನಮಂ ಪೂರ್ವೋಕ್ತ
ಮುನಿಶಾಪ ಸಂಭೂತ ಮುಸಲೋದಿತತೃಣವು
ವನನಿಧಿಯ ತೀರದೊಳ್ ಬೆಳೆದಿರ್ದುದಲ್ಲಿಗೈತರಲಾಗ ಯಾದವರ್ಗೆ
ಜನಜನಕಸೂಯ ಸಕ್ರೋಧ ವೈಷಮ್ಯಗಳ್
ನೊನೆಗೊಂಡು ಕಲಹಗಳ್ ಬಲಿದುದವ್ಯಾಜದಿಂ
ಹನನ ಕಾಲವು ಸಮೀಪಿಸಿ ಬರಲು ಭುವನದೊಳ್ ವಿಪ್ರನುಡಿ ಬಂಜೆಯಹುದೆ ೪೫

ಬಳಿಕೊರ್ವರೊರ್ವರಿಂಗಾಗ್ರಹಗಳಡರಿ ಮುಂ
ಕೊಳುತ ಮೇಲ್ವಾಯ್ದು ಮುಷ್ಟಿಗಳಿಂದೆ ಪೊಣರುತಿರ
ಲಳಲಿನಿಂದೊರ್ವನಾ ತೃಣವ ಮುರಿದಪ್ಪಳಿಸಲೊಡಲು ಇಕ್ಕಡಿಯಾಗಲು
ಉಳಿದ ಯಾದವರವರ ಮರ್ಮಮನ್ನರಿದದನೆ
ಸೆಳೆಸೆಳೆದು ಕಡಿಯಲಾ ಸೋಂಕು ಮಾತ್ರದಿ ತನುಗ
ಳಳಿದವಿಬ್ಭಾಗೆಯಾಗುತ್ತ ವಿಪ್ರರ ನುಡಿಗೆ ತೃಣ ಕುಲಿಶರೂಪಾಂತುದು ೪೬

ಇಂತೊರ್ವರೊರ್ವರಾಕ್ರೋಶದಿಂಕಾದಿ ಸಮ
ಹಂತಿಯೊಳ್ ಮಡಿದುದೆಲ್ಲಾ ಜನರು ಯದುಕುಲಕೆ
ನಿಂತನೊರ್ವನೆ ಕೃಷ್ಣ ಪುರುಷರೊಳ್ ನಾರೀಸಮೂಹಮೆಲ್ಲಾ ನಿಂದುದು
ಪಿಂತೆ ಯಾತ್ರೆಯನೈದಿದುದ್ಧವನು ಬಲರಾಮ
ರಂತಿರ್ವರುಳಿದರಿಹ ಸಿರಿಯೆನಿಪ ಸೌಭಾಗ್ಯ
ಸಂತಾನ ಸೊಬಗು ನೆಲೆಯೆಂದೆಣಿಸುವರೆ ಪ್ರಾಜ್ಞರಜ್ಞಾನ ಬಿಗುಹೈಸಲೇ ೪೭

ಕಡಿವಡೆದ ತನು ಜಲಚರಗಳಾಗೆ ಯೆಲುವು ವಿಂ
ಗಡಿಸಿ ತೋರ್ಪಡಲು ಶಂಖಗಳಾಗೆ ರಕ್ತದೊಳ್
ತೊಡರ್ದ ಕರುಳ್ಗಳ್ ಪವಳಲತೆಯಾಗೆ ರುಧಿರಪ್ರವಾಹ ನದಿವೆರೆಗಳಾಗೆ
ಕೆಡೆದ ಭೂಷಣಮಣಿಗಳೇ ರತ್ನಮಾಗೆ ಬಲ್
ಮಡದಿಯರ ಹಾರವಮೆ ಘೋಷದಂತಾಗೆ ಪೊಸ
ಕಡಲುದ್ಭವಿಸಿದಂತೆ ತೋರ್ದುದಾ ರಣಭೂಮಿ ಯಾಮಮಾತ್ರದಲರಿದೆನೆ ೪೮

ಪಾರಮಿಲ್ಲದ ರುಧಿರಕೂಟದಿಂ ಕಡಲುಬ್ಬಿ
ಮೇರೆಯಂ ಮುರಿದುದೆನಿಸುತ್ತ ಜಲಮುಕ್ಕಿಯಾ
ದ್ವಾರಕಿಯನೊಳಕೊಂಡು ಹೆಂಗಳಿಹ ಬನವ ಮುಳುಗಿಸುತ ಬರಬರಲು ಕಂಡು
ನಾರಿಯರು ಹಮ್ಮೈಸಲನಿಬರನ್ನೊಡಗೊಂಡು
ನಾರಾಯಣಂ ಸಮುದ್ರವ ಕಳೆದು ಬಿಸಿಲಿನೊಳ್
ಘೋರ ಕಾನನದಲಲೆವುತಲೊಂದು ಮರದ ನೆಳಲಂ ಸಾರ್ದನೇವೇಳ್ವೆನು ೪೯

ಕ್ಷೇತ್ರ ತೀರ್ಥಂಗಳಂ ಭಜಿಸುತ ಸಲೀಲೆಯಿಂ
ಮೈತ್ರೇಯ ಮುನಿಪನೈತಂದನಲ್ಲಿಗೆ ಪದ್ಮ
ಪತ್ರಾಕ್ಷ ಕಷ್ಣಮಾಯಾರಚನೆಯಂ ನೋಡಿ ಪರಿಭವವ ಬೆಸಗೊಳಲ್ಕೆ
ಚಿತ್ರಲೀಲಾಮೂರ್ತಿ ತುದಿಮೊದಲನರುಹಿ ಲ
ಕ್ಷ್ಯೈತ್ರಯಂಗಳನನುಗ್ರಹಿಸಿ ವಿದುರೋದ್ಧವರು
ಯಾತ್ರೆಗೈದಿರ್ಪರವರಿಗೆ ಪೇಳ್ವುದೆಂದು ಸಂತೈಸಿ ಬೀಳ್ಕೊಟ್ಟನಂದು ೫೦

ಬಳಿಕಲಾ ವಾಸುದೇವಂ ಕುಟಿಲದುಗುಡಮಂ
ತಳೆದು ಕಡುಚಿಂತೆಯಿಂದುಮ್ಮಳಿಸುವಂದದಿಂ
ಬಳಲುತಂ ಪಾರ್ಥನಂ ಮೊಗನೋಡಿ ನುಡಿಸಿದಂ ಲೀಲಾಶ್ರುಜಲಮುಬ್ಬಲು
ಅಳಿದುದೈಶ್ವರ್ಯ ಪುತ್ರಾದಿಗಳ್ ಜಲಧಿಯೊಳ್
ಮುಳುಗಿದುದು ವಸತಿ ನಿಲಲೆಡಮಿಲ್ಲ ತರುಣಿಯ
ರ್ಬಳಸಿರ್ಪರಮಿತರಿನ್ನೆವಗೆ ಪೋಷಕರಾವರೇಗೈವೆವಿದಕೆಂದನು ೫೧

ದೇವ ಕೇಳ್ ನಿಮ್ಮೆಡೆಗೆ ಪುತ್ರ ಬಂಧುಗಳು ಭ
ಕ್ತಾವಳಿಗಳೈಸೆ ಸದ್ಬ್ರಹ್ಮಾಂಡಶತಗಳ್ಗೆ
ಠಾವು ನಿಮ್ಮುದರವಾಗಲು ನಿಮಗೆ ಬೇರೊಂದು ಠಾವೆತ್ತಣದು ನೋಡಲು
ಭಾವಿಸಲ್ ಬಯಲಿಂಗೆ ಹಾನಿವೃದ್ಧಿಗಳುಂಟೆ
ನಾವಜ್ಞರೆಂಮುದಂ ಕ್ಷಮಿಸುವುದು ಭವದಂಘ್ರಿ
ಸೇವಕರು ಗಡ ಧರ್ಮಜಾದಿಗಳ್ ಹಸ್ತಿನಾಪುರಕೆ ತೆರಳುವುದೆಂದನು ೫೨

ಇಂತಿರ್ವರಾಲೋಚನೆಯಲಿ ಸಂದಿರಲು ಕಾ
ಲಾಂತಕನ ಬಲದಂತೆ ವ್ಯಗತ್ತಲೆಗಳಿಂ ದಿ
ಗಂತರಾಳಗಳ ಮುಸುಕುತ ಮೃಗಕುಲಂಗಳನ್ನಟ್ಟುತ ಕಿರಾತಜನರು
ಮುಂತಳೆದು ಬರಲೊಂದು ಹರಿಣನಂ ತೆವರುತಂ
ಪಿಂತೆ ಮೀನಿನ ಗರ್ಭಗತಲೋಹ ತೊಡರಿದಂ
ಬಂ ತಳೆದ ಲುಬ್ಧಕಂ ಬಂದನಾ ಹರಿಪಾರ್ಥರಿಪ್ಪೆಡೆಗೆ ದೈವಕೃತದಿಂ ೫೩

ಬರವುದೇ ವಿಪ್ರನುಡಿಯಾ ಕೃಷ್ಣದೇವ ಸ
ಚ್ಚರಣಹಿಮ್ಮಡವೆ ಪುಲ್ಲೆಯ ಮುಸುಡಿನಂತೆ ನಿ
ಷ್ಕರುಣಿ ಲುಬ್ಧಕಗೆ ಕಾಣ್ಬಡಲು ತಾ ತೆವರಿದ ಕುರಂಗವೆಂನೆ ನಿಶ್ಚಯಿಸುತ
ಬರಸೆಳೆಯಲಸ್ತ್ರಮನ್ನದರಿನೊಳ್ ವಿಧಿಕೃತದ
ಸರಳೆ ಕೈಗಬ್ಬಿದಡೆ ಬಿಲ್ಲಿನೊಳ್ ತೊಡಚಿಯು
ಬ್ಬರಿಸಿ ಬಿಡಲ್ಪಡುವೆ ಶ್ರೀಕೃಷ್ಣಪದಕಮಲದೊಳ್ ನಾಟಿದುದು ಗರಿಸಹಿತದಿ ೫೪

ಅರಸ ಕೇಳಚ್ಯುತಂಗವನೀಸುರರ ನುಡಿಯು
ಪೊರೆವುದೇ ಸ್ವಪ್ರಯೋಜನವಾದ ದೆಸೆಯಿಂದ
ಧರೆಯ ಭಾರವನಿಳುಹಲೆಂದು ತಳೆದಿರ್ದ ಲೀಲಾತನುವ ವಿಪ್ರನುಡಿಯಿಂ
ಪರಿಹರಿಸಿ ಮೇಘಮುಸುಕನ್ನೊಡೆದ ಚಂಡ ಭಾ
ಸ್ಕರನಂತೆ ನಿಜವೆಳಗಿನಿಂ ಪೊಳೆದನನಿತರೊಳ್
ಕರಕೃತ್ಯಗಳ್ ಬಲಿದವಬಲಾಸಮೂಹದೊಳ್ ಪೇಳಲೇನಚ್ಯುತವನು ೫೫

ಜನಪ ಕೇಳ್ಳೈ ವೇಷಧಾರಕಂ ವೇಷಗಳ
ನನುವಿಡಿದು ತನ್ನಟನೆಗಳ ತೋರಿ ನೋಳ್ಪ ಜನ
ಮನಕೆ ಮೋಹಕಗೊಳಿಸಿ ಮುನ್ನಿನೊಲ್ ನಿಜಪುರುಷನೆನಿಪಂತೆ ಶ್ರೀಕೃಷ್ಣನು
ತನುವನೋಸರಿಸಲ್ಕೆ ಮೇಲುಕೃತ್ಯಂಗಳ
ನ್ನನುಗೈದು ನಾರಿಯರ ಕಲಕಲವ ನಿಲಿಸಿ ಪಾ
ರ್ಥನು ಕಿರಾತರನುರುಹಲೆಂದು ಬಿಲ್ಗೊಳಲಾಗ ನಿಸ್ಸತ್ವಮೇರ್ಗೊಂಡುದು ೫೬

ಮತ್ತೆ ಕೇಳ್ ಗಾಂಡೀವಮನ್ನೆರಡು ಕೈಗಳಿಂ
ದೆತ್ತಲಮ್ಮದೆ ಬಿಸುಟು ಖಡ್ಗ ಕೈಕಲ್ಗಳಿಂ
ದೊತ್ತರಿಸಲಾ ಲುಬ್ಧಕರ್ಮುಳಿದು ಗಾಂಡೀವಮಂ ಮುರಿದು ನಾರಿಯರನು
ಮುತ್ತಿ ನವಮಣಿ ಭೂಷಣಾದಿ ಪರಿಕರಗಳ
ನ್ನೆತ್ತಿಕೊಂಡಳವಳಿಸಿ ಪೋಗಲರ್ಜುನನು ದೇ
ವೋತ್ತಮನ ಮಹಿಮೆಗಾಶ್ಚರ್ಯಮಂ ತಳೆದು ತನ್ನೊಳಗೆ ತಾನಿಂತೆಂದನು ೫೭

ಪ್ರತಿಮೆಯಂ ಕುಣಿಸಿ ಹಿಗ್ಗುವನಂತೆ ಯೆನ್ನ ಬಲ
ಯುತ ಪರಾಕ್ರಮಿಯೆನಿಸಿ ಕುರುವೀರರನಿಬರಂ
ಹತಗೊಳಿಸಿದಾಟಮಂ ಮರೆದಹಂಕಾರದಿಂದಾನೆ ಭಟನೆಂದುಬ್ಬುವ
ಮತಿಹೀನನಾನಕಟ ಹುಲುಬೇಡರಳವಿಗೆನ್
ಯತನ ಮೆರೆಯದೆ ಪೋದುದೆನ್ನ ನಿಜಬಲಮೆಲ್ಲ
ಗತಚೇತನಾಂಗಕೆತ್ತಣ ಚೇಷ್ಟೆ ಹರಿವಿಲಾಸವನರಿವರಾರೆಂದನು ೫೮

ಇಂತು ಸುವಿವೇಕ ಧೈರ್ಯವನಾಂತು ಗೋಪಿಕಾ
ಸಂತತಿಯ ಕಲಕಲವ ಮಾಣಿಸುತ್ತನಿಬರಂ
ಸಂತವಿಡಿದೊಡಗೊಂಡು ಮುಂಮಾರ್ಗಮಂ ತೆರಳಲಲ್ಲಿ ನೀರ್ಕೊಳವೊಂದನು
ಕಾಂತೆಯರ್ಕಂಡು ಕಡುದಾಹದಿಂದಿಳಿದಿಳಿದು
ತಂತಮಗೆ ನೀರಡಸಲದರ ಸನ್ಮಹಿಮೆಯಿಂ
ತೊಂತಿರ್ದ ಹೆಣ್ಣುರೂಪಗಳಳಿದು ಮುನಿವೇಷಗಳನಾಂತರಚ್ಚರಿಯೆನೆ ೫೯

ಉದ್ದಿದ ಕಮಂಡಲುಗಳಿಂ ದಂಡುಗೋಲ್ಗಳಿಂ
ಪೊದ್ದ ಕಾಷಾಯಪಟ ಭಸ್ಮಲೇಪನಗಳಿಂ
ದದ್ದ ಸದೃಷಿಗಳತಿ ಪಾಸಮಂ ತಳೆದೊರ್ವರಿಂಗೊರ್ವರುಸುರದಾಗ
ಪೊದ್ದಿದ[1]ದಿಶೆ[1]ಗಳನ್ನದ ನೋಡಿ ವಿಸ್ಮಯದ
ಗದ್ದುಗೆಯನಡರಿ ಸಂಚಕಿತದಿಂದರ್ಜುನಂ
ಬದ್ಧಾಂಜಲಿಗಳಿಂದ ಹರಿವಿಲಾಸವನೆಣಿಸಿ ತಲೆದೂಗುತ್ತೈತಂದನು ೬೦

ಮೊದಲು ಯಾದವರು ಯಾಮದಲಳಿದ ಮಹಿಮೆಯು
ನ್ನೊದಗಿ ನೀರ್ ದ್ವಾರಕೆಯನೊಳಕೊಂಡ ಮಹಿಮೆಯು
ನ್ನದರ ಮೇಲಾ ಕೃಷ್ಣದೇವ ಲೀಲಾತನುವನುಳಿದು ಕಳಚಿದ ಮಹಿಮೆಯಂ
ಸುವತಿಯರಿಗನುಲರ್ಷಿಪದಮೇರ್ದ ಮಹಿಮೆಯುಂ
ಪದಿಲಮಲ್ಲದ ಕುಟಿಲ ಸಂಸಾರ ಮಹಿಮೆಯುಂ
ಹೃದಯದೊಳ್ ನೆನೆನೆನೆದು ತಳೆದ ವೈರಾಗ್ಯದಿಂದೊರ್ವನ್ನೈತರುತಿರ್ದನು ೬೧

ಇತ್ತ ಕೇಳೆಲೆ ಮಹೀಪಾಲ ಗಜನಗರದೊಳ್
ಪತ್ತಿದಪಶಕುನಗಳ್ ಪಲ್ಲವಿಸಿ ಧರ್ಮಸುತ
ನುತ್ತಮ ಶರೀರದೊಳ್ ದುರ್ಲಕ್ಷಣಂಗಳಡಿಗಡಿಗೆ ಕುಡಿವರಿವುತಿರಲು
ಪೊತ್ತ ದುಗುಡದಿ ಶಾಸ್ತ್ರವೇತ್ತರಂ ಬೆಸಗೊಳಲು
ತತ್ತಪೋಧನರೊರೆದರಿದುವೆ ಪರಸಾಧನವ
ವೃತ್ತಿಸೂಚಕಮಪ್ಪುದೆನೆ ಪಾರ್ಥನಾಗಮನಮಂ ಚಿಂತಿಸುತಲಿರ್ದನು ೬೨

ಜನಪ ಕೇಳ್ ಪೂರ್ವದೊಳ್ ತೀರ್ಥಯಾತ್ರೆಯ ಸೊಬಗ
ನನುವಿಡಿದ ವಿದುರ ಮತ್ತೈತರುತ ಮೈತ್ರೇಯ
ಮುನಿಪನಂ ಕಂಡು ತತ್ತ್ವಾರ್ಥಮಂ ಸಂಗ್ರಹಿಸಿ ಹಸ್ತಿನಾಪುರವ ಸಾರ್ದು
ಜನಪಮನ್ನಣೆಯನಾನುತೆ ಕೆಲವು ವಾಸರವು
ಮನೆಯಲಿದ್ದಾರು ತಿಳಿಯದ ತೆರದಿ ಬೋಧವಿಸಿ
ವನಿತೆಗಾಂಧಾರಿ ಧೃತರಾಷ್ಟ್ರರ ನ್ನೊಡಗೊಂಡು ತೆರಳಿದಂ ಗೋಪ್ಯದಿಂದೆ ೬೩

---

೬೦. 1. ನಿಜ

ಈ ನಿದಾನವನರಿಯದಂಥನೃಪ ತತ್ಸತಿಯ
ರೇನಾದರೆಂದು ತಿಳಿಯದೆ ಬಲಿದ ಚಿಂತೆಯಿಂ
ದಾನರೇಶ್ವರನೆಣಿಕೆಗೊಳುತಿರಲ್ಕರ್ಜುನಂ ಪಗಲ ಶಶಿಕಳೆಯನಾಂತು
ಯಾನವಂದಿಗರಿರದೆ ಕಾಲ್ನಡೆಗಳಿಂದೆ ದು
ಮ್ಮಾನಮು ನ್ನಂಗವಿಸಿ ಲಜ್ಜೆಯಿಂ ಕತ್ತಲೆಯ
ನಾನುತವು ಪಟ್ಟಣವನೊಳಪೊಕ್ಕು ಭೂಪನಂ ಕಂಡು ಕಂಬನಿಯಾಂತನು ೬೪

ಚರಣದೊಳು ತಲೆವಾಗಿ ಪೇಳ್ದನಾದಿಯಲಿ ಗಜ
ಪುರದಿಂದ ನಡೆದುದಂ ದ್ವಾರಕಿಗೆ ಸಾರ್ದುದಂ
ಹರಿ ತನ್ನ ಬರಗುಡದೆ ತಡೆದುದಂ ಮುನಿಶಾಪದಿಂ ಮುಸಲಮುದು ಕೆಡೆದುದಂ
ಹರಕೆಯಂ ನುಡಿದುದಂ ಯಾದವರ್ಮಡಿದುದಂ
ಸರಸಿಜಾಕ್ಷನು ತನುವನುಳಿದುದಂ ವಲ್ಲವೀ
ತರುಣಿಯರ್ಮುನಿಪದವ ಪಡೆದುದಂ ತಾನೊರ್ವನೈತಂದ ಸಂಗತಿಯನು ೬೫

ಈ ವಿವರಮನಿತುವಂ ಕೇಳ್ದು ವಿಮಲ ವಿರಾಗ
ಭಾವಮಂ ಬಲಗೊಂಡು ನುಡಿದನೆಮ್ಮೈವರಂ
ಕಾವ ತತ್ಕಾರ್ಯಕೆನೆ ತನುವಿಡಿದು ಭೂಭಾರಮನ್ನಿಳುಹಿ ನರರಂದದಿ
ಭಾವಮ್ಮೈದುನರೆನುತಲೊಡನಾಡಿಯಾಗಿರ್ದ
ದೇವದೇವಂ ತನುವ ಬಿಸುಡಲೆಮ್ಮರಿಕೆಯಿ
ನ್ನಾವ ಘನವಹುದು ಬರಿದೇ ವೊಡಲ ಪೊರಲೇಕೆ ಕಳೆವುದೇಲೇಸೆಂದನು ೬೬

ಇಂತು ಧೈರ್ಯವ ಬಲಿದು ಬಗೆಗೊಂಬ ಪರಗತಿಯ
ಚಿಂತೆಯಿಂ ರಾಜ್ಯಭೋಗಾಕಾಂಕ್ಷೆಯಂ ನೂಕಿ
ಕುಂತಿಯರ್ಗರುಹಲಾ ಮಾತೆಯೊಡಬಡಲು ಭೀಮನ ನೋಡಿ ವಿನಯಮಿಗಲು
ಸಂತವಿಡುವುದು ರಾಜ್ಯಭಾರಮನ್ನೆನೆ ಕೀಚ
ಕಾಂತಕಂ ನುಡಿದನೀ ಚಪಲಭೋಗೇಚ್ಛೆಯ
ನ್ನಾಂತು ಹಿಗ್ಗುವನಲ್ಲವೆನಗೆ ದೊರೆತಸಮೆ ಭವದಂಘ್ರಿ ಸೇವೆಗಳೆಂದನು ೬೭

ಮತ್ತೆ ಮಾದ್ರೀಜರಂ ಕರೆದು ಮನ್ನಿಸಿ ನೀವು
ಪತ್ತುವದು ಸಿಂಹಪೀಠವನೆನೆಲ್ ನುಡಿದರೆವು
ಗಿತ್ತಿರುವ ಭವದಂಘ್ರಿ ಪರಿಚರ್ಯ ಚಿರರಾಜ್ಯಭಾರಮಂ ನಿರ್ದಯದೊಳು
ಕಿತ್ತು ಬಿಸುಟೇ ಚಪಲವಹ ರಾಜ್ಯಭಾರಮಂ
ನೆತ್ತಿಯೊಳ್ ಪೊರಿಸಿ ಪೋದಪೆವೆಂಬ ಭಾವಮು
ನ್ನತ್ತಮರು ಮೆಚ್ಚುವರೆ ನಿಮಿಷಮಗಲಿರ್ದು ಜೀವಿಸುವೆವೆಂತಕಟೆಂದರು ೬೮

ಜನಪ ಕೇಳ್ವೆವರೊಂದೇ ಮತವ ವಹಿಸಿ ನಿಜ
ಜನನಿಸಹಮಾಗಿ ನಿಶ್ಚಯಿಸಿ ಮೇಲೊಂದು ಶುಭ
ದಿನ ಸನ್ಮುಹೂರ್ತದೊಳ್ ವಿಪ್ರ ಕರಕಲಶ ಮಂತ್ರೋದಕದಿ ನಿಗಮಂಗಳ
ನಿನದಂಗಳಿಂ ತೂರ್ಯ ನಾದ್ಯ ಮಂಜುಲತರ
ಸ್ವನಗಳಿಂ ದಾನ ದಕ್ಷಿಣೆಗಳಿಂದಭಿಮನ್ಯು
ತನಯ ಧಾರ್ಮಿಕ ಪರೀಕ್ಷಿದ್ರಾಜಗಂದು ಪಟ್ಟಾಭಿಷೇಕವ ಗೈದರು ೬೯

ಉತ್ತರೆಯು ಕರೆದು ಮನ್ನಿಸಿ ನಿನ್ನ ತನಯನಿಂ
ಗುತ್ತರೋತ್ತರಮಪ್ಪುದೆಂದು ಹರಕೆಗಳನಿ
ತ್ತುತ್ತರ ಪಥಕ್ಕೆ ತೆರಳಿದರಾಗ ಸಾಮ್ರಾಜ್ಯಮೇ ಭವತ್ಪಿತಗೊದವಲು
ಚಿತ್ತದೊಳ್ ಶೇಷಗಿರಿ ವರ ವೇಂಕಟೇಶ ಸ
ಚ್ಚಿತ್ಪೂರ್ಣ ಕೌಂಡಿಣ್ಯ ಗುರುವರನ ಭಾವಿಸುತ
ಚಿತ್ತಶುದ್ಧಿಯಲೆಸಗಿದಂ ರಾಜ್ಯಭಾರಮಂ ಪೂರ್ಣಧರ್ಮದ ಮೇರೆಯಿಂ ೭೦

ಅಂತು ಅಧ್ಯಾಯ ೫ ಕ್ಕಂ ಪದನು ೪೦೪ ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ.

೬. ಪರೀಕ್ಷಿದ್ರಾಜನು ಕಲಿಯನ್ನು ಬಂಧಿಸಿದ್ದು

ಸೂಚನೆ :

ಇಂದುಕುಲವರ ಪರೀಕ್ಷಿನ್ನೃಪಂ ದೇಶಂಗ
ಳಂದವಂ ನೋಡಿ ನಿಜಸತ್ವದಿಂ ಕಲಿಯನುರೆ
ಬಂಧಿಸಿ ಮಹಾತಿಶಯ ಧರ್ಮಂಗಳನುದ್ಧರಿಸಿ ಭೂಲಲನೆಯಂ
ಪೊರೆದನು

ಭೂಪಾಲ ಕೇಳು ಕರಿಪುರದ ಸಾಮ್ರಾಜ್ಯಮು
ನ್ನಾ ಪಾಂಡವರ್ ಪರೀಕ್ಷಿನ್ನೃಪತಿಗಾಗ ಸು
ಸ್ಥಾಪನೆಯನೆಸಗಿ ತೆರಳಿದರಿತ್ತಲವನಿಪಂ ರಾಜ್ಯಮಂ ಗೈವುತಿರಲು
ದೀಪಿಸುವ ನವರತ್ನಗಣಕೆ ರಸಮುಮುರಿ ಮು
ತ್ತಾ ಪರಿಯಲೇ ಸುಗಂಧವು ಘಟಿಸಿದಂದದಿಂ
ದಾ ಪುಣ್ಯನಿಧಿಯುಧಿಷ್ಠಿರನ ಸದ್ಗುಣಮಣಿಗೆ ರಸ ಗಂಧಮೇರ್ದಂತಿರೆ ೧

ಶಿವನನೆಣಿಸುವಡೆ ನಗಜಾಧಿಪತಿಯಪ್ಪ ವಾ
ಸವನ ಬಗೆಗೊಳ್ಳಲು ನಭೋಗರತಿಯೆನಿಪ ಕೈ
ರವಬಂಧುವೆಂದಿಗು ಸದೀನಹಿತನೆನಿಸುತಿಹ ವಿಪ್ರದಂ ಶ್ರೀಕೃಷ್ಣನು
ನವ ಸುನಿಧಿವರನಪ್ಪ ವಿತ್ತೇಶ ಭಾಸಿಪಾ
ರ್ಣವನು ಜಡಹೃದಯನಹನಾ ಪರೀಕ್ಷಿದ್ಧರಾ
ಧವನೇ ಗಜಾಧಿಪತಿ ಭೋಗಮತಿ ದೀನಹಿತದಾತ ವಸುವರನಜಡನು ೨

ಮೆರೆವ ವನಕೇಳೀ ವಿಹಾರಿ ಗೋತ್ರೋದ್ಧಾರಿ
ಪರಿಕಿಸಲ್ ಭೂಭಾರಧಾರಿ ಪ್ರಹ್ಲಾದ ಹಿತ
ಕರನು ಬಲಿನೃಪ ರಾಜ್ಯಹಾರಿ ದುಷ್ಟರ ಭೂಭುಜಾರಿ ಕೋದಂಡಧಾರಿ
ನಿರುತ ವಸುದೇವ ಸಂತಸಕಾರಿ ಸಲೆ ದಿಗಂ
ಬರ ಭರಿತ ಘನಯಶೋದ್ಧಾರಿ ತುರಗಾರೂಢಿ
ನಿರುಪಮನೆನಿಸಲ್ ಹರಿದಶಾಕೃತಿಯನಾನುತವು ಜಸವಡೆದನಾ ಭೂಪನು ೩

ತಪನತೇಜಸಿಯಪ್ಪ ತಪನತೇಜಸಿಯೆನಿಸ
ನುಪಮಾ ರಹಿತನಾಗಿಯುಪಮಾರಹಿತನೆನಿಪ
ನಪರ ಧಾರ್ಮಿಕನಾಗಿಯಪರಧಾರ್ಮಿಕನೆನಿಸ ಘನನಾಗಿ ಘನನೆನಿಸನು
ವಿಪುಲಕಾಮದನಾಗಿ ವಿಪುಲಕಾಮದನೆನಿಪ
ನೃಪತಿಪುಂಗವನಾಗಿ ನೃಪತಿಪುಂಗವನೆನಿಸ
ನಪರಿಮಿತದಾನ ವಿಪ್ರದನಾಗಿ ದಾನವಿಪ್ರದನೆನಿಸಿಸನವನೀಶನು ೪

ವಿವರಿಸಲ್ ಹರಿಪದಾಶ್ರಿತಮಿತ್ರ ತಾನಾಗಿ
ಕುವಲಯಾನಂದಕರ ರಾಜ ತಾನಾಗಿ ವೈ
ಭವ ಸುಮಂಗಳನಾಗಿ ಸಕಲಸದ್ಗುಣ ಸೌಮ್ಯನಾಗಿ ಕವಿಜೀವನಾಗಿ
ಭವನಜನರನ್ನಲಯಿಸಲ್ ಮಂದಚರನಾಗಿ
ಹವಣೆನಿಂ ದೋಷಾಕರರ ಪೀಡಿಸುವನಾಗಿ
ಯವನಿಯೊಳ್ ಘನಕೇತುವಾಗಿಯೊಂಬತ್ತು ಗ್ರಹಮಹಿಮೆಯಿಂ
ಶೋಭಿಸಿದನು ೫

ನಟಿಗಳೊಳ್ ಲಯುಬದ್ಧಗತಿಗಳಾ ದ್ವಿಜವೈರ
ಪಟು ದಂದಶೂಕದೊಳ್ ಸಂದೇಹ ನಿಗ್ರಹವು
ಹಠಯೋಗಸರಣಿಯೊಳ್ ಪ್ರಿಯರಹಿತ ಭಾಷೆಗಳ್ ವಾರನಾರಿಯರೆಡೆಯೊಳು
ಚಟುಲ ಸಂಕಲೆಬಂಧಗಳ್ ರತಿಕಲಾಪದೊಳ್
ಕಠಿನತ್ವ ಕರಜಹತಿಗಳ್ ಸತೀಕುಚಗಳೊಳ್
ಕುಟಿಲಗತಿಗಳ್ ಸರಿತ್ಕುಲದಲಲ್ಲದೆ ಸಲ್ಲದಾ ನೃಪಾಲನ ಮಹಿಯೊಳು ೬

ನಗವೈರಿ ಗಜಮೆ ವಿಸ್ಮಯದಿ ತಲೆದೂಗೆ ಪ
ನ್ನಗನಾಥನವನಿಯನ್ನಂಟೆ ತಲೆವಾಗೆ ಶಿವ
ನಗದ ತನುಕಾಂತಿ ತಾ ದುರ್ವರ್ಣವಾಗೆ ಶುಭ್ರಾಂಶುಕಳೆ ನಶಿಯಸಾಗೆ
ನಗಧರ ಕರಾಯುಧಮೆ ಮನೆಮನೆಗೆ ಕೂಗೆ ಸುರ
ನಗದಿಂ ಕೆಡೆದು ಗಂಗೆ ಮೂವಟ್ಟೆಯಾಗೆ ನೆಲ
ನಗಲಮಬ್ಬದೆ ಮೂರು ಲೋಕಮಂ ಮುಸುಕಿದುದು
ಕೀರ್ತಿಯಭಿಮನ್ಯುಸುತನ ೭

ಶಾರದೆಯು ಬಾಯೊಳಗಡಂಗಿದಳ್ ಹಂಸೆಗಳ್
ನೀರ ಪೊಕ್ಕವು ಮಲ್ಲಿಕಾಕುಂದ ಕುಸುಮಗಳ್
ನಾರಿಯರ ಮರೆಗೊಂಡು ಕಬರಿಯೊಳ್ ತೊಡರಿದವು ವಜ್ರಗಳ್ ಪುಡಿವಟ್ಟವು
ಕ್ಷೀರಮುದು ನೀಲ ಮರೆಗೊಂಡು ಪೆಸರಂ ಮರಸಿ
ಸಾರಿದುದು ಗಧಿನಾಮಮುಂ ಶಿವನು ಭೀತಿಯಿಂ
ಬೇರಿರದೆ ಸತಿಯುಸಂಗದಿತಳೆದನವನಿಪನ ಕೀರ್ತಿಯುಬ್ಬರತೆಗದುರಿ ೮

ಸುರರ ಭೂಸುರರ ಸುಮನೋಹರವೊ ಕರಿಪುರವೊ
ಭರಿತಸುಂದರಸಾರ ಭರಣಿಯರೊ ತರುಣಿಯರೊ
ಸರಸವಿಧ್ಯಾವಿನಯದಾಗರವೊ ಪುರಜನವೊ ವನಗಳೋ ಮೋಹನಗಳೋ
ಪುರಲಕ್ಷ್ಮಿಯಳ ಸಾಲುರದನಗಳೊ ಸದನಗಳೊ
ಪರಸೈನ್ಯವನದವಕೃಶಾನುಗಳೊ ಸೇನೆಗಳೊ
ಪರಿಕಿಸುವಡರಿದೆನಿಸಲಿಳೆಯರಸಸಾಮ್ರಾಜ್ಯ ಸಾಯುಜ್ಯಪದಮೆನಿಸಿತು ೯

ಜನಪ ಕೇಳಿಂತು ಸದ್ಧರ್ಮಪದ್ಧತಿಯು ದೊರೆ
ತನದಿ ಸಂದಿರಲು ಕಲಿಪುರುಷ ಕಾಲಾಟಗಳ್
ದಿನದಿನಕೆ ಬೆಳೆದು ಮುಂದೋರ್ವ ತತ್ಕುರುಹಗಳ್ ಕಾಣ್ಬಡಲ್ ಕಡುಚಿಂತೆಯಿಂ
ಮುನಿಕುಲೋತ್ತಮರ ಬೆಸಗೊಂಡನೀ ಹದನನೆಲೆ
ಚಿನುಮಯಾತ್ಮರಿರ ಕೇಳಾನು ದುರ್ವೃತ್ತಿಗಳ
ನನುವಿಡಿದುದಿಲ್ಲ ಗಡ ವರ್ಣಕರ್ಮಗಳ ಲೋಪಾಂಕುರಮಿದೇಕೆಂದನು ೧೦

ಧರಣೀಶ ಕೇಳು ಕಲಿಯುಗಮಿದಕ್ಕರಸು ಕಲಿ
ಪುರುಷನವನಿನ್ನೆಗವು ಕೃಷ್ಣಭಗವತ್ಪದ
ಸ್ಪರುಶಮೀ ಧರೆಗೆ ಘಟಿಸಿದ್ದ ದೆಸೆಯಿಂದೆ ತಲೆದೋರದಣಗಿದ್ದನಿಂದು
ಹರಿಯು ಲೀಲಾವತಾರವನುಳಿದನಾಗಲಿಳೆ
ತೆರಪಾದುದವನಾಳಿಕೆಗೆ ಭೀತಿಯುಳಿದು ಸಂ
ಚರಿಸುತಿಹನೀಗಲವರಿಂ ವರ್ಣಧರ್ಮಗಳ್ ಕುಂದುದೋರ್ದಪುದೆಂದರೂ ೧೧

ದೇಶದೊಳ್ ನಡೆವ ದುಶ್ಚರ್ಯದೋಷಗಳು ತ
ದ್ದೇಶಾಧಿಪತಿಗೆಂಬ ನಿಗಮಸಮ್ಮತಿಗಳಿಂ
ದೋಷಭಾಜನನು ತಾನಾದೆ ಗಡ ಪರಿಕಿಸಲ್ ರಾಜ್ಯಾಧಿಪತ್ಯ ಸಿರಿಗೆ
ವಾಸುದೇವನೆ ಕರ್ತನವನನುಜ್ಞೆಯ ಮೆರೆವ
ದಾಸ ತಾನಾಗಿರಲ್ ಕಲಿಕುಹಕಮಂ ನಿಲಿಸ
ಲೇಸು ಪಿರಿದೆಂದು ಧೈರ್ಯವನಾಂತು ರೋಷದಿಂದಾ ಭೂಪನಿಂತೆಂದನು ೧೨

ಆರರೆ ಕೇಸರಿಯ ನಿಜಮಂದಿರದಿ ಹುಲುಗಜದ
ಮರಿಗೆ ಘನಕೇಳೀವಿಲಾಸ ಗಡ ಪುಲಿಗಳೊಳ್
ಸರಸಮಂ ಶಶಶಾಬಕಂ ಬಯಸಿದಂತಾದುದೀ ಕಲಿಯ ಕೃತ್ಯಂಗಳು
ಹರಿಯ ಲೀಲಾತನುವಡಂಗಲೇನಖಿಲರೊಳ್
ಭರಿತವಾಗಿಹುದಲಾ ತಚ್ಚೇತನಾಂಶ ನಿಜ
ಶರಣರೆನಿಪಾಡಂಬರದ ಬಿಗುಹದೇಕೆವಗೆ ಜಡನುಲುಹನಡಗಿಸದಡೆ ೧೩

ಕಲಿತವಕಮಂ ಮುಂದುಗೆಡಿಸದಿರೆ ವರ್ಣಸಂ
ಕಲಿತವೇಗೊಂಡಡಾ ದೋಷದಿಂ ನಿಜವಂಶ
ಕಲಿತಸತ್ಕೀರ್ತಿವಾಸಿನಿಗೆ ತಲೆಗುತ್ತಹುದು ಹರಿಚರಣ ಶರಣರಾದ
ಕಲಿತನವದೇಕೆಮಗೆ ಸಕಲಸದ್ವಿದ್ಯೆಗಳ
ಕಲಿತು ಫಲವೇನಿನ್ನು ಭಾವಿಸಲ್ ಶಶಿವಂಶ
ಕಲಿತ ಪಾರಂಪರೆಯ ಭೂಪರಾಜಿಯೊಳೆಮ್ಮನೆಣಿಸಲೇಕಕಟೆಂದನು ೧೪

ಮಂತ್ರಮನ್ನಿಂತು ನಿರ್ಣೈಸಿ ಪುರರಕ್ಷಣೆಗೆ
ಮಂತ್ರಪ್ರಧಾನರಂ ಬಲಿದು ಕಲಿ ನೆಗಳಿದ ಕು
ಮಂತ್ರಮಂ ಕಾಂಬೆನೆಂಬಾತುರತೆ ಮುಂಕೊಳಲ್ ಸಚರಾಚರವ ಕುಣಿಸುವ
ತಂತ್ರಿ ಹರಿಯೆಮ್ಮನಾಡಿಸನಲ್ಲದೆವಗೆ ನಿಜ
ತಂತ್ರವೆತ್ತಣದೆಂಬ ನಿರಹಮ್ಮಿನಿಂದೆ ತಳ
ತಂತ್ರಮಂ ಹರಹಿದಂ ಚತುರಂಗಬಲದ ಕಲಕಲದ ಸಂದಣಿ ಮೊಳಗಲು ೧೫

ಪೊಳೆವ ಪೊಂಬರಿಗೆಯೆಂದೆಂಬ ರವಿಬಿಂಬಮುಂ
ಬಳಿಕ ಧವಳಚ್ಛತ್ರಮೆಸೆವ ಶಶಿಬಿಂಬಮುಂ
ನಳನಳಿಪ ರಥದ ಪೊಂದಳುಕೆಂಬ ನಕ್ಷತ್ರ ಮಾಲೆಯುಂ ಮದಕರಿಗಳ
ಬಳಗವೆನಿಸುವ ಮೇಘಮುಂ ಭಟರ ಕರವಾಳ
ಝಳಪೆಂಬ ಮಿಂಚು ಕಾರ್ಮುಕಶಕ್ರಚಾಪಗಳ
ತಳೆದಭ್ರ ಮಂಡಲವು ಭುವಿಗಿಳಿದುದೆಂಬಂತೆ ಪೇರ್ಬಲವು ಕಂಗೊಳಿಸಿತು ೧೬

ಮುಗಿಲು ತನ್ನೊತ್ತಿಗೈತಂದ ಬಳಿಕಾನು ತೆ
ನ್ನುಗಿಲ ಬಗೆಗೊಂಬುದಿನ್ನುಚಿತಮೆಂದವನಿಯು
ಜ್ಜುಗದಿಂದೆ ನಡೆದುದಾಕಾಶ ಮಂಡಲಕೆನಲ್ ಪದಹತಿಯಕೆಂದೂಳ್ಗಳೇ
ಗಗನಮಂ ಮುಸುಕಲುಭಯರ್ಗೆ ಸನ್ಮೈತ್ರಿಯುಂ
ನೆಗಳಿತನುರಾಗಮೆಂಬಂತೆ ದಶದಿಕ್ಕುಗಳ್
ಹೊಗರಿನಿಂ ಕೆಂಪೇರ್ದವದ್ರಿತರುಚಯಮೇಕಮಾಗಿ ದೂಳ್ಗವಿತೆಯಂದೆ ೧೭

ಇಂತು ಸನ್ನಾಹದಿಂ ಪೂರ್ವಾಭಿಮುಖಮಾಗೆ
ಮುಂ ತೆರಳಲೆಲ್ಲಿಯುಂ ಸಾಲುವೃಕ್ಷಗಳೆರಡು
ಹಂತಿಯಿಂದಾವೃತಲಸದ್ವೇದಿಕೆಗಳೊಡನೆ ತಂಪುನೆಳಲಿಂಪಿನಿಂದೆ
ಸಂತತ ಸುಫಲಪುಷ್ಪಮೆಸೆವ ಕೈಗಾಣಿಕೆಯು
ನಾಂತ ಶಾಖೆಗಳಿಂದೆ ತಲೆವಾಗಿ ತದ್ಗತಶ
ಕುಂತಕಲಕಲದಿ ಸನ್ನುತಿಗೈದು ಕೈವಾರಿಸುವವೆನಿಸಿ ತೋರ್ದುದಂದು ೧೮

ಸಾಲುವೃಕ್ಷಂಗಳೆಡೆಯಡೆಯಲ್ಲಿ ಸುಪ್ರಪಾ
ಶಾಲೆಗಳ್ ರಂಜಿಸಿದವಪಡರಿನೊಳ್ ನೀರೆರೆವ
ಲೋಲಲೋಚನೆಯರಂಗಚ್ಛವಿಸರಿತ್ತಟವನೇರಲಿನ್ನೆಟಮೊದಗಡೆ
ಆಲಿಮನಗಳ್ ಸನೆದು ಭಂಗದೊಳ್ ಮುಳುಮುಳುಗಿ
ತೇಲಿ ಮುಗುಳೆದ್ದು ಘಾಸಿಯಲಿ ಹೃತ್ತೃಷ್ಣೆಯಿಂ
ಬಾಲೆಯರ ಕೈಸೀರ್ಗೆ ಬಾಯ್ಪಿಡುವರೆನಿಸಿರಲ್ ನೀರ್ಗುಡಿವರಧ್ವ ಜನರು ೧೯

ಕೃತ್ತವಕ ಪರವಧೂಗತಮಾಗಿ ಮೇಲಸ್ಯ
ವೃತ್ತಿಗಳ್ ತೋರ್ಪಡದೆ ಪರರೀವ ಜೀವನವ
ತುತ್ತುಗೊಳುತಿರ್ದಡುಂ ಲಕ್ಷ್ಯಮುಪರತಿಯೊಳೆರಗಿರ್ಪ ಯೋಗಿಗಳಂದದಿ
ಮತ್ತಗಮನೆಸುರೆರೆವ ಜಲ ಮುಗಿದಡುಂ ಬೆರಗಿ
ಲೆತ್ತುಮೊಗಮನ್ನಿಳಿಸದರ ನೋಡಿ ನಸುನಗುವ
ವೃತ್ತ ಕುಚೆಯುರ ದಂತರುಚಿ ಮಸಗಿ ಭೂತಿಲೇಪನಮೆನಿಸಿತವರಂಗಕೆ ೨೦

ಆ ಸತಿಯುರಂಗಸಂಗಕೆ ಬಯಸಿ ಬಾಯ್ದೆರೆವು
ದೈಸೆ ಜಲತೃಷ್ಣೆಯಿಂ ಬಾಯ್ದೆರೆವುದಲ್ಲ ನೆರೆ
ವಾಸೆಯಿಂ ಬಾಯಿ ನೀರ್ಗುಡಿವುದಲ್ಲದಡೆರೆವ ನೀರ್ಗುಡಿವ ಪರಿಯಿದಲ್ಲ
ಭಾಸಿಸುವ ಕುಚಕಲಶಮಂ ನೋಡಲೆತ್ತಿರುವ
ರೈಸೆ ಮೊಗಮಂ ನೀರಿಗೆತ್ತಿದಿರವಲ್ಲ ತನು
ವಾಸನೆಗೆ ತಲೆದೂಗುವಂದಮಲ್ಲದೆ ನೀರು ಸಾಕೆಂಬುದಲ್ಲಿ ನಿಸಿತು ೨೧

ನೀರೆರೆಯುತಿತ್ತಿದ ಭುಜಂಗಳಲೆಯಿಂ ಸೆರಗು
ಜಾರಲೆಳೆ ಕಂಚುಕಗಳಂ ನೂಕಿ ಮುಂಬರಿದ
ತೋರ ಕುಚಗಿರಿಮಧ್ಯದಿರುಬಿನೋಳ್ ಕೆಡಹಿದಂ ಮದನಲುಬ್ಧಕನು ಮಸಗಿ
ಪಾರಿಗರ ದೃಷ್ಟಿಹರಿಣಂಗಳಂ ಮರಳದೋಲ್
ನಾರಿಯುರ ತನುಗಂಧ ಸುತ್ತುವಲೆಯಿಂ ಬಿಗಿದು
ಮಾರ ಶಬರಾಸ್ತ್ರ ಭಯದಿಂ ಮರಳದಣಗಿಪ್ಪವಲ್ಲಿ ಕಣ್ಬುಲ್ಲೆಗಳಲೇ ೨೨

ಕನಕವಲ್ಲಿಯೊಳು ಕವಲೊಡೆದ ಲಸದುಪಲತೆಯ
ಕೊನೆಯ ಚಿಗುರಿನಲೇರ್ದ ಜೇಂಗೊಡನು ಶುಕತುಂಡ
ಮೊನೆಸೋಂಸಿಂದೊಡೆದು ಸುರಿವ ಮಧುಧಾರೆಯೆನೆ ಜಿಗುರುಗೈವಿಡಿಯಲೆಸೆವ
ವಿನುತ ಪೊಂಗಲಶದಿಂದೊರೆವ ಜಲಧಾರೆಯೊಳ್
ವನಜಾನನೆಯರ ಕೈಗೆಂಚು ಬಿಂಬಿಸಲು ಮಧು
ವಿನ ತೆರದಿ ತೋರ್ದುದಂಗನೆಯರಧರಾಮೃತಕೆ ಸೋತು ಪರಿವಂದಮೆನಿಸಿ ೨೩

ಘನಸಿಂತಂಬಾದ್ರಿಗಳನಡರಿ ತೊಡೆಯೆಂಬ ಕಾಂ
ಚನಗದಳಿಗಂಭಗಳ ತೊಡರಿ ಜಘನಸ್ಥಾನ
ಕನಕಸೈಕತರಾಶಿಗೆವರಿ ಮೂವಳಿಲತೆಯ ಪೊದರಿನೊಳ್ ಪೊಕ್ಕು ಕವರಿ
ವಿನುತ ಸುಳಿನಾಭಿ ಮಡುಹಂ ಕದಡಿ ವಕ್ಷೋಜ
ವನಜಕುಟ್ಮಲಗಳಂ ಸವಟಿ ತರುಣಿಯರ ಜ
ವ್ವನವನದಿ ವಿಹರಿಸುವ ವಿಟರ ಹೃನ್ಮದಗಜವ ಮರಳಿಸುವುದರಿದೆನಿಸಿತು ೨೪

ಮೆರವ ಪೊಸ ಮಿಸುನಿವಣ್ಣದ ಪಳಿವ ವೈವಳಿಗೆ
ಧರಿಸಿರ್ಪ ಮೃದುವಸನಮುಹಿಮೆಯಿಂದಂಗಾಂಗ
ಕುರುಹು ಕಾಣ್ಬುಡುತಿರಲ್ ಸೀರ್ಗುಡಿವ ಪಥಿಕರೆತ್ತಿದ ಮುಖದಲದನು ನೋಡಿ
ವಿರಹವಾವಹವಾಗಲಾ ನಿದರ್ಶನಗಳ
ನ್ನರುಪುತಿಹವಕ್ಷಿಭಾವಗಳೆನಿಸಲಬಲೆಯರ
ಸರಸಚೇಂದುಟಿಯ ರುಚಿ ಬಿಂಬಿಸಿದ ಕೆಂಚೆಸಿಂ ತೋರ್ದುವಾ ವಿಟಗಣ್ಗಳು ೨೫

ಚಿತ್ತಜನ ಕಗ್ಗೊಲೆಗೆ ತಲೆಗೊಡಹುವಂದಮೆನೆ
ವೃತ್ತಕುಚಸುಂದರಕೆ ಮಸ್ತಕವನೊಲೆವರೆನೆ
ಕೆತ್ತ ಮೋಹಾವೇಶದಿಂ ತೂಗುತಿರ್ಪರೆನೆ ಕಾಮುಕಂಪನಗಳಡಿ
ಹೃತ್ತವಕದಿಂದದುರುತಿರ್ಪರೆನೆ ವದನಗಳ
ನೆತ್ತಿ ವಾಂಛೆಗೆ ಸನ್ನೆಗೈವರೆನೆ ಮಾರ್ಗಣ
ರ್ನೆತ್ತಿಯನ್ನಲುಗಿಸುವರೆರೆವ ಜಲ ಸಾಕೆಂದುಸುರ್ವ ತದ್ವ್ಯಾಜದಿಂದೆ ೨೬

ತಂಪು ನಿರ್ಮಲತೆ ಮಾಧುರ್ಯ ಪರಿಮಳಗಳಿಂ
ದಿಂಪಾದ ಸಲಿಲಮನ್ನೀಂಟಿ ಮಲಯಜ ಪಂಕ
ಮಂ ಪೂಸಿ ಸದ್ವ್ಯಜನಪವನನಿಂ ಪರಿಸೇವೆವಡೆದು ವಿಶ್ರಮವ ಪಡೆದು
ಚಂಪಕಾದ್ಯಮಿತ ಪೂಮಾಲೆಗಳನಾಂತು ಮಿಗೆ
ಸೊಂಪುವಡೆದೈದುತಿಹರಧ್ವಗರ್ತಚ್ಚೀಲ
ಮಂ ಪರೀಕ್ಷಿತನೃಪಂ ನೋಡಿ ಸಂತೋಷಮನ್ನಾನುತವು ಮುಂದಳೆದನು ೨೭

ಬರಬರಲು ಮುಂದೆ ದೇಶಂಗಳೊಳಗೆಡೆಯೆಡೆಯು
ಲಿಪುವನ್ನಸತ್ರಗಳ್ ಮಾರ್ಗಧಾವತಿಗಳಿಂ
ಬರುಬರುವ ಪಥಿಕರ್ಗಿದಿರ್ವಂದು ಸಮ್ಯಗುಪಚಾರ ಸತ್ಕಾರ ಮಿಗಲು
ಕರೆಕರೆದು ಮತ್ತವರ ವಾಂಛಾನುಸಾರದಿಂ
ಪರಿಪರಿಯ ಭಕ್ಷ್ಯಭೋಜ್ಯಂಗಳಿಂ ಸಂತೈಸಿ
[1]ಪಿರಿಪಿರಿದು ನೀರೆಣ್ಣೆಗಳನೆರೆವುತಿ[1]ನಿಗೊಳಿಪ ಧರ್ಮ ಶಾಲೆಗಳೆಸೆದವು ೨೮

ಇಳೆಯೊಳೆಲ್ಲೆಲ್ಲಿಯುಂ ಎಡೆವಿಡದ ಸಂಪೂರ್ಣ
ಬೆಳೆಗಳಿಂ ಪೂಗಬನ ಪೂದೋಟ ಕೊಳಗಳಿಂ
ದಳವಟ್ಟ ಕೆರೆ ತೊರೆಗಳಮಿತ ಪ್ರಜಾಳಿಯಿಂದೆಸೆವ ಗೋವಿಂಡಿಸಿಂದೆ
ಬಳಸಿರಲ್ ಭೂವನಿತೆ ಪಸುರುಡಿಗೆಯನ್ನುಟ್ಟು
ನಳನಳಿಪ ಪೂಗಳಂ ಮುಡಿದು ಮುಂಬರಿವ ಹೆ
ಜ್ಜಳದಿಂದೆ ನಿಜನಾಥನನ್ನಿದಿರುಗೊಂಬ ಪರಿಯೆಂಬಿನಂ ತೋರ್ದುದಂದು ೨೯

ಭುವನಮೂರಂ ಗೆಲ್ವ ಬಿಲ್ಲೆಂದು ಮನ್ಮಥಂ
ಗವಸಳಿಸಿ ಮೇಲ್ಗಟ್ಟ ಕಟ್ಟ ಬೈಚಿಟ್ಟಡಂ
ಶಿವಗಣಗಳುಪಟಳವು ಬಿಡದಾದುದೆನೆ ಕೊರ್ವಿ ವೆಳೆದ ರಸದಾಳಿಗಳ್ಗೆ
ಅವುಚಿರ್ಪ ಸೋಗೆಯಿಂ ಕಟ್ಟುಗಳ್ವೆರಸಿ ಪ
ಲ್ಲವಿಸುತಿರಲಾವಗಂ ಜಂಬುಕಂಗಳ್ ಪೊಕ್ಕು
ಕವರಿ ಪೀರ್ದಪವು ದೈವದ್ವೇಷವಾರಿಗುಂ ಸಸಿನಮೆನಿಪುದೆ ಭುವಿಯೊಳು ೩೦

ಭರ್ಗನೇತ್ರಾಗ್ನಿಯಿಂ ತನುವಳಿದಡುಂ ಕ್ರಿಯಾ
ನಿರ್ಗತವನೈದಿರದನಂಗದಿಂ ಮೋಹಿಸುವ
ನರ್ಗಳೆಯ ಚಾಪಮೆನಿಸಿರಲವನ ಮಹಿಮೆ ನೆಲೆಗೊಂಡಿರದೆ ಪೇಳೆನಲ್ಕೆ
ದುರ್ಗಮ ವಿರಾಗಿಗಳನಲೆವ ಬಿಲ್ಲೆಂದವರ
ಬೇರ್ಗರಿಗಳನ್ನರಿವುತರೆದಡಂ ಮಧುರ ಗುಣ
ಮೇರ್ಗೊಂಬ ಕಬ್ಬನರೆವಾಲೆಗಳ ನಿಡುಸರಮೆ ಮಾರಗಂ ದೂರ್ವಂತಿರೆ ೩೧

---

೨೮. [1]ಮೆರೆವ ತೈಲಾಭ್ಯಂಜನಾದಿಯಿಂದಿ

ಶೀಲದಿಂದಮೃತಾಶ್ರಯವನು ಪೊಂದಿದ ಪುಣ್ಯ
ಶಾಲಿಗಳಿಗೈಶ್ವರ್ಯ ಬೆಳೆಬೆಳೆಯೆ ನಮ್ರತೆಯ
ತಾಳದಿದ್ದಪರೆ ಪೇೞನೆ ನೀಱನೊಳ್ ಸದಾಶ್ರಯಗೊಂಡ ನೆಲ್ಲೈಳೆಗೞ
ಪಾಲುದೆನೆಯಾಗಿ ಬೆಳೆಬೆಳೆದನಿತು ತಲೆವಾಗಿ
ಜೋಲುತಿದ್ದಾ ಪರಿಯನೆಣಿಸೆ ನೀರೊಳು ನಿಂದು
ಮೇಲೆ ತಾ ಭಕ್ತವೆಸರ್ವಡೆವಿಚ್ಛೆಯಿಂ ದ್ವಿಜರ ತರ್ಪಣೆಯ ಗೈವಂತಿರೆ ೩೨

ಮೆರೆವ ಪೊಲಗಾವಲಿನ ಪಾಮರಿಯರುರುಪಯೋ
ಧರೆಯರಾದುದರಿಂದೆ ನಿಖಿಲ ಕಾದಲರದಕೆ
ಬೆರೆತು ಬಾಯ್ವಿಡುತಿರ್ಪರದರಿನಿಂ ತನ್ಮಹಿಮೆಯಂ ವಹಿಸಿ ತಾನನಿಬರಂ
ನಿರುತ ಬಾಯ್ದೆರೆಸಬೇಕೆಂದು ತೆನೆಗಳ್ ಪಯೋ
ಧರಮಾಗಲದರಿನಿಗೆ ಪಕ್ಷಿಕುಲಮಾವಗಂ
ಪರೆಯದೆರಗಿಹವೆನಲ್ ದ್ವಿಜರಾದಡುಂ ಪಯೋಧರಗಳ್ಗೆ ಬೆರೆಯದಿಹರೆ ೩೩

ನೆರೆಪುಣ್ಯಶಾಲಿಗಳ್ ಕೊಡುವನ್ನಪಾನದಿಂ
ಪರಿತುಷ್ಟರೆನಿಸಿ ಸನ್ಮಾರ್ಗದೊಳ್ ವರ್ತಿಸು
ತ್ತಿರುವ ಸುದ್ವಿಜರನ್ನಘಾತಿಯಂಗೈವುತೋಡಿಸುವ ಪುಗ್ಗಾಳಿಜನಕೆ
ವರಬಾಹುಮೂಲದೊಳ್ ಗ್ರಂಥಿಗಳ್ ಮೂಡಿ ಬಾಯ್
ದೆರೆಗಂ ಭುಜಂಗದಂತೋಪಹತಿಯೊದಗಲೇ
ನರಿದೆ ಪೇೞನೆ ಕಳಮಗಾವಲಿನ ಸತಿಯುರಂ ವಿಟರು ಚುಂಬಿಸುತಿರ್ದರು ೩೪

ಬಿಡುಗಣ್ಣರಾವಾಸದೆಡೆಮೊಂದು ದಿತಿಸುತ
ರ್ಕಡು ಮುಳಿದು ಪೊಂಗಿರಿಯನಡರಲೆನೆ ಪುಸುಕಿಯಾ
ರ್ಭಡಿಸುವಂದವನು ಕಾಣ್ಬಡಿಪ ಕುರುಹೆಂದೆಂಬ ಬೆಡಗಿನಿಂ ಪೊಲಗಾವಲ
ಮಡದಿಯರ ಪೀನಪೊಂಗೊಡ ಕುಚಂಗಳನು ಬೆಂ
ಬಿಡದೆ ಪೊಂದಾವರೆಗಳೆಡೆಮೊಗ್ಗೆಯೆನುತಲಾ
ರಡಿಗಳುರೆ ಮುತ್ತಿ ಪುಸಿಸಡಗರದಿ ಝೇಂಕಾರವಡೆದಿರ್ದವಜ್ಞರಂತೆ ೩೫

ಲಲನೆಯರ ನಗೆಯೆ ಮಲ್ಲಿಗೆಯೆಂದು ವಿಲಸದಂ
ಜಲಿಗಳಂ ಕೆಂದಾವರೆಗಳೆಂದು ಕಣ್ಣು ನೈ
ದಿಲೆಯೆಂದು ಬಾಯ್ದೆರೆಗಳೇ ದಾಸಣಗಳೆಂದು ಪಲ್ಗಳೇ ಮೊಲ್ಲೆಯೆಂದು
ಬಲಿದ ಮೋಹದಲೆರಗಿ ಪರಿಕಿಸಿ ಸಿರಾಶೆಯಿಂ
ದಳಿವಳಗ ಹಿಂದಿರುಗಿ ಬರುತಿರ್ದವೆಂತೆನಲ್
ಕಲಿಯುಗದ ಯಾಚಕರ ಮಾಳ್ಕೆಯಿಂ ನಾಲ್ದೆಸೆಯಲಲೆದಡುಂ ವಿಫಲರೆನಿಸಿ ೩೬

ಇಂತು ಕಳಮಂಗಳಂ ಪರಿಕಿಸುತ ನೃಪಸೇನೆ
ಮುಂತಳೆಯಲೆದುರಿಸಿದ ಗಿಡಗುಲ್ಮಗಟ್ಟಗಳ
ತೊಂತಿ ಪದಹತಿಗಳಿಂದಿಳೆಗಣಗಿ ಸಮಮಾಗಿ ಸನ್ಮಾರ್ಗಮೆನಿಸಿತಂದು
ಅಂತರಂಗ [1]ದಿ ಕಲಿಯ ಕಟ್ಟಬೇಕೆಂಬ[1] ಭೂ
ಕಾಂತ ಸಂಕಲ್ಪದಿಂ ದುರ್ಮಾರ್ಗ ವರ್ತನೆಗ
ಳಂತರಿಸಿ ಸನ್ಮಾರ್ಗಮಾಗದಿರದೆಂಬ ಸೂಚನೆಯ ತೋರ್ಪಡಿಸುವಂತೆ ೩೭

ನೋಡಲೀ ಸೈನ್ಯಕಿನ್ನೆರಡನೆಯ ಭೂತಲವ
ಮಾಡಿದಲ್ಲದೆ ನೆರೆಯದೆಡಮೆನಿಸುತಿರೆ ನಡೆವ
ಜೋಡವಣೆ ಪೇರೊಂಟೆಬಂಡಿಗಳ ಭಾರದಿಂದಿಳೆ ಕುಸಿಯಲುರಗೇಂದ್ರಗೆ
ಮೂಡಿದ ಶಿರೋವ್ಯಥೆಯುದಿಮ್ಮಿಸಿಂ ಕಿವಿ ಕಿವುಡು
ಗೂಡಿ ತಲೆವಾಗಿದುದು ದಿಗ್ಗಜಂಗಳ್ಗೆ ಪೇ
ರ್ಗೋಡು ಬಾಯೊಳಗಿಳಿದು ನಡುನೆತ್ತಿ ಕುಳಿಯೊಡೆದು
ಮಾಂದ್ಯಮುಡಸಿದುದೆನಿಸಿತು ೩೮

ಈ ತೆರದಿ ಪಡೆಸಹಿತ ನಡೆಯೆ ದೇಶಂಗಳೊಳ್
ಜಾತಿವರ್ಣಾಶ್ರಮಾಚಾರಗಳ್ ಪಲ್ಲಟಿಸಿ
ರೀತಿದಪ್ಪಿರಲದಂ ಸಸಿನಗೊಳಿಸುತ ಭಕ್ತಿವಿಜ್ಞಾನಗಳನೂರುತ
ನೀತಿಶಾಸ್ತ್ರಂಗಳಂ ಬಲಿವುತ ಭವಾಂಬುಧಿಗೆ
ಸೇತುವೆನಿಸುವ ವಿಷ್ಣುಪದಭಜನ ಸಂಕೀರ್ತ
ನಾತಿಶಯಗಳ ಪೆಚ್ಚಿಸುತಲೈದಿದಂ ಪೂರ್ವದಿಕ್ಸಮುದ್ರಾಂತಮಾಗಿ ೩೯

---

೩೭. 1. ದಲಿ ಕಲಿಯಂ ಕಟ್ಟಲೆಂಬ

ಕುದುರೆಗಳ ಕಡೆವಾಯ ನೊರೆಗಳಿಂ ಗಜಘಟೆಯ
ಮದಧಾರೆ ಪರಿವ ನದಿವೆರೆಗಳಿಂ ಬಣ್ಣಗೋಲ್
ಬೊದರು ಪರ್ಬಿದ ಪವಳಲತೆಗಳಿಂ ಖಡ್ಗಹೊಳಹುಗಳ ಮೀನ್‌ಗಳೆಗಳಿಂದೆ
ಅದುಭುತದ ವಾಹಿನೀ ಘೋಷದಿಂ ಮೇಲೆ ಮೇ
ಲೊದಗಿ ಬಹ ಬಲತರಂಗಗಳಿಂದೆ ಸುಕ್ಷೀರ
ನಿಧಿಯು ಲವಣಾರ್ಣವನ ಕಾಣಲೈತಂದ ಪರಿಯೆನಿಸಿತಾ ಬಲ ಬಿಣ್ಪಿನಿಂ ೪೦

ಪರಿಕಿಸಲ್ ವಿಬುಧ ವಾಂಛಾ ಪ್ರದಾಯಕನಾಗಿ
ಸಿರುತ ಕವಿವೃಂದ ಪೋಷಕನಾಗಿ ಸತತಮುಂ
ಹರಿ ಪದಾಶ್ರಿತರಿಂಗೆ ಜೀವನಪ್ರದನಾಗಿ ಮುಕ್ತಾತ್ರಯಾತ್ಮನಾಗಿ
ವರಕುವಲಯಾನಂದ ಕರನಾಗಿ ಗಂಭೀರ
ತರದಿ ಶೋಭಿಪ ಪರೀಕ್ಷಿತನೃಪಂ ವಾಹಿನೀ
ವರನೆನಿಪುದದ್ಭುತಮೆ ಪೇಳೆನಲ್ ಲಸದಮೃತ ನಿಧಿಯೆನಿಸಿ ತೋರ್ದನಂದು ೪೧

ಬಳಿಕಲಾ ಸಾಗರದ ಸಂಭ್ರಮವ ನೋಡಿ ಮುಂ
ತಳೆದನಲ್ಲಿಂ ತೆಂಕಮುಖಮಾಗಿ ಪುಣ್ಯನದಿ
ಗಳನು ಸೇವಿಸುತ ತೀರ್ಥಕ್ಷೇತ್ರ ಪುಷ್ಕರಣಿ ದೇವಾಲಯಾದಿಗಳೊಳು
ತಳುವಿಯೊಂದೆರಡು ವಾಸರ ದಾನದಕ್ಷಿಣೆಯ
ನಳವಡಿಸಿ ಜೀರ್ಣಧರ್ಮಗಳನುದ್ಧರಿಸುತವೆ
ಪಳೆಯಂತೆ ಸಾಂಗಕರ್ಮಂಗಳಂ ಸಸಿನಗೊಳಿಸುತ ನಡೆವುತಿರ್ದನಂದು ೪೨

ಈತೆರದಲವನಿಯಂ ಶೋಧಿಸುತ ಕಲಿಯು ಪಿಡಿ
ವಾತುರದಲಿರಲನಿತರೊಳಗೆ ವರ್ಷಾಗಮವು
ಚಾತಕಂಗಳ ಮನೋಭೀಷ್ಟದಧಿದೈವಮನೆ ತಲೆದೋರ್ದುದೆಂತೆನಲ್ಕೆ
ಭೂತಳದಿ ಬರ್ಹಿಗಳ ಕುಣಿಸುತಿಹ [1]ನಟಿಯಂ[1]ತೆ
ಚಾತುರ್ಯದಿಂ ಸರಿದ್ವಾರಿಧಿಗಳಂ ಪೊರೆವ
ದಾತನೆಂಬಂ[2]ತಿರವ್[2] ಗ್ರೀಷ್ಮತಪ್ತಾಳಿಗುಪ ಶಾಂತಕರ ರಾಜನಂತೆ ೪೩

---

೪೩ 1. ನಟನಂ. 2, ತೆವೊಲ್.

ನೀಲವರ್ಣನು ನೀಲಕಂಠಹಿತಕರನು ವನ
ಮಾಲಾವಿಭೂಷಿತನು ಘನಯಶೋಧರನು ಲೋ
ಕಾಳಿಗಂ ಜೀವನಪ್ರದನು ಜನಸಂತಾಪಹರನು ಸರ್ವವ್ಯಾಪ್ತನು
ಮೇಲನಿಮಿಷಾಳಿಪಾಲಕನು ಕವಿಕುಲ ಹರ್ಷ
ಮೂಲಕಾರಣನು ತಾನೆನಿಸಿ ಹರಿರೂಪುಗುಣ
ಶೀಲಗಳನಾಂತ ನೀರದನು ಭುವನವ ಪೊರೆಯದಿಹನೆ ಪೇಳೆನಲೆಸೆದುದು ೫೨

ಇಂಗಡಲು ಪಡೆದ ವಿಷಮಂ ಪೀರ್ದು ಫಣಿಭೂಷ
ಣಂಗಳಿಂದವೆ ಭುವನಗರ್ಭನೆಂದಿನಿಸಿ ಭೂ
ತಂಗಳಂ ಪೊರೆದು ಸಂತತಕಾಳಿಕಾಂಗಮಂ ತಳೆದಮೃತದಾತನೆನಿಸಿ
ಹಿಂಗದಾವಗ ದಿಗಂಬರಚಾರಿಯುಹ ಸರ್ವ
ಮಂಗಳಾಶ್ರಯನಪ್ಪ ಶಿವನ ಸನ್ಮಹಿಮೆಯಿಂ
ಕಂಗೊಳಿಪ ಘನನು ಭಕ್ತೋನ್ನತಿಯನೆಸಗದಿದ್ದಪನೆ ಪೇಳೆನಲೆಸೆದುದು ೫೩

ಇನಬಿಂಬಮಂ ನುಂಗಿದಾಂಜನೇಯನ ತೆರದಿ
ವಿನುತಶಿಖಿ ನೃತ್ಯದಿಂ ಯಜ್ಞಕುಂಡವ ಪೋಲ್ದು
ಘನ ಪಯೋಧಾರೆಯಂ ಕರೆದು ಧೇನುವಿನಂತೆ ಬಹುವಾಹಿನಿಗಳ ಪೊರೆದು
ಜನನಾಥನೆಂಬಿನಂ ಹಂಸತೇಜೋಹರವ
ನನುವಿಡಿದು ರಾಹುವೆಂಬಂದದಿಂ ಶೋಭಿಸುತ
ಮನಕೆ ಮಂಗಳಮಪ್ಪ ವರ್ಷೋದಯವು ಭುವಿಗೆ
ಹರ್ಷೋದಯವನೆಸಗಿತು ೫೪

ಇಳೆಯ ಸಂತಾಪ ತಾ ಪರಿವುತಿರೆ ಬಹುಧಾನ್ಯ
ವೆಳಸಿನುನ್ನತಿಕೆ ನುತಿಗೇರುತಿರೆ ಕೆರೆ ಭಾವಿ
ಪೊಳೆಗಳುಬ್ಬಟೆಯು ಪೊರೆದುಬ್ಬುತಿರೆ ಜಾತಿ ಕೇತಕಿಯೇಳ್ಗೆಯೇರ್ಗೊಳುತಿರೆ
ಜಲಧಿಯೈಶ್ವರ್ಯ ಬೆಳೆ ಬೆಳೆವುತಿರೆ ಸಂತಾಪ
ಮಳಿದು ಶಾಂತತೆ ಜನಕೆ ಜನಿಸುತಿರೆ ವರ್ಷಋತು
ಬಳಸಿದುದು ಭುವನಮಂ ನಿಖಿಲಜೀವರ್ಗೆ ಸಂತೋಷಮಳೆ ಮೊಳೆವುತಿರಲು ೫೫

ಈ ನಟನೆಯಪ್ಪ ಪ್ರಾವೃಟ್ಸಮಯದೊಳ್ ನೃಪನ
ಸೇನೆಗಳ್ ನೆನೆದು ಹೇಕಳಿಗೊಂಡು ತಮಟೆಗಳ್
ಧ್ವಾನಂಗಳುಡುಗಿ ಕಾರ್ಮುಕಗುಣಂಗಳ್ ಸಡಿಲಿ ಕೇತುಪಟವಾರ್ದ್ರವಾಗಿ
ನಾನಾ ವಿಚಿತ್ರ ಗುಡಿ ಹಲ್ಲಣ ಪತಾಕಂಗ
ಳಾನೆ ಕುದುರೆಗಳು ಪಂಕದಲುರುಳಲಾಗ ಪವ
ಮಾನಂ ಸಹಾಯಗೈದಟ್ಟಿದಂ ಮುಸುಕಿರ್ದ ಮೇಘಮುತ್ತಿಗೆಯನಿರಿದು ೫೬

ಮಂಡಲಾಧೀಶ್ವರರ್ದೋೞಾದಿ ವರ್ಜಿತರ
ಖಂಡಪ್ರತಾಪಾನ್ವಿತರ್ಮಹೋನ್ನತಿಗಳು
ದ್ದಂಡ ಸನ್ಮಾರ್ಗ ಪ್ರವರ್ತಿಗಳ್ ವಿಷ್ಣುಪದ ಭಜಕರ್ಪ್ರಭಾಸಹಿತರು
ಚಂಡಶಾಸನರು ಸಿರಿನೆಲೆಯನೇರ್ಗೊಳಿಪ ಗುಣ
ಮಂಡಿಸಿದ ಭಾಸ್ಕರ ಪರೀಕ್ಷಿದವನಿಪತಿಗೆಡೆ
ಗೊಂಡ ಪರಿಭವಮಿಹುದೆ ಮೇಘಮುಸುಕಳಿಯೆ ನಿಜಕಳೆಗಳಿಂ
ಹೊಗರೇರ್ದರು ೫೭

ಮೇಲೆ ದಕ್ಷಿಣದೇಶಮಂ ನೋಡುತ್ತೈದಲು ವಿ
ಶಾಲ ಪುಣ್ಯಕ್ಷೇತ್ರ ನದಿಗಳುನ್ನತಿಯ ದೇ
ವಾಲಯಂಗಳ್ ಬನಗಳೆದುರಿಸಿದಡೊಂದೆರಡು ದಿವಸಮಲ್ಲಿರ್ದು ಭಜಿಸಿ
ಶಾಲಿಗೋ ವಸನ ಧನ ದಾನ ದಕ್ಷಿಣೆಗಳಿಂ
ಶೀಲದಿಂದನುಗ್ರೈದು ಸತ್ಕೃತಿಯ ಒಲಿದು ಭೂ
ಪಾಲನೈತರುತಿರ್ದನಂತರಂಗದಿ ಕಲಿಯ ಪಿಡಿವಾತುರತೆ ಬಲಿದಿರೆ ೫೮

ಬಂಗಾಳ ಸಿಂಧು ಕಾಶ್ಮೀರ ಘೂರ್ಜರ ಗೌಡ
ವಂಗ ವರಹಾಡ ಕರಹಾಡ ಕೊಂಕಣಗಳ್ ಕ
ಳಿಂಗ ಕನ್ನಡ ಮಹಾರಾಷ್ಟ್ರಾಂಧ್ರ ಲಾಟ ಮೊದಲೆನಿಪ ದೇಶಗಳ ನೋಡಿ
ಮುಂಗಡೆಯ ಮಲೆಯಾಳ ಮತ್ಸ್ಯ ಕೇರಳ ಪಾಂಡ್ಯ
ಕಂಗೊಳಿಪ ಚೀನ ಬೋಟ ದ್ರವಿಡ ಚೋಳ ದೇ
ಶಂಗಳೊಳ್ ಮೆರೆವ ತರುಣಿಯರ ಬಿಡುಕುಚಗಳಂ ಕಂಡು ವಿಸ್ಮಿತನಾದನು ೫೯

ತಳೆದು ನಡುವಿಂದಡಿಗೆ ವಸನಮಂ ಮೇಲೆ ನಿ
ಚ್ಚಳದಿಂದಲೆಳೆವಾಸೆದುದಿಯಲೆರಗಿದ ಕುಚಂ
ಗಳು ಮುಸುಕುಗಳೆದ ದರ್ಪಕನ ಕವಲಂಬೆನಲ್ ಲಾವಣ್ಯರಾಶಿಗಳೊಲು
ಮಳೆ ಮಂಜುಗಳೆದುಲಿವ ಚಕ್ರವಾಕಂಗಳೆನೆ
ಕಳೆದ ಮೇಘಾವರಣಪೊಂಗಿರಿಗಳೆನಲು ವಿಟ
ರಳವಿಯಂ ಗೆಲಿದು ಕವುಚಿದ ಮದನಭೇರಿಗಳೆನಲ್ ಕುಚಗಳೆಸೆದಿರ್ದವು ೬೦

ಪೊಂಬರಿಗೆಗಳ ಮೇಲೆ ಪರಿಶೋಭಿಸುವ ವಿಮಲ
ಜಂಬೀರ ಫಲಗಳೆನೆ ಸೂತ್ರ ಬಂಧಗಳಿರದ
ಪೊಂಬುಗುರಿ ಜೋಡೆನ್ನಲೆಳವಾಸೆ ಪಾವಿಗುಣಲಿಟ್ಟ ಪಾಲ್ಗಳಶಗಳೆನೆ
ಅಂಬರಕ್ಕಡರಲೆಳಸುವ ಕೋಕಜೊತೆಗಳೆನೆ
ತುಂಬಿಗಳ್ ತುದಿಗೇರ್ದ ಪೊಂಗಮಲ ಕುಟ್ಮಲಗ
ಳೆಂಬಿನಂ ದ್ರವಿಡ ನಾರಿಯರ ವಕ್ಷೋಜಂಗಳೊಪ್ಪಿದವು ನಿಚ್ಚಳದೊಳು ೬೧

ಈ ತೆರದಲೆಸೆವ ನಾರಿಯರ [1]ಬಿಡು[1]ಕುಚಗಳಂ
ಭೂತಳೇಶನ ಬಲದ ಯುವಜನರ್ನೋಡಿ ಕಾ
ಮಾತುರತೆಯೇರ್ಗೊಳಲ್ ಕಣ್ಣುಗಳ್ ಕೆಂಪಡರಿ ಕುಡಿಮೀಸೆಗಳ್ ಕುಣಿಯಲು
ಮಾತುಗಳ್ ತೊದಳಿ ಮೈಮರೆದು ಮುಂದವಕಿಸುವ
ರೀತಿಯಂ ನೃಪನರಿದು ತದ್ದೇಶಮಂ ಕಳಿದು
ಚಾತುರಂಗವು ಸಹಿತ ತೆರಳಿದಂ ಪಡುಗಡೆಯ ಮಗಧ ಮಾಳವ ದೇಶಕೆ ೬೨

ನಡೆಗೊಡದ ಬಟ್ಟೆಗಳ ನಾಲ್ದೆಸೆಯ ಗಟ್ಟುಗಳ
ಕುಡಿವ ಜಲಶೀತಗಳ ಕುಣಿಸುತಿಹ ವಾತಗಳ
ಒಡಲುಚ್ಚುವಂದಿಗಳ ವನಿತೆಯರ್ಚಂದಗಳ ಮಂಜುಗವಿತೆಯ ಮಲೆಗಳ
ನಿಡುವಾದ ವೃಕ್ಷಗಳ ನಲಿವ ಜಲಪಕ್ಷಿಗಳ
ತೊಡರುವ ಜಲೂಕಗಳ ತೋರ್ವ ಬಲ್ಕೇಕಿಗಳ
ಕಡುಬೆತ್ತದುಡುವೆಗಳ ಕ್ರಮುಕ ತೆಂಗಡವಿಗಳಲಾರಾಜ್ಯವೆಸೆದಿರ್ದುದು ೬೩

---

೬೨. 1. ಗುರು.

ಆಸರದ ಗಟ್ಟುಗಳ ಕಳೆವು ತವುತೊಡರಿನಾ
ಯಾಸದಿಂ ಪಡೆ ಬಳಲುತಿರಲು ನೃಪ ಚಿತ್ತದೊಳ್
ವಾಸುದೇವಾಂಘ್ರಿಗಳನೆಣಿಸುತವು ಬಗೆಗೊಂಡನಿನಿತು ದೇಶವ ತೊಳಲಲು
ಹೇಸಿ ಕಲಿ ನೆಲೆಯು ಸಂಧಿಸದಾದುದೀ ಪರಿಯ
ಲೇಸು ದಿನಮಲಸಬೇಹುದೊ ಶಿವಾ ಮೆರೆವ ಹರಿ
ದಾಸರ್ಗೆ ಪರಿಭವಮೆ ಚೋದ್ಯಮಿನ್ನೆನಗಾವ ದುಷ್ಕೃತದ ಬಲುಹೆಂದನು ೬೪

ದೊರೆಯು ಗಡ ಬಾಧಕದ ಕಲಿ ದೊರೆಯದಿರೆ ಧರ್ಮ
ನಿರಿಗೆ ಮುಸುಳಿಪುದು ಗಡ ಮುಸುಳಿಸಲ್ ವರ್ಣ ಸಂ
ಕರತೆಯೊದಗುವುದು ಗಡ ಒದಗಿದಡೆ ದೊರೆತನಕೆ ಹಾನಿ ಗಡ ಹಾನಿಯಮರೆ
ಧರಣಿಗಪಹಾಸ ಗಡ ಹಾಸ್ಯಮಾಗಲು ಕೀರ್ತಿ
ತರುಣಿ ನಾಚುವಳು ಗಡ ನಾಚಿದಡೆ ತನ್ನೃಪತಿ
ಗಿರದು ಗಡ ಸಗ್ಗಸಭೆಯನ್ನೇರ್ವ ಸಲುಗೆಯಿನ್ನೇಗೈವೆನಿದಕೆಂದನು ೬೫

ಚಿಂತೆಗೈದೀ ತೆರದಿ ಹೃದಯದೊಳ್ ಭಾರ್ಗವೀ
ಕಾಂತನಂ ಭಾವಿಸುತ ಮುಂದಳೆಯೆ ಮಾರ್ಗದೊಳ್
ನಿಂತಿರ್ದುದೊಂದು ವೃಷಭಂ ಮೂರು ಪಾದಗಳ್ ಮುರಿದೊಂದು ಪಾದದಿಂದೆ
ಸಂತವಿಸುತಾ ವೃಷಭನೊತ್ತಿನೊಳ್ ಕಾರ್ಶತೆಯ
ನಾಂತಶ್ರು ಧಾರೆಯೊರತೆಗಳಿಂದೆ ಕಣ್ಮುಗಿದು
ನಿಂತಿರ್ದುದೊಂದು ಗೋ ಕಂಪಿಸುವ ಕಾಯದಿಂದವನಿಪನ ಸಮ್ಮುಖದೊಳು ೬೬

ಕಂಡನಾ ವೃಷಧೇನುಗಳ ಪರಿಯನೆದೆಯೊಳೆಡೆ
ಗೊಂಡ ಪಟುಖೇದದಿಂದುಮ್ಮಳಿಸಿ ಧರ್ಮನ
ಸ್ನಂಡಲೆದು ಕಾಲ್ಮುರಿದನಾರಕಟ ನಿರಪರಾಧಿಯನಿಂತು ನಿಷ್ಕರುಣದಿಂ
ಚಂಡಾಲಕೃತ್ಯಮನ್ನೆಸಗಿದನ ಪಿಡಿದು ಕರ
ಖಂಡನೆಯು ಸಮನಿಸಲ್ ನಿಶ್ಚಯಿಸಿ ವಹಿಲದಿಂ
ದಂಡಿಗೆಯ ಮೇಲಣಿಂ ದುಮ್ಮಿಕ್ಕಿ ವೃಷಧೇನುವಿದ್ದೆಡೆಗೆ ಪರಿತಂದನು ೬೭

ಬಂದು ಕಕುದೀಶನಂ ಪೈದಡಹಿ ವಿನಯದಿಂ
ದೆಂದನೆಲೆ ಗೋವರನೆ ನಿನಗಿಂತು ಹಿಂಸೆಯ
ನ್ನೊಂದಿಸಿದನಾವವಂ ತಥ್ಯಮ ನ್ನೊರೆಯೆನಲ್ ನುಡಿದನಾ ಧರ್ಮವೃಷನು
ದಂದುಗವ ಪರಿದು ರಕ್ಷಿಪರಿಗರುಹಿದಡೆಮ್ಮ
ಬಂಧನವು ಕಡೆಯುಹುದು ಬರಿದೆ ನೀ ಕೇಳ್ದಡಾ
ವೆಂದು ಫಲವೇನೆನಲ್ ಪರಿಭವವನಣಗಿಸುವೆನುಸುರು ವಹಿಲದೊಳೆಂದನು ೬೮

ಭೂಪ ಕೇಳಾವೀ ಜಗದ್ವ್ಯಾಪ್ತ ಧರ್ಮಸ್ವ
ರೂಪರಹೆವೆಮ್ಮಿರವನೆಣಿಸಲವನೀ ಜನದ
ಪಾಪವರ್ತನೆಗಳಿಂ ಪಾದಗಳ್ ಮುರಿದವಾ ಧೇನು ಭೂಪತಿಯೈಸಲೆ
ಈ ಪರಿಭವಂಗಳೆವಗೆಡೆಗೊಂಡ ಸಂಗತಿಯ
ನಾ ಪುಣ್ಯವತಿಯ ಬೆಸಗೊಂಡಡರುಹುವಳೆನಲ್
ತಾಪ ಹೃದಯದಿ ನಾಂಟೆ ನುಡಿಸಿದಂ ಗೋರೂಪಸಾಂತ
ವಸುಧಾಂಗನೆಯನು ೬೯

ಎಲೆ ಪುಣ್ಯವತಿಯೆ ನಿಮ್ಮಿರ್ವರಿಂಗೀ ಭವಣೆ
ನೆಲೆಗೊಂಡ ತುದಿಮೊದಲನುಸುರುವುದು ಕಾಲ್ಮುರಿದ
ಕಲುಷಾತ್ಮರಾವರೀ ಗೋಪನಂ ನಿನಗೆ ಕಾರ್ಶತೆಯಡಸಿದನುವದೇನು
ನಿಲುಕಡೆಯನರುಹುವುದು ನಿಮ್ಮೆಡೆಗೆ ಸಂಕಟವ
ಬಲಿದರಂ ಪಿಡಿದು ಬಂಧಿಸಿ ನಿಮ್ಮ ಸಂತಸದ
ಸಲುಗೆಯಂ ಮೆರೆಸದಿರಲೆನಸುತನವೆಮಗೇಕೆ ನಿಶ್ಚಯವ ಬೆಸಸೆಂದನು ೭೦

ಆದಡಾಲಿಸು ಭೂಪ ಕೃಷ್ಣದೇವಾಖ್ಯ ಹರಿ
ಪಾದಂಗಳೆನಗೆ ಸಂಸ್ಪರ್ಶಮಾಗುತಲಿರ್ದು
ದಾದಡಾ ಕಾಲದೊಳ್ ಕಲಿಯು ಕಾಲಿಡಲಂಜಿ ಗುಪಿತನಾಗಿರ್ದ ದೆಸೆಯಿಂ
ಭೂದೇವ ಮುಖ ನಾಲ್ಕು ವರ್ಣಧರ್ಮಗಳು ನಿರು
ಪಾಧಿಯಿಂ ನಡೆವುತಿರ್ದುದು ನೋಡಲೀಗ ಕಲಿ
ಗಾದುದೇಳಿಗೆಯದರಿನಿಂ ವರ್ಣಧರ್ಮಗಳ ಮೇರೆಗಳ್ ಮಸುಳಿಸಿದುದು ೭೧

ಧರ್ಮಾರ್ಥ ಕಾಮಮೋಕ್ಷಗಳೆಂಬ ಪುರುಷಾರ್ಥ
ಧರ್ಮಗಳೆ ನಾಲ್ಕು ಚರಣಗಳಪ್ಪವರಿಯಲೀ
ಧರ್ಮನಿಂಗದರಿನೊಳ್ ಕಲಿಮಲಿನಮಾವ ಹಿಸಲಖಿಲವರ್ಣಾಶ್ರಮಗಳ
ಧರ್ಮಗಳ್ ವ್ಯತ್ಯಸ್ತಮಾಗಿ ವಿಧ್ಯುಕ್ತ ಸ
ದ್ಧರ್ಮಂಗಳಳತೆಗವಸರಮೊದಗದಿಹುದರಿಂ
ಧರ್ಮಾರ್ಥ ಕಾಮವಹ ಮೂರು ಚರಣಗಳು ಮುರಿದೊಂದು
ಪಾದಮೆ ನಿಂದುದು ೨೨

ಚಿತ್ತವಿಸು ನಿಶ್ಚಯವನೆನ್ನೆಡೆಗೆ ಸದ್ಧರ್ಮ
ವೃತ್ತಿಗಳ್ ತನುಪುಷ್ಟಿಕಾರಣವು ಸಂಕಲಿತ
ವರ್ತನಮೆ ಸಕ್ಷೀಣಮಾಗಿರ್ಪುದದರಿನಿಂ ಕಾರ್ಶ್ಯತ್ವಮೆನಗೊದವಿತು
ತತ್ತರಳಕಲಿಯ ಬಂಧಿಸಿ ಲೋಕದೋಳ್ ವರ್ಣ
ಭಿತ್ತಿಗಳ ನೆಲೆಗೈದು ಸಾಂಗಧರ್ಮವ ಪೊರೆವ
ತೆತ್ತಿಗರ ನಾ ಕಾಣೆನೆಮ್ಮ ಪರಿಭವಕೆ ಹರಿವಾಗಲೆಂತಕಟೆಂದಳು ೨೩

ಹರಿಯು ಲೀಲಾವತಾರವನುಳಿದನಾ ಪಾಂಡು
ಧರಣೀಶನಾತ್ಮಜರು ಯಾತ್ರೆಯನ್ನೈದಿದರು
ಪರಿಕಿಸುವಡಭಿಮನ್ಯುಜಾತಗೆ ತಪೋಬಲಗಳಿದ್ದಪವೊ ಮೇಣಿಲ್ಲವೊ
ದುರುಳಕಲಿಯಂ ಪಿಡಿದು ವರ್ಣಧರ್ಮಂಗಳಂ
ಪೊರೆದೆಮ್ಮನುದ್ಧರಿಪರಂ ಕಾಣೆ ಧರ್ಮಜಾ
ದ್ಯರು ಸರಿದ ಬಳಿಕಲೆಮಗೆತ್ತಣದು ತನುಪುಷ್ಟಿ ಹಲುಬಿ ಫಲವೇನೆಂದಳು ೨೪

ಎನಲಾ ನೃಪಾಲನಿಂತೆಂದ ಲಸದಭಿಮನ್ಯು
ತನಯನಾನೆಲೆದೇವಿ ಕಲಿಯ ಬಂಧಿಸುವ ಮತ
ವನೆ ನೆನೆದು ದಶದಿಕ್ಕುಗಳಲಿ ತೊಳಲಿದೆನು ಕಲಿ ಸಂಧಿಸನದೇವೆನೆನಲು
ಜನಪ ಕೇಳ್ ನಿಜತಪಶ್ಶಕ್ತಿಯುಳ್ಳಡೆ ಜಡನ
ಘನವನಣಗಿಸಲಹುದದಲ್ಲದರಸಿದಡವನು
ನಿನಗೆಂತು ಸಂಧಿಸುವನವನಿಯುಂ ಬಳಸಲಹುದೇನು ನಿನಗೆಂದಳಮಲೆ ೨೫

ಆಲಿಸಿದನಾ ನುಡಿಯನಲಗನೇರಿಸಿದಂತೆ
ಕೀಲಿಸಿದುದಂತರಂಗದಲಿ ಪದ್ಮಾಲಯಾ
ಲೋಲನಂ ಬಗೆವುದೇ ತಪಮಲ್ಲದಿನ್ನು ತಪಮಿಹುದೆ ಕಲಿ ದೊರೆಯುದಿರಲು
ಶೂಲಮುಖದಿಂ ತನುವನೀವೆ ಹರಿಪದಕೆ ಭೂ
ಪಾಲನೆಯನುಳಿದೆನೆನೆ ನಿಶ್ಚಯಿಸಿ ನಿಮ್ಮ ಪ್ರತಿ
ಕೂಲಮನ್ನಣಗಿಸುವೆನಂಜಬೇಡೆಂದುಸುರಿ ವಂದಳೆದನೇಕಮನದಿಂ ೭೬

ಜನಪ ಕೇಳ್ಳೈ ನಿಮ್ಮ ವಂಶಸಂಜಾತನೃಪ
ಜನಪರಂಪರೆಯನುದ್ಧರಿಪುದೇ ಸತ್ಕ್ರಿಯೋ
ಜನಮಲ್ಲದೆರಡನೆಯ ಕಾರ್ಯಮಿರದಚ್ಯುತಂಗೆಂದು ಸುರರುಗ್ಗಡಿಸಲು
ತನುವ ಬಿಸುಡುವೆನೆಂಬ ಶಪಥದಿಂದದುರಿ ಕುರಿ
ತನುವನೊಡಗಿಸಿದನೆಂತೆನಲಿದಿರಿನೊಳ್ ಮಲಿನ
ತನುವಿನಿಂದೊರ್ವ ನೈತರುತಿರ್ದನೊಡಲುಗತ್ತಲೆಯಲವನಿಯ ಮುಸುಕುತ ೭೭

ಸಕ್ಷೀಣತನುಮಾತ್ರಹಸ್ತದೊಳ್ ನಿಜಪಾದ
ರಕ್ಷೆಯಂ ಪಿಡಿಸಿ ಪೆರ್ಬೊರೆಯನ್ನಮರ್ಚಿಸಿ ಮ
ಹೋಕ್ಷಕನ ಮೇಲೆಯುವಪತ್ನಿಯನ್ನೇರಿಸಿ ಮಹಾಕಠಿನದಿಂ ಜನನಿಯಂ
ಶಿಕ್ಷೆಯಂ ಸಮನಿಸುತ ಮೈವಳಿಗೆ ಮುಸುಕಿರ್ಪ
ಮಕ್ಷಿಕಂಗಳ ಗುಂಪಿನಿಂ ಬರುವ ತಾಮಸನ
ನೀಕ್ಷಿಸುತಲವನಿಪಂ ನುಡಿಸಿದಂ ಭೂವ್ಯಾಪ್ತಕಲುಷ ಪೊರವಡದಿರದೆನೆ ೭೮

ಆರು ನೀನೆಲವೊ ಪೊರೆಯಾಂತು ಬಳಲುವ ವೃದ್ಧ
ನಾರಿ ತಾನಾರು ಗೋವರನನೇರ್ದವಳಾರು
ಊರು ನಿನಗೆಲ್ಲಿ ಯೆಲ್ಲಿಗೆ ಪೋಪೆ ನಿಲುಕಡೆಯನರುಹೆಂದು ಬೆಸಗೊಳಲ್ಕೆ
ಭಾರವಾಹಕಳೆನ್ನ ನಿಜಜನನಿ ವೃಷಭನ
ನ್ನೇರಿದವಳೆನ್ನ ಸತಿ ಧರಣೀತಳದ ರಾಜ್ಯ
ಭಾರವೆನಗಾದುದಾ ವಿಧಿಯಿಂದೆ ಕಲಿಯುಗದ ಕತೃತ್ವವೆನಗೆಂದನು ೭೯

ಅರರೆ ಪಾಪಾತ್ಮ ಪೆತ್ತವಳನಳಲಿಸುತ ಪೆ
ರ್ಜೊರೆಯ ಪೊರಿಸಿರ್ಪೆ ಹೆಂಡಿರಿಗೆ ವಾಹನವಿತ್ತು
ಪಿರಿದು ಮನ್ನಿಸುವೆ ಪೆತ್ತವಳಿಗಿಂದಧಿಕ ಪರದೈವಮಿಪ್ಪುದೆ ಭುವಿಯೊಳು
ದುರುಳತನವೇಕೆಮ್ಮ ರಾಜ್ಯದೊಳ್ ತಾಮಸಾ
ಚರಣೆಗಳ್ ಮೆರೆಯವೀಗಲೆ ಪತ್ನಿಯಂ ಸೆಳೆದು
ಪೊರೆಯಿತ್ತು ಪಡೆದಳನ್ನೆತ್ತನೇರಿಸು ಮೀರ್ದಡಾಜ್ಞೆ ಸಿನಗಹುದೆಂದನು ೮೦

ರಾಯ ನೀ ಮರುಳಲಾ ತಿಳಿದುದಿಲ್ಲಾಗಮ
ನ್ಯಾಯಮನ್ನೇನೆಂಬೆ ಪಕ್ಷಮಾಸಂಗಳೊಳ್
ಸಾಯಲಾಗಿಹ ಮಾತೆಗುಪಚಾರಮೇಕಿನ್ನು ಪುರುಷಾರ್ಥಮೇನದರೊಳು
ಕಾಯಸುಖ ಭೋಗವಂಶಾಭಿವೃದ್ಧಿಗಳ ಫಲ
ದಾಯಳಹ ಪತ್ನಿಯನ್ನುಳಿದು ನಿಷ್ಫಲಿತಳಹ
ತಾಯನುಪಚರಿಸೆಂಬೆ ಸೂಕ್ಷ್ಮಧರ್ಮದ ಮರ್ಮವರಿದುದಿಲ್ಲಕಟೆಂದನು ೮೧

ಅರಸ ನೀ ತಿಳಿ ಮತ್ತೆ ನೀತಿಸೂಕ್ಷ್ಮಂಗಳಂ
ಕೆರೆ ಭಾವಿಗಳ ನಿರ್ಮಿಸುವರಜ್ಞರದರೊಳಗೆ
ಚರಣಗಳ್ ಜಾರಿ ಕೆಡೆವರ್ಮಂದೆ ಪಾಪಮಡಸುವದೆಂಬುದಂ ತಿಳಿಯದೆ
ಅರಿಯರ್ರೈ ಪಾಮರರು ಫಲವೃಕ್ಷಗಳ ಸಮು
ದ್ಧರಿಸುವರು ಫಲದಾಸೆಗಡರಿ ಕೆಡೆದಪರೆಂಬ
ಪರಿಯ ಸಂಭಾವಿಸದೆ ಬಲ್ಲವರ್ಬಳಸಲೆಂತೀ ತೆರದ ದುಷ್ಕೃತಗಳ ೮೨

ಬಡವರಿಂಗನ್ನಮನ್ನಿಕ್ಕಿದಡಜೀರ್ಣಂಗ
ಳಡಸುವುವು ಮದುವೆಗಳನನುಗೈಯಲದು ಮುಂದೆ
ಮಡದಿಗುಪ್ರಸವವೇದನೆಗಳಿಂದಳಲುವರ್ ಜಪತಪಾಚಾರದಿಂದೆ
ಅಡಸುವದು ನಿಸ್ಸತ್ವಮರಿ1ತ[1] ಕೋವಿದರಿಂತು
ನಡೆಯಲಾಗದು ಕಣಾ ಪೂರ್ವಯುಗಸಂಜಾತ
ಜಡರ ಕೃತ್ಯಂಗಳಿವು ಮದ್ರಾಜ್ಯಭಾರದೊಳ್ ಸಲ್ಲವೀಕೃತಿಯೆಂದನು ೮೩

---

೮೩. 1. ತು.

ಈ ವಿಶೇಷಣರಹಸ್ಯಗಳ ಸಂಭಾವಿಸದೆ
ಸಾವಳನ್ನುಪಚರಿಸು ಪತ್ನಿಯಂ ಸೆಳೆಯೆಂಬು
ದಾವ ಕೌಶಲ್ಯಮಿದು ನೀ ಪೇಳ್ದಿಯೆಮಗಾಜ್ಞೆ ಬಹುದೆಂದು ಮುಂದರಿಯದೆ
ಭೂಪಲಯಕಾವು ಶಿಕ್ಷಾಕರ್ತರಾದ ಬಳಿ
ಕಾವ ಮುಖದಿಂದಲೆಮಗಾಜ್ಞೆಯೆನೆ ಕಲಿಯು ಧ
ರ್ಮಾವಭೋಧನೆಗರಸ ತಲೆದೂಗಿ ನಾರಾಯಣಾಸ್ತ್ರದಿಂ ಬಂಧಿಸಿದನು ೮೪

ಬಂಧದೊಳ್ ಬಿಗಿಗೊಂಡು ನೆಲಕುರುಳಿ ಸಡಿಲಿಸುವೆ
ನೆಂದು ನಿಜಸತ್ವದಿಂದೊದರೊದರಿ ಸಾಹಸವ
ಸಂಧಿಸಿದಡುಂ ಸಡಿಲದಾದುದವನಿಪತಪೋಬಲದ ಬಲ್ಬಿಂಕದಿಂದೆ
ನೊಂದು ಮರುಗುತ್ತ ಹಾಹಾ ವಿಧಿಯೆ ಬಿಗುಹ ಬಿಡಿ
ಸೆಂದು ಮೊರೆಗೈವಡುಂ ಸಡಿಲದಿರೆ ಕಲಿ ದರ್ಪ
ಗುಂದಿ ಭೂಪಾಲನಂ ಪೊಗಳಿದಂ ನಾರಾಯಣಾಸ್ತ್ರ ಬಲಕಿದಿರಿಪ್ಪುದೆ ೮೫

ಅರಿದೆನೆಲೆ ಭೂಪ ನಿನ್ನಯ ತಪೋಮಹಿಮೆಯಂ
ಮರೆಯೊಕ್ಕೆನೀ ಬಿಗುಹ ಬಿಡಿಸಿ ಕರುಣದೊಳೆನ್ನ
ಹರಣಮಂ ರಕ್ಷಿಪುದು ವಿಧಿಯಿತ್ತ ರಾಜ್ಯಭಾರವನೊಡೆಯಗೊಪ್ಪಿಸಿದೆನು
ಅರಸುತನ ಸಾಕಿನ್ನು ನಿನ್ನ ನಿಜನೇಮಮಂ
ಮೆರೆವೆ ಸಲಹೆಂದೊರಲಲಾಗ ದಯದಿಂ ವಿಷ್ಣು
ಶರವನುಪಸಂಹರಿಸಿ ಮನ್ನಿಸಿದನಾಗ ಭೂಧರ್ಮಕೇಳಿಗೆಯುಬ್ಬಲು ೮೬

ಪಾದಗಳ್ ಸಸಿನಮಾದವು ಧರ್ಮಗೋಪತಿಗೆ
ಮೇದಿನಿಗೆ ಕಾರ್ಶ್ಯತ್ವಮಡಗಿದುದು ಭೂಪನಿಂ
ಗಾದುದು ಮಹೋತ್ಸವಗಳಮರರಿಂಗಾನಂದಮುಬ್ಬಿ ಪೂವಳೆಗರೆಯಲು
ಆದರಿಸಿ ಕಲಿಪುರುಷನನ್ನೆತ್ತಿ ಸತ್ಕರಿಸಿ
ಭೇದ ಬೇಡೆಮ್ಮ ರಾಜ್ಯದಲಿ ನಿನ್ನಾಳಿಕೆಗೆ
ಹಾದಿಯಿರದಿನ್ನು ನೀ ಪೋಗೆನಲ್ ವಿನಯದಿಂ ಕಲಿಪುರುಷನಿಂತೆಂದನು ೮೭

ಕೇಳು ನರನಾಥ ಮೂಲೋಕದೊಳ್ ನಿನ್ನ ಪಿರಿ
ಡಾಳುತನಕಿದಿರುಂಟೆ ಭುಜಬಲತಪೋಬಲಗ
ಳೀಳಿಗೆಗೆ ಮೆಚ್ಚಿದೆನು ನಿನ್ನರಾಜ್ಯವನುಳಿದಡೆನಗೆ ಸುಸ್ಥಿತಿಯಾವುದು
ಏಳಿಲಂಗೈಯದೆ ನಿಯಾಮಿಸಿದಡಲ್ಲಿರ್ಪೆ
ಖೂಳತನಮಂ ನೆನೆಯದಣಗಿರುವೆನೆನಲು ಕರು
ಣಾಳು ನಿಗಮಾರ್ಥಮಂ ಬಗೆಗೊಂಡು ಕಲಿಗೆ ಸುಸ್ಥಿತಿಯಂ ನಿರೂಪಿಸಿದನು ೮೮

ಕಲಿಯೆ ನೀ ವಿದ್ಯೂತಕೇಳಿಯೊಳ್ ಮುಡಿದ ಪೂ
ಮಲಿನಗೃಹ ಮಾಸಿದಂಬರಗಳೊಳ್ ಪುಷ್ಟಿಣೀ
ಲಲನಾಳಿಯೊಳ್ ಹಿಮಕಣಂಗಳೊಳ್ ಕಾರಾಗೃಹಾದಿ ನಿಧನಸ್ಥಳದೊಳು
ಕಲಹದೆಡೆಯೊಳ್ ದೈವದೂರರೊಳ್ ಮೂರ್ಖರೊಳ್
ಕೊಲೆ ಲೋಭ ಹಿಂಸಾದಿಕೃತಿಗಳೊಳ್ ಗುಪಿತದಿಂ
ನೆಲಸಿಹುದು ನೀ ಮುಸಲಮಾರ್ಜನಿಯುಲೂಖವಿಧವಾಳಿಯೊಳಗೆಡೆ
ನಿನಗಿದು ೮೯

ಮತ್ತೆ ಕೇಳ್ ಗತಜೀವತನುಗಳೊಳ್ ಮಸಣದೊಳ್
ಒತ್ತಲಿಸಿ ನಿಂದ ಮನೆಗಸಗಳೊಳ್ ಕುಷ್ಟಗಳ್
ಪತ್ತಿರುವರೊಡಲಿನೊಳ್ ದೀರ್ಘರೋಗಿಗಳೊಳಾವಗವು ನೆಲೆಗೊಂಡಿರ್ಪುದು
ಕತ್ತಲೆಯ ಮೊತ್ತದೊಳ್ ಪಶುಘಾತಕಾದಿದು
ರ್ವೃತ್ತಿನಿರತರೊಳು ನೆಲೆಗೊಂಡು ತೊಲಗಿರದೆ ರಮಿ
ಸುತ್ತಿಹುದು ಸೋಮವಂಶದ ರಾಯರಾಳಿಕೆಯದುಳ್ಳನಕ ತಲೆದೋರದೆ ೯೦

ಇಂತು ನೀ ಜ್ಯೇಷ್ಠಲಕ್ಷ್ಮಿಯುಮೆರಸಿ ಮಾಂಗಲ್ಯ
ಮಂತರಿಸಿದೆಡೆಗಳೊಳ್ ನೆಲೆಗೊಂಡು ಶುಭವೃತ್ತಿ
ಯಾಂತ ಪ್ರದೇಶಮನ್ನೀಕ್ಷಿಸದೆ ಹರಿಶರಣರಂಘ್ರಿ ಸೋಂಕಿಲಿ ಸುಳಿಯದೆ
ಸಂತಮಿಹುದೆನಲೊರೆದು ದಿಗ್ಬಂಧನೆಯನೆಸಗಿ
ಮುಂತಳೆದನುತ್ಸವದಲಮಲ ಶೇಷಾದ್ರಿಯಧಿ
ಕಾಂತ ವೇಂಕಟರಮಣ ಕೌಂಡಿನ್ಯ ಗುರುವರ ಧ್ಯಾನದಿಂದವನೀಶನು ೯೧

ಅಂತು ಅಧ್ಯಾಯ ೭ಕ್ಕಂ ಪದನು ೮೯೫ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ.

೭. ಶುಕರು ಭಾಗವತವನ್ನು ಹೇಳಿದ್ದು

ಸೂಚನೆ :

> ವರ ಪರೀಕ್ಷಿನ್ನೃಪಗೆ ಕಾಲಗತಿಯಿಂ ಮುನೀ
> ಶ್ವರ ಶಾಪಮಡಸಲಾ ಶುಕರಿಂದೆ ಭಾವಗತ
> ಹರಿಪುರಾಣವ ಕೇಳ್ದನಮಲಗಂಗಾತಟದಿ ಪ್ರಾಯೋಪವಿಷ್ಟನಾಗಿ.

ಮತ್ತೆ ಮೇಲ್ಗತೆಯ ಕೇಳಿನ್ನು ಜನಮೇಜಯ ನೃ
ಪೋತ್ತಮನೆ ಕಲಿಯ ಬಂಧಿಸಿ ಪೊರೆದು ಸತ್ಕೀರ್ತಿ
ಮತ್ತಗಮನೆಯನೊಲಿಸಿ ವರ್ಣಧರ್ಮಗಳ ನಿಜ ಸಲುಗೆಯಂ ಸಸಿನಗೊಳಿಸಿ
ಚಿತ್ತಸಂಕಲ್ಪಮಂ ಪೂರವಿಸಿ ಗೀರ್ವಾಣ
ಮೊತ್ತಮುಭ್ರದಲುಲಿಯಲಾನಂದ ಬೆಳವಿನಿಂ
ದುತ್ತರಕೆ ತಿರುಗಿದಂ ಕಾಶ್ಮೀರ ಬಂಗಾಳ ದೇಶದನುವಂ ನೋಡುತ ೧

ರಸಿಕ ಕೇಳಾ ದೇಶದಂದಮಂ ಸಮತಳದ
ಲೆಸೆವ ನೆಲನದರೊಳಗೆ ಗೋಧೂಮ ಚಣಕವೆಳೆ
ರಸದಾಳಿ ಕಳಮಗಳ್ ಕೊಡವಾಲ್ಗಳನ್ನೀವ ಧೇನು ಮಹಿಷೀತತಿಗಳು
ಅಸಮಸುಂದರ ಪುರುಷರಾ ತೆರದ ನಾರಿಯ
ರ್ಬಿಸಜ ಗುಂಪುಗಳನಾಂತಮಲ ಕಾಸಾರಗಳ್
ಪೊಸವಗೆಯ ಫಲಪುಷ್ಪ ನಿಬಿಡ ವನದೇಶದಿಂದಾ ರಾಜ್ಯಮೆಸೆದಿರ್ದುದು ೨

ಮೊರೆಯದಿಹ ತುಂಬಿಗಳ ತುಂಬಿಗಳ ಸಂಭ್ರಮವ
ಪೊರೆಯದಿಹ ಕಮಲಗಳ ಕಮಲಗಳ ಸಾಲ್ವಳಿಗ
ಳಿರಗದಿಹ ವಾರಿಗಳ ವಾರಿಗಳ ಪೂರಮಿಲ್ಲದ ಕೊಳಗಳಾ ಕೊಳಗಳಿಂ
ನೆರೆಯದಿಹ ತೋಟಗಳ ತೋಟಗಳಲಮಲ ಫಲ
ಬೊರೆಯಿರದ ವೃಕ್ಷಗಳ ವೃಕ್ಷಗಳ ಬಳಸಿನ
ಚ್ಚರಿಯಿರದ ನಗರಗಳ ನಗರಂಗಳಿಲ್ಲದೆಡನಂ ಕಾಣರಾಭುವಿಯೊಳು ೩

ಕರೆಯದಿಹ ಪಶುವು ಕಾಡುವ ಶಿಶುವು ಜತೆಗಳಿಂ
ನೆರೆಯದಿಹ ಕೋಕಿ ನಟಿಸದ ಕೇಕಿ ಕಮಲ ಧೂ
ಳ್ಪೆರೆಯದಿಹ ಕೊಳನು ಬೆಳೆಯದ ಪೊಲನು ಪೂರಸವನುಂಡು ಮಿಂಡೆದ್ದು ಬನದಿ
ಪರೆಯದಿರುವಳಿಯು ನುಡಿಯದ ಗಿಳಿಯು ಮಧುರ ರಸ
ಪೊರೆಯದಿಹ ಫಲವು ಪರಿಯದ ಜಲವು ಕಡುತಂಪ
ನೆರೆಯದಿಹ ಬನವು ಮಲಿನದ ಜನವು ತನ್ಮಹಿಯೊಳೆಲ್ಲಿಯುಂ
ತೋರ್ವಡದಲೆ ೪

ಅಳಿಯಿರದ ನನೆಗಳಂ ಗಿಳ್ಕಿರಿವ ಪಣ್ಗಳರ
ಗಿಳಿಯಿರದ ಗೊನೆಗಳಂ ಸಂತಾನ ವಿಪ್ರಜಂ
ಗುಳಿಯಿರದ ಮನೆಗಳಂ ನೋಟಕರ ಕಣ್ಮನೋವೃತ್ತಿಯಂ ತುತ್ತುಗೊಳುವ
ಕಳೆಯಿರದ ಜನಗಳಂ ಫಲಪುಷ್ಪ ರಸಗಳೋ
ಕುಳಿಯಿರದ ಬನಗಳಂ ಶ್ರುತಿಗಿಂಪು ಸೊಂಪಿನೊ
ಬ್ಬುಳಿಯಿರದ ದನಿಗಳನ್ನೆಲ್ಲಿ ನೋಡಲು ಕಾಣ್ಬರಿಲ್ಲೆನಿಸಿತಾ ಭುವಿಯೊಳು ೫

ನುಂಪೆಸೆವ ಸಮುದಿಳೆಯನಾವರಿಸಿದುರುವೆಳೆಯು
ಸಂಪೂರ್ಣ ಜಲಪೊಳೆಯ ಸರಸಿಜದ ಸಾಲ್ವಳಿಯ
ಚಂಪಕದ ಪೊಂಗಳೆಯ ಚೆಂದಳಿರ್ಮಿಣವಳಿಯ ಚೇರ್ವ ಪಿಕಮುಲಿವ ಗಿಳಿಯು
ತಂಪೊರೆವ ಬನಗಳೆಯು ತನಿಮಧುವಿನೋಕುಳಿಯು
ಕಂಪಿಗೆರಗಿರುವಳಿಯ ಖಗನಿಕರ ಕಳಕಳೆಯು
ಸೊಂಪಿನಿಂ ಹೆಚ್ಚಳೆಯ ಸಾಚರ್ಣತಂ ಭೂವಳಯಕತಿ ಮನೋಹರಮೆನಿಸಿತು ೬

ಎತ್ತ ನೋಡಲು ಚೆಲ್ವ ಸತಿಗಳಿಂ ಪತಿಗಳಿಂ
ದೆತ್ತ ನೋಡಿದಡು ಸುವ್ರತಿಗಳಿಂ ಯತಿಗಳಿಂ
ದೆತ್ತ ನೋಡಿದಡುಸ್ಪ್ರತತಿಗಳಿಂ ಜತೆಗಳಿಂ ನಲಿವ ಚಕ್ರಂಗಳಿಂದೆ
ಎತ್ತ ನೋಡಲು ಸರಿಜ್ಝರಿಗಳಿಂ ಗಿರಿಗಳಿಂ
ದೆತ್ತ ನೋಡಲು ಮಹಚ್ಛರಿಗಳಿಂ ಕರಿಗಳಿಂ
ದೆತ್ತ ನೋಡಲು ಚೆಲ್ವ ಪುರಿಗಳಿಂ ದೊರೆಗಳಿಂದಾ ರಾಜ್ಯಮುಮರಿರ್ದುದು ೭

ಇಂತು ರಾಜ್ಯದ ಸೊಬಗ ನೋಡುತವು ಹೆರೆ ಹಿಗ್ಗಿ
ಮುಂತಳೆದು ಬರುಬರುತ ಕಂಡನಿದಿರಿಲಿ ಸಗರ
ಸಂತತಿಯ ಸೂತಕವನೊರಸಿ ಸದ್ಗತಿಗಳನಮರ್ಚಿ ವಿಶ್ವೇಶನೆಲೆಯೊಳ್
ಸಿಂತ ಹರಿಸುತೆಯ ರತಿಪತಿಯನುರುಹಿದ ಭೂತಿ
ಯಂ ತಳೆದ ಲಸದುಮಾಪತಿಯ ಮಂಜುಲ ಜಟಾ
ಕಾಂತಾರ ಸದನ ಸುಸ್ಥಿತೆಯ ಸನ್ಮಂಗಳಾನ್ವಿತೆಯ ಭಾಗೀರಥಿಯನು ೮

ವರುಣೆಯೇ ಈಡೆಯಸಿನೆಸರ ನದಿ ಪಿಂಗಳೆಯ
ದೆರಡರೆಡೆ ಮಧ್ಯ ಗಂಗೆಯೆ ಸುಷುಮ್ನಾ ನಾಡಿ
ವೆರೆದಾ ತ್ರಿಕೂಟವಹ ವಾರಣಾಸಿಕ್ಷೇತ್ರಮೇ ಮುಕ್ತಿಯಡವ್ಯೆಸಲೆ
ಪರಮಾತ್ಮನೇ ವಿಶ್ವಪತಿ ವಿಶಾಲಾಕ್ಷಿಯೇ
ಮೆರೆವ ಮೂಲಪ್ರಕೃತಿ ಬಿಂದುಮಾಧವ ದಂಡ
ಧರ ಗಣಪ ಗುಹಭೈರವಾದ್ಯರೇ ಸಚ್ಚಿದಾನಂದಾದಿ ಮೂರ್ತಿಗಳಲೆ ೯

ಭಜಿಸಿದಂ ಗಂಗೆಯಂ ಭಾಸ್ವದಮೃತಾಂಗೆಯಂ
ಭಜಕ ಹೃತ್ಸಂಗೆಯಂ ಪಟುದೋಷ ಭಂಗೆಯಂ
ಸುಜಲ ಸಾರಂಗೆಯಂ ಶೋಭನ ವಿಹಂಗೆಯಂ ಹರಿಪದಾಂಬುಜ ಭೃಂಗೆಯಂ
ತ್ರಿಜಗದುತ್ತುಂಗೆಯಂ ಶಿವಜಟಾ ರಂಗೆಯ
ನ್ನಜರಾರ್ಚಿತಾಂಗೆಯ ನ್ನದ್ಭುತತರಂಗೆಯಂ
ನಿಜಭಕ್ತಿಯಿಂದೆರಗಿ ನಿಶ್ಚಲಾನ್ವಿತತೆಯಿಂದಮಲಾಂತರಂಗದೊಳಗೆ ೧೦

ನಿರ್ಮಲೋದಕದಲಾಳ್ದ ರ ಮನಶ್ಚಂಚಲ ಬ
ಹಿರ್ಮುಖವನಾಂತುವಲೆ ಬುದ್ಬುದಗಳಲ್ಲ ತ
ತ್ಕರ್ಮಕಲುಷಗಳು ಪೊರಸೂಸಿದನುವಲ್ಲದಿದು ಶೈವಾಲನೊರೆಗಳಲ್ಲ
ಮರ್ಮವಿದು ತಜ್ಜನ್ಮಜಡಗಳೋಡುವವಲ್ಲ
ದೂರ್ಮಿಮಾಲೆಗಳಲ್ಲ ಸನ್ಮೋಕ್ಷಗಾಮಿಗಳ್
ಪೆರ್ಮೆಯಿಂ ಮೆರೆವರಲ್ಲದೆ ಜಲಚರಂಗಳೆಡೆಯಾಟಮಲ್ಲೆನಿಸಿರ್ದುದು ೧೧

ಜನ್ನುಮುನಿ ಪೀರ್ದುದಂ ಹರಜಟಾಟವಿಯೊಳು
ತ್ಪನ್ನತೆಯು ಸಾರ್ದುದನ್ನನಿಶಾಂಬಿಕಾ ವಿವಾ
ದೋನ್ನತಿಕೆ ಮೀರ್ದುದಂ ಸಗರಸ್ಮಶಾನಸಂಚಾರಿಯೆನೆ ಪೆಸರೇರ್ದುದಂ
ಮುನ್ನ ಹಿಮಶೈಲವೊಳಕೊಂಡುದಂ ಸುರಕರಿಯು
ಸನ್ನೆಯಿಂದುಳಿದು ಕಡೆಗಂಡುದಂ ನೆನೆದಶ್ರು
ವನ್ನುಗುರ್ದ್ಗೊನೆಗಳಿಂ ಮಿಡಿವಂತೆ ಮಿನ್‌ಪೊಳಂಚುವ [1]ನೀರ್ಪನಿ[1]ಗಳಿಸೆದವು ೧೨

ಸುಳಿಯ ತೆರೆಸೆಳೆಯ ಬೊಬ್ಬುಳಿಯ ಚಿಳಿಚಿಳಿಯ ಮೀ
ನ್ಗಳಿಯ ಪೂವಳಿಯ ನಳನಳಿಯ ಸಾಲ್ವಳಿಯ ಮುಗಿ
ದಳಿಯ ಜಂಗುಳಿಯ ಗಾವಳಿಯನೀಕ್ಷಿಸುತ ಹೆಚ್ಚಳಿಯನಾನುತ ಚಿತ್ತದಿ
ತಿಳಿಯಲೀ ಪೊಳೆಯ ಚೆಲುವಿಳೆಯಲತಿಶಯವಾದು
ದೆಳೆಯ ರವಿಕಳೆಯ ನಿರ್ಮಳತೆಯಂ ಪಳಿವ ಮಂ
ಜುಳಸಲಿಲದಿರವೆ ಭೂವಳಯಕರಿದೆಂದು ತನ್ನೊಳಗೆ ಹಿಗ್ಗುತಲಿರ್ದನು ೧೩

ಸಂದಣಿಸಿದಿದ್ದಡದ ಸರಣಿಯೊಳ್ ಸಾಲ್ವಡೆದ
ಮಾಂದೋಪಿನುನ್ನತದ ಮರಗಳೊಳ್ ಚಿಗು[1]ರೇರ್ದ[1]
ಚೆಂದಳಿರ್ನೆಳಲಿಳಿದ ಚೆಲುವಿನಿಂ ಕೆಂಪಾದ ಜಲಕುಂಕುಮವ ಪೂಸದ
ಪೊಂದಿರುವ ಪೂಗಿಡದ ಪುಷ್ಪಬಿಂಬಿತವಾದ
ಡೊಂದಿಯಾ ಪೂಮುಡಿದ ವಿನುತ ಭೂಷಣವಾದ
ಸುಂದರಕೆ ಮನಬೆರೆದ ಸೋಮಧರ ಸೆರೆವಿಡಿದನಾಗಬೇಕೆಂಬಂತಿರೆ ೧೪

ಪರಿಕಿಸಲ್ ವನವೊ ಪರವೆಣ್ಣ ಪೊಸ ಜವ್ವನವೊ
ಭರಿತಜೀವನವೊ ಭಜಕರ್ಗೆ ಸಂಜೀವನವೊ
ಮೆರೆವ ಜಲಚರವೊ ಮುಕ್ತಾಳಿ ಜನ ಸಂಚರವೊ ಯತಿಗಳೋ ದೇವತೆಗಳೋ
ವರ ಯೋಗಿ ಜನವೊ ಪರನಿಕ್ಷೇಪಕಂಜನವೊ
ಚರಿಪ ನೌನಿಗಳೊ ಪರಸೌಖ್ಯಸುವ್ಮಾನಿಗಳೊ
ಗರುವ ತತ್ಪುರವೊ ಗಿರಿಶನ ನಿಳಯ ಗೋಪುರವೊ
ನೋಡಲೆನಲೆಸೆದಿರ್ದುದು ೧೫

---

೧೨. 1. ಸಂತಸ. ೧೪, 1. ರಿರ್ದ.

ನೀರ್ವೊಗೆವ ಭರದಲಿರಿಕಿದ ರನ್ನಗೊಡಗಳಿಂ
ದೂರ್ವುಹಿಳೆಯುತರ್ತೆರಳಿ ನಿಜಕುಚಂಗಳ ವರ್ಣ
ಧರ್ಮಗಳ್ ತತ್ಕಳಶಕಮುರದಿರೆ ಬರಿದೆ ಕುಚಸಾಮ್ಯಮೇಕೆಂದು ಪುಳಿಯಿಂ
ನಿರ್ಮಳಿಸಿ ನೀರ್ದುಂಬಲದು ಪಯೋಧರಮೆನಿಸೆ
ಪೆರ್ಮೆಯಿಂ ಕಕ್ಷದಲಿರಿಂಕಿ ವಕ್ಷೋಜಗಳ
ಮರ್ಮಮಿಾ ಪರಿಯೆಂದು ತೋರ್ಪಡಿಸುವಂದಮೆನೆ ಬರುತಿರ್ದರಂಗನೆಯರು ೧೫

ಕಂಗಳಿಂ ನೋಡಿ ಯಮುನಾ ನದಿಯಿದಕಟ ಸುರ
ಗಂಗೆಯಲ್ಲೆನಿಸಿ ಮೋಹಕಗೊಳಿಸಿ ಮತ್ತೆ ಹ
ಸ್ತಂಗಳೂರುತ ಸರಸ್ವತಿಯೆನಿಸಿ ಮುಗುಳುನಗೆಯನ್ನೂರಿ ಮುನ್ನಿನಂತೆ
ಗಂಗೆಯೇ ನಿಶ್ಚಯಮದೆನಿಸಿ ನಿಜಮಹಿಮೆಯಿಂ
ವಿಂಗಡಿಸಿ ತೋರ್ಪಡಿಸಿ ಮತ್ತೆ ಬೆರಸುವರು ಕುಟ
ಲಂಗಳ್ ಸ್ವಭಾವ ಸತಿಯರಿಗೆಂಬ ನುಡಿಗೆ ಪ್ರತ್ಯಕ್ಷಮಂ ತೋರ್ಪ ತೆರದಿ ೧೬

ಪರವಧೂಕಾಂಕ್ಷೆಯಾವಹಿಸಿರ್ದ ಯತಿಗಳ್ಗೆ
ಪರವಧೂಕಾಂಕ್ಷೆ ನಿಶ್ಚಯಮೆನಿಸಿ ಮುನಿವರ
ರ್ಗೆರಗಿದ ವಿರಕ್ತಿಗೆ ವಿರಕ್ತಿಯೇ ಸಹಜಮೆಂದೆನಿಸಿ ವಿಜ್ಞಾನಯುತರ
ಕರಣನಿಗ್ರಹ ಮತಕೆ ನಿಗ್ರಹವ ಬಲಿದು ಮ
ತ್ತೆರಗಿ ಯೋಗಿಗಳಾಸನಾದಿ ಬಂಧಂಗಳಾ
ತುರಕೆ ಬಂಧಕಮೆಸಗಿ ಮೌನಿ ಮೌನವಸೆಳೆದರೆಳೆವೆಣ್ಗಳತಿಚೆಲುವಿನಿಂ ೧೭

ಕಳಶಕುಚ ಮಿಥುನಮಲೆ ಮಿಥುನವಕ್ಕಿಗಳಾಗ
ವೆಳೆನೇತ್ರ ಪೊಳೆವವಲೆ ಪೊಳೆವ ಮೀನ್ಮರಿಯಾಗ
ವಳಕ ಸಂಭ್ರಮಗಳಲೆ ಭ್ರಮರಂಗಳಾಗವಂಗಚ್ಛವಿಯ ಝುಳಪ್ಪೈಸಲೆ
ಜಳಕಾಂತಿಯಾಗವಮರಿದ ನಿತಂಬಗಳ ನಿ
ರ್ಮಳಮೈಸೆ ಮಳಲ ದಿಬ್ಬಗಳಾಗವಂಗನೆಯ
ರೆಳೆವಾಸೆಯೈಸೆ ಪಾಚಿಗಳಾಗವೆನಿಸಿರ್ದುದವರ [1]ವರಸುಂದರಮದು[1] ೧೮

---

೧೮. 1. ಸುಂದರ ಮದೆಂತೊ.

ಮುಡದಿಯರು ಮಸ್ತಕದಲಾಂತ ಕಲಶಗಳ ತ
ಮ್ಮೆದೆಗೆ ಸರಿನೋಳ್ಪಂತೆ ಮೊಗಮೆತ್ತಿ ನೋಡಿ ಪೊರ
ಗೊಡಗಳವು ತಮ್ಮ ಚೆಲುವಿಂಗೆ ಸರಿಯಾಗದಿರಲೊಲಿದೊಲೆದು ನಗುವವೆನಲು
ನಡೆಗಳುಲುಪಿಂದೆ ನರ್ತಿಪ ಕುಚಗಳೆಸೆಯೆ ಮೇ
ಲ್ಗಡೆಯ ಗಂಡಗಳ ಕಂಡದುರುವೆಳೆ ಸಿಂಗಮೆನೆ
ನಡುಗಳುರೆ ಬಳುಕೆ ನೀರ್ಗಳ ಪೊತ್ತು ಬರುತಿರ್ದರಂಗನೆಯರತಿಚಲುವಿನಿಂ ೨೦

ಎಲ್ಲಿಯುಂ ತೋರುವ ವಿರಾಗಿಗಳ್ ಯೋಗಿಗಳ್
ಬಲ್ಲಿದಹ ವಿಮಲವಿಜ್ಞಾನಿಗಳ್ ಮೌನಿಗಳ್
ಚೆಲ್ವ ತಾಪಸಕುಲೋತ್ತಂಸಗಳ್ ಹಂಸಗಳ್ ಸದ್ಭಕ್ತಿ ಸತ್ಯ ಯುತರು
ಅಲ್ಲಲ್ಲಿ ಶಿವಲಿಂಗ ತೀರ್ಥಗಳ್ ಕ್ಷೇತ್ರಗಳ್
ನಿಲ್ಲದಿಹ ಪೂಜಾವಿಧಾನಗಳ್ ಧ್ಯಾನಗಳ್
ಸಲ್ಲಕ್ಷಣದ ಸುಜನಬೃಂದಗಳ್ ಛಂದಗಳ್ ಕಾಶಿಯೈಕೋಶದೊಳಗೆ ೨೧

ಸ್ವರ್ಗದಿಂದಿಳಿದು ನದಿಯೊಳ್ಮಿಂದು ಮುನ್ನಿನೋಲ್
ನಿರ್ಗಮನಗೊಳುವ ಸುರರಿಗೆ ನಮಿಸಿ ನಿಖಿಲಾಪ
ವರ್ಗಮಂ ತಾರತಮ್ಯಂಗಳಿರದನಿಬರಿಂಗೇಕದಿಂ ಸೂರೆಗೊಡುವ
ಭರ್ಗಾನ್ನಪೂರ್ಣೆಯರ ಭಜಿಸಿ ಯತಿಯೋಗಿ ಋಷಿ
ವರ್ಗಕಭಿನಮಿಸಿ ಬಹುದಾನದಿಂ ದಣಿಸಿ ವಿ
ಪ್ರರ್ಗಲಂಕಾರಗಳನಿತ್ತು ಸಂತುಷ್ಟಿವಡೆದಂ ಭೂಪನರಿದೆನಿಸಲು ೨೨

ಈ ತೆರದಿ ಗಂಗೆಯಂ ಬಲಗೊಂಡು ಬಳಿಕ ಬಹು
ಭೂತ ಸಂತರ್ಪಣೆಯನನುಗೈದು ಭೂವರಂ
ತಾ ತೆರಳಿದಂ ಚತುರ್ಬಲಸಹಿತ ನಿಜಹಸ್ತಿನಾಪುರದ ಮಾರ್ಗವಿಡಿದು
ಭೂತಳದಲಖಿಲಪುಣ್ಯಕೇತ್ರ ತೀರ್ಥ ಮಹಿ
ಮಾತಿಶಯಗಳ ನೋಡಿ ಹಿಗ್ಗುತವು ಪೂರ್ವದೊಳ್
ಶೀತಕಿರಣಾನ್ವಯದ ಕೌರವಾದ್ಯರ್ಮಡಿದ ಕುರುಭೂಮಿಗೈತಂದನು ೨೩

ಇದುವೆ ಗಾಂಗೇಯಶರಶಯ್ಯನದೆಡೆ ದ್ರೋಣನ
ಭ್ಯುದಯವಳಿದೆಡಮಿಲ್ಲಿ ಕರ್ಣಸಮಿತಿಂಜಯರು
ಸದೆದ ತತ್ಸ್ಥಾನಮಿದು ಶಪಥದಿಂದರ್ಜುನಂ ಸೈಂಧವನ ಸೆಳೆದೆಡೆಯಿದು
ಇದುವೆ ದುಶ್ಶಾಸನನ ಕರುಳ ಮಾಲೆಗಳ ದ್ರೌ
ಪದಿಗೆ ಮುಡಿಸಿದ ಭೂಮಿ ಕೌರವಂ ಮಾರುತಿಯ
ಗದೆಯಿಂದುರುಳ್ದ ನೆಲನೆಂಬುದಂ ಹಿರಿಯರಿಂ ಕೇಳುತ್ತೈತರುತಿರ್ದನು ೨೪

ಮತ್ತೆ ಸಂಶಪ್ತಕರ್ಶಲ್ಯನಳಿದಾವರಣ
ಮೊತ್ತಲಿಸಿ ಶಕುನಿಯುಂ ಸೀಳ್ದ ಭುವಿಯಿದುವೆ ಭಗ
ದತ್ತನುಕರ್ಣರುರುಳಿದ ಕಳನಿದಮಲ ವೈಶಂಪಾಯನರ ಕೊಳಮಿದು
ಮತ್ತಿದುವೆ ಕೌರವಾನುಜ ಶತಕರಳಿದ ನೆಲ
ತತ್ಪುತ್ರ ಶತಕರಣಗಿದ ಠಾವಿದುವೆ ಸೋಮ
ದತ್ತ ಮಡಿದೆಡೆಸು ಗುರುಪುತ್ರ ಮುಂಡನಭೂಮಿಯಂ ನೋಡುತ್ತೈತಂದನು ೨೫

ತತ್ಕುರುಕ್ಷೇತ್ರಮಂ ಕಳೆವನಿತರೊಳಗೆ ಹಿಮ
ವತ್ಕಾಲವೊದಗಿದುದು ನಾಟ್ಯವಿದ್ಯಂಗಳ ಚ
ಮತ್ಕಾರವಣಿತೆಯ ನ್ನನಿಬರಿಂಗುಪದೇಶಿಸುವ ನಟಿಯ ಮಹಿಮೆಯಂತೆ
ಉತ್ಕೃಷ್ಟ ದಂತತಾಳಗಳೆಸೆಯೆ ಬಾಗಿ ವಿಲ
ಸತ್ಕಂಠಹೂಹೂ ಸ್ವರಗಳಿಂ ನಾಟ್ಯ ಬಲ
ದುತ್ಕರ್ಷೆಯೂರಾರೂಪುರಂಗಳೊಳ್ ತೋರ್ವಡಲ್ ಜನರ ಕುಣಿಸುತ ಬಂದನು
೨೬

ಸರಸಿಜಾಪ್ತನು ವಣಿಗ್ಭವನದಿಂ ಪೊರವಂಟು
ಬರುವ ಮಾರ್ಗದಿ ಚೇಳು ಸೊಂಕಲ್ ಪ್ರತಾಪಗಳ್
ಸರಿಯೆ ಬಿಲ್ಗೊಂಡು ಮೊಸಳೆಯನಡರಿ ಮುಂಬರಿದು ಬರುವ ತದ್ವಾರ್ತೆಗಳನು
ಧರೆಯೊಳೆಲ್ಲಾ ಪ್ರಾಣಿಗಳ್ ಕೇಳಿ ತಮಗೇನು
ಪರಿಭವಗಳೊದಗುವವೊ ತಿಳಿಯೆವೆನೆ ಭಯಕಂಪ
ಮೆರಗಿ ನಡನಡುಗುತಿಹರೆನಿಸಿರಲ್ ಹಿಮದುರುಬೆಗದುರಿದರ್ ನಿಖಿಲ ಜನರು
೨೭

ಬೆಚ್ಚ ಚಳಿಗದುರಿ ಭೂಗಗನಗಳ್ ನಸುಬಿಳಿಯ
ಪಚ್ಚಡವ ಮುಸುಕಿಟ್ಟವೆಂಬಂತೆ ಭುವನಮಂ
ಮುಚ್ಚಿದುದು ಮಂಜು ಗಿರಿ ತರು ಹಿರಿದುಕಿರಿದುಗಳ ಕಾಣ್ಬಡಿಸದೇಕಮಾಗಿ
ಅಚ್ಚರಿಯನೆಣಿಸಲುರು ಶಾಂತಸದ್ಗುರು ತನಗೆ
ಬೆಚ್ಚಿ ನಮ್ರತೆಯಾಂತು ನಡೆವ ಭಜಕರ್ಗೆರಗಿ
ದುಚ್ಚನೀಚ ಭ್ರಾಂತಿಯಂ ಬಿಡಿಸುತೇಕದೃಷ್ಟಿಯು ಬಲಿವ ಪರಿಯೆನಿಸಿರೆ ೨೮

ರಂಜಿಸುವ ಕೀಟಂಗಳಂ ಸೋಂಕಿ ತನ್ನ ರೂ
ಪಂ ಜೋಡಿಸುವ ತುಂಬಿಯೇಳ್ಗೆಯೋಲ್ ಕಬ್ಬಿಣವ
ನೆಂಜಲಿಸಿ ತನ್ನ ಕಳೆಯನ್ನೀವ ಪರುಷದೋಲ್ ಪರಿಪರಿಯ ತೃಣಕಾಷ್ಠದ
ಪುಂಜಮಂ ನೆಗಳಿ ತನ್ನಂತೆ ಮಾಳ್ಪುತ್ಕಟ ಧ
ನಂಜಯನ ಮಹಿಮೆಯೋಲ್ ನಿಖಿಲಭೂತಂಗಳಂ
ಮಂಜು ತಾ ಮುಸುಕಿ ನಿಜರೂಪಮನ್ನೇರ್ಗೊಳಿಸಿತೆರಡೆನಿಸಿ ತೋರ್ವಡಿಸದೆ ೨೯

ಸರ್ವರುಂ ಧಾನ್ಯಾಗ್ನಿಯುತರೆನಿಸಿ ಭುವನದೊಳ್
ಸರ್ವರ್ಗೆ ಕಂಥೆಗಳ ಮುಸುಕಿ ನಿಸ್ಪೃಹರೆನಿಸಿ
ಸರ್ವರಿಂಗೆರಡನೆಯ ವಸ್ತು ತೋರ್ವಡದೇಕ ಲಕ್ಷ್ಯಯೋಗೀಂದ್ರರೆನಿಸಿ
ಸರ್ವರ್ಗೆ ತಾಪಮಂ ಪರಿದು ಶಾಂತವನೂರಿ
ಸರ್ವಾಂಗವಮಂ ಭೂತಿಪೂತಾಕೃತಿಯನೆಸಗಿ
ತೋರ್ವಡಿಸಿದಂ ಶಾಂತನ[1][ವ][1] ನೃಪತಿಯಾಳಿಕೆಯಲನಿಬರ್ವಿವೇಕಗಳಲೆ ೩೦

ಸಮನಿಸಿದ ಗೋಧೂಮ ಚಣಕವೆಳೆಯೆಂಬ ಪಸು
ರಮರಿದುಡಿಗೆಯನುಟ್ಟು ಮೆರೆವ ಹಿಮಕಣಗಳೆಂ
ಬಮಲಮುಕ್ತಾಹಾರಮನ್ನಾಂತು ಶಾವಂತಿಚಂಪಕಂಗಳನು ಮುಡಿದು
ಕಮನೀಯ ಚಣಕಫಲಮೆಂಬ ಪಚ್ಚೆಗಳ ಜೊಂ
ಪಮಿತಮೆಸಗಿದ ಮೇಖಲೆಯನಲಂಕರಿಸಿ ಭೂ
ರಮಣಿ ಮಂಜುಲತೆಯಿಂ ಹಿಮರಾಜನನ್ನಿದಿರುಗೊಂಬ ಸಂಭ್ರಮಮೆಸಿಸಿತು ೩೧

---

೩೦. 1. ಹ.

ಕೊರೆವ ಚಳಿಯಂ ಬೀರ್ವ ಮಂಜಿನುಪಟಳಕೆ ಪುರ
ಹರನು ಪುಲಿದೊಗಲುಟ್ಟು ಗಜಚರ್ಮವಂ ಪೊದೆದು
ಮರಳಿ ಮೈವಳಿಗೆ ಭಸ್ಮವ ತಿಗುರಿ ಸರ್ಪಗಳನಪ್ಪಿ ತಚ್ಛ್ವಾಸಮರಿಯಂ
ತರಹರಿಸಿ ಫಣೆಯೊಳಗ್ನಿಯನಾಂತು ಕಂಠದೊಳ್
ಗರವನಿಂಬಿಟ್ಟು ಗಂಗೆಯು ಕಾಶಿಗಟ್ಟ ಚಂ
ದಿರನ ನಭಕಿಟ್ಟಡುಂ ಛಳಿ ಬಿಡದೆ ಶರಣ ಹೃದಯವ ಪೊಕ್ಕ ಪರಿಯೆನಿಸಿತು ೩೨

ಸುಜನರೊಡಲಂತೆ ಸಂತಾಪಹರವಾಗಿ ಮನ
ಸಿಜವೈರಿಯಂತೆ ಹಿಮಕರಸೇವ್ಯವಾಗಿ ಮಿಗೆ
ರಜನೀಚರರ ತೆರದಿ ಜನಕಂಪನಕೆ ಯೋಗ್ಯಗುಣನಾಗಿ ಪವನನಂತೆ
ತ್ರಿಜಗದ್ಭರಿತವಾಗಿ ಶ್ರೌತಿ ಮತದಂತಗ್ನಿ
ಭಜನೆಗೈಸುವ ಶೀಲಯುತವಾಗಿ ಸಜ್ಜನರ
ನಿಜಗುಣಗಳಂತೆ ಘನವಾಗಿ ಪರಿಕಿಸುವಡಾ ವಾಗಿ ಪರಿಶೋಭಿಸಿದುದು ೩೩

ಮಿತ್ರಪ್ರಕಾಶಮುಗ್ಗಲು ತದಂಶಕವಾದ
ನೇತ್ರಪ್ರಕಾಶಮುಂ ಮುಗ್ಗಿಸೆನೆ ತುಹಿನಮದು
ಧಾತ್ರಿಗಗನಂಗಳನ್ನಾವರಿಸಿ ಕಣ್ಗೆ ಜವನಿಕೆಯಾಗಲದರ ದೆಸೆಯಿಂ
ಗೋತ್ರಗಳ್ ಮುಗಿಲಂತೆ ತರುಗಳದ್ರಿಗಳಂತೆ
ಪತ್ರಿಗಳ್ ಭೇರುಂಡರಂತೆ ಪಶುಕುಲಗಳ್ ವಿ
ಚಿತ್ರಗಜಘಟೆಯಂತೆ ನರರು ಸಕ್ಕಸರಂತೆ ತೋರ್ದುದು ವಿಕಾರವಾಗಿ ೩೪

ಅಹಹ ಧನ್ಯರು ಲೋಹಕಾರಕ ಕುಲಾಲಕ
ರ್ಮಹಿಯೊಳು ಭವಿಷ್ಯದರ್ಥ ಜ್ಞಾನ ಸಾರಸಂ
ಗ್ರಹಿಗಳಲ್ಲದಡಾದಿಯಿಂದಗ್ನಿಸೇವೆಯಹ ಕೃತ್ಯಗಳನನುವಿಡಿವರೇ
ಗೃಹಿಣಿಯರ ಪುಣ್ಯಕೆಣೆಯಿಪ್ಪುದೆ ಹಿಮಾಗಮದ
ಮಹಿಮೆಯಂ ಮುಂದರಿದು ಪಾಕಾದಿಕೃತ್ಯ ಸ
ನ್ನಿಹಿತರಾಗಿಹರೆಂದು ಶೀತಕಂಪಿತಜನಂ ಪೊಗಳುತಿರೆ ಹಿಮವೆಸೆದುದು ೩೫

ಅರಿಯುದಜ್ಞರೆ ಕಂಥೆ ಕಂಬಳಾಜಿನಗಳಂ
ಧರಿಸಿದ ವಿರಾಗಿಗಳ್ ಮುಂದಿಳಿದು ಮಮತೆಯಿಂ
ತರುಣಿಯರ ಕುಚಗಳನ್ನಪ್ಪಿ ಸಂಗಮುವೆರೆವ ಮನುಜರೇಂ ಮತಿಹೀನರೆ
ಬರಡುಮನರೇ ಭಸ್ಮಮುಂ ಬಳಿವ ಯೋಗಿಜನ
ರರಿವುಹೀನರ್ಗಳೇ ಪಂಚಾಗ್ನಿಮಧ್ಯದೊಳ
ಗೆರಗಿ ತಪಮಂ ಗೈವ ತಪಸಿಗಳೆನುತ್ತೆ ನುತಿಗೈದರದುರುತ ಚಳಿಯೊಳು ೩೬

ಚಳಿಯಾಜ್ಞೆಯನ್ನೆನಿತು ಬಣ್ಣಿಸಲಿ ರತಿಗಳ್ಗೆ
ಮುಳಿದಿರ್ದ ಸುದತಿಯರ್ವಾಸಿಯಂ ಬಿಸುಟು ನಿಜ
ಕೆಳೆಯರನ್ನಪ್ಪಿದರ್ನೂಕಿದರು ಬಿಡದೆ ಗಾಢಾಂಬರಗಳನುವ ಜರಿದು
ಕಳದಿರ್ದ ಕೊನಬುಗಾರಿಗಳು ಪಲ್ಗಿರಿದು ಕಂ
ಬಳಗಳನ್ನರಸಿದ ಭೋಗಿಗಳ್ ಪಿರಿದುಷ್ಣ
ಜಳ ಕಟುದ್ರವ್ಯಗಳನುಂಬ ರೋಗಿಗಳ ಪೊಗಳುತ್ತಿರ್ದರೆದೆಗಳದುರಿ ೩೭

ಸುಳಿವ ತಂಗಾಳಿಯಂ ಮಲಯಚಂದನದ ಪರಿ
ಮಳಗಳಂ ಸರ್ಪಂಗಳಗಿದು ವಿಷಮೇರ್ದವೆನೆ
ಕಳೆದು ಶೀತಳಜಲಕೆ ವಿಷಸಂಜ್ಞೆಯೊದವಿತೆನೆ ನೂಕಿ ತದ್ವಿಷವನೀಂಟಿ
ಬೆಳೆದಿರ್ಪವಖಿಲ ಕುಸುಮಂಗಳೆನೆ ಬಿಸುಟು ಮಂ
ಜುಳದ ಶೀತೋಪಚಾರಂಗಳಂ ವಿಷದಂತೆ
ತಿಳಿದುಳಿದರೆಲ್ಲಾ ಜನರ್ಮೆರೆವ ಹಿಮಗಾಲದುನ್ನತಿಯ ಮಹಿಮೆಯೆಂತೋ ೩೮

ದೋಷಾಕರಂಗೆ ತೇಜೋನ್ನತಿಯನಿತ್ತು ನಿ
ರ್ದೋಷ ಸ್ವಭಾವಲಸದಮೃತಮಯನದಿಗಳಂ
ಶೋಷಣೆಯನೆಸಗಿ ಲೋಕೋಪಕಾರದ ತರುದಳಂಗಳನ್ನಂದಗೆಡಿಸಿ
ವೇಷಗೆಡಿಸಿದ ಶರದ್ವಿಪರೀತವರ್ತಿಯೆನೆ
ರೋಷತಾಮ್ರಾಕ್ಷನಾದಂ ತುಹಿನನೆನಲು ಪರಿ
ವೇಷದಿಂ ಚಿಗುರೊಡೆದವಗಮಾಳಿ ಬನಸಿರಿಯ ಕೆಂಬಲ್ಲ ಸಾಲ್ಗಳಂತೆ ೩೯

ಈ ಪರಿಯ ಹಿಮದುರುಬೆಯಿಂದೆ ಕಂಪಿಸುವ ಸೇ
ನಾಪರಿಭವಂಗಳಂ ನೋಡಿ ನಸುನಗುತ ಬಳಿ
ಕಾ ಪರೀಕ್ಷಿನ್ನೃಪತಿ ನಿಜನಗರಿಗೈತಪ್ಪ ಪೊಸಗೆಯುಂ ಕೇಳಿ ಪೊರೆಮು
ಆ ಪುರಜನರ್ಮಂತ್ರಿಸಾಮಂತಸಹಿತ ನಾ
ನಾ ಪರುಠವಂಗಳಿಂ ಪಟ್ಟಣವ ಶೃಂಗರಿಸಿ
ಭೂಪತಿಯನಿದಿರುಗೊಳಲೈತಂದರೆಸೆವ ಕನ್ನಡಿಕಲಶಯುಕ್ತಮಾಗಿ ೪೦

ಬಂದು ಕಾಣಿಕೆಗಳನ್ನಿತ್ತು ಭಯಭಕ್ತಿ ಮಿಗೆ
ವಂದನೆಗಳಂ ಗೈದಡವರವರ ಮನ್ನಿಸುತ
ಮುಂದಳಿದು ಕಲಿವಿಜಯದುಬ್ಬಿನಿಂ ಪುರವನೊಳಪೊಕ್ಕು ಓಲಗವನಿತ್ತು
ವಂದಿಗೆಯ ಸುಭಟರೇವಂತರನ್ನವರವರ
ಮಂದಿರಕೆ ಕಳುಹಿ ಪರಿಚರ್ಯಮಿತಜನಗಡಣ
ದಿಂದಲರಮನೆಯನೊಳಪೊಕ್ಕು ಮಜ್ಜನಭೋಜನಾದಿಗಳನನುಗೈದನು ೪೧

ರಾಜೇಂದ್ರ ಕೇಳಿಂತು ನಿಜರಾಜ್ಯಭಾರ ತ
ದ್ವ್ಯಾಜದೊಳಗಿರ್ದಡುಂ ನಿರ್ಲಿಪ್ತಮತಿಯಾಗಿ
ವಾಜಿಮೇಧಾದ್ಯಮಿತ ಯಜ್ಞಂಗಳನ್ನೆಸಗಿ ದಾನದಕ್ಷಿಣೆಗಳಿಂದೆ
ಮೂಜಗತ್ತುಷ್ಟಿಯನ್ನನುಗೊಳಿಸಿ ನಿಪ್ರಹರಿ
ಪೂಜೆಯೊಳ್ ಪರಿಣಮಿಸಿ ಧರ್ಮದೊಳ್ ಪೂರ್ವಗತ
ರಾಜರಿಂಗಿಮ್ಮಡಿಸಿ ಧರೆಯ ಪಾಲಿಸುತಿರ್ದನಿಂತು ಬಹುವತ್ಸರಗಳು ೪೨

ಜನಪ ಕೇಳನಿತರೊಳ್ ಶುಭಮುಹೂರ್ತದಿ ನಿನ್ನ
ಜನನಲಾಭವು ಘಟಿಸಲಮಿತದಾನಾದಿಯಿಂ
ಜನರನುರೆ ದಣಿಸಿ ಪರಮೋತ್ಸಾಹದಿಂ ನಾಮಕರಣಾದಿಗಳ ವಿರಚಿಸಿ
ಜನಮೇಜಯಾಖ್ಯೆಯನ್ನನುಗೈದು ಭೂರಿಭೋ
ಜನದಿ ವಿಪ್ರರ ತುಷ್ಟಿವಡಿಸಿ ಸತ್ಕೃತ್ಯದಿಂ
ಜನನಿಸಹ ದೊರೆತನದಲೆಸೆದಿರ್ದ ನಿನಗೈದು ವತ್ಸರಗಳಾಗುವನಕ ೪೩

ಈ ರೀತಿಯಿಂ ರಾಜ್ಯವಾಳುತಿರಲನಿತರೊಳ್
ಕ್ರೂರಮೃಗಗಳ್ ಪೆರ್ಚಿ ಜನರ ನೋಯಿಸುತ ಸಂ
ಚಾರಕಸದಳವಾಗಿ ಮೌನಿವಾನಪ್ರಸ್ಥಮುಖರ ಸತ್ಕರ್ಮಗಳ್ಗೆ
ಮೇರೆಗಳ್ ಮುರಿದು ಕಾಲಾತೀತವಾಗಿ ಭಯ
ಮೇರುಗೊಂಡಿಹುದೆಂಬ ವಾರ್ತೆಯಂ ಬಹುಮುಖದಿ
ಭೂರಮಣ ಕೇಳ್ದು ದುರ್ಮೃಗಗಳನ್ನೊರಸಲಿಚ್ಛೈಸಿ ಮಗುಳಿಂತೆಂದನು ೪೪

ಎನ್ನ ಭೂತಳದಲವನೀಸುರರ ಸತ್ಕರ್ಮ
ದುನ್ನತಿಗೆ ದುಷ್ಟಮೃಗದುಪಟಳಮೆ ಮಾರ್ಗದೊಳ್
ಬನ್ನಮುಮರಿಹುದು ಸಂಚಾರಿಗಳಿಗೆನಲು ಪರಿಹಾಸವೈಸಲೆ ಭುವಿಯೊಳು
ಕುನ್ನಿ ಮೃಗಗಳನೊರಸಿ ಜನರ ನಿರ್ಭೀತಿಯಂ
ಮನ್ನಿಸುವೆನೆಂದು ಲುಬ್ಧಕಬಲೆಗಳೆನಿಪ ತ
ತ್ಸನ್ನಾಹದಿಂ ಪುರವ ಪೊರವಂಟನೆಸೆವ ಚತುರಂಗಬಲವೊದಗಿ ಬರಲು ೪೫

ಕುದುರೆಯನ್ನೇರಿ ಕುಣಿಸುತಲೈದೆ ಮಾರ್ಜಾಲ
ಮೆದುರಿಸಿತು ಸರ್ಪಮಡ್ಡಗಿಸಿದುದು ಕಂಗಳಿಂ
ದುದುರಿದುವು ಕಂಬನಿಗಳಶ್ವಗಜಘಟೆಗಳ್ಗೆ ಶಶಕಂಗಳಡಹಾಯ್ದುವು
ಅದುರಿದವು ವಾಮಾಕ್ಷಿ ಜನಪಂಗೆ ಗೃಧ್ರಂಗ
ಳೊದಗಿ ಸತ್ತಿಗೆಯ ಮೇಲೇರಿದವು ದುಶ್ಶಕುನ
ದದುಭುತಗಳೆಂದರಿತಡುಂ ಗಣಿಸದೈದಿದಂ ಕಾಲಗತಿಮಹಿಮೆಯಿಂದೆ ೪೬

ಈ ತೆರದ ದುರ್ನಿಮಿತ್ತಗಳ ಗಣಿಸದೆ ಕರ್ಮ
ನೀತಿಯುಳಿದಿಹುದು ವಿಪ್ರರಿಗದಂ ಪರಿವೆನೆಂ
ಬಾತುರಮೆ ಮುಂಕೊಳಲ್ ದುಷ್ಟಮೃಗಕುಲವನೊರಸುವ ಪರಿಕರಂಗಳಿಂದ
ಸೇತುಬಲೆಯೊಡ್ಡುಬಲೆ ಸುತ್ತುಬಲೆ ಸಿಡಿಬಲೆ ಸ
ಮೇತದಿಂ ಬೀಸುಗೋಲ್ ಬಡಿಗೋಲ್ ಜಿಗುರ್ಗಳ ಕಿ
ರಾತಜನಸಹಿತ ಬನಮಂ ಮುಸುಕಿದಂ ಕಲ್ಲುಕವಣೆಸನ್ನಾಹಮಿಗಲು ೪೭

ಉಟ್ಟ ಚಲ್ಲಣಗಳಿಂ ಬಿಡುಮ್ಯೆಗಳಿಂ ಕೆದರಿ
ಬಿಟ್ಟ ಮಂಡೆಗಳಿಂದುಳ್ಗಳಿಂ ಕಿವಿಯಿರುಬಿ
ಲಿಟ್ಟ ಕೇದಳಿರುಪೊಗೊನೆಗಳಿಂ ಗುಂಜಿಗವಡೆಗಳ ಸರಗೊರಳಿನಿಂದೆ
ಕಟ್ಟಿರುವ ಬಿಲ್ಲಂಬುಬೊದೆಗಳಿಂ ಮೃಗಗಳ
ನ್ನಟ್ಟಿಯಪ್ಪಳಿಪ ಸಬಳಂಗಳಿಂ ಪರಿಯೆ ತಿರು
ಹಿಟ್ಟು ಮಲಗಿಸುವ ಚಕ್ರಂಗಳಿಂದಾ ನಿಷಾದರ್ಬನವ ಮುಸುಕಿರ್ದರು ೪೮

ಗಿಡಗಿಡಕೆ ಪೊಂಚಿ ಸಪ್ಪಳಿಯನಾಲಿಸುತ ತಾ
ನಡಗಿ ಮಿಗನುಡಿಗಳಿಂದರಚುತ್ತಲೆದೆಯೂರಿ
ಪೊಡವಿಯನ್ನಾಘ್ರಾಣಿಸುತ್ತ ಮಿಗ ಸಂಚರಿಪ ಜಾಡುಗಳ ಸುಳುಹರಿವುತ
ಅಡಿಗಳ ಪರೀಕ್ಷೆಯಂ ಪರಿಕಿಸುತ ಶಬ್ದಗಳ
ನಡಗೊತ್ತಿ ಮೌನದಿಂ ವಿಹರಿಸುತಲಿಂತು ನಾ
ಲ್ಗಡೆಯ ಕಾನನಗಳಂ ಶೋಧಿಸಿ ಮೃಗಾಳಿಯನ್ನೊರಸಿದರ್ ನೃಪನಿದಿರಲಿ ೪೯

ಪೊಂಚಿ ಕರಡಿಗಳ ಕಾಲ್ಗಳ ಮುರಿದು ಓಟದೊಳ್
ಮುಂಚಿ ಸಲಗಗಳ ಸಬಳದಲಿರಿದು ಹೆಬ್ಬುಲಿಗ
ಳಂ ಚಳಕ ತಿರುಮುರುಹಿನಿಂದರಿದು ಕಾಡ್ಗೋಣಗಳನು ಬಲ್ಲೆಹದಿ ತಿವಿದು
ಮಿಂಚಿದ ವೃಕಾದಿಗಳಿಗಂಬೆಳೆದು ಸಿಂಗಗಳ
ವಂಚನೆಗಳಿಂ ಬೀರ್ವಲೆಗೆ ಸೆಳೆದು ನಿಖಿಲ ಮೃಗ
ಮಂ ಚಮತ್ಕೃತಿಗಳಿಂದಳವಳಿಸಿ ಯಾಳ್ದನ ಮನೋಭೀಷ್ಟಮಂ ಪೊರೆದರು ೫೦

ಕಡವೆ ಚಾಡ್ಪಂದಿ ಸಾರಂಗ ಕೋಡಗ ಪುಲ್ಲೆ
ಯುಡುವು ಮುಂಗುಚಿ ಮೊಲನು ತೋಳ ಮುಸುವನು ಕರಡಿ
ಯಡವಿಗೋಣನು ಪುಲಿಯು ಕಾಡೆಮ್ಮೆ ಸಿಂಗಳೀಕಾದಿಮೃಗಜಾತಿಗಳ್ಗೆ
ನಿಡುಗಿವಿಯ ತೆರೆವಾಯ ಜೊಲ್ಪರಿವ ನಾಲಿಗೆಯ
ಕಿಡಿಗಣ್ಣ ಸುತ್ತುವಾಲಗಳ ಪಟುದಂತಂಗ
ಳಡರುಗಾಲ್ಗಳ ಸಣ್ಣ ನಡುವಾಂತ ಶುನಿಗಳನ್ನೆರಗಿಸಿದರಾರ್ಭಟಿಸುತ ೫೧

ತೆಗುಳಿ ಪಿಡಿದವು ಪರಿವ ಮೊಲಗಳಂ [1]ಪುಲ್ಲೆಗಳ[1]
ನಗಿದುರುಳ್ಚಿದವು ಪೆರ್ಬುಲಿಗಳನ್ನುದಠವಂ
ಬಗೆದವಾ ಭಲ್ಲೂಕಕುಲಗಳಂ ಕುಂಭಸ್ಥಳಂಗಳ್ಗೆ ಕೂರುಗುರ್ಗಳಿ
ನುಗಿಸಿ ಸೀಳ್ದವು ಮದೇಭಂಗಳಂ ನಾಲ್ದೆಸೆಗೆ
ನೆಗೆದು ಕವರಿದವು ತೋಳಂಗಳಂ ಪಲ್ಗಳಿಂ
ದಗಿದು ತುಂಡಿಸಿ ನಿಖಿಲಮೃಗಗಳನ್ನೊರಸಿದವು ಲುಬ್ಧವರ್ಗವ ಶುನಿಗಳು ೫೨

ಅರರೆ ಪುಲಿ ಪಂದಿ ಹೋರಿದ ರಕ್ತಜಾಡಿದೆ ಕೊ
ಮೆರೆವ ಕಾಡ್ಗೋಣನುದ್ದಿದ ಮರನ ಕುರುಹಿದೆ ಕೊ
ಉರಗನ ಶಿರೋಮಣಿಯು ನವಿಲು ಸೀಳ್ದುದುರಿದೆ ಕೊ
ದಂತಿ ಮದಧಾರೆಯಿದೆ ಕೊ
ಹರಿ ಸೀಳ್ದ ಹಸ್ತಿಮಸ್ತಕದ ಮಣಿ ಕೆಡೆದಿದೆ ಕೊ
ಚರಿಪ ಕತ್ತುರಿಯ ಮೃಗವಾಸನೆಗಳಿರಗಿದೆ ಕೊ
ಪರಿವ ಚಮರಿಯ ಕೇಶದೊಡರುಮೆಳೆಯಲ್ಲಿದೆ ಕೊ ನೋಡೆನುತ್ತಿಡೆವರಿದರು ೫೩

ಜಾಡ ಶೋಧಿಸು ಮುಂದೆ ಕೋಡಗಂಗಳ್ ಮಂದೆ
ಗೂಡಿ ಪಿಡಿದರಿಚುವವು ಕಾಡಣಿಲು ಕಿರಿಚುವವು
ಓಡುತಿದೆ ಮುಂಗುಲಿಯು ನೋಡಲಿದು ಹೆಬ್ಬುಲಿಯು ಬೀಡಿಗೈದಿದ ಕುರುಹಲೀ
ನೋಡು ಮರಮನ್ನೇರಿ ಗೂಡಿಗೈದುವ ದಾರಿ
ಗೋಡಿ ಸಂಧಿಸು ಬಿಲ್ಲ ಕೋಡಡರಿ ಮೊನೆಗಲ್ಲ
ನೀಡು ಸರಿಸಕೆ ಸರಳಬೂಡೆನೆ ಕಿರಾತದಳವೋಡಾಡಿದರ್ಬನದೊಳು ೫೪

ಅಡರದೊಲು ಪೊರಡಿಯನ್ನಡಗಟ್ಟು ಕರಡಿಯುಂ
ತೊಡಿಸಂಬ ಬಿಲ್ಲಿನೊಳ್ ತೋಳಮಡೆ ಕಲ್ಲಿನೊಳ್
ಬಿಡದಿರಾ ಮುಂಗಜಲಿಯ ಬಿಗಿಸುತ್ತು ಪಿಡಿವಲೆಯ ಬೀಸುಗೋಲಿಡು ಮುಸುವಗೆ
ಕೊಡಲಿಯಿಂದರಿ ಗೋಣ ಕೊರ್ವಿದೆ ಕೊ ಕಾಡ್ಗೋಣ
ಬಿಡು ಶುನಿಗಳಂ ಪುಲಿಗೆ ಬೀಳುತಿದೆ ಮುಂಬಲೆಗೆ
ನೆಡು ಸೂಟಿಯಿಂ ಸರಳನೆಂದು ಲುಬ್ಧಕದುರುಳರೆಡೆಯಾಡಿದರ್ಬನದೊಳು ೫೫

---

೫೨. 1. ಗೋಣಂಗಳ.

ಆಲಿ ಬೊಬ್ಬಿಡುತಲೀ ತೆರದಿ ಲುಬ್ಧಕವರ್ಗ
ಕಾಲದೂತರ್ಗಳಂತಖಿಲ ಬನಮಂ ಮುತ್ತಿ
ಕೋಲಾಹಲಂಗಳಿಂ ದೊರ್ವರೊರ್ವರು ಪಂಥಪಾಡು ಹೊಳಕೆಗಳನಾಂತು
ಭೂಲೋಲನಿದಿರಿನೊಳ್ ತಮ್ಮ ಸಾಹಸ ಸತ್ವ
ಮೂಲಮಂ ತೋರ್ವಡಿಸಿ ಬಹುವಿಧದ ದುಷ್ಟಮೃಗ
ಜಾಲಮನ್ನಪ್ಪಳಿಸಿಯಾಳ್ದನ ಮನೋಭೀಷ್ಟದೇಳ್ಗೆಯಂ ಪೊರೆದರಂದು ೫೬

ಭಾರಿಸಿದ ಪದಚರರ್ಬಳಸಿ ಮೆಳೆಮೆಳೆಗಳಂ
ತೂರಿ ತಿವಿದರ್ಮಲೆವ ಮೃಗಗಳಂ ರಾಹುತರ್
ವಾರುವಂಗಳ ಬೀದಿವರಿಸಿ ತುಂಡಿಸಿದರದರೊಳಗೊಂದು ಶಾರ್ದೂಲನು
ವೀರ ಪಟುಭಟರ ಲೆಕ್ಕಿಸದೆ ಪದಚರರೊಳ್ಳೈ
ದಾರು ಜನಮಂ ಸೀಳ್ದು ಚತುರಂಗ ಬಲದೊಡ್ಡ
ಮೀರಿ ಪರಿದುದು ಪಿಂತೆ ಪರಿಸಿದರ್ತೇಜಿಗಳನೇನೆಂಬೆನದ್ಭುತವನು ೫೭

ಪರಿವ ಪುಲಿಯನ್ನಟ್ಟಿ ಪರಿವ ಕುದುರೆಗಳ ಜವ
ಪರಿದು ಕಾಲ್ಗೆಡಲದರ ಪರಿಯ ನೃಪನರಿದು ಚ
ಪ್ಪರಿಸಿ ನಿಜವಾಜಿಯಂ ಪರಿಸಿದಂ ಯಾಮಾರ್ಥ ಪರಿಯಂತಮದರ ಪಿಂತೆ
ಪರಿದ ಭೂಪನ ಜಾಡ ಪರಿಕಿಸದೆ ದೆಸೆದೆಸೆಯ
ಪರಿಜನರ್ತೊಳಲುತವು ಪರಿಪರಿಯಲಲೆವುತಿರೆ
ಪರಿಘಟಿತ ರೌದ್ರದಿಂ ಪರಿಣಮಿಸಿ ತನ್ಮೃಗದ ಪರಿವಿಡಿಯಲೇ ಪರಿದನು ೫೮

ಗಿಡಗಿಡನ ಮರೆಗೊಂಡು ದೃಷ್ಟಿಗೋಚರಮಾಗ
ದಡಗಿತಾ ಪುಲಿಯದನು ಕಾಣದತಿ ರೋಷದಿಂ
ದೆಡಬಲದ ಮೆಳೆಗಳನ್ನರಸಿ ನೋಡಿಯು ವೃಥಾಶ್ರಮಮಾಗಲದರ ದೆಸೆಯಿಂ
ತೊಡರಿದ ಜುಗುಪ್ಸೆಯಿಂ ಪಿಂತಿರುಗಿ ಮಾರ್ಗ ತೋ
ರ್ವಡದೆ ತೊಳಲುತ ಬಳಲಿ ಬಾಯಾರಿ ಪೊರವಡಲ್
ತಡಿಯ ಕಾಣದೆ ಬಳಸುತಲ್ಲಿ ಕಂಡನು ತಪದಿ ಮಂಡಿಸಿದ
ಮುನಿಯೊರ್ವನಂ ೫೯

ಮುಗಿದ ನೇತ್ರಗಳ ಸಹಜಾನಂದ ತೇಜದೊಳ್
ಬಿಗಿದ ಚೇತನದ ಲಸದಮನಸ್ಕಮುದ್ರೆಯೊಳ್
ತಗುಲಿ ಪೊರವಾಸನೆಗಳಿರದಿಂದ್ರಿಯಗಳ ಚಿನ್ಮುದ್ರೆಯೊಳ್ ಚಿತ್ತವೆರೆದ
ಸೊಗಸಿಂದೆ ಸವಿಕಲ್ಪಕವನೂಕಿಯಾತ್ಮರತಿ
ನೆಗಳಿಕೆಯ ನಿರ್ವಿಕಲ್ಪಕ ಸಮಾಧಿಯಲಿಸೆವ
ಬಗೆಯ ಸಂಭಾವಿಸದೆ ನುಡಿಸಿದಂ ಮುನಿಪನಂ ಬಿರುನುಡಿಯ ಬಿಂಕದಿಂದೆ ೬೦

ಎಲೆ ಮುನಿಪ ಬಿಸಿಲಿನೊಳ್ ತೊಳಲಿ ನೀರಡಿಕೆಯಿಂ
ದಲಸಿರ್ಪೆವೆಮಗೆ ಜಲಮನ್ನಿತ್ತು ಹರಣಮಂ
ನಿಲಿಸಬೇಕೆಂದು ನುಡಿಸಲ್ ವಿಪ್ರಗರಿಕೆ ತೋರ್ವಡದರಿಂ ನುಡಿಯದಿರಲು
ಬಲುಹಿಂದೆ ಕೂಗಿ ನುಡಿಸಿದಡು ತಿಳಿವಾಗದಿರೆ
ಬಲಿದ ಕೋಪಾವೇಶ ಭರಿತನಾದಂ ನಿಯಮ
ನಿಲಕಡೆಗಳಮರಿದತ್ಯಾತುರರಿಗಿರದೆಂಬ ನೀತಿ ನಿಶ್ಚಯಮೆನಿಸಲು ೬೧

ಅಕಟ ವಿಪ್ರರ್ಮದಿಸಿಯಭ್ಯಾಗತರ ಬಳಿಗೆ
ಸುಕರೋಪಚಾರಮಂ ಗಮನಿಸದೆ ಗರ್ವಮೋ
ಹಕಕೆ ಮನಮನ್ನಿತ್ತು ದಂಭದ ಸಮಾಧಿಯನ್ನಾಂತು ನುಡಿಸಲು ನುಡಿಯದೆ
ಪ್ರಕಟದಿಂ ಭೂತಹಿತಮನ್ನುಳಿದರೆಂದು ಹೃ
ದ್ವಿಕಲಮಂ ತಾಳ್ದನೇನೆಂಬೆ ಸುವಿವೇಕ ಮತಿ
ಯುಕುತವರ್ತನೆಗಳ್ ವಿನಾಶಕಾಲಕ್ಕೊದಗವೆಂಬುದದು ನಿಶ್ಚಯಮಲೆ ೬೨

ಸಾವಡಸಲವುಪಧಿಯು ಗುಣಮಿಯದು ಕೇಡುದಿನ
ಮಾವಹಿಸಲಮಲಮತಿ ಸೂಚಿಸದು ತಥ್ಯಮಿದು
ಭೂವರನ ಸುವಿವೇಕಮಂ ವಿಭಾಡಿಸಿತು ಗಡ ವಿಧಿಕೃತವ ಮೀರಲಹುದೆ
ಆ ವಿಪ್ರನುಡಿಯುದಿರಲಲ್ಲಿ ಗತಜೀವಿತದ
ಪಾವು ಕೆಡೆದಿರಲದಂ ಬಿಲ್ಗೊನೆಯಲೆತ್ತಿ ಭೂ
ದೇವನುತ್ತಮು ಶಮೀಕನ ಗಳಕೆ ಸುತ್ತಿದಂ ಪೇಳಲೇನಪದೆಸೆಯನು ೬೩

ಉರುರೋಷದಿಂ ಕಂಠಕಹಿಕುಣಪಮಂ ಬಲಿದ
ಡರಿಕೆಯಿಲ್ಲದೆ ಸಮಾಧಿಯಲೆಸೆವ ಮುನಿಪನಂ
ಜರಿವುತವು ಮುಂದಳೆದನಿತ್ತ ನಿಜಸೇನೆ ನೃಪನನ್ನರಸುತ್ತೈದಿ ಕಂಡು
ಪರಿಜನರು ಶೈತ್ಯೋಪಚಾರ ಬಲುಹಿಂದೆ ಸ
ತ್ಕರಿಸಿದಡೆ ಶಾಂತಕಳೆಯೊದಗಿ ತಾ ಬರಿದೆ ಭೂ
ಸುರನಿಗಪಚಾರಮಂ ಗೈದುದಕೆ ತನ್ನ ತಾ ಜರಿದು ಕೊಳುತಿಂದೆಂದು ೬೪

ಶುಚಿಯೆನಿಸಿ ನಿಜಸಮಾಧಿಯಲೆಸೆವ ವಿಪ್ರನಿಂ
ಗುಚಿತಮಲ್ಲದ ಕೃತ್ಯಮಂ ಮಾಡಿ ಪಾಮರರ
ರಚನೆಯನ್ನೈದಿ ತಾಮಸದಿಂದೆ ಭಕ್ತಿಭಾವವನು ಮರೆದೀ ತನುವನು
ಪ್ರಚುರಮಾಗಿಯೆ ಸಜೀವದಲಗ್ನಿ ಮುಖದಿಂದೆ
ಪಚಿಸುವುದೆ ಯುಕ್ತಮಲ್ಲದೆ ದುಷ್ಟದೇಹಮಿರ
ಲುಚಿತಮಲ್ಲೆಂದು ನಿಶ್ಚೈಸಿ ಮನದಳಲಿನಿಂ ನಿಜನಗರಿಗೈತಂದನು ೬೫

ತೊಂತಿದುದು ಹೃತ್ತಾಪಮಡಿಗಡಿಗೆ ತನ್ನ ಕೃತಿ
ಯಂ ತಾನೆ ಪಳಿದುಕೊಳುತನ್ನಪಾನವ ತೊರೆದು
ಚಿಂತೆಯಿಂದಿರುತಿರ್ದನಿತ್ತ ಮುನಿಪನ ಕೊರಳಲೊಲೆವ ಫಣಿಶವವ ಕಂಡು
ತಂತಮಗೆ ಶಿಷ್ಯವಟುಗಳ್ ಪರಿದು ಭೀತಿಯಿಂ
ಭ್ರಾಂತಿಗೊಂಡವರಂತೆ ಕುಶಸಮಿತ್ಪುಷ್ಪಗಳ
ನಾಂತು ಬಹ ಶೃಂಗಿವೆಸರಿನ ಮುನಿಸುತಂಗರುಹಿದಿರು ಸರ್ಪ ಸಂಗತಿಯನು ೬೬

ಮುನಿಪ ಕೇಳ್ ನಿನ್ನ ಪಿತಗೊರ್ವ ದುರ್ಮದನಪ್ಪ
ಮನುಜನೈತಂದು ಕೋಪದಲಿ ಕೊರಳಿಂಗೆ ಸ
ರ್ಪನ ಬಿಗಿದು ಪೋದನೆಂದುಸುರಲದ ಕೇಳಿ ರೋಷಾವೇಶ ಭರಿತನಾಗಿ
ಕನಲಿ ಮತ್ಪಿತಗೆ ಸರ್ಪನ ಬಿಗಿದ ನರನೇಳು
ದಿನದೊಳಗೆ ಸರ್ಪನಿಂ ಮಡಿಯಲೆನೆ ಶಪಿಸಿ ತ
ನ್ಮುನಿಸುತಂ ಪಿತನ ಯೋಗಕ್ಷೇಮಮಂ ಕಾಣಲೆನೆ ವಹಿಲದಿಂ ಬಂದನು ೬೭

ಕಂಡನಿದಿರಿನಲಿ ಪನ್ನಗಹಾರಶೋಭೆಯಿಂ
ಖಂಡಪರಶುವಿನಂತೆ ತೇಜಸ್ಸಗಾಢದಿಂ
ಮಂಡಿಸಿದ ಮುನಿಪನಂ ಜೀವವಿರಹಿತಪಾವದೆಂಬ ನೆಲೆಯನ್ನರಿಯದೆ
ಮುಂಡೆ ಬಾಯುದರಗಳ ಬಡಿದು ಹಾ ಹಾ ರವದಿ
ದಿಂಡುಗೆಡೆದಳಲುತಿರಲಾ ಧ್ವನಿ ಸಮಾಧಿಯ
ನ್ನಂಡಲೆದು ಮರಳಿಸಲ್ ತಾಪಸಂ ಕಣ್ದೆರೆದು ನೋಡಿದಂ ಸುತನಿರವನು ೬೮

ಗಳಲಗ್ನಸರ್ಪಾಂಗಮಂ ನೂಕಿ ರಭಸದಿಂ
ದಳುವ ನಂದನನ ನುಡಿಸಿದನೆಲವೊ ಶೃಂಗಿ ನೀ
ನಳಲುವನುವೇನು ಫಣಿಶವಮಿದೆತ್ತಣದು ನಿಲಕಡೆಯನರುಪುವುದೆನಲ್ಕೆ
ತಿಳುಹಲೇನಿನ್ನೊರ್ವ ನರನೆಸಗಿದವಕಾನು
ಮುಳಿದು ಶಪಿಸಿದೆನೇಳು ದಿವಸದೊಳ್ ತಕ್ಷಕನ
ಸುಳುಹಿನಿಂ ಮೃತಿಯೊದಗಲವನಿಗೆಂದೆನುತಲಿಂತಿದುವೆ ಸಂಗತಿಯೆಂದನು ೬೯

ಕೇಳಿದಂ ಮುನಿಪನಾವನಲಿ ಶಾಪಾಗ್ನಿಯಂ
ಪೂಳಿದನೊ ತರಳನೆಂದೆಣಿಸುತಿರಲನಿತರೊಳ್
ಪೇಳಿದರು ಕಂಡ ಜನರಾ ಪರೀಕ್ಷಿನ್ನೃಪಗೆ ಶಾಪಮೆಡೆಗೊಂಡುದೆಂದು
ಕಾಳಾಗ್ನಿ ಹೃದಯದೊಳ್ ಪೊಕ್ಕಂತೆ ಬಿಸುಸುಯ್ದು
ತಾಳಿ ರೌದ್ರವನು ತನಯನ ಮೇಲೆ ನುಡಿದನೆಲೆ
ಕೂಳ ನೀ ಬಗೆಗೊಳದೆ ಧರ್ಮಸ್ವರೂಪನೃಪನಂ ಕೊಂದೆ ಫಡಯೆಂದನು ೭೦

ಕಲಿಯ ಬಂಧಿಸಿದನಾಶ್ರಮ ವರ್ಣಧರ್ಮಗಳ
ಸಲುಗೆಯಂ ಪೊರೆದನಗಣಿತ ಯಜ್ಞಮುಖಗಳಿಂ
ಬಲಿದನಮರರ್ಗೆ ನಿಜತೃಪ್ತಿಯಂ ಭೂಸುರೋನ್ನತಿಗಳಂ ಪಾಲಿಸಿದನು
ಅಲೆವ ಫುಲಿ ಕರಡಿಗಳನಿರಿದು ನಿರ್ಭೀತಿಯಂ
ನೆಲೆಗೈವಡೈತಂದ ಧಾರ್ಮಿಕಗೆ ಶಾಪಮಂ
ಬಲಿದು ನೀ ಲೋಕಮಂ ಕೊಂದೆ ಗಡ ಪುತ್ರರೂಪಿನ ಶತ್ರುವಕಟೆಂದನು ೭೧

ಮುಳಿಸಿನಿಂದಿಂತು ಸುತನಂ ಬೈದು ಶಿಷ್ಯರಂ
ಕಳುಹಿದಂ ಭೂಪನೆಡೆಗಾ ವಟುಗಳೈತಂದು
ತಿಳುಹಿದರ್ಶಾಪವೆಡೆಗೊಂಡ ತತ್ಸಂಗತಿಯನೇಳು ದಿವಸಗಳವಧಿಯಂ
ಇಳೆಯಾಣ್ಮನದ ಕೇಳಿ ವಟುಗಳಂ ಮನ್ನಿಸುತ
ಭಳಿರೆ ಲೇಸೈ ಶೃಂಗಿ ವಿಪ್ರಗಪಮಾನಮಂ
ಬಳಸಿದ ಮಧಾಂಧತೆಯನಿಳುಹಿ ಸಲಹಿದೆ ನೀನೆ ಗುರುವೆನ್ನ ಮತಕೆಂದನು ೭೨

ಮೊದಲು ನಿಜಪುರದಿಂದೆ ಮೃಗಯಾತ್ರೆಗೈದುತಿರ
ಲಿದಿರಿಲಾದಪಶಕುನಸಸಿವೆಳೆದು ಫಲವನಿ
ತ್ತುದು ಲೇಸು ಪರಗತಿಗೆ ಕರ್ತೃ ಶ್ರೀ ಹರಿಯಿರಲ್ ಚಿಂತೆಯೇನಿಹ ಪರದೊಳು
ಪದುಮನಾಭನ ಚಾರು ಸಚ್ಚರಿತ್ರಾಮೃತಾಂ
ಬುಧಿಯಲಾಳ್ದೀ ಭವನಿದಾಘಮಂ ಕಳೆವೆನೆ
ಹೃದಯದೊಳ್ ನೆನೆದನಿತ್ತಲು ಮೂರು ಭುವನಮಂ ಮುಸುಕಿತೀ
ಶಾಪವಾರ್ತೆ ೭೩

ಈ ಶಾಪವೆಡೆಗೊಂಡ ಸಂಗತಿಯ ಮೂಲಮಂ
ದೇಶದೇಶದಲೆಲ್ಲರುಂ ಕೇಳ್ದು ಶಿವ ಶಿವಾ
ಶ್ರೀಶ ಶರಣನು ಪರಮಧರ್ಮಸ್ವರೂಪಗೀ ಪರಿಭವವೆಯೆಂದು ಮರುಗಿ
ಕೌಶಿಕ ಭರದ್ವಾಜ ಕಪಿಲ ಜಮದಗ್ನಿ ದು
ರ್ವಾಸ ಕಶ್ಯಪ ಚವನ ಭೃಗು ಕುತ್ಸ ಗೌತಮ ಪ
ರಾಶರ ವಸಿಷ್ಠ ಗಾಲವ ಧೌಮ್ಯ ಗರ್ಗಾತ್ರಿಮುಖಮುನಿಗಳೈತಂದರು ೭೪

ಮೈತ್ರೇಯ ನಾರದಾಗಸ್ತ್ಯ ಶಾಂಡಿಲ್ಯ ಸುಪ
ವಿತ್ರ ಕೌಂಡಿನ್ಯ ಮಾರ್ಕಂಡೇಯ ಕಣ್ವ ಸುಚ
ರಿತ್ರ ಜಾಬಾಲಿ ಶೌನಕ ಯಾಜ್ಞವಲ್ಕ್ಯ ಋಷ್ಯಶೃಂಗ ಮಾಂಡವ್ಯರು
ಮೈತ್ರಾವರುಣ ಪರಶುರಾಮ ಶರಭಂಗ ಭೃಗು
ಪುತ್ರ ಬಕದಾಲ್ಭ್ಯ ಸನಕಾದಿಯಹ ಧರಣೀ ಪ
ವಿತ್ರ ಋಷಿವರ್ಗವೈತಂದು ನೆರೆದುದು ಹಸ್ತಿಪುರಿ ಸತ್ಯಪುರಿಯೆನಿಸಿರೆ ೭೫

ಭರ್ಗನೇ ವಿಶ್ವರೂಪಾಂತ ಪರಿ ಮೆರೆವ ಋಷಿ
ವರ್ಗಮನ್ನುಪಚರಿಸಿ ಬೇರೆ ಬೇರನಿಬರಿಂ
ಗರ್ಘ್ಯಪಾದ್ಯಾದಿಸಕಲೋಪಚಾರಂಗಳಿಂದರ್ಚನೆಯನೆಸಗಿ ಮತ್ತೆ
ಭಾರ್ಗವಾದ್ಯಖಿಲರ್ಗೆ ನಮಿಸಿ ನುಡಿದನು ಗರ್ವ
ದುರ್ಗಮನ್ನೇರಿ ಮುನಿಗನುಚಿತವ ನೆನೆದ ದು
ರ್ಮಾರ್ಗವರ್ತಿಯ ದುಶ್ಚರಿತ್ರೆಯಂ ಕ್ಷಮಿಸಿ ಪರಗತಿಯ ಕರುಣಿಸುವುದೆಂದು ೭೬

ಎನಲು ಕಶ್ಯಪಮುಖ್ಯ ಮುನಿಗಳೆಂದರು ಮಹಾ
ತ್ಮನು ಪುಣ್ಯಶಾಲಿ ಹರಿಗುರುಭಕ್ತಿಶೀಲನೆಂ
ದೆನಿಪೆ ಕಲಿಯಂ ಬಿಗಿದು ಸಾಂಗಧರ್ಮವ ಬಲಿದೆ ವಿಪ್ರರುನ್ನತಿಯ ಪೊರೆದೆ
ನಿನಗೆ ಪರಗತಿಯಪ್ಪುದತಿಶಯಮೆ ಋಷಿಪುತ್ರ
ನನುಚಿತವ ನುಡಿದು ಭೂಮಿಗೆ ಭೂಷಣದ ಪುಣ್ಯ
ಜನವನುರುಹಿದನಕಟ ಭಗವದಾಜ್ಞೆಯ ಪರಿಯನೇವಣ್ಣಿಸುವೆವೆಂದರು ೭೭

ಎನ್ನ ದುಶ್ಚೇಷ್ಟೆಯಿಂದೆನಗಾದ ಕೃತಿಯಲ್ಲ
ದಿನ್ನು ಮುನಿಸುತನ ತಪ್ಪೇನಿಹುದಪಸ್ಮಾರ
ಕುನ್ನಿಯಂ ತುತ್ತುಮರನಲೆಗೊಳಿಸುತಿಹ ದುಷ್ಕೃತನು ಭಾರಮಂ ತೊಲಗಿಸಿ
ಎನ್ನನುದ್ಧರಿಸಿ ಜನದುಪಹತಿಯ ಮಾಣಿಸಿದ
ಸನ್ನುತಾಮಲಮೂರ್ತಿಯವನಿಗಿಂದಧಿಕ ಗುರು
ವಿನ್ನಾರು ಗತಕಥನಮಿರಲಿ ಮುಂಗತಿಯನನುಗೊಳಿಸಿ ರಕ್ಷಿಪುದೆಂದನು ೭೮

ಜನಪ ಕೇಳೀ ಯುಗದ ಮಹಿಮೆಯೊಳ್ ಸುಲಭ ಸಾ
ಧನಮಿದುವೆ ಹರಿಕಥಾ ಶ್ರವಣ ಸಲ್ಲಾಪತ
ನ್ಮನನ ಪೂಜಾದಿ ಸತ್ಕ್ರಿಯೆಗಳಿವು ವೇದಾಂತ ವಿಜ್ಞಾನಯೋಗಂಗಳ
ಘನತೆಯಿಂದೊದಗುತಿಹ ಸಾಂಗಫಲಸನ್ಮೋಕ್ಷ
ದನುವನೊಂದೇ ನಿಮಿಷಮಾತ್ರದೊಳ್ ತೋರ್ಪಡಿಪ
ವನುದಿನದಿ ನೀನು ಭಗವತ್ಸೇವೆಯೊಳ್ ಸಂದು ಪರವನೈದುವುದೆಂದರು ೭೯

ಯುಗ ಮಹಿಮೆಯನ್ನೆಣಿಸಿ ಹರಣ ಪರಿಮಿತವೇಳು
ಪಗಲುಳಿದುದಂ ನೆನೆದು ಇನಿತರೊಳ್ ಸನ್ಮುಕ್ತಿ
ಮುಗುದೆಯನ್ನೊದಗಿಸುವ ಸಾಧನವುದಾವುದೆಂಬುದನು ಶ್ರುತಿಮತದಲರಸಿ
ನಗಧರನ ಭಜನವೇ ಮುಖ್ಯವಹುದೆಂದು ಸೂ
ರಿಗಳರುಹಲದನೆ ನಿಶ್ಚಯಗೊಂಡು ನಿರ್ಮಲಾ
ಪಗೆಯೆನಿಪ ಗಂಗಾಪ್ರದೇಶದೊಳ್ ಪ್ರಾಯೋಪವೇಶ ನಿಯಮವನಾಂತನು ೮೦

ನಿಲ್ಕಡೆಯಲೆರಗಿ ಮೇಲೀಷಣತ್ರಯ ಮೋಹ
ಶಿಲ್ಕನುರೆ ಕಡಿದು ವೈರಾಗ್ಯ ಮಸದಿಂದಜಿನ
ವಲ್ಕಲಂಗಳ ವಹಿಸಿ ನಿಜರಾಜ್ಯಭಾರಮಂ ನಿನಗಿತ್ತು ಸಂಸಾರದ
ಚಿಲ್ಕುದೊಲಗಿಸಿ ಮತಿಯ ಹರಿಚರಣ ಕಮಲಕಿಂ
ಜಲ್ಕದೊಳ್ ನೆಲೆಗೊಳಿಸಿ ಚವನ ಕೌಶಿಕ ಯಾಜ್ಞ
ವಲ್ಕ್ಯ ಮುಖಋಷಿಗಳಾಜ್ಞೆಯಲಿ ನಿಜದೀಕ್ಷೆಯನ್ನಾಂತುದಂ ನೀನರಿವೆಲೇ ೮೧

ಎನಲು ಜನಮೇಜಯಂ ಬಿನ್ನವಿಸಿದಂ [1]ಮತವ
ನೆ[1]ನಗೆ ಬಾಲ್ಯಾವಸ್ಥೆಯಿಂದಲಾ ಕಾಲದೊಳ್
ಮನನ ಬಲಮುಳವಡದೆ ಕನಸುಗಂಡಂದದಿಂದರಿವು ಮರೆಯಾಗಿಪ್ಪುದು
ಜನಪನಿಂಗಾಗ ಶುಕಯೋಗಿ ಪದಪದ್ಮದ
ರ್ಶನವಾದ ಸಂಗತಿಯನೊಲಿದು ವಿಸ್ತಾರದಿಂ
ದೆನಗರುಹಬೇಹುದೆಂದೆರಗಿದಡೆ ಬೆಸಸಿದಂ ಮುಂಗತೆಯ ಸಂಗತಿಯನು ೮೨

ವಾಸಿಯನ್ನುಳಿದು ವೈರಾಗ್ಯದಿಂ ಪ್ರಾಯೋಪ
ವೇಶ ನಿಯಮವನಾಂತು ಜಾಹ್ನವೀತಟದಿ ದ
ರ್ಭಾಸನದ ಮೇಲೆ ಮಂಡಿಸಿ ಚಿತ್ತ ಚಾಂಚಲ್ಯಮುಡಗಿ ಸದ್ಭಕ್ತಿ ಮಿಗಲು
ವಾಸುದೇವನ ಮೂರ್ತಿಯನ್ನೊಳಗೆ ಭಾವಿಸುತ
ಭೂಸುರರ ನೆರವಿಯೊಳ್ ಕುಳ್ಳಿರ್ಪ ಸಮಯದೊಳ್
ಶ್ರೀಶನೊಲ್ಮೆಯ ಕುರುಹದೆಂಬಂತೆ ಶುಕಯೋಗಿವರನಲ್ಲಿಗೈತಂದನು ೮೩

೮೨. 1. ಮತ್ತದೆ.

ಮರೆದ ತನುಭಾವಮುನ್ನಿಂದ್ರಿಯಂಗಳ್ ತಮ್ಮ
ಚರಿಯಮುನ್ನುಳಿದು ನಿದ್ರಿಸುತಿರಲ್ ಚಿತ್ತೇಜ
ವೆರೆದ ಲಸದಾನಂದಬಾಷ್ಪಮಕರಂದ ರಸವೊರೆವಕ್ಷಿ ಕಮಲಂಗಳ
ಅರೆದೆರಹಿನಿಂದನಿಮಿಷತ್ವಮುಮರಿರಲು ಸಂ
ಭರಿತಾಮನಸ್ಕತೆಯಲುನ್ಮನೀ ಮದವೇರ್ದ
ಸೊರಗಿನಿಂದೊಲವುತುನ್ಮತ್ತ ಬಾಲರ ಮಹಿಮೆಯಂ ಬೀರುತ್ತೈತಂದನು ೮೪

ಸರ್ವಮಂ ಭಾವನೆಯಲೊಳಕೊಂಡು ಭಾವಮಂ
ಸರ್ವದೊಳ್ ನೆಲೆಗೈದು ವಿಮಲಾತ್ಮ ತೇಜದೊಳ್
ಸರ್ವದಾ ಮಗ್ನತೆಯನಾಂತ ಸನ್ಮತಿಗೆ ಪುನರಾವರ್ತಿ ಸಂಘಟಿಸದೆ
ತೋರ್ವ ಚಕ್ಷುಶ್ಶ್ರೋತ್ರಗಳಿಗೆರಡನೆಯ ವಿಷಯ
ತೋರ್ವಡದೆ ಸಚರಾಚರ ಸ್ವರೂಪಾಂತ ಹರಿ
ತೋರ್ವನಾ ಹರಿ ಚೇತನವೆ ತನ್ನ ನಿಜವೆಂಬ ನಿರ್ಮಲಾತ್ಮನು ಬಂದನು ೮೫

ಶಾಂಭವೀ ಲಕ್ಷ್ಯಮುನ್ನನುವಿಡಿದು ದೃಙ್ಮನ
ಸ್ತಂಭಾಯಮಾನದಿಂ ಬಾಹ್ಯಾಂತರಗಳೊಳ್ ವಿ
ಜೃಂಭಿಸಿರೆ ನಿಬಿಡ ತೇಜಸ್ಸಾಂದ್ರದೊಳ್ ವಿಶ್ವಮೇಕಾಕೃತಿಯನೈದಲು
ಸಂಭಿನ್ನವರಸೆಗಳ್ ತೋರ್ವಡದೆ ಚಿದ್ರಸಮೆ
ತುಂಬಿ ನೇತ್ರ ದ್ವಾರದಿಂದಲೊಡೆದುಚ್ಚಳಿಸಿ
ತೆಂಬಿನಿಂದೊರವ ಬಾಷ್ಪದಲದ್ದ ಮೈವಳಿಯ ಮಹಿಮನೈತರುತಿರ್ದನು ೮೬

ಕುಟಿಲಗತಿಯಿಂದಾದಿ ಶೇಷನ ವಿಲಾಸಮಂ
ಪಟುಶಾಂತದಿಂದಲಾ ಚಂದ್ರನುನ್ನತಿಕೆಯಂ
ನಟಿಸುವದರಿಂ ಕೃಷ್ಣ ಭಗವದ್ವಿನೋದಮಂ ಸುಪ್ರಕಾಶದಿ ರವಿಯನು
ಜಟೆಯುಮರಿ ರುದ್ರನಂ ಶುಚಿಯಿಂದಲಗ್ನಿಯು
ತ್ಕಟ ಗುಣಗಳೆರಗಿರುತ ವಿಧೃತವಿಷಹಿಮಕಾಮ
ಘಟಿತ ಪಿರಿದುಷ್ಣಕರ ರೌದ್ರ ದಹನಾದಿ ಗುಣಮಿರದ ಗರುವಂ ಬಂದನು ೮೭

ಕಾಮಾರಿ ವಿಜಿತಕಾಲಂ ಸರ್ವಮಂಗಳೋ
ದ್ದಾಮಸಂಗತನಮೃತಕರಭೂಷನರಿವರ್ಗ
ಭೀಮ ದಿಗ್ವಸನನುರುಮನ್ಯು ನಾಶನನಮಲ ಭೂತಿಲಿಪ್ತಾಂಗನೆಸೆವ
ಶ್ರೀಮನೋಹರಕಂಠನುರುತಾರಕಾಹಾರ
ನಾ ಮಹಾಷ್ಟವಿಭೂತಿಶೋಭಿಯೆನಿಸುತಲಸ
ದ್ವ್ಯೋಮ ಕೇಶನ ಮೂರ್ತಿಯಂತೆ ರಂಜಿಸುವ
ಶುಕಯೋಗೀಂದ್ರನೈತಂದನು ೮೮

ಬಾಲರೊಳ್ ಬಾಲಕೇಳಿಯನಾಂತು ನಾಟ್ಯ ಜನ
ಜಾಲದೊಳ್ ನಾಟ್ಯಮನ್ನನುಕರಿಸಿ ಸುಜ್ಞಾನ
ಶೀಲರೊಳ್ ಶೀಲವರ್ತನೆವಿಡಿದು ಮದಿತರೊಳ್ ಮದಿತನಂತೊಲೆದಾಡುತ
ಈ ಲೋಕದಾಟಮಂ ನೋಡಿ ವಿಸ್ಮಿತನಾಗಿ
ಮೂಲೋಕವಂದ್ಯನೈತರುತಿರ್ದನಭ್ರಮಣಿ
ಭೂಲೋಕ ಕಿಳಿತಂದ ಬೆಡಗಿನಿಂದಂಗ ರುಚಿಯವನಿಯಂ ಮುಸುಕಿರಲ್ಕೆ ೮೯

ಇಂತೆಸೆವ ಚಿದ್ವಿಲಾಸವನಾಂತು ದೇವಮುನಿ
ಸಂತತಿಯ ಮಧ್ಯದೊಳ್ ದೀಕ್ಷೆಯಿಂ ಮಂಡಿಸಿ ಸ
ದಾಂತರಾತ್ಮನ ಕಥಾಪೀಯೂಷ ತೃಷ್ಣೆಯಿಂದೆಸೆವ ಭೂಪನ ಸರಿಸಕೆ
ಮುಂತಳೆದು ಬರಲು ಋಷಿಗಣವೆದ್ದು ನಮಿಸೆ ಭೂ
ಕಾಂತ ನಡೆದಂಘ್ರಿಯೊಳ್ ಕೆಡೆಯೆ ಪಿಡಿದೆತ್ತಿ ಸಮ
ಹಂತಿಯೊಳ್ ಮಂಡಿಸಿದನುಡುಗಣದ ನಡುವೆ ಶಶಿಬಿಂಬ ಪರಿಶೋಭಿಪಂತೆ ೯೦

ರೆಕ್ಕೆಗಳನರಿಯಲ್ಕೆ ಕೆಡೆದು ಕ್ಷುದ್ವ್ಯಥೆಯಿಂದೆ
ಸೊಕ್ಕಿದ ಕಪೋತ ಪಕ್ಷಿಯ ವದನಸೋಂಕಿನೊಳ್
ಪಕ್ವಾಮ್ರಫಲಮುದುರಿದಂತಾಗೆ ಸಂಭ್ರಮದಲರಸನಮಳಾಂಬಕಗಳು
ಮುಕ್ಕುಳಿಸಲಾನಂದರಸವನನುಪಮನ ಚರ
ಣಕ್ಕೊಲಿದು ಲಸದರ್ಘ್ಯಪಾದ್ಯಾದಿ ಪೂಜೆಗಳ
ನಕ್ಕರಿಂದೆಸಗಿ ಮುನಿಮನಮಂ ಸಮಾಧಿನೆಲೆಯಿಂದೆ ಪಿಂತಿರುಗಿಸಿದನು ೯೧

ಮುನಿಮನವು ಪೊರಸೂಸೆ ನೃಪನ ಮಸ್ತಕವ ಕರ
ವನಜದಿಂ ನೇವರಿಸಿ ಮನ್ನಿಸುತ ನುಡಿಸಿದಂ
ನಿನಗೆ ದೀಕ್ಷಾನಿಯಮಮಾವ ದೆಸೆಯಿಂದೊದವಿತದರನುವನೊರೆವುದೆನಲು
ಜನಪ ಬಿನ್ನವಿಸಿದಂ ವಿಪ್ರಶಾಪದ ನಂಜು
ವೊನೆಗೊಂಡ ಸಂಗತಿಯನೇಳು ದಿನದವಧಿಯಂ
ಚಿನುಮಯಾತ್ಮಂ ಕೇಳ್ದು ಕರುಣದಿಂದಮಲ ಪದಮಂ
ಸಾರ್ಚಲನುನಾದನು ೯೨

ಭಾಗವತವರ್ಯನ ಕೃಪಾದೃಷ್ಟಿ ಪಸರಿಸಿದ
ವೇಗಮನ್ನರಿದಖಿಲ ಋಷಿಗಳೆಂದರು ಸುಧಾ
ಸಾಗರೋಪಮನು ಪುಟ್ಟುತಲೆ ನಿಜಪಿತನು ಬೆನ್ನಟ್ಟ ಬರೆ ಗಿಡಮರಗಳಿಂ
ಕೂಗಿಸಿದ ನಿಖಿಲ ಚೇತನರೂಪನೊಲಿದ ಮೇ
ಲಾಗುಹೋಗಿನ ಚಿಂತೆಯೆತ್ತಣದು ನಿನ್ನಂತೆ
ಭಾಗಧೇಯರ್ಗಳಿನ್ನಿದ್ದಪರೆ ನಿನ್ನ ಸಂಕಲ್ಪಮಮರಿದುದೆಂದರು ೯೩

ಎನಲು ಶುಕನುಡಿದನವನಿಪ ಮುಕ್ತಿ ಸತಿಯರಿಂ
ಗನುಗೈವ ಮಂಗಳ ವಿವಾಹಕ್ಕೈದಿದ ಬಂಧು
ಜನರು ನೀವೈತಂದು ನಿಮ್ಮ ಸುಕಟಾಕ್ಷ ಪರಿಕರಗಳರಸಂಗೊದವಿರೇ
ಅನುಮಾನಮೇಕೆ ತಲ್ಲಗ್ನಕಾಲಮದೇಳು
ದಿನಗಳವಕಾಶಮಿರೆ ಸಕಲಸೌರಂಭಮ
ನ್ನನುಗೈವುದಚ್ಚರಿಯೆ ಸಿರಿಯೊಲಿದ ಮಹಿಮೆಗೆ ದರಿದ್ರಮೆತ್ತಣದೆಂದನು ೯೪

ಪಿಂತೆ ಖಟ್ವಾಂಗನರನಾಥನಿಂಗರೆಘಳಿಗೆ
ನಿಂತಿರ್ದ ಹರಣಮಾಗಲ್ಕನಿತರೊಳ್ ಮುಕ್ತಿ
ಕಾಂತೆಯನ್ನೊಡಗೂಡಿಸಿದುದಲಾ ಭಾಗವತವೆಸರ ಹರಿಕಥನಮದನು
ಕೇತುಪಿತನಾಜ್ಞೆಯಿಂ ಮಜ್ಜನಕನೊಲಿದಿತ್ತ
ನಂತರಂಗದೊಳೆನಗೆ ನಿಮ್ಮನುಜ್ಞೆಯ ಶಿರದ
ಲಾಂತದನ್ನೀ ಪರೀಕ್ಷಿದ್ರಾಜಗೋಸುಗವು ವಿಸ್ತರಿಪೆನೀಗೆಂದನು ೯೫

ಈ ಪರಿಯಲಾ ಶುಕಂ ವಿನಯದಿಂ ಬೆಸಗೊಳಲ್
ತಾಪಸರ್ ಪೊರೆದು ಪೇಳಿದರಾಗ ಸಗರಕುಲ
ಪಾಪಮಂ ಪರಿಯಲೋಸುಗ ಭಗೀರಥನಿಂದ ಧರೆಗಿಳಿದ ಸುರಗಂಗೆಯು
ಭೂಪಾವನತೆಗೆ ಕಾರಣವಾದ ಮಾಳ್ಕೆಯಿಂ
ದೀ ಪರೀಕ್ಷಿನ್ನೃಪನ ಪೊರೆಯಲೆನೆ ನಿಮ್ಮಿಂದ
ರೂಪಿಸುವ ಭಾಗವತಮದುವೆ ಲೋಕೋಪಕೃತಿಯನ್ನೆಸಗಿ ಸಲಹದಿಹುದೆ ೯೬

ಈ ವಿಧದಲಖಿಲ ತಾಪಸರನುಜ್ಞೆಯನಾಂತು
ಭೂವರನ ಸಂತೈಸಿ ನುಡಿದನೆಲೆ ಸುಮತಿ ನಿನ
ಗಾವ ಸಾಧನದ ಹಂಗೇಕೆ ಸಚರಾಚರಾತ್ಮಕನಾಗಿ ಬಹುರೂಪಿನಿಂ
ತೀವಿ ತೋರ್ವಡುತಿರ್ಪ ವಿಶ್ವಮೇ ಶ್ರೀವಾಸು
ದೇವಸ್ವರೂಪಮೆಂದೇಕಲಕ್ಷ್ಯದಿ ಸತತ
ಭಾವಿಸುತ ನಿಜಪದವನೈದುವುದು ಬಾಹ್ಯಾಂತರಂಗಳೊಳ್ ನೀನೆಂದನು ೯೭

ಈ ಪರಿಯಲನವರತ ಹರಿಯ ಮಂಗಳ ವಿಶ್ವ
ರೂಪನೆಡೆವಿಡದೆ ಸಂಭಾವಿಸಲಖಂಡಮತಿ
ದೀಪಿಸುವುದದರ ವೆಳಗಿಂ ಸ್ವಸ್ವರೂಪ ನಿಜ ಪ್ರತ್ಯಕ್ಷವಾಗುತಿಹುದು
ತಾಪಮೂರಂ ತೆವರಿ ಸುಖಿಯಪ್ಪುದೆನುತಲವ
ನೀಪತಿಗನುಗ್ರಹಿಸಿ ಪೊರೆದ ಶೇಷಾದ್ರಿ ಚಿ
ದ್ರೂಪವೇಂಕಟರಮಣ ಕೌಂಡಿನ್ಯ ಗುರುವರಾನಂದ ಶುಕಯೋಗೀಂದ್ರನು ೯೮

ಅಂತು ಅಧ್ಯಾಯ ೭ ಕ್ಕಂ ಪದನು ೫೯೩ ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ.

೮. ವರಾಹಾವತಾರ

ಸೂಚನೆ:

ಶ್ರೀ ಹರಿ ವಿರಾಡ್ರೂಪಕಂ ಹಿರಣ್ಯಾಕ್ಷನ ವ
ರಾಹರೂಪಿಂ ಮಡುಹಿ ಧರಣಿಯಂ ತಂದ ಸ
ನ್ನಾಹದವತಾರ ಕಥನವನು ವಿಧಿ ನಾರದಂಗೊರೆದುದಂ ಬಣ್ಣಿಸಿದನು

ಕೇಳ್ದರಾಧೀಶ ವಿಜ್ಞಾನದೊಳ್ ವಿಷಯಮಂ
ಪೂಳ್ದು ನಿಶ್ಚಪಲ ಸದ್ಬ್ರಹ್ಮಚರ್ಯವ್ರತವ
ತಾಳ್ದ ಶುಕಯೋಗೀಂದ್ರನೊಲಿದು ವಿಶ್ವಾಕೃತಿಯೆ ಹರಿಯ ಸದ್ರೂಪಮೆನುತ
ಪೇಳ್ದ ವಿಮಲಾಖಂಡವಾಕ್ಯದೊಳ್ ಮತಿಯೆರಗಿ
ಸೀಳ್ದಾರಿಗೆರಗದೇಕಾಗ್ರಸಂತಸರಸದ
ಲಾಳ್ದು ಭಯಭಕ್ತಿಯಿಂದವೆ ಪುನಃಪ್ರಶ್ನೆಯಂ ಕೇಳ್ದನಂಗವನೀಶನು ೧

ಚಿತ್ತವಿಸು ಮುನಿಪ ವಿಶ್ವಾಕೃತಿಯೆ ಹರರೂಪೆ
ನುತ್ತನುಗ್ರಹಿಸಿದರ್ಥವನು ಸಂಗ್ರಹಿಸಿದೆನು
ಚಿತ್ತನಿಶ್ಚಯಗಳಿರದದ್ವೈತಭಾವಮಿಂತೀ ಪ್ರಥಮಸಾಧನದೊಳೆ
ಮತ್ತಮತಿಗಳಿಗೆಂತು ಸೂಚಿಪುದು ಪರಮಪುರು
ಪೋತ್ತಮನೆ ಭುವನಮಂ ಪೊರೆಯಲ್ ವಿಲಾಸದಿಂ
ಪೊತ್ತ ಲೀಲಾವತಾರಗಳ ಚರಿತೆಯನು ಸಂಕ್ಷೇಪದಿಂ ಕರುಣಿಸುವುದು ೨

ಅರಸ ಕೇಳ್ ನೀನು ಬೆಸಗೊಂಡ ನುಡಿ ನಿಶ್ಚಯವು
ಸಿರಿಧರನ ಸಗುಣರೂಪಂ ಮೊದಲು ಭಾವಿಸದೆ
ತೆರಪುಗೊಡದದ್ವೈತನೆನಹು ಪುರಷೋತ್ತಮನ ಲೀಲಾವತಾರಂಗಳ
ಚರಿತೆಯನ್ನೊರೆವೆ ಕೇಳಾದಿಯೊಳ್ ನಾರದಂ
ಸರಸಿಜಾಸನನ ಪೊರೆಗೈದಿ ಬೆಸಗೊಂಡನಾ
ತೆರದ ಸಂಗತಿಯನಿಪ್ಪತ್ತುನಾಲ್ಕವತಾರ ಕಥನಂಗಳಂ ಕ್ರಮದೊಳು ೩

ವಿನಯದಿಂ ನಾರದಂ ಬೆಸನೊಂಡನಾ ವಿಧಿಯ
ನನುವಿನಿಂ ಸೃಷ್ಟಿಗಧಿಪತಿಯೆನಿಸಿ ನೀ ಸತತ
ಮನುಗೈವೆ ಸೃಜನೆಯನ್ನದಕೆ ನೀನೇ ಕರ್ತೃವೋ ಬೇರಿಹನೊ ಪೇಳೆನೆ
ವನಜ ಪೀಠಂ ನುಡಿದನೀ ಚರಾಚರಕೆ ಚೇ
ತನ ರೂಪನಾಗಿ ಚೇಷ್ಟಿಸುವ ಹರಿಯಾಜ್ಞೆಯ
ನ್ನನುವಿಡಿದು ವರ್ತಿಸುವುದಲ್ಲದೆವಗೆತ್ತಣದು ನಿಜತಂತ್ರ ಬಲುಹೆಂದನು ೪

ಆದಿಕಲ್ಪಗಳ ವೃತ್ತಾಂತಮನ್ನೊರೆವೆ ಕೇ
ಳಾದಿಮಧ್ಯಾಂತ ವಿರಹಿತ ವಿಮಲನವ್ಯಕ್ತ
ನಾ ದಿವ್ಯ ಸದ್ಬ್ರಹ್ಮವಹ ಹರಿಯ ಸಚ್ಚಿದಾನಂದಸ್ವಭಾವದೊಳಗೆ
ಆದಿಯಿಂದಣಗಿಸದ ಸದ್ರೂಪಿಲೆಸೆದಿರುವ
ನಾದಿಮೂಲಪ್ರಕೃತಿಯದು ಸೃಷ್ಟಿಗೈಯಲನು
ವಾದ ಸದ್ಬ್ರಹ್ಮದೂಹೆಯ ಸರಣಿವಿಡಿದು ನಿಜಮಹಿಮೆಯಂ ನೆಗಳಿಸಿದುದು ೫

ಇನಕಿರಣದಿದಿರಿಲೆಸೆವ ಸ್ಫಟಿಕದಂದಮ
ನ್ನನುವಿಡಿದು ಬ್ರಹ್ಮದ ಚಿದಂಶದಿಂದಿಳಿದು ಪಾ
ವನತರಸದಂಶಕದಲೆರಗಿ ನೆಲಸಿದುದು ಚಿತ್ತೇಜಕಿದಿರಾಗಿ ಮತ್ತೆ
ತನಯ ಚಿತ್ಕಳೆಯು ಪಾದಾಂಶಮಾ ಪ್ರಕೃತಿಯೊಳ್
ಕೊನರಿಯಾವಹಿಸಲದರಿಂ ಪ್ರಕೃತಿಯೇ ಮಹ
ತ್ತೆನಿಸಿದುದು ತಾನು ನಾನೆಂಬೆರಡರಿಂ ಮಹದಹಂಕಾರಮುದ್ಭವಿಸಿತು ೬

ರವಿಕರಸ್ಫಟಿಕಗಳ ಸಂಪರ್ಕದಿಂದಗ್ನಿ
ಯವತರಿಸಿ ಕಾರ್ಯರೂಪಾದಂತೆ ಮೊದಲು ಸಂ
ಭವಮಾದವಂದು ಶಬ್ದ ಸ್ಪರ್ಶರೂಪರಸ ಗಂಧತನ್ಮಾತ್ರೆಗಳಲೇ
ಕುವರ ಕೇಳ್ ತನ್ಮಾತ್ರೆಯಿಂದಾದವಾಕಾಶ
ಪವನಾಗ್ನಿಯುದಕಪೃಥ್ವಿಗಳೈದು ಭೂತಂಗ
ಳವರ ದೆಸೆಯಿಂದಲಿಪ್ಪತ್ತೈದು ತತ್ವಂಗಳಾಗಿ ತನುರೂಪಾಂತವು ೭

ಮತ್ತೆ ಕೇಳಾ ಮೂಲಶಕ್ತಿಯೇ ಬಹು ಭೇದ
ವೃತ್ತಿಯಿಂ ತ್ರಿಗುಣಸ್ವರೂಪಾಗಿ ತತ್ವಗಳ
ಸತ್ವಾಂಶದಿಂ ನಾಲ್ಕು ಕರಣಮಂ ಮೇಲೆ ಸುಜ್ಞಾನೇಂದ್ರಿಯಗಳೈದನು
ಬಿತ್ತರಿಸಿ ರಾಜಸಾಂಶೆಯಲಿ ಕರ್ಮೇಂದ್ರಿಯದ
ಭಿತ್ತಿಯನ್ನನುಗೆದು ತಾಮಸಾಂಶೆಯಲಿ ರಚಿ
ಸಿತ್ತಲೈ ಸ್ಥೂಲಾಂಗಮಂ ಮೂರುಗುಣವೆರಸಿ ಸೂಕ್ಷ್ಮಾಂಗಮಂ ಗೈದುದು ೮

ಈ ಪರಿಯಲಖಿಲ ಭೂತವ ರಚಿಸುತದರಿನೊಳ್
ಸ್ತ್ರೀಪುರುಷಭೇಧಮನ್ನನುಗೈದು ತದ್ರತಿಕ
ಲಾಪಮೋಹವನೂರಿ ತನ್ಮೂಲದಿಂದಲುತ್ಪತ್ತಿ ಕರ್ಮವ ತೋರಿಸಿ
ರೂಪುನಾಮಕ್ರಿಯಾವಿತ ಭಿನ್ನತೆಗಳ ಸು
ಸ್ಥಾಪನೆಯನೆಸಗಿ ಸೃಷ್ಟಿಸ್ಥಿತಿಲಯಂಗಳಾ
ರೋಪಣೆಯನೇರ್ಗೊಳಿಸಿ ಕಾರ್ಯಕಾರಣಹೇತುವಾಗಿ ತಾ ಪೆಸರೇರ್ದುದು ೯

ಮೆರೆವ ಮೂಲಪ್ರಕೃತಿಯೊಡವೆರೆದ ಚಿತ್ಕಳೆಯೆ
ಪರಮಸಂಜ್ಞಿಕಮಾಗಿ ಕರಣೇಂದ್ರಿಯಗಳನಾ
ವರಿಸಿಪ್ಪ ಚೇತನಮೆ ಜೀವನೆನೆ ಪೆಸರಾಗಿ ಪಾದಾಂಶಚಿತ್ತೇಜಮೇ
ಪರಮಜೀವರ್ಗಳೆನೆ ಜಸವೊಡೆದವಿನ್ನು ಮೇ
ಲಿರುತಾ ತ್ರಿಪಾದಕಳೆ ಲಸದಮೃತ ರೂಪಿನಿಂ
ಚಿರದಲೊಪ್ಪಿಹುದು ನಿಶ್ಚಲನದಿ ಮೂಲಚೇತನಮೆನಿಸುತೇಕಪರಿಯಿಂ ೧೦

ಮಗನೆ ಕಾರಣರೂಪವಾದ ನಿರ್ಗುಣಶಕ್ತಿ
ಸಗುಣಮನ್ನಂಗವಿಸಿ ಕಾರ್ಯಹೇತುಕವಾಗಿ
ತ್ರಿಗುಣರೂಪಾಂತು ಸೃಷ್ಟಿಸ್ಥಿತಿಲಯಂಗಳ್ಗೆ ಕರ್ತೃತ್ವಮಂ ತಳೆದುದು
ಬಗೆವೊಡವರೊಳ್ ರಜೋಗುಣದಿಂದೆ ಸೃಷ್ಟಿಯಂ
ನೆಗಳಿಸುವುದೆಮಗಾದುದಿನ್ನು ಸಾತ್ವಿಕ ಗುಣದಿ
ಸಗಧರಂ ಪಾಲನೆಯನೆಸಗುವಂ ತಾಮಸದಿ ಲಯವನ್ನೈದಿಪ ರುದ್ರನು ೧೧

ಚತುರ ತಿಳಿ ನಮ್ಮ ಭಾಗಕೆ ಬಂದ ಸೃಷ್ಟಿಗೈ
ವೆತನದಿಂದಾವು ತೋರುವ ನವಬ್ರಹ್ಮರ
ನ್ನತಿಶಯದ ಹದಿನಾಲ್ಕು ಮನುಗಳಂ ನಿರ್ಮಿಸಿದೆವಾ ಹರಿಯನುಜ್ಞೆಯಿಂದೆ
ಮಿತಿಗೊಳಲು ಬಹುವತ್ಸರಂಗಳುನ್ನತತಪೋ
ವ್ರತವನಾಚರಿಸಿ ಪಿರಿದಾಯುಸ್ಸದಾ ಸೃಷ್ಟಿ
ಗತಿಯ ಕುಶಲಂಗಳನ್ನಾವನಿಂ ಪಡೆದೆವವನೇ ಕರ್ತೃವೆಂದರಿವುದು ೧೨

ತಿಳಿಯಲಾವವನ ತೇಜೋಂಬುರಾಶಿಯೊಳು ಲವ
ಕಳೆಯನಾಶ್ರಯಿಸಿ ವಿಧುಸೂರ್ಯಾಗ್ನಿಗಳ್ ಸದಾ
ಬೆಳಗುವರ್ಮುನಿನಿಕರವಾರಂಘ್ರಿಗಳ ನೆನೆದು ಭವದೊಡರ ತಡೆಗಡಿವರು
ಸುಳಿಸೀ ಪ್ರಪಂಚಮಂ ಮಾಯೆ ಯಾವವನ ಮೈ
ವೆಳಗನಂಗವಿಸಿ ಜಸವೊಂದಿಹಳ್ ಪ್ರಳಯಗಳ
ಲುಳಿವುದಾವನ ದಿವ್ಯಮೂರ್ತಿಯಾ ಹರಿಯವಗೆ ಕರ್ತೃವೆಂದೆನೆ ತಿಳುವುದು ೧೩

ಪುತ್ರಕೇಳಾದಿಯೊಳಗೆವಗಾದ ಪರಿಭವ ವಿ
ಚಿತ್ರಮಂ ವಿಶ್ವಮನ್ನೊಳಕೊಂಡು ಷಣ್ಮಾಸ
ಮಾತ್ರದ ಕಿಶೋರರೂಪವನಾಂತು ಭುವನಸಂಭರಿತಜಲಶಯನನಾಗಿ
ನೇತ್ರಗಳ ಮುಗಿದು ಕಾರ್ಯವನುಳಿದು ಮೆರೆವ ವಟ
ಪತ್ರದೊಳ್ ಪವಡಿಸಿದ ನಾರಾಯಣನ ಸೂಕ್ಷ್ಮ
ಗಾತ್ರಮಂ ನೋಡಿ ಸೆಣಸಿದೆವಾವು ತನ್ಮಹಾಮಹಿಮೆಯಳವನ್ನರಿಯದೆ ೧೪

ಒಂದು ಯಾಮದಲುದರಮಂ ಪೊಕ್ಕು ಸಂಚರಿಸಿ
ಬಂದವನೆ ಪಿರಿದು ಬಲ್ಲಿದನೆಂದು ಶಪಥಮಂ
ಸಂಧಿಸೀ ಪ್ರಾದೇಶಮಾತ್ರದ ಕಿಶೋರನಳವೆನಿತೆಂದು ಗರ್ವದಿಂದೆ
ಮುಂದುವರಿದುದರಮಂ ಪೊಕ್ಕು ಪಿರಿದಂಡಗಳ
ನೊಂದು ನಿಮಿಷವು ನಿಲ್ಲದಲೆದು ಬಹುವತ್ಸರವು
ಸಂದುಪೋದವು ಮರಳಲೆಡೆಗಾಣದೊಳಗೆ ಸಿಲುಕಿದೆವು ಪಟುಗರ್ವಮಣಗಿ ೧೫

ಇದ್ದುದು ಚತುರ್ಮುಖಸನ್ಮೂಹಗಳ್ ರುದ್ರಗರು
ಡಧ್ವಜರ ಮಂದೆಗಳ್ ನೆಲೆಯಿಲ್ಲ ಸುರ ಪುರದ
ಗದ್ದುಗೆಯ ಗರುವರೆನಿತೆನಲಹುದು ನಾಲ್ಕೆಂಟುಷೋಡಶಾನನಗಳಿಂತು
ವೃದ್ಧಿಗೊಳುತವು ಸಹಸ್ರಾನನದ ಪರಿಯಂತ
ಮಿದ್ದರಾ ಬ್ರಹ್ಮರಳತೆಗಳಿಲ್ಲವೆಮ್ಮರವು
ಹದ್ದು ಭೇರುಂಡನೊಳು ಹೊಣಕೆಗೈದಂತಾದುದೇವೇಳ್ವೆನಚ್ಚರಿಯನು ೧೬

ಸುತನೆ ಕೆಳಂಗಾಲಿನತಳಮಂ ಮೇಗಾಲ
ವಿತಳಮಂ ಜಂಘೆಯೊಳಗಣಗಿಪ್ಪ ಸುತಳಮ
ನ್ನತಿಶಯದ ಜಾನುಪ್ರದೇಶದ ತಲಾತಲವನೂರೂಮಹಾತಳವನು
ಅತಿಶಯದ ಗುಹ್ಯದೇಶದ ರಸಾತಳವನ
ಚ್ಚ್ಯುತನ ಕಟಿದೇಶಗತ ಪಾತಾಳಲೋಕದು
ನ್ನತಿಯ ನೆರೆ ತೊಳತೊಳಲಿ ಬಳಲಿ ನಾಭಿಯಲೆಸೆವ ಭೂಲೋಕಕ್ಕೈತಂದೆವು ೧೭

ಪೆಸರೇರ್ವ ಭೂಲೋಕಮಂ ನೋಡಿ ಕುಕ್ಷಿಯೊಳ
ಗೆಸೆವಾ ಭುವರ್ಲೋಕಮಂ ಕಂಡು ಹೃದಯದೊಳ
ಗೊಸೆದಿಹ ಸುವರ್ಲೋಕಮಂ ಬಳಸಿ ವಕ್ಷದ ಮಹರ್ಲೋಕದೊಳಗೆ ತಿರುಗಿ
ಅಸುರಾರಿ ಕಂಠಸಂಸ್ಥಿತಜನೋಲೋಕ ರಂ
ಜಿಸುತಿಹ ಲಲಾಟದೊಳಗಣ ತಪೋಲೋಕ ಮೇ
ಲಸಮಾನ ಮೂರ್ಧ್ನಿಶೋಭಿತ ಸತ್ಯಲೋಕಗಳಲಲೆದಲೆದು ಬೆಂಡಾದೆವು ೧೮

ದುರ್ಗಮದ ಶಪಥಮನ್ನಾಂತು ಪೊಟ್ಟೆಗೆ ಪೊಕ್ಕು
ನಿರ್ಗಮಕ್ಕೆಡೆಗಾಣದಲ್ಲಿಯೇ ಸುಜನಸಂ
ಸರ್ಗಮನ್ನೈದಿ ಬಹುವತ್ಸರಂಗಳ್ ತಪವನಾಚರಿಸಲದರ ದೆಸೆಯಿಂ
ಭಾರ್ಗವೀವರನೊಲಿದು ನಾಭೀಕಮಲದಿವ್ಯ
ಮಾರ್ಗದಿಂ ಪೊರವಡಿಸಲಾಗ ತತ್ತ್ವನಯನೆಂ
ದೇರ್ಗೊಂಡುದೆವಗೆ ವಿಖ್ಯಾತಿ ತಳೆದೆವು ಪದ್ಮಯೋನಿನಾಮವನಿಳೆಯೊಳು ೧೯

ತಿಳಿಯಲ್ ವಿರಾಟ್ಪುರುಷನೇ ಸ್ಥೂಲದೇಹವಾ
ಗಳವಡೆ ಹಿರಣ್ಯಗರ್ಭನೆ ಸೂಕ್ಷ್ಮತನುವಾಗಿ
ಬೆಳಗಲವ್ಯಾಕೃತನೆ ಕಾರಣಾಂಗವು ಮೂಲಶಕ್ತಿಯೆ ಮಹಾಕಾರಣ
ನೆಳಲಿನ ಶರೀರವ್ಮೈಸಲೆ ಸೂರ್ಯಚಂದ್ರರೇ
ಪೊಳೆವ ನೇತ್ರಗಳು ಮಾರುತನೆ ತ್ವಗ್ದಿಕ್ಕುಗಳೆ
ಖಳಹರಶ್ರವಣಂಗಳಶ್ವಿನಿಯರೇ ಘ್ರಾಣ ವರುಣನೇ ರಸನೆ ಹರಿಗೆ ೨೦

ಚಂದ್ರನೇ ಮನಮೆನ್ನ ರೂಪಮೇ ಬುದ್ಧಿ ಗುಣ
ಸಾಂದ್ರ ಸುಕ್ಷೇತ್ರಜ್ಞನೇ ಚಿತ್ತ ವಾಣಿ ವಾ
ಗಿಂದ್ರಿಯವು ವಾಸವನೆ ಪಾಣಿಗಳುಪೇಂದ್ರನೇ ಪಾದ ಮೃತ್ಯುವೆ ಪಾಯ್ವಲೇ
ಇಂದ್ರಾದಿಗಳ್ ಚರರು ವಿಶ್ವಮೇ ಕಾಯ ನಾ
ಗೇಂದ್ರರೇ ನರಗಳದ್ರಿಗಳೆಲುಗಳೆಸೆವ ತರು
ವೃಂದಗಳೆ ರೋಮಂಗಳಂಬುಧಿಗಳೇ ಕುಕ್ಷಿಯರಿವರಾರಾ ರೂಪನು ೨೧

ಪೊಳೆಯು ಮಣಲನ್ನೆಣಿಕೆಗೊಂಡಡುಂ ಮುಂಗಾರ
ಮಳೆಯು ಹನಿಗಳನಳತೆಗಂಡಡುಂ ಚುಕ್ಕಿಗಳ
ಬಳಗಮನ್ನೆಣಿಸಿ ಕಡೆಗಂಡಡುಂ ಭೂರೇಣು ಚಯುವಳತೆಯನ್ನರಿವಡುಂ
ಇಳೆಯುನಡಿಯಿಂದಳೆಮು ತೀಳಿವಡುಂ ವಾರಿನಿಧಿ
ಗಳ ಜಲವ ಬಗಸೆಯಿಂ ಬಸಿವಡುಂ ಹರಿಮಹಿಮೆ
ಯುತೆಯುಂ ಕಾಣಲಪ್ಪುದೆ ಕಲ್ಪಶತಮೆಣಿಕೆಗೊಳಲು ಶೇಷಾದಿಗಳ್ಗೆ ೨೨

ಆ ಪರಮಪುರುಷನೇ ಬಗೆಗೊಳಲ್ ಚೈತನ್ಯ
ರೂಪನನ್ವಯನಪ್ರಮೇಯನವ್ಯಯನಾತ್ಮ
ದೀಪನಸ್ತ್ರನ್ನಿಯಾಮಕ ಜಗನ್ಮಯನಚಲನಾ ಹರಿಯನುಜ್ಞೆವಿಡಿದು
ರೂಪಿಸುತ್ತಿಹೆವಾವು ಸೃಷ್ಟಿಕರ್ಮಗಳನೆಂ
ದಾ ಪಿತಾಮಹನು ನಾರದಗೆ ಸುಪ್ರೇಮದಿ ನಿ
ರೂಪಿನಿದನಾ ರಹಸ್ಯವನೆ ನಿನಗೊರೆದೆವೆಲೆ ನೃಪತಿ ನೀ ತಿಳಿಯೆಂದನು ೨೩

ಪರಿಕಿಸುವಡಾ ಹರಿಯೆ ಘನಕೆ ಘನನಣುವಿಗಣು
ಹಿರಿಯರ್ಗೆ ಹಿರಿಯನರಿವಿಂಗರಿವು ಚೇತನಕೆ
ಪೊರೆವ ಚೇತನನು ತೇಜಸ್ಸ್ವಭಾವರ್ಗೆ ತೇಜೋರೂಪ ಪರಕೆ ಪರನು
ನಿರುಪಮಾನಂದಸ್ವರೂಪನನುಪಮ ರಮಾ
ವರನ ಲೀಲಾವಿಭೂತಿಯನಾಂತು ಬೇರೆನಿಸಿ
ಮೆರೆವ ವಿಶ್ವವನು ತದ್ರೂಪೆಂದು ನೆನೆದು ನೀ ಪರಮಪದಮಂ ಪಡೆವುದು ೨೪

ಮುನಿಪ ಬಿನ್ನಹ ಸಮಷ್ಟಿಜ್ಞಾನಲಕ್ಷ್ಯಮ
ನ್ನನುವಿಡಿವುದಾರೂಢಮತಮಲ್ಲದುಳಿದರಿಂ
ಗನುಗೊಡುವುದೆಂತಾರುರುಕ್ಷರ್ಗಳಾದಿಸಾಧನದಿ ಸಗುಣವನು ಭಜಿಸಿ
ಕೊನೆಗೆ ನಿರ್ಗುಣವ ಸಂಭಾವಿಸುತಲದ್ವೈತ
ಘನಪದವನೈದುವುದು ಯುಕ್ತಮಹುದದರಿನಿಂ
ವನಜಾಕ್ಷ ಲೀಲಾವತಾರಗಳ ಚರಿತೆಯಂ ಕೃಪಗೈಯಬೇಕೆಂದನು ೨೫

ಲೇಸನಾಡಿದೆ ಭೂಪ ಸಗುಣವಹ ನೂತನಾ
ಭ್ಯಾಸನುಮರಿದಡಲ್ಲದನುಗುಡದಖಂಡಮತ
ವಾಸುದೇವಂ ತಳೆದ ಲೀಲಾವತಾರಗಳ ಚರಿತದಿತಿಹಾಸಗಳನು
ಆ ಸರಸಿಜಾಸನಂ ಪೂರ್ವದೊಳ್ ನಾರದ ಮು
ನೀಶಂಗನುಗ್ರಹಿಸಿದವತಾರ ಸಂಗತಿಯ
ನೇ ಸವಿಸ್ತಾರವಾಗೊರೆವೆ ಸಕ್ರಮವಾಗಿ ಕೇಳದರ ಮಹಿಮೆಗಳನು ೨೬

ಆದಿಯೊಳ್ ಸನಕಾದಿ ಶಾಪದಿಂ ಜಯವಿಜಯ
ರೈದಿದಕ್ರೂರರ ಜನ್ಮವನು ಕಶ್ಯಪನಿಂದ
ಲಾ ದಿತೀದೇವಿಯರ ಗರ್ಭದಿಂದದರೊಳ್ ಕನಿಷ್ಠಂ ಹಿರಣ್ಯಾಕ್ಷನು
ಮೇದಿನಿಯೊಳಾರು ತನಗಿದಿರಿಲ್ಲದೊಲ್ ತಪ
ಸ್ಸಾಧನದಿ ವರಗಳಂ ಪಡೆದು ತಾಮಸ ಕರ್ಮ
ಹಾದಿಯಂ ಬಗೆಗೊಂಡು ಯಜನಾದಿ ಷಟ್ಕರ್ಮ ವರಸೆಯಂ ಬರಿಗೈದನು ೨೭

ಯತಿಪರ್ಣಶಾಲೆಗಳನುರಿಸಲಾ ಧೂಮ ಸ
ಸ್ಕೃತು ಹೋಮಧೂಮಗಳನೋಡಿಸಿತು ಸುರವಿಪ್ರ
ಸತಿಯರನ್ನಲೆಸಲವರಾ ಘೋಷ ವೇದ ಘೋಷಂಗಳನ್ನಿಳಿಗೌಕಿತು
ಸತತ ಸಜ್ಜರಿಗನುಗ್ಯೈವ ಹಿಂಸಾಕರ್ಮ
ಗತಿಯು ಸತ್ಕರ್ಮಗಳನಣಗಿಸಿತು ಭೂತ ಸಂ
ತತಿಗಳಿಂಗೆರಗಿಸುವ ಸಂತಾಪ ಸಂತಾಪಸರ ಮತವನೆಡೆಗೆಡಿಸಿತು ೨೮

ಗೃಧ್ರವಾಯಸಮುಂಡು ದಣಿವುದೇ ದ್ವಿಜತೃಪ್ತಿ
ರುದ್ರಭೂಮಿಯ ಪೋಷಿಸುವುದೆ ಭೂಪಾಲನೆಯು
ಕ್ಷುದ್ರಭೂತಪ್ರೇತ ಹಿತಕರಮೆ ಭೂತಹಿತಕರನಾದ ಸದ್ವೃತ್ತಿಯು
ಉದ್ರೇಕದಿಂ ದೇವ ಕುಲವಿಪ್ರರಿಗೆ ಮಹೋ
ಪದ್ರಮಂ ಕೊಡುವುದೇ ದಾತೃತ್ವಮಾಗೆ ಲಯ
ರುದ್ರ ಸಹಪಾಟಿಯೆಂದೆನಿಸಿ ನಿಜರಾಜ್ಯಭಾರದಲೆಸೆದನಿಳೆ ನಡುಗಲು ೨೯

ಕಡಿದು ಬೃಂದಾವನದ ಮಣ್ಗಳಿಂ ಕ್ರತುಗುಂಡ
ದೊಡರಸುರೆಪೂಳ್ದು ದೇವಾಲಯ ಮಠಂಗಳಂ
ಕೆಡಹಿ ತತ್ಪಾಷಾಣಗಳ ತುಂಬಿ ತೀರ್ಥಕೊಳಗಳನು ಸಮತಳವನೆಸಗಿ
ಒಡೆದು ಯತಿಗಣಕಮಂಡಲಗಳನ್ನಾ [1]ಪೆಂಚು[1]
ಪಿಡಿ ದಂಡುಗೋಲ್ಗಳುವು ಪರಿಕರದಿ ದೈತ್ಯಚಾ
ವಡಿಗಳಂ ನಿರ್ಮಿಸಿದನಮಲ ಸಾಲಗ್ರಾಮ ಸೇರುವೆಯ ಭಿತ್ತಿ ಮಿಗಲು ೩೦

ಎಲ್ಲಿಯುಂ ಸುರರ ಪೆರ್ಮೊರೆಗಳಿಂ ಸೆರೆಗಳಿಂ
ದೆಲ್ಲಿಯುಂ ದುಷ್ಟ ಪ್ರಶಂಸೆಯಿಂ ಹಿಂಸೆಯಿಂ
ದೆಲ್ಲಿಯುಂ ಖಲರ ಸಂಚಾರದಿಂ ಘೋರದಿಂ ಕ್ರೂರಕರ್ಕಶಗಳಿಂದೆ
ಎಲ್ಲಿಯುಂ ಸುಜನ ಸಂಘಾತಿಯಿಂ ಭೀತಿಯಿಂ
ದೆಲ್ಲಿಯುಂ ತಲ್ಲಣಿಪ ಲೋಕದಿಂ ಶೋಕದಿಂ
ದೆಲ್ಲಿಯುಂ ಹಾಹಾರವಂಗಳಿಂ ಕಂಗಳಿಂಗತಿಭಯಂಕರಮೆನಿಸಿತು ೩೧

---

೩೦. 1. ಪೆಂ.

ಅಮರರಿಂಗನಶನ ವ್ರತವಾಗೆ ಕುಂಭಿಣೀ
ಸುಮನಸರ್ಗುಳಿವೆ ದುಸ್ಥಿತವಾಗೆ ಕುಲ ಮತಾ
ಶ್ರಮ ಧರ್ಮಗಳ್ ಸಂಕಲಿತವಾಗೆ ಶುಭ ಸಂಭ್ರಮಾದಿಗಳದೃಶ್ಯವಾಗೆ
ಯಮನಗರ ಸಿರಿಗಳುನ್ನತವಾಗೆ ಸತ್ಕೃತಿಗ
ಳಮರಿಕೆಯ ಸಲುಗೆ ಭೂಗತವಾಗೆ ತಾಪಸೋ
ತ್ತಮರ ಸುವ್ರತವೆ ಕೀಲಿತವಾಗೆ ಕನಕಾಕ್ಷನಾಳಿಕೆ ಪೆಸರ್ವಡೆದುದು ೩೨

ಹೆಂಡಿರ್ಗಳಂ ಸೂರೆಗೊಟ್ಟು ದುಷ್ಟಾಸುರರ
ದಂಡನೆಗಳಿಂದೆ ಕಂಗೆಟ್ಟು ಮಹದೈಶ್ವರ್ಯ
ಮಂಡಲಗಳಕ್ಕರಂ ಬಿಟ್ಟು ಕಡುಭೀಕರದ ಬಿಂಕದೆಡೆಗೊಡಲುಗೊಟ್ಟು
ಕಂಡವರಿಗೆಲ್ಲ ಬಾಯ್‌ಬಿಟ್ಟು ಕೆದರಿದ ಕೇಶ
ಮಂಡೆಗಳ ಚೆಲುವಿಲಳವಟ್ಟು ನಿರ್ಜರ ನಿವಹ
ತಂಡತಂಡಗಳಲೈತಂದು ದೂರಿದರು ಕಮಲಾಸನಗೆ ಪರಿಭವವನು ೩೩

ಶಾರದಾರಮಣ ಮೊರೆಯಾಲಿಪುದು ದಿತಿಜರ್ಗೆ
ಸೂರೆಯೋದುದು ಸುರರ ಸಂಪದವು ಮರ್ತ್ಯರೊಳು
ಹಾರವರ ಹಾರವಗಳೇರ್ಗೊಂಡವಮರ ಸಂಘಾತ ಘಾತವನ್ನೈದಿತು
ಊರನುಳಿದರು ಯಜ್ಞದೀಕ್ಷಿತರು ಗಂಧರ್ವ
ನಾರಿಯರು ತೊತ್ತಿರಾದರು ಶುಕ್ರಶಿಷ್ಯರ್ಗೆ
ದಾರಿ ಮಸುಳಿಸಿತು ನಾಕದ ಹಿರಣ್ಯಾಕ್ಷನಾಟೋಪಕಿದಿರಿರದೆಂದರು ೩೪

ದೇವ ನೀನೊಲಿದು ರಕ್ಷಿಸದಿರಲು ವಿಭುಧರಂ
ಕಾವರಾರಿನ್ನು ಕನಕಾಕ್ಷ ಘಾತಕೆ ಸಿಲುಕ
ದಾವು ಭವದಂಘ್ರಿಗಳನೈದಿದುದೆ ಪುನರುದ್ಭವಿಸಿದ ಪರಿಯೆನಿಸಿದುದಲೇ
ಜೀವದುಳುಹೇ ನಾಕಸಿರಿಯೆಮಗೆ ಮಿಕ್ಕುದಂ
ನೀವೆ ಬಲ್ಲಿರಿ ನಮಗದೇಕೆನಲು ವಿಧಿ ಕೇಳ್ದು
ದೇವತೆಗಳಂ ಸಂತವಿಟ್ಟು ಸಾಮದ ಮಂತ್ರದಿಂ ಜಯಿಸಲನುವಾದನು ೩೫

ಆ ಕ್ಷಣದಿ ನಾರದಗೆ ನೇಮಿಸಿದನಾ ಹಿರ
ಣ್ಯಾಕ್ಷನೆಡೆಗೈದಿ ನಯಭಯಗಳನ್ನೊರಿ ವಿಬು
ಧಕ್ಷೋಭೆಯಂ ಪರಿದು ಕಾಯ್ವುದೆನೆ ಮುನಿ ಹಸಾದವನಾಂತು ಶುಭ್ರತರದ
ಪಕ್ಷಿಯನ್ನಡರಿ ವೀಣಾ ಮಿಡಿಗಳಿಂ ಸಾರ
ಸಾಕ್ಷಸಂಕೀರ್ತನೆಯಲೆರಗಿ ಲಸದುನ್ಮೀಲಿ
ತಾಕ್ಷನಾನಂದದಿಂ ನಡೆತಂದನಭ್ರ ಮಾರ್ಗದಲಿ ಶೋಣಿತ ನಗರಿಗೆ ೩೬

ಹಂಸವಾಹನನಾಗ ಹಂಸನಿಜತೇಜದಿಂ
ಹಂಸಗಣನುತ ಪರಮಹಂಸ ತಾನಾದಡುಂ
ಹಂಸಡಿಬಿಕಾರಿರೂಪಂ ಸತತ ಭಾವಿಸುವ ಹಂಸಿನಾನಂದದಿಂದೆ
ಹಂಸಾಕ್ಷರಗಳ ನೆನಹಂ ಸದಾ ಮರೆಯದಾ
ಹಂಸರ್ವಸಾಕ್ಷಿ ನಾಹಂ ಸಗುಣ ರೂಪ ಸೋ
ಹಂ ಸದಾತ್ಮಕನೆಂಬ ಹಂಸಮಯ ವಿಜ್ಞಾನಸಂಸೇವ್ಯನೈತಂದನು ೩೭

ಮಲಿತ ಮನ್ನೆಯರೂರ್ಗಳಂ ಸೂರೆಗೊಂಡು ತ
ತ್ಕುಲವನುರೆ ಸಂಹರಿಸಿ ಪರಿವ ರಕ್ತದಲಿ ಮ
ಣ್ಗಲಸುತ ತದಸ್ಥಿಸೇತುವೆಯಿಂದೆ ಭಿತ್ತಿಯನಮರ್ಚಿ ಸಾಲಾವಲಯವಂ
ಬಲಿದ ದೆಸೆಯಿಂದ ಶೋಣಿತನಗರವೆಂದೆಂಬ
ಸಲುಗೆಯಿಂ ಪೆಸರ್ವಡೆದ ಪುರದ ಬಹಿರಾವರಣ
ಕಲಿತವನದೇಶಮನ್ನೈದಿದಂ ಕಾರೊಡಲ ದೈತ್ಯರಿರವಂ ನೋಡುತ ೩೮

ಪೂಳ್ದ ಶವಗಳ ಕುಳಿಯ ಬಗೆವರಂ ಕುಣಪಗಳ
ಸೀಳ್ದಿರಡು ದವಡೆಯಿಂದಗಿವರಂ ಪೆರ್ಚಿರ್ದ
ಪೋಳ್ದಿಗೆದು ಪೊರೆಗಳಂ ಬಿಗಿವರಂ ಬಿಗಿದ ಪೊರೆಗಳನು ಮಸ್ತಕಗಳೊಳಗೆ
ತಾಳ್ದು ನಿಜವಸತಿಗಂ ನಡೆವರಂ ದೈನ್ಯದಿಂ
ಕೇಳ್ದರಿಂಗೊಂದೆರಡ ಕೊಡುವರಂ ನೋಡಿ ಮುನಿ
ಯಾಳ್ದು ವಿಸ್ಮಯನದಿಯೊಳೇರ್ದ ನಿಡುಹಾಸವಂ ಬೀರುತವು ನಡೆತಂದನು ೩೯

ಪುರದ ಸಾಲಾವಲಯವೊಪ್ಪಿದುದು ವರ್ಣಬಂ
ಧುರದಿಂದಲುನ್ನತಿಯ ತವಗಂಗಳಿಂ ಶೋಣ
ಗಿರಿಯ ಸಾಲೆಸೆವಂತೆ ರಕ್ತ ದೀಧಿತಿ ಮಿಗಲು ಸುತ್ತುಗಾವಲ ದೈತ್ಯರ
ವೊರಹಿಂಸಿಂ ಭೂತಹಿಂಸೆಗಳಿಂದಲಂತಕನ
ಪುರವನೇಳಿಸುವ ಪರಿಕರಗಳಂ ನೋಡುತ
ಚ್ಚರಿಯಿಂದೆ ಮಸ್ತಕವನೊಲವುತವೆ ಪುರದ ಪೆರ್ವಾಗಿಲೆಡೆಗೈತಂದನು ೪೦

ಮುನಿಪನಂ ಕಾಣುತ್ತೈತಂದು ಮುತ್ತಿತು ಹೊಗೆವ
ಹೊನಲುದಾಡೆಗಳ ಮುಳ್ಗೇಸರಂಗಳ ಕಣ್ಣು
ಗೊನೆಗಳುರಿಗಳ ಹಲವು ಮಸ್ತಕಂಗಳ ತೂರುಗಿಡಿಸುಯಿಲ ನಾಸಿಕಗಳ
ಇನಕಿರಣದೇಳ್ಗೆಗೆಡೆಗೊಡದ ನಿಶಿಯಂ ಬೀರ್ವ
ತನುಗಳುರುಬೃಹದಾಕೃತಿಗಳ ಕೆಮ್ಮೀಸೆಗಳ
ಕನಲುಮಸುಡಿನ ರಕ್ಕಸರು ವೊರೆದು ಗದ್ದಿಸುತಲೇಡಿಸುತ ಭೀಕರದೊಳು ೪೧

ನೋಡಿ ನಸುನಗುತ ಸರಸಿಜಪೀಠತನಯ ಮಾ
ತಾಡಿಸಿದನೆಲವೊ ನಿಮ್ಮಾಳ್ದ ಕನಕಾಂಬಕನ
ದಾಡೆಯುರಿಕಂಗಿಡಿಗಳುರುಸುಯ್ಲ ಕಾಹುರತೆಗದುರಿ ಸೈರಿಸದಮರರು
ಓಡಿ ಪೋಗಲ್ಕೆ ತದ್ವಸಗೆಯನ್ನೆಮ್ಮವೊಡ
ನಾಡಿ ಕನಕಾಕ್ಷನಿಂಗರುಹಿ ಸುರಸತಿಯರೊಡ
ಗೂಡಿಸಲು ಬಂದೆವೆಂಮಯ ಬರವನರುಹುವುದು ವಹಿಲದಿಂ ನೀವೆಂದನು ೪೨

ಸಕ್ರೂರವದನದಸುರರ್ಪರಿದು ತಿಳುಹಿದರು
ಶಕ್ರಾರಿಗಮರಋಷಿಯೆಂದುದಂ ತನ್ನಯ ಪ
ರಾಕ್ರಮವ ಪೊಗಳಿದುದ ಕೇಳಿ ಸೋತ್ಕರ್ಷಗಂ ಹಿಗ್ಗಿ ಮೋಣೆದಿರುಗೊಳಲು
ಶುಕ್ರಸಂ ಕಳುಹಲ್ಕೆ ಶಿಷ್ಯಜನಸಹಿತ ಭೂ
ಚಕ್ರಪಾವನಮೂರ್ತಿ ನಾರದನ ಕಂಡು ವೇ
ದಕ್ರಮದಿ ನುತಿಸುತಾ ಚರಣಾಬ್ಜಗಳಲಿ ವೈಯಿಕ್ಕಿದಂ ಭಕ್ತಿ ಮಿಗಲು ೪೩

ವಂದಿಸಿದ ದೈತ್ಯಗುರುವಂ ತೆಗೆದು ಬಿಗಿಯಪ್ಪಿ
ವಂದಿಗೆಯ ಶಿಷ್ಯಜನರಂ ಹರಸಿ ಸುಪ್ರೇಮ
ದಿಂದನಿಬರಂ ಕುಶಲವಾರ್ತೆಯಿಂ ಸಂತೈಸಿ ಸರಸಸಲ್ಲಾಪ ಮಿಗಲು
ಬಂದರಾ ನವರತ್ನಮಂ ಬಿಗಿದ ಮಲಕಿನಿಂ
ಮುಂದೆ ನಿರ್ಜರ ಸಭಾಮಂಟಪವ ನಗುತ ಚೆಲು
ವಿಂದೆ ಪರಿಶೋಭಿಸುವ ಮಯನಿರ್ಮಿತಾಸ್ಥಾನ ಸದನದೆಡೆಗರ್ಥಿ ಮಿಗಲು ೪೪

ವರಸೆಗೊಂದೇ ಪರಿಯ ರತ್ನದಿಂದೊಂಭತ್ತು
ವರಸೆಯಹ ಸೌಧಮಂ ನವರತ್ನದಿಂರಚಿಸಿ
ಮೆರೆವ ರಕ್ಕಸರ ಮೈಗತ್ತಲೆಯದೊಂದು ರವಿಯಿಂ ಸಡಿಲದೆನೆ ಸೂರ್ಯರ
ಎರಡಾರು ಸಂಖ್ಯರಂ ಪಿಡಿತಂದು ಸಾಲುಗೋ
ಪುರದುದಿಗೆ ಬಿಗಿದಿರ್ಪರೆನೆ ರನ್ನಗಲಶಗಳ್
ಪರಿಶೋಭಿಸಿದವಮರಪುರವನಿರಿದೆಬ್ಬಿಸುವ ಭಲ್ಲೆಹಗಳಲಗೆನಿಸಲು ೪೫

ತೋರ್ವ ಶಶಿಕಾಂತಬಂಧುರಕೊಳಗಳಿಂದೆ ಮುಗಿ
ಲೇರ್ವ ಜೀರ್ಕೊಳವಿಜಲಗುಂಪಿನಿಂದೊಗುವ ತುಂ
ತುರ್ವನಿಯ ಚಳಿಯುದಿಂ ತಂಪೊಡೆದು ಲೇಪಿಸಿದ ಕಸ್ತುರಿಸುವಾಸನೆಗಳಿಂ
ಪರ್ವಿದೆಳೆಮಾರುತನ ಸುಳುಹಿಂದೆ ಸೊಗಯಿಸುತ
ಲುರ್ವಿಗತಿಶಯಮೆನಿಸಿ ಸಂತತಾಮೋದಮಂ
ಬೀರ್ವ ಮಣಿವೆಳಗಿನಿಂ ಕಳಕಳಿಪ ತತ್ಸಭಾವಲಯಮಂ ಸಾರ್ದರಂದು ೪೬

ಅಮರರಿಂಗಾಪ್ತನೆಂದೆಂಬ ವೈರದಲೆರಗಿ
ಹಿಮಕಿರಣಬಿಂಬಮಂ ಸೀಳ್ದೆರಡು ಭಾಗಗೈ
ದಮರರಿಪುವೆರಡು ದವಡೆಗಳಲಿಟ್ಟಗಿವನೆನೆ ಕೋರೆಗಳ್ ನಳನಳಿಸಲು
ರಮಣನಂ ಸೀಳ್ದುದಕೆ ರೋಷದಿ ನಿಶಾರಮಣಿ
ಯಮರಿಯಾತನ ಮೈಯ ಮುತ್ತಿ ಬಿಗಿಗೊಂಡ ಸಂ
ಭ್ರಮಮಾಗದಿರದೆನಿಸಲಸಿತಾಂಗ ನಿಶಿಮುಸಕಲೆಸೆದನಾ ಕನಕಾಕ್ಷನು ೪೭

೪೭. 1. ಮುಳಿದು ರೋಷದಿ ನಿಶಾರಮಣಿಯ ಸುರನ,

[1]ಮಿ[1]ಡಿವ ಪುರ್ಬುಗಳುರಿವ ಕಣ್ಣುಗಳ ಸುರಿವ ಕೆಂ
ಗಿಡಿಗಳುಸುರುಗಳ ಪಟುದಂಷ್ಟ್ರಗಳ ವೊಳೆವ ಕೈ
ಖಡುಗ ಝಳಪುಗಳ ಗಜಘೋಟ ಶಾರ್ದೂಲ ಶುನಿಮುಖಗಳಿಂದಮರಿ ತೋರ್ವ
ದಡಿಗ ರಕ್ಕಸರರ್ಬುದಂಗಳಾವೃತವೆಸೆಯೆ
ನಡುವೆ ಮುಂಡಿಸಿದ ಕನಕಾಕ್ಷನೆದ್ದಾ ಶುಕ್ರ
ನಡಿಗೆರಗಿ ನಾರದಂಗಭಿನಮಿಸಿ ಮನ್ನಿಸುತಲಾಸನವನಿತ್ತನಂದು ೪೮

ಇಂತು ಪೂಜಾಸನಗಳೊದಗಿ ಕುಳ್ಳಿರ್ದ ತದ
ನಂತರದಿ ನಾರದನ ಮುಖನೋಡಿ ನಿರ್ಜರ ಕು
ಲಾಂತಕಂ ನುಡಿದನುರು ಕಾರ್ಮೇಘದಿಂದಲುಚ್ಚಳಿಪ ಬರಸಿಡಿಲಂತಿರೆ
ಸಂತವಿದ್ದಪರೆ ಶಕ್ರಾದಿಗಳ್ ಮನ್ಮಹಿಮೆ
ಯಂತರಂಗದಲೆಣಿಕೆಯುಂಟಲೇ ನಿಮ್ಮ ಬರ
ವಂ ತಳುವದುಸುರೆನಲ್ ನಾರದಂ ನಸುನಗುತಲಸುರವರಗಿಂತೆಂದನು ೪೯

ಖಳರಾಯ ಕೇಳು ಹೆಬ್ಬುಲಿಯೊಡನೆ ಗೋಗಣದ
ಕೊಳುಗುಳವು ಮೆರೆದಪುದೆ ನೀರೊ[1][ಳಲೆ][1]ವಂತೆ ವಿಷ
ಗೊಳನೊಳಾಡುವ ಸಲುಗೆಯಿದ್ದಪುದೆ ಲಸದನಿಮಿಷಾದಿ ಪುಷ್ಕರಚರರ್ಗೆ
ತಳೆದ ಸತ್ರಾನ್ನಭುಕ್ತರ ಬಲವು ಮನುಜರ
ನ್ನಿಳಿಯ ನುಂಗುವರ ಬಲಕಿದಿರಹುದೆ ಕನಕದ
ಗ್ಗಳ ಸತ್ವ ಕಬ್ಬಿಣದ ಬಲಕೆಣೆಯೆ ನಿನ್ನ ಬಲ ಸುರರಿಗೆತ್ತಣದೆಂದನು ೫೦

ಪೂರ್ವಗತಪುಣ್ಯಜನರೊಳ್ ನಿನ್ನ ಸರಿಸಮ
ನ್ನೀರ್ವರಾರುಂಟು ಕಶ್ಯಪ ಮಹಾಮುನಿಪನಾ
ಶೀರ್ವಾದದಿಂ ದಿತಿಯ ಗರ್ಭವಾರಿಧಿಯ ಲುದಿಸಿದ ಗರಾಯತಿ ನೀನಲೇ
ಉರ್ವಿಯಂ ಮುಸುಕಿಹುದು ನಿನ್ನ ಭೀಕರಕೀರ್ತಿ
ಶರ್ವರಿಯ ಬೆಡಗಿನಿಂ ನಿನ್ನೊಡನೆ ಕಲಹಕಿದಿ
ರೇರ್ವ ರಿಪುಗಳನಣಗಿಪುದು ಸಹಜ ಬಡವಿಪ್ರರನ್ನಲೆಯಲೇಕೆಂದನು ೫೧

---

೪೮. 1. ಜ. ೫೦. 1. ಳುಲಿ,

ಯತಿಯೆ ಕೇಳ್ ಪಾರ್ವರ್ಗಳಿವಗಹಿತರಾದ ದೇ
ವತೆಗಳುನ್ನತಿಗೆ ಕಾರಣಮಪ್ಪ ಯಜ್ಞಾದಿ
ಕೃತಗಳಿಂದವರಸುರೆ ಪೊರೆದು ಮತ್ತೆಮ್ಮೊಡನೆ ಕಲಹಕನುವಂ ಮಾಳ್ಪರು
ಸತತವೆಮ್ಮಿಳೆಯಲಿರುತೆಮ್ಮ ಶ್ರೇಯಸ್ಕರದ
ಮತ[1]ವಳಿದು ತಾವ[1]ಹಿತರಂ ಬೆಳಸಲನುಗೈವ
ಕ್ರತುಗಳನ್ನಳಿಸಿ ತತ್ಕರ್ತೃಗಳನೊರಸಿದೆವು ದುಶ್ಚರ್ಯವೇನಿದರೊಳು ೫೨

ಸಹಜಕುಲಧರ್ಮಮನ್ನನುಗೈವ ಕೃತ್ಯಗಳ
ಸಹಿತರುಚ್ಛ್ರೇಯ ನಿಮ್ಮಯ ನಾಶಕರದ ಸ
ನ್ನಹಿತೆಗನುಗೈವರೆಂದೆಂಬ ವಿಪರೀತ ಭಾವನೆ ನಿನಗೆ ತೊಡರಿಹುದಲೇ
ವಿಹಿತ ಸಚ್ಚರ್ಯ ನೆಲೆಯಪ್ಪುದಲ್ಲದೆ ದುಷ್ಟ
ಮಹಿಮೆಗಳ ಭೂಪರೇಳಿಗೆಗಳಂ ರಾಜ್ಯಸಿರಿ
ಸಹಿಸುವಳೆ ತನುಭುಜ ಬಲಾದಿಗಳ್ ನಿಲ್ಲುವವೆ ತಿಳಿದು ವರ್ತಿಪುದೆಂದನು ೫೩

ಆರಿಗೈ ದೇಹ ಸಂಪದಗಳೊಂದೇ ತೆರದಿ
ಬೇರು ಸಡಿಲದೆ ನಿಲ್ವಪರಿತು ನೋಡಿದಡೆಸೆವ
ನೀರ ಬೊಬ್ಬುಳಿಯ ಪರಿಯೈಸಲೇ ಮೊದಲೆನಿತು ನೃಪರಾದರೀ ಧರಣಿಗೆ
ವಾರನಾರಿಯು ಮಚ್ಚಿನೊಗತನಮಿದಲ್ಲದಿ
ನ್ನಾರಿಗೊಲಿದಪಳವನಿ ವರವ ಪಡೆದಿಹೆನೆನಲ್
ಕ್ರೂರಸಿಡಿಲೆರಗೆ ಕೊಡೆಯಾನಲಾಪುದೆ ದೈವಬಲಮಳಿದ ಬಳಿಕೆಂದನು ೫೪

ಅಸುರಪತಿ ಕೇಳು ಪೂರ್ವದಿ ತಪೋವರವ ಸಾ
ಧಿಸಿದ ಬಲ್ಲಿದರಾವರುಳಿದಿರ್ಪರೀಗ ಸಾ
ಹಸದಿ ನೀನಾರ್ಜಿಸಿದ ವರಗಳಂ ನಚ್ಚಿ ಮದಿಸಲ್ ಮೃತ್ಯು ಬಿಡಲರಿವುದೆ
ವಸುಮತಿಗೆ ವರನು ಹರಿಯಲ್ಲದಿನ್ನೋರ್ವರ್ಗೆ
ಸಸಿನಮೆನಿಸದು [1]ಸತ್ಯ[1]ಮೆಮ್ಮ ವಾಕ್ಯಂಗಳಿವು
ಪುಸಿಯಲರಿಯವು ದೇವಭೂಸುರರನಲೆವುದನ್ನುಳಿದು ನೀ ಸುಖಿಸೆಂದನು ೫೫

೫೫. 1. ತಥ್ಯ. ೫೨. 1. ನಾರ್ಜಿಸದ.

ರುಧಿರ ಸರ್ಪಿಗಳೆರಡನುಣಬಡಿಸಲಾ ಶುನಿಗೆ
ರುಧಿರವೇ ಪ್ರಿಯಮಲ್ಲದುಣಲರಿವುದೇ ಘೃತವ
ವಿಧುರೋಚಿಗಳ್ ಜಾರಚೋರರಿಂಗಿಷ್ಟಮೇ ದುಷ್ಟರ್ಗೆ ಸನ್ನೀತಿಯಂ
ಬುಧಜನರ್ಬೋಧಿಸಿದರೊಲಿದಪರೆ ತನ್ನ ರಿಪು
ಮಧುವೈರಿಯಾತನಂ ಪೊಗಳ್ದನೆನೆ ಕನಲಿ ರಾ
ದ್ರ್ರದಿ ನುಡಿದ ನೀನಲ್ಲದಿನ್ನೋರ್ವನಾದಡಾಹುತಿಗೊಂಬೆನೆಂದು ಮೊರೆದು ೫೬

ಹರಿಯೆ ಭೂವರನೆಂಬುದಂ ಕಾಂಬೆವಿನ್ನು ಯೀ
ಧರಣಿಯಂ ಕೊಂಡೊಯ್ವೆವಾವು ನಿಂಮವನು ಭೂ
ವರನಾದಡೆವ್ಮೊಡನೆ ಕಾದಿ [1]ತದ್ಧರಣಿಯಂ ತರುವನೆಂದುಸುರಿ[1] ಮುಳಿದು
ಮೊರೆದಬ್ಬರಿಸಿ ಕೋರೆದಾಡೆಯಿಂದವನಿಯಂ
ಕೊರೆದು ಮೀಟೆತ್ತಿ ಕೃಷ್ಣಾಜಿನದ ಭಾವದಿಂ
ಸುರುಳಿಸುತ ಕಕ್ಷದಲಿರಿಂಕಿ ಸೈಪರಿದಂ ರಸಾತಳಕ್ಕದ್ಭುತವೆನೆ ೫೭

ಉರ್ವಿಯಂ ಸುರುಳಿಸಲ್ಕದ್ರಿ ತರು ಪಟ್ಟಣ ಚ
ತುರ್ವಿಧದ ಭೂತಚಯಮಾದ ಬಹು ಬೆಡಗಿನಿಂ
ತೋರ್ವಡುವ ವಿಶ್ವಮೊಳಗಡಗಿ ಮುಸುಳಿತು ಬೀಜದೊಳು ತರುವಡಂಗುವಂತೆ
ಕೊರ್ವಿದಸುರನ ಭುಜಬಲಾಟೋಪ ಮಹಿಮೆಯ ಸು
ಪರ್ವಋಷಿ ನೋಡಿ ವಿಸ್ಮಿತನಾಗಿ ಮೆರೆವ ಗಂ
ಧರ್ವ ಜ್ಯೇಷ್ಠನ ಪೊರೆಗೆ ಸೈವರಿದನಮಲ ಹಂಸೆಯನಡರಿ ಗಗನಪಥದಿ ೫೮

ಕಂಡು ಕಮಲಾಸನಂಗರುಹಿದಂ ದೈತ್ಯನು
ದ್ದಂಡ ಭುಜಬಲ ಮಹಾಸತ್ವಮನ್ನವನಿಯಂ
ಪಿಂಡಿತವನೆಸಗಿ ಕಕ್ಷವಲಿರಿಂಕಿದ ಮಹಿಮೆಗಳ ಕೇಳಿ ಬೆರಗುಗೊಂಡು
ಕುಂಡಲಗಳಲುಗಲ್ಕೆ ಶಿರವನೊಲೆದೊಲೆದು ಹೃ
ತ್ಪುಂಡರೀಕದಲಿ ನಾರಾಯಣನಮೂರ್ತಿಯಂ
ಮಂಡವಿಸಿ ಭಾವನೆಯಲೆರಗಿದಂ ಭೂತಳವನುದ್ಧರಿಪ ವಾಂಛೆಯಿಂದೆ ೫೯

---

೫೭. 1. ತನ್ನಯ ಭೂಮಿಯಂ ತರುವನೆಂದು.

ಇಂತಬ್ಜಯೋನಿಯುಮಳ ಧ್ಯಾನಮದು ರಮಾ
ಕಾಂತನಿಂಗರಿವಾಗಲವನಿಯನ್ನೊಯ್ದ ವಿಬು
ಧಾಂತಕನನೊರಸಿ ಭೂತಳವನುದ್ಧರಿಪ ಸಂಕಲ್ಪಮಂ ಮನದಿ ನೆನೆದು
ಪಿಂತೆ ಜಯವಿಜಯರಿಂಗಿತ್ತ ಭಾಷೆಗಳನುವ
ಚಿಂತಿಸುತ ಮತ್ತೊರ್ವರಿಂದಳಿಯನೆಂದು ದನು
ಜಾಂತಕಂ ತಾನೇ ವರಾಹರೂಪಂ ಧರಿಸಿದಂ ಭಕ್ತವತ್ಸಲನಲೇ ೬೦

ತನು ಯಜ್ಞ ವುರುಷನಾಕೃತಿ ಮೆರೆಯೆ ಭಾಸಿಪಾ
ನನ ವರಾಹ ಸ್ವರೂಪಿಂದೆಸೆಯಲದರಿನಿಂ
ಘನಯಜ್ಞಕಿಟ ಸಂಜ್ಞೆಯೇರ್ಗೊಳಲ್ ದುಷ್ಟನಿಗ್ರಹವ ಸಮನಿಪ ತೀವ್ರದಿ
ಇನಶಶಿಗಳಂ ಪಳಿವ ಮಹದುಜ್ವಲಪ್ರಭೆಯ
ಹೊನಲಿನಿಂ ಮೆರೆವ ದಂಷ್ಟ್ರಗಳಮರಲತಿ ಸೂಕ್ಷ್ಮ
ತನುವಿನಿಂ ದ್ರುಹಿಣನಾಸಿಕದಿಂದಲವತರಿಸಿದಂ ಮಹೋತ್ಸವಮೆನಿಸಲು ೬೧

ಇಳಿದು ಭೂತಳದಿ ಸೂಕ್ಷ್ಮಾಕಾರದಿಂ ಮುಂದೆ
ಬೆಳಗುವ ವರಾಹಮೂರ್ತಿಯ ಕಂಡು ಹರ್ಷದೊ
ಬ್ಬುಳಿಯಿಂದೆ ದೇವಮುನಿಗಳ್ಸಹಿತ ವಿಧಿ ನಮಿಸಿದಂ ಜಯಧ್ವನಿ ಮೊಳಗಲು
ಬಳಿಕಲನಿಬರನು ಸಂತೈಸಿ ಲೀಲಾರೂಪು
ದಳೆದ ಸಂಗತಿಯನರುಹಲು ಕೇಳುತಾನಂದ
ಬೆಳವಿಗೆಯಲಾ ವರಾಹನ ಪೊಗಳಿದಂ ನಾಲ್ಕು ಮುಖದಿ ನಾಲ್ವೇದದಿಂದೆ ೬೨

ದೇವ ನೀನಿಂತು ಬಹುಳಾವತಾರಗಳಾಂತು
ಭೂವಲಯದೊಳ್ ನಿಖಿಲ ಜೀವಗಳನುದ್ಧರಿಸಿ
ದೇವಮರ್ತ್ಯಾದಿಗಳಿಗಾವಹಿಸಿದಪಮೃತ್ಯುಗಾವಳಿಗಳಂ ತೊಲಗಿಸಿ
ಕಾವ ದೆಸೆಯಿಂದೈಸೆ ನಾವು ಸುಕ್ಷೇಮಿಗಳು
ಭಾವಿಸುವಡೆಮ್ಮನುವ ಕಾವರಾರೀ ಸೂಕ್ಷ್ಮ
ಭಾವದಿಂ ತೋರುತಿದೆ ತೀವಿದಾಕೃತಿಯಸುರನಾವ ಪರಿ ಮಡಿವನಿದರಿಂ ೬೩

ಎನಲಾ ಕ್ಷಣದಲುಬ್ಬಿದಂ ಯಜ್ಞಕಿಟಿದೇಹ
ದನುವು ಕನಕಾದ್ರಿಗಿಮ್ಮಡಿಸಿರಲ್ ದಂಭೋಳಿ
ಘನತೆಯಂ ಜರಿವ ದಂಷ್ಟ್ರಗಳವುರೆ ವೊನೆಸರಳ್ ಸರಿಸಕೇಸರಗಳೆಸೆಯೆ
ಅನಲನುಬ್ಬಟೆಯ ನೂಕುವ ಕಂಗಳಿಂದ ಸುಯಿ
ಲಿನ ರಭಸದಿಂ ಗಿರಿಗಳುರುಳುತಿರೆ ಭೀಕರಾ
ನನದ ಬೃಹದಾಕೃತಿಯ ತೋರಿ ಭೂಮಿಯನೆತ್ತಲೆನೆ ರಸಾತಳಕಿಳಿದನು ೬೪

ಇತ್ತ ಕೇಳೆಲೆ ಧರಾನಾಥ ಕನಕಾಂಬಕಂ
ಪೊತ್ತ ಭೂಮಿಯ ರಸಾತಳದಿ ಬೈಚಿಟ್ಟು ತಾ
ಮುತ್ತಿದಂ ವರುಣಪುರವಂ ಗಿಳಿಯ ಪಂಜರಕೆ ಮಾರ್ಜಾಲನೆರಗುವಂತೆ
ಎತ್ತಣದ್ಭುತವೆಂದು ಪುರಜನರ್ನಡನಡುಗಿ
ಮಿತ್ತುವಡಸಿದುದೆನುತ್ತೊರಲುತಿರೆ ವರುಣ ಬಲ
ವತ್ತರದ ರೋಷದಿಂದಿದಿರೇರ್ದು ಕಂಡನಾ ಖಲನ ಬೃಹದಾಕೃತಿಯನು ೬೫

ಚಂಡದೈತ್ಯನ ಭೀಕಾರಾಕೃತಿಗೆ ವರುಣ ಭಯ
ಗೊಂಡು ಕದನವ ನೆನೆಯದತಿವಿನಯದಿಂದಿದಿರು
ಗೊಂಡು ಸತ್ಕರಿಸಲಾ ರಕ್ಕಸನು ಕಾಳಗವನೀವುದೆಮ್ಮೊಡನೆನಲ್ಕೆ
ಕೆಂಡದೊಳ್ ಸರಸಮೇ ಸಸಿದರಳೆಗವನಿಯುಂ
ಪಿಂಡಿತವನೆಸಗಿ ಕಕ್ಷದಲಿರಿಂಕಿದ ಮಹೋ
ದ್ದಂಡ ಸಾಹಸಿಕ ನಿನಗಿದಿರೆ ನಿನ್ನವರೆನಿಸಿ ಬದುಕುವವರಾವೆಂದನು ೬೬

ಅಂಜಿದಂ ವರುಣ ತಲೆವಾಗಿ ಮರೆಹೊಕ್ಕರಂ
ಭಂಜಿಪುದು ವಿಹಿತಮಲ್ಲೆಂದು ತಿರುಗಿದನಾ ಧ
ನಂಜಯಾನಿಲ ಧನಪನಿಂದ್ರ ನಿರುರುತಿ ಮುಖ್ಯದಿಕ್ಪಾಲರೇಳಿಗೆಗಳ
ರಂಜನೆಯನೆಡೆಗೆಡಿಸಲಿಂದೆರಗಲವರನಿಬ
ರುಂ ಜರ್ಝರಿತಹೃದಯರಾಗಿ ಪೇಳ್ದರು ದೈತ್ಯ
ಭಂಜನನೆನುತ್ತ ಪೇಳ್ವರು ಹರಿಯ ಕಾದಲವ ನಿನಗೆ ಸಮಬಲನೆಂದರು ೬೭

ನುಡಿಯನುರೆ ಕೇಳ್ದು ನಿಶ್ಚಯಮಿದುವೆ ಮರೆಯೊಕ್ಕ
ಬಡವರನ್ನಿರಿಯಲೇತಕೆ ದೈತ್ಯರಿಪುವೆನಿಪ
ನೊಡಲ ಬಗಿದಡೆ ತದಾಶ್ರಿತ ದೇವತತಿಗಳಿವು ತನಗೆ ತಾನಪ್ಪುದೆಂದು
ಘುಡುಘುಡಿಸುತಚ್ಯುತನ ನೆಲೆಯ ಕೇಳುತ ಮುಂದೆ
ನಡೆದನಾ ವೈಕುಂಠ ಸರಣಿವಿಡಿದನಿತರೊಳ್
ನಡುವೆ ನಾರದನು ಗೋಚರಿಸಿದಂ ದಿತಿಜಂಗೆ ಮೃತ್ಯುಪ್ರದಾತನಾಗಿ ೬೮

ನಾರದನ ಕಂಡೆವಗೆ ಪೂರ್ವಪರಿಚಿತನಾದ
ಹಾರುವನಿವಂ ಹರಿಯ ನೆಲೆಯನರಿದಪನಿವನ
ನಾರೈವೆನೆಂದು ಮಾತಾಡಿಸಲ್ ಮುನಿಪ ಖಲನಾಶಯವನವಗಾಹಿಸಿ
ಕ್ರೂರನಂ ಕೊಲಿಸಲುಜ್ಜುಗದಳೆದು ಪೇಳ್ದನೆಲೆ
ಧೀರ ಕೇಳ್ ಹರಿಯು ಕಿಟಿರೂಪಾಗಿ ನೀನೊಯ್ದ
ಧಾರಿಣಿಯ ತರಲೆನೆ ರಸಾತಳಕ್ಕಿಳಿದಿರ್ಪನಲ್ಲಿಗೈದುವುದೆಂದನು ೬೯

ಈ ಹವನನಾಲಿಸೆಲೆ ಭೂಪ ಯಜ್ಞಾಹ್ವಯ ವ
ರಾಹಂ ರಸಾತಳಕ್ಕಿಳಿದು ಭೂತಲವ ನಿಜ
ಬಾಹುಬಲದಿಂದೆತ್ತಿ ಪಳೆಯಂತೆ ಸಂಸ್ಥಾಪನೆಯ ಮಾಡಿ ಸುರರಿಷ್ಟಮಂ
ರೂಹುಗಾಣಿಸಿ ಪೊರೆದು ಬರುತಿರಲ್ ಕದನಪಟು
ದಾಹದಿಂ ತನ್ನನರಸುತ ಬರ್ಪ ಖಲನ ಸ
ನ್ನಾಹಮನ್ನಿದಿರಿನೊಳ್ ಕಂಡು ಗರ್ಜಿಸಿದನಸುರಾಧೀಶನೆದೆ ಬಿರಿಯಲು ೭೦

ಚಂಡಗರ್ಜನೆಯ ಶಬ್ದಾಟೋಪಮೆರಗುತಲ
ಜಾಂಡಮನ್ನಿಬ್ಭಾಗಗೊಳಿಸಲ್ಕೆ ಭುಜಬಲೋ
ದ್ದಂಡನಾದಪನೀ ವರಾಹನೆನೆ ನಿಶ್ಚೈಸಿ ನುಡಿದನಬ್ಬರಿಸಿ ಮತ್ತೆ
ಕಂಡೆವಾಂತಿಹ ಕಪಟವೇಷಮನ್ನೆಮ್ಮ ಪಟು
ಖಂಡೆಯದ ಕಾಹುರಕ್ಕದುರಿ ಸೂಕರತೆಯೆಡೆ
ಗೊಂಡುದನ್ನಸುರಮರ್ದನಬಿರುದ ತೋರೆಂದು ಗದೆಯ ತಿರುಹಿಟ್ಟನಂದು ೭೧

ಎಚ್ಚ ಗದೆಯಂ ದಾಡೆಗಡಿಯಲಿಕ್ಕಡಿಯಾಗಿ
ಕೊಚ್ಚಿ ಕಾಲ್ಗೆರೆವ ಚಂಚಲದಿಂದ ಜಲಧಿಜಲ
ಮುಚ್ಚಳಿಸಿ ಮೆರೆವ ಭುಲೋಕ ಮೇಲೋಕಗಳನೆಂಟು ದಿಗ್ವಳಿಯ ಬಳಿಯ
ಮುಚ್ಚಿತು ಜಲಪ್ರಳಯದಿರವ ಗೋಚರವಾಗೆ
ಪೆಚ್ಚಿತಮರರ್ಗೆ ಸಂತೋಷಮತಿರೋಷದೊಳ್
ಬೆಚ್ಚನುರುಮತಿಯನಾ ದಿತಿಯ ತನುಸಂಭವಂ ಶೌರ್ಯ[1][ದಿಂ][1] ಧೈರ್ಯಗೆಡದೆ ೭೨

ಘಟಘಟಿತವೆಸೆವ ಖುರಘಟ್ಟನವೆ ಜಗದಂಡ
ಘಟವ ತಳಪಟವನೆರಗಿಸುತಿರಲ್ ಪೊರಳಲು
ಚ್ಛಟಛಟಧ್ವನಿಯ ಪಟುದಾಡೆಗಳ್ ಗಿರಿತರುಗಳನ್ನೊರಸಿ ಬರಿಗೈಯಲು
ಕಟಕಟಸಲಾರ್ದು ಪಲ್ಗಡಿದು ಚೀತ್ಕರಿಸುವಾ
ರ್ಭಟವೆ ಭುವನತ್ರಯವ ದಿಮ್ಮಿಸಲ್ ಕಿವಿಯನು
ತ್ಕಟಕಠಿನ ಕೇಶಗಳ ನಿಗುಚಿಯೊಡೆವುಗುಚಿದಂ ತೂರಿಯವುಗಾರಿತನುವಂ ೭೩

ಬಿದ್ದು ಚೇತನಿಸಿ ಮುಂಡಿಗಳ ವ್ಯೆಸುಳುಹಿನಿಂ
ದೆದ್ದು ಪುಟನೆಗೆದು ಬಾಹುಗಳನಪ್ಪಳಿಸಿ ಬಲ್
ಮುದ್ಗರವ ಕೊಂಡೌಡುಗಚ್ಚಿ ಬಡಿದನು ಕಿಟಿಯನಾಘಾತಮಂ ತಪ್ಪಿಸಿ
ಪೊದ್ದಿ ತಿರುಮುರುಹನದನೋಸರಿಸಿ ಹಾರಿಕೆಯ
ಲೊದ್ದಡಾ ಮುದ್ಗರವೆ ಮುಗುಚಿ ರಕ್ಕಸನುರವ
ಗುದ್ದರಿಸಿತಂಜನಾದ್ರಿಯ ಮೇಲೆ ಪೊಡೆವ ಬರಸಿಡಿಲ ಗರ್ಜನೆಯಂತಿರೆ ೭೪

ಪೂತುರೆ ವರಾಹ ತಕ್ಕೆಯ ಪೊಣರಿನಂಕೆಗಳ
ಚಾತುರ್ಯಶೀಲ ನೀನಹುದಲಾ ನಮ್ಮಳವಿ
ಗಾತು ನಿಂದುದೆ ನಮ್ಮ ಭಾಗ್ಯವ್ಯೆಸಲೆ ಬಾಹುಕಂಡೂತಿಯನ್ನೊರಸುವ
ಕಾತುರತೆಯಿಂದರಸುತಾಂ ಬರಲ್ ಕದನ ವಿ
ಖ್ಯಾತರಾರನು ಕಾಣದಲೆವುತಿರಲೀಗಲಿದಿ
ರಾತು ನೀ ನಿಂದೆ ಗಡ ಸೈರಿಸುವುದೆಂದು ಮುಷ್ಟಿಯಲಿರಿದನಬ್ಬರಿಸುತ ೭೫

೭೨. 1. ಮದು.

ಕಡಲ ಮಥಿಸಲ್ ಕುಸಿದ ಮಂದರಾದ್ರಿಯು ಬೆನ್ನ
ನಿಡಿದ ಘಾತವು ದೈತ್ಯಮುಷ್ಟಿಪ್ರಹಾರಕದು
ಪಡಿಯಾಗದೆನೆ ಚಿತ್ತದೊಳ್ ಮೆಚ್ಚಿ ನುಡಿದನೆಲೆ ದೈತ್ಯ ನೀ ವಾಂಛೆ ಮಿಗಲು
ಕಡಿವರನ್ನರಸಿ ಮೃತಿಯಂ ಬಯಸಿ ಕಾದಲೆ
ನ್ಮೆಡೆಗೆ ಬರಲಿಷ್ಟಮನ್ನೀವುದೇ ಧರ್ಮಮದ
ಕುಡುವೆವಿದಿರಾಗೆಂದು ಖುರಗಳಿಂದೆರಗಿದಂ ಬರಸಿಡಿಲ ಬಲದಂತಿರೆ ೭೬

ಪೇರ್ಖುರಂಗಳ ಘಾತಮೆರಗಿ ತಲೆಯೋಡ್ಗಳಂ
ಬೇಗ್ಬಿರಿದು ಜಲಭರಿತಕೊಡನನೊಡೆದಂತೆ ಕೆ
ನ್ನೀರ್ಗರೆಯಲಸುರನಸಿತಾಂಗಮದು ಕೆಂಪೇರ್ದು ಸಂಧ್ಯಾಗಮವನರುಪಲು
ಸಾರ್ಗು ಕಶ್ಯಪಜಾತನಸ್ತಮಯ ಮೆಂದಭ್ರ
ಮಾರ್ಗದೊಳ್ ಸುರರುಲಿಯಲಸುರನಿಂಗುರುರೋಷ
ಮೇರ್ಗೊಂಡು ಕಲ್ಪಾನಳನ ಪೋಲ್ವ ಶೂಲಮಂ ತಿರುಹಿಟ್ಟನಾನ್ಪುದೆನುತ ೭೭

ನಗನಗಕೆ ತಾಕುನೂಕಾದಂತೆ ಶೂಲಮದು
ಧಗಧಗಜ್ವಾಲೆಗಳ ಮಾಲೆಯಿಂ ಕಿಡಿಯು ಗುಂ
ಪೊಗೆ ಪೊಗೆಯು ಸೂಸುತೈತಂದು ನಾಂಟಿತು ಯಜ್ಞಕಿಟಿಯ ಭ್ರೂಕುಟಿಮಧ್ಯದಿ
ನಿಗಿನಿಗಿಸುವರುಣಜಲವೊರೆವುತಿರೆ ಕಿಟಿವರಂ
ನೆಗೆನೆಗೆದು ಪೊರಪೊರಳಿ ಮರಳೆದ್ದು ಚೀರ್ದು ಮುಗು
ಮುಗುಳೆ ಕೆಡೆವುತಲಿಂತು ಲೀಲೆಯಿಂ ಪಲ್ಗಿರಿದು ಬಾಯ್ದೆರೆದು ಬಸವಳಿದನು ೭೮

ನಡುಗಿದರ್ಸುರರು ದೆಸೆದೆಸೆಗೆ ಲಂಘಿಸಿದಡುಂ
ಕೆಡೆಯದಾದುದು ಶೂಲಮಾರ್ದು ರಭಸದಲಿ ತಲೆ
ಗೊಡಹಿದಂ ಸಪ್ತಶರನಿಧಿಗಳಾಲೋಲದಿಂ ಸಮರಸವನೈದುತಿರಲು
ಕಡುಬಿರುಹಿನಿಂ ಮೇಲೆ ಮೇಲೆ ಮಸ್ತಕವನುರೆ
ಕೊಡಹಲಾ ಶೂಲ ಲೋಕಾಲೋಕ ಪರ್ವತವ
ನಡಹಾಯ್ದು ಬಿದ್ದುದಸುರನನು ಮತ್ತೆರಗಿದಂ ಕೋರೆಯಿಂ ಚಾರಿವರಿದು ೭೯

ಅರುಣಜಲಸಂಮಿಳಿತದಿಂ ಹಿರಿಣ್ಯಾಕ್ಷಕಿರಿ
ವರರ ಪದಹತಿಯ ಧೂಳ್‌ಗವಿತೆಯಿಂ ಕೆಂಪಡಸಿ
ಶರನಿಧಿಯೆ ರಕ್ತನಿಧಿಯೆನಿಸಿರಲ್ ಪಟುಸುಯ್ಲ ತೀವ್ರಘಾತದ ಘಾತದಿಂ
ತರುಗುಲ್ಮ ಘಾಳಿಪಟವಾಗಿರಲ್ ಚೀರುವ
ಬ್ಬರಣೆಯಿಂ ಮಾರ್ದನಿಯನೀವ ಗಿರಗಳ್ ಸಿಡಿಲ
ಸರಕು ತುಂಬಿದ ಘಟಿಗಳೆನಿಸಿರಲ್ ಕಾದಿದರ್ ಕಾಹುರದ ಕಡುಹಿನಿಂದೆ ೮೦

ಚಳಕದೊಳ್ ಚದುರಿನೊಳ್ ತೂರಿ ತೊಡರುವ ಬಿಡುವ
ಹೊಳಪಿನೊಳ್ ಹೊಯ್ಲಿನೊಳ್ ಮೂದಲಿಸಿ ಮುಂಬರಿವ
ಬಳಕೆಯೊಳ್ ಬಂಧದೊಳ್ ದಂಡೆಗಳ ಮಂ[1]ಡಿ[1]ಗಳ ಹಾರಿಕೆಯ ಹರಿತೆಗಳೊಳು
ಸೆಳಸಿನೊಳ್ ಶೌರ್ಯದೊಳ್ ವೀರರಸದುತ್ಸವದ
ಪುಳಕದೊಳ್ ಪುರುಡಿನೊಳ್ ಪಾಡುಪಂಥಂಗಳ
ಗ್ಗಳಿಕೆಯೊಳ್ ಗಜರಿನೊಳ್ ಸರಿಬರಿಗೆ ಕಾದಿದುರ್ಸುರವೈರಿ ಕಿರಿವೀರರು ೮೧

ಬೆಚ್ಚ ವಾಸಿಗಳಿನೋಸರಬುಗದೆ ಕಾಹುರದ
ಕೆಚ್ಚಿನೇಳಿಗೆಗೇಳಿಲಗಳಿರದೆ ಕಲಿತನದ
ಚಚ್ಚರತೆಗೆಚ್ಚರತೆ ಜವಗೆಡದೆ ಭುಜಬಲಾಟೋಪಲೋಪವನೈದದೆ
ಪೆಚ್ಚಿದುರುಸೆಣಸುದುರುಸಣಗಿರದೆ ರಣ ವಿಜಯ
ದುತ್ಸಾಹದುತ್ಸಾಪಸವ ಬಿಡದೆ ಬೆಳಸಿನೆದೆ
ಗೆಚ್ಚಿನಿಂ ಪೆಚ್ಚಿನಿಂ ಕಾದಿದರ್ಕದನ ಸಮಬಲರು ಸಮರಾಂಗಣದೊಳು ೮೨

ಸಮಬಲದಲಿಂತು ಸೆಣಸುವ ವರಾಹನ ನೋಡಿ
ಕಮಲಾಸನಂ ನುಡಿದನೆಲೆದೇವ ಸಾಯಾಹ್ನ
ಸಮಯವಾದಡೆ ದೈತ್ಯ ಕುಲಕೆ ಮಾಯಾ ಯುದ್ಧಸಿದ್ಧಿ ಕಾಲಮುದಪ್ಪುದು
ದಮಿಸಲಸದಳಮೆನಿಪುದಾ ಮೇಲೆ ಕೋಲ್ಪಿಡಿದು
ಸಮಯಮದರಿಂ ಸುದರ್ಶನವ ಪಿಡಿದೀಗಲೀ
ಸುಮನಸಾರಿಯನಿಳುಹಿ ಸುರರನುದ್ಧರಿಪುದೆನೆ ಚಕ್ರಮಂ ನೆನೆದನಂದು ೮೩

---

೮೧. 1. ಡ.

ಚತುರ ಕೇಳಿಂತು ಚಕ್ರನ ನೆನೆಯಲಾ ಕ್ಷಣದಿ
ಶತಸೂರ್ಯತೇಜದಿಂದಿಳಿದು ಕಿಟರೂಪಿನ
ಚ್ಯುತಕರಾಗ್ರಕೆ ಬಂದು ಸಂಧಿಸಿದುದಭ್ರದೊಳ್ ಸುರರ ಜಯರವ ಮೊಳಗಲು
ದಿತಿಜಾತ ನೋಡಿ ವಿಜಯಾತುರವನುಳಿದು ಪರ
ಗತಿಯ ಚಿಂತನೆಯಲೆರಗಿದನಂದು ಭಾರ್ಗವೀ
ಪತಿಯ ಕರದಿಂದೆ ತನುವಳಿದು ಮುಕ್ತಿಯನೇರ್ವಡಾದುದವನೇಂ ಧನ್ಯನೋ ೮೪

ಮತ್ತೆ ಕೇಳಾದಿಯೊಳಮಲ ಜಯವಿಜಯರಿಂ
ಗಿತ್ತ ಭಾಷೆಯ ಸಲಿಸಲೆಂಬ ಸಂಕಲ್ಪಮಂ
ಚಿತ್ತದೊಳ್ ನೆನೆದು ಚಕ್ರವನು ತಿರುಹಿಡಲು ಮೊರೆದೆರಗಿ ದೈತ್ಯನ ಶಿರವನು
ಕತ್ತರಿಸಲಾಗಲಂಬರದಿ ವೈಮಾನಿಕರ
ಮೊತ್ತ ಸನ್ನುತಿಸಿ ಪೂವಳೆಗರೆದು ಪೊರೆಯೆ ಸ
ರ್ವೋತ್ತಮಾನಂದ ಶೇಷಾದ್ರಿ ವೆಂಕಟರಮಣ ಕೌಂಡಿನ್ಯ ಗುರು ಮೆರೆದನು ೮೫

ಅಂತು ಅಧ್ಯಾಯ ೮ಕ್ಕಂ ಪದನು ೬೭೮ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ.

೯. ಕರ್ದಮ ದೇವಹೂತಿಯರ ವಿವಾಹ

ಸೂಚನೆ :

ವಿನುತ ಕರ್ದಮ ಮುನೀಂದ್ರಂ ತಪೋನಿಯಮದಿಂ
ವನಜಾಕ್ಷ ಸುಪ್ರಸಾದವನಾಂತು ಬಳಿಕಲಾ
ಮನುಪುತ್ರಿ ದೇವಹೂತಿಯ ಪರಿಗ್ರಹಿಸಿದಂ ಕಮಲಜನ ನೇಮದಿಂದೆ

ಇನ್ನು ಮೇಲ್ಗತೆಯನಾಲಿಪುದು ಲಸದಿಂದು ಕುಲ
ರನ್ನ ಜಯಮೇಜಯನೆ ವಸುಧೆಯನ್ನೆತ್ತಿ ಸುರ
ರುನ್ನತಿಯ ಪೊರೆದು ಕಿಟರೂಪ ಹರಿ ವೈಕುಂಠಪುರವನ್ನೈದಿದನಿತ್ತಲು
ಮುನ್ನಿನಂಡಜ ಜರಾಯುಜ ಮುಖ್ಯ ನಾಲ್ವಿಧೋ
ತ್ಪನ್ನ ಬಹುಜೀವಿಗಳ್ ದೈತ್ಯನವನಿಯನೊಯ್ದ
ಬನ್ನದಿಂ ಪ್ರಳಯವಾಗಲು ಪುನಃಸೃಷ್ಟಿಯನ್ನನುಗೈದನಾ ಬ್ರಹ್ಮನು ೧

ಮೊದಲಂತೆ ವೇದ ಶಾಸ್ತ್ರಾಗಮ ಸ್ಮೃತಿಗಳ
ನ್ನದರಂತೆ ಚತುರಾಶ್ರಮಾಚಾರ ವಿಧಿಗಳಂ
ಪದುಳದಿಂ ನಾಲ್ಕುವರ್ಣಗಳ ಪದ್ಧತಿಗಳಂ ಹವ್ಯಕವ್ಯಗಳನುವನು
ಒದಗಿಸಿಯು ಮೇಲೆಯೌಷಧಿ ವಸ್ತುಪರಿಕರಾ
ಭ್ಯುದಯಗಳನನುಗೈವ ಕೃತ್ಯಗಳನವರವರ
ವಿಧವರಿದು ನವಸಂಖ್ಯ ಸುಪ್ರಜೇಶ್ವರರಿಂಗೆ ನೇಮಿಸಿದನನುಗೈಯಲು ೨

ಪಡೆದನಂಗುಷ್ಟದಿಂ ಪೂರ್ವದೊಳ್ ದಕ್ಷನಂ
ತೊಡೆಯಿಂದೆ ನಾರದನ ಪೊಕ್ಕುಳಿಂ ಪುಲಹನ
ನ್ನೊಡನೆ ಮುಖದಿಂದಲಂಗಿರಸನಂ ಕರ್ಣದಿಂದವೆ ಪುಲಸ್ತ್ಯ ಬ್ರಹ್ಮನಂ
ಸಡಗರದ ಲಕ್ಷ್ಮಿಯಿಂದತ್ರಿಯಂ ಹೃದಯದಿಂ
ಬೆಡಗಿನ ವಶಿಷ್ಠನಂ ಭೃಗುವಂ ತ್ವಗಿಂದ್ರಿಯದಿ
ದೃಢಮರೀಚಿಯ ಮನಸಿನಿಂದೆ ನಿರ್ಮಿಸಿದ ನವ ಪುತ್ರರ್ಗೆ ನೇಮಿಸಿದನು ೩

ಬಳಿಕಲೊಂದಪವಾದ ಬರಲು ನಿಜದೇಹಮ
ನ್ನುಳಿದನಾ ವಿಧಿ ಮತ್ತೆ ತಾನೆ ಪೊಸ ಕಾಯಮಂ
ತಳೆಯಲದರಿಂ ಸ್ವಯಂಭೂವೆಸರನಾಂತು ಮನುಕರ್ದಮರ ನಿರ್ಮಿಸಿದನು
ಇಳೆಯೊಳ್ ಸ್ವಯಂಭೂತಜಾತನಾದುದರಿಂದೆ
ನೆಳವಾದುದವಗೆ ಸುಸ್ವಾಯಂಭು ಮನುವೆಂದು
ತಿಳಿಯೆ ಶತರೂಪೆವೆಸರಿನ ಪತ್ನಿಸಹಿತಲೊಪ್ಪಿರ್ದನಾ ಮನುಮಹಿಮನು ೪

ಈ ಪರಿಯಲೆಸೆವ ಮನುವಿಂದೆ ತತ್ಪತ್ನಿ ಶತ
ಪೆರೂಯಳ ಗರ್ಭದೊಳ್ ಮೂವರು ಕುಮಾರಿಯರು
ರೂಪಿಸಿದರಾಕೂತಿ ದೇವಹೂತಿ ಪ್ರಸೂತಿಗಳೆಂಬ ಪೆಸರಿನಿಂದೆ
ಭೂಪ ಕೇಳುತ್ತಾನಪಾದಂ ಪ್ರಿಯವ್ರತ ಮ
ಹಾಪುಣ್ಯಶಾಲಿಗಳ್ ಪುತ್ರರಾಮನುವಿಂಗೆ
ರೂಪುಗುಣ ಶೀಲ ವಿಖ್ಯಾತಿಯೊಳ್ ಸರಿಯಿಲ್ಲವೆನಿಸಿ ಪರಿಶೋಭಿಸಿದರು ೫

ಈ ತೆರದ ಪುತ್ರಿಯರ್ಮೂವರೊಳ್ ಹಿರಿಯಳಾ
ಕೂತಿಯಂ ದಕ್ಷಪ್ರಜೇಶಂಗೆ ಪಿರೆವಾ ಪ್ರ
ಸೂತಿಯಂ ರುಚಿಯೆಂಬವಂಗೆ ಕನ್ಯಾಪ್ರದಾನವನಿತ್ತು ಮನುವದರೊಳು
ಭೂತಳಹೊಳತಿ ಸಾಧ್ವಿಯೆನಿಸಿ ಜಸವಡೆದಳ್ ಪ್ರ
ಸೂತಿಯುವಳುದರದೊಳ್ ಯಜ್ಞಾವತಾರಮಂ
ತಾ ತಳೆದನಚ್ಯುತಂ ಲೀಲೆಯಿಂ ತತ್ತಪೋ ವ್ರತಕೆ ಪರಿತುಷ್ಟನಾಗಿ ೬

ಯಜ್ಞಾವತಾರಮನ್ನಾಂತ ಹರಿ ಮತ್ತೆ ಲಸ
ದಗ್ನಿತ್ರಯ ಸ್ವರೂಪವನೇರ್ದು ಪೌಂಡ್ರ ಕಾ
ದ್ಯಜ್ಞದಾಹುತಿಗಳಂ ಸ್ವೀಕರಿಸಿ ದೇವತೆಗಳಿಂಗೆ ತೃಪ್ತಿಯನೆಸಗುತ
ಯಜ್ಞದೀಕ್ಷಿತರಿಂಗೆ ಪರಸುಖವನಿತ್ತಮಲ
ವಿಜ್ಞಾನಮಂ ಕಾಮವಿರಹಿತರ್ಗನುಗ್ರೈವು
ತಜ್ಞಾನಮಂ ನಿವಾರಿಸಿ ಭುವನಮಂ ಪೊರೆದನಾ ಯಜ್ಞಹರಿ ರೂಪನು ೭

ದಕ್ಷಿಣಾನಾಮ ನಿಜಪತ್ನಿಯಿಂ ದಾನವ ವಿ
ಪಕ್ಷಗಣಮಂ ಪಡೆದು ತನ್ನ ಬೆಂಬಿಡಡೆ ಲಸ
ದಕ್ಷೀಣ ಭಕ್ತಿಯಿಂ ಭಜಿಸುವ ಮಹಾತ್ಮಕರನಿಹಪರಂಗಳಲಿ ಬಿಡದೆ
ರಕ್ಷಿಸುತ ಧರ್ಮಾರ್ಥ ಕಾಮ ಮೊದಲಹ ಭೋಗ
ಮೋಕ್ಷ ಪದವಿಗಳನನುಗೊಳಿಸಿದಂ ಪುಂಡರೀ
ಕಾಕ್ಷನಳವಟ್ಟ ಯಜ್ಞಾವತಾರದ ಕಥನಮಿದುವೆ ಭಾವಿಪುದೆಂದನು ೮

ಈ ವಿಧದಲೆಸೆದಳ್ ಪ್ರಸೂತಿ ಕೇಳ್ ಮೂರನೆಯ
ದೇವಹೂತಿಯ ಗರ್ಭದೊಳ್ ರಮಾವರನು ಕಪಿ
ಲಾವತಾರವನಾಂತ ಕಥನಮನ್ನೊರೆವೆ ಕರ್ದಮನೊಂದು ದಿನ ವಿಧಿಯನು
ಠೀವಿಯಿಂ ಬೆಸಗೊಂಡನೆನ್ನಿಂ ಪ್ರಜಾವೃದ್ಧಿ
ಯಾವ ಪರಿಯಿಂದಪ್ಪುದದರನುವ ಕರುಣಿಸೆನ
ಲಾ ವಿಧಿ ನಿರೂಪಿಸಿದನಚ್ಯುತನನುರು ತಪೋಬಲದಿ ಮಚ್ಚಿಸುವುದೆಂದು ೯

ಎನೆ ಹಸಾದವನಿತ್ತು ಸೈವರಿದನಾ ತಪೋ
ವನಕೆ ಕರ್ದಮನಾಗ ನಿರ್ಮಲ ಸರಸ್ವತೀ
ಘನಸರಿತ್ತಟವನಾಶ್ರಯಿಸಿ ದರ್ಭಾಸನವ ಹರಹಿಯಾಸನವ ಬಲಿದು
ಅನಶನವ್ರತದಿಂದಲುರು ತಪೋನಿಷ್ಠೆಯ
ನ್ನನುವಿಡಿದು ಶತವತ್ಸರಂಗಳ್ ಪರಾತ್ಮ ಕೃ
ಷ್ಣನ ದಿವ್ಯಮೂರ್ತಿಯಂ ಹೃತ್ಪದ್ಮದೊಳ್ ಬಲಿದು ಭಾವಿಸಿದನರಿದೆನಿಸಲು ೧೦

ಹರಿಯಂಗರುಚಿಯಲಡಗಿದ ದೃಷ್ಟಿಯುಗಮೆ ಸಾ
ಗರದಲೊಡೆವೆರೆವ ನದಿಯಂತಾಗೆ ಶ್ರವಣಗಳ್
ಮೊರೆವ ನಾದಾಲವಾಲಗಳಾಗೆ ನಾಸಿಕಮೆ ಹರಿ ಚರಣ ಕಮಲಂಗಳ
ಪರಿಮಳಕೆ ಮುಗಿದ ತುಂಬಿಗಳಾಗೆ ರಸನೆ ಮುರ
ಹರನ ನಾಮಾಮೃತ ಕಲಶವಾಗೆ ಮನವೆ ಸಿರಿ
ಧರ ಕಲ್ಪತರುವನಪ್ಪಿದ ವಲ್ಲಿಯಾಗೆ ಕರ್ದಮನ ತಪಮೇರ್ಗೊಂಡುದು ೧೧

ಮತ್ತೆ ಕೇಳ್ ನಿಖಿಲ ದೇಹ ವ್ಯಾಪ್ತರೇತಸ್ಸು
ನೆತ್ತಿಗಡರಿದುದು ನಾಸಾಪುಟಂಗಳ ಸೆಳೆಯ
ವೃತ್ತಿಗಳ್ ನಡುನಾಡಿಗೇರಿ ನಿಂದುದು ನಾಲ್ಕುಕರಣಗಳ ಕಾಲಾಟವೆ
ಚಿತ್ತೇಜದಿರುಬಿನೊಳ್ ಸಿಲುಕಿದುದು ನಿದ್ರೆ ರತಿ
ಕ್ಷುತ್ತೃಷ್ಣೆಯಾಲಸ್ಯ ಶೀತೋಷ್ಣಗಳ ಸೆಳವು
ಪತ್ತಿದಾನಂದದೊಳ್ ಮಗ್ನವಾದುವು ಕರ್ದಮನ ತಪೋಬಲುಹದೆಂತೊ ೧೨

ಇಂತೆಸೆವ ಕರ್ದಮು ತಪೋನಿಷ್ಠೆಯನುವು ಭಗ
ವಂತನಿಂಗರಿವಾದುದೆಣಿಸಲಿನ್ನಾರ್ತಜನ
ಚಿಂತಿತ ಫಲ ಪ್ರದಾಯಕನ್ನೆಸೆ ತವಕದಿಂ ತಾರ್ಕ್ಷ್ಯಕಾರೂಢನಾಗಿ
ಅಂತರಾಳವ ಬೆಳಗುವಮುಳತರ ತನುತೀವ್ರ
ಕಾಂತಿಯಂ ನಾಲ್ದೆಸೆಗೆ ಬೀರುತವು ಭೂತಳಕೆ
ತೊಂತಿರ್ದ ಕಲುಷಾಭ್ರಮಂ ಪರಿವ ಖಗ ಪಕ್ಷವಾತ ವಿಗಲಿಳಿತಂದನು ೧೩

ಅಂಕುಶ ಧ್ವಜ ವಜ್ರ ಪದ್ಮರೇಖೆಗಳಿಂದ
ಲಂಕಾರವಾದ ಪದತಲ ರುಚಿಯೆ ಕೆಮ್ಮುಗಿಲು
ಮುಂಕೊಂಡು ಪೊಳೆವ ಮಾಣಿಕ್ಯ ಪದಕಟಕಮೆಳೆ ರವಿಬಿಂಬವೆನಿಸುತಿರಲು
ಶಂಕೆಯಿಲ್ಲದೆ ಶರಣರಜ್ಞಾನ ಕತ್ತಲೆಯ
ಬಿಂಕಮಂ ಮುರಿವ ರೋಚಿಪಳಿಂದೆ ಭಕ್ತ ಹೃ
ತ್ಪಂಕಜವನರಳಿಸುತಲುದಯಾಹ್ನಮಹಿಮೆಯಂ ಮೆರೆವ ಪದಯುಗನೆಸೆದನು ೧೪

ಮೆರೆವ ಹುಲ್ಲೆಯ ಮುಸುಡ ಪೋಲ್ವ ಮಡಗಳ ಪಂಚ
ಶರ ನಿಷಂಗವ ಪಳಿವ ಜಾನುವಿನ ಪೊಂಬಾಳೆ
ಯುರುಟುಗಂಬಗಳ ನಗುವೆಳೆದೊಡೆಯ ಕುಂಭಿಕುಂಭಸ್ಥಳ ನಿತಂಬಯುಗದ
ವರಮಧ್ಯಭಾಗಕಮರಿದ ಪೊನ್ನ ಲುಳಿ ಸಣ್ಣ
ನೆರಿಯ ಪೀತಾಂಬರದ ಕಿರಿಬೊಜ್ಜೆಯೆಸೆವ ತಾ
ಪರಿವೊಕ್ಕುಳಿನ ಬಳಸುಮೂಗೆರೆಯ ಸಿರಿಯ ಜಗದೆರೆಯ ಪರಿಶೋಭಿಸಿದನು
೧೫

ಪೊಂಗೊಡನ ಪೋಳ್ಗಳಂತೆಸೆವ ವಕ್ಷಸ್ಥಳದಿ
ರಂಗೆಸೆವ ಶ್ರೀವತ್ಸ ಕೌಸ್ತುಭಗಳಮರೆ ಹರಿ
ಯಂಗರುಚಿಗಡಲೊಳುದಿಸಿದ ಶಂಖದಂತೆ ಮೂರೇಖೆಯಿಂ ಗಳವೊಪ್ಪಿರೆ
ಶೃಂಗಾರ ವೈಜಯಂತಿಯ ಮಾಲೆ ಹಾರ ಪದ
ಕಂಗಳೆಸೆದಿರೆ ಪೊದೆದ ಕನಕಾಂಬರದ ಪೊಳೆವ
ಚುಂಗುಗಳ್ ಥಳಥಳಿಸಲತಿಮನೋಹರದ ಕರಿವರದ ಹರಿ ಮೆರೆದನಂದು ೧೬

ಗಜಸುಂಡಿಲಂ ನಗುವ ತೋಳುಗಳ ಬಾಹುಪುರಿ
ಭುಜಕೀರ್ತಿ ನವರತ್ನಕಟಕಗಳ ರಕ್ತಪಂ
ಕಜಗಳಂ ಪಳಿವಮಳ ಹಸ್ತಗಳ ಮುಂಗೈಮುರಾರಿ ಕಂಕಣಸ್ವರಗಳ
ತ್ರಿಜಗದ್ವಿಮೋಹನಕರಾಂಗುಳಿಗಳೆಸೆಯೆ ಚಿ
ತ್ತಜ ಶರಕೆ ಬಿಗಿದ ಪೊಂಗಟ್ಟುಗಳ ಪೋಲಿಕೆಯ
ವಿಜಯಾಂಗುಳೀಯ ಕಾಂತಿಗಳಿಂದ ಸಂದ ಗೋವಿಂದ ತಾ ಬಂದನಂದು ೧೭

ನಳನಳಿಪ ಕುಂಡಲಂಗಳು ಕೂರ್ಮಗಂಡಗಳ
ಹೊಳಹಿನೊಳ್ ಪ್ರತಿಬಿಂಬಿಸಿರಲು ಶೋಭಿಸುವ ಮಂ
ಜುಳ ಮೌಕ್ತಿಕದ ಶುಕ್ತಿಯಂತೆಸೆವ ಕರ್ಣಗಳ ಮೃದುಳಪ್ರವಾಳದುಟಿಯಂ
ಬೆಳಗುತಿಹ ಕುಂದದಂತಗಳ ಕಿರುನಗೆಯಮಳ
ಬೆಳುದಿಂಗಳಂ ಬೀರುತವು ಶಂಖಚಕ್ರದಿಂ
ದಳವಟ್ಟ ಶೋಭನಾಕಾರ ಗಂಭೀರ ಗುಣಹಾರ ನಡೆತಂದನಂದು ೧೮

ಸುಕ್ಷೇಮಕರ ಶುಭಪ್ರದಮಾದ ವಿಲಸತ್ಕ
ಟಾಕ್ಷ ಸಂಯುತಮಾದ ವರಕುಶೇಶಯ ದಳ ಸ
ದೃಕ್ಷ ಸುಂದರಮಾದ ನೋಟದಿಂದಖಿಲ ಪುರುಷಾರ್ಥಗಳ ಪೂರವಿಸುವ
ಅಕ್ಷಿದ್ವಯಂಗಳಿಂದಿಂದ್ರಾಯುಧಾಯತ ಸ
ಲಕ್ಷಣ ಲಸದ್ಭ್ರೂಯುಗಂಗಳಿಂ ಸಂಪೂರ್ಣ
ಋಕ್ಷೇಶಸಮ ಚಾರುಮುಖದ ಚಂಪಕಸುನಾಸಿಕದ ಹರಿಯೆಸೆದಿರ್ದನು ೧೯

ನೊಸಲೊಳಳವಟ್ಟ ಮೃಗಮದ ತಿಲಕದಿಂದೆ ರಂ
ಜಿಸುವ ಮರಿದುಂಬಿಗುರುಳಿಂದೆ ಕೋಮಲ ಸೂರ್ಯ
ರಸುಮೆಯಂ ಧಿಕ್ಕರಿಪ ಮಣಿಮಕುಟದಿಂದೆ ಹರಿನೀಲ ತನುಕಾಂತಿಯಿಂದೆ
ಅಸಮಗರುಡಸ್ಕಂಧದಿಂದಿಳಿದು ನಡೆತಂದು
ದೆಸೆಗಳಂ ಬೆಳಗುತಿಹ ಸೊಬಗಿನಿಂ ಮುಂದೆ ಶೋ
ಭಿಸುವ ಮಂಗಳಮೂರ್ತಿಯನ್ನಾಗ ಕಂದೆರೆದು ಕಂಡ ಕರ್ದಮನರಿದೆನೆ ೨೦

ವರಮೌನಿಹೃತ್ಸದನನಂ ಚಾರುವದನನಂ
ಪರಮ ಮಂಗಳಗಾತ್ರನಂ ಭಜಕಮಿತ್ರನಂ
ನೆರೆ ಚಂದ್ರರವಿನಯನನಂ ಶೇಷಶಯನನಂ ದಿತಿಜಾತರರಿಯ ಹರಿಯ
ಮೆರೆವ ಭುವನಾಧಾರನಂ ದುರಿತದೂರನಂ
ಸುರನಿಕರ ಸುಪ್ರೀತನಂ ಮೋಕ್ಷದಾತನಂ
ಉರಗಕುಲರಿಪುಗಮನನಂ ಕಲುಷಶಮನನಂ ಕಂಡು ಹೊಂಪುಳಿಯೋದನು ೨೧

ನೀಡಿ ಹಸ್ತಂಗಳನ್ನವನಿಯೊಳ್ ತನುವನೀ
ಡಾಡಿಯಾನಂದ ಬಾಷ್ಪಂಗಳಂಗವ ಮೀರಿ
ಕೋಡಿವರಿಯಲ್ಕೆ ಸಾಷ್ಟಾಂಗದಿಂದೆರಗಿಯಾನಂದದಿಂ ಸೊರಗಿ ಸೊರಗಿ
ಕೂಡೆ ಕೂಡೆದ್ದು ಚೇತನಿಸಿ ಮನದಣಿಯೆ ಕೊಂ
ಡಾಡಿ ಹರಿಚರಣಮಂ ವಾಙ್ಮನಃಪರಿಕರದ
ಜೋಡವಣೆಯಿಂದರ್ಚನೆಯನೆಸಗಿ ಕಣ್ಬೆಳಗಿನಾರತಿಯನನುಗೈದನು ೨೨

ನೆನಹಿನಿಂ ಪ್ರಕೃತಿಯಂ ಪಂಚತನ್ಮಾತ್ರೆಗಳ
ನನುಗೈದು ಪಂಚಭೂತಂಗಳಂ ಪರುಠವಿಸಿ
ಘನಭೂತವೈದನೊಂದರೊಳೊಂದ ಬೆರಸಿ ತತ್ತ್ವಂಗಳಂ ಸೇರ್ವೆಗೈದು
ತನುರೂಪನಳವಡಿಸಿ ತಾನೆ ತನುಗಳೊಳು ಚೇ
ತನನಾಗಿ ನಿಂದು ನಿಖಿಲಾಂಡಭೂತಗಳ ನೊ
ರ್ವನೆ ಮೆರಸಿಯೊರಸುತವು ಜಗದಾಕೃತಿಯನಾಂತ ಪರಮಾತ್ಮ ಸಲಹೆಂದನೂ ೨೩

ಅನಿನಿಮಿಷರೆ ಮತ್ಸ್ಯಂಗಳಸುರರೇ ಮಕರಂಗ
ಳನುವರಿದ ಶರಣರೇ ನೌಕಂಗಳೆಸೆವ ಸ
ನ್ಮುನಿಗಳೇ ರತ್ನಂಗಳಮಲ ವಿಜ್ಞಾನಿಗಳೆ ಲಸದಮೃತಕಲಶಂಗಳು
ಜನಜಾಲಮೇ ಬುದ್ಬುದಂಗಳಾ ಕಲುಷ ದು
ರ್ಜನರೆ ಶೈವಾಲಂಗಳಾಗಲಿಂತಖಿಲ ಜೀ
ವನವ ನಿಜಗರ್ಭದೊಳ್ ತಳೆದ ಕರುಣಾಬ್ಧಿ ರಕ್ಷಿಪುದು ದೀನರನೆಂದನು ೨೪

ವೇದಕಬ್ಬನ್ನರೆದು ಸಾಧಿಸುವ ಶರ್ಕರೆಯು
ವೇದಾಂತಪಾಲ್ಗಡಲ ಕಡೆದು ಪಡೆವಾಮೃತವು
ಬೋಧಧೇನುವ ಕರೆದು ಕೈಗೊಂಬ ಚಿಲಿಪಾಲು ಭಕ್ತಿಜೇನ್ಗೊಡನನೊಡೆದು
ಮೋದದಿಂದಾರ್ಜಿಸುವ ಮಧುರಸವು ನಿಖಿಲಾಗ
ಮಾದಿ ದಧಿಯಂ ಮಥಿಸಿ ಸಂಗ್ರಹಿಪ ಸರ್ಪಿಯಿ
ತ್ಯಾದಿಗಳ್ ಸಮರಸದಿ ವದನದೊಳ್ 'ಕರೆದವ[ವನೇಂ]' ಸಭಾಗ್ಯನೊ
ಭುವಿಯೊಳು ೨೫

ಇಂತು ನುತಿ ಮಿಗಲು ಪೊರಳುವ ಕರ್ದಮನ ರಮಾ
ಕಾಂತನೊಲಿದೆತ್ತಿ ಮೈದಡಹಿ ಕರುಣಿಸುತ ನಿ
ನ್ನಂತರಂಗವನರಿದೆವೆಲೆ ತನಯ ಮನುಪುತ್ರಿ ಯತಿಸಾಧ್ವಿ ದೇವಹೂತಿ
ಕಾಂತೆಯಾದಪಳು ನಿನಗೆಮ್ಮ ವರದಿಂ ನಿನ್ನ
ಸಂತತಿಗಳತಿವೃದ್ಧಿಯಪ್ಪುದಿನ್ನವತಾರ
ಮುಂ ತಳೆವೆವಾವು ತದ್ಗರ್ಭದೊಳಗೆಂದರುಹಿ ಸೈವರಿದನಸುರವೈರಿ ೨೬

ಇತ್ತ ಕೇಳ್ ಕರ್ದಮಂ ಹರಿಯನಗಲಿದ ವಿರಹ
ಮೊತ್ತರಿಸಿ ಮರುಳುಗೊಂಡಂತೆ ತನ್ಮೂರ್ತಿಯಂ
ಚಿತ್ತದೊಳ್ ತಳೆದು ಭಾವಿಸುತಿರ್ದನಿನ್ನು ತಿಳಿ ಮನು ತನ್ನ ಸುತೆಯ ನೋಡಿ
ಮತ್ತೆ ಯೌವನ ಚಿಹ್ನೆಯೊದಗಿದುದನರಿದು ವಿಧಿ
ಯುತ್ತಮಾಂಘ್ರಿಗೆ ಮಣಿದು ದೇವಹೂತಿಯುನಾರಿ
ಗಿತ್ತಪುದು ತಕ್ಕ ವರನಂ ನಿಯಾಮಿಪುದೆನಲ್ ಸುರಜ್ಯೇಷ್ಠ ನಿಂತೆಂದನು ೨೭

೨೫. 1. ಕರದವಾನೇ ; ಕರದವನದೇಂ.

ತನಯು ಕೇಳಮಲ ಕರ್ದಮನುರುತಪೋಬಲದಿ
ವನಜಾಕ್ಷನಂ ಪ್ರಸನ್ನತೆಗೊಳಲ್ ಹರಿಯೊಲಿದು
ಮನುಪುತ್ರಿ ದೇವಹೂತಿಯ ಪರಿಗ್ರಹಿಸೆಂದನುಜ್ಞೆಯನ್ನಿತ್ತನದರಿಂ
ಸನುಮತವಿದಣುಗಿಯನ್ನೊಯಿದುಕರ್ದಮಗೀವು
ದೆನುತ ಪೇಳಿದನಾಗ ಸುತೆಯನೊಡಗೊಂಡು ನಿಜ
ವನಿತೆ ಶತರೂಪೆ ಸಹಿತೈತಂದು ಕರ್ದಮನ ಕಂಡು ಹರ್ಷಿತನಾದನು ೨೮

ಅವಿರಳ ಶ್ರದ್ಧೆಯಿಂ ಕರ್ದಮಂ ಮನುವ ತ
ದ್ಯುವತಿ ಶತರೂಪೆಯರ ಮನ್ನಿಸುತ ಸತ್ಕರಿಸಿ
ವಿವಿಧೋಪಚಾರಮನ್ನನುಗೈದು ಬಂದ ಕಾರ್ಯದ ಹದನ ಬೆಸಗೊಳಲ್ಕೆ
ಭವದೀಯ ಯೋಗ್ಯಮಂ ವಿಧಿಯರಿದು ಬೆಸಗೈದ
ನೆವಗೆ ವರದೇವಹೂತಿಯನು ನಿನಗಿತ್ತು ವೈ
ಭವ ವಿವಾಹವನೆಸಗಲೆಂದು ನೇಮಿಸಲಿಲ್ಲಿ ಬಂದೆವಿದು ಹದನೆಂದನು ೨೯

ಮಧುಸೂದನಂ ನಿನಗನುಗ್ರಹಿಸಿದರ್ಥಮಂ
ವಿಧಿಯರಿದು ಪೇಳ್ದುದೈತಂದೆವದರಿಂದೆ ಗುಣ
ನಿಧಿಯೆನಿಪ ಕನ್ಯಾಮಣಿಯನೊಪ್ಪುಗೊಂಬುದೆನಲಾಗ ಕರ್ದಮ ವಿನಯದಿ
ಕುಧರ ಕಾನನವಾಸ ಕಂದಮೂಲಾನ್ನಮೀ
ವಿಧದ ಸಂಸಾರ ಮೃಗಪಕ್ಷಿಗಳ ನೆರೆ ನಿಮ್ಮ
ವಧುವಿಗೆಂತೊಡಬಡುವುದುನ್ನತ ವಿರಾಗಿಜನರೊಗತನಮಿದೀಗೆಂದನು ೩೦

ಪತಿಸೇವೆಯಿಂದೆ ಪೆಸರ್ವಡೆದು ವೈರಾಗ್ಯದು
ನ್ನತಿಯನೇರಿದಡಲ್ಲದಂಗನಾ ಜನಕೆ ಪರ
ಗತಿಗೆ ಬಳಿಕಿನ್ನು ಸಾಧನಮಿಹುದೆ ನೆಲೆಯಿಲ್ಲದಿಹ ಸೌಖ್ಯದಿನಿಗೆ ಮನಮಂ
ಜತೆಗೊಳಿಸಿ ಪರವ ನುರಸುವರುದರದಿಂದಿಳಿದ
ಸುತೆಯಲ್ಲ ಸ್ವಾಧಿಯರ ಸೀಮಂತಮಣಿಯೆನಿಪ
ಶತರೂಪೆಯುದರಜಾತಳು ನಿನ್ನ ವೈರಾಗ್ಯಕಿಮ್ಮಡಿಸದಿರಳೆಂದನು ೩೧

ಭಾವಿಸೆಮ್ಮನುವನೆಲೆ ಸುಮತಿ ಯೊವಜ್ಜೀವ
ವಾವು ಸಂಸಾರದೊಳ್ ತಗುಲಿ ಪರಸಾಧನವ
ಠೀವಿಯಿಂ ವಂಚಿಸುವರಲ್ಲ ಕೇಳೆಮ್ಮ ನಿಶ್ಚಯದನುವನೊರೆವೆವಿನ್ನು
ಈ ವನಿತೆಗೊರ್ವ ಸುತನುದಯಿಸಿದ ಬಳಿಕ ಮ
ತ್ತಾವು ಸಂಸಾರಮನ್ನೊತ್ತಲಿಸಿ ವೈರಾಗ್ಯ
ಭಾವಮನ್ನನುವಿಡಿವೆವಿಂತು ಸಮ್ಮತಮಾದಡೀವುದಣುಗಿಯನೆಂದನು ೩೨

ಎನಲು ಪುತ್ರಿಯ ಮೊಗವ ನೋಡಿಯೊಲಿದುದನರಿದು
ಮನುಮಹಾತ್ಮನು ನುಡಿದನೆಲೆ ಸುಮತಿ ಕುವರಿಯಂ
ನಿನಗಿತ್ತ ಬಳಿಕಲದರಾಗುಹೋಗಿನ ಹರಿಬವೆಮಗೇನು ನಿನ್ನದೆನುತ
ವನಜಾಕ್ಷ ರೂಪಿನಿಂ ವರನ ಭಾವಿಸುತ ಶುಭ
ದಿನ ಸನ್ಮುಹೂರ್ತದೊಳ್ ದೇವಹೂತಿಯ ಕರ್ದ
ಮನಿಗೆ ಧಾರೆಯನೆರೆದು ಶತರೂಪೆ ಮನು ಸಹಿತ ಹರಸಿ ಸೇಸೆಯ ತಳೆದರು ೩೩

ಯುಕ್ತವರ್ತನೆ ನೀತಿಯಿಂ ಮಗಳಿಗರುಹಿ ನಿರ
ಸಕ್ತಿಯಿಂ ಜನನಿಜನಕರ್ಸರಿದರಿತ್ತ ಪತಿ
ಭಕ್ತಿಯನ್ನೆಸಗಿದಳ್ ತ್ರಿಭುವನದೊಳುಳ್ಳ ಪತಿಶೀಲೆಯರೊಳರಿದೆನಿಸಿರೆ
ರಕ್ತಿಯಿಂ ಪರದೈವಮೇ ಭರ್ತೃವೆಂದೆನೆ ವಿ
ರಕ್ತಿಯೊಳ್ ನಿಜಕಾಂತಗಿಂದಲಿವ್ಮಡಿಸಿರೆ ತ
ದುಕ್ತಿಯಂ ಮುಂಚುತಿಹ ಪರಿಚರ್ಯದೊಳ್ ಸಂದಳರಸ ಪೊರೆದುಬ್ಬುವಂತೆ ೩೪

ಇಂತು ಪತಿ ಸೇವೆಯೊಳ್ ಪ್ರಬಲಿಸಿದ ನಿಜಪತ್ನಿ
ಯಂತರಂಗವನರಿದು ಹರ್ಷದಿಂ ಪತಿಭಕ್ತಿ
ಕಾಂತೆಯರ ಕುಲದೈವಮೆನಿಸಿತೀ ಸತಿಯಗುಣಮೆಂದು ನಿಶ್ಚಯಿಸಿ ಮತ್ತೆ
ಸಂತಸದಲರಸಿಗಂ ನುಡಿದನೆಲೆ ದೇವಿ ಕೇಳ್
ಚಿಂತಿತಾರ್ಥವನೊದಗಿಪೆವು ಮಂಗಳಸ್ನಾನ
ಮಂ ತಳೆದು ವೈರಾಗ್ಯಜಂಜಡವನುಳಿವುದೆನಲರಸಿ ಮಗುಳಿಂತೆಂದಳು ೩೫

ದೇವ ಚಿತ್ತವಿಸು ಮಕರಧ್ವಜಾಗಮದ ತಂ
ತ್ರಾವಳಿಗಳನುವನಂಗವಿಸಲೆಳಸುವಡೆ ಬಳಿ
ಕಾವ ಪರಿಕರಮಿಪ್ಪುದಿಲ್ಲಿ ತನ್ಮೂರ್ತಿಯಂ ಬಗೆಗೊಂಡು ಸೇವಿಸುವಡೆ
ಆ ವಿಧಾನೋಪಕರಣಂಗಳಮರದ ಭಜನೆ
ಭಾವಜಂಗೊಪ್ಪಹುದೆ ಶೃಂಗಾರರಸದ ಪರು
ಠಾವಮನ್ನೊದಗಿಪುದು ಮದನಮೂರ್ತಿಯನೊಲಿಸಲೆಂದಳಾ ಕಾಂತೆ ನಗುತ ೩೬

ಎನಲು ನಿಶ್ಚಯುವೆನುತ್ತಾಗ ನಿಜಚಿತ್ತದೊಳ್
ನೆನೆಯಲಾದುದು ಮಹಾ ಜನಪದವು ಸಾಲುಗೃಹ
ಕನಕಕರುವಾಡಗಳ್ ರತ್ನಕೀಲಿತಲೋವೆ ವಿದ್ರುಮಸ್ತಂಭ ಮಿಗಲು
ಅನುವಾದ ರಾಜಸದನಂಗಳಿಂ ಸಾಲು ಸಾ
ಲಿನಲೊಪ್ಪುತಿಹ ಮಳಿಗೆಯಂಗಡಿಯ ಚೆಲುವಿನಿಂ
ವನಿತೆ ಪುರುಷರ್ನಾಲ್ಕು ವರ್ಣಜನ ಜಾಲದಿಂ ಸುರಪುರದ ಸೊಬಗ ನಗುತ ೩೭

ಪರಿಯಂಕಶಯ್ಯಾವಿಭೂಷಣಂಗಳ್ ಛತ್ರ
ಮೆರೆವ ಚಾಮರ ವಾಹನಾದಿಗಳ್ ಸಿಂಹ ವಿ
ಷ್ಟರ ಕನಕಪಾತ್ರೆ ಸೌರಂಭಗಳ್ ಚಿತ್ರಾಂಬರಾದಿ ಧನಧಾನ್ಯಂಗಳು
ಪರಿಮಳದ್ರವ್ಯ ಸದ್ವಸ್ತುಗಳ್ ಭೃತ್ಯಜನ
ಪರಿಚಾರಕಾದಿಗಳನನುಗೈದು ಪತ್ತು ಸಾ
ವಿರ ದಿವ್ಯತರುಣಿಯರ ತಂದಿತ್ತನಾ ದೇವಹೂತಿಯಳ ಪರಿಚರ್ಯೆಕೆ ೩೮

ಗುಂಪೆಸೆವ ಪಕ್ವಫಲಗೊನೆಗಳಿಂ ಕಣ್ಮನಸಿ
ಗಿಂಪೆಸೆವ ಚೆಂದಳಿರ್ನನೆಗಳಿಂದನವರತ
ತಂಪೆಸೆವ ನೆಳಲುಮರದನಿಗಳಿಂ ಚೆಲುವಾದ ಬನಗಳಿಂದೆಡೆಯೆಡೆಯಲಿ
ಸುಂಪೆಸೆವ ಪೂಂಗಳೆಯ ನೆಲಗಳಿಂ ಮಣಿಶಿಲೆಗ
ಳಿಂ ಪೆಸೆರ್ವಡೆದ ತಂಗೊಳಗಳಿಂ ಜನಮನಕೆ
ಸೊಂಪೆಸೆವ ಶುಕಪಿಕಾದಿಗಳ ನುಣ್ದನಿಗಳಿಂದವನಿಗತಿಶಯುವೆನಿಸಿತು ೩೯

ಇಂತು ಯಾಮಾರ್ಧದೊಳ್ ನಿರ್ಮಿಸಲು ಸೋಜಿಗವ
ನಾಂತು ಮನುಸುತೆ ನುಡಿದಳೆಲೆ ದೇವ ನಿನ್ನ ಮ
ತ್ಕಾಂತಮಾತ್ರದಲೆಣಿಸುತಿದ್ದೆ ನಿಂನೆಗ ಸೃಷ್ಟಿ ಕಾಂತಮಹಿಮೆಯನರಿಯದೆ
ಅಂತರಂಗದ ಬಯಕೆಗೆಡೆಗುಡದೆ ನೂಕಿ ಮಾ
ರಾಂತು ನಿಂದುದು ನಿಖಿಲ ಸೌರಂಭ ಪರಿಚರ್ಯ
ಕಾಂತೆಯರು ಸಹಿತ ಜಲಕೇಳಿಗೈದುವೆವೆಂದಡನು ಮತಿಯನಿತ್ತನಂದು ೪೦

ಬಳಿಕ ಮಲಯಜಪಂಕ ಯಕ್ಷಕರ್ದಮದ ಪೊಂ
ದಳಿಗೆಗಳ ಕುಂಕುಮ ಹರಿದ್ರಾದಿ ನಿಖಿಲ ಮಂ
ಗಳ ವಸ್ತುರತ್ನ ಭೂಷಣ ಚಿತ್ರವಸನಗಳ ಪರಿವಿಧದ ಪುಷ್ಪಂಗಳ
ಕಳಶ ಕನ್ನಡಿಗಳನ್ನಾಂತು ಬಹ ಪರಿಚರ್ಯ
ಕೆಳದಿಯರು ಪುರತರುಣಿಯರ್ಸಹಿತಲಾನಂದ
ಬೆಳವಿಗೆಯುಲ್ಲೈದಿದಪೂರ್ಬನಕೆ ತನುಗಂಧಕೇರ್ವ ಲಸದಳಿವೊರಹಿನಿಂ ೪೧

ತರುಣಿಯರ ತನುಕಾಂತಿ ಖಡ್ಗದಿಂ ಕಡಿವಡೆದು
ತರಣಿ ಕರಗಳ್ ಸಹಸ್ರಚ್ಛಿದ್ರವಾಗೆ ಲಸ
ದರುಣಾಧರಚ್ಛಾಯ ಕೆಂಗೋಲ್ಗಳುರುಬೆಯಿಂ ಚಿಗುರುಗಳ್ ನಡುಗಸಾಗೆ
ಕುರುಳ ನೈಲ್ಯದ ಪಾಶದಗ್ಗಳಿಕೆಯಿಂ ಮಧುಪ
ನೆರವಿಗಾರಡಿಯೊದಗೆ ನೇತ್ರವಿಸ್ಫುರಣೆಯಿಂ
ಕರಿಸೈದಿಲೆಗಳಲಸಿ ತಲೆವಾಗೆ ಕಾಂತೆಯರ್ನಡೆದರಿದಿರಿಲ್ಲವೆನಿಸಿ ೪೨

ಸಿಡುಗುರುಳ್ಪಿಸರಗಳ್ ನೀಲಾಭ್ರಹಸರಗಳ್
ಕುಡಿನೋಟ ಹೊಳಪುಗಳ್ ಕಾರ್ಮಿಂಚು ಝುಳಪುಗಳ್
ನಡೆಗೊಳೆವಕಬರಿಗಳ್ [1]ನರ್ತಿಪ ಮಯೂರಿಗಳ್[1] ಮಸ್ತಕಗಳಿಂದುದುರುವ
ಮುಡಿಯರಳ ಸಾಲ:ಗಳ್ ಮಿಗೆ ದೃಷನ್ಮಾಲೆಗಳ್
ಕಡುಬೆವರ ಬಿಂದುಗಳ್ ಕರೆವ ಮಳೆಯುಂದಗಳ್
ಒಡನೆ ಸತಿಯರ ಒಳಗ ವರ್ಷೋದಯದ ಬೆಡಗ ಬೀರುತವು ನಡೆದರಂದು ೪೩

---

೪೩. 1. ನರ್ತಿಸುವ ಸಬರಿಗಳ್,

ಶ್ರುತಿಯನಂಡಲೆವ ಸಿಡುಗಂಗಳಂ ಕಂಗಳು
ನ್ನತ ಬಯಕೆಯಂ ಪೊರೆವ ಕುಚಗಳಂ ಕುಚಗಳಂ
ಸತತ ಪೀಡಿಪ ಕಂಠಸರಗಳ್ಗಂ ಸವೆಗಳಮುರಿದ ಕಂಬು ಕಂಧರಗಳಂ
ಗತಿಗೆ ಬಳುಕುವ ಸಣ್ಣ ನಡುಗಳಂ ನಡುಗಳಂ
ಜತೆವೆರೆದ ಪೊಂಗದಳಿದೊಡೆಗಳಂ ತೊಡೆಗಳಂ
ಚಿತಗಳುಡೆನೆರಿಯ ಪಂಜನಗಳಂ ಜನಗಳಂದೀಕ್ಷಿಸುತ ವ್ಯೆಮರೆದರು ೪೪

ಸುಂದರಾಕಾರೆಯರ್ ಸೊಬಗಿನಾಗಾರೆಯರ್
ಕಂದರ್ಪನಾನೆಯರ್ ಕಲಕಂಠಗಾನೆಯರ್
ಕುಂದಸಮರದನೆಯರ್ ಕುಮುದಾಪ್ತವದನೆಯರ್ ಕಲಿತಬಿಂಬಾಧರಿಯರು
ಚೆಂದಳಿಪಾರ್ಣಿಯರ್ ಚೆಲ್ವ ಶುಕವಾಣಿಯರ್
ಚಂದ್ರಿಕಾಹಾಸೆಯರ್ ಚಕ್ರಿಯೆಳೆವಾಸೆಯರ್
ಇಂದೀವರಾಕ್ಷಿಯರ್ ವಿದ್ಯುತ್ಕಟಾಕ್ಷೆಯರ್ ವಿಭವದಿಂ ನಡೆತಂದರು ೪೫

ಅಂಗನೆಯರಂಗ ದೀಧಿತಿ ಸರಿದ್ವೀಚಿಗಳ
ಭಂಗದೊಳ್ ತೊಳಲುತಿಹ ವಿಟರ ದೃಗ್ವಿಳಗು ಮ
ತ್ಸ್ಯಂಗಳಂ ತತ್ಕೇಶಪಾಶದಿಂ ಸೆಳೆದು ತದ್ವಕ್ಷೋಜ ಯುಗಳಮೆಂಬ
ಪೊಂಗೊಡಗಳೊಳ್ ತುಂಬಿ ತನ್ಮಧ್ಯಜಘನ ದೇ
ಶಂಗಳುರು ಲಾವಣ್ಯ ಪುರದೊಳನುರಾಗಮೆಂ
ಬಂಗಡಿಗೆ ಮಾರದಿರನಂಗಭವ ಬಲೆಗಾರನೆನಿಸುತಿರೆ ನಡೆತಂದರು ೪೬

ಅಡಿದೊಡರ್ಘಲಿಘಲಿರ್ನಿನದದಿಂ ಬೀಸುಗ್ಯೆ
ಗಡಗನಿಕ್ವಣಝುಣತ್ಕಾರದಿಂದುಟ್ಟ ಪೊಸ
ಮುಡಿವರ್ಗ ಸರಬರಸ್ವನಗಳಿಂ ಕಾಂಚಿಗೊಂದಿಸಿದ ಪೊಗಿರುಘಂಟೆಯ
ನುಡಿಯ ಕಿಂಕಿಣಿ ಕಿಣಿ ಧ್ವನಿಗಳಿಂ ತನುಗಂಧ
ಕಡರ್ವ ಮಧುಪಾಳಿಝೇಂಕಾರದಿಂ ವಿಟರೆದೆಗ
ಳೊಡೆಯದುಳಿದಪರೆಂತೊ ತಿಳಿಯದೆನಲಂಗನೆಯರರ್ಥಿಯಿಂ ನಡೆತಂದರು ೪೭

ಜಂಬೀರ ಫಲಕೆ ಕಂಟಕಭೀತಿ ಶೋಭಿಸುವ
ಪೊಂಬುಗುರಿಗಂ ರಜ್ಜುಬಂಧನವು ಪುಟಚಂಡಿ
ಗಂ ಬಡಿತೆಯುಪಳವು ಕಮಲವೊಗ್ಗೆಗಳಿಂಗೆ ಕರಿಕರಗಳುಪಹತಿಗಳು
ಲಂಬಿಸಿಹವದರಿಂದೆ ತಮಗಿನ್ನು ಸರಿಯಾವ
ರೆಂಬಗರ್ವದಲಿ ಬಿರ್ರನೆ ಬಿಗಿದು ಮೊಗವೆತ್ತಿ
ಯಂಬರವನೋಳ್ಪವಮರಿದ ಕುಚಗಳೆನಿಸಿರಲ್ ಮದವತಿಯರ ಡಿಯಿಟ್ಟರು ೪೮

ಪ್ರಣುತ ಶುಕವಾಣಿ ಪಂಕಜಪಾಣಿ ಫಣಿವೇಣಿ
ಮಣಿವಲಯಭೂಷೆ ಮಂಜುಲವೇಷೆ ಮೃದುಭಾಷೆ
ಮನಸಿಜನಿದಾನೆ ಗಜಯಾನೆ ಕೋಕಿಲಗಾನೆ ಸೊಬಗುಮೋಹನದ ಸೋನೆ
ಮುನಿಧೈರ್ಯಭಂಗೆ ಮೃದುಲಾಂಗೆ ವಿದ್ಯುದಪಾಂಗೆ
ಘನಕುಂದರದನೆ ಶಶಿವದನೆ ಸುಂದರಸದನೆ
ಯೆನಿಸುತಿಹ ಸತಿಯರುನ್ನತಿಯ ಬೆಡಗಿನ ಗತಿಯಲೈದಿದಪೂರ್ದೋಟಕೆ ೪೯

ಬಡನಡುಗಳವ್ವಳಿಸೆ ಬಟ್ಟಕುಚಗಳ್ ನಟಿಸೆ
ಕುಡಿಗಣ್ಪೆಳಗು ಮೂಡೆ ಕುಂಡಲಗಳೊಲೆದಾಡೆ
ಮುಡಿಯರಳ್ಗಳು ತೂರೆ ಮುಂಜೆರಗುಗಳ್ ಜಾರೆ ಮುಖದಿ ಕಿರುಬೆಮರು ತೋರೆ
ಜಡೆ ಜಂಘೆಯಂ ನಿಲುಕೆ ಜಡಿದು ವುಡೆನೆರಿ ಕಲಕೆ
ಕಡಗಕಂಕಣ ಮೊಳಗೆ ಘನನಿತಂಬಗಳಲುಗೆ
ನಡೆವರಾ ಮದವತಿಯರಂದು ವಿಟಸಂತತಿಯ ಮತಿಯನುರೆ ಕೋಳ್ಪಡಿವುತ ೫೦

ಕಲಕಂಠ ಚಂಚೂ ವಿದಳಿತ ಚೆಂದಳಗಳಿಂ
ದಳಿಜಸವ ಪೊರೆವ ಸೊಂಪೊರೆವ ಕುಸುಮಂಗಳಿಂ
ಬಳಲಿನಿಂ ಪೊಗುವರಿಂಪೊಗುವ ತಂಗೊಳಗಳಿಂ ಬಹುಲತಲತಾಳಿಯಿಂದೆ
ಗಿಳಿಗಳೂಟಕೆ ಸಫಲಮಪ್ಪ [1]ಸುಫಲಂಗಳಿಂ[1]
ಬೆಳೆದ ಸುರಸಾಲ ಸುರಸಾಲಂಬತರುಗಳಿಂ
ದಳವಟ್ಟ ಸುಂದರಾನಂದ ನವನಂದನವನಂದು ಸಾರ್ದರ್ಮುದದೊಳು ೫೧

---

೫೧ 1. ಫಲಪಣ್ಗಳಿಂ

ಬಂದುಗೆಗೆ ಬಾಯಿದೆರೆದುತ್ಪಲಗಳಂ ನೋಡಿ
ಕುಂದಕುಟ್ಮಳಕೆ ಪಲ್ಗಿರಿದು ಲತೆಯನ್ನಪ್ಪಿ
ನಿಂದು ಮಲ್ಲಿಗೆಯಧರಳ ನಸುನಕ್ಕು ಕಂಜಕೋರಕಗಳನ್ನೆದೆಗಮರ್ಚಿ
ಸಂದ ಕೇತಕಿಯನುಗುರಿಂ ಸೀಳ್ದು ಚಂಪಕವ
ನಂದದಿಂದಾಘ್ರಾಣಿಸುತ ಕಮಲಮಂ ಪಿಡಿದು
ಚೆಂದಳಿರ ಮೆಟ್ಟಿ ಸುಳಿದರ್ಸುಮಗಳಂದಮನ್ನವಯುವಕೆ ಸರಿನೋಳ್ಪೊಲು ೫೨

ತೊಡೆಗಳುರುಚೆಲುವನಾನದೆ ಕದಳಿ ತಲೆವಾಗೆ
ಬೆಡಗುಕುಚವೃತ್ತಮಮರದೆ ತೆಂಗು ಮರೆಯಾಗೆ
ಒಡಲ ಪರಿಮಳಕೆ ಸರಿಯಾಗದಿರೆ ಲಾಮಂಚಮಿಳೆಯ ಬಗೆದೊಳಗಿಲಡಗೆ
ಕಡುಚೆಲ್ವ ದಂತರುಜಿಗಂ ಬೆರೆತು ದಾಡಿಮಗ
ಳೊಡೆದು ಬಾಯ್ಬಿಡಸಾಗೆ ಜೋಲ್ವರಿವ ಸೋರ್ಮುಡಿಯ
ನಿಡುವಿಗಚ್ಚರುಬೊಂದಿ ಪೂಗತರು ತಲೆದೂಗೆ ಸುಳಿದರಾ ಸುಂದರಿಯರು ೫೩

ಕೆಡೆದು ಹರಹಿದ ಪರಾಗಕೆ ರಾಗಮೇರಿತವ
ಪಡಿಯ ಸೋಂಕಿಂದೆ ಹಂಸೆಗೆ ಹಂಸು ಪಾರಿದವು
ನಡೆಯ ಬೆಡಗಿಂ ಭ್ರಮರಕಂ ಭ್ರಮಣೆ ಮೀರಿದವು ನಿಡುಗುರುಳ ನೈಲ್ಯದಿಂದೆ
ಒಡನೆ ಶುಕರಾಜಿ ರಾಜಿಪ ತರುವನೇರಿದವು
ನುಡಿಯಿಂದೆ ಕಲಕಂಠ ಕಂಠರಸಮಾರಿದವು
ನಿಡುಸರಕೆ ನವಿಲು ನವಿಲಾಸಮಂ ಸಾರಿದವು ನೃತ್ಯದಿಂದಾ ಸತಿಯರ ೫೪

ನಿರತ ಪುಷ್ಕರದಂತೆ ಕವಿನೆಲೆಯು ಕವಿನೆಲೆಯ
ತೆರದಿ ಹಂಸಾಲಯವು ಹಂಸಾಲಯದ ಬೆಡಗಿ
ನಿರವಿನಿಂದಬ್ಜಾನಿಮಿಷಸದನಮಬ್ಜಾನಿಮಿಷಸದನದೇಳ್ಗೆಯಂತೆ
ಸುರಭಿಯೆಡೆ ಸುರಭಿಯೆಡೆಯಂದದಿಂದಮೃತಮಂ
ದಿರವಮೃತಮಂದಿರದ ಮಾಳ್ಕೆಯಿಂದೀಕ್ಷಿಸಲ್
ನಿರತ ಪುಷ್ಕರ ಭರಿತಮಾದ ಭಾಸ್ವತ್ಸರೋವರವ ಸಾರ್ದನರ್ಮುದದೊಳು ೫೫

ಕಂಕಣಾಭರಣೆ ಕುಸುಮ ಸುಗಂಧಿ ಸುಪರಾಗ
ಕುಂಕುಮ ವಿಲಿಪ್ತ ಮಂಜುಲ ಪಯೋಧರೆ ಲಸ
ತ್ಪಂಕಜಾಗಾರೆ ಪ್ರಮದಾಳಿ ಸಂಸೇವ್ಯೆ ಸುಮನಸ್ಸಮೂಹೈಕ ಸದನೆ
ಸಂಕೀರ್ಣ ಪುಷ್ಕರಚರಾಧಾರೆ ಕುವಲಯಾ
ಲಂಕಾರೆ ರಾಜಹಂಸಾರ್ಥಕೋಶಸ್ಥಾನೆ
ಸಂಕಾಶೆಯಹ ಸರೋವರಲಕ್ಷ್ಮಿ ವರಲಕ್ಷ್ಮಿಯನುವಿನಿಂ ತೋರ್ದುದಂದು ೫೬

ಲಸದಮೃತ ಶೋಭಿಯುಡುಪತಿಯತಿಗಳಂತೆ ಭಾ
ವಿಸೆ ಚಕ್ರಧಾರಿ ಹರಿಪದ ಹರಿಗಳಂತೆ ರಂ
ಜಿಸುವ ಘನ ಪುಂಡರೀಕಾಲಯವು ವನಭೂಮಿಯನಲದಿಜ್ಮಹಿಮೆಯಂತೆ
ಎಸೆವ ಕಮಲಗಳಿಕ್ಕೆ ಶಿವಕರಾಭ್ರಗಳಂತೆ
ಕುಶಲ ಸುದ್ವಿಜಪಂಕ್ತಿಯಿಪ್ಪ ನೆಲೆ ಮಖಶಾಲೆ
ಪೊಸಜವ್ವನಿಗಳ ಬಾಯ್ದೆರೆಯಂತೆ ಕಾಸಾರಮಿದಿರಿನೊಳ್ ಕಂಗೊಳಿಸಿತು ೫೭

ಹರಿವಿಲಾಸಗಳಿದೆಕೊ ವನಮಿಲ್ಲ ವನಮಿದೆಕೊ
ಶರಭಂಗಳಿಲ್ಲ ಶರಭಂಗಮಿಲ್ಲಿದೆಕೊ ಭೂ
ವರರ ಕಲಹಂ ಸಮುಂಚಿಸಲಿಲ್ಲ ಕಲಹಂಸಮಿದೆಕೊ ಪುಷ್ಕರಮದಿಲ್ಲ
ಮೆರೆವ ಪುಷ್ಕರಮಿದೆಕೊ ಚಕ್ರಮಿಲ್ಲಾ ಚಕ್ರ
ಬರುತಿದೆಕೊ ಕಮಲಾಪ್ತ ಹರಿಯಿಲ್ಲ ಕಮಲಾಪ್ತ
ಹರಿಸಖ್ಯಹೈತುಕಮದಿದೆಕೊ ಸಂತಾಪಕರಮಿಲ್ಲೆ ನಿಸಿತಾ ಕೊಳನೊಳು ೫೮

ಕಾಂತಶೋಭಿತಮಾಗಲದರ ದೆಸೆಯಿಂ ಕನಕ
ದಂತೆ ಕಾರ್ಮುಕದಂತೆ ಜಸವಡೆದು ಸತತಮುಂ
ಶಾಂತ ಸ್ವಭಾವಮಾದುದರಿಂದಲೀಶವಾಣೀಶರಂದದಿ ಸುಳಿಗಳ
ಭ್ರಾಂತನೊಹಿಸಿರ್ಪ ಕಾರಣದಿಂದೆ ಶುಭ್ರಮೆಂ
ಬಂತಭ್ರದಂತೆ ಪೆಸರ್ಪಡೆದ ಕಾಸಾರಮಂ
ಕಾಂತೆಯರ್ಕಂಡು ವಿಸ್ಮಿತರಾಗಿ ತದ್ಗುಣಾವಳಿಗಳಂ ಪೊಗಳ್ದರಂದು ೫೯

ಪರಿದು ಕೂಲವನಾಂತು ಸುಮನೋನುರಾಗ ವಿ
ಸ್ಫುರಣೆಯಿಂ ವನಮಾಲಿಕಾವರ್ತ ಶೋಭಿತದಿ
ಮೆರೆವ ಲಸದೂರ್ಮಿಕಾ ಹಂಸ ಭೂಷಿತೆಯಿಂದಲೊಳ್ದನುರುಸಂತಸವನು
ಪೊರೆದು ಪಟುಶಾಂತ ನಿರ್ದೋಷಿಗಳಲನಿಶಹಿತ
ಕರವೆರೆದು ಕುವಲಯದಿ ಜಸವಡೆದು ಮಂಗಳಾ
ಕರ ಸುವಾಸಿನಿಯೆನಿಪ ಸಾಧ್ವಿಯಂತಾ ಸರಸಿ ಕಣ್ಗೆ ಕೌತುಕಮೆನಿಸಿತು ೬೦

ಸುತರಂಗ ಲೀಲೆಯನ್ನಾಂತು ಸಿರಿ ನಿಲಯಾಧಿ
ಪತಿಯೆನಿಸಿ ಸುರಥಾಂಗ ನಾಮಕವ ಧರಿಸಿದು
ನ್ನತಿಯಿಂದ ವನಮಾಲಿಯೆಂಬ ಕೀರ್ತಿಯ ಪಡೆದು ಕಮಲಭಂಗಾನ್ವಿತೆಯೊಳು
ಸತತ ಸಂದಿಹುದರಿಂ ಶೀತಕರ ಮಹಿಮೆಯು
ನ್ನತಿಯು ತಾನೆನಿಸಿ ಷಟ್ಪದಿ ಗಾನದಿಂದೆ ರಂ
ಜಿತ ಸುಪ್ರಬಂಧದೇಳ್ಗೆಯ ವಹಿಸಿ ಮೆರೆವ ಕಾಸಾರಕ್ಕೈತಂದರಂದು ೬೧

ಚೆಲುವೆಸೆವ ಕೂಲಗಳ್ ಚರಿಪ ಕಲ್ಲೋಲಗಳ್
ನಲಿವ ಕವಿಜಾಲಗಳ್ ನಲಿನಗಳ ಸಾಲುಗಳ್
ಬಲಿದ ಶೈವಾಲಗಳ್ ಬಳಸು ವನಮಾಲೆಗಳ್ ನೀಲಕೀಲಾಲಂಗಳು
ಸುಲಲಿತ ಸುಗಂಧಗಳ್ ಸುರಿವ ಮಕರಂದಗಳ್
ಜಲಚರಾನಂದಗಳ್ ಝೇಂಕೃತ ಮಿಳಿಂದಗಳ್
ನಲವಿನಿಂ ದೀಕ್ಷಿಸುವ ನಾರಿಯರ ಕಣ್ಮನವ ಸೆರೆವಿಡಿದವರಿದೆನಿಸಲು ೬೨

ಜತೆಯಗಲದಾಡುತಿಹ ಕೋಕಗಳ ಭೇಕಗಳ
ಗತಿಗೆ ಪೊಂಚುವ ಜಲಭುಜಂಗಗಳ ಭೃಂಗಗಳ
ರತಿಸದನಮಾದ ಸುಮವಿಸರಗಳನುಸುರುಗಳ ಮರಸಿ ಪೊಂಚುವ ಬಕಗಳ
ಕೃತಕಕನುಗೊಡದ ಜಲಜಂತುಗಳ ತೊಂತುಗಳ
ಲತೆಯೆ ಗೃಹಮಾದ ಕವಿಜಾಲಗಳ ಕೂಲಗಳ
ಸತಿಭರದಲಪ್ಪಳಿಪ ಭಂಗಗಳ ಸಂಘಗಳಲಾ ಸರೋವರಮೆಸೆದುದು ೬೩

ಈತೆರದಲೆಸೆವ ಕಮಲಾಕರ ಮನೋಹರದ
ಶೀತಳೋದಕವ ಕಂಡಬಲೆಯರ್ತವಕದಿಂ
ದಾತಪದ ಝಳವನೊತ್ತರಿಸಲೆಂದಿಳಿದರಂಗಜನ ಮದ ದಂತಿಗಳೆನೆ
ಭೀತಿಯಿಂದಂಚೆಯಾರಡಿಗಳೋಡಿದವು ಪದ
ಘಾತದಿಂ ಮತ್ಸ್ಯಂಗಳಾಳಕಿಳಿದವು ಪಾಕ
ಜಾತಗಂಧಿಯರ ನಡೆಮುಡಿನೇತ್ರ ಸುಂದರಕೆ ನಾಚಿ ಪರಿದೋಡುವಂತೆ ೬೪

ನಾರಿಯರ ಕುಚಕುಂಕುಮವು ಕದಡಿ ಕೆಂಚಿಡಿದ
ನೀರು ಕೆಂಬಟ್ಟೆಯನ್ನುಟ್ಟು ತತ್ತನುರುಚಿಗ
ಳೂರಿದ ಹರಿದ್ರಾನುಲೇಪಮನ್ನಾಂತು ತದ್ಭೂಷಣಂಗಳು ಬಿಂಬಿಸಿ
ತೋರಲು ತದಾಭರಣಮಂತಳೆದು ತತ್ಸತಿಯ
ರೋರಣಪ್ರತಿಬಿಂಬ ಸಂದಣಿಯ ಪರಿಚರ್ಯ
ನೀರೆಯರ ಬಳಸಿನಿಂ ಪೊಳೆವ ಕಾಸಾರ ಲಕ್ಷ್ಮಿಯನು ಪರಿರಂಭಿಸಿದರು ೬೫

ಮುಗ್ಗಿ ಮುಂಬರಿವಲೆಗೆ ಕುಣಿವ ಕುಚದೋಲ್ ಕಮಲ
ಮೊಗ್ಗೆಗಳ್ ಬಡಿದಾಡೆ ಬಿಡುಮುಡಿಯ ನೀಲರುಚಿ
ಯಗ್ಗಳಿಕೆಯಂತಳಿಗಳೆಡೆಯಾಡೆ ದೃಗ್ಭ್ವಳಗಿನಂತೆ ಮೀನ್ಮರಿಗಳೋಡೆ
ಜಗ್ಗುನಡೆಯಿಂ ತ್ರಿವಳಿಪೊದಳುವಂದದಿ ತೆರೆಗ
ಳುಗ್ಗಡದೊಳೊಲೆದಾಡೆ ಹೆಂಗಳಾ ತಂಗೊಳನ
ನುಗ್ಗಿ ವಿಹರಿಸಿದರುದಕವು ಕಲಕಿ ತಳಪಟದಲಾಲೋಲಮಾಗುತಿರಲು ೬೬

ಚೆಲ್ವತನು ಪೊಗರು ರಸಮುಚ್ಚಳಿಸಿ ನಾಲ್ದೆಸೆಗೆ
ಚೆಲ್ವರಿವುದೆಂಬಂತೆ ವಾರಿಯಂ ಮೊಗೆಮೊಗೆದು
ಚೆಲ್ವರಂಜಲಿಗಳಿಂ ಪ್ರಣಯಮುಳಿಸಿಂದೊರ್ವರೊರ್ವರ್ಗೆ ವಾಸಿ ಮಿಗಲು
ಬಲ್ವಾತ ಘಾತದುರುಬೆಗಳಿಂದೆ ಸುರಿವಾ[1]ಲಿ
ಗಲ್ಪಳೆಯ ಬಿರುಬೆನಿಸಲರಸಿಯಪೊರ್ಳಿವ ಕೆಂ
ಬಲ್ಪರಸೆಯಿಂದಾಡುಗಡಿವುತಂ ಮದನನಗ್ಗಳೆಯ ಭಟರೆಂಬಂತಿರೆ ೬೭

---

೬೭. 1. ನೆ.

ಬಾಗಿ ಬೊಗಸೆಯಲಿ ನೀರ್ವೊಗೆವುತಿರೆ ಮುಂಗುರುಳ್
ಮೇಗಣಿಂ ಚೆದರಿ ಮುಖಮಂ ಮುಸುಕಲೆಸೆವ ಕಾ
ರ್ಮೇಘಮಭ್ರದಲಿಂದು ಮಂಡಲವ ಮುಗಿದಂತೆ ಕುಡಿನೋಟ ಮಿಂಚಿದಂತೆ
ವೇಗನಿಡು ಸುಯ್ಯಲು ಪಟುವಾತದೊಳ್ ಕರಕಂಕ
ಣೌಘರವ ಗುಡುಗಂತೆ ಪುರ್ಬುಗಳ್ ಶಕ್ರಧನು
ವಾಗಲಂಜಲಿಗಳಿಂ ಬೀರ್ವ ಜಲಕಣಗಳೇ ಬಿರುವಳೆಯ ಬೆಡಗೆನಿಸಿತು ೬೮

ರಾಜರಾಜರ್ಗೆ ಕೈಮುಂಚಿ ಶರ ಸಂಗರ
ವ್ಯಾಜಮೇರ್ಗೊಂಡಂತೆ ಮುಖಮುಖಗಳಿದಿರಾಗಿ
ರಾಜಿಸಲ್ ಬಾಗಿದಂಗವೆ ಚಾಪದಂತೆ ಬಿಡಿಮುಂಗುರುಳ್ ನಾರಿಯಂತೆ
ಸೋಜಿಗದಿ ಬೀರ್ವ ವಾರಿಗಳೆ ಶರಸಂಧಾನ
ದೋಜೆಯೆನೆ ಕುಚಕುಂಕುಮವು ಕದಡಿ ಪರಿಯಲ್ ವಿ
ರಾಜಿಸಿತು ಕಡಿಯೊಡೆದ ರಕ್ತಧಾರೆಗಳಂತೆ ಜಲಕೇಳಿಯಂಗನೆಯರ ೬೯

ತರುಣಿಯರ್ ಭುವನಮಂ ಕಲಕಲುದ್ಯೋಗಿಸಲ್
ಗಿರಿಗಿರಿಯ ತಾಕಾಡಿಸದೆ ಮಾಣರೆಂದೆಂಬ
ಕುರುಹ ತೋರ್ವಡಿಪ ಪರಿಯೆನಿಸಿಸಲ್ ರಭಸದಿಂದವೆ ನೀರ ಸೂಸುವಲೆಗೆ
ತರಳೆಯರ ತೋರ ಕುಚಯುಗಳಮತ್ಯುಲುಹಿನಿಂ
ದೆರಗಿಯೊಂದೊಂದನಪ್ಪಳಿಸಿದವು ಗಳದ ಮಣಿ
ಸರ ಪರಿದು ಕೆಡೆವ ರತ್ನಗಳೆ ಕಡಿಯೊಡೆದು ಜಾರುವ ರಕ್ತಕಣಗಳೆನಿಸೆ ೭೦

ಶಶಿವದನೆಯರ ಕುಚದ ಕುಂಕುಮದ ಕದಡಿನಿಂ
ಪೊಸ ರಕ್ತವತಿಯಾದ ಕಾಸಾರಸುಂದರಿಗೆ
ಒಸಗೆಯನ್ನನುಗೈಯ್ಯಲಂಗನೆಯರೊಡಗೂಡಿ ಹರಹಿದ ಪರಾಗಮೆಂಬ
ಹಸೆಯ ಚಿತ್ರಿಸಿ ತುಂಬಿಮೊರಹು ತೂರ್ಯಸ್ವನಗ
ಳೆಸೆಯೆ ಜಲಕಣಸೇಸೆದಳಿದಾರತಿಯು ನಿವಾ
ಳಿಸಿ ಚೆಲ್ವರೆನಲು ಕರತಳಕೆಂಚು ಬಿಂಬಿಸಿದ ಜಲಪಂಕ್ತಿ ಶೋಭಿಸಿದುದು ೭೧

ದೂರದೊಳಗೊಂದು ಚಂದ್ರಮನುದಯಿಸಲ್ಕಳಲಿ
ನೀರಸವನೈದುತಿಹ ಶತಪತ್ರಪಂಕ್ತಿಗಳ್
ನಾರಿಯರ ಮುಖಶಶಿಗಳಮಿತ ಮುಸುಕಿದಡಲಸದಿದ್ದಪವೆ ಪೇಳೆನಲ್ಕೆ
ವಾರಿಕೇಳಿಯಲೊರ್ವರನ್ನೊರ್ವರಟ್ಟಿ ಹೊಗ
ರೇರಿ ಪರಿವರ ಮಧ್ಯದೊಳ್ ಸಿಲುಕಿ ಪದ್ಮಗಳ್
ಸಾರಸಗಳೇ ಸಹಜವೆನಿಸಿದವು ಸೊಬಗಿಯರ ಜಲಕೇಳಿಯುರುಬೆಯಿಂದೆ ೭೨

ಇಂತು ನಿರ್ಮಲಜಲಕ್ರೀಡೆಯೊಳ್ ಸಂದು ಶಶಿ
ಕಾಂತ ಸೋಪಾನಗಳನಡರಿ ನಿಂದರ್ಬಲಿದ
ಸಂತಸದಲಂಗದಿಂದೊರೆವ ಜಲಕಣಗಳಿಂ ಮುಕ್ತಾಂಬರೆಯರೆನಿಸಿರೆ
ತೊಂತಿರ್ದ ಮೃದುಲಾರ್ದ್ರ ವಸನ ಮೈಪತ್ತಿರಲ್
ಪಂತದಿಂ ಭೂಲೋಕಮಂ ಜಯಿಸಿ ಮೇಲು ಲೋ
ಕಾಂತರವ ಜಯಿಸಲಡರುವ ಮಹಾಮಾಯಗಾಂಗನಾ ವಿಶ್ವರೂಪೆನಿಸಲು ೭೩

ಪೊಗರುಲಾವಣ್ಯರಸಮುಚ್ಚಳಿಸಿ ತನುವಿನಿಂ
ದೊಗೆವಂತೆ ವಜ್ರಲೇಪದ ಸಣ್ಣ ವಸ್ತ್ರಮಂ
ಬಿಗಿದಡುಂ ನಿಲ್ಲದೊಸರುವುದೆನಿರಲಾರ್ದ್ರ ವಸನದ ಜಲಕಣಂಗಳುದುರಿ
ನಿಗಿನಿಗಿಪ ಸೋಪಾನ ಶಶಿಕಾಂತ ಶಿಲೆಯ ಮೇ
ಲೊಗಲಲ್ಲಿ ಪರಿವ ಜಲ ತೋರ್ದುದಾ ತರುಣಿಯರ
ಮೊಗ ಶಶಿಗಳುದಯದಿಂ ಕರಗಿ ಪರಿಯುವ ಚಂದ್ರಕಾಂತ ಜಲಧಾರೆಯಂತೆ ೭೪

ಪ್ರಾರ್ಥನೆಯಲಂಗಭವನರ್ಚಿಸುವ ಮೋಹಿನೀ
ಮೂರ್ತಿಯಹ ಕನಕ ವಿಗ್ರಹಗಳಂ ಕೊಳದಲು
ದ್ವರ್ತನೆಯನೆಸಗಿ ನಿರ್ಮಾಲ್ಯಮಂ ತೆಗೆದು ಪೊಸಪೂಗಳಿಂ ಪೂಜಿಸಿದೊಲು
ಕಾರ್ತಸ್ವರಾಂಗಿಯರ್ ನನೆವಸ್ತ್ರನೀವೀನಿ
ವರ್ತನೆಯುಗೈದು ವಿಮಲಾಂಬರಗಳನ್ನೊಲಿದು
[1]ಪೂ[1]ರ್ತಿಸಿದರಾ ದೇವಹೂತಿ ಸಹಿತನಿಬರುಂ ತಂತಮಗೆ ತವಕದಿಂದೆ ೭೫

---

೭೫. 1. ಮೂ.

ನನೆದ ಕುರುಳಿಂಗೆ ಧೂಪದ ಪೊಗೆಯನಿತ್ತು ಮೇ
ಲನುವಿನಿಂ ಪೂರಸದಿ ಸುಂಪಿಟ್ಟು ಜಡೆವೆಣೆದು
ತನುಲತೆಗೆ ಸುರಭಿವೆರೆದಂಗರಾಗವ ತೀಡಿ ಮುಡಿಗೆ ಪೂದೊಡರಮರ್ಚಿ
ವಿನುತಮಣಿ ಭೂಷಣಂಗಳನಲಂಕರಿಸಿ ಮೋ
ಹನವಶ್ಯ ತಿಲಕಗಳನಿಟ್ಟು ನಿಡುಗಣ್ಣಿಗಂ
ಜನವನೊಂದಿಸಿ ಸೊಬಗಿನಿಂದೆ ಪುಷ್ಪಾಪಚಯಕೆನೆ ಪೂಬನಕೆ ನಡೆದರು ೭೬

ಬಳಸಿದರ್ಬನವ ನಿಜ ತನುಕಾಂತಿ ಭರಿತ ದಿ
ಗ್ವಳಿ ಸರೋವರದಲಾಡುವ ಹಂಸಗಣದಂತೆ
ತಳೆದ ಸುಮನೋಹರ ಸುಗತಿಗಳಮರಿಹುದರಿಂ ಹಂಸರೇ ಸಹಜಮೆನಿಸಿ
ಕಳೆದು ಕಂಟಕ ಕಲ್ಮಷ ಸ್ಥಾನಗಳನು ನಿ
ರ್ಮಳ ಸುಸ್ಥಳಂಗಳನ್ನರಿವಿನಿಂ ಸಾಧಿಸು
ತ್ತೊಳಪೊಕ್ಕು ನಿಜಮನೋಭೀಷ್ಟಮಂ ಪಡೆವವರು ಹಂಸರಹುದಾಶ್ಚರ್ಯಮೆ ೭೭

ಸುರಗಿಯುಂ ಸೆಳಮು ಪುನ್ನಾಗವನಡರ್ದು ಉ
ತ್ಕರವೀರವರ್ಗಮುಂ ಸೋಹಿ ಸಂಪಗೆಗಳಂ
ಮುರಿದು ಭುಜಬಲದುನ್ನತಿಯ ಮೆರೆದು ಕುಡಿನೋಟ ಕೂರಂಬುಗಳನು ಕರೆದು
ಮೊರೆದೆರಗುವತುಲ ಮಧುಪಾನಿಗಳ ಬಳಗಮುಂ
ತರುಬಿ ಕೂರುಗುರುಕರವಾಳಮುಂ ಚಿಮ್ಮುತಿಡೆ
ವರಿದು ಮನ್ಮಥ ಕದನಧೀರರಂತಾ ಬನವ ಮುಸುಕಿದರ್ನಾಲ್ದೆಸೆಯೊಳು ೭೮

ಅಸುರಾಮರಾದ್ಯಖಿಲ ಸಾಹಸಿಗಳಂ ಜಯಿಸಿ
ದಸಮುಬಲ ಮಾರಶರಮೆಂಬ ಭಯದಿಂದ ಭಾ
ವಿಸಿ ಮಲ್ಲಿಕಾದಿ ಕುಸುಮಂಗಳನ್ನನಿಬರುಂ ಮಸ್ತಕದೊಳಾನುತಿರಲು
ಹಸಗೆಡಿಸಿ ಮದವತಿಯುರಳುಕದುಬ್ಬಿಂ ನಿನ್ನ
ವಿಶಿಖ ಕೋಶವ ಸೂರೆಗೊಂಡರೆನೆ ತುಂಬಿಗಳ್
ಕುಸುಮಾಸ್ತ್ರನಿಂಗೆ ಮೊರೆಯಿಡುವವೆನಲೆದ್ದು ಝೇಂಕರಿಸೆ
ಪೂವಾಯ್ದರೆಂದು ೭೯

ಮಡಗಳನ್ನೆತ್ತಿ ತುದಿಗಾಲ್ಗಳೊಳ್ ನಿಂದು ನು
ಣ್ದೊಡೆಯಂ ನಿಮಿರ್ಚಿ ತನುವನ್ನಿಗುಚಿಯಾ ತ್ರಿವಳಿ
ಯಡಗುತ ತಳೋದರವು ಕುಳಿಗೊಳಲ್ ಮುಖಗಳಂ ಮೇಲ್ಗೈದು ತೋಳ್ಗಳೆತ್ತಿ
ಕುಡಿನೋಟವೆಳಗಂತರಾಳವಮಂ ಮುಸುಕೆ ಬಲೆ
ದೊಡರಿನಿಂದೇಳ್ವ ಕೋಕಗಳಂತೆ ಮೆರೆವ ಪೊಂ
ಗೊಡಕುಚಗಳೆಸೆಯೆ ಜಡೆಗಳ್ ಜಂಘೆಯೊಡನೆ ಮಸೆಯಲ್
ಪೂಗಳಾಯ್ದರಂದು ೮೦

ಲತೆಯ ಲಾವಣ್ಯಮನ್ನಂಗದುರುಚೆಲುವಿಗಂ
ಜತೆವಿಡಿದು ನೋಳ್ಪಂತೆ ಕುಂದಮಂ ರದನ ದೀ
ಧಿತಿಗೆ ಸರಿನೋಳ್ಪಂತೆ ಮಲ್ಲಿಗೆಗಳಂ ನಗೆಗೆ ಹೆಚ್ಚು ಕುಂದೆಣಿಸುವಂತೆ
ಅತಿಶಯದ ಬಂದುಗೆಯನಮಲ ಬಾಯ್ದೆರೆಗಳರು
ಣತೆಗೆ ಸಾಮ್ಯವ ಪರಿಕಿಪಂತೆ ತೋರ್ವಡುತಿರಲ್
ಸತಿಯರೆಡೆಯಾಡಿ ಲತೆಯನ್ನೆಳೆದು ಕುಂದಮಲ್ಲಿಗೆ ದಾಸಣಗಳಾಯ್ದರು ೮೧

ಒಡನೆ ಪುನ್ನಾಗಮನ್ನಾಗಲಿಲ್ಲೆನಿಸಿ ಪೊಸ
ಮುಡಿವಾಳಮುಡಿವಾಳಮಂ ಸೆಳೆದು ಮತ್ತೆ ಮುಂ
ಗಡೆಯ ಮರುಗಕೆ ಮರುಗರಿಗಳು ಬೇರಿಲ್ಲೆನಿಸಿ ಕುಂದಮಂ ಕುಂದುಗೊಳಿಸಿ
ಅಡಸಿದಿರವಂತಿಯಿರವಂ ತಿಳಿಯದೆನಿಸಿ ಪೆಸ
ರ್ವಡೆದ ಜಾತಿಯ ಜಾತಿಯಿಲ್ಲೆನಿಸಿ ತರುಗಳ
ನ್ನಡರಿ ಸತ್ಪಾರಿಜಾತದ ಜಾತಮೀ ಬನದಲಿರದೆನಿಸಿದರ್ಸತಿಯರು ೮೨

ತುಡುಕಿದರ್ಪಾದರಿಯ ತಳವಾರರಂದದಿಂ
ಪಿಡಿದರುರುನಾಗಮಂ ಗಾರುಡಿಗರೆಂಬಿನಂ
ಹುಡುಕಿದರ್ಹೇಮಲಭ್ಯ ಸ್ಥಳಂಗಳನು ಕಲಿಯುಗದ ಯಾಚಕರ ತೆರದಿ
ಎಡೆಯೆಡೆಯಲರಸಿ ಜಾತಿವ್ಯಾಜಕಾರ್ಯದಿಂ
ದೆಡೆಯಾಡಿದರ್ಕುಲಾಚಾರ ಪದ್ಧತಿಯನನು
ವಿಡಿದು ಸುಮನಸ್ಸಮೂಹವ ಸೆಳೆವ ಸಂಗತಿಯಲಸುರರಂತಂಗನೆಯರು ೮೩

ಇಂತು ಪುಷ್ಪಾಪಚಯಕೇಳಿಯನ್ನಾಂತು ಕಡು
ಸಂತಸದಿ ಮನುಪುತ್ರಿ ಕೈವಾರ ಪರಿಚರ್ಯೆ
ಕಾಂತೆಯರ್ಸಹಿತ ನಿಜನಗರಿಗೈತರಲುಭಯ ಪಾರ್ಶ್ವದೊಳ್ ಪರಿಘಟಿಸಿದ
ಹಂತಿಸದನಂಗಳಿಂ ಬೆಳಗಿನುಪ್ಪಾರತಿಗ
ಳಂ ತಳೆದು ಬಹ ಸುವಾಸಿನಿಯರಂ ಮನ್ನಿಸುತ
ಮುಂತಳೆವಳೆಡ ಬಲದಲೀವ ಕೈಗಾಣಿಕೆಗಳುಪಚಾರಮಂ ಕೊಳ್ಳುತ ೮೪

ಪುರತರುಣಿಯರ ಮನೋಹರ ಮಂದಹಾಸ ರುಚಿ
ಪರಿಘಟಿತವೀಧಿದುಗ್ಧಾರ್ಣವದಲಿಂದಿರಾ
ಸರಸಾಂಗಿಯುದ್ಭವಿಸಿ ಬಪ್ಪಳೆನೆ ರೂಪುಗುಣಶೀಲದೊಳ್ ಸಾಮ್ಯವಾಗಿ
ಕರುವಾಡದಗ್ರದಿಂ ನೋಳ್ಪ ಸುಂದರಿಯರಂ
ಪರಿಕಿಸಲ್ ಭಾರ್ಗವಿಯ ಬಲಗೊಂಬಡಭ್ರದಿಂ
ಸುರಸತಿಯರಿಳಿತಪ್ಪರೆಂಬಿನಂ ತೋರ್ದುದುನ್ನತ ರೂಪುಗುಣಗಳಿಂದೆ ೮೫

ಈ ತೆರದಿ ನಿಖಿಲಜನಮನವನರಳಿಚುತ ಮನು
ಜಾತಳಾನಂದದಿಂ ರಾಜಸದನವ ಪೊಕ್ಕು
ಪ್ರೀತಿಯಿಂ ನಿಜಕಾಂತಗಭಿನಮಿಸಿ ಹರಕೆಯನ್ನಾಂತು ಜಲಕೇಳಿಕೆಗಳ
ಚಾತುರ್ಯಸಂಗತಿಯನರುಹಿ ಮಜ್ಜನಭೋಜ
ನಾತಿಶಯದಿಂದಲೊಪ್ಪಿರ್ದಳಂದವನಿವಿ
ಖ್ಯಾತಶೇಷಾದ್ರಿ ವೆಂಕಟರಮಣಕೌಂಡಿಣ್ಯ ಗುರುವರಧ್ಯಾನ ಮಿಗಲು ೮೬

ಅಂತು ಅಧ್ಯಾಯ ೯ಕ್ಕಂ ಪದನು ೭೬೪ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ.

೧೦. ಶ್ರೀ ಕಪಿಲಾವತಾರ; ಕಪಿಲರು ದೇವಹೂತಿಗೆ ಜ್ಞಾನಬೋಧೆ ಮಾಡಿದ್ದು

ಸೂಚನೆ :

ವಿಪುಲಮತಿದೇವಹೂತಿಯು ಗರ್ಭನೆವದಿಂದೆ
ಕಪಿಲಾಖ್ಯೆಯಿಂ ವಿಷ್ಣುವವತರಿಸಿ ವಿಜ್ಞಾನ
ನಿಪುಣತ್ವಮನ್ನೂರಿ ಪಡೆದರ್ಗೆ ಸದ್ಗತಿಗಳನ್ನಿತ್ತು ರಕ್ಷಿಸಿದನು

ನರನಾಥ ಕೇಳಿನ್ನು ಮೇಲ್ಗತೆಯ ಕರ್ದಮನ
ವರಪತ್ನಿ ಸುದಿನ ಶೋಭನಮೂಹೂರ್ತದಿ ಕಲ್ಪ
ತರು ಪೂತುದೆಂಬಿನಂ ಪುಷ್ಪವತಿಯಾಗಲಂಗನೇರುರೊಸಗೆಯನು ಮಾಡಿ
ಪರಿಪರಿಯ ಭಕ್ಷ್ಯಭೋಜ್ಯಗಳಿಂದೆ ವಿಪ್ರರಂ
ಪರಿತುಷ್ಟಿಗೊಳಿಸಿ ನಾಲ್ಕನೆಯ ದಿವಸದಿ ಸುರಭಿ
ವೆರೆದ ಕುಂಕುಮಹರಿದ್ರಾಜಲದಿ ಮಂಗಳಸ್ನಾನಮನ್ನನುಗೈದರು ೧

ಅಂಗಕಾಂತಿಯ ಮುಸುಕಿನಿಂ ರಾತ್ರಿ ತೋರದಿರ
ಲಂಗಜೋತ್ಸವಕಾಲಮರಿವಡದೆನುತ್ತಲದ
ಕಂಗನೆಯರಾಗ ತತ್ಪ್ರತಿಕೂಲನುಂ ಗೈದರೆಂಬ ಪರಿ ತೋರುತಿರಲು
ಕಂಗಳಿಂಗಂಜನವ ಪಣೆಗೆ ಕಸ್ತೂರಿತಿಲ
ಕಂಗಳನ್ನಿಟ್ಟು ಪೀತಾಂಬರವನುಡಿಸಿಯುಳ
ಕಂಗಳಂ ನುಂಪೆಸಗಿ ವೇಣಿಯುಂ ಬಲಿದು ಕುರ್ವಕಮಾಲೆಯಂ ಸೂಡ್ದರು ೨

ಅಂಜನಾಲಿಂಗಿತದಿ ಪವನನಂ ತಾರಕಾ
ರಂಜನೆಯನಾಂತು ಲಸದಭ್ರಮುಂ ಸತ್ಕುಮುದ
ಮಂಜುಲತೆಯಿಂ ನಿರುತಿಕಕುಭಮುಂ ಕರ್ಣಸಂಯುತದಿ ಕೌರವ ಬಲವನು
ಕಂಜಸಿರಿಸಹಿತದಿಂ ವಿಷ್ಣುವಂ ವರತಟಿ
ತ್ಪುಂಜಮುಹಿಮೆಯನೊಸೆದು ಮೇಘಮುಂ ಪೋಲ್ತು ಮೆರೆ
ವಂಜಲಿವಿಶಾಲದಿಂಡೆಸೆದಿರ್ದವಾ ಕೋಮಲೆಯ ಬೆಳಕುನಯನಂಗಳು ೩

ಕುರುಳ ಕಾಳಿಕೆ ಮುಸುಕವೆಂದದಿಂ ಬಾಲಭಾ
ಸ್ಕರಬಿಂಬಮಂ ಬಿಗಿದರೆನಲು ರೇಗಟೆಯಿಟ್ಟು
ನೆರೆದಿಂಗಳಿದಿರಲೊಪ್ಪುವ ರೋಹಿಣಿಯ ತೆರದಿ ನಾಸಿಕದ ಮಣಿಯೆಮುರಲು
ಸುರದೈತ್ಯಸತಿಯರೋಡಿದರು ತವ ಸುಂದರಕೆ
ಸರಿಯಾಗದೆಂಬಿನ ರಹಸ್ಯಮಂ ಕರ್ಣದೊಳ
ಗರುಹಲ್ಕೈತಂದು ಪೇಳುವರು ಗುರುಶುಕ್ರರೆನೆ ತಾಟಂಕಮೆಸೆದಿರ್ದವು ೪

ಒಳಗಿಳಿವ ತಾಂಬೂಲರಸಗೆಂಪು ಪೊಸಕಂಬು
ಗಳದಿ ಬಿಂಬಿಸಲು ಪೊರಸೂಸದಿರದೆನುತ ಹೆಂ
ಗಳು ಕಟ್ಟಿ ಬಿಗಿದರೆಂಬಂತೆ ಮಣಿಹಾರಂಗಳುತ್ತುಂಡಗಳನುಧರಿಸಿ
ಕಳಶಕುಚಲಾವಣ್ಯರಸಮುಕ್ಕಿ ಸುರಿಯದೋಲ್
ಬಿಳಿಗುಪ್ಪಸವ ಕುಂಕುಮದಲದ್ದಿ ಬಿಗಿದಂತೆ
ತಳೆದ ಕಂಚುಕಮುಮುರಲುದಯಾದ್ರಿಗೇರ್ವ ರವಿಬಿಂಬಮೆನೆ ಪದಕಮೆಸೆಯೆ ೫

ಅಸಿಮಧ್ಯಮೆಂಬಗುಂ ನೋಟಕರ ಕಣ್ಗೆ ಕಾ
ಣಿಸದಿರಲಲಂಕಾರಮುಮುರದೆನೆ ತರುಣಿಯ
ವ್ರಿಸುನಿಗಟ್ಟನು ಬಿಗಿದು ಪೊರೆದರೆನಲೊಡ್ಯಾಣಲುಳಿಗಳಂ ನಡುವಿಗಿಟ್ಟು
ಕುಸುಮಶರನಿಜಕೇತುದಂಡಕ್ಕೆ ಕಟ್ಟಿ ಬಂ
ಧಿಸಿದಂತೆ ತೋಳ ಭಾಪುರಿ ರನ್ನಗೊಂಡೆಯುಗ
ಳೆಸೆವ ಹಂಮೀರತಾಯಿತ ಕಡಗ ಕಂಕಣಗಳಂಗುಳೀಯುಗಳಿಟ್ಟರು ೬

ಕಿರುಗೆಜ್ಜೆ ವೀರಮುದ್ರಿಕೆ ಪಿಲ್ಲಿ ಪೊಳೆವ ಪದ
ಸರ ಪೊನ್ನ ಘಂಟೆಪೆಂಡೆಯುಗಳಿಂದಡಿಗಳಂ
ಪರುಠವಿಸಿ ಲತ್ತುಗೆಯ ಪೂಸಿ ಸರ್ವಾಭರಣಮನ್ನಲಂಕರಿಸಲಾಗ
ವರಮೋಹಿಸೀಮೂರ್ತಿಗಿಂದೆ ಶತುಗುಣ ಮನೋ
ಹರರೂಪಿನಿಂ ತೋರ್ವ ದೇವಹೂತಿಯ ತನುವಿ
ನುರುಕಾಂತಿಜಲ ಪರಿದು ಕರ್ದಮುತಪೋಜಂಜಡವನೂಕಿತೇವೇಳ್ಪಿನು ೭

ಮುಂಬರಿವ ವಿರಹಾಗ್ನಿ ಮಸಗಿ ಮಸ್ತಕವನವ
ಲಂಬಿಸಿದ ರೇತಸ್ಸ ಗಾಢದಿಂ ಕರಗಿಸಿ ವಿ
ಜೃಂಭಿಸಿತು ನಿಜಸಮಾಧಿ ಧ್ಯಾನಮನ್ನೆಳೆದು ಯುವತಿಯವಯವದಿ ಬಲಿದು
ಲಂಬಕಮನೋನಿಷ್ಠೆಯಂ ಕಿತ್ತು ಕಾಮಿನಿಯ
ಕುಂಭಕುಚಗಳ ನಡುವೆ ಕೀಲಿಸಿತು ಸಮಯಮಂ
ಶಂಬರಾಂತಕನರಿದು ನಿಜಚಾಪಟಂಕಾರಹುಂಕಾರದೊಳ್ ಸಂದನು ೮

ಪೊಕ್ಕು ಬಹುಕಾಲ ಸಾಧಿಸಿದಡುಂ ತನ್ನನುವ
ಲೆಕ್ಕಿಸದೆ ಪೋದನೀ ಮುನಿಪನಿಂದಿಗೆ ಸಮಯ
ಸಿಕ್ಕಿತೀಗಳೆ ಕಾಣಬೇಕೆಂದು ಮದನನುರೆ ಪೊಂಚಿ ತಲ್ಲಲಿತಾಂಗಿಯ
ಕಕ್ಕಸ ಕುಚಾದ್ರಿಗಳ ಮರೆಗೊಂಡು ಪೂಶರಕೆ
ದಕ್ಕನೆನುತಾ ಸತಿಯ ಪುರ್ಬುವಿಲ್ ಕಚನಾರಿ
ಗಿಕ್ಕಿ ತತ್ಕುಡಿನೋಟಕೂರ್ಗಣೆಗಳಂ ಕರೆದ ಕರ್ದಮಂ ಕಳವಳಿಸಲು ೯

ಯುವತೀ ಪಯೋಧರಾನನ ನೇತ್ರವೊದಲೆನಿಸು
ವವಯವಗಳೊಂದೊಂದು ಮಂತ್ರಾಸ್ತ್ರಮಾಗಿ ಮೇ
ಲವಿರಳದಲೆರಗಿ ಕರ್ದಮನ ಮಂಜುಲಹೃದಯಮಂ ಪೊಕ್ಕು ಬೇಧಿಸಲ್ಕೆ
ಜವಗುಂದಿ ಕಳವಳದಲಮಲ ವೈರಾಗ್ಯಮಂ
ತೆವರಿ ಮನನಮೆ ರತಿಕ್ರೀಡೆಯೊಳ್ ಶ್ರವಣಮಾ
ಸವಿನುಡಿಗಳೊಳ್ನಿಧಿಧ್ಯಾಸ ತನ್ಮೂರ್ತಿಯೊಳ್ ನೆಲೆಗೊಂಡುದೇವೇಳ್ವೆನು ೧೦

ಜಪಸಮಾಧಿಯನಾಂತು ನಿಗ್ರಹದಲಂಗಮಂ
ತಪಿಸಿ ಕರಣೇಂದ್ರಿಯಗಳಾಟಮಂ ಬಿಗಿದು ಹೃ
ಚ್ಚಪಲಮಂ ಜರಿದು ಧಾರಣೆಯಿಂದಲಾಹಾರನಿದ್ರೆಯುಪಟಳವ ಗೆಲಿದ
ನಿಪುಣನಿಂಗಿಂತು ಮೋಹಾವೇಶಮುಮರಲಿ
ಸ್ನಪರಿಮಿತ ನಿದ್ರಾಶನಾತುರರದ ನರರ ಬಾ
ಧಿಪುದದೇನದ್ಭುತಮೆ ಭೂಪ ಕೇಳ್ ಕರ್ದಮಂ ತರಹರಿಸದಿಂತೆಂದನು ೧೧

ಕಾಂತೆ ಕೇಳ್ ನಿನ್ನವಯವಂಗಳುನ್ನತ ಚೆಲುವ
ಕೇತು ತಾ ಮರೆಗೊಂಡು ಶೌರ್ಯದಿಂದೆಮ್ಮ ಮತ
ಕಂತಕೋಪಮನಾಗಿ ಬಾಧಿಸುತ್ತಿಹನವನ ಸರಳ ಘಾತಿಯ ಝಳವನು
ಎಂತು ಸೈರಿಸಲಹುದು ವಿಜಿತೇಂದ್ರಿಯಾದಿ ಮತಿ
ಯಂ ತಳೆದೆವೆಂಬುವನು ಪುಸಿ ಕಣಾ ನಿನ್ನ ಕೃಪೆ
ಯಂ ತೋರಿ ಸುಜನಗಡಿಕನ ಘಾತಕೌಷಧಿಯನೆರೆದು ರಕ್ಷಿಪುದೆಂಪನು ೧೨

ಬಗೆಯದಿದ್ದೆವು ಮುರುಳಕಾಮನಂ ಹಲಗಾಲ
ಪಗೆಯ ಸಾಧಿಸಿ ನಿನ್ನ ಬೆಂಬಲಗಳಿಂದೆದೆಯ
ಬಗೆವನದರಿಂದೀಗಲಲಸಿದೆವು ಮೇಲದರ ನಿಷ್ಕೃ[1][ತಿಯು][1] ನಿನ್ನೊಳಿಹುದು
ಸುಗುಣೆ ನಿನ್ನೊಲವಾಗಲೀ ತರಳಮನ್ಮಥನ
ವಿಗಡತನಕಳುಕುವೆನೆ ಪೊರೆಯೆನಲ್ ಪರಿಚರ್ಯ
ಮುಗುದೆಯರ್ ಸುಳುಹರಿದು ತೊಲಗಿದರ್ಕಾಂತೆ ಕರ್ದಮರಿಗೇಕಾಂತಮುಮರೆ ೧೩

ಅರಸ ಕೇಳಾನಂದ ಮಿಗಲು ಚುಂಬನ ಲಲ್ಲೆ
ಸರಸ ಸಲ್ಲಾಪ ಬಂಧನ ತಕ್ಕೆ ಗಳರವಗ
ಳಿರವಿರದ ಮೋಹಮುಂದವಕ ಮಧುರಪ್ರಾಶನಾಮೋದ ನೇಹಗಲಹ
ಕರಚೇಷ್ಟೆ ಕರಜಕ್ಷತಂಗಳೆನಿಪ ವಿಲಾಸ
ವರಸೆಯೊಳ್ ಸಂದಡುಾ ಸಾತ್ವಿಕವನಗಲಿರದೆ
ಹರಿನೆನಸಹಿನಿಂದೆ ರತಿಕೇಳಿಯೋಳ್ ಸಂದಿರ್ದರಂದು ಹರಗಿರಿಜೆಯರೊಲು ೧೪

ಈರೀತಿಯಿಂ ಕುಂಡಲೀರತಿಯ ಪುಲಕಮಂ
ಮೀರಿದಾನಂದದೊಳ್ ಪರಿಣಮಿಸಿ ಹೃದ್ವೃತ್ತಿ
ಬೇರೆಬೇರೆನಿಸದೇಕತೆಯಿಂದ ಜೀವಪರಮೈಕ್ಯ ಪದ್ಧತಿಯಂತಿರೆ
ಸಾರಿ ಸಂತುಷ್ಟಿಯಿಂ ನುಡಿದನೆಲೆ ಸತಿ ನಿನ್ನ
ನಾರೈಯೆ ನವವಧೂಗರ್ಭಮಂ ಧರಿಸೆಂದು
ಧೀರಕರ್ದಮ ಹರಸಲಾಗ ನವಪುತ್ರಿಕಾಗರ್ಭಮೊದವಿತು ಕಾಂತೆಗೆ ೧೫

———

೧೩. 1. ತ್ಯ.

ಅವಿರಳದಲುದರಮಂ ಬಳಸಿರ್ದ ಮುತ್ತಿಗೆಯ
ತ್ರಿವಳಿಗಳನಟ್ಟಿಯೊಳಸಾರಿರ್ದ ಮೊಕ್ಕಳಂ
ತಿವಿದು ಪೊಸವಳಯಕಂ ನೂಕಿ ಬಿಗಿದಿರ್ದ ಕಾಂಚಿಯ ಬಳಸುಮುತ್ತಿಗೆಯೊಳು
ನವೆದ ನಡುವಂ ಪೊರೆದು ಹಿಂಗಾವಲಿನ ನಿತಂ
ಬವನೇಳಲೆತ್ತಿ ಪೊಂಬಣ್ಣಮೈ ಬಿಳಿದುಗ್ಗೈ
ದವಘಟಿತ ಕುಚದುದಿಯ ಕರಿದನೆಸಗಿತು ಗರ್ಭದೇಳ್ಗೆಯಾ ಲಲಿತಾಂಗಿಯ ೧೬

ಇಂತೆಸೆವ ಗರ್ಭಚಿಹ್ನೆಗಳೊದಗಲರಸಿ ನಿಜ
ಕಾಂತಗಭಿನಮಿಸಿ ಬಿನ್ನವಿಸಿದಳು ಬಯಕೆಯಂ
ಚಿಂತಿತಪ್ರದ ಕೇಳು ಕುಲಶೈಲಮೇರುಗಳ್ ಮೇಲುಲೋಕಸ್ಥಿತಿಗಳು
ಎಂತಿರ್ಪವವ ನೋಡಬೇಕೆನಲು ಗರ್ಭಿಣಿಯು
ರಂತರಂಗದ ಬಯಕೆಯನ್ನರಿದು ಸಲಿಸುವುದು
ಕಾಂತರ್ಗೆ ನಿಜಧರ್ಮವೆನುತ ಸುಪ್ರೇಮದಿಂದೊಡವಟ್ಟು ಪೊರವಂಟನು ೧೭

ಮತ್ತೆ ಕೇಳ್ ಕರ್ದಮನ ಮಹಿಮೆಯಂ ಪುಷ್ಪಕವ
ಚಿತ್ತದೊಳ್ ನೆನೆಯಲಾ ಕ್ಷಣ ಬಂದು ನಿಲಲದಂ
ಪತ್ತಿ ನಿಜಸತಿಸಹಿತ ಖೇಚರವ್ಯಾಜದೊಳ್ ಗ್ರಹಮಂಡಲಾದಿಗಳನು
ಒತ್ತಿ ಬಹ ನಕ್ಷತ್ರಗತಿಗಳನ್ನಮರಪುರ
ಸತ್ಯಲೋಕಾದಿ ಪದ್ಧತಿಗಳಂ ತೋರಿಸುತ
ತತ್ತದ್ಭುವನಪತಿಗಳೆಸಗುವುಪಚಾರಗಳ ಕೈಗೊಳುತಲೆಡೆವರಿದನು ೧೮

ಈ ರೀತಿಯಿಂದೆ ಮೇಲೇಳು ಲೋಕಂಗಳಂ
ವಾರಿಜಾನನೆಗೆ ತೋರ್ಪಡಿಸಿ ಗುಹ್ಯಕ ಸಿದ್ಧ
ಚಾರಣಗರುಡ ಗಂಧರ್ವಾದಿ ವಸತಿಗಳ ನೋಡಿ ಭೂಲೋಕಕಿಳಿದು
ಮೇರುಮಂದರ ಮುಖ್ಯ ಕುಲಪರ್ವತಗಳೇಳು
ವಾರಿಧಿಗಳಿರವ ಸಪ್ತದ್ವೀಪದಾಟಗಳ
ಮೇರೆಯಂ ನಿಖಿಲಪುಣ್ಯಕ್ಷೇತ್ರ ಬನಗಳಂ ತೋರ್ಪಡಿಸಿದಂ ಪ್ರಿಯಳ್ಗೆ ೧೯

ಹಲಕಾಲ ಮೀ ಪರಿ ಯಥೇಚ್ಛಾವಿಹಾರದಿಂ
ಲಲನೆಯೊಡಗೂಡಿ ರಮಿಸುತ್ತೆ ತದ್ವಾಂಛೆಯಂ
ಸಲಿಸಿ ಸಂತುಷ್ಟಿಯಿಂ ನಿಜನಿವಾಸವನೈದಿ ಕೆಲವು ವಾಸರ ಸರಿಯಲು
ಲಲಿತಾಂಗಿಯಳಿಗೆ ಸುಪ್ರಸವಕಾಲವು ಘಟಿಸ
ಲೊಲಿದು ಶುಭದಿನ ತಾರೆ ಲಗ್ನದೊಳು ನವರತ್ನ
ಕುಲಮೆ ಮೈವಿಡಿದ ಪರಿಯೊಂಬತ್ತು ಪುತ್ರಿಯರ ಪಡೆದಳಾ ದೇವಹೂತಿ ೨೦

ನವಸಂಖ್ಯ ಕುವರಿಯರು ಜನಿಸಲಾಗಳೆ ವಿರಾ
ಗವನೈದಲುಜ್ಜುಗಂಬಡೆವ ಕಾಂತಂಗೆ ನಿಜ
ಯುವತಿ ಬಿನ್ನವಿಸಿದಳ್ ದೇವ ಕೇಳ್ ನಿನಗೊರ್ವ ತನಯನುದ್ಭವಿಸುವನಕ
ಅವಿರಳ ವಿರಾಗಮಂ ಭಜಿಸದಿಹೆವೆಂದೆಂಬ
ಭವದೀಯ ಸುಪ್ರತಿಜ್ಞೆಯ ಪೊರೆದು ಪುತ್ರಿಯರ
ಸುವಿವಾಹಗಳನೆಸಗಿ ಬಳಿಕ ವೈರಾಗ್ಯಮನ್ನಾನುವುದು ಸಹಜಮೆನುತ ೨೧

ಎನಲು ನಿಶ್ಚಯಮೆಂದು ನಿಜ ಸುಪ್ರತಿಜ್ಞೆಯಂ
ನೆನೆದು ಸುತನುದ್ಭವಿಸುವನಕ ಸಂಸಾರಮ
ನ್ನನುಸರಿಸಬೇಕಾದುದೆಂದು ನಿಜಪತ್ನಿಯಂ ಕರೆದು ನೇಮಿಸಿದನಾಗ
ವನಿತೆ ಕೇಳಚ್ಯುತಂ ಪೂರ್ವದೊಳ್ ಮೈದೋರಿ
ತನಯನಾದಪೆನು ನಿನಗೆಂದು ಕರುಣಿಸಿದನಾ
ವನಜಾಕ್ಷನಂಘ್ರಿಗಳ ಭಜಿಸು ನಿನ್ನುದರದೊಳಗವತರಿಸದಿರನೆಂದನು ೨೨

ಭರ್ತನ ನಿಜಾಜ್ಞೆಯನ್ನನುವಿಡಿದು ಸತತ ಸ
ದ್ವರ್ತನೆಯಲೆರಗಿ ಮಾಧವನನೊಳಗಿಟ್ಟು ತ
ನ್ಮೂರ್ತಿಯನ್ನೆಡೆವಿಡದೆ ಭಾವಿಸುತ ಹರಿಕಥಾ ಶ್ರವಣ ಸಲ್ಲಾಪಂಗಳ
ಆರ್ತತ್ವದಿಂದನಿಶಮೇಕಚಿತ್ತದಲಿ ಸಂ
ಕೀರ್ತನೆಯಮಾಡುತ್ತ ಭಗವದಾನಂದಮಂ
ಪೂರ್ತಿಸಿದಳಾ ದೇವಹೂತಿಯಂತರ್ಬಾಹ್ಯಗಳಲೇಕನಿಷ್ಟೆಯಿಂದೆ ೨೩

ಇಂತು ಭಾವಿಸುವ ಸಾಧ್ವಿಯ ಮನೋನಿಷ್ಠೆ ಮಾ
ಕಾಂತಗರಿವಾಗಿ ತದ್ವಾಂಛಿತವನೀವ ನೆವ
ದಿಂ ತಾನೆ ಲೀಲಾವತಾರಮಂ ತಳೆದು ಸಾಂಖ್ಯಜ್ಞಾನಮಂ ಬೆಳಸುವ
ಚಿಂತನೆಯಲಿದ್ದನಸುರಾರಾತಿ ಕೇಳಿತ್ತ
ಲಂತರಂಗದಲಚ್ಯುತಾಂಘ್ರಿಗಳನನವರತ
ಚಿಂತಿಸುತ ಹಲವು ದಿವಸಕೆ ಮತ್ತೆ ಗರ್ಭಮಂ ಧರಿಸಿದಳ್ ದೇವಹೂತಿ ೨೪

ಬಳಿಕಲೊಂಬತ್ತು ತಿಂಗಳು ಪೂರ್ಣಮಾಗಲ್ಕೆ
ನಳಿನಾಕ್ಷನವತರಿಸಿದಂ ಕಪಿಲವರ್ಣಮಂ
ತಳೆದ ದೆಸೆಯಿಂದೆ ಕಪಿಲಾಖ್ಯೆಯನ್ನಾಂತು ಮನುಸುತೆಯ ಗರ್ಭವ್ಯಾಜದಿಂ
ಇಳೆಯ ಕಲ್ಮಷವೆಸುಗೆ ಬಿಡಲು ನಿರ್ಜರರು ಪೂ
ವಳೆಗರೆಯೆ ಜನನಿಜನಕರ್ಸದಾನಂದ ರಸ
ಬೊಳೆಯ ಮೇಲಾಡುತಿರಲಭ್ರದೊಳ್ ದೇವದುಂದುಭಿದಂಧಳೇವರ್ೆಳಗಲು ೨೫

ಅತಿವಿಚಿತ್ರದ ತನಯನಮಲ ತೇಜೋ ಮಹೋ
ನ್ನತಿಯನುರೆ ಕಂಡು ಕರ್ದಮ ದೇವಹೂತಿಯರ್
ನುತಿಗೈವುತಿರೆ ನಾಕದಿಂ ದೇವಗಣ ಸಹಿತಲಮರೇಶನಿಳಿತರಲ್ಕೆ
ಯತಿವರ್ಗ ಸನಕಾದಿಗಳ ಗಡಣದಿಂದೆ ವಾ
ಕ್ಪತಿಯೈದಿ ವಂದಿಸಲ್ ನಿಖಿಲಋಷಿಮೌನಿ ಸಂ
ತತಿಗಳೈತಂದು ಕಂಡುದು ಮಹೋತ್ಸವಮೆನಲ್ ವನವೆ ವೈಕುಂಠಮೆನಿಸೆ ೨೬

ಇಂತು ಸನ್ಮುನಿದೇವ ತಾಪಸಾದಿಗಳೊದಗಿ
ತಂತಮಗೆ ವೇದಘೋಷಂಗಳಿಂ ನುತಿಸಿ ಮಾ
ಕಾಂತಲೀಲಾವತಾರದ ಕಪಿಲನಂಘ್ರಿಗಳಿಗಭಿನಮಿಸಿ ಪಾಡುತಿರಲು
ಮುಂತಳೆದು ಪರಮೇಷ್ಠಿ ಸನಕಾದಿಗಳು ಸಹಿತ
ಲಂತರಾತ್ಮಕ ಪರಾತ್ಪರ ನಿತ್ಯ ದೀನಜನ
ಚಿಂತಿತಪ್ರದ ರಕ್ಷಿಸೆಂದು ಸನ್ನುತಿಗೈವುತಡಗೆಡೆದನಂಘ್ರಿಯುಗದಿ ೨೭

ದ್ರುಹಿಣಮಸ್ತಕಗಳಂ ಪಿಡಿದೆತ್ತಿ ತತ್ತನಯ
ರಹ ಸುಪ್ರಜೇಶ್ವರರನುಪಚರಿಸಿ ಸನ್ಮುದಾ
ವಹದಿಂದಲಖಿಲರಂ ಹರಸಿದಡೆ ಪೇಳ್ದರೀ ತೆರದಿ ಲೀಲಾತನುಗಳಂ
ವಹಿಸಿ ಸದ್ಧರ್ಮಗಳನುದ್ಧರಿಸಿ ದುಷ್ಕರ್ಮ
ಗಹನಮನ್ನೊರಸಿ ಸುಜನರ ಪೊರೆವುದೇ ನಿಮಗೆ
ಸಹಜ ಸಂಸಾರಮಾದುದರಿಂದಲೆಮ್ಮ ವಿಭವಪ್ರಾಭವಗಳೆಂದನು ೨೮

ವಿಶ್ವಕಲ್ಪಕ ನೀನೆ ವಿಶ್ವಪೋಷಕ ನೀನೆ
ವಿಶ್ವವರ್ಧನ ನೀನೆ ವಿಶ್ವಚೇತನ ನೀನೆ
ವಿಶ್ವಚೇಷ್ಟಕ ನೀನೆ ವಿಶ್ವಮೋಹಕ ನೀನೆ ವಿಶ್ವಸಂಸಾರಿ ನೀನೆ
ವಿಶ್ವೋದರನು ನೀನೆ ವಿಶ್ವತೋಮುಖ ನೀನೆ
ವಿಶ್ವಭೂಷಣ ನೀನೆ ವಿಶ್ವಭೋಕ್ತನು ನೀನೆ
ವಿಶ್ವಭಂಜನ ನೀನೆ ವಿಶ್ವರೂಪನು ನೀನೆ ವಿಶ್ವೇಶ ಸಲಹೆಂದನು ೨೯

ಈ ತೆರದಿ ಕಪಿಲನಂಘ್ರಿಗಳನರ್ಜಿಸಿ ದೇವ
ಹೂತಿಯಂ ಹರಸಿ ಕರ್ದಮನ ಮನ್ನಿಸಿ ಪದ್ಮ
ಜಾತನೆಂದನು ಜಗಚ್ಚೈತನ್ಯಮೂರ್ತಿಯೀ ನಿಮ್ಮುದರವಾರಿಧಿಯೊಳು
ತಾ ತಳೆದನವತಾರಮನ್ನಮೃತ ಕರನಾಗಿ
ಪೂತರಾರಿನ್ನು ನಿಮ್ಮಂತೆ ಮಜ್ಜನಕಂಗೆ
ತಾತಜನನಿಯರೆನಿಸಿಕೊಂಬ ಭಾಗ್ಯಕ್ಕಿದಿರೆ ಮೂಲೋಕಕರಿದೆಂದನು ೩೦

ಅವ ಮುನಿಗಳಿಗಿಹುದು ನಿಮ್ಮ ಯೋಗ್ಯತೆ ಸತತ
ಭಾವದೊಳಗಿಂಬಿಟ್ಟು ಭಜಿಸಲೆಂದಿಗು ತನ್ನ
ಠಾವುದೋರದ ಪರಮಪುರುಷನಂ ನಿಜತಪೋಬಲದಿಂದೆ ಬರಸೆಳೆವುದು
ಭೂವಲಯಕರಿದೆಂದು ಪೊಗಳಿ ತತ್ಪುತ್ರಿಯರ
ನೇವರಿಸಿ ಯೋಗ್ಯರಿಂಗಿತ್ತು ಸುವಿವಾಹಮಂ
ಠೀವಿಯಿಂದಸುಗೈವುದೆಂದುಸುರಿ ಸೈವರಿದನಾ ವಿಧಿಯು ನಿಜನಗರಿಗೆ ೩೧

ನಿಪುಣಮತಿ ಕೇಳಿತ್ತಲರಸಿಸಹ ಕರ್ದಮಂ
ಕಪಿಲನಂಘ್ರಿಗೆ ಮಣಿದು ಬಿನ್ನವಿಸಿದಂ ಮತವ
ಸುಪವಿತ್ರಮಾದ ನಿನ್ನಯ ದಿವ್ಯ ಮೂರ್ತಿಯಂ ಹೃತ್ಪದ್ಮದೊಳ್ ನಿಲ್ಲಿಸಿ
ಜಪಸಮಾಧಿಯನಾಂತು ವಿಜ್ಞಾನವೆಳಗಿನಿಂ
ಚಪಲ ತಾಮಸಗಳಂ ನೂಕಿ ಸುವಿವೇಕದಿಂ
ವಪುವ ಕಳಚುವ ರಹಸ್ಯವನೂ[1]ರಿ[1]ಸಲಹೆಂದಡಾ ಕಪಿಲನಿಂತೆಂದನು ೩೨

ಪುತ್ರಿಯರ ಪೊರೆದು ನೀ ಬೇರೆಬೇರಾಗಿ ಸ
ತ್ಪಾತ್ರವರರಿಗೆ ವಿವಾಹವನೆಸಗೆ ಮುಂದೆ ದೌ
ಹಿತ್ರಸಂತಾನ ಮೂಲೋಕದೊಳ್ ನಿಬಿಡಮೆನೆ ವೃದ್ಧಿಯಹುದದರ ಮೇಲೆ
ಧಾತ್ರಿಯೊಳ್ ನಿನ್ನ ಪೆಸರಹುದು ತದನಂತರ ಕ
ಳತ್ರ ಸಹಿತಾವಿದ್ದ ಬಳಿಗೆ ಬಹುದೆನುತವೆ ವಿ
ಚಿತ್ರಲೀಲಾಮೂರ್ತಿ ನೇಮಿಸಿ ತಪೋಬನಕೆ ಸೈವರಿದನಾಕ್ಷಣದೊಳು ೩೩

ತಳೆದನುಜ್ಞೆಯನಾಗ ಪುತ್ರಿಯರೊಳೆಸೆವ ಪಿಂ
ಗಳೆಯಂ ಮರೀಚಿಗನಸೂಯೆಯನ್ನತ್ರಿಗಿ
ನ್ನುಳಿದ ಕವಿಯಂ ಪುಲಹನಿಂಗಾ ಹವಿರ್ಭೆಯ ಪುಲಸ್ತ್ಯಂಗೆ ಶ್ರದ್ಧೆಯೆಂಬ
ನಳಿನಾಕ್ಷಿಯನ್ನಂಗಿರಸಗಾ ಕ್ರಿಯಾದೇವಿ
ನೆಳವಿಗಳ ಕ್ರತುವಿಗಂ ಖ್ಯಾತಿಯಂ ಭೃಗುವಿಗಿ
ನ್ನುಳಿದ ಶಾಂತಿಯನು ಧರ್ಮಂಗರುಂಧತಿಯಂ ವಶಿಷ್ಠಗಿತ್ತಮುದದೊಳು ೩೪

ಭರ್ಗನುನ್ನತಿಯ ಮಹಿಮರಿಗಿಂತು ಪುತ್ರಿಕಾ
ವರ್ಗಮಂ ಧಾರೆಗಳನೆರೆದನಿಬರಿಂಗೆ ಸು
ಸ್ವರ್ಗ ಪರಿಕರವ ಮುಂಚುವ ವಸ್ತುವಾಹನಾದಿಗಳಿತ್ತು ತುಷ್ಟಿವಡಿಸಿ
ದೀರ್ಘಸೌಮಂಗಲ್ಯವರಗಳನ್ನಿತ್ತವರ
ನಿರ್ಗಮನಗೊಳಿಸಿ ಭೋಗಾಕಾಂಕ್ಷೆಯಂ ನೂಕಿ
ದುರ್ಗಮ ವಿರಾಗಮನ್ನಾಂತು ಸತಿಪತಿಗಳೈದಿದರು ಕಪಿಲರ ಕಾಣಲು ೩೫

---

೩೨. 1. ಡ.

ಮನುಪುತ್ರಿ ಸಹಿತ ಕಪಿಲಾಶ್ರಮವ ಸಾರ್ದನಾ
ಬನದ ಚೆಲುವನ್ನೆಂತು ಬಣ್ಣಿಸಲಿ ಫಲಪುಷ್ಪ
ಗೊನೆಗಳೆರಗದ ವೃಕ್ಷವೊಂದಿಲ್ಲ ಭೀಕರದ ಮೃಗಪಕ್ಷಿ ಪೆಸರಿಗಿಲ್ಲ
ಮುನಿಗಳಲ್ಲದೆ ಮಿಕ್ಕ ಜನಮಿಲ್ಲ ಪರಿವ ವಾ
ಹಿನಿಗಳಲ್ಲದೆ ಮಲಿನಜಲಮಿಲ್ಲ ಮಂಜುಲ
ಸ್ವನಗಳಲ್ಲದೆ ಬೆಗಡುನಾದಂಗಳಿಲ್ಲವಾ ಕಪಿಲನ ನಿಜಾಶ್ರಮದೊಳು ೩೬

ಪರಿಕಿಸುವಡಾಶ್ರಮುವೆ ವೈಕುಂಠ ಕಪಿಲನೇ
ಹರಿಯು ತದ್ವಸಜನರೆ ವೈಕುಂಠಪುರಜನರು
ತರುಗಳೆಲ್ಲಾ ಕಲ್ಪಭೂಜಗಳ್ ಕುಸುಮಗಳೆ ಮಂದಾರ ಕುಸುಮಂಗಳು
ಪರಿವ ಜಲಮಮೃತಪ್ರವಾಹಗಳ್ ತುಂಬಿ ಕೆಡೆ
ದಿರುವ ಪಾಷಾಣಂಗಳನಿತು ಚಿಂತಾಮಣಿಗ
ಳರಿಯಲೆಲ್ಲಾ ಜೀವಜಾತಗಳ್ ದೇವತೆಗಳುಸುರಲೇನತಿಶಯವನು ೩೭

ಪುಲಿಕರಡಿ ಸೇವೆಯೊಳ್ ಸಂದಿಹವು ಕೇಸರಿಗ
ಳೊಲಿದು ಬಾಗಿಲ ಕಾದು ನಿಂದಿಹವು ಗಿಳಿವಿಂಡು
ನಲಿದು ಸುತಿಸುತ ಹಿತದಳೊಂದಿಹವು ಮದಗಜಂಗಳ್ ಬಳಸುಗಾವಲಿಹವು
ಕಲಕಂಠ ಗಾನಮಂ ಸೂಸುವುವು ಚಮರಿಗಳ್
ಬಲಿವ ಚಾಮರಗಳಂ ಬೀಸುವುವು ಕೋಡಗವೆ
ಫಲಪುಷ್ಪ'ಪರಿಕರಂಗಳನು ತಂದೊದಗಿಸುವುವಮಲಮುನಿ' ಮಹಿಮೆಯಿಂದೆ ೩೮

ತುಂಬುರಾದ್ಯರ್ಬಂದು ಪಾಡುವರು ಸತತಮುಂ
ರಂಭಾದಿಗಳು ನಾಟ್ಯವಾಡುವರು ದಿನದಿನದಿ
ಜಂಭಾರಿಮುಖ್ಯರೆಡೆಯಾಡುವರು ಸುರಧೇನು ಬಾಣಸವನಾಂತಿರ್ಪುದು
ಮುಂಬರಿದು ದಿಗ್ವರರು ಕೂಡುವರು ವಿಧಿಮುಖ್ಯ
ರಂಬರದಲೈತಂದು ನೋಡುವರು ವಿಜ್ಞಾನ
ಮಂ ಬಯಸಿ ಮುನಿವರರು ಬೇಡುವರು ವನಮೆ ಪಾವನಮುಕ್ತಿವನೆಯೆನಿಸಿರೆ ೩೯

---

೩೮. 1. ಗಳನು ತಂದೀಸುವುವು ಕಪಿರೆನುರು ತಪಸಿನಾ

ವೊಳೆದೋರ್ವ ಭಕ್ತಿಯಿಂ ಕುಡಿವರಿದು ದಿನದಿನಕೆ
ಬೆಳೆಯುವ ವಿರಕ್ತಿಯಿಂದೆ[[1]ಲೆದಳೆದು[1]] ಹೃದಯದಿಂ
ಕಳಿತ ವೊಗ್ಗೆಯ ಪರಿಯ ವಿಷಯದಿಂದರಳ್ದು ಪೂತೆರದ ವಿಜ್ಞಾನದಿಂದೆ
ಎಳೆಗಾಯತೆರದಿಹ ಸುಖೇಚ್ಛೆಯಿಂ ಪಕ್ವಫಲ
ವಳತೆಯುಹ ಹರಿಚರಣಭಜನೆಯಿಂ ಲತೆಯ ಗುಣ
ಮಳವಟ್ಟ ಕನಕಲತಿತಾಂಗಿಯರು ಬನದಿ ಋಷಿಪತ್ನಿಯರು ಶೋಭಿಸಿದರು ೪೦

ಮಳಲುಗೊಡನಂ ಮಾಡಿ ನೀರ್ದುಂಬಿ ಕುಂಡಲಿಸಿ
ದೆಳೆನಾಗಮಂ ಸಿಂಬೆಗೈದು ಶಿರದೊಳ್ ಪೊತ್ತು
ಇಳೆಗೆ ಬೆಚ್ಚವುಲ ಕುಡಿನೋಟದಿಂದಡಿಯ ಸೊಪ್ಪುಳಿಯಿರದ ಮೃದುಗತಿಗಳಿಂ
ಒಳಗೆ ಹರಿಯೊಳ್ ಬಲಿದ ನೆನಹಿನಿಂ ಖಡ್ಗಾಸ್ಥಿ
ಬಳಿಕರ್ಣಪತ್ರಗಳ ತೊಡಿಗೆಯಿಂ ವಲ್ಕಲಂ
ಗಳನುಟ್ಟು ಋಷಿಪತ್ನಿಯರ್ಗಳೆಡೆವರಿದರಂಗಚ್ಛವಿಗಳಿಳೆಯ ಮುಸುಕೆ ೪೧

ಎಲ್ಲಿನೋಡಿದಡುಂ ವಿರಾಗಿಗಣ ಯೋಗಿಗಣ
ಮೆಲ್ಲಿನೋಡಿದಡು ಸದ್ಭಕ್ತಗಣ ಮುಕ್ತಗಣ
ಮೆಲ್ಲಿನೋಡಿದಡು ವಿಜ್ಞಾನಿಗಣ ಮೌನಿಗಣ ವೇದಾಂತನಿಷ್ಠಗಣವು
ಎಲ್ಲಿಯುಂ ಭೂದಿವಿಜವರರ ಗಣ ಸುರರ ಗಣ
ಮೆಲ್ಲಿನೋಡಿದಡು ಯತಿವೀರಗಣ ಧೀರಗಣ
ಮೆಲ್ಲಿಯು ಲಸದ್ಬ್ರಹ್ಮಚಾರಿಗಣ ಸೂರಿಗಣವಾ ಕಪಿಲನಾಶ್ರಮದೊಳು ೪೨

ಅಳವಟ್ಟ ಪೂಗಳಿಂದರ್ಚಿಸಿದ ಗೋಗಳಿಂ
ಸುಳಿವ ಸುಳಿಗಾಳಿಯಿಂ ಸಾತ್ವಿಕ ಮೃಗಾಳಿಯಿಂ
ಫಳಭರದ ಗೊನೆಗಳಿಂ ಪರಿವ ವಾಹಿನಿಗಳಿಂ ತಳಿತ ತರುಲತೆಗಳಿಂದೆ
ತಿಳಿಜಲದ ಕೊಳಗಳಿಂ ತೀರ್ಥಸಂಕುಳಗಳಿಂ
ಗಿಳಿಸುಡಿಗಳಿನಿಗಳಿಂ ಗಿಳ್ಕಿರಿವ ಮುನಿಗಳಿಂ
ದಳಿಝೇಂಕರಂಗಳಿಂದಾ ಬನವು ಕಂಗಳಿಂಗತಿ ಮನೋಹರವೆನಿಸಿತು ೪೩

---

೪೦. 1. ಳಿದಳಿರು.

ತಂದೇ ಕೇಳ್ ಪ್ರಕೃತಿಸಂಪರ್ಕದಿಂ ಬಹು ರೂಪಿ
ನಿಂದೆ ತೋರ್ಪಡುತ ಸಂಪರ್ಕಮಳಿಯಲ್ಕೆ ಮಗು
ಳಿಂದಿನೊಲ್ ಬ್ರಹ್ಮವೊಂದೆನಿಸಿರುತ ಮೋಹಕದ ಮಾಯೆಯಿಂ ಚೈತನ್ಯವೆ
ಮಂದಬುದ್ಧಿಗೆ ಬಹುಳವೆನಿಸಿ ಪೆಸರ್ವಡೆದಡುಂ
ಸಂದ ಸುಜ್ಞಾನಮತಿಗೆರಡೆನಿಸಿ ತೋರದದ
ರಿಂದೆ ಸತ್ಯಸ್ವಭಾವದ ಹರಿಯನೇಕದಿಂ ನೆನೆಮು ನೀ ಸುಖಿಯಪ್ಪುದು ೫೨

ಮರನ ನೆಳಲಂ ಸಾರ್ದ ನರನ ನೆಳಲಂತೆ ಕ
ರ್ಪುರನಾರಿಯಗ್ನಿ ಪುರುಷನನಪ್ಪಿದಂತೆ ಸಾ
ಗರದೊಳಗೆ ಲವಣಪುರುಷರ್ಗಳಾಳ್ದಂತೆ ಮಧುವೆಣ್ಣ ಜಲಕೇಳಿಯಂತೆ
ಕರಸೋಂಕು ಮಾತ್ರದಿಂ ತದ್ರೂಪನೈದಿದಂ
ಚರಮದೈಹಿಕನಾದ ದೆಸೆಯಿಂದೆ ಸಂಶಯವ
ಜರಿದು ಕಪಿಲಾಂಘ್ರಿಗಭಿನಮಿಸಿ ಸೈವರಿದನಾ ಕರ್ದಮ ತಪೋವಿಪಿನಕೆ ೫೩

ಈ ತೆರದಿ ಕರ್ದಮನು ಸರಿದ ಬಳಿಕಾ ದೇವ
ಹೂತಿ ಬಿನ್ನವಿಸಿದಳ್ ನಿಜ ಮತವನೆಲೆ ಸರ್ವ
ಚೇತನಾತ್ಮಕನೆ ಪರಗತಿಗೆ ಸೋಪಾನವಹ ಸಾಧನಗಳನ್ನಡರಲು
ಈ ತನುವಿದಬಲಾಂಗವೆನಿಸಿರ್ಪುದಾದಡುಂ
ನೀ ತನಯನೆನಿಸಿ ಬಂದೊಡಲಾದ ದೆಸೆಯಿಂ ಮ
ಹಾತಿಶಯ ಪರುಷ ಸೋಂಕಿನ ಲೋಹವೆನಿಸದಿರದದರಿನಿಂ ಕರುಣಿಸುವುದು ೫೪

ಎನಲು ನಿಜಮಾತೆಯಂ ಸತ್ಕರಿಸಿ ನುಡಿದನೆಲೆ
ಜನನಿ ಕೇಳಿನ್ನು ಪುರುಷ ಸ್ತ್ರೀ ವಿಚಾರಗಳ್
ತನುವಿಗಲ್ಲದೆ ಮನೋಬುದ್ಧಿಗಳಿಗಿದ್ದಪುದೆ ಹರಿಭಜನೆಯುಂ ಸತತಮುಂ
ಮನನ ತಚ್ಛ್ರವಣಂಗಳಿಂದಲಾರಾಧಿಸುವ
ಮನುಜರೆಸುಜೀವಿಗಳ್ ಶೂದ್ರರಾಗಲಿ ಹೆಣ್ಣು
ಜನುಮರಾಗಲಿ ಕೊರತೆಯಿರದು ಹರಿಪದವನರ್ಚಿಪುದು ಭಕ್ತಿಯೊಳೆಂದನು ೫೫

ದೇವ ಚಿತ್ತವಿಸಾದಡೆನಗೆ ಹರಿಭಜನೆಗಳ
ಭಾವವೆಂತರಿವಹುದು ತಚ್ಛ್ರವಣ ಮನನಗಳ
ದಾವ ಪದ್ಧತಿಗಳಿಹವಿನ್ನು ಕರ್ಮವಿರಾಗ ಭಕ್ತಿಗಳ ಪರಿಯದೆಂತು
ಕೇವಲಾನಂದಪದ ವಿಜ್ಞಾನದುನ್ನತಿಯ
ಜೀವಪರಮಾಭಿಮುಖದೈಕ್ಯಲಕ್ಷಣವ ಕರು
ಣಾವಲೋಕನದಿಂದನುಗ್ರಹಿಸಿ ಚಿತ್ತವಿಭ್ರಮವನೊರಸುವುದೆಂದಳು ೫೬

ಯುಕ್ತಮನ್ನೆಣಿಸಲೆಲೆ ತಾಯೆ ಪರವೆಳಸಿಗಂ
ಭಕ್ತಿಯೇ ಬೀಜಮೆನಿಪುದು ಕಣಾ ಶ್ರವಣಾದಿ
ಸಕ್ತಿಯೇ ವ್ಯವಸಾಯಮೆನಿಸುವುದು ನಿಷ್ಕಾಮಕರ್ಮಗಳೆ ಜಲಮೈಸಲೆ
ಮುಕ್ತರಾಗದ್ವೇಷಪ್ರವೃತ್ತಿಯೇ ಪೊಲನು ಸುವಿ
ರಕ್ತಿಯೇ ಕಳನು ವಿಜ್ಞಾನಮೇ ಫಲವಿದಕೆ
ಭಕ್ತಿವೆರೆಯದೆ ಸಹಜಮೆನಿಸಿರದು ಲವಣವಿರಹಿತ ಶಾಕಪಾಕದಂತೆ ೫೭

ಅದರಿನಿಂ ಭಕ್ತಿಯಿಂ ಭಜಿಸುವುದು ಸರ್ವದಾ
ಪದುಮನಾಭನ ನೆನಹನಗಲಿರದೆ ಹಸ್ತಗಳ್
ಮಧುವೈರಿ ಪೂಜೆಯೊಳ್ [1]ಮಾತು[1] ತತ್ಸ್ಮರಣೆಯೊಳ್ ಮಸ್ತಕಮೆ ವಂದನೆ
ಯೊಳು
ಪದಗಳ್ ಪ್ರದಕ್ಷಿಣೆಯೊಳಮಲ ಕರ್ಣಗಳ್ ತೀ
ವಿದ ಕಥಾಶ್ರವಣದೊಳ್ ನೇತ್ರ [2]ತದ್ರೂಪಿನೊಳ[2]
ಗೊದಗಿ ಹೃತ್ಪದ್ಮದೊಳ್ ನೆಲೆಗೊಳಿಸಿ ಯೆಡೆವಿಡದೆ ಭಜಿಪುದೇ ನಿಜಭಕ್ತಿಯು ೫೮

ದೇವಿ ಕೇಳಿಹ ವಿಷಯಭೋಗ ಪರಿಕರಗಳೊಳ
ಗಾವುದನ್ನನುಭವಿಸಲಮಲ ಭೂಷಣ ವಸ್ತ್ರ
ಮಾವಲಂಕಾರಗಳ ಪಡೆದಿರಲ್ ಜಪತಪಕ್ರಿಯೆಗಳನ್ನನುಗೈಯ್ಯಲು
ಶ್ರೀವಾಸುದೇವಗೆ ಸಮರ್ಪಿಸುತ ಕಳೆದಹಂ
ಭಾವದಿಂ ತನುಮನವನಾಡಿಸುವನಾಡುವವ
ನಾ ವಿಮಲಹರಿಯೆಂಬ ನಿಲುಕಡೆಯಲೆರಗಿದುದೆ ನಿಜಭಕ್ತಿಮತಮೆನಿಪುದು ೫೯

---

೫೮. 1. ವಾಕು. 2. ತಲ್ಲಕ್ಷ್ಯದೊಳ

ಬಂಧನದರಿದ್ರಗಳ್ ಬಳಲಿಸಲ್ ಸೌಭಾಗ್ಯ
ಮುಂದುವರಿಯಲ್ ಪರರು ದೂಷಿಸಲ್ ಭೂಷಿಸಲ್
ಸಂದ ಹರ್ಷವಿಷಾದಮುಮುರಿರಲ್ ನಷ್ಟಲಾಭಂಗಳೊದಗಲ್ ಸರಿಯಲು
ಕುಂದುಹೆಚ್ಚಿನ ಕುಹಕಮುಡರಿರಲ್ ತನುಧರ್ಮ
ದಂದುಗವನಾಂತಿರಲ್ ಹರಿಯಾಜ್ಞೆಯೆನೆ ಚಿತ್ತ
ಮುಂದುಗೆಡದೇಕಸ್ವಭಾವವಾಗಿಹುದದುವೆ ನಿಜಭಕ್ತಿಮತಮೆನಿಪುದು ೬೦

ಜನನಿ ಕೇಳೀ ತೆರದ ಭಕ್ತಿ ನೆಲೆಗೊಳ್ಳುವಡೆ
ಮನಮದು ವಿರಾಗಮನ್ನಾಂತಡಲ್ಲದೆ ನಿಲದು
ತನುವಿನಳತೆಯನರಿದು ಮಮತೆಯಂ ನೂಕುವುದೆ ನಿಜವಿರಾಗದ ಮೂಲವು
ವನಿತೆಗಂ ಮಾಸಮಾಸಕೆ ಕಳೆವ ಪೊಲೆರಕ್ತ
ಮಿನಿಗೊಂಡು ನವಮಾಸ ತಡೆದು ಗೋಳಕವಾಗಿ
ತನುರೂಪನೈದಿ ಮೂತ್ರದ್ವಾರದಿಂ ಕೆಡೆದ ಯೋಗ್ಯತೆಯನಾರರಿಯರು ೬೧

ಎಲುವೆ ಬೆಮ್ಮರ ಹಂಜರಗಳಾಗಿ ಮಲಮಜ್ಜ
ವಳಿತೆಯಿಂ ಮಾಂಸ ಭಿತ್ತಿಗಳಾಗಿ ಬಲುನರಂ
ಗಳಿನ ಬಿಗಿಗಟ್ಟಾಗಿ ಪಾದಗಳ್ ಕಂಬ ಚರ್ಮದ ಮೇಲು ಪೊದಿಕೆಯಾಗಿ
ಒಳಗೆ ಸುತ್ತಿದ ಕರುಳು ಶುಕ್ರ ಶೋಣಿತ ಮೂತ್ರ
ಪುಳುವೆ ಗೃಹಸೋಪಸ್ಕರಗಳಾದ ಮೃತ್ಯುವಿನ
ನಿಳಯಮೀ ದೇಹವೆಂಬುದನರಿದು ಮಮತೆಯಂ ನೂಕಿಮದೆ ವೈರಾಗ್ಯವು ೬೨

ನೀರ ಬೊಬ್ಬುಳಿಯಂತೆ ಪುಸಿ ಸೌಖ್ಯ ಕಳೆಗಳಂ
ತೋರಿ ಹಾರುವುದಂ ಜರಾಮರಣ ರೋಗಗಳ
ನೇರಿ ಬಾಧಿಪುದಂ ಮದಾವಸ್ಥೆ ತಾಪತ್ರಯಂಗಳೆಡನೆನಿಸಿಪ್ಪುದಂ
ಕಾರ ಮಿಂಚಿನ ಮಹಿಮೆಯಂತೆ ಮೋಹಕಗೊಳಿಪ
ಗಾರುಡದ ತನು ಮೃತ್ಯುಕರಕಬಳಮೆಂಬುದ
ನ್ನಾರರರಿಯರೀ ಭುವಿಯೊಳರಿತುದನ್ನರಿಯದಂತೆಸಗಿಪ್ಪುದಹಹ ಮಾಯೆ ೬೩

ತಂದೆ ಬದುಕಿರುತ ತತ್ಸುವರರಾತನ ಕಣ್ಣ
ಮುಂದೆ ಸಾವುದ ಕಂಡು ರೋಗ ಡಾಮರ ಜರೆಗ
ಳಿಂದಳಲುವರ ಕಂಡು ಸಿರಿಯವೌವನಾದಿಗಳ ನೆಲೆಯಿಲ್ಲದನುವ ಕಂಡು
ಒಂದಿಗೆಯ ಸತಿಸುತಾದಿಗಳು ಸಂತೆಯ ನೆರವಿ
ಯೆಂದೆಂಬುದಂ ಕಂಡು ಕಂಡು ಮೋಹಿಸಿ ಮರೆದು
ಮುಂದುಗೆಡುವರೆ ಬಲ್ಲವರ್ಕಂಡ ಕೂಪದೊಳ್ ಕೆಡೆವರಿಂಗೇವೇಳ್ವಿನು ೬೪

ಅಮರಿದ್ಯೆದಿಂದ್ರಿಯಾರ್ಥಗಳ ಭೋಗಂಗಳಂ
ಮಮತೆಯಿಂ ಮೋಹಿಸುವ ಮನವು ಮುಂದೆರಗದೊಲ್
ವಿಮುಖಮಂ ಮಾಡಿ ಮನಮೆರಗಲೊಲ್ಲದ ಸುಸಾಧನಮುಖಕೆ ಚಿತ್ತಗತಿಯಂ
ಸುಮುಖಗ್ಯೆದೆರಗಿಸುತ ಕರಣ ಸ್ವತಂತ್ರದು
ಭ್ರಮತೆಗೆಡೆಗೊಡದೆ ಪಿರಿದಶನ ಪಟುನಿದ್ರೆ ಸಂ
ಗಮಗಳಂ ನಿಂದಿಸಿದ ಯುಕ್ತವೃತ್ತಿಯೆ ಮನೋವೈರಾಗ್ಯಮೆಂದೆನಿಪುದು ೬೫

ಈ ತೆರದ ವೈರಾಗ್ಯಮುಳವಡದೆ ವಿಜ್ಞಾನ
ನೀತಿ ತಾನಳವಡದು ವಿಶ್ವಮಂ ಚೇಷ್ಟಿಸುವ
ಚೇತನಮೆ ಭಗವದಂಶಕಮೆಂದು ಘಟಮುಟಗಳೆನಿಸಿ ತೋರುವ ವಪುಗಳ
ರೀತಿಯದು ಪಾಂಚಭೌತಿಕಮೆಂದು ತತ್ಪಂಚ
ಭೂತದೇಳಿಗೆಯೇ ಪ್ರಕೃತಿಯೆಂದು ತತ್ಪ್ರಕೃತಿ
ಚೇತನಗಳೊಡವೆರೆದು ಕಾರ್ಯರೂಪಹುದೆಂದು ತಿಳಿವುದೇ ಸುಜ್ಞಾನವು ೬೬

ಪಿಂಡಾಂಡದೊಳ್ ಕರಣದುಪಲಕ್ಷಣದಲಿ ನೆಲೆ
ಗೊಂಡ ಚಿತ್ಕಳೆಯದೇ ಜೀವನೆನಿಪುದನು ಬ್ರ
ಹ್ಮಾಂಡ ರೂಪು ಪ್ರಕೃತಿಯುಪಲಕ್ಷಣದ ಚಿದಂಶವೆ ಪರಮನೆನಿಸಿರ್ಪುದಂ
ಅಂಡಪಿಂಡಂಗಳನ್ನಂಟದಿಹ ನಿಶ್ಚಲದ
ಖಂಡ ಚಿತ್ಸಾಕ್ಷಿ ರೂಪೆಂಬುದಂ ಗುರುಮುಖದಿ
ಕಂಡು ಸಂಪರ್ಕಮಂ ಕಳೆದೇಕದಿಂ ನಿರೀಕ್ಷಿಪುದೆ ವಿಜ್ಞಾನನೆಲೆಯು ೬೭

[1]ಬಳಿಕ ತನುಸಂಗದಿಂ[1] ಜಾಗ್ರದ್ವೆರೆದು ವಿಶ್ವ
ನೆಳವಾಂತು ಕರಣ ಸಂಪರ್ಕದಿಂದಾ ಸ್ವಪ್ನ
ಮಿಳಿತದಿಂ ತೈಜಸಾಖ್ಯೆಯು ವಹಿಸಿ ಲಸದವಿದ್ಯಾಸಂಗದಿಂ ಸುಪ್ತಿಯ
ಬಳಕೆಯೊಳ್ ಪ್ರಾಜ್ಞನೆಂದೆನಿಸುತೀ ತೆರದಿ ಪೊರ
ಗೊಳಗೆ ಲಂಬಿಸಿ ಮೂರವಸ್ಥೆಯೊಳ್ ವಿಶ್ವಮಂ
ಸುಳಿಸಿಯುಳಿಸುತಲಳಿಸುವಾತ್ಮನಿರವಂ ವಿಭಾವಿಪುದೆ ವಿಜ್ಞಾನನೆಲೆಯು ೬೮

ಲಸದಯಸ್ಕಾಂತದೊತ್ತಿನ ಸೂಚಿಯಂತೆ ರಂ
ಜಿಸುವ ಮಲಯಜಸಮೀಪದ ಕೊರಡಿನಂತೆ ಶೋ
ಭಿಸುವ ತನುಚೇಷ್ಟೆಗಳನಾಂತ ನೆಳಲಂತೆ ತಮಟಧ್ವನಿಗೆ ಮೊಳಗುತಿರ್ಪ
ಪುಸಿನುಡಿಯ ಗಿರಿಯಂತೆ ಬಿರುಗಾಳಿಯಿಂದೆ ಭೋ
ರಿಸುವ ಲಸದಾಕಾಶ ಪಟದಂತೆ ಪರಮಾತ್ಮ
ವೆಸುಗೆಯಿಂ ಚೇಷ್ಟಿಸುವ ಮಾಯಾಪ್ರವೃತ್ತಿಯನ್ನರಿದುಳಿವುದೇ ಜ್ಞಾನವು ೬೯

ಪುತ್ತುಸೋಂಕಿಲಿ ಕೆಡೆದ ರಜ್ಜುವಿಗೆ ಸರ್ಪತ್ವ
ಮತ್ತೆ ಕೇಳ್ ಮರುಮರೀಚಿಕೆಗಳಿಂಗುದಕತ್ವ
ಪ್ರತ್ಯಕ್ಷಮೋಟುಮರಕೆಡೆಗೊಂಡ ಪುರುಷತ್ವ ಶುಕ್ತಿಗಂ ರಜತ್ವವು
ಒತ್ತಿಗೈದೀಕ್ಷಿಸಿ ಪರೀಕ್ಷಿಸದ ದೋಷದಿಂ
ಸತ್ಯಮಾಗಿರುವಂತೆ ಮೂಲಶಕ್ತಿಗೆ ಮೂಲ
ಚಿತ್ತುವನ್ನೈದಲರಿಯದೆ ಭಿನ್ನಮೆನಿಪುದೀ ವಿಶ್ವನೆಲೆಯೆಂದರಿವುದು ೭೦

ದೂರದಿಂ ನೋಡಲು ಸಮುದ್ರಮೇ ಕೆರೆಯಂತೆ
ತೋರುವಂದದಲಿ ಮಹದುನ್ನತಿಯ ಗಿರಿ ಪತ್ತು
ಮಾರುದ್ದಮಾಗಿ ಕಾಣ್ಬಡುವಂತೆ ವಿಜ್ಞಾನಮಿರದ ಜಡಕರ್ಮದಿಂದೆ
ಪಾರಮಾರ್ಥಿಕದ ನಿಜಮೆಂತು ತೋರುವುದು ವಿ
ಸ್ತಾರಮಾಯಾವರಣಮಂ ಪರಿದು ಬಿಸುಟು ಮುಂ
ದೇರುಗೊಳಿಸುವ ಮನನ ಘನ ನಿದಿಧ್ಯಾಸಬಲದಿಂ ಸನೀಹವಸಾರದೆ ೭೧

---

೬೮. 1. ತಿಳಿದು ಸತ್ಸಂಗದಿಂ

ಪ್ರಕೃತಿಯೊಡ್ಡವಣೆಯಾಡಂಬರ ವಿಶಾಲತರ
ವಿಕೃತಿಗಳ್ ಸ್ವಪ್ನತೋರಿಕೆಯಂತೆ ತಥ್ಯವೆನೆ
ಪ್ರಕೃತದೊಳ್ ಜಡತೆಯಿಂ ತೋರ್ದಡುಂ ಬಹುಜನ್ಮಜನ್ಮದೊಳ್ ಪರಿಘಟಿಸಿದ
ಸುಕೃತ ಫಲದಿಂದೊದಗಿದಮಲ ವಿಜ್ಞಾನದಿಂ
ಪ್ರಕೃತಿಗಂ ಪರನಪ್ಪ ನಿರ್ಮಲಾತ್ಮಧ್ಯಾನ
ಸಕೃದೊಡಂಬಡಲು ಸಚರಾಚರವೆ ಬ್ರಹ್ಮಸ್ವರೂಪೆನಿಸಿ ತೋರ್ವಡುವುದು ೭೨

ನಿಖಿಲ ದೃಶ್ಯಗಳ ತೋರ್ಕೆಯ ಕಾಂಬ ನೇತ್ರಮದು
ಮುಕುರವಿಲ್ಲದೆ ತನ್ನ ತಾ ಕಾಣಲರಿಯದೊಲ್
ಪ್ರಕಟವಹ ವಿಜ್ಞಾನವಾದಡುಂ ಗುರುಮುಖದಲಲ್ಲದೊಡವಡದದರಿನಿಂ
ಅಕುಟಿಲಾನಂದಮಯ ಗುರುಭೋಧೆಯಂ ಪಡೆದು
ಸಕಲಮುಂ ಬ್ರಹ್ಮಸ್ವರೂಪೆಂದು ಚಿರವಾದ
ಮುಕುತಿ ಸಾಮ್ರಾಜ್ಯಮಂ ಪಡೆವುದೆಲೆ ಮಾತೆ ತತ್ತ್ವದ ತೊಡರ ಕಡೆಗೊಳಿಸುತ ೭೩

ಗಗನ ಮೊದಲಾದೈದು ಭೂತಂಗಳೊಡಗೂಡಿ
ಬಗೆಯೊಂದಕ್ಕೈದೈದು ಭಾಗಗಳನಂಗವಿಸಿ
ನೆಗಳಿದಿಪ್ಪತ್ತೈದು ತತ್ತ್ವಲಕ್ಷಣಗಳಂ ಬೇರ್ಪಡಿಪ ಪದ್ಧತಿಗಳಂ
ಬಿಗಿದಿರ್ಪ ಮೂರವಸ್ಥೆಗಳ ವಿಸ್ತರಗಳಂ
ತ್ರಿಗುಣಗಳ ಬಂಧಮಂ ತೊಡಚದ ವಿಲಕ್ಷಣದ
ಬಗೆಯನೊಳನೋಟದಿರವನ್ನಾರ್ಯ ಮುಖದಿ ಸಂಗ್ರಹಿಪುದೇ ಶ್ರವಣನೆಲೆಯು ೭೪

ಸದ್ರೂಪವೆನಲು ಚೈತನ್ಯಾಂಶದಿರವೆಂದು
ಚಿದ್ರೂಪವೆನಲು ತೇಜೋಂಶದನುವೆಂದು ಸದ
ಸದ್ರೂಪವೆನಲು ಮಾಯಾಸ್ವಭಾವಿಕವೆಂದು ಬ್ರಹ್ಮಾಂಡದಭಿಮಾನದ
ತದ್ರಚನೆಯಿಂ ಮೆರೆವನೇ ಪರಮನೆಂದು ಸೋ
ಪದ್ರಮನ್ನನುವಿಡಿದು ಪಿಂಡಾಂಡದಭಿಮಾನ
ಮುದ್ರಿತನೆ ಜೀವನೆಂದಾರ್ಯಮುಖದಿಂದೆ ತಿಳಿಗೊಂಬುದೇ ಶ್ರವಣನೆಲೆಯು ೭೫

ಕ್ಷೇತ್ರತ್ರಯಗಳಾಗುಹೋಗುಗಳ ಮೆರೆವ ಜೀ
ವತ್ರಯಂಗಳ ಪರಿಯ ತ್ರಿಗುಣಪದ್ಧತಿಯ ಮು
ದ್ರಾತ್ರಯಂಗಳ ಹಿಡಿತೆಬಿಡಿತೆಗಳ ಲಕ್ಷ್ಯತ್ರಯಂಗಳಮರಿಕೆಯ ಸೊಬಗ
ಧ್ಯಾತೃಧ್ಯೇಯಸ್ಥಾನದನುವ ಬಲಿದಿರ್ಪ ಶ
ಕ್ತಿತ್ರಯಂಗಳ ಲಕ್ಷಣಾದಿಗಳ ಮಹಿಮೆಯ ವಿ
ಚಿತ್ರಮಂ ಶಾಸ್ತ್ರಗುರುಮುಖಗಳಿಂ ತಿಳಿದು ಭಜಿಸಲ್ ಶ್ರವಣಮೆಂದೆನಿಪುದು ೭೬

ಮೋಹಶೋಕಂಗಳ್ ಮನೋಧರ್ಮವೆಂಬುದಂ
ದಾಹ [1]ಕ್ಷುತ್ ಪ್ರಾಣಧರ್ಮಗಳೆನೆ ಜರಾಮರಣ[1]
ದೇಹಧರ್ಮಂಗಳೆಂದರಿದು ತತ್ತದ್ಧರ್ಮಗಳನು ವಿಂಗಡಿಸಿ ಬಳಿಕ
ದೇಹ ಕರಣಾದಿ ಕೃತ್ಯಂಗಳಂ ಮುಮುಕರಿಸಿ
ಮೋಹಿಸದೆ ಸಾಕ್ಷಿಭಾವವನಾಂತು ಸರ್ವದಾ
ಸೋಹಮೆಂದಾತ್ಮಸಮರಸಲಕ್ಷ್ಯಮೆಡೆಗೊಂಬುದೇ ಮನನಮೆಂದೆನಿಪುದು ೭೭

ಸರ್ವಚೇತನ ಸಚ್ಚಿದಾನಂದ ನಿರವಯವ
ನಿರ್ವಿಕಲ್ಪಕ ನಿರ್ಗುಣಾಧಾರ ಸದಸದಂ
ತರ್ವರ್ತಿ ಸಾಕ್ಷಿಸ್ವರೂಪ ಭುವನೈಕ ಪ್ರಕಾಶ ಲಸದಮೃತನಿಲಯ
ನಿರ್ವೃತ್ತ ನಿತ್ಯ ನಿರ್ಮಲ ನಿರಂಜನನಚಲ
ಸರ್ವತೋಮುಖ ಸಂಗರಹಿತ ಸಕಲಾಶ್ರಯನ
ದೊರ್ವನಹ ಪರಮಾತ್ಮನೇ ಸರ್ವಪೂರ್ಣನೆನೆ ಭಾವಿಪುದದೇ ಮನನವು ೭೮

ಇಂತು ಸಚರಾಚರಮೆ ಹರಿರೂಪಮೆಂಬರಿಕೆ
ನಿಂತು ಭೇದಭ್ರಾಂತಿಯುಳಿದ ನಿಶ್ಚಲಮನನ
ದಿಂ ತುಷ್ಟಿವಡೆದ ಮಹಿಮರ್ಗೆ ವಿಕ್ಷೇಪ ಕೆಲಸಾರಿ ಸನ್ಮತಿಮುಕುರಕೆ
ತೊಂತಿರ್ದ ಮಲಿನಮಣಗುತ ವಿಮಲದೇಳ್ಗೆಯ
ನ್ನಾಂತು ರಂಜಿಪ ನಿದಿಧ್ಯಾಸಮನ್ನೈದಿ ಲಸ
ದಂತರಾತ್ಮನ ಬೃಹತ್ತೇಜದೊಳ್ ಸಮರಸವನೇರ್ದಿತರಮರಿವಡದಲೆ ೭೯

---

೭೭. 1. ಹಸಿವುಸುರು ಧರ್ಮಂಗಳೆನೆ ಜರೆಮರಣ. ೭೯, 1. ಮರೆಯುರಿಯುದೆ.

ತಾಯೆ ಕೇಳ್ ನಿರ್ವಿಕಲ್ಪಕ ಸಮಾಧಿಗಳ ನಿ
ಶ್ರೇಯಸಾನಂದಕರವಹ ಪದವಿಯಳವಡಲ್
ದಾಯದಿಂ ಘನನಿದಿಧ್ಯಾಸಬಲಮಲ್ಲದಡೆ ಮೆರೆಯದದನಾಚರಿಸುವ
ನ್ಯಾಯಮನ್ನೊರೆವೆ ಕೇಳ್ ತನು ಮದಿಸದಂತೆ ಹಸಿ
ದಾಯಾಸಗೊಳದಂತೆ ಯುಕ್ತನಿದ್ರಾಶನೋ
ಪಾಯದಿಂ ಯುಕ್ತವರ್ತನವಿಹಾರಂಗಳಿಂ ಸಮತೆಯಿಂ ಸಾಧಿಸುವುದು ೮೦

ಕಿರುವಾಗಿಲಂಬಡೆದ ಯೋಗಶಾಲೆಯನೈದಿ
ಹರಹಿ ಕುಶ ಚೇಲಾಜಿನಂಗಳನ್ನದರ ಮೇ
ಲೆರಗಿ ಪದ್ಮಾಸನದ ತೊಡರಿನಿಂ ಕುಳ್ಳಿರ್ದು ಚಿತ್ತಮೇಕಾಗ್ರಮಾಗಿ
ಗುರು ನಿರೂಪಿಸಿದ ಗುರಿಗಂ ಲಕ್ಷ್ಯಮಂ ಬಲಿದು
ಕರಣಂಗಳುಲುಹಡಗಿ ತಾರಕ ಜ್ಞಪ್ತಿಯಿಂ
ಮರವೆಯೆರಗದ ಸಾಮರಸ್ಯಭಾವನೆಯಿಂದೆ ಬ್ರಹ್ಮದಿರವಂ ಬಗೆವುದು ೮೧

ನಾಮರೂಪ ಕ್ರಿಯಾದಿಗಳೆನಿಪ ಸಗುಣಗಳ
ಸೀಮೆಯಂ ದಾಂಟಿ ನಿರ್ಗುಣವ ಮೀರಿದ ಲಸದ
ನಾಮಯಧ್ಯಾನ ಮಿಗೆ ಗಗನದಂದದಿ ಸರ್ವಪೂರ್ಣಭಾವನೆಯನಾಂತು
ಆ ಮಹದ್ವೆಳಗಿನಿಂದಜ್ಞಾನತಿಮಿರಸಂ
ಸ್ತೋಮಮಂ ಸದೆದು ನಿಶ್ಚಂಚಲ ಸಮಾಧಿ ಚಿ
ದ್ಧಾಮಮನ್ನಗಲದ ಸದಾನಂದನಿಲುಕಡೆಯೆ ವಿಜ್ಞಾನಮೆಂದೆನಿಪುದು ೮೨

ವಿತ್ತಮಂ ಪೂಳ್ದಿರುವ ಲುಬ್ಧಪುರುಷನ ಚಿತ್ತ
ವೃತ್ತಿಯಂದದಲಿ ಕಾಂತನನಗಲಿ ಕಳವಳಿಪ
ಮತ್ತಕಾಶಿನಿಯ ಮನದಂತೆ ಶಿಶುವನ್ನುಳಿದ ಮಾತೆಯಳ ಮರುಕದಂತೆ
ಕತ್ತಲೆಯನೇ ನೆನೆವ ತಸ್ಕರನ ಹೃದಯದೊಲ್
ಮತ್ತೀ ಪ್ರಪಂಚವರ್ತನೆಗಳೊಳ್ ಬಿಡದಾವ
ವೃತ್ತಿವಿಡಿದಿರ್ದಡುಂ ಮತಿಯು ಸದ್ಬ್ರಹ್ಮದೊಳ್ ತೊಳಲುವುದೆ ವಿಜ್ಞಾನವು ೮೩

ಕರಣೇಂದ್ರಿಯಗಳ ಕೃತ್ಯಂಗಳಂ ವಹಿಸಿ ಮಮ
ಕರಿಸಿ ಮೋಹಿಸುವ ದೆಸೆಯಿಂದೆ ಬಂಧಕವಾಗಿ
ಪಿರಿದ ಲಯಿಸುವುದು ತಸ್ಕರರೊಡನೆ ಯಾತ್ರೆಯನ್ನೈದಿದನ ಬವಣೆಯಂತೆ
ಪರಸೆಯಿಂದದರದರ ಕೃತ್ಯಮಂ ಬೇರ್ಪಡಿಸಿ
ನಿರುತಸಾಕ್ಷಿತ್ವದರಿವಿನ ವಿಲಕ್ಷಣವಾತವ
ಬೆರೆವರ್ಗೆ ಬಂಧವಿಸದೆಲೆ ಜನನಿ ಜಲಮಲಂ ಪ್ರತಿಬಿಂಬಕಂಟದಂತೆ ೮೪

ವಾರಿಕಂಪನವೆ ತದ್ಗತಬಿಂಬ ಕಂಪಮೆನೆ
ತೋರುವಂದದಿ ನಾಮರೂಪುಗಳ್ ಮಾಯಾ ವಿ
ಕಾರವಾದಡೆಯು ಜೀವ ವಿಕಾರವೆಂದೆಣಿಪುದಜ್ಞಾನಬಿಗುಹೈಸಲೆ
ಆರೈಯಲೆರೆವ ತೈಲದ ಮಲಿನ ಮದು ವರ್ತಿ
ಗೂರಿ ನಿಲ್ವಂತೆ ಬೆಳಗುವ ದೀಪಕಂಟುವುದೆ
ಈ ರಹಸ್ಯವನರಿದು ಘನವಿಲಕ್ಷಣವನೈದುವುದದೇ ವಿಜ್ಞಾನವು ೮೫

ಧೂಮ ಚಪಲಂಗಳಿರದಗ್ನಿಯೊಲ್ ತುಷಮೇಘ
ಸೀಮೆಯನ್ನಿರಿದರ್ಕನೇಳ್ಗೆಯೊಲ್ ಸಕಲವಹ
ಸಾಮಗ್ರಿಯವ ತೆಗೆದ ಸದನದೊಲ್ ಪರೆಯನೂಚಿದ ಪಾವಿನುಬ್ಬಟೆಯೊಲು
ಆಮಿಷವನುಗುಳಿದ ವಿಹಂಗನೊಲ್ ಕ್ಷೀರದಧಿ
ನಾಮಂಗಳಳಿದುಳಿದ ಸರ್ಪಿಯೋಲಿಂದ್ರಿಯ
ಗ್ರಾಮಸಂಗವ ನೂಕಿ ವಿಮಲಾತ್ಮ ಭಾವನೆಯಲೆರಗಿ ನೀ ಸುಖಿಯಪ್ಪುದು ೮೬

ಜನಪ ಕೇಳ್ ಶ್ರವಣ ಸಂಸ್ತುತಿ ಗಾನ ಪರಿಚರ್ಯ
ಮನನಂಗಳಿಂದೆ ಮುಕ್ತಿಯನೀವ ಹರಿಗೆ ನಿಜ
ಜನನಿಯೆಂದೆನಿಸಿ ಪ್ರತ್ಯಕ್ಷ ತನ್ಮೂರ್ತಿಯಂ ಪಡೆದಿದಿರಿನೊಳ್ ನೋಡುತ
ಮನಕೆ ಮಂಗಳಮಪ್ಪ ಬೋಧನೆಯ ಕೇಳ್ವ ಪಾ
ವನೆ ದೇವಹೂತಿಗವ್ಯಯಪದಮುದಹುದರಿದೆ
ಚಿನುಮಯತೆಯಾ ಕ್ಷಣದೊಳೊದಗಿದುದು ಪರುಷ ಸೋಂಕಿನ ಲೋಹಘಟಿಕೆ
ಯಂತೆ ೮೭

ಈ ತೆರದಿ ಸುಜ್ಞಾನಮುಳವಡಲ್ ವಿಮಲ ಚಿ
ಜ್ಜ್ಯೋತಿಸ್ವರೂಪಿನಿಂ ಬೆಳಗುತ ಸದಾನಂದ
ಚೇತೋವಿಲಾಸದಿಂ ಸರ್ವಶಾಂತಿಯನೈದಿ ಜನನವಿಲಯಾಯಾಸದ
ಭೀತಿಯಂ ಜರಿದು ವರಶೇಷಾದ್ರಿನಿಲಯ ವಿ
ಖ್ಯಾತ ವೆಂಕಟರಮಣ ಕೌಂಡಿಣ್ಯ ಗುರುವರ ಪ
ರಾತುಮ ಶ್ರೀಕಪಿಲಗೆರಗಿ ಮನುಪುತ್ರಿ ಸೈವರಿದಳ್ ತಪೋವಿಪಿನಕೆ ೮೮

ಅಂತು ಅಧ್ಯಾಯ ೧೦ಕ್ಕಂ ಪದನು ೮೫೨ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ.

೧೧. ನರ ನಾರಾಯಣಾವತಾರ

ಸೂಚನೆ :

ಶ್ರೀ ರಮಣನೊಲಿದು ಲೀಲೆಯೊಳು ಧರ್ಮನ ಪತ್ನಿ
ಮೂರುತಿಯು ಗರ್ಭದೊಳಗವತಾರಗೊಂಡು ನರ
ನಾರಾಯಣಾಖ್ಯೆಯಾದೆರಡು ರೂಪವನಾಂತ ಕಥನವಂ ಕರುಣಿಸಿದನು

ಧರಣೀಶಮುಂಗಥೆಯನಾಲಿಪುದು ಕರ್ದಮನ
ತರುಣಿಯಾ ಕಪಿಲವರನುದ್ಬೋಧೆಯಿಂದೆ ವಿ
ಸ್ಫುರಿಪ ನಿರ್ವಾಣ ಸಾಮ್ರಾಜ್ಯಮಂ ಪಡೆದು ನಿರ್ಮಲ ತಪೋಬನದೇಶಕೆ
ಸರಿಯಲಿತ್ತಲು ಮತ್ತೆ ಬಹುಶಿಷ್ಯಜನರನು
ದ್ಧರಿಸಿ ವಿಜ್ಞಾನಕರ ಸಾಂಖ್ಯ ತತ್ತ್ವಾಮೃತವ
ನೆರೆದು ಭವರೋಗಂಗಳಂ ಪರಿದು ಪೊರೆದನವ್ಯಯ ಸಿದ್ಧವರನರಿದೆನೆ ೧

ಶ್ರವಣಮಾತ್ರದಲಿ ಭವಮಂ ಭಂಗಿಸುವ ಕಪಿಲ
ರವತಾರ ಸಚ್ಚರಿತ್ರೆಯ ಕೇಳ್ದು ಪೊಣ್ಮಿದು
ತ್ಸವದಿಂದಲಾ ಪರೀಕ್ಷಿನೃಪತಿ ಶುಕಯೋಗಿಗಭಿನಮಿಸಿ ಕೇಳ್ದನಂದು
ಅವಧರಿಸು ಜೀಯ ಪೂರ್ವೋಕ್ತವಹ ಕರ್ದಮನ
ನವಸಂಖ್ಯ ಪುತ್ರಿಯರ ಚರಿತೆಯ ತದನ್ವಯದ
ಲವತರಿಸಿದವರ ಸತ್ಕಥನಮಂ ಸಂಕ್ಷೇಪದಿಂದೆ ಕರುಣಿಸುವುದೆನುತ ೨

ತಿಳಿ ನರೇಶ್ವರ ಕರ್ದಮನ ಪುತ್ರಿಯರ ವಂಶ
ಬೆಳವಿಗೆಯನೆನಿತು ಬಣ್ಣಿಪೆನಚ್ಯುತಂ ತಾನೆ
ತಳೆದನವತಾರಂಗಳನ್ನವರ ಸಂತತಿಯಲಂತು ವಿಧಿರುದ್ರರುಗಳು
ಬೆಳಗಿದರ್ಲೀಲೆಯಿಂದವತರಿಸಿ ಮತ್ತೆ ತ
ನ್ನಳಿನಾಕ್ಷನುನ್ನತಿಯನಾನ್ವ ಸತ್ಪುರುಷರ್ಗ
ಳಿಳಿದರಮಿತರ್ಗಳಾ ಸಂಗತಿಯ ಸಂಕ್ಷೇಪದಿಂದೊರೆವೆ ಕೇಳ್ವುದೊಲಿದು ೩

ಅಂಗನೆಯರೊಳ್ ಮರೀಚಿ ಬ್ರಹ್ಮನಿಂಗಿತ್ತ
[1]ಕಿಂ[1]ಗಳೆಯ ಗರ್ಭದಿಂ ಕಶ್ಯಪನು ಜನಿಸಿದಂ
ತಂಗಿಯಾತಂಗೆ ಪೂರ್ಣಿಮೆಯೆಂಬಳುದಿಸಿದಳ್ ತತ್ಕಶ್ಯಪನ ವಂಶಮೆ
ವಿಂಗಡಸಲೇನು ವಸುಮತಿ ಸೂರ್ಯಶಕ್ರರು ಭು
ಜಂಗ ಪಶುಪಕ್ಷಿಯೋಷಧಿ ಕೀಟ ಸುರ ನರ ಕು
ಲಂಗಳುಂ ಯಕ್ಷರಾಕ್ಷಸ ಮುಖ್ಯನಿಖಿಲಮುಂ ಕಶ್ಯಪನ ಸಂತತಿಯಲೇ ೪

ರಾಯ ಕೇಳತ್ರಿಮುನಿವರಗಿತ್ತ ವಿಮಲಾನ
ಸೂಯೆಗಂ ಮೂರು ಮೂರ್ತಿಗಳೊಲಿದು ಸುತರೆನಿಸಿ
ಜಾಯಮಾದರ್ಪೇಳಲೇನೆನಲ್ ವರಪರೀಕ್ಷಿದ್ರಾಜನಾಶ್ಚರ್ಯದಿಂ
ಜೀಯ ಬಿನ್ನಹ ಜಗತ್ಕಾರ್ಯ ಕಾರಣದ ಗುರು
ವಾಯೆಯಂ ಮೆರೆವ ಪಾವನ ಪುರುಷರತ್ರಿಯನ
ಸೂಯೆಯರ್ಗೆಂತು ಸುತರಾದರಾ ಕಥನಮಂ ವಿಸ್ತಾರದಿಂದೊರೆವುದು ೫

ಎನಲು ಕೇಳೆಲೆ ಮಹೀಪಾಲ ಪದ್ಮಾಸನನ
ತನಯಾತ್ರಿಮುನಿವರಂ ಪಿತನಾಜ್ಞೆಯಿಂದೆ ನಿಜ
ವನಿತೆ ಸಹಿತೈದಿ ಋಕ್ಷಾದ್ರಿತಟದೊಳಗೆ ನಿರ್ವಿಂಧ್ಯಾನದೀ ತೀರದ
ವನವನಾಶ್ರಯಿಸಿ ಪರ್ಣಾಂಬು ಪವನಾಧಾರ
ಘನನಿಯಮಮುನ್ನಾಂತು ದಿವ್ಯಶತವತ್ಸರವು
ವನಜಾಕ್ಷ ವಿಷಮಾಕ್ಷ ವಿಧಿರೂಪನಾಂತ ಪರಮೇಶನಂ ಭಾವಿಸಿದನು ೬

ಪೂಡಿ ಪದ್ಮಾಸನವನುರುಸುಷುಮ್ನಾ ನಾಮ
ನಾಡಿಯಂತರ್ಗತದ ಷಟ್ಚಕ್ರ ಸೋಪಾನ
ಜಾಡಿನಿಂದೇರಿ ಲಿಂಗಸ್ಥಲದಲೆಸೆವ ಸ್ವಾಧಿಷ್ಠಾನ ಕಮಲದೊಳಗೆ
ಮೋಡಿಯಿಂದಿಹ ವಿಧಿಯ ಬಗೆದು ನಾಭೀಸ್ಥಾನ
ಗೂಡಿರುವ ಮಣಿಪೂರಚಕ್ರಗತಹರಿಯ ಕೊಂ
ಡಾಡಿ ಹೃದಯ ಸ್ಥಳದಲಸದನಾಹತ ಚಕ್ರಗತ ಶಿವನ ಭಾವಿಸಿದನು ೭

೪. 1. ಏ.

ನಾದಸ್ವರೂಪನೇ ಬ್ರಹ್ಮ ಬಿಂದುವೆ ವಿಷ್ಣು
ವಾದಿವ್ಯಕಳೆಯೆ ಶಂಕರನೈಸೆ ಕಳೆಬಿಂದು
ನಾದಗಳ್ ಸಚ್ಚಿದಾನದಂಗಳವು ಪರಬ್ರಹ್ಮ ಸ್ವರೂಪಗಳಲೇ
ಆದಿಪುರುಷನ ಭಾವಿಸಲ್ ತತ್ಸ್ವಭಾವಂಗ
ಳಾದ ಮಲ ಸಚ್ಚಿದಂಶಕರಾದ ದ್ರುಹಿಣ ಮಧು
ಸೂದನ ಮಹೇಶ್ವರರ್ ಮೂವರ್ಗಳತ್ರಿಗಂ ಸುಪ್ರಸಂನತರಾದರು ೮

ಕಂಗಳಲ್ಲವು ಬರ್ಹಿಪಿಂಛಶೋಭಿತ ಚಂದ್ರ
ಕಂಗಳಲ್ಲದೆ ಶಬ್ದಮನ್ನರಿವ ಕರ್ಣಕುಹ
ರಂಗಳಲ್ಲಿವು ಮೆರೆವ ಗಿರಿಯ ದರಿಗರ್ತಕುಹರಂಗಳಲ್ಲದೆ ನೋಡಲು
ಅಂಗಮಲ್ಲಿದು ದಾರುನಿರ್ಮಿತದ ಪುತ್ಥಳಿವೆ
ಡಂಗಮಲ್ಲದೆ ತಿಳಿಯದೆಂಬಂತೆ ನಿರ್ವೃತ್ತಿ
ಸಂಗಡಿಸಿದವಯವಗಳಮರಿದತ್ರಿಯ ತಪೋನಿಯಮ ಬಲಮೇರ್ಗೊಂಡುದು ೯

ಈ ವಿಧದಲೊಪ್ಪಿರ್ದುದತ್ತ ಕೇಳ್ ವಿಧಿ ವಾಸು
ದೇವ ಶಂಕರರೊಂದುಗೂಡಿರ್ದ ಸಭೆಯೊಳಗೆ
ಭೂವಲಯದೊಳಗಗ್ಗಳದ ಪತಿವ್ರತೆಯರಾರೆಂಬೆಣಿಕೆ ಬರಲದರೊಳು
ದೇವಋಷಿ ನಾರದಂ ಬಿನ್ನವಿಸಿದಂ ಮನುಜ
ದೇವಾದಿಸತಿಯರೊಳಗತ್ರಿ ಸತಿಯನುಸೂಯೆ
ಗಾವರುಂ ಸರಿಯೆನಿಸರೆಸೆವ ಪತಿಶೀಲ ನಿಯಮಾದಿ ಸುಗುಣಗಳಲೆಸುತಾ ೧೦

ಎನಲಾ ತ್ರಿಮೂರ್ತಿಗಳ್ ಕೌತುಕವನಾಂತು ತ
ದ್ವನಿತೆಯಳ ಶೀಲಮಂ ಪರಿಕಿಸುವಡೆಂದತ್ರಿ
ಮುನಿಪನಾಶ್ರಮಕೆ ನಡೆತಂದರವರರಿದ ಕುಟಿಲ ವಿಪ್ರವೇಷಗಳನಾಂತು
ಅನುಸೂಯೆಯೊರ್ವಳಾಗಿರ್ದ ಕಾಲವ ನೋಡಿ
ಮನೆಗೆ ಬಂದಾವು ಬಳಲಿರ್ಪೆವನ್ನವನಿತ್ತು
ತನುವನುಳಿಸುವುದು ತಳುವಿಡಿದೆಮ್ಮ ಹರಣಂಗಳುಳಿವು ದುಸ್ತರವೆಂದರು ೧೧

ಆಹಹ ವಿಪ್ರರ್ಗಳಲಸಿದರಕಟ ತಳುವಿದಡೆ
ಬಹುದಲಾ ದೋಷವಾಮ್ನಾಯ ಸಂಮತಿಗಳೊಳ್
ಸಹಜವಿಷ್ಣು ಸ್ವರೂಪರ್ಗಳಭ್ಯಾಗತರೆನಲ್ ವಿಷ್ಣುರೂಪರಿವರು
ವಿಹಿತವಿೀಗಳೆ ತೃಪ್ತಿಗೈವೆನೆನೆ ಭಕ್ತಿಯಿಂ
ಮಹಿಳೆ ಷಡ್ರಸಗಳನ್ನನುಗೈದು ಮತ್ತವರು
ಕುಹಕ ವಿಪ್ರರ್ಗಳೆಂದರಿಯದುಣಬಡಿಸಲಾ ಮೂವರ್ಗಳಿಂತೆಂದರು ೧೨

ಮಡದಿ ಕೇಳೆವಗೊಂದು ನೇಮಮುಂಟದರನುವ
ನುಡಿಯಲಮ್ಮೆವು ಮಿೀರಿ ನುಡಿದೊಡಾಕೃತ್ಯವೊಡ
ಬಡುವುದೋ ನಿನ್ನ ಮತಿಗೆಂತು ಭಾವನೆಯಹುದೊ ನುಡಿಯದಿರೆ ತೀರದೆವಗೆ
ನುಡಿವೆವದ[1]ರನುವನುಂ[1] ಸಮ್ಮತಿಸಿ ಕಬಳಮಂ
ಕೊಡಲುಂಬೆವಲ್ಲದಡೆ ಪೋಪೆವಿನುಟ್ಟುದಂ
ಕಡೆಗಿರಿಸಿ ಬತ್ತಲುಣಬಡಿಸು ನೀಪತಿಶೀಲೆಯಾದಡಿದು ಹದನೆಂದರು ೧೩

ಎನಲು ಶಿವ ಶಿವ ಮಹಾದೇವ [1]ಹಸಿವಡಸಿದಾ[1]
ಮನುಜರಲ್ಲಿವರು ಪತಿಯಿಲ್ಲದವಸರದಲೆಂ
ಮನುವನಾರೈಯಲೈತಂದವರು ಸಂತರ್ಪಣೆಯನೆಸಗದಿವರ ಮತಕೆ
ಕನಲಿದಡೆ ಪೋಪರುಣ್ಣದೆ ಪೋಗಲದು ದೋಷ
ವೆನುತ ಪತಿಯಂ ನೆನೆದು ಮಂತ್ರೋದಕವ ತಳಿಯ
ಳನುವಿನಿಂ ಮೂವರುಂ ಶಿಶುಗಳಾದರು ಪತಿವ್ರತೆಯ ಸನ್ಮಹಿಮೆಯೆಂತೊ ೧೪

ಎಳೆರವೆಯ ಪಳಿವ ಬಾಲರ್ಗೆ ಪಾಲೆರೆದು ಕಂ
ಕುಳೊಳೆತ್ತಿ ಮುಂಡಾಡಿ ತೊಟ್ಟಿಲೊಳಗಿಟ್ಟು ಜೋ
ಗುಳವ ಪಾಡುತ ತೂಗುತಿರ್ದಳನಿತರಲಿ ಮುನಿವರನು ಮಂದಿರಕೆ ಬಂದು
ಪೊಳೆವರ್ಭಕರ ನೋಡಿ ವಿಸ್ಮಯವನಾಂತು ಹೆ
ಚ್ಚಳದಿಂದ ಪತ್ನಿಯಂ ಕೇಳ್ದನೀ ಡಿಂಭಕರ
ಸುಳುಹೆತ್ತಣದು ಪೇಳ್ವುದೆನಲು ಬಿನ್ನವಿಸಿದಳ್ ಪೂರ್ವೋಕ್ತ ಸಂಗತಿಯನು ೧೫

---

೧೩. 1. ರಿಂದಂತು, ೧೪. 1. ಕ್ಷುದ್ಬಾವತಿಯ.

ಕೇಳಿ ಪರಮಾನಂದ ಭಾಷ್ಪದೊಳ್ ಮುಳುಗಿ ಭ
ಕ್ತಾಳಿಯಂ ಪೊರೆಯಲೆನೆ ಗೌರಿರಮೆ ವಾಣಿಯರ
ನಾಳಿದವರೈತಂದ ಪರಿಯಾಗದಿರದೆಂದು ಕಣ್ಮುಚ್ಚಿ ಮುನ್ನಿನಂತೆ
ತಾಳಿದಂ ನಿಜ ಸಮಾಧಿಯನೊಳಗೆ ಭಾವಿಸುವ
ಮೂಲಮೂರ್ತಿಯ ಕಾಣದಂತು ಕಂದೆರೆಯಲಾ
ಬಾಲವೇಷದ ಮೂರುಮೂರ್ತಿಗಳ್ ನಿಜರೂಪನಾಂತು ತೋರಿದರಿದಿರಲಿ ೧೬

ನೀಲ ಧಾವಳ್ಯಗೌರಾಂಗಿಗಳ್ ಪುಷ್ಕರ ಕ
ಪಾಲ ಪುಸ್ತಕಹಸ್ತಶೋಭಿಗಳ್ ವರಚಕ್ರ
ಶೂಲ ಜಪಮಾಲಿಕಾಧಾರಿಗಳ್ ಫಣಿ ಕನಕಮಣಿ ಕುಂಡಲಶ್ರುತಿಗಳು
ಲೋಲವನಮಣಿ ಶಿರೋಮಾಲಗಳ್ ತ್ವಕ್ಕನಕ
ಚೇಲ ಪೀತಾಂಬರಾವರ್ತಿಗಳ್ ವಿಧಿ ವಿಷ್ಣು
ನೀಲಲೋಹಿತ ದಿವ್ಯಮೂರ್ತಿಗಳ್ ಪ್ರತ್ಯಕ್ಷವಾದರತ್ರಿ ಬ್ರಹ್ಮಗೆ ೧೭

ಆಂಗದೀಧಿತಿಗಳಂ ನೋಡಲೆವೆ ಕೋರವಿಸಿ
ಕಂಗಳಂ ಮುಗಿದು ಸಚಕಿತ ಲೋಮಹರ್ಷ ಬಾ
ಷ್ಪಂಗಳಿಂ ನೆನೆದು ಗದ್ಗದ ವಾಕ್ಯಸನ್ನುತಿಗಳಿಂದೊದಗಿ ತನುವ ಮರೆದು
ಗಂಗಾಸರಸ್ವತಿಯು ಯಮುನೆಯೊಡನೆಸೆದ ತ
ತ್ಸಂಗಮದ ಪರಿ ಮೂರು ಮೂರ್ತಿಗಳ ತನುಕಾಂತಿ
ಸಂಗಡಿಸಿ ಸವೆದ ಭೂತಳದಿ ನಿಜಕಾಯಮಂ ಹರಹಿದಂ ಕರವನಿಗುಚ ೧೮

ಜಯ ಪುರಾಂತಕ ಮುರಾಂತಕ ಬಲಾಂತಕ ಸೇವ್ಯ
ಜಯತುಮಾವರ ರಮಾವರ ಶಾರದಾಧಿವರ
ಜಯ ದರ್ಪಕಾರಿ ದನುಜಾರಿ ಭುವನಾಧಾರಿ ಜಯ ಶಿವಾಬ್ಜಾಸನ ಹರಿ
ಜಯತು ಭೂಪತಿ ಭೂತಪತಿ ಸಿರ್ಜಗಾಧಿಪತಿ
ಜಯ ಪಂಚಮುಖ ಚತುರ್ಮುಖ ಸರ್ವತೋಭಿಮುಖ
ಜಯತು ಶಿಖಿನೇತ್ರ ಶುಭನೇತ್ರ ಸರಸಿಜನೇತ್ರ ಸಲಹೆಂದು ಪೊಗಳ್ದನಂದು ೧೯

ಒಂದು ಸುಪ್ರಣವ ವರ್ಣತ್ರಯಗಳಾದಂತೆ
ಬಂದೆನಿಪ ನಿಗಮು ವೇದತ್ರಯಗಳಾದಂತೆ
ಒಂದಗ್ನಿಹೋತ್ರ ವಹ್ನಿತ್ರಯಗಳಾದಂತೆ ಒಂದು ಮೂಲ ಪ್ರಕೃತಿಯೇ
ಬಿಂದು ನಾದವು ಕಳೆಯು ಮೂರು ರೂಪಾದಂತೆ
ಒಂದು ಸಗುಣವೆ ಮೂರುಗುಣದೇಳ್ಗೆಯಾದಂತೆ
ಒಂದು ಚಿದ್ಬ್ರಹ್ಮವೇ ಮೂರುರೂಪಿಂ ಪ್ರಸನ್ನತೆಯಾದುದೆವಗೆಂದನು ೨೦

ಈ ರೀತಿಯಿಂ ಪೊಗಳುವತ್ರಿಯನಸೂಯೆಯರ
ಮೂರು ಮೂರ್ತಿಗಳು ಮನ್ನಿಸಿ ನುಡಿದರಾವು ಯೀ
ನಾರಿಯ ಪತಿವ್ರತವ ಪರಿಕಿಪ ವ್ಯಾಜಧಿಂ ನಿನ್ನಯ ತಪೋನಿಷ್ಠೆಯ
ದಾರಾಢ್ಯದಿಂದೊಲಿದು ಭವದೀಯ ವಾಂಛಿತವ
ಪೂರವಿಸಲೈತಂದೆವಿರ್ವರ ಮನೋಗತದ
ಮೇರೆಯನ್ನುಸುರಲೊದಗಿಪೆವೆನಲ್ ವಾಂಛೆಯನ್ನನಸೂಯೆ ನುಡಿದಳೆಂದು ೨೧

ಮುಂಬರಿದ ವೈರಾಗ್ಯಮೇರೆಯಿಂ ನಿಮ್ಮಯ ಪ
ದಾಂಬುಜವ ನೆನೆದು ಕಾಲವ ಕಳೆವರಿಂಗೊಲಿದು
ಡಿಂಭಕರ ರೂಪುದೋರ್ಪಡಿಸಿ ಮೋಹಕಗೊಳಿಸಿ ಕೂಡೆಯುಪಸಂಹರಿಸಲು
ಅಂಬಕ ಮನೋವೃತ್ತಿಗಳ್ ನಿಮ್ಮ ಶಿಶುರೂಪ
ಮಂ ಬಗೆದು ಮರಳವದರಿಂ ಮೂವರೆನ್ನಗ
ರ್ಭಾಂಬುಧಿಯಲವತರಿಸಬೇಹುದೆನಲೊಲಿದು ವರವಿತ್ತರಾ ಪತಿಶೀಲೆಗೆ ೨೨

ವನಿತೆ ಕೇಳ್ ನಿನ್ನ ನೇಮಕೆ ಮಚ್ಚಿ ಮೂವರುಂ
ತನುಜತ್ವದತ್ತರಾದೆವು ಲೋಕಹಿತಕೆ ಸಂ
ಜನಿಸುವೆವು ನಿಮಗೆ ಸುತರ್ಕಾಗಿ ಕಾಲಾಂತರದಲೆನುತ ವಿನಯೋಕ್ತಿಯಿಂದೆ
ಅನಸೂಯೆಯತ್ರಿಯರ ಹರಸಿ ಲೋಕದಿ ನಿಮ್ಮ
ನೆನೆವ ಸತಿಯರ್ಗೆ ಪತಿನಿಯಮಫಲ ಶುಭ ವಿಭವ
ಮನುಗೂಡಲೆಂದು ವರಮನ್ನಿತ್ತು ಸೈವರಿದರಭ್ರಪಥಮಂ ಬೆಳಗುತ ೨೩

ಧಾತ್ರೀಶ ಕೇಳು ಕಾಲಾಂತರವು ಸವೆದ ಮೇ
ಲತ್ರಿ ನಯನಗಳಲವತರಿಸಿದಂ ಬ್ರಹ್ಮ ಜೈ
ವಾತ್ರರೂಪಿಂದೆ ದೂರ್ವಾಸಾಖ್ಯೆಯಿಂದಲವತರಿಸಿದಂ ಗಿರಿಜೇಶನು
ಪತ್ರಿವಾಹನ ಮೂರುಮೂರ್ತಿ ರೂಪಿಂದೆ ದ
ತ್ತಾತ್ರೇಯವೆಸರಲವತರಿಸಿದಂ ಮೂವರುಂ
ಪುತ್ರರೆನಿಸಿದರತ್ರಿಯನಸೂಯೆಂಬರ್ಗೆ ಶರಣರ ಮಹಾಮಹಿಮೆಯೆಂತೊ ೨೪

ವೊಳಗಿದವು ದೇವದುಂದುಭಿ ವಾದ್ಯ ಮಂದಾರ
ಮಳೆಯು ಕರೆದರ್ಸುರರು ಸಕಲ ಸನ್ನಾಹದಿಂ
ದಿಳಿತಂದು ಕಂಡರಿಂದ್ರಾದಿ ದಿಕ್ಪಾಲಕರ್ಭುವನಮೇ ಹೆಚ್ಚಳಿಸಲು
ಬೆಳಗಿದವು ಪತ್ತು ದೆಸೆಗಳ್ ಚರಾಚರಕೆ ಮಂ
ಗಳಮಹೋತ್ಸವವಾದುದಖಿಲ ಋಷಿಗಳ ತಪೋ
ಬೆಳೆಗೆ ಜೀವನರೂಪನಾಂತು ಭೂವಲಯದೊಳ್ ದತ್ತಹರಿಯವತರಿಸಲು ೨೫

ಇಂತಖಿಲ ದೇವತೆಗಳಮಲ ಮುನಿವರರು ದನು
ಜಾಂತಕನ ರೂಪ ದತ್ತಾತ್ರೇಯನಂ ಕಂಡು
ಮುಂತಳೆದರಿತ್ತ ಹೈಹಯ ಮುಖ್ಯ ಬಹು ಶಿಷ್ಯವರ್ಗಮಂ ಕರುಣದಿಂದೆ
ಸಂತವಿಸಿ ಸಂಸಾರಬಂಧನವ ಪರಿವ ವೇ
ದಾಂತವಿಜ್ಞಾನಯೋಗಂಗಳುನ್ನತಿಯ ಬಲಿ
ದಂತರಂಗದ ಮಲಿನಮನ್ನೊರಸಿಪೊರೆವನಾ ದತ್ತಹರಿಯರಿದೆನಿಸಲು ೨೬

ಭೂಪಕೇಳಚ್ಯುತಂ ಲಸದತ್ರಿಮುನಿಗೊಲಿದು
ರೂಪಿಸಿದ ವಿಮಲ ದತ್ತಾತ್ರೇಯನವತಾರ
ದಾ ಪುಣ್ಯಕಥನಮಿದು ಮತ್ತೆ ಕೇಳಂಗಿರಸನಿಂಗಿತ್ತ ಶ್ರದ್ಧೆಯೆಂಬ
ರೂಪವತಿಯುದರದಿ ಬೃಹಸ್ಪತಿಯು ಜನಿಸಿ ಮೇ
ಲಾಪರಮ ದೇವಗುರುವೆನಿಸಿದಂ ಕುವರಿಯರು
ದೀಪಿಸಿದರಂಗಿರಸಗಂ ಶಿನೀವಾಲಿ ರಾಕಾ ಕುಹುಗಳೀ [1][ಮೂವರು][1] ೨೭

---

೨೭ 1 ನಾಲ್ವರು

ಬಳಿಕವೆ ಪುಲಸ್ತ್ಯನಿಂಗಿತ್ತಾ ಹವಿರ್ಭವೆಸ
ರಳವಟ್ಟಳುದರದಲಗಸ್ತ್ಯನುಂ ವಿಶ್ರವಸು
ನೆಳವಿನವರುದಿಸಿದ ರ್ವಿಶ್ರವಸುವಿಂದಲಿಲಬಿಲೆಯೆಂಬ ಸತಿಯುದರದಿಂ
ಸುಳಿದಂ ಕುಬೇರನಿಲಬಿಲೆಯ ಸಾಪತ್ನಿ ಹೆಂ
ಗಳ ರನ್ನೆ ಕೈಕಸೆಯ ಗರ್ಭದಿಂದುದ್ಭವಿಸಿ
ಬೆಳಗಿದರ್ಸುತರು ರಾವಣಕುಂಭಕರ್ಣರು ವಿಭೀಷಣರ್ವಿಖ್ಯಾತಿಯಿಂ ೨೮

ಸುತನೆ ಕೇಳ್ಕೆ ವಶಿಷ್ಠಂಗಿತ್ತ ಲಸದರುಂ
ಧತಿಯ ಗರ್ಭದಿ ಚಿತ್ರಕೇತು ಶಕ್ತಿ ಸುರೋಚಿ
ಮತಿಯುತ ವಸುಧ್ಯಾನನುಲ್ಬಣನು ಮೇಣಂಶುಮತರೆಂಬ ನೆಳವಿನಿಂದೆ
ಸುತರರುವರುದಿಸಿ ತತ್ಸಂತತಿಯ ಬೆಳವಿಗೆಯ
ಮಿತಿಗೊಂಬಡಾರದಂತಿರಲಿ ಸೃಷ್ಟಿಸಿದ ವಾ
ಕ್ಪತಿಗೆ ಗೋಚರವೊ ಮೇಣ್ ಗೋಚರವದಿಲ್ಲವೊ ವಶಿಷ್ಠಸಂತತಿ
ಯಳತೆಯು ೨೯

ಮತ್ತೆ ಪುಲಹಂಗಿತ್ತ ದಿವಿವೆಸರ ಸರಸಾಂಗಿ
ಪೆತ್ತಳು ಸಹಿಷ್ಣು ವರ್ಯಾಂಶು ಧರ್ಮಗ್ಗಳೆಂ
ದುತ್ತಮಮೂರ್ವರಾತ್ಮಜರನಿನ್ನಾ ಕ್ರತುವಿಗಿತ್ತ ಸುಮತಿಯ ಗರ್ಭದಿ
ಮಿತ್ತುವಂ ಜರಿದ ಸಿದ್ಧಿಯನಾಂತ ತನಯರರು
ವತ್ತುಸಾವಿರರೇಕದಿಂ ವಾಲಖಿಲ್ಯಪೆಸ
ರ್ವೊತ್ತು ತ್ರಿಜಗತ್ಪೂಜ್ಯರೆನಿಸಿ ಬೆಳಗಿದರಿಳೆಯನೇವೇಳ್ವೆನದ್ಭುತವನು ೩೦

ಅರಸ ಕೇಳ್ಕೆ ಧರ್ಮನಿಂಗಿತ್ತ ಶಾಂತಿಯೆಂ
ಬರಸಿಯಿಂದವೆ ಧೃಢವ್ರತ ದಧೀಚಿಗಳೆಂಬ
ಪುರುಷರುದಿಸಿದರು ಭೃಗುಮುನಿಗಿತ್ತ ವಿಖ್ಯಾತಿಯೆಂಬ ಸತಿಯಳ ಗರ್ಭದಿ
ಹರಿಪತ್ನಿ ಭಾರ್ಗವಿಯು ಜನಿಸಿದಳ್ ಶುಕ್ರನವ
ತರಿಸಿದ ವಿಧಾತ ಧಾತರ್ಗಳುದ್ಭವಿಸಿದ
ರ್ವರ ಮೇರು ಪುತ್ರಿಯರು ವಿಯತಿಯಯತಿಯರೆ ಧಾತವಿಧಾತರಿಗೆ
ಸತಿಯರು ೩೧

ತದನಂತರದಲಯತಿವಿಯತಿಯರ ಗರ್ಭದಿಂ
ದುದಿಸಿದಪ್ರಾಣನು ಮೃಕಂಡುವೆಂಬಾತ್ಮಭವ
ರದರೊಳ್ ಮೃಕಂಡುಸಂಭೂತ ಮಾರ್ಕಂಡೇಯ ಪ್ರಾಣಜಂ ವೇದಶಿರನು
ಇದುವೆ ಕರ್ದಮನ ದೌಹಿತ್ರಸಂತತಿಗಳ
ಭ್ಯುದಯಸಂಗತಿಯು ಮೇಲೆನಿಸಿತು ಬಣ್ಣಿಸಲಿ ಬಿಡ
ದೊದರುತಿದೆಲಾ ಕರ್ದಮೇನ ಪ್ರಜಾಭೂತಮೆಂದೆನುತ ವೇದಮುತದಿ ೩೨

ಅವನೀಶ ಕೇಳಿದುವೆ ದೇವಹೂತಿಯು ಪಡೆದ
ನವಪುತ್ರಿಯರ ವಂಶಸಂಗತಿಯು ಮತ್ತೆ ಮನು
ಯುವತಿ ಶತರೂಪೆಯುಳ ಪುತ್ರಿ ಪ್ರಸೂತಿಯುಳ ವಂಶಪಾರಂಪರೆಯನು
ವಿವರಿಸುವೆ ಕೇಳಾ ಪ್ರಸೂತಿಗಂ ದಕ್ಷನಿಂ
ದವತರಿಸಿದವರು ಷೋಡಶಸಂಖ್ಯ ಪುತ್ರಿಯರ
ಹವಣಿನಭ್ಯುದಯಮಂ ಹರಿಯೆ ತಾನವತಾರಮಂ ತಳೆದನವರ ಕುಲದಿ ೩೩

ಈ ತೆರದ ಹದಿನಾರ್ವರೊಳ್ ಮೈತ್ರಿ ಪುಷ್ಟಿ ಮೇ
ಧಾ ತುಷ್ಟಿ ಶಾಂತಿ ಕ್ರಿಯಾ ಬುದ್ಧಿಯುನ್ನತಿ
ಪ್ರೀತಿ ವಿಶ್ರದ್ಧಾ ತಿತಿಕ್ಷಾ ದಯಾ ಮೂರ್ತಿ ಪೆಸರಾಂತ ಹದಿಮೂರ್ವರಂ
ಧಾತನಾಜ್ಞೆಯನಾಂತು ಧರ್ಮರಾಜಂಗಿತ್ತ
ನಾ ತಪೋನಿಧಿಯಪ್ಪ ಮನುವದರಿನೊಳ್ ವಿಷ್ಣು
ತಾ ತಳೆದನವತಾರಮಂ ಮೂರ್ತಿಯುಳಲಿ ನರನಾರಾಯಣಾಖ್ಯೆಯಿಂದೆ ೩೪

ಅವಿಗಳ ಶ್ರದ್ಧೆಯಿಂದಾ ಮೂರ್ತಿಯೆಂಬವಳ್
ವಿವಿಧೋಪಚಾರ ಸದ್ವ್ರತನಿಯಮದಿಂ ರಮಾ
ಧವನ ಮೆಚ್ಚಿಸಲಾಕೆಗಂ ಸುಪ್ರಸನ್ನನಾಗುತ ನಿನ್ನ ವಾಂಛೆಯನುಮಂ
ವಿವರಿಸೆಂದೆನಲು ಸುತನಾಗಿ ಸುತನಾಗಿ ನೀ
ನವತರಿಪುದೆನ್ನ ಗರ್ಭದಲೆನುತ್ತೆರಡು ವಾ
ಕ್ಯವ ಸೂಸಲಾಗ ನರನಾರಾಯಣಾಖ್ಯೆಯಿಂದೆರಡು ರೂಪಿಂ ಪೊಳೆದನು ೩೫

ಮೋಕ್ಷಲಕ್ಷ್ಮಿಯ ಬಾಹುಯುಗ್ಮಮೆನೆ ನೆರೆ ಬೆಳಗು
[1]ವ್ಯಕ್ಷರ ಬ್ರಹ್ಮನಯನಂಗಳೆನೆ ಪರತತ್ತ್ವ
ಪಕ್ಷಿಯ ವಿಶಾಲಪಕ್ಷಂಗಳೆನೆ ಯೋಗ ವೇದಾಂತ ಮಸ್ತಕಗಳೆನಲು
ಈಕ್ಷಿಸಲ್ ಚಿಜ್ಜ್ಯೋತಿಯುಗಳಮೆನೆ ಸನ್ನಿಗಮ
ಸುಕ್ಷೀರ ನಿಧಿಜ ಶಶಿಸುಧೆಗಳೆನೆ ಲೋಕ ಸಂ
ರಕ್ಷಣ ವ್ಯಾಜದಿಂದವತರಿಸಿದಂ ವಿಷ್ಣುವೊರ್ವನೆರಡಾಕೃತಿಯೊಳು ೩೬

ಶಶಿ ಚಂದ್ರಿಕೆಗಳಂತೆ ಪೂ ಪರಿಮಳಗಳಂತೆ
ಮಿಸುನಿ ಬಣ್ಣಗಳಂತೆ ವಹ್ನಿಯುಷ್ಣಗಳಂತೆ
ವಸನ ತಂತುಗಳಂತೆ ರವಿ ಮಯೂಖಗಳಂತೆ ವಾರಿ ಶೀತಳಗಳಂತೆ
ಪೊಸ ಸಕ್ಕರೆಯು ಮಧುರಮೆಂಬಂತೆ ಸದ್ಗಾನ
ರಸವು ನಾದಗಳಂತೆ ತಿಳಿಯಲೊಂದೆರಡೆನಿಸಿ
ಪೆಸರುಗೊಂಬಂದದಿಂ ವಿಷ್ಣುವೆರಡಾಕೃತಿಯನಾಂತು ಪರಿಶೋಭಿಸಿದನು ೩೭

ಸುರರು ಪೂವಳೆಗರೆಯೆ ಸಾಧುಸನ್ನುತಿ ಮೆರೆಯೆ
ನರರೊಲಿದು ಕೊಂಡಾಡೆ ನಾರದಾದ್ಯರ್ಪಾಡೆ
ಧರೆಗೆ ಸಂತಸಮೆರಗೆ ದುಷ್ಟರೇಳಿಗೆಯಣಗೆ ಕಲುಷದುನ್ನತಿಕೆ ಕರಗೆ
ಹರುಷದೊಬ್ಬುಳಿ ಮೊಳಗೆ ಪತ್ತುದೆಸೆಗಳ್ ಬೆಳಗೆ
ನರಕಪಥಗಳ್ ಮುಸುಳೆ ನಾಕಸಂಭ್ರಮ ನೆಗಳೆ
ಹರಿಯ ನಿಜರೂಪು ಯುಗಮವತರಿಸೆ ಸಂಪದಗಳೇರ್ಗೊಂಡವತಿಶಯಮೆನೆ ೩೮

ಅಷ್ಟ ದಿಕ್ಪಾಲಕಜಾಬಾಲ ಗೌತಮ ವ
ಶಿಷ್ಠಾದಿ ಮುನಿವರರ್ಸನಕಾದಿ ಯೋಗಿಗಳ್
ಸ್ರಷ್ಟ ಮುಖ ವೃಂದಾರಕಾದಿಗಳ್ ನಿಖಿಲ ತಾಪಸಯಕ್ಷ ಕಿಂಪುರುಷರು
ನಿಷ್ಠೆಯಿಂದೈತಂದು ಕಂಡರನಿಬರ ಮನೋ
ಭೀಷ್ಟಮಂ ಸಲಿಸಿ ನಡೆತಂದು ಬದರೀವನದ
ಲಷ್ಟಾಂಗ ಯೋಗ ನಿರತರ್ಮುಂಡಿಸಿದರಾಗ ಶಿಷ್ಯಜನ ಗಡಣದಿಂದೆ ೩೯

---

೩೬ 1. ವಾ

ಯಮದಿಂದಲಿಂದ್ರಿಯವ ನಿಯಮದಿಂ ರಾಗಮ
ನ್ನಮರಿದಾಸನದಿಂದಲಂಗಮಂ ತಿಳಿಯಲಾ
ಕ್ರಮದಿ ಪ್ರಾಣಾಯಾಮದಿಂದ ವಾಯುವನು ಪ್ರತ್ಯಾಹಾರದಿಂ ಮನವನು
ವಿಮಲ ಸುಧ್ಯಾನದಿಂ ವಿಶ್ವಮಂ ಧಾರಣದಿ
ರಮಿಸಿ ಪುಸಿಮಾಯೆಯನ್ನೊಪ್ಪುವ ಸಮಾಧಿಯು
ದ್ಗಮತೆಯಿಂ ಮೃತ್ಯುವಂ ಜಯಿಸಿದಷ್ಟಾಂಗ ಯೋಗಾರೂಢರೆಸೆದಿರ್ದರು ೪೦

ಭೂತಪಂಚಕದನುವ ಪಂಚವಿಂಶತಿ ತತ್ತ್ವ
ಜಾತ ಲಯಗಳ ಪರಿಯ ಮೂರು ಗುಣ ಮೂರು ತನು
ವೀತೆರದ ತತ್ತ್ರಿಪುಟಿ ಭೇದ ಪದ್ಧತಿಗಳಂ ರವಿಚಂದ್ರಗತಿಗಳಿರವಂ
ಆತುಮ ಧ್ಯಾನ ಸಂಗತಿಗಳಂ ಮೆರೆವ ಜೀ
ವಾತುಮ ಪರಾತ್ಮರೈಕ್ಯಂಗಳಂ ಸನ್ಮೋಕ್ಷ
ರೀತಿಯಂ ಶಿಷ್ಯರ್ಗೆ ಬೋಧಿಸುತಲಿಂತು ಪಾವನರೂಪರೆಸೆದಿರ್ದರು ೪೧

ಮತ್ತಮಾತಿಯೆಂಬ ಲಸದರಣಿಗಂ ಶ್ರವಣಮಿ
ನ್ನುತ್ತರಾರಣಿಯಾಗೆ ಮನನವಹ ರಜ್ಜುವಂ
ಸುತ್ತಿಯೆ ನಿದಿಧ್ಯಾಸಮೆಂಬ ಮಥನವನೆಸಗಲದರಿನಿಂದವತರಿಸಿದ
ಚಿತ್ತುವೆಂಬಗ್ನಿಯಂ ಹುತಗೊಳಿಸಿ ಸಂಕಲ್ಪ
ವೃತ್ತಿ ಪಶುವಂ ವಧಿಸಿ ಕಾಮ್ಯಾಹುತಿಗಳನೊಲಿ
ದಿತ್ತು ಸನ್ಮುಕ್ತಿ ಸತಿಯಳ ನೆರೆವ ವಿಜ್ಞಾನ ಯಾಜ್ಞಿಕರ್ಶೋಭಿಸಿದರು ೪೨

ತರುಗುಲ್ಮ ಲತೆಕಾಷ್ಠಗಳಿಗೆ ವಾಙ್ಮನಸ ಮುಂ
ಗಿರಿಗಳ್ಗೆ ಚಿರತೆಯುಂ ಪಶುಪಕ್ಷಿಗಣಕೆ ಮುಂ
ಬರಿವ ಕೃತಕರ್ಮಫಲ ಭೋಗನಿರ್ಲೇಪಮುಂ ನದಿಗಳ್ಗೆ ನಿರ್ಮಲತೆಯುಂ
ಧರಣಿನಭಗಳ್ಗೆ ಸೂಕ್ಷ್ಮಮೆ ಸುಸ್ವಭಾವಮುಂ
ಪರಿಘಟಿಸಿ ತೋರ್ಪಂತೆ ಶಿಷ್ಯರ್ಗೆ ಬೋಧನೆಗ
ಳಿರದೆ ಪೂರ್ವೋಕ್ತ ಮಹಿಮೆಗಳೆಲ್ಲ ನೋಟ ಮಾತ್ರದಲಾದವತಿಶಯಮಲೇ ೪೩

ಪುಲಿಪುಲ್ಲೆಗಳ ಸರಸ ಗಜಸಿಹ್ಮಗಳ ಮೈತ್ರಿ
ಇಲಿವೆಕ್ಕುಗಳ್ಗೆ ಕೆಳೆ ಶುಕಶ್ಯೇನಗಳ್ಗೆ ಹಿತ
ಮೊಲನು ಶುನಕಗಳೈಕ್ಯ ಮೇಷವೃಕಗಳ ಸಂಗ ಸುರದೈತ್ಯರನ್ಯೋನ್ಯವು
ಬಿಲಶಾಯಿಗರುಡರಿಂಗನುರಾಗ ಕಾಕಕೋ
ಕಿಲರಿಗೊಪ್ಪುವ ನಂಟು ವನಮಹಿಷತುರಗಗಳ
ಕುಲಕೆ ಬಲಿದಿಷ್ಟತೆಗಳೀ ತೆರದ ನಿರ್ವೈರವಾಶ್ರಮದಲಾ ಮಹಿಮರ ೪೪

ಎಲ್ಲಿ ನೋಡಲು ವೇದವೇದಾಂತಸಂವಾದ
ಮೆಲ್ಲಿ ನೋಡಲು ಭಕ್ತಿವಿಜ್ಞಾನಗಳ ಮಥನ
ಮೆಲ್ಲಿ ನೋಡಲು ತಪೋನಿಷ್ಠೆ ವೈರಾಗ್ಯಜನಮೆಲ್ಲಿಯುಂ ಹರಿಕೀರ್ತನೆ
ಎಲ್ಲಿ ನೋಡಲು ಹವನ ಹೋಮ ಪೂಜಾನಿಯಮ
ಮೆಲ್ಲಿ ನೋಡಲು ಚತುಶ್ಯಾಸ್ತ್ರಪ್ರಸಂಗಮತಿ
ಯೆಲ್ಲಿ ನೋಡಿದಡು ಪರತತ್ವಾನುಸಂಧಾನವಾ ಮಹಿಮರಾಶ್ರಮದೊಳು ೪೫

ಈ ತೆರದಿ ಬದರಿಕಾಶ್ರಮದಿ ಮುನಿ ಜನಸಹಿತ
ಲಾತುಮಪರಾತ್ಮ ನರನಾರಾಯಣಾಖ್ಯರ್ಮು
ಹಾತಿಶಯರವಿಚಂದ್ರರೇಳ್ಗೆಯಿಂ ಬೆಳಗುತಿರಲವರ ಪ್ರಭಾವದಿಂದೆ
ಭೂತಳದಲನಿಬರುಂ ಮಾಯಾಂಧಕಾರಮಂ
ಧಾತುಗೆಡಿಸುತಲಮಳ ವಿಜ್ಞಾನ ಚಂದ್ರಿಕೆಯ
ಶೀತಳದ ಬಲುಹಿನಿಂ ಭವಬೇಗೆಯಂ ಜರಿದು ನಾಕಪದಮಂ ನೆನೆಯರು ೪೬

ಕಾಮದಿಂ ದೈವಯಜ್ಞವನೆಸಗಿ ಸುರಪುರದ
ಕಾಮಿನಿಯರಂ ನೆರೆವ ಕಾಂಕ್ಷೆಗಳನುಳಿದು ನಿ
ಷ್ಕಾಮದಿಂದವೆ ತಪೋಯಜ್ಞವನ್ನಾಚರಿಸಲದು ವಿವೇಕವನೊದಗಿಸಿ
ಆ ಮಹಾಖಂಡಪದಮಂ ಸಾರ್ಚಲದರಿನಿಂ
ದಾಮರುತ್ಪುರ ಮಾರ್ಗ ಮಸುಳಿಸಲ್ ಸುರರು ಮುಳಿ
ದಾ ಮಹಾತ್ಮಕರು ನರನಾರಾಯಣರ ತಪೋವಿಘ್ನಕಾಯತಮಾದರು ೪೭

ನೋಟಮಾತ್ರದಿ ತಪೋಧಾರಣೆಯ ಚಿರಮತಿಯ
ಹೂಟಮಂ ಕದಲಿಸುವ ವಶ್ಯ ಮೋಹನ ಕುಟಿಲ
ಮಾಟಗಳಲಮರಿರುವ ಮಣಿಮಂತ್ರ ಮಾಯಾವಿ ಮಹಿಮೆಗಳಲರಿದೆನಿಸುವ
[1]ಮಾ[1]ಟಗಾತಿಯರೊಳುರೆ ಪೆಸರ್ವಡೆದ ಸತಿಯರೊಳ್
ಕೋಟಿಗೊರ್ವರನಾಯ್ದು ಕುಸ್ತರಿಸಿ ಕಳುಹಲ್ ವ
ಧೂಟಿಯರ್ನಡೆತಂದರಾನು ತಾನೆನೆ ಸೂಳ್ಗಳಿಂ ತಪೋವಿಘ್ನಮತಕೆ ೪೮

ಪಂಚೇಂದ್ರಿಯಂಗಳಂ ಜಯಿಸಿ ನಿರ್ವಿಷಯ ಗುಣ
ಮಂಚಿಸಿದ ಮಹಿಮರಂ ನೆಲೆಗೆಡಿಸಲಂಗಜಂ
ಸಂಚಿಸಿರ್ದಮಲಾಸ್ತ್ರಗಳ ತೆಗೆದು ಪೊಸಮಸೆಯನಳವಡಿಸಿ ತಿರುಹುವಸೆನೆ
ಚಂಚಲ ಕಟಾಕ್ಷವೆಳಗೆಸೆದಿರಲ್ ಮುಂಗಾರು
ಮಿಂಚುವಳ್ಳಿಯ ಪಳಿವ ಮೈವೆಳಗು ಮುನಿಮೃಗಕೆ
ಪೊಂಚಿ ಬಿಗಿದೊಡ್ಡುವಲೆಯೆಂಬಿನಿಂ ಮುಂಬರಿಯೆ ಮೋಹಿನಿಯರೈತಂದರು ೪೯

ಪೊಗರೊಸರುವೆಳೆಮೈಯ ಸೊಂಪಿನಿನಿಗಂಪಿಗಂ
ಮುಗುರುವ ಮದಾಳಿರತಿಕೇಳಿಯಿಂ ತೊಂಡೆವ
ಣ್ಪೊಗರುಗಳ ಪೋಲ್ವ ಚೆಂದುಟಿಗಳಿತ್ತುಟಗಳಿಂಗಡಹಾಯ್ವ ಶುಕಪಿಕಗಳ
ಹೊಗರಿನಿಂ ಕೈಗಮಲದರಳಿಗಂ ಕೊರಳ ನೆರೆ
ನಿಗುರಿಚುತಲೇರ್ವ ಧವಳಾಂಗ ಹಂಸಂಗಳಿಂ
ತಿಗುರಿದ ಸುಗಂಧ ಪೊಸ ಕುಂಕುಮದ ಸಂಕುಮುದ ನೇತ್ರೆಯರ್ನಡೆತಂದರು ೫೦

ನುಡಿಗಳನುಸಂಧಾನ ಕುಸುಮಶರಸಂಧಾನ
ಕುಡಿನೋಟಗಳ ಹೊಳವು ವಿರ[ತಿ]ಮತಿ ಕಳವಳವು
ನಡೆಗಳುರು ಸುಮ್ಮಾನ ವಿಟರುಳುಮೆಗನು ಮಾನ ಕರಮೆ ಕಾದಲರಕ್ಕರ
ಬೆಡಗುಕುಚಗಳ ಚೆಲುವು ಮೌನಿಧೃತಿ ಚಂಚಲವು
ನಿಡುಗುರುಳ ವಿಭ್ರಮವು ನಿಯತಮತಿ ವಿಭ್ರಮವು
ತೊಡಗಲಾ ನಾರಿಯರ್ ತಾಪಸಜನಾರಿಯರ್ ತವಕದಿಂ ನಡೆತಂದರು ೫೧

---

೪೮. 1 ಜಾಟೆ

ಕಂಗಳಹ ಮೀನಗಳ ಕಂಠಕಂಬುಗಳ ದಂ
ತಂಗಳಹ ಮುತ್ತುಗಳನಧರ ಪವಳಗಳ ಕ
ರ್ಣಂಗಳಹ ಶುಕ್ತಿಗಳ ಕೈದಾವರೆಗಳ ಮೂವಳಿತೋಳ್ಗಳಹತರೆಗಳ
ಮುಂಗುರುಳ್ ಮಧುಪಗಳ್ ಮುಖಬಿಂಬಿಮಾದ ನೆರೆ
ದಿಂಗಳಂ ಬಾಯಿದೆರೆಯಮೃತಕಲಶಗಳ ಪಡೆ
ದಂಗನೆಯರಂಗಲಾವಣ್ಯಾಂಬುನಿಧಿ ಮೇರೆದಪ್ಪಿತೆನಲೈತಂದರು ೫೦

ಕರಣವಿಜಯರನೆಳೆವ ಪಾಶಗಳೊ ಕೇಶಗಳೊ
ಸ್ಮರನ ಮೊನೆಗಣೆಗಳಿಡೆಯಾಟಗಳೊ ನೋಟಗಳೊ
ವಿರಹಿಜನರಂ ಬಲಿವ ಕೋಳಗಳೊ ತೋಳುಗಳೊ ಸಾಧುಪಗೆಗಳೊ ನಗೆಗಳೊ
ನೆರೆ ಕಾಮುಕರ ಮೂಗುದಾಠಗಳೊ ಹಾರಗಳೊ
ಗರುವ ವಿಟನಿಕರ ಸಂಕೋಲೆಗಳೊ ವೋಲೆಗಳೊ
ವಿರತಿಜನ ವಿಸ್ಮಯದ ಸದನಗಳೊ ವದನಗಳೊ ಬಗೆಗೊಳಲ್ ಭಾಮಿನಿಯರ ೫೩

ಅಸಮ ತಾಪಸರಾಜ್ಯಸೂರೆಗಂ ಶ್ರುತಿಗಳಂ
ಬೆಸನ ಬೇಡಲು ಸನೀಹವ ಸಾರ್ದ ತೆರದಿ ರಂ
ಜಿಸುವ ಕರ್ಣಾಂತನಯನಂಗಳಿಂ ಮೊಗಶಶಿಯ ಸನ್ನಿಧಿಯಲೆಸಗಿ ನಿಂದ
ರಸಿಕರೋಹಿಣಿಯಂತೆ ಮೂಗುತಿಯ ಮಣಿ ವಿರಾ
ಜಿಸುತಿರಲ್ ವಿಟರ ಹೃತ್ಪದ್ಮಗಳ ಸೆಳೆದಂತೆ
ಬಿಸ ಕುಸುಮಗಳ ಪಿಡಿದು ಜಗ್ಗಿನಿಂ ನಡೆತಂದರಂಗನೆಯರರಿದೆನಿಸಲು ೫೪

ಉರದ ಮೇಲೊರೆವ ಮಣಿಪದಕಪದ್ಮಾನಂದ
ಕರಕಿರಣ ಸೋಕಿನಿಂ ಕುಚಕಮಲ ಕೋರಕಗ
ಳರಳಲ್ ವಿಲಾಸಕನುಗುಣಮಾಗದೆನುತಲಂಗಜನು ತತ್ಪ್ರತಿಕೂಲಮಂ
ವಿರಚಿಸುವಡಮಲ ಶಶಿರೋಚಿಯಂ ಪೊರಿಸಿರ್ಪ
ಪರಿಯಾಗದಿರದೆನಿಸುತಿರಲು ಚಂದ್ರಿಕೆಯಂತೆ
ಮೆರೆವ ಶುಭ್ರಚ್ಛವಿಯ ಕಂಚುಕಗಳನುರಿರಲ್ ನೀರೆಯರ್ನಡೆತಂದರು ೫೫

ನೊಗದಿಂಗಳಂ ಪಿಡಿಯಲೆನೆ ವೇಣಿಕಾಳಪ
ನ್ನಗನು ಹಿಂಭಾಗದಿಂದಡರುತಿರೆ ಕಂಡು ಮ
ಲ್ಲಿಗೆ ಬಾಣದಿಂ ಕಂತು ಮಾರ್ಗಮಂ ಬಿಗಿದನೆನೆ ಮುಡಿದ ಪೂಗುಚ್ಛಮಮರೆ
ಮಗುಳೆ ಮುಂಭಾಗದಿಂದೆಳವಾಸೆ ನೀಲಾಹಿ
ಹೊಗಲೇರುತಿರೆ ಮತ್ತೆ ಕುಚಮೆಂಬ ಸರಸಿಜಾ
ಸ್ತ್ರಗಳಿಂದ ತಡೆವನೆನೆ ಗಿಳ್ಕಿರಿವ ಗುರುಪಯೋಧರೆಯರ್ರೈತರುತಿರ್ದರು ೫೬

ನೊಸಲ ಸಿಂಧೂರ ವೃತ್ತಾಕೃತಿಯ ತಿಲಕಮಿ
ನ್ನೆಸೆವ ಪಡುಗಡೆಯ ರವಿಯರುಣಾಭಬಿಂಬಮೆನೆ
ಲಸದಧರ ಕಾಂತಿ ಸಂಧ್ಯಾರಾಗಮೆನಿಸುತಿರೆ ನೇತ್ರಕಜ್ಜಳ ಕಚಗಳ
ರಸುಮೆಗಳ್ ಬಲಿದ ಕತ್ತಲೆಯೆಂಬೊಲಮರೆ ರಂ
ಜಿಸುವ ಮೌಕ್ತಿಕ ಮಾಲೆ ತಾರೆಗಳ್ ಮೂಡೆ ಮುಖ
ಶಶಿಬಿಂಬಮೆನಿಸೆ ಹುಣ್ಣಿಮೆಯ ಸಾಯಾಹ್ನಸೂಚಕದಬಲೆಯರ್ನಡೆದರು ೫೭

ಗತಿಗಳ ವಿಚಿತ್ರಮನುಭವಿಗಳಾತ್ಮೈಕ್ಯ ಸಂ
ಗತಿಗೆಳೆವ ಚಿತ್ರಗಳನೆಳವುತಿರೆ ಪಟುಚಮ
ತ್ಕೃತಿಯ ಮೃದುನುಡಿಗಳಮರಿದ ನಿತ್ಯನಿಯಮ ಸತ್ಕೃತಿಗಳಂ ಮರಸುತಿರಲು
ಮತಿಯ ಮೋಹಿಸುವ ಮದನಾಗಮಮೆ ನಿಗಮ ಸ
ಮ್ಮತಿಗಳಹ ನುಡಿಗಳನ್ನೋಡಿಸಲ್ ಕುಡಿನೋಟ
ಮತಿರಹಸ್ಯದ ಲಕ್ಷ್ಯ ನೋಟಗಳನಣಗಿಸಲ್ ನಾರಿಯರ್ನಡೆ ತಂದರು ೫೮

ನರಸುರಾದ್ಯರನು ಜಯಿಸಿದ ಮಹಾಪ್ರಬಲೆಯರ
ನರಿಯದಬಲೆಯರೆಂದು ಕುಡಿನೋಟದಿಂದೆದೆಯ
ಕೊರೆವ ಕಠಿನಾತ್ಮಿಕೆಯರಂ ಕೋಮಲೆಯರೆಂದು ಮೃದುನುಡಿಯ ಸೊಬಗಿನಿಂದೆ
ನೆರೆಕೋವಿದರ ಮನವಸೆಳೆವ ಸುಪ್ರೌಢೆಯರ
ಬರಿದೆ ಮುಗ್ಧೆಯರೆಂದು ಬಣ್ಣಿಪರ ನಿರ್ಮಿಸಿದ
ಸುರಜ್ಯೇಷ್ಠ ಮುಗ್ಧತ್ವನೆನಿಸನೇ ಪೇಳೆನಲ್ ಬಗೆಗಾತಿಯರ್ಬಂದರು ೫೯

ಒಂದಿಹೆ ಸುವರ್ಣದೇಳ್ಗೆಯು ಪಡೆದ ನಿರ್ಜರಾ
ನಂದದೆಡವಾಗಿರ್ಪ ಮಿತ್ರಕರಪೀಡನೆಯ
ದಂದುಗವ ಸಹಿಸಿರುವ ಸಂತತಾಂಬರ ಚುಂಬಿಯೆನಿಸಿ ವಿಖ್ಯಾತಿ ಪಡೆದ
ಇಂದುರೇಖೆಯ ಬಳಸಿಲೊಪ್ಪಿರುವ ಮೇರುಗಿರಿ
ಯೊಂದ ವಹಿಸಿದ ಧರಣಿಗೆಣೆಯಿಲ್ಲವೆನಿಸಲದ
ರಂದವಾದೆರಡು ಕುಚಗಿರಿಗಳನ್ನಾಂತ ನಾರಿಯರಿಗಿನ್ನಿದಿರಿಪ್ಪುದೆ ೬೦

ಶಂಬರಾಂತಕನು ನಿಜ ಸಾಯಕಗಳಾದವೈ
ದಂಬ ಗಣಿಸದ ವಿರಕ್ತರ ಸೋಂಕಿಸಲ್ಕುರುಳ್
ಗೊಂಬ ಸಮ್ಮೋಹನ ರಸಾಯನವ ನಿಜತಪಶ್ಶಕ್ತಿಯಿಂ ಪಡೆದು ಮತ್ತೆ
ಅಂಬುಜಾಕ್ಷಿಯರ ಸುಂದರ ಪಯೋಧರ ಶಾತ
ಕುಂಭ ಕಲಶಂಗಳೊಳ್ ತುಂಬಿ ಬಾಯ್ಗಟ್ಟಿರ್ಪ
ನೆಂಬಿನಂ ಕಂಚುಕಗಳವರಿರಲ್ ಪೊಂಗಲಶಕುಚೆಯರೈತರುತಿರ್ದರು ೬೧

ಚಂಚರೀಕಗಳೆರಗಿ ವೊರೆವುದೆನೆ ಕಡುವಿರಹ
ಮುಂಚಿ ನೋಟಕರು ವ್ಯೆವುರೆವರೆನೆ ಲಾವಣ್ಯ
ಮಿಂಚಿದುರುಪೊಗರು ರಸವೊಗುವುದೆನೆ ಗತಿಗಳಿಂ ನಟಿಸಲಾ ಭಾರದಿಂದೆ
ಕೊಂಚನಡು ಬಳುಕಿ ಸೆಳೆಗೊಂಬುದೆನೆ ಹಂಸೆಗಳ್
ಪೊಂಚಿ ಯಡಹಾಯ್ವೊಡುಜ್ಜುಗಿಪವೆನೆ ಕುಚಗಳ್ಗೆ
ಕಂಚುಕವ ಬಿಗಿದ ಪರಿಯಲ್ಲದೊಡೆ ಲಸದಲಂಕಾರಕೋಸುಗವೆನಿಸದು ೬೨

ಕಂಗಳೋ ಸ್ಮರಸಾಯಕಂಗಳೋ ಕುಟಿಲಾಳ
ಕಂಗಳೋ ಚಂಚರೀಕಂಗಳೋ ಕುಚ ಕಂತು
ಕಂಗಳೋ ಚಕ್ರವಾಕಂಗಳೋ ಶ್ರುತಿಪತ್ರಿಕಂಗಳೋ ಗಿರಿಜೇಶನ
ಕಂಗಳೋ ಪಣೆಯ ತಿಲಕಂಗಳೋ ಜನವಶ್ಯ
ಕಂಗಳೋ ರದನಕುತುಕಂಗಳೋ ಕುಂದಕಲಿ
ಕಂಗಳೋ ವರನಾಸಿಕಂಗಳೋ ನವಚಂಪಕಂಗಳೋ ಯೆನಲೆಸೆದುದು ೬೩

ತಿಳಿಯಲಧರಾಮೃತ ಮರೀಚಿಗಳ್ ಸೂಸೆ ನಗೆ
ಬೆಳದಿಂಗಳೆಸೆಯೆ ನೋಳ್ಪರ ನೇತ್ರಕುವಲಯಂ
ಗಳು ಪೊರೆಯೆ ವಿರಹಿಜನ ಹೃಚ್ಚಂದ್ರಕಾಂತಗಳ್ ಕರಗೆ ಮೋಹಾಬ್ಧಿಯುಕ್ಕೆ
ಬೆಳವಿಗೆಯ ವಿಜಿತೇಂದ್ರಿಯರ ವದನ ಕಮಲಗಳ್
ಬಳಲೆ ಬಾಲೆಯರಾಸ್ಯ ಚಂದ್ರೋದಯವು ಸದಾ
ಬೆಳಗುತಿರೆ ಕಾದಲರ ದೃಕ್ಚಕೋರಗಳುಬ್ಬಿದಿಹವೆ ಪೇಳೆನಲೆಸೆದುದು ೬೪

ಬೆರಳ್ಬಿದಿಗಳಪ್ಪ ಚೆಳ್ಳುಗುರ್ಗಳಿಂ ಚೆಲ್ವಮುಂ
ಗುರುಳ್ವಿದ್ದುವುದೆ ಬಾಲಶಶಿಯ ಸೂಡ್ದಂತಿರಲ್
ತೆರಳ್ದ ನವ ಮಲ್ಲಿಕಾ ಮಾಲೆಯಂ ಮುಡಿದನುವೆ ಗಂಗೆಯಂ ತಳೆದಂತಿರೆ
ಅರಳ್ದ ಕೆಂದಾವರೆಯ ಪೋಲ್ವ ಕರತಳ ರುಚಿಯ
ಲುರುಳ್ದ ಕುಂತಲಮೆ ಕೆಂಜಡೆಯೆನಿಸೆ ಮೆರೆವ ಕರೆ
ಗೊರಳ್ಧೂರ್ಜಟಿಯ ಮಹಿಮೆಯುಮರಿಯುಂ ಮದನ ಸಹಕಾರಿ
ನಾರಿಯರೆಸೆದರು ೬೫

ನೋಟದಿಂದವೆ ಮಹಾಮುನಿಗಳ್ಗೆ ವಿರಹಮಂ
ನಾಟುವಂಗನೆಯರಿರಲ್ಕೈದಂಬುಗಳ ಪೊತ್ತು
ಕೋಟಲೆಯಲಲೆವ ಮನಸಿಜನ ಸ್ವರೂಪಮುದು ಹಾಸಿಯಹುದಾಶ್ಚರ್ಯಮೆ
ಕೂಟಮನ್ನೆಳಸೆ ರಂಭೋರುವಸಿ ಮಧ್ಯಕ್ಕೆ
ಹೂಟಕಂ ಸುಲಭದಿಂದೊದಗುತಿರೆ ಮುಖಗಳಂ
ಪಾಟಿಸುವ ಕಷ್ಟಮಂ ಬಲಿದ ವಿಧಿಗಂ ಪೂಜೆಯಿಹುದೆ ಪೇಳೆನಲೆಸೆದುದು ೬೬

ಬೆದರ್ವ ಕುಡಿನೋಟದಿಂ ಪುಸಿನಗೆಗಳಿಂ ಸುಗತಿ
ಗದುರ್ವ ಕುಚಯುಗಳದಿಂ ಜರಿವ ಸೆರಗಿಂ ನಡೆಗೆ
ಕೆದರ್ವ ಸಿರಿವಸನದಿಂ ಪುಸಿಲಜ್ಜೆಗಳ ವಲಸಿನಿಂ ಸಡಿಲ್ವ ಕಂಚುಕಗಳಿಂ
ಚೆದರ್ವ ಕುರುಳಂ ಸರಿಯಲೇರ್ದ ಭುಜಲತೆಗಳಿಂ
ಮದುರ್ವ ಮುಡಿವೂಗಳ ವಿಡಾಯೆಯಿಂ ತಾಪಸ್ಕ
ರಿದಿರ್ವಂದುತಳ್ಕೈಸುವ ತವಕಮನ್ನೇರ್ಗೊಳಿಸುತಬಲೆಯರ್ನಡೆತಂದರು ೬೭

ಕೊಬ್ಬಿದುರುಜವ್ವನಗಳುನ್ನತಿಯ ಮೊಗರುರಸ
ಮುಬ್ಬಿ ಮದವೇರಿ ಗಳಸರಸದಿಂದಿರ್ದರುರೆ
ತಬ್ಬಿ ಸೆಳಸುವ ಭಾವಮನ್ನೆಣಿಸೆ ಕಾಳಗವು ಬಲಿದ ಮದವಾರಣಗಳ
ನಿಬ್ಬರದ ಕುಂಭಸ್ಥಳಂಗಳೊಡವೆರದಂತೆ
ಗಬ್ಬರಿಸಿ ಬೆಳೆದ ಕುಚಕುಚಗಳೊಂದರಿನೊಂದ
ದಬ್ಬಿ ಸೆಳಸುವ ಪರಿಯು ನೋಳ್ಪ ನೋಟಕರು ಬಾಯ್ದೆರೆದು
ಮೈಮರೆಯದಿಹರೆ ೬೮

ಗಳಸರಸಮೂಂತ ಹೆಂಗಳ ನೋಡಿ ಕಾದಲರು
ಗಳ ವಿರಹತಾಪ ವೆಗ್ಗಳವಾಗಲಲಸಿ ಬಾ
ಯ್ಗಳ ನಿದ್ರ್ರವತ್ತ ಕೈಗಳ ಸನ್ನೆ ಮೈಬೆವರ್ಗಳ ಸಾರದೊರತೆಯಿಂದೆ
ಗಳ ಸೆಳೆಗಳೆಳೆಯೆ ನುಡಿಗಳ ಗದ್ಗದ ಸ್ವರಂ
ಗಳ ಸುಯಿಲ ತೀವ್ರ ಗತಿಗಳಲಿ ಯುವತಿಯರಂಗ
ಗಳ ಸಿರಿಗೆ ಬೆಚ್ಚ ಕಂಗಳ ಕಾಮುಕರ ಭವಣೆಗಳ ನೋಡುತ್ತೈತಂದರು ೬೯

ಸರಸ ಮತಿ ವಿಪುಲಹೃದ್ವೃತ್ತಿಗಳ್ ಚಪಲ ರತಿ
ವರಸೆಯೊಳ್ ವಲಪು ಮೈಗೊಡುವಲ್ಲಿ ಹೊಳಪು ಕು
ಸ್ತ್ರರಣೆಯುತಿಸೊಕ್ಕು ಕಾರ್ಯಂಗಳೊಳ್ ಠಕ್ಕು ನುಡಿಗಳು ಮಧುರ ಚಿತ್ರ ಕುಧರ
ಬೆರೆವೆಡೆಗೆ ತವಕ ಭಾವಿಸುವೊಡದು ಕುಹಕ ಮುಂ
ಬರದೊಳತಿ ನೇಹ ಬರಬರಲು ಸಂದೇಹಮಿಂ
ತೆರಗಿ ಕಾಮುಕರ ಬಂಧಿಪ ವಧೂನಿಕರವೈತರುತಿರ್ದರುಬ್ಬಿನಿಂದೆ ೭೦

ಹರನನಾಶ್ರಯಿಸಿ ಹಲಗಾಲಮಿರಲರ್ಧೇಂದು
ಪರಿಭವವು ಪರಿಯದಿರಲದನುಳಿದು ತದ್ವೈರಿ
ಸರಸಿಜಾಸ್ತ್ರನ ಸಾರ್ದು ತರುಣೀ ಮುಖವ್ಯಾಜದಿಂದೆ ಪೂರ್ಣೇಂದುವಾಗಿ
ಪೊರೆಯಲ್ಕೆ ಶಿವವಿಮುಖ ದೋಷಮೋ ಹೃದಯದೊಳ್
ಕರೆಗೊಂಡ ಭಾವಮಂ ತೋರ್ಪಡಿಸುವಂತೆ ಚಂ
ದಿರವದನೆಯರ ಪಣೆಯ ಕತ್ತುರಿಯ ಬಟ್ಟುಗಳ್
ತೋರ್ದವತಿಶಯಮೆನಿಸುತ ೭೧

ಪಕ್ಕಿದಂತಿರೆ ದೈನ್ಯ ಭಾವಮಂ ತೋರ್ಪಡಿಸಿ
ಠಕ್ಕುವಿನಯವ ವಹಿಸಿ ಕೊಸರಿ ಮೇಲ್ವಾಯ್ದು ಪೇ
ರ್ಗಕ್ಕಸ ಕುಚಂಗಳಿಂದೊತ್ತಿ ಬಿಗಿಯಪ್ಪಿ ಪುಸಿನಗೆಗಳಿಂ ಸೊಗಸುಗೊಳಿಸಿ
ತಕ್ಕೆ ಚುಂಬನ ಲಲ್ಲೆಗಳ ಹರಹಿ ಪಾರಿವದ
ಪಕ್ಕಿ ನುಡಿಯಾದಿಯಹ ಗಳರವಗಳಿಂ ವಿಟರ
ಸೊಕ್ಕಿಡಿಸಿ ಸರ್ವಮಂ ಕೋಳ್ಗೊಂಬ ವಾರನಾರೀ ನಿವಹ ನಡೆದುದಂದು ೭೨

ಮೀರಿ ಮುಳಿಸಿಂ ಪೋಪ ವಿಟರಿಗೆ ಪುನರ್ಮೋಹ
ಮೇರುಗೊಂಬಂತೆ ಪುಸಿದುಗುಡಮನ್ನಾಂತು ಕ
ಣ್ಣೀರೊರತೆಯನ್ನುಗುರ್ಗೊನೆಗಳಿಂ ಮಿಡಿದು ನಿನ್ನುಳಿದು ತನುವೇತಕೆಂದು
ಸಾರೆ ಬಿಸುಸುಯ್ದು ನಿಡುಸುಯ್ಲಿಂದೆ ಮೋಹಮ
ಸ್ಸೂರಿ ಮನ್ಮಥಪಾಶದಿಂ ಬಿಗಿದು ಸಕಲಮಂ
ಸೂರೆಗೊಂಡೊತ್ತರಿಸಿ ಕಳೆವ ಸಾಹಿತ್ಯಸನ್ನಿಹಿತೆಯರ್ಬರುತಿರ್ದರು ೭೩

ಕೂರುಮೆಯೊಳಣಿಮೆ ಕುಟಿಲದಿ ಮಹಿಮೆ ಪೆರೆವ ಗಂ
ಭೀರದೊಳ್ ಲಘಿಲಮೆ ಕುಹಕದಿ ಗರಿಮೆ ವಿತ್ತಾಪ
ಹಾರದೊಳ್ ಪ್ರಾಪ್ತಿ ಮೋಹಕದೊಳ್ ಪ್ರಕಾಮ ಸಂಗ್ರಹಿಕೆಯೊಳಗೀಶತ್ವವು
ಸಾರದೆಗೆವೆಡೆಯೊಳ್ ವಶಿತ್ವಮಿಂತಾಪಗ ವಿ
ಚಾರಿಸಿಪಡಷ್ಟಭೂತಿಗಳು ನೆಲೆಗೊಂಡಿರ್ಪ
ವಾರಸತಿಯರ್ಗೆ ಜನಮೊಲಿವುದೇನತಿಶಯಮೆ ಪೇಳಿನಲ್ನಡೆತಂದರು ೭೪

ವೇಸಿಯರ್ಕುಟಿಲ ಕರ್ಕಶ ಕೈತವಾದಿಗಳ
ರಾಸಿಯರ್ದಂಭಾನೃತಾದಿವಂಚನೆಯ ಸಹ
ವಾಸಿಯರ್ವಿತ್ತಮಂ ಪಿರಿದೀವರಾರವರ ದಾಸಿಯುರ್ಸವ್ರತಿಗಳ
[1]ಮೋಸದಿಂ[1] ಕಾಮತಂತ್ರಕೆ ಸೆಳೆವ ಮತದಲ
ಭ್ಯಾಸಿಯರ್ವಶ್ಯ ಮೋಹನಕೃತ್ರಿಮದ ನಿಜ ನಿ
ವಾಸಿಯರ್ಸೊಬಗು ವಿಭ್ರಮ ಮದನಕದನದ ವಿಲಾಸಿಯರ್ಬರುತಿರ್ದರು ೭೫

೭೫ 1. ಮೋಸೆಯುರ್

ಇಂತು ಪದೆಹಂಸಜಂಝಣಝಣತ್ಕಾರದಿಂ
ಕಾಂತೆಯರ್ನಡೆಯೆ ಕಣ್ಬೆಳಗು ತನುಗಂಧಗಳ್
ತೊಂತಿ ಬದರೀವನದ ತಾಪಸರ ಚಿತ್ತಗಳನೆಳೆದು ತನಿರಾಗರಸದ
ಭ್ರಾಂತಿಕೂಪದಲಿ ಕೆಡಹಲ್ಕೆ ನೆಟ್ಟಾಲಿ ಸಹಿ
ತಂತರಂಗಗಳಾರ್ದ್ರವಾಗಿ ಪೊದೆದಿರ್ದಜಿನ
ಕಂತೆಗಳ ಕೆಡೆನೂಕಿ ನಿಂದಿರ್ದರಂಗನಾಲಿಂಗನದ ಸೆಕೆಯನೆಳಸಿ ೭೬

ಅಂಗಲಿಂಗೈಕ್ಯಾತುರದ ನೆನಹು ಕೋಮಲೆಯ
ರಂಗಲಿಂಗೈಕ್ಯಾತುರದಲೆರಗೆ ಕೃತಕರ್ಮ
ಸಂಗರಹಿತತ್ವಮುಮರಿದ ಮತಿಯು ಪಂಚಶರಸಂಗರಹಿತಕ್ಕಮರಲು
ಸಂಗಡಿಪ ನಿಶ್ಚಲವಿರಾಗಮನಮುದುವೆ ರತಿ
ಸಂಗಮು ವಿರಾಗಮುನ್ನೈದಿರಲ್ ಘನ ಚತು
ಶ್ಶೃಂಗಗತ ಮತಿಯರಶ್ಶೃಂಗಗತನಾಗಿರಲ್ ಮುನಿಜನಮ್ಮುಂಗೆಡೆದರು ೭೭

ಪುಸ್ತಕಂಗಳ ಬಿಸುಟು ನಿಯಮ ಮೌನಂಗಳ ಪೆ
ರಿಸ್ತರಣಮುಂ ನೂಕಿ ದಂಡುಗೋಲ್ ಜಪಸರವೆ
ಹಸ್ತದಿಂ ಕೆಡೆವುತಿರೆ ಕಾಮಗರ ಮೋಹಿಸಲ್ ಮುಂಬರಿದು ತನುವ ಮರೆದು
ನ್ಯಸ್ತ ಲಜ್ಜೆಗಳಿಂ ಜಟಾಲುಠತ್ಕೇಶ ಬೋ
ಳ್ಮಸ್ತಕಂಗಳ ತಾಪಸರ್ಸತಿಯರೆಡೆಗಂ ಪ್ರ
ಶಸ್ತದಿಂ ಪರಿವುತಿರ್ದರ್ಕಾಮಿನಿಯರಿಗಂ ಬೆದೆಯದವರಾರಿಳೆಯೊಳು ೭೮

ಎಂದಿಗುಂ ತನ್ನ ಕೃತ್ಯವನೆಣಿಸದಿರ್ದ ಮುನಿ
ವೃಂದಮುಂ ಗೆಲ್ವಡಿಂದಿನ ಸಹಾಯವು ತನಗೆ
ಮುಂದೊದಗಲರಿಯದೀಕ್ಷಿಸಲಿದೇ ಸಮಯಮೆಂದಂಗನೆಯರಂಗರುಚಿಯಂ
ಬಂದು ಮರೆಗೊಂಡು ತಚ್ಚಂಚಲ ಕಟಾಕ್ಷ ತನು
ಗಂಧಂಗಳೆಂಬ ಸಮ್ಮೋಹನಾಸ್ತ್ರಂಗಳಿಂ
ಕೊಂದನೈಸಲೆ ತಾಪಸೋತ್ತಮರಸಡಿಗಡಿಗೆ ಸೊರಸೊರಗಿ ಮೈಮರೆಯಲು ೭೯

ಈ ತೆರದಿ ಪಿಂತೆ ಬಹ ಮುನಿಗಳಿಂ ಸಹಿತ ವಿಜ
ಯಾತಿಶಯಬಿಗುಹಿನಿಂದಬಲೆಯರ್ಬಂದು ಗೆ
ಲ್ವಾತುರದಲಾನು ತಾನೆಂದು ನರನಾರಾಯಣರ ಸಮೀಪವನು ಸಾರ್ದು
ಕಾತರತೆಯುಬ್ಬಲೆನೆ ನಿಡುಹಾಸ ದರಹಾಸ
ಗೀತ ನರ್ತನ ಲಲ್ಲೆ ನಸುಲಜ್ಜೆ ಮೊದಲೆನಿಪ
ಚಾತುರ್ಯಗಳ ಹರಹಿದ ಮೃಗಖಗಾದಿ ನಿಖಿಲಪ್ರಾಣಿಗಳ್ ಭ್ರಮಿಸಲು ೮೦

ಕೌತುಕಪ್ರತಿಹತವ್ಯಾಜದಿಂ ಮುಂಜೆರಗ
ನಂತರಿಸಿ ಗುರುಪಯೋಧರ ನಾಭಿ ಜಘನದೆಡೆ
ಯಂ ತೋರ್ಪಡಿಸಿ ತಮ್ಮೊಳೇ ತಾವುಗಳು ಸರಸಮಾಂತು ಸೆಳಸುವ ನೆವದೊಳು
ತೊಂತಿ ನುಣ್ದೊಡೆ ಗುರುನಿತಂಬ ಕಟಿಮೊದಲೆನಿಸು
ವಂತರಂಗಸ್ಥಾನಗಳನು ತೋರಿಯು ತೋರ
ದಂತೆ ಕಾಣ್ಬಡಿಸಿ ಮೋಹನ ಕುಟಿಲ ಜಾಟಿಗಳನನಿತುವನ್ನನುಗೈದರು ೮೧

ಪೀಯೂಷಕರಕುಲಾಧೀಶ ಕೇಳ್ ತರುಗಿರಿಗ
ಳೀಯುಭಯಕುಲಗಳುಂ ಸ್ಥಾವರಗಳೆನಿಸಿರಲ್
ವಾಯುಘಾತಕೆ ವೃಕ್ಷಶಾಖೆಗಳ್ ಚಲಿಪಂತೆ ಗಿರಿಯ ಕೊಂಬುಗಳೊಲೆವುವೆ
ತೋಯಜಾಕ್ಷಿಯರ ಕೃತ್ಯಕೆ ಬಡವಿರಾಗಿಗಳ್
ದಾಯದಪ್ಪಿದರೆ ನರನಾರಾಯಣರ್ಗಳಾ
ಮಾಯೆಗೊಳಗಹರೆ ತರುಣಿಯರ ಬರವನ್ನರಿದು ನುಡಿಸಿದಮರ್ಗುಳು
ನಗೆಯಿಂ ೮೨

ಮಾನಿನಿಯರಿರ ನಿಮ್ಮ ಬರವೆತ್ತಣಿಂದಲೀ
ಕಾನನಕ್ಕೈತಂದ ಕಜ್ಜಮಾವುದು ವಿಗತ
ಮಾನಸರ್ಲಜ್ಜೆಯಿಂದಂಗ ಮರ್ಮಗಳ ಕಾಣ್ಬಡಿಪ ವಿಪರೀತಮೇನು
ಈ ನಿದಾನವನೊರೆವುದೆನಲು ತರುಣಿಯರು ದು
ಮ್ಮಾನದಿಂ ಜಯಕಾಂಕ್ಷೆಯನ್ನುಳಿದು ಕುಂದುತ ಮ
ಹಾನುಭಾವರಿರ ನಿಮ್ಮಂಗಸಂಗವನೆಳಸಿ ಬಂದೆವಿದು ಹದನೆಂದರು ೮೩

ಬಲಿದ ತೇಜೋನ್ನತಿಯು ಸತಿಯರ್ಗೆ ಯುವ ಪುರುಷ
ರೊಲಿವರಲ್ಲದೆ ನಿಮ್ಮ ಸರಿಸದ ಕುರೂಪಿಗಳಿ
ಗೊಲಿದು ಕೂಡುವರಾರು ಪಂಜರ ನಿವಾಸಮಂ ಬಕನೆಳಸಲೆಂತಹುದೆನೆ
ಲಲನೆಯರ್ಭಿನ್ನತೆಯನಾಂತು ನುಡಿದರು ನಮ್ಮ
ಚೆಲುವಿಗಿಂದುನ್ನತದ ಸುಂದರಿಯರೀಜಗ
ದ್ವಲಯದೊಳಗಾರುಳ್ಳರೆವಗೆ ತೋರ್ವುದು ಸತ್ಯವಾದಿಗಳ್ ನೀವೆಂದರು ೮೪

ಎನಲು ಮದನತಿಯರೀ ಸತಿಯರಾಹಮ್ಮಿಕೆಯು
ಘನವ ನೆಗ್ಗುವುದು ಸಮ್ಮತಮೆಂದು ಚಿತ್ತದೊಳ್
ನೆನೆಯಲೂರುಸ್ಥಳದಲವತರಿಸಿದಳ್ ತಟಿಲ್ಲತೆಯ ಕುಲವೊಂದುಗೂಡಿ
ತನುವಿಡಿದುದೆನಿಸುತಿರೆ ಭಗವದೂರೂಜಾತ
ಳೆನಿಸಲದರಿಂದಲ್ಲೂರ್ವಶಿಯೆಂಬ ಪೆಸರಾಂತು
ವನಿತೆಯುತತ್ಪ್ರಭಾವನ ನೋಡಿ ಬೆರಗಿನಿಂ ನಿಂದರುರುಗರ್ವಮುಡಗಿ ೮೫

ಅಜವೆಸರನಾಂತಡಾವಿಕನು ಪದ್ಮಜಗೆಣೆಯೆ
ಕುಜವೆಸರ ತಳೆದ ತರುವಂಗಾರಕಗೆ ಸರಿಯೆ
ಭಜಿಸಿರಲ್ ಖದ್ಯೋತವೆಸರ ಕೀಟಕ ರವಿಯೆ ಹರಿವೆಸರ ಕಪಿ ಸಿಂಹವೇ
ದ್ವಿಜವೆಸರನಾಂತ ವಿಹಗಂ ವಿಪ್ರಗಂ ಪ್ರತಿಯೆ
ನಿಜಸತಿಯರೆನಿಸಲೇನೂರ್ವಶಿಗೆ ಪಾಸಟಿಯೆ
ವಿಜಯಾತುರವನುಳಿದು ವಿಮುಖದಿಂ ಸುದತಿಯರ್ಸುರಲೋಕಮಂ ಸಾರ್ದರು ೮೬

ದೂರಿವರ್ಸುರರಿಗಾಮೂಲಾಗ್ರವಾಗಿ ನರ
ನಾರಾಯಣರ ಮಹಾಮಹಿಮೆಯಂ ತೊಡೆಯಿಂದ
ಲೂರುವಸಿಯವತರಿಸಿದರ್ಥಮಂ ತದ್ರೂಪುತೇಜಸ್ಸಗಾಧದಿರವಂ
ವಾರಿಜಾಸನ ವಾಸವಾದಿಗಳ್ ಕೇಳಿ ಲ
ಕ್ಷ್ಮೀರಮಣನವತಾರವೆಂದರಿಯದೆಸಗಿದಪ
ಚಾರಮಂ ತತ್ಪದಂಗಳ ಕಂಡು ಕಳೆವೆವೆಂದೈದಿ ಸನ್ನುತಿಗೈದರು ೮೭

ನಿಖಿಲಜಗದಾಧಾರ ನಿರ್ಮಲ ನಿರಾಕಾರ
ಸಕಲ ಸದ್ಗುಣಶೀಲ ಸನ್ನುತಾಗಮಜಾಲ
ಭಕುತಹೃದಯನಿವಾಸ ಭಾನುಶತಸಂಕಾಶ ಭವವಿಭಂಜನ ಪರೇಶ
ಮುಕುತಜನಸನ್ಮಿತ್ರ ಮೌನಿಸನ್ನುತಿ ಪಾತ್ರ
ಪ್ರಕಟಿತ ಚಿದಾನಂದ ಪಾಹಿ ಭೂಸುರ ವಂದ್ಯ
ಲಕುಮೀಮನೋ[2]ನಾಥ ನಗವೈರಿ ಸುಖದಾತ ಪೊರೆಯೆಂದ[2]ನಬ್ಜಭವನು ೮೮

ದೇವ ನೀನೀ ತೆರದಿ ಭೂವಲಯದೊಳಗಖಿಲ
ಜೀವಿಗಳನುದ್ಧರಿಸಲವತಾರವನ್ನಾಂತ
ಠಾವಿನುರು ಮಹಿಮೆಯನ್ನಾವಗಾಹಿಸಲರಿಯದಾವು ರಾಜಸಬಿಗುಹಿನ
ಠೀವಿಯಿಂ ನಿಮ್ಮಯ ತಪೋವಿಘ್ನದನುವ ಸಂ
ಭಾವಿಸಿದ ದುಶ್ಚರ್ಯಸಾವಿರಂಗಳ ಮರೆದು
ಕಾವುದೆಂದಾ ಬ್ರಹ್ಮದೇವ ವಾಸವ ಮುಖ್ಯ ದೇವತೆಗಳ್ವಂದಿಸಿದರು ೮೯

ಈ ಪರಿಯಲೆರಗಿ ನುತಿಗೈವ ನಿರ್ಜರರೊಳ್ ದ
ಯಾಪರತ್ವವ ಹರಹಿ ಪಿರಿದು ಮನ್ನಿಸಿದ ಮೇ
ಲಾ ಪರಮ ಪುರುಷರೆಂಬರು[1] ಧಾತ[1] ಗೋತ್ರಭಿತ್ಪ್ರಮುಖವೃಂದಾರಕರ್ಗೆ
ಕಾಪಥವ ವಹಿಸಿ ರಾಜಸಗರ್ವದಿಂ ಸೊಕ್ಕಿ
ತಾಪಸರ ನಿಯಮಕುಪಹತಿಯ ನೆನೆಯದೆ ಮುನಿಜ
ನೋಪಕೃತರೆಂದೆನಿಸಿ ಸುಖಿಸುವುದು ಮೀರ್ದಡುನ್ನತ ಸಿರಿಗೆ ಹಾನಿಯೆನುತ ೯೦

ಮತ್ತೆ ಕೇಳೂರ್ವಶಿಯು ಮುಂಗಾರ ಮಿಂಚುಗಳ
ನೊತ್ತ ಪುರಿಗೊಂಡು ತನುವಿಡಿದಂತೆ ಮನಸಿಜನ
ಮತ್ತಗಜವಡಿಯಿಡುವ ಬೆಡಗಿನಿಂದೈತರಲ್ ಕಂಡು ವಿಸ್ಮಯತೆಯಿಂದೆ
ಮುತ್ತಿ ವೈಮಾನಿಕರ್ನೋಳ್ಪ ನಿಜದೃಷ್ಟಿಗಳ
ಮತ್ತೆ ಮಗುಚುವಡಶಕ್ಯದಿ ಕಣ್ಮನಂಗಳಂ
ಬಿತ್ತಿದರ್ಕೋಮಲೆಯ ಮೈವೆಳಗಿನೊಳಗನಿಮಿಷತ್ವ ಸಾರ್ಥಕವಾಗಲು ೯೧

---

೮೮. 1. ಸುಕರನೆ. 2. ಮಂದಿರಾವಾಸ ಪೊರೆವುದೆಂದಡಗೆಡೆದ.
೯೦. 1. ಬ್ರಹ್ಮ.

ದುರ್ಗಮು ಶತಾಧ್ವರಂಗಳನೆಸಗಿ ನಾಕ ಪದ
ಮೇರ್ಗೊಂಡ ಮಹಿಮರಿಂಗೂರ್ವಶಿಯಳಂಗ ಸಂ
ಸರ್ಗಮುಮರದಡೆ ಸಾರ್ಥಕಮೆನಿಸದೆಂದೆಣೆಸಿ ನಾರಾಯಣಾಂಘ್ರಿಗೆರಗಿ
ಸ್ವರ್ಗಸಂಪತ್ಸೊಬಗಿಗಂ ನಿಮ್ಮ ತೊಡೆಯಿಂದೆ
ನಿರ್ಗಮುವನಾಂತ ಲಸದೂರ್ವಶಿಯಳಿರದಡಪ
ವರ್ಗಮೆನಿಸಿರದು ತತ್ಪದವಿಯದರಿಂ ಕಳುಹಬೇಹುದರಸಿಯನೆಂದರು ೯೨

ವಿಜ್ಞಾಪನೆಯನೊಪ್ಪುಗೊಂಡು ರಾಜಸ ಗುಣದ
ವಜ್ಞರಿವರೆಂಬುದಂ ನಿಶ್ಚೈಸಿ ತನು ಮೋಹ
ದಜ್ಞಾನವೃತ್ತಿಗಿದು ಸಜಹವೆಂದೂರ್ವಶಿಯಳಿಗೆ ಚಿರಾಯುಷ್ಯಮಿತ್ತು
ಯಜ್ಞ ಶತಕರ್ತೃಗಳನೊಲಿದು ಕೂಡುವುದೆಂದ
ನುಜ್ಞೆಯನ್ನಿತ್ತು ಪಾಕಾರಿಮುಖವಿಬುಧರಂ
ವಿಜ್ಞಾನ ಮೂರ್ತಿ ನರನಾರಾಯಣರ್ಕಳುಹಲಡಿಗೆರಗಿ ಸೈವರಿದರು ೯೩

ಕಲಶಾಬ್ಧಿಯಂ ಮಥನಗೈದಂದು ಪೀಯೂಷ
ಕಲಶ ಕೈಗಬ್ಬಿದುತ್ಸವದ ದಶಗುಣಮುಮರೆ
ಕಲಶಕುಚೆಯೆನಿಪ ಲಸದೂರ್ವಶಿಯನೊಡಗೊಂಡು ಜಿಷ್ಣುಮುಖಗಂಧರ್ವರು
ಬಲುಸರಸಸಲ್ಲಾಪ ಲತೆಯು ಕುಡಿವರಿದು ಪ
ರ್ಬಲು ಸರಿದರಿತ್ತಲಜ್ಞಾನ ಕರ್ಮಗಳ ಹಂ
ಬಲು ಸರಿವ ಸಬ್ಬೋಧೆಯಿಂದಮಿತ ಶಿಷ್ಯರಂನಾರಾಯಣರ್ಪೊರೆದರು ೯೪

ಭೂಪ ಲಾಲಿಸುವದೀ ನರನು ನಾರಾಯಣ
ದ್ವಾಪರಾಂತದಲಿ ನರನರ್ಜುನಾಖ್ಯೆಯನಾಂತು
ರೂಪಿಸುವನಂತು ನಾರಾಯಣನೆ ಕೃಷ್ಣನೆನಿಸುವನದರಿನಿತಿಹಾಸಮಂ
ಈ ಪುರಾಣದೊಳೆ ಮುಂದೊರೆವೆ ಕೇಳವರ ನಿಜ
ರೂಪಮೇ ಶೇಷಗಿರಿ ವೆಂಕಟೇಶ್ವರನೆಂದು
ನೀ ಪರಿಗ್ರಹಿಸಿ ಗುರು ಕೌಂಡಿಣ್ಯರಡಿಗಳಂ ನೆನೆದು ನೀ ಸುಖಿಯಪ್ಪುದು ೯೫

ಅಂತು ಅಧ್ಯಾಯ ೧೧ಕ್ಕಂ ಪದನು ೯೫೭ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ

೧೨. ಧ್ರುವರಾಯನು ಹುಟ್ಟಿದುದು

ಸೂಚನೆ :

ಜನನಾಥನುತ್ತಾನಪದನಿಂ ಸುನೀತಿಯೊಳ್
ಜನನಾದಿರಹಿತ ಹರಿಯವತರಿಸಿ ಭುವನದೊಳ್
ಜನರ ಸಲಹಿದ ಲಸದ್ಧ್ರುವ ಚರಿತ್ರಾಶ್ಚರ್ಯಕಥನವಂ ಕರುಣಿಸಿದನು

ಶಶಿಕುಲಾಧೀಶ ಜನಮೇಜಯನೆ ಕೇಳು ಸುಮ
ನಸಕುಲಾಧೀಶಮುಖ್ಯರ್ಸರಿಯಲತ್ತ ತಾ
ಪಸಕುಲಾಧೀಶ ನರನಾರಾಯಣರ್ಬೆಳಗಿದರ್ಮಹಾಮಹಿಮೆಯಿಂದೆ
ಪಶುಕುಲಾದಿಗಳ ಜಡಜನ್ಮಗಳ್ ಜಾರೆ ತಾ
ಮಸಕುಲಾಚಾರಗಳ್ ಮುಗ್ಗಿ ದುಷ್ಕರ್ಮಗಳ್
ಮಸುಳಿಸುತ ಸತ್ಕುಲಾಚಾರಂಗಳೇರ್ಗೊಳಲ್ ಸರ್ವತೋಭದ್ರಮಾಗೆ ೧

ಧಾತ್ರೀಪವಿತ್ರ ಚಿತ್ತವಿಸುವುದು ಮನುವರನ
ಪುತ್ರಿಯರ ವಂಶಪಾರಂಪರೆಯ ಮಹಿಮೆಯ ವಿ
ಚಿತ್ರಮನ್ನರಿದೆನುತ್ತಾನ ಪದನಾ ಪ್ರಿಯವ್ರತರೆಂಬ ಪೆಸರನಾಂತ
ಪುತ್ರರಿರ್ವರ ಕಥನಮುಂ ಕರುಣಿಸುವುದು ಗಾ
ಯತ್ರೀಸಮಾನಮೆನಿಸುವುದಲಾ ಸಜ್ಜನಚ
ರಿತ್ರಿಯದು ಮನುವಂಶ ಪಾವನರ ಮಹಿಮೆಯನ್ನೊಲಿದೆನಗೆ ಕೃಪೆಗೈವುದು ೨

ಜನಪ ಕೇಳ್ಮನುವಂಶಜಾತರ ಚರಿತ್ರೆಯ
ನ್ನೆನಿಸುಬಣ್ಣಿಸಲಪ್ಪುದುತ್ತಾನಪಾದಂಗೆ
ತನಯನಾಗವತರಿಸಿದಂ ಲಸದ್ಧ್ರುವಸಂಜ್ಞೆಯಿಂದಲಚ್ಯುತನೆನಲ್ಕೆ
ಮುನಿಕುಲೋತ್ತಮರ ಮೌನಧ್ಯಾನದಳತೆಗಂ
ತನುವನೀಯದ ಪರಮಪುರುಷನುತ್ತಾನಪದ
ಗನುಗೊಟ್ಟ ಪರಿಯೆಂತು ಪೇಳ್ವುದೆಂದರಸ ಬೆಸಗೊಳಲು ಮುನಿ ಕರುಣಿಸಿದನು ೩

ಕೇಳಿಲೆ ಮಹೀಶ ಮನು ಕುಲಜರ ಚರಿತ್ರೆಯಂ
ಪೇಳುವೆವು ಮುನ್ನವೆ ಪಿತಾಮಹನ ಸೇವೆಯಂ
ತಾಳಿರ್ದನುತ್ತಾನಪಾದನಂತಿರುತಿರುತಲೊಂದು ದಿನ ವಿಧಿಯ ಪದಕೆ
ಮೌಳಿಯಂ ಚಾಚಿ ಬೆಸಗೊಂಡನೆನ್ನಿಂದಲ
ಪ್ಪೊಳಿಗಮದೇನು ಗಾರ್ಹಸ್ಥ್ಯಮೋ ವೈರಾಗ್ಯ
ಶೀಲವೋ ಬೆಸಗೈವುದೆನಲು ಸುಪ್ರೀಮದಿ ಸುರಜ್ಯೇಷ್ಠನಿಂತೆಂದನು ೪

ವತ್ಸ ಕೇಳಾದಿಯೊಳ್ ಕರ್ದಮ ತಪಸ್ಸಿನಿಂ
ದಚ್ಯುತನನೊಲಿಸಲಾತಗೆ ಕಪಿಲವೆಸರನಾಂ
ತಚ್ಚರಿಯ ತನಯನಾಗವತರಿಸಿದಂ ಹರಿಯೆ ದೇವಹೂತಿಯ ಗರ್ಭದಿ
ಹೃತ್ಸರಸಿಜದಿ ಬಲಿದು ಭಕ್ತಿವೈರಾಗ್ಯದಿಂ
ಮೆಚ್ಚಿಸಿದಡಾ ಹರಿಯೆ ನಿನಗೊಲಿದು ಮೂಲೋಕ
ಕಚ್ಚರಂ ಬೀರ್ವ ನಿಜಸುತನೆನಿಸುವಂ ಲಸದ್ಧ್ರುವಸಂಜ್ಞೆವಿಡಿದೆಂದನು ೫

ಎನಲಾಜ್ಞೆಯಂ ವಹಿಸಿ ನಿಜಪಿತಾಮಹನ ಪದ
ವನಜದೊಳ್ ತಲೆವಾಗಿ ಹರಕೆಯನ್ನಾಂತು ನಡೆ
ದನು ಮಂದರಾದ್ರಿ ಕಂದರದ ಗುಹೆಯೊಳ್ ನೆಲಸಿ ವಿಮಲಾಸನವನು ಬಲಿದು
ಅನಶನವ್ರತದಿಂದ ಮಂಡಿಸಿದ ಬಳಿಕ ಸ
ಚ್ಚಿನುಮಯನ ದಿವ್ಯ ಮಂಗಳ ವಿಗ್ರಹವನು ಹೃ
ದ್ವನಜದೊಳ್ ಭಾವಿಸಿದನಲುಗದೊಲ್ ಕಣ್ಮನಗಳೇಕ ಪರಿಯಿಂ ಬೆಳಗಲು ೬

ತೆಗೆಯದೊಂದೇ ಮುಖದಿ ಚಿತ್ತಮಂ ಹರಿಪದಕೆ
ಬಿಗಿದು ಮೈಮರೆತುದೇ ನಿದ್ರೆ ಸಂತತವು ಪ
ನ್ನಗ ಶಾಯಿಯಮಲ ತೇಜೋದರ್ಶನಾನಂದ ಪುಲಕಮೇರತಿಕೇಳಿಯು
ನಗಧರನ ವಿಲಸದಂಗಾಂಗ ಲಾವಣ್ಯಮಂ
ಮೊಗೆದು ದೃಷ್ಟಿಗಳೀಂಟುವನುವೆ ಯಾಹಾರವಿ
ನ್ನುಗಿಯುವೈ ನಿದ್ರೆ ರತಿಯಾಹಾರದುರುಬೆಗಳ್ ನೃಪತಪಃಶಕ್ತಿಯಿಂದೆ ೭

ಆಲಿಗಳೊ ಹರಿಯಂಗನೀಲಾಭ್ರಗತ ತಟಿ
ನ್ಮಾಲೆಗಳೊ ಕರಣಗಳೊ ತತ್ಪದಾಬ್ಜ ಭ್ರಮರ
ಜಾಲಗಳೊ ಕರ್ಣಗಳೊ ಸುಪ್ರಣವನಾದರಸಭರಿತ ಕಾಸಾರಂಗಳೋ
ಕಾಲುಗಳೊ ಕಾಯರಥಮುಲುಗದೊಲ್ ಬಿಗಿದ ಬಲಿ
ಗೀಲುಗಳೊ ಹಂಸಗತಿಗಳೊ ಸಚ್ಚಿದಬ್ಧಿ ಕ
ಲ್ಲೋಲಗಳೊ ಬಗೆಗೊಳಲ್ಕರಿದೆನಿಸಲವ್ಯಯಧ್ಯಾನ ಕೋವಿದನೆಸೆದನು ೮

ಸ್ವರ್ಣದೊಳ್ ಬಲಿದ ಮಾಣಿಕ್ಯಮೆನೆ ನಿಶ್ಚಂಚ
ಲಾರ್ಣವದಲೆಸೆವ ಸುಪ್ಪಾಣಿಯೆನೆ ಪಂಚದಶ
ವರ್ಣಗತ ಸುಪ್ರಣವದೇಳ್ಗೆಯೆನೆ ನಿರ್ವಾತ ಸವನ ಪ್ರದೀಪಮೆನಲು
ಪೂರ್ಣಜಲಘಟಿತಾರ್ಕಬಿಂಬಮೆನೆ ಗೋಸ್ತನಾ
ಕೀರ್ಣ ಸಂಕ್ಷೀರದುನ್ನತಿಕೆಯೆನೆ ಹೃತ್ಪದ್ಮ
ಕರ್ಣಿಕೆಯಲೆರಗಿ ಬೆಳಗುವ ವಾಸುದೇವನಂ ಭಾವಿಸಿದನಲುಗದಂತೆ ೯

ಮಂದನೋ ಮೂಕಾಂಧ ಬಧಿರರ ವಿಭಾಗೆಗಂ
ಬಂದನೋ ದಾರುಪುತ್ಥಳಿಯಾಧಿಪತ್ಯದೊಳ್
ನಿಂದನೋ ಹಸಿವುನಿದ್ರಾಲಸ್ಯಗಳ ಮೊದಲ ತಿಂದನೋ ವಿಷಯಕುಲವಂ
ಕೊಂದನೋ ರವಿ ಚಂದ್ರಗತಿಗಳಂ ತಡೆದು ಭಳಿ
ರೆಂದನೋ ರಿಪುವರ್ಗಗಳನಿರಿದು ಜಯಸಿರಿಯ
ತಂದನೋ ಬಗೆಗೊಳಲ್ಕೆನಿಸಲೇಕಾಗ್ರ ನಿಷ್ಠಾಗರಿಷ್ಠಂ ಮೆರೆದನು ೧೦

ತಗ್ಗಿದನೆ ಹಸಿವು ನಿದ್ರಾಲಸ್ಯದುಪಟಳಕೆ
ಮುಗ್ಗಿದನೆ ಮೆರೆವ ಶಬ್ದಾದಿವಿಷಯಗ[1]ಳಿನಿ[1]ಗೆ
ಮುಗ್ಗಿದನೆ ಬಂಧಾಸನಾದಿ ದೇಹವ್ಯಥೆಗೆ ಬಗ್ಗಿದನೆ ಇಹಸೌಖ್ಯಕೆ
ಒಗ್ಗಿದನೆ ಹರಿನೆನಹನುಳಿದನ್ಯಮಾರ್ಗದೊಳ್
ನುಗ್ಗಿದನೆ ಶೀತೋಷ್ಣ ರುಜೆಯಡರಿನುರುಬೆಗಂ
ಜಗ್ಗಿದನೆ ಭಾವಿಸಲ್ ಜನಪನ ತಪೋನಿಷ್ಠೆಯನ್ನೆನಿತು ಬಣ್ಣಿಸುವೆನು ೧೧

೧೧. 1. ೪೦.

ಕಮಲಾರಿವಂಶಸಂಭೂತ ಕೇಳ್ ಮೆರೆವ ಹೃ
ತ್ಕಮಲ ಕರ್ಣಿಕೆಯ ಮಧ್ಯಸ್ಥಲದಲಲುಗದೋಲ್
ಕಮಲಾ ಮನೋಹರನ ಬಿಗಿದನಾತ್ಮ ಧ್ಯಾನಸದ್ಭಕ್ತಿಪಾಶದಿಂದೆ
ಕಮಲ ಯೋನಿಪ್ರಮುಖರರಿದೆನಲ್ ರಂಜಿಸುವ
ಕಮಲಮಿತ್ರನ ಪಳಿವ ತೇಜಸ್ಸಗಾಢದಿಂ
ಕಮಲಾಸ್ತ್ರಶತರೂಪನೆಸೆದಂ ತಪೋವಹ್ನಿಕಮಲಜಾಂಡವ ಮುಸುಕಲು ೧೨

ಈ ಪರಿಯಲೆಸೆವ ಭೂಪನ ತಪೋಭಕ್ತಿಗಂ
ಶ್ರೀಪತಿಯು ಸಂತುಷ್ಟನಾಗಿ ಸುಪ್ರೇಮದಿಂ
ದಾ ಪನ್ನಗಾಶನನನಡರಿ ದಶದಿಕ್ಕುಗಳ ಬೆಳಗುತವು ಸುತ್ತಲೆಸೆವ
ತಾಪಸರ ಗಡಣದಿಂ ಶಂಖ ಚಕ್ರ ಗದಾಬ್ಜ
ದೀಪಿಸುವ ನಾಲ್ಕು ಹಸ್ತಂಗಳಿಂದಭ್ರದಿಂ
ಭೂಪರಿವ್ಯಾಪ್ತ ಕಲುಷವನೊರಸುತಿಳಿತಂದನರಸನೆಡೆಗಮರರುಲಿಯೆ ೧೩

ಕುಂಭರಾಶಿಯ ಸಾರ್ದ ರವಿಯಂತೆ ಮಸ್ತಕವ
ನಿಂಬಿಡಿದ ಮಣಿಕಿರೀಟದ ಕಾಂತಿ ನಾಲ್ದೆಸೆಗೆ
ತುಂಬಿರಲ್ ಶ್ರವಣನಕ್ಷತ್ರಗತ ಗುರುಶುಕ್ರಮಂಡಲಗಳೇಳ್ಗೆಯಂತೆ
ಪೊಂಬೆಳಗ ಬೀರ್ವ ಕುಂಡಲವೊಲೆಯೆ ಕನ್ಯಾವ
ಲಂಬನದ ಕುಜಬಿಂಬದಂತೆ ಮಣಿಪದಕರುಚಿ
ಬಿಂಬಿಸಲ್ ಸಿಂಹಗತ ಶಶಿಯಂತೆ ಕಾಂತಿಯಮರಲ್ ಹರಿ ವಿರಾಜಿಸಿದನು ೧೪

ಅರುಣೋದಯಚ್ಛಾಯೆವೆರೆದ ಪದಪದ್ಮನಖ
ಸರಗಳೆಳೆವಿಸಿಲ ವಿಸ್ಫುರಣದಿಂದೆಳೆರವಿಯು
ತೆರದ ಪದಪೆಂಡೆಯದ ಸಿರಿಗಳಿಂದೊಲಿವ ಶಶಿಕಿರಣಮ ನ್ನೊತ್ತರಿಸುವ
ದರಹಾಸದಂತರುಚಿಯೆರಗಿರಲ್ ನೈದಿಲೆಗ
ಳರಳುವಣ್ಣದ ಮೈಯ ಮೆರೆವ ಪೀತಾಂಬರದ
ನೆರಿಗಳಿಂ ಚಂದ್ರಭಾಸ್ಕರರುದಯ [1]ತೋರ್ಕೆ[1]ಯಿಂ ಹರಿಯಲ್ಲಿಗಿಳಿತಂದನು ೧೫

---

೧೫. 1. ಸೇರ್ವೆ.

ನಿಗಿನಿಗಿಪ ಹಾರ ಕಂಕಣ ಬೆರಳ ಮುದ್ರಿಕೆಯ
ಜಗಜಗಿಪ ತೋಳ ಬಾಪುರಿ ರನ್ನದಾಯಿತದ
ಮಗಮಗಿಪ ಚಂದನ ವಿಲೇಪ ಪರಿಮಳ ಸಿರಿಯ ಭಾಸ್ವದುರುಭುಜಕೀರ್ತಿಯ
ಪೊಗಪೊಗಳಿ ಭವವ ಭಂಗಿಪ ಭಕ್ತ ಸಂತತಿಯ
ಮೊಗಮೊಗುಚಿ ಕೈವಾಗಿಸುವ ದೇವ ಸಾಲ್ವಳಿಯ
ಬಗೆಬಗೆಯ ಬಣ್ಣನೆಯ ಮೌನಿಋಷಿಗಣಸಹಿತಲಸುರಾರಿ ಮೈದೋರ್ದನು ೧೬

ಇಂತು ಹೃತ್ಕಮಲದೊಳ್ ನೆಲೆಸಿರ್ದ ಶರಧಿಜಾ
ಕಾಂತನಿದಿರಲಿ ಸುಪ್ರಸನ್ನನಾದುದ ಕಂಡು
ಸಂತಸಭಯಂಗಳೇಕದ ಚಕಿತವದನದಿಂ ಗದ್ಗದಸ್ವರನುಡಿಗಳ
ಭ್ರಾಂತಿಗೊಂಡವನಂತೆ ನುತಿಗೈವುತಂಗವಂ
ನಿಂತ ನಿಲವಿಂ ಧರೆಗೆ ಹರಹಿ ಭುಜಗಳ ನೀಡಿ
ಪಿಂತುಮುಂದರಿಯದಗಲದಿ ಬೊರಳಿದಂ ಭೂಪನಿಚ್ಛಾವಿಹಾರವಾಗಿ ೧೭

ವೇದವಂ ಗುಣಿಸಿ ವೇದಾಂತಮನ್ನೆಣಿಸಿ ಮತ
ವಾದದೊಳ್ ಸೆಳಸಿ ವೈರಾಗ್ಯಮಂ ಬಳಸಿ ತೀ
ರ್ಥಾದಿಗಳ ತೊಳಲಿ ನೀರ್ಮುಳು ಮುಳುಗಿ ಬಳಲಿಯುಪವಾಸದೊಳ್ ಕಳಲಿ ಕಳಲಿ
ಹಾದಿಯನ್ನರಸಿ ಶೀತೋಷ್ಣಗಳ ಜಯಿಸಿ ಗುರು
ಪಾದಮಂ ಭಜಿಸಿ ಪರಮಾರ್ಥಮಂ ವಹಿಸಿ ನೆರೆ
ಸಾಧಿಸುವ ಪದವ ಸನ್ನುತಿಸಲೊದಗಿಸುವ ಹರಿಪದಕೆ ಪಣೆಯಂ ಬಲಿದನು ೧೮

ಜಯತು ಪದ್ಮಾಲಯಾ ವದನ ಚಂದ್ರ ಚಕೋರ
ಜಯತು ಸದ್ಭಕ್ತ ಜನ ಹೃತ್ಸರೋಜಭ್ರಮರ
ಜಯತು ತ್ರಿಜಗದ್ಭೂತಚೈತನ್ಯಸೂತ್ರಧರ ಜಯತು ನಿಗಮಾಂತಸಾರಾ
ಜಯತು ಪರಮಾತ್ಮ ಪಾವನ ಮಂಜುಲಾಕಾರ
ಜಯತು ಸಚ್ಚಿದ್ರೂಪ ದೀನಜನಮಂದಾರ
ಜಯತು ಸಕಲೇಷ್ಟಪೂರಿತಶುಭೇಕ್ಷಣ ರುಚಿರ ಜಯತು ಜಯಸಲಹೆಂದನು ೧೯

ಪಾಹಿ ಮಾಂ ಭೋ ದ್ರೌಪದೀಮಾನಸಂರಕ್ಷ
ಪಾಹಿ ಮಾಂ ಪ್ರಹ್ಲಾದಮುಖಭಾಗವತಪಕ್ಷ
ಪಾಹಿ ಮಧುಕೈಟಭಾದ್ಯಖಿಲ ದುರ್ಮದಶಿಕ್ಷ ಪಾಹಿ ಭವಬಂಧಮೋಕ್ಷ
ಪಾಹಿ ಮಾಂ ಶ್ರೀವತ್ಸಕೌಸ್ತುಭಾಂಚಿತವಕ್ಷ
ಪಾಹಿ ಮಾಯಾತಿಮಿರಭಂಗರುಚಿರಕಟಾಕ್ಷ
ಪಾಹಿ ಸರ್ವೇಶ ಸತ್ಸಾಮಗಾನಾಪೇಕ್ಷ ಪಾಹಿ ಮಾಂ ಹರಿಯೆಂದನು ೨೦

ಈ ತೆರದಿ ನುತಿಗೈಯಲುತ್ತಾನಪದನ ಪರ
ಮಾತುಮಂ ಸತ್ಕರಿಸಿ ನುಡಿದನೆಲೆ ತನಯ ನೀ
ಶೀತೋಷ್ಣಗಳ ಸಹಿಸಿ ನಿಶ್ಚಲನದಿಂದೆನ್ನ ಮೂರ್ತಿಯಂ ಹೃದಯದೊಳಗೆ
ನೀ ತಳದೆ ಬಹುಕಾಲವದರಿನಿಂ ನಿನಗೆ ತನು
ಜಾತನೆನಿಸಿದ ನೆವದಿ ಲೋಕಮಂ ಪೊರೆಯಲ್ ಸು
ನೀತಿವೆಸರಿನ ನಿನ್ನ ಸತಿಯಿಂದಲವತರಿಪೆ ವಿದುವೆನಿಶ್ಚಯವೆಂದನು ೨೧

ನರರೂಪನಾಂತು ನಿನ್ನಯ ವಂಶಮಂ ಬೆಳಗಿ
ಪರಗತಿಯ ನಿಮಗಿತ್ತು ಕುಲವನುದ್ಧರಿಸಲವ
ತರಿಸುವೆವು ನಿಜಲೀಲೆಯಿಂ ನಿನ್ನ ಭಕ್ತಿಯನ್ನೊಲಿದೆವದರಿಂ ಪ್ರೇಮದಿ
ನಿರತ ನೀ ಸುಖಿಯಪ್ಪುದೆಂದು ಮನುಜಾತನಂ
ಹರಸಿ ಬೀಳ್ಕೊಟ್ಟು ನಾಗಾಂತಕನ ಪಾಘೆಯಂ
ತಿರುಹಿದಂ ವೈಕುಂಠಮಾರ್ಗದೊಳ್ ಸಂದಣಿಯ ನಿರ್ಜರರ ಗಡಣದಿಂದೆ ೨೨

ಅಬ್ಬಿರ್ದ ನಿಧಿಯು ಮರೆಯಾದಂತೆ ಹರಿವಿರಹ
ಗಬ್ಬರಿಸಿ ಬಲಿದ ಮನಃವ[1]ಳಲಿನಿಂ ಗಳಸೆರೆಗ
ಳುಬ್ಬಿ ಬರುತಿರಲಚ್ಯುತಾಂಘ್ರಿಗಳನಡಿಗಡಿಗೆ ನೆನೆನೆನೆದು ವಿಸ್ಮಯದೊಳು
ತಬ್ಬಿಬ್ಬುಗೊಳುತಲೆವೆಯಿಡದಭ್ರಮಂ ನೋಡು
ತೊಬ್ಬನೇ ಬರುತಿರ್ದನೆಸೆವ ಘೋರಾಟವಿಯ
ಹಬ್ಬುಗೆಗಳಂ ಕಳೆದು ಹಿಮಗಿರಿಯ ದಕ್ಷಿಣದ ಮನುಜಸಂಚಾರ ಭುವಿಗೆ ೨೩

೨೩. 1. ದೊ.

ಬಳಿಕಲುತ್ತಾನಪದನಚ್ಯುತನ ವರದಿಂದ
ತಳೆದನವನೀರಾಜ್ಯಭಾರಮಂ ದಿವ್ಯ ಮಂ
ಗಳವೆನಿಸುತಖಿಲ ವರ್ಣಾಶ್ರಮಾಚಾರಗಳ ಪೂರ್ಣಪದಮೇರ್ಗೊಳಲ್ಕೆ
ಇಳೆಯೊಳನಿಬರ್ಸಕಲ ಸಂಪನ್ಮಹಾ ಸೌಖ್ಯ
ಬೆಳವಿಗೆಯಲೋಲಾಡುತಿರೆ ಮೂರು ಭುವನದ
ಗ್ಗಳನೆನಿಸಿ ವಿಜಯ ವಿತರಣ ಸುಗುಣ ಸತ್ಕೀರ್ತಿ ಕಮಲಜಾಂಡವ ಮುಸುಕಲು೨೪

ಮುಂಬರಿದು ದಾನಂಗಳೀವರಗಣಿತರದನು
ಕೊಂಬವರ ನಕಾಣೆನತಿಥಿಗಳನಾವಗಂ
ಬೆಂಬತ್ತಿ ಭೋಜನಕೆ ಕರೆವರಮಿತರ್ಗಳಿಹರುಂಬುವರ ನಾ ಕಾಣೆನು
ಜಂಭಾರಿಭೋಗಮಂ ಜರಿವರಿಹರದನೆಣಿಕೆ
ಗೊಂಬವರ ನಾ ಕಾಣೆ ಮಖ ಸಮಿದ್ವಳಕೆಗೌ
ದುಂಬರಾಶ್ವಥ್ಥಾದಿ ಸಾಲಗಳ್ ಸಾಲವೆನಲಾ ರಾಜ್ಯಸಿರಿ ಮೆರೆದುದು ೨೫

ಪದಗಳಂ ಖಂಡಿಸಲ್ ವೇದಗಳ್ ಕ್ರಮದಿ ಬಿ
ಡ್ದೊದರುತಿದ್ದವು ಸವನಸದನದೊಳ್ ಸರ್ವರುಂ
ಹೃದಯದೊಳ್ ಶ್ರೀಹರಿಯನಳವಡಸಿ ಬಿಡದಿರಲ್ ತತ್ಸತಿ ಮಹಾಲಕ್ಷ್ಮಿಯು
ಒದಗಿ ನಿಜಕಾಂತನೆಡೆಯೊಳೆ ತೊಲಗದಿರುತಿರಲ್
ವಿದುಷ ವಿಜ್ಞಾನಂಗಳನಿಬರಿಂಗಮರಿರ್ಪು
ದದುಭುತವನೇವೇಳ್ವೆನುಭಯ ಸಂಪತ್ಸಹಿತಮಾಗಿ ಜನಮೊಪ್ಪಿರ್ದುದು ೨೬

ಅಲಿವ ಶೋಕಂಗಳ್ಗೆ ಶೋಕಂಗಳಡಸಿರಲ್
ಬಲುದರಿದ್ರಕೆ ದರಿದ್ರಗಳು ಸಂಭವಿಸಿರಲ್
ಕೊಲುವಾಪಮೃತ್ಯುವಿಗೆ ಮೃತ್ಯುವಾವರಿಸಿರಲ್ ವ್ಯಥೆಗೆ ಬಲ್ವ್ಯಥೆಯಮರಲು
ಬಲಿದ ಸಂತಾಪಕಂ ತಾಪಂಗಳೇರ್ಗೊಗಲ್
ನೆಲೆಗೊಂಡ ರೋಗಂಗಳಿಗೆ ರೋಗಮೆಡೆಗೊಳಲ್
ನಲವಿನಿಂ ರಾಜ್ಯಭಾರದಲೆಸೆದನುತ್ತಾನಪಾದನುರುಕೀರ್ತಿಯಿಂದೆ ೨೭

ಈ ತೆರದಿ ರಾಜ್ಯಪರಿಪಾಲನೆಯಲೊಪ್ಪುತ ಸು
ನೀತಿ ಸುರುಚಿಯರೆಂಬರಿರ್ವರರಸಿಯರ ವಿ
ಖ್ಯಾತಿಯಿಂ ಪಾಣಿಗ್ರಹಣಮಾಗಿ ಸುಖದಲಿರುತದರಿನೊಳ್ ಸುರುಚಿಯೊಡನೆ
ಪ್ರೀತಿ ನೆಲೆಗೊಂಡು ತತ್ಸತಿಯ ಬೋಧನೆಯಿಂ ಸು
ನೀತಿಯನ್ನೊತ್ತರಿಸಿ ಬಹುವತ್ಸರಂಗಳ್ ಮು
ಹಾತಿಶಯದಿಂ ಸುರುಚಿಯೊಡನೆ ಸಂಸಾರಸೌಖ್ಯವನಾನುತಿರುತಿರ್ದನು ೨೮

ಕಳೆದವೀ ತೆರದಿ ಹಲಗಾಲ ಮೇಲಾ ಸುರುಚಿ
ತಳೆದು ಶುಭಗರ್ಭಮಂ ಪಡೆದಳುತ್ತಮ ರಾಜ
ನೆಳವಿನ ಕುಮಾರನಂ ಜಾತಕರ್ಮಾದಿಗಳನನುಗೈದು ವಿಭವದಿಂದೆ
ಇಳೆಯಮರರಂ ದಾನ ದಕ್ಷಿಣೆಗಳಿಂ ತುಷ್ಟಿ
ಗೊಳಿಸುತ ಮಹೋತ್ಸವಗಳಾದಡು ಸುನೀತಿಯಂ
ಕಳೆದುಳಿಯಲಾ ಕಾಂತೆ ಭಕ್ತಿಯಿಂ ಭಗವದಾರಾಧನೆಯಲೆರಗಿರ್ದಳು ೨೯

ಹರಿಯ ಪೆಸರಲ್ಲದನ್ಯವ ನುಡಿಯದಾ ರಸನೆ
ಹರಿಸೇವೆಯಲ್ಲದುಳಿದುದ ಮಾಡದಾ ಹಸ್ತ
ಹರಿಯ ನೆನಹಲ್ಲದಿತರವ ನೆನೆಯದಾ ಮನವು ಹರಿಯನೀಕ್ಷಿಪುದಲ್ಲದೆ
ಹರಿಯವೈ ಬೇರೊಂದು ನೋಟದೊಳ್ ಕಣ್ಣುಗಳ್
ಹರಿಯನೇ ಬಿಡದಿಂತು ಭಜಿಸಲಾ ಮಹಿಮೆಯಿಂ
ಹರಿತಂದುದಾ ವಸಂತಾಗಮವು ತತ್ಸತಿಯ ಹರಿಬಕೆ ಸಹಾಯಮಾಗಿ ೩೦

ಪೊಸ ಭೂಪನಾಧಿಪತ್ಯಕೆ ಬರಲ್ ಮುನ್ನಿರ್ದ
ವಸುಮತೀಶಾಶ್ರಿತರ್ಸರಿವ ತೆರನಂತೆ ರಂ
ಜಿಸುವ ಚೈತ್ರಾಧಿಪರನಾಗಮನಮಂ ವಾಯು ಸುಳಿಸುಳಿದು ತಿಳುಹುವಂತೆ
ಪಸರಿಸಲ್ ಶಿಶಿರನಾಶ್ರಿತ ಪಳೆಯ ಪರ್ಣಗಳ್
ಬೆಸುಗೆ ಕಳೆದುರುಳುತಿರೆ ತರುಗಳೊಳ್ ಕೆಂಜಿಗು
ರ್ಪೊಸ ದೊರೆಯ ತೆತ್ತಿಗರ ತೆರದಲನುರಾಗದಿಂ ಹೊಗರೇರಿ ನಗುತಿರ್ದವು ೩೧

ಅನುರಾಗಿಯಾಗಿ ನಿಜಪತಿ ವಸಂತಂ ಬರಲು
ಬನಲಕ್ಷ್ಮಿ ಹೆಚ್ಚಳಿಸಿ ನಿಜಸದನವಾದ ನಂ
ದನ ಭುವಿಗೆ ಮಕರಂದವಳಿತೆಗೈದು ಪರಾಗ ಪಂಚವಣ್ಣಗೆಯ ತುಂಬಿ
ವಿನುತ ಚೆಂದಳದ ಮೇಲ್ಗಟ್ಟುಗಳ ಫಲಪುಷ್ಪ
ಗೊಗೆ ಫಲಾವಳಿಗಳನ್ನಳವಡಿಸಿ ಶುಕಪಿಕ
ಧ್ವನಿ ತೂರ್ಯವಾದ್ಯದಿಂದರಸನಂ ಬಲಗೊಂಬ ಸಂಭ್ರಮದ ಪರಿಯೆನಿಸಿತು ೩೨

ಅರೆನಿಮಿಷ ಬಿಡದೆ ರವಿಯೊಡನೋಡಿ ಪಿರಿದಲಸಿ
ದರುಣ ಚರಜನ್ಮಮಂ ರೋಸಿ ಸುಸ್ಥಿರಮೆ ಸುಖ
ಕರಮೆಂದು ಬಗೆದು ವೃಕ್ಷಗಳ ಚೆಂದಳಿರಾಗಿ ರಾಗದಿಂ ರವಿಕಿರಣಕೆ
ತೆರಪುಗೊಡದಿರಲು ರವಿರಾಯಭಾರಕೆ ಪವನ
ನರುಣನೆಡೆಗೈತರಲ್ ಶಾಖೆಗಳಿಗೇಕಾಂತ
ವೆರೆದ ಪರಿಯೆಂಬಿನಂ ಕೊಂಬುಕೊಂಬುಗಳು ಬೆರೆವವು ಸುಳಿವ ಗಾಳಿಯಿಂದೆ ೩೩

ರಕ್ತವತಿಯಾದ ಬನರಮೆಯೊಡನೆ ಕೇಳಿಕಾ
ಸಕ್ತಿ ಪುಷ್ಪಿಣಿ ಲತಾಂಗನೆಯರೊಳ್ ಸತತಾನು
ರಕ್ತಿ ಮಧುಪಾಯಿಗಳ ಮೈತ್ರಿಯಿಂತೀ ವಸಂತನ ಕೃತ್ಯಮನ್ನೆಣಿಸಲು
ಮುಕ್ತ ಲಜ್ಜಾ ರಜಸ್ವಲೆಯರೊಳ್ ಸಮುಪಸದ
ಭಕ್ತಿಯಿಂ ನೆರೆವ ಸಂಕರನಪ್ಪನದರಿನಿಂ
ಯುಕ್ತಮೆನಿಸದು ವಿಜಾತಿಯ ಸಂಗಮೆನೆ ಸುಜಾತಿಗಳೆರಗವೆನಿಸಿರ್ದುದು ೩೪

ನದಿಗಳಿಗೆ ಕೃಶತೆ ನಂದನಕೆ ಬಲ್ ಜಸತೆ ಷ
ಟ್ಪದಕೆ ಸಂಭ್ರಮತೆ ಮನುಜರ್ಗೆ ರತಿಮುಮತೆ ಘನ
ಮದನಸಗಗ್ಗಳತೆ ಫಲಪುಷ್ಪವೆಗ್ಗಳತೆ ಮಲಯಾನಿಲಗೆ ಮಂದ ಚಲತೆ
ಪದುಮಗಳ ಘನತೆ ತತ್ಕೈಳಿಗೆ ಕಾಹುರತೆ ಪೂ
ಮಧುವಿಗಂ ಒರತೆ ಮರಗಳಿಗೆ ಕೋಮಳತೆಯಿಂ
ತೊದಗಿ ಭೂವನಿತೆ[1]ಗಂ ಚೈತ್ರನೃಪನಾಗಮನ ಮತಿ[1]ಮನೋಹರಮೆನಿಸಿತು ೩೫

---

೩೫. 1. ಯುಳ ಚೆಲುವು ಪೆಂಪಡುತೆ ನಲವಿಂ

ತನಯು ಕೇಳೀ ವಸಂತನ ಚಾರುತರದರಸು
ತನದ ಚೆಲುವಂ ವಿನೂತನ ಕಿಸಲಯಂಗಳಾಂ
ತನವರತ ಮೃದುಮಾರುತನ ಸುಳುಹಿನಿಂದವೆ ಪತನಮಪ್ಪ ಪೂರಸಗಳ
ತನುವಿನಿಂ ಮೀನಕೇತನ ಶರಗಳಿಂದೆ ಚೇ
ತನಗೆಡುವ ವಿರಹಿಗಳ ತನುವ ತಂಪೊಡಸಿ ಮ
ತ್ತನುವಕ್ಕಿ ಬಳಗಕೌತನವನೆಸಗುವ ವೃಕ್ಷ ತನುಮಯದಲಮರಿರ್ದುದು ೩೬

ಗರಿಗಳೊಡಗೂಡುತಿರೆ ಗೊನೆಗಳೊಲೆದಾಡುತಿರೆ
ಬಿರಿದರಳ್ ಕಡೆವುತಿರೆ ಬಲ್ಮೊಗ್ಗೆಯೊಡೆವುತಿರೆ
ಪರಿಮಳವು ಪರಿವುತಿರೆ ಪಾಂಥಿಕರ್ಪೊರೆವುತಿರೆ ಮಕರಂದವೊಸರುತಿರಲು
ಅರಳ ಧೂಳ್ ಚೆದರುತಿರೆಯಳಿಗಳೆದ್ದೊದರುತಿರೆ
ವಿರಹಿಗಳ್ ಬಲಿವುತಿರೆ ವಿಟಜನರ್ ನಲಿವುತಿರೆ
ತರಳೆಯರ್ಮುದಿಸುತಿರೆ ತಪಕಂಗಳುದಿಸುತಿರೆ ತಂಗಾಳಿಯುಂ ಸುಳಿದುದು ೩೭

ತಳಿತ ಮಾವುಗಳಶೋಕೆಗಳೆಂಬ ಕುರುಹುಗಳ್
ತಿಳಿಯದಾದುದು ಪುಂಡರೀಕ ಕೈರವದೆಣಿಕೆ
ಯಳವಡದು ಪೊಂಗಮಲ ಚಂಪಕಂಗಳ ಭೇದಮಿರದು ಕೆಂಜಾಜಿಗಳ್ಗೆ
ಪೊಳೆವ ಪಾಟಲಿಗಳಿಂಗೆರವು ಕಾಣ್ಬಡದು ಭೂ
ವಳಯದೊಳಗುಳ್ಳ ಪಕ್ಕಿಗಳೆಲ್ಲ ರತಿಗಳಂ
ತಳೆದಿರಲು ಚಕ್ರವಾಕಗಳ ಕುರುಹಳವಡದು ಚೈತ್ರಋತು ಮಹಿಮೆಯೆಂತೋ ೩೮

ಫಲವೃಕ್ಷ ಸಂಗತಾನೇಕ ವಿಹಗಾಳಿ ಕಲ
ಕಲವೇದಮಂತ್ರದಿಂ ಸೂಸುತಿಹ ಮಕರಂದ
ಜಲಸೇಕದಿಂ ಪವನಸುಳುಹಿನಿಂ ಕೆಡೆವ ಪೊಂಬಾಳೆ ಮಂತ್ರಾಕ್ಷತೆಗಳ
ಬಲುಹಿನಿಂ ತೃಣಕಾಷ್ಠ ಜ್ಯೋತಿ ನೀರಾಜನದ
ಚೆಲುವಿನಿಂ ವನಘೋಷವಾದ್ಯದಿಂ ಶಿಖಿನೃತ್ಯ
ಕಲಕಂಠಗಾನದಿಂ ಚೈತ್ರನೃಪಪಟ್ಟಾಭಿಷೇಕಮೆನೆ ತೋರ್ದುದಂದು ೩೯

ಆತಪದ ಬಲುಹಿನಿಂ ಯತಿಯಂತೆ ಸುಮನಸ್ಸ
ಮೇತದಿಂ ದಿವದಂತೆ ಮಧುಪರೇಳಿಗೆಯಿಂ ವಿ
ನೂತನದ ಶೋಣಪುರಮೆಂಬಂತೆ ಸಂತಾಪಕರದಿ ಖಲನಿಕರದಂತೆ
ಜಾತಿಕುಲವಿರದೆ ಸಂಕರರಂತೆ ಬಹು ಪಂಕ
ಜಾತಮಂ ವಹಿಸಿ ಹಿಂಸಕರಂತೆ ಸುಪ್ರವಾ
ಳಾತಿಶಯದಿಂದೆ ಸಾಗರದಂತೆ ಪೊಸ ಚೈತ್ರಕಾಲ ಪರಿಶೋಭಿಸಿದುದು ೪೦

ಕೀರಮನ್ನೇರಿ ಪೂಗೋಲ ತಿರುಹುತ ಮಂದ
ಮಾರುತಾಬ್ಜಾರಿಮುಖ ಬಲದ ಕಾಹುರದಿಂದೆ
ವೀರನಹ ಮಾರನೃಪನಿದೆ ಬಂದ ಬಡವಿರಾಗಿಗಳ ತೊಲತೊಲಗೆನ್ನುತ
ಸಾರುವೊಲ್ ತೋರುತಿಹ ಪಿಕಶುಕಸ್ವರಗಳಿಂ
ದೇರಿದುದು ಭೂರಿ ವಿರಹಾವೇಶಮೆನೆ ಸಾಧ್ವಿ
ನಾರಿಯರ್ಜಾರೆಯರ್ಗೇಕದಿಂ ರತಿತವಕಮಾವರಿಸಿತಚ್ಚರಿಯೆನೆ ೪೧

ಅಂಗನೆಯರುಂ ಪುರುಷರುಂ ಮಲಯ ಕರ್ದಮಾ
ದ್ಯಂಗರಾಗವ ನುಂಪಿಸಿಯು ತಂಪು ಮೆರೆಯು ದಿರ
ಲಂಗಮಂ ವ್ಯಜನಪವನಂಗಿತ್ತು ತಣ್ಜಲಕೆ ನಾಲಿಗೆಯ ಕೋಳುಗೊಟ್ಟು
ಅಂಗಣಂಗಳಲಿ ಪೊರಳುತ ಚಿತ್ತವೃತ್ತಿಯ ಸ
ನಂಗ ಕೇಳಿಗೆ ಮಾರಿ ಲಜ್ಜೆಯ ತೆವರಿ ಸತ
ತಾಂಗನೆಯರಾಲಿಂಗನವನಗಲರಾ ವಸಂತನ ಮಹಾಮಹಿಮೆಯೆಂತೊ ೪೨

ಸೊಕ್ಕಿದ ವಸಂತನುರುಬೆಯನಾನಲಮ್ಮದಿರೆ
ಮುಕ್ಕಣ್ಣ ಗಂಗೆಚಂದ್ರರನಡಸಿ ಬಿಡದಿರ್ಪ
ನಕ್ಕಜಮದೇನು ಹರಿ ಶರಧಿವಸತಿಯನುಳಿಯನಿನ್ನು ಪವನಾಧಾರದ
ಇಕ್ಕೆಯುಂ ಕಮಲಜಾದ್ಯಮರರೆಡೆಬಿಡರಿನ್ನು
ಮಿಕ್ಕವರ ಪಾಡೇನು ನಿಖಿಲ ಜೀವಿಗಳು ಮರೆ
ಯೊಕ್ಕರೈ ತರುಣಿಯರನಧರಾಮೃತದ ತಂಪನೆರೆದು ರಕ್ಷಿಸುವುದೆನುತ ೪೩

ಕಡುವಿಸಿಲ ಜಳದಿ ಕಾತರಿಸಿ ಕಳವಳದಿ ಬಾ
ಯ್ಬಿಡುತಲತಿಜವದಿ ಬನಬೊದರುಗಳನೈದಿ ಕಂ
ಗೆಡುತ ತಂಗೊಳದಿ ನಿಜತನುಗಳನ್ನದ್ದಿ ಜಲಕೇಳಿಯಿಂ ತಂಪನೈದಿ
ನಿಡುನೆಳಲ ಕಳದೊಳೆಳೆವಳಿರ ಪಾಸಣದಿ ಬಿ
ಟ್ಟೊಡಲಲುಬ್ಬಸದಿ ಪೊರಳುತಲಂದು ಮನದಿ ನಿಜ
ಮಡದಿಯರ ಸಂಗಮಂ ನೆನೆನೆನೆದು ಕಾಲಮಂ ಕಳೆದಪರ್ವಿರಹಿಜನರು ೪೪

ಉರಿಯೊಡಲರೊಳ್ ಮೈತ್ರಿ ಮಧುಪರೋಳ್ ಕೆಳೆಗೋಷ್ಠಿ
ನಿರತ ಪಲ್ಲವಚಯದಲನುರಾಗವಂಗಹೀ
ನರ ಸಖ್ಯ ಭೂತಸಂತಾಪಕರ ಗುಣ ಜಾತಿವೈರಮಿಂತಿದರ ಮೇಲೆ
ಇರುಳುಸಂಚಾರಿಗಳಿಗೀವ ತೇಜೋನ್ನತಿಕೆ
ವೆರೆದು ವರ್ತಿಪ ವಸಂತಂ ಭೂತಹಿತದನುವ
ನರಿದಪನೆ ಸಾಕೆಂದು ಪತಿಗಳುಳಿಡಬಲೆಯರ್ಜರಿಯಲಾ ಋತು ಮೆರೆದುದು ೪೫

ಕಳಕಳದಿ ನಲಿವ ಗಿಳಿಕೋಕಿಗಳ ಕೇಕಿಗಳ
ಸುಳಿಸುಳಿದು ಮೊರೆವ ಮಧುಪಾಳಿಗಳ ಕೇಳಿಗಳ
ತಳಿತಳಿತ ತರುಲತಾ ಹೊಗರುಗಳ ಮೊಗರುಗಳಲೊಸರ್ವ ಪೂರಸದಿನಿಗಳ
ನಳನಳಿಯು ಮಾಂದಳಿರ್ವಿರ್ಮಿಂಚುಗಳ ಕೆಂಚುಗಳ
ಕಳಿಕಳಿತ ತನಿವಣ್ಣ ಗುಚ್ಛಗಳನಚ್ಚಗಳ
ಪೊಳೆಪೊಳೆವ ಪೊಂಬಾಳೆಯೊಲವುಗಳ ಚೆಲುವುಗಳಲಾ ಚೈತ್ರಋತುವೆಸೆದುದು ೪೬

ತಳಿತ ಬನಗೆಂಪಿನಿಂ ತನಿವಣ್ಣ ಜೊಂಪಿನಿಂ
ದೆಳೆದಳಿರ್ಸುಂಪಿನಿಂದೆಸೆವ ಪೂಗಂಪಿನಿಂ
ದಳಿಯು ಬಲ್ಗುಂಪಿನಿಂದಂಚೆಗಳ ಬಿಂಪಿನಿಂ ಪಿಕಸರಗಳಿಂಪಿನಿಂದೆ
ತಿಳಿಜಲದ ತಂಪಿನಿಂ ತರುನೆಳಲ ಸೊಂಪಿನಿಂ
ಮೊಳೆವ ಸುಖರ್ಝೊಂಪಿನಿಂ ಮುಗ್ಧೆಯರಲಂಪಿನಿಂ
ತಳೆದರತಿದೆಂಪಿನಿಂ ತೊಲಗಿಸದ ಪೆಂಪಿನಿಂಚೈತ್ರ [1]ಚೆಲುವಂ ಪನಿಸಿತು[1] ೪೭

---

೪೭. 1. ತತ್ಕಾಲ ಮೆಸೆದಿರ್ದುದು

ಇಳೆಗೆ ಸುಪರಾಗಮನ್ನದರೊಳುರುಳುವ ಪಕ್ಕಿ
ಗಳಿಗಂಗರಾಗಮುಂ ನುಣ್ದನಿಯ ಕೋಕಿಲಂ
ಗಳ ಗಳಸರಾಗಮುಂ ನಿಖಿಲ ಭುವನಾಳಿಯು ವನಾಳಿಗೇಕದಿ ರಾಗಮುಂ
[1]ಕೆಳೆಯಸತಿವಿಟರಿಗನು[1]ರಾಗಮುಂ ಜಾಜಿ ಪೂ
ಸುಳುಹಿಗೆ ವಿರಾಗಮುಂ ಭೋಗಿಜನರಿಂಗೆ ಹೆ
[2]ಚ್ಚಳದ ನಲ್ರಾಗಮುಂ ಸುಳುಹಿನಿಂ[2] ಕಲ್ಪಿಸಿ ಜಸಂಬಡೆದನಾ ಚೈತ್ರನು ೪೮

ಹರಹಿದ ಪರಾಗ ಮಕರಂದಗಳ ಕೆಸರಿನೊಳ್
ಪೊರಳಿ ನಾನಾಕುಲದ ಪಕ್ಕಿಗಳ್ ಕೆಂಪಡಸಿ
ಗರುಡರಂತೆಸೆದಿರ್ದವತಿ ವಿರಹದಿಂ ವಿರಾಗಿಗಳು ರಾಗಿಗಳೆನಿಸುತ
ಕುರುಹು ಕಾಣ್ಬಡದೆ ವಿಟರೆನಿಸಿರ್ದರಗಮುಂಗ
ಳರುಣಮಯವಾಗಿ ಕುಲಭೇದಗಳ್ ತೋರ್ವಡದೆ
ಭರಿತದಿಂ ಲಸದಶೋಕೆಗಳೆನಿಸುತಿರ್ದವಾ ಚೈತ್ರಋತು ಮಹಿಮೆಯಿಂದೆ ೪೯

ಇಂತು ಕಾದಲರ ಕಾದಲರಿದೆಂದೆನಿಸುವ ವ
ಸಂತ ಋತು ಹರೆಯಲ್ಕೆ ಹರೆಯಸತಿಪುರುಷರುಗ
ಳಂತು ಜೀವನ ಕೇಳಿ ವನಕೇಳಿಗಳಲೊದಗಿ ವಿಶ್ರಾಂತಿಯನ್ನೈದುತ
ಸಂತಸಂಗಳಲಿ ಹೆಂಗಳಲಿಚ್ಛೆಗಳ್ ಬಲಿದು
ಕಂತುಸಮರದಲಿ ಸಮರಸದಿಂದಲೆರಗಿ ಮುದ
ವಾಂತು ಭೋಗಿಗಳು ಭೋಗಗಳಿಂದೆ ಕಾಲಮುಂ ಕಳೆವರಾ ಋತುಮಹಿಮೆಯಿಂ ೫೦

ಪೆಚ್ಚೆನಿಂದಿಂತು ಬಳಲಿಪ ಘರ್ಮ ಗಾಢತರ
ಕೆಚ್ಚೆಗಂ ತಲೆಗೊಡಹಿ ಶೀತವನಕೇಳಿಯಂ
ನಿಚ್ಚಯಿಸಿ ಸಾರ್ದಂ ಸುನೀತಿಯಿಪ್ಪರಮನೆಯ ಸರಿಸದೊಳ್ ಪರಿಘಟಿಸಿದ
ಪಚ್ಚೆಪಳದಿಯು ಕೆಂಪು ಕರಿದು ಬಿಳಿದೆಂದೆನಿಸು
ವಚ್ಚರಿಯ ಪಂಚವರ್ಣಗಳಿಂದೆ ಕಣ್ಮನವ
ಮುಚ್ಚೆಸುವ ಪೂಬನವ ಸಾರ್ದನುತ್ತಾನಪದನೋರ್ವನೇ ದೈವವಶದಿಂ ೫೧

೪೮. 1. ಕಳೆಯುದನುರಾಗಮುಂ ವಿಟಸತಿಗೆ
2. ಚ್ಚಳ ಸರಿಗಮು ಸ್ವರದ ರಾಗಮಂ

ಮೊಲ್ಲೆಯಂ ಕೊಯ್ದು ಮಂದಾರಮನ್ನಾಯ್ದು ಪೊಸ
ಮಲ್ಲಿಗೆಯ ಪಿಡಿದು ಮಾಲತಿಗಳಂ ಮುಡಿದು ಪೂ
ವಲ್ಲಿಗಳನೆಳೆದು ಬಿರಿಮೊಗ್ಗೆಯಂ ಸೆಳೆದು ತಂಗೊಳನ ಕಂಡದರೊಳಿಳಿದು
ಸಲ್ಲೀಲೆವೆರೆದು ಸಲಿಲದಲಿ ಮುಂಬರಿದು ಪಿರಿ
ದುಲ್ಲಾಸವಡೆದು ಘರ್ಮವನು ತಡೆಗಡಿದು ಬನ
ದಲ್ಲಿ ವಿಹರಿಸುತಿರ್ದನೊರ್ವನೇ ಪರಿಜನಗಳಿರದೆ ಮದದಂತಿಯಂತೆ ೫೨

ಎಳೆದಳಿರ ಶಾಖೆಗಳನೆಳೆದರಳಿಕುಲಗಾನ
ಮೊಳಗಲಾಲೈಸಿ ಮನಮೊಳಗೆ ಹೆಚ್ಚಳಿಸುತಿರೆ
ಗಳಿತಪೂರಸಗಳೋಕುಳಿ ತನಿವಳೆಗಳನಾಂತೆಳೆಪಸುರ್ಗಳೆಯಮರಿದ
ಗಿಳಿಸಂದಣಿಗಳ ಕೋಗಿಲೆನುಣ್ದನಿಗಳ ಮಂ
ಗಳರವವ ಪಾರಿವಂಗಳ ರವವ ಕೇಳ್ದು ಮುಂ
ಗೊಳುವ ವಿರಹಾಗ್ನಿಯೇಗೊರ್ಳಲು ರತಿಕಾಂಕ್ಷೆಯಿಂದಿಳೆಯರಸನಿರುತಿರ್ದನು ೫೩

ಈ ತೆರದಿ ಬನಕೇಳಿಗೋರ್ವನೇ ಬಂದ ನಿಜ
ನಾಥನಿರವಂ ಸೌಧಮನ್ನಡರಿ ಕಂಡಳು ಸು
ನೀತಿ ಪರಿಚರ್‍ಯೆಕೋರುವರಿಲ್ಲದಾಯಮುಂ ನೋಡಿ ಕಡುಭಕ್ತಿ ಮಿಗಲು
ಶೀತೋಪಚಾರಕನುವಹ ಗಂಧಪುಷ್ಪ ಮಾ
ಲ್ಯಾತಿಶಯ ಸುವ್ಯಜನ ತಂಪುಜಲವಸ್ತುವಂ
ತಾ ತಳೆದು ತವಕದಿಂದೈತಂದಳಚ್ಯುತನ ರೂಪಿನಿಂ ಪತಿಯನೆಣಿಸಿ ೫೪

ತಳೆದ ದಿವ್ಯ ದುಕೂಲ ವಿವಿಧ ಮಾಲ್ಯಾಭರಣ
ಮಳವಟ್ಟ ಶೋಭನಾಕಾರ ಕಳೆಯಿಂ ಧರಾ
ತಳದಖಿಲ ಸಾಧ್ವಿಯರ ಸೀಮಂತಮಣಿ ಸುಗುಣಿ ಸುಂದರದ ಕಣಿ ಕಾಮಿನಿ
ಅಳಿಕುಂತಲಶ್ರೇಣಿಯುರಸಿ ಸುಪ್ಪಾಣಿ ಮಂ
ಗಳಗಾತ್ರೆ ಫಣಿವೇಣಿ ಮಂಜುಳಸುವಾಣಿ ನಿ
ರ್ಮಳದಂತನೇತ್ರರುಚಿಗಳ್ ಮುಸುಕಲೈತಂದಳರಸನೆದೆ ಕಳವಳಿಸಲು ೫೫

ಪ್ರಕಟ ಸನ್ಮೋಹವರ್ಷವ ಕರೆವ ಶುಭಕನೀ
ನಿಕ ನೀಲಮೇಘ ನಿರ್ಗತ ತಟಿದ್ವಲ್ಲಿಗಳೊ
ಸುಕರ ಸದ್ಭ್ರೂಯುಗ್ಮ ಮದನ ಕಾರ್ಮುಕ ಮಿಳಿತನಯನೋತ್ಪಲಾಸ್ತ್ರಂಗಳ
ಮುಖಕೆ ಸಾರ್ಚಿದ ವಜ್ರದಲಗುಗಳೊ ಮದಿತ ಕಾ
ಮುಕ ಹೃದಯದಳನ ಮದನಾಸಿಗಳೊ ತಿಳಿಯದೆನೆ
ಚಕಿತಮನ್ನೈದಿಸಿತು ಜನಪತಿಯ ಮತಿಗಂ ಸುನೀತಿಯ ಕಟಾಕ್ಷಮೆರಗಿ ೫೬

ನೆಗಳಿ ಶರಧಿಯನುಬ್ಬಿಸುವ ಶಶಿಯು ತತ್ಸತಿಗೆ
ಮೊಗವಾಗಿರಲ್ ನೃಪನ ಮೋಹಾಬ್ಧಿಯೇರ್ಗೊಂಬು
ದಘಟಿತವೆ ಸಚ್ಚಂದ್ರ ಕಾಂತಶಿಲೆಯಂ ತೊರೆವ ಕೌಮುದಿಯೆ ತದ್ವನಿತೆಗೆ
ಮುಗುಳುನಗೆಯೆನಿಸಿರಲ್ ತಚ್ಚಿತ್ತಕರಿಣಮಂ
ಜಗುಳಿಸುವುದದ್ಭುತವೆ ಪೇಳೆನಲ್ ತವಕದಿಂ
ಭುಗಿಲೆಂದು ದರಸನೆದೆ ಧೃತಿಗುಂದಿ ತತ್ಸತಿಯ ಸೊಬಗು ಮೂರ್ತಿಯ ನೋಡಲು ೫೭

ಭಾವಿಸಲು ಸಚರಾಚರ ಪ್ರಾಣಿಗಳಲುಳ್ಳ
ಲಾವಣ್ಯಮನಿತುವಂ ಸಂಗ್ರಹಿಸಿ ಕಮಲಭವ
ನೀ ವನಿತೆಯಳ ರೂಪವನು ಗೈದು ಮಿಕ್ಕ ಲಾವಣ್ಯಮನ್ನುರದ ಮೇಲೆ
ಸಾವಧಾನದಲೆರಡು ರಾಶಿಯನ್ನನುಗೈದ
ಭಾವಮಲ್ಲದೆ ಕುಚಗಳಾಗವೆಂಬಂತಿರಲ್
ಭೂವರಂ ನೋಡಿ ವಿಸ್ಮಯದಿಂದೆ ರತಿಕಾಂಕ್ಷೆಗಂ ಮನವ ಬಲಿದನಂದು ೫೮

ಎಣಿಕೆಗೊಳುತಿಂತು ನೋಡುತ್ತಿರಲ್ ಪದದೊಡ
ಝಣಝಣರ್ವೊಳಗುತಿರಲಂಚೆ ನಡೆಯಿಂದೆ ನಿ
ಕ್ವಣರವದ ಕರಭೂಷಣಂಗಳಿಂ ಕಂಬುಕಂಠಾಲೋಲ ಮಣಿವಲಯದ
ವಣಿತೆಯಿಂ ರತ್ನಕುಂಡಲಗಳೊಲದೊಲದು ದ
ರ್ಪಣ ಕಪೋಲಂಗಳೊಳ್ ಬಿಂಬಿಸಿರಲೆಸೆವ ಕಿಂ
ಕಿಣಿಕಿಣಿಸ್ವನದ ಕಿರುಗಂಟೆ ಮೇಖಲೆಯಮರಲಾ ಸುದತಿ ನಡೆತಂದಳು ೫೯

ಮೆಲ್ಲಮೆಲ್ಲನೆ ಪಜ್ಜೆಯನ್ನಿಡುತ ಪದದೊಡ
ಘಲ್ಲುಘಲ್ಲೆಂಗುತಿರೆ ಬರಬರಲ್ ನೃಪನಂಗ
ಝುಲ್ಲುಝುಲ್ಲೆನುತ ರೋಮಾಂಚ ಚಕಿತಾನನದಿ ಕಿರಿಬೆಮರ್ಪೊಳೆವುತಿರಲು
ಕೊಲ್ಲುಕೊಲ್ಲೆನುತಲಬ್ಬರಿಸಿ ಮನ್ಮಥನು ರತಿ
ಗೊಲ್ಲದೊಲ್ಲದರನೊಲಿಸುವ ಪಂಚಶರಗಳಿಂ
ಸೊಲ್ಲುಸೊಲ್ಲಿಗೆ ಸೊರಗಲೆಚ್ಚಡಾ ಭೂವರಂ ತರಹರಿಸದಿಂತೆಂದನು ೬೦

ರೂಪವತಿ ಕೇಳ್ವದು ವಸಂತನುರುಬೆಯ ಘರ್ಮ
ತಾಪಮಂ ಕಳೆಯಲೆನೆ ವನಕೇಳಿಗೈದೆ ತ
ತ್ತಾಪದೊಳ್ ವಿರಹತಾಪವು ಬೆರೆದು ಮುಳ್ದಿಗೆದು ದಸಿಯ ಬಲಿದಂತಾದುದು
ನೀ ಪತಿವ್ರತೆಯೆಂಬುದರಿದರಿದುಳಿದು ನಿನ್ನ
ಸಾಪತ್ನಿಯಳಿಗೆ ಸಲುಗೆಯನಿತ್ತು ಬೆರೆತಿರ್ದ
ಪಾಪದಿಂದೇರ್ದ ಝುಳಮಾಗದಿರದಿನ್ನು ನಿನ್ನನುವದೇನಸುರೆಂದನು ೬೧

ಪತಿಯೆ ಕೇಳ್ ನಿನ್ನ ಭಾಗಕೆ ಬಂದ ತನುವ ನೀ
ಪತಿಕರಿಸಿ ಪೊರೆಯದೊತ್ತರಿಸಲಿನ್ನೆನಗೆ ಮಾ
ಪತಿಯೆ ಗತಿಯಲ್ಲದಿನ್ನಿಲ್ಲವೆಂದರಿದು ಬಗೆಗೊಳಲು ತನ್ಮಹಿಮೆಯಿಂದೆ
ಪತಿಯಂಘ್ರಿಗಳ ಕಂಡೆ ಪಿಂತೆ ಬಹು ವಾಸರದಿ
ಪತಿಸೇವೆ ಸಂಘಟಿಸದುಂಡಾಡಿಯೆನಿಸಿರ್ದ
ಪತಿತಳಂ ಕ್ಷಮಿಸಿ ರಕ್ಷಿಪುದೆಂದು ಚರಣದೊಳ್ ವೈಯಿಕ್ಕಿ ನಿಂದಿರ್ದಳು ೬೨

ಅಹಹ ಬೆಲ್ಲವನುಳಿದು ಬೆಳಚೆಗಲ್ಲಗಿವವರ
ಮಹಿಮೆಯನ್ನೈದಿ ಸಾಧ್ವಿಯನುಳಿದೆವಿನ್ನೆಗವು
ಸಹಜಮೆನಿಸಿರದುಪೇಕ್ಷಿಸಲಿನ್ನು ತಪ್ಪಾದುದೆನುತ ಸುಪ್ರೇಮ ಮಿಗಲು
ಮಹಿಳೆಯನ್ನಪ್ಪಿ ಸಂತೈಸುತಿರಲನಿತರೊಳ
ಗಹಿವೇಣಿಯೋಸರಿಸಿ ನುಡಿದಳಿಂದಿನಲೆನ್ನ
ಗೃಹವ ಪಾವನವೆಸಗಬೇಹುದೆನಲೊಡವಟ್ಟು ತೆರಳಿದಂ ನಿಜಸದನಕೆ ೬೩

ಪಚ್ಚೆಲಾಮಂಚ ಮುಡಿವಾಳಮುಂಜಪ್ಪರದ
ನಿಚ್ಚಳದ ಕರುವಾಡ ಮಣಿವೇದಿಕೆಗಳ ಪೊಂ
ಗಚ್ಚೆಯಮರಿದ ಕುಡ್ಯಲೋವೆಗಳ ವಜ್ರಬಂಧನ ರನ್ನವಾಗಿಲುಗಳ
ಬೆಚ್ಚ ಮುತ್ತಿನ ಮಲುಕು ಮೇಲುಗಟ್ಟುಗಳ ಮನ
ಮೆಚ್ಚಿಗೆಯ ವಿದ್ರುಮಸ್ತಂಭಗಳ ಕಳೆಗಳೊಡೆ
ದಚ್ಚರಿಯ ಪರಿಮಳ ಘಮಂಘಮಿತ ರಾಜಸದನ ಪ್ರವೇಶಂಬಡೆದರು ೬೪

ಬಳಿಕ ಮಜ್ಜನ್ಯಭೋಜನಾದ್ಯುಪಚಾರಮಂ
ತಳೆದು ಕೇಳೀಸದನಮನ್ನೈದಿ ಶೃಂಗಾರ
ಕಳೆಯ ಬೀರುವ ಹಂಸತೂಲಿಕಾ ಪರಿಯಂಕ ಶಯ್ಯಾಸನವನಡರ್ದು
ಬಳಿಯುಲೊಪ್ಪುವ ನಿಲವುಗನ್ನಡಿಯ ಮಾಣಿಕದ
ಬೆಳಗುದೀಪಗಳ ತಾಂಬೂಲ ಕರ್ಪೂರ ಪರಿ
ಮಳದ ಕರಡಿಗೆಗಳೆಸಕದ ಮಹಾಸೌರಂಭಮಂ ನೋಡಿ ಹೆಚ್ಚಳಿಸುತ ೬೫

ಮತ್ತಾ ಸುನೀತಿ ಬಿಜ್ಜಣವಿಡಿದು ಪರಿಯಂಕ
ದೊತ್ತಿನೊಳ್ ನಿಂದು ಬೀಸುತ ಮೃದುಳ ಚರಣಗಳ
ನೊತ್ತುತಲಿ ಬರಿಯೌಪಚಾರಗಳ ನೆಸಗುತವೆ ರತಿಗೆ ಮುಂಬರಿಯದಿರಲು
ಒತ್ತರಿಪ ವಿರಹದಿಂ ನುಡಿದನೆಲೆ ಕಠಿಣಮತಿ
ಚಿತ್ತಜನ ಕೊಳೆಗೆಮ್ಮನೊಡ್ಡಿ ಮೇಲುಪಚಾರ
ವೃತ್ತಿಯಂ ಸಮನಿಸುವುದುರಿಯನಣಗಿಸುವ ತೈಲದ ಧಾರೆಯಕಟೆಂದನು ೬೬

ದರುಳ ದರ್ಪಕನಂಗಹೀನನಾದಡು ತನ್ನ
ಗರುವಮಂ ಬಿಡದೆ ನಿನ್ನವಯವದೊಳಾವರಿಸಿ
ನೆರೆ ಸತ್ವಮಂ ಪಡೆದು ಸಾಂಗವಿಕ್ರಮತೆಯಿಂ ನಿನ್ನನೇತ್ರಂಗಳೆಂಬ
ಶರಗಳಿಂದೊದಗಿ ಮೇಲ್ವಾಯಿದಬ್ಬರಿಸಿ ಗೋ
ಣರಿವುದಂ ನೀಂ ಕಂಡು ಕಂಡು ನಿರ್ಮೋಹ ಗುಣ
ಮೆರಗಿ ತನ್ನಿಷ್ಟ್ಯತಿಯನೆಸಗದಿರಲಾರು ನಿನ್ನಂತೆ ನಿಷ್ಠುರರೆಂದನು ೬೭

ಸಿರಿಯಣುಗನಂ ಭವದ್ವಕ್ಷೋಜ ಗಿರಿಮಧ್ಯ
ದಿರುಬಿನೊಳ್ ಕೆಡಹಿ ಗಾಢಾಲಿಂಗನದ ಬಿಗುಹಿ
ಲರೆದು ಕೂರುಗುರಲಗಿನಿಂದಿರಿದು ಪೊರವಡಿಸಿ ಚೆಂದುಟಿಯ ಸೀವೆಗೆಳೆದು
ಪಿರಿದು ಚಪ್ಪರಿಸಿ ದಂತಕ್ಷತಗಳಿಂದೆ ಬಾಯ್
ದೆರೆಸಿ ಚೌಶೀತಿ ಬಂಧನಗಳಿಂದಳವಳಿಸಿ
ಮರಳಿ ಮೊದಲಂತಂಗಹೀನನೆನಿಸದೆ ಮಾಣ್ದಪೆನೆ ನಿನ್ನ ಬಲವಾದೊಡೆ ೬೮

ಮುಂಬರಿವ ತೀವ್ರ ಸುಯಿಲುಗಳಿಂದೆ ಬಿರಿನೋಟ
ದಿಂ ಬಿಗಿದ ಪುರ್ಬಿನಿಂ ಕುಣಿವ ಕುಡಿ ಮೀಸೆಯಿಂ
ದಿಂಬಿಡಿದ ನಸುಗಂಪನಾಂಗದಿಂ ಕಿರುಬೆಮರ್ನೊಳೆವ ಮುಖಪದ್ಮದಿಂದೆ
ತುಂಬಿ ಕಡೆಗೊಗುವ ಮೋಹಾವೇಶದಿಂ ತವಕ
ಗೊಂಬ ನಿಜ ಕಾಂತನಿರವಂ ನೋಡಿ ನೀಲೋತ್ಪ
ಲಾಂಬಕಿಯು ಕಾರುಣ್ಯದಿಂ ನುಡಿದಳರಗಿಣಿ ವಿಪಂಚಿಗಳ್ ಸ್ವರಗುಂದಲು ೬೯

ದಶನರುಚಿ ಸಂವ್ಯಾಪ್ತವಾಗಲ್ಕೆ ಧವಳಾಂಗ
ದಸಮಾಕ್ಷನಂದದಿಂ ನಯನ ನೈಲ್ಯದ ಕಾಂತಿ
ಮುಸುಕಲಚ್ಯುತ ಮೂರ್ತಿಯಂದದಿಂ ನಿಜದೇಹರೋಚಿಗಳ್ಕವಿದಿರಲ್ಕೆ
ಮುಸುನಿವಣ್ಣದ ದ್ರುಹಿಣನಂದದಿಂ ಮುಂದೆ ಶೋ
ಭಿಸುವ ಕಾಂತನೆ ಮೂರು ಮೂರ್ತಿಸ್ವರೂಪನೆಂ
ದೆಸೆವ ಸದ್ಭಕ್ತಿ ಭಾವನೆಯಿಂದಲೆರಗಿ ಬಿನ್ನವಿಸಿದಳ್ ಕಾರ್ಯದನುವಂ ೭೦

ವಿಪುಲಾಧಿನಾಥ ಕೇಳ್ ಧರ್ಮದೆಡೆಯಾಗಿ ನಿಜ
ವಪುವಿನೊಳಗರ್ಧಭಾಗದ ಸಲುಗೆವಡೆದೆನ್ನ
ನಪರಾಧಮಿರದೆ ವರ್ಜಿಸಿದ ಪರಿಯೆನ್ನ ದೌರ್ಭಾಗ್ಯವಾದಡು ಸುರುಚಿಯು
ಉಪಮೆಗಂ ಸೂರೆಯೋದುದು ಚಿತ್ತಮೀಗೆನ್ನ
ಕೃಪೆಗೈದು ಕೂಡಿದಡೆ ತತ್ಸತಿಯು ಕಲಹದಿಂ
ವಿಪರೀತವಾಗದುಳಿವುದೆ ನಿನ್ನ ಕರುಣಮೇ ಸಾಕು ರತಿಯಿರಲೆಂದಳು ೭೧

ಎನಲು ನಿನ್ನಂದದ ಪತಿವ್ರತೆಯನೊತ್ತರಿಸಿ
ಮನುಜಾಧಮತ್ವಮಂ ಬಳಸಿದಪರಾಧಮಂ
ವನಜಾಕ್ಷನೆವಗೆ ಮನ್ನಿಸಬೇಹುದಾದಡುಂ ಸುರಚಿಯಳ ಸೂಡುನುಡಿಯ
ನೆನೆವನಲ್ಲಿನ್ನು ನಿನ್ನಂಗಸಂಗವೆ ಮರ್ತ್ಯ
ಜನುಮಸಾಫಲ್ಯಮಿನ್ನೆಗಮುಳಿದ ದೋಷಮಂ
ಜಿನುಗಿಸದೆ ಮಾಣದೆಂದಂಗನೆಯನುಪಚರಿಸಿ ಶಯ್ಯಾಸನಕೆ ಸೆಳೆದನು ೭೨

ತಕ್ಕೆ ಚುಂಬನ ಲಲ್ಲೆ ಸರಸೋಕ್ತಿ ಪರಿಹಾಸ
ಸೊಕ್ಕಿಸುವ ತೊಡರು ಬಂಧನ ಗಳರವಾನಂದ
ಟಕ್ಕು ದೈನ್ಯತೆ ಮುಳಿಸು ಮಧುರಾಧರಪ್ರಾಶನಾದಿ ನಾನಾತೆರಗಳ
ಅಕ್ಕಜದ ರತಿವರಸೆಗಳಲಿ ಪುಲಕಂಗಳಿಂ
ಮಿಕ್ಕು ಸುಪ್ರೌಢಿಗಳಲೋರ್ವರೋರ್ವರನು ಹಿಂ
ದಿಕ್ಕಿ ಸಂತಸಭರದಲಿಸೆದಿರ್ದರಾಂತ ನರಜನ್ಮಕಿದು ಸಫಲಮೆನಿಸೆ ೭೩

ಇಂತೆರಗಿ ಶುದ್ಧಸಾತ್ವಿಕದಿಂದೆ ಹರಿನೆಸಹ
ನಾಂತಿರ್ವರೊಮ್ಮನದಿ ಕೂಡಿ ಮರುದಿವಸದೊಳ
ಗಂತು ರತಿಸಾಮ್ರಾಜ್ಯಮುಂ ತಾಳ್ದು ಹಲವು ಭೂಷಣವಸ್ತ್ರ ವಸನದಿಂದೆ
ಕಾಂತೆಯಂ ಸತ್ಕರಿಸಿ ಮುಂಡಾಡಿ ಸರಸದಿಂ
ಸಂತುಷ್ಟಿಗೊಳಿಸಿ ನರನಾಥ ಪೊರವಂಟು ಪಳೆ
ಯಂತೆ ಸುರುಚಿಯು ಸವನಕೈದಿದಂ ಶುಭಗರ್ಭಮಂ ಧರಿಸಿದಳ್ ಸುನೀತಿ ೭೪

ಹಸಿವು ತೃಷ್ಣೆಗಳಲೆಯಲಲಸನಿದ್ರೆಗಳೆಳೆಯ
ಲಶನಮಲ್ಪಕ್ಕಿಳಿಯಲಾಮ್ರಹಿತಗಳ್ ವೊಳೆಯೆ
ವಸನವೋಹವು ಸರಿಯೆ ವದನ ಕಿರುಬೆಮರೊರೆಯಲಂಗಾಂಗ ಪಸು[1]ರುವರಿಯೆ[1]
ಅಸುರುಸುರ್ಪಟು ಸೆಳೆಯಲಮುಲತನು ನೀರ್ದಳೆಯ
ಲಸಿಮಧ್ಯ ಮುಂಬೊರೆಯಲಧರರುಚಿ ಗಾರ್ವೆರೆಯ
ಲಸಿತ ಮೃದ್ಭಕ್ಷಣೆಯಲಮರಿದ ಹಿತೇಕ್ಷಣೆಯಲಾ ಸುದತಿ ತೋರ್ದಳಂದು ೭೫

೭೫. 1. ಳಿಯಾ.

ನೀರ್ದೆಗೆದ ಪೊಳೆಯ ಮಣಲೆಂಬಂತೆ ದಿನದಿನದ
ಲೇರ್ದವು ನಿತಂಬಗಳ್ ಕಂಜ ಕಲಿಕಾಗ್ರಮಂ
ಸಾರ್ದ ಷಟ್ಪದ ಶಾಬಕಂಗಳೆನೆ ಕುಚ ಚೂಚಕಂಗಳಸಿತವನ್ನೈದಲು
ಜಾರ್ದ ಭಂಗಾವರ್ತ ನಿಶ್ಚಲಾಬ್ಧಿಯ ತೆರದಿ
ತೋರ್ದು ಮೂವಳಿಯಣಗಿ ನಾಭಿಕುಳಿ ಸಮಮಾಗೆ
ಮೀರ್ದುದು ತಳೋದರವು ಜಘನಮುನ್ನುಬ್ಬಿಸುತ ವರ್ಷಾಗಮದ ನದಿಯೆನೆ ೭೬

ಪೊಳೆವ ಕಾಂಚನಕೆ ರಸ ಸೋಂಕಿದೋಲ್ ಪೊಂಬಣ್ಣ
ಮಿಳಿದು ಶುಕ್ಲಾಭದಿಂದೆಸೆವ ತನುರುಚಿಯ ರವಿ
ವೆಳಗಿನುತ್ಪಲಗಳಂದದ ಕದಡುಗಣ್ಣುಗಳಲುಬ್ಬುದೊಡೆಯುಸಿ ಮಸೆಗಳ
ಬೆಳಗುಗನ್ನಡಿಯ ಹೊಳಹುಗಳೇರುಗಲ್ಲಗಳ
ಬಳಲುಮುಡಿ ತೊಡರು ನಡೆಗಳ ತೊಡೆಯನಂಟದಿಹ
ಬಳಸು ನಿರಿ ವಸನ ಬೆದರಿದ ಮುಂಗುರುಳ್ಗಳಿಂದಾ ಕಾಂತೆ ಶೋಭಿಸಿದಳು ೭೭

ಊಡಿಸಲ್ ಕಳಲುವಳ್ ಉಣದಿರಲ್ ಬಳಲುವಳ್
ನೋಡುತಿರಲಲಸುವಳ್ ನಮಿತವಾಕಳಿಸುವಳ್
ಪಾಡಲಾಲೈಸುವಳ್ ಪೊಸಪೊಸತ ಬಯಸುವಳ್ ಪೊಂಚುಪೊಂಚುತ ಸುಳಿವಳು
ರೂಢಿಯಿಂ ಭಾಷಿಸಳ್ ರಜ್ಜೆಗೆ ಪ್ರವೇಶಿಸಳ್
ಗೂಢದಿಂ ಹಿಗ್ಗುವಳ್ ಗುಂಪಿಗಂ ತಗ್ಗುವಳ್
ಮೂಢಳೆನೆ ತೋಚುವಳ್ ಮುರಿಮುರಿದು ನಾಚುವಳ್ ಉದರದುಬ್ಬಟೆ
ಯೊದವಲು ೭೮

ಸಿತಪಕ್ಷಗರ್ಭಗತ ಚಂದ್ರಮನೊ ಶುಕ್ತಿ ಸಂ
ಗತಮಾಗಿ ಪೊಳೆವ ಸನ್ಮಾಕ್ತಿಕಮೊ ದುಗ್ಧಾಬ್ಧಿ
ಯುತದಿ ರಂಜಿಪ ಸುಧಾಕಲಶಮೋ ಯೋಗಿಹೃದ್ವಸತಿಯಾಪೋಜ್ಯೋತಿಯೋ
ಸತತ ಶೇಷನ ಶಿರೋರತ್ನಮೋ ಶಾರದಾ
ಪತಿ ಗರ್ಭಗತ ಶಾತಕುಂಭಮೋ ಪೇಳೆನಲ್
ಪ್ರತಿದಿನದಿ ಬೆಳೆದುದಚ್ಯುತರೂಪ ಪಿಂಡಮುಂದಾ ಸುನೀತಿಯ ಗರ್ಭದಿ ೭೯

ಇಳೆಗೆ ಸೌಭಾಗ್ಯಮೇರ್ಗೊಂಬ ಕುರುಹೆಂಬಿನಂ
ಬೆಳೆದುದೊಂಬತ್ತು ತಿಂಗಳು ಸನ್ಮುಹೂರ್ತ ಮಂ
ಗಳ ಯೋಗ ತಿಥಿ ವಾರ ತಾರೆ ಶುಭಕರ ನವಗ್ರಹಬಲಗಳಮರಿಕೆಯೊಳು
ನಳಿನಲೋಚನೆ ಪಡೆದಳಮಲ ಬಾಲಕನ ಭೂ
ತಳಮೆಂಬ ಪಶುಪತಿ ವರೂಥಕೊಪ್ಪುವರನ್ನ
ಗಳಶಮನ್ನನುಗೈದು ಕಳುಹಿದಂ ದ್ರುಹಿಣನೆಂದಮರರುಗ್ಗಡಿಸಂತಿರೆ ೮೦

ಮಹಿಪ ಕೇಳಚ್ಚರಿಯನಮರಗಣ ಮರ್ತ್ಯರೊಳ್
ಮಹಿಳೆಯರ್ಪುರುಷರಾನಂದದಿಂ ದುಬ್ಬುವದು
ಸಹಜಮೆನಿಸುವುಪದಂತಿರಲಿ ಮಿಕ್ಕಿನ ತಿರ್ಯಗಾದಿ ಜಂಗಮಗಳಾದ
ಬಹು ಜೀವರಾಶಿ ಗಿಡ ಮರ ಕೀಟ ಸರಿದದ್ರಿ
ಗಹನಮಾಕಾಶ ಪವನಾಗ್ನಿ ದಿಗ್ವಳಿಗಳುಂ
ಮಹದುತ್ಸವದಲಿ ನಲಿದಾಡಿದವು ಸರ್ವಸಂಪತ್ಸಲುಗೆಯೊದವಿತೆಂದು ೮೧

ಉತ್ತಾನಪದ ಸುನೀತಿಯರಿಗಾಹ್ಲಾದಮಂ
ಮತ್ತೆ ಸುರುಚಿಯಳ ಕುತ್ಸಿತಮತಿಗೆ ಭೇದಮು
ನ್ಮತ್ತಮು[ದ]ಸುವ್ರತಿಗಳರಿವಿಗಾಮೋದಮಂ ದುಷ್ಟದುರ್ಜನನಿವಹಕೆ
ಒತ್ತಲಿಪ ಭೀತಿ ಬೆಜ್ಜರ ಮನೋರೋಗಮಂ
ಚಿತ್ತನಿರ್ಮಲರಂತರಂಗಕನುರಾಗನುಂ
ಬಿತ್ತಿದುದು ಹರಿಯ ಲೀಲಾವತಾ[1]ರಾಗಮಂ ನೋಳ್ಪಡಾ ಗ[1]ದ್ಭುತಮೆನೆ ೮೨

ಜಾತಕರ್ಮಾದಿಗಳನನುಗೈದು ಗುರು ವಿಪ್ರ
ರಾತುಮಾಭೀಪ್ಸಿತಾರ್ಥವ ಪೊರೆದು ಬಹುಳತರ
ಭೂತ ಸಂತುಷ್ಟಿಯನುವಂ ಬಲದು ನರನಾಥನತಿಮಹೋತ್ಸವದಲಾಳ್ದು
ಚೇತೋವಿಲಾಸದಿಂದೆರಗಲ್ಕೆ ಸಭೆಯೊಳ್ ಸು
ನೀತಭರ್ವಿಷ್ಯದರ್ಥವನರಿದು ಪೇಳಿದ
ಭೂತಳದೊಳಿವಗೆ ನಾಶಗಳೆರಗವದರಿನಿಂ ಧ್ರುವಸಂಜ್ಞೆಗೈವುದೆಂದು ೮೩

೮೨. 1. ರದ ಬಾಲನುತ್ಪತ್ತಿಯ

ನಾಮಕರಣವನೆಸಗಿ ನೃಪನ ಮನ್ನಣೆಯ ತಳೆ
ದಾ ಮಹಾಋಷಿಗಳೆಂದರ್ಮನುಜ ರೂಪಾಂತ
ತಾಮರಸನೇತ್ರನಂಶೀಭೂತನಹ ಮುಂದೆ ತಪದಲಾ ಹರಿಯನೊಲಿಸಿ
ವ್ಯೋಮ ಮಂಡಲದಲಜ ಲೋಕಕಿಂ ಮೇಲ್ಗಡೆಯ
ಸೀಮೆಗಿಂ ಮೇಲುಭಾಗದಲಿ ನಿಜಮಂಡಲವ
ನಾ ಮುಕುಂದಪ್ರಸಾದದಿ ಪಡೆವನೆಂದುಸುರಿ ಸೈವರಿದರಾ ವಿಪ್ರರು ೮೪

ಮುನಿಗಳಂ ಕಳುಹಿಸಿ ಸುನೀತಿಯಂ ಸಂತೈಸಿ
ಜನರನುಪಚರಿಸಿ ಸಂತೋಷಮನ್ನೊಳಗಿಟ್ಟು
ವನಿತೆ ಸುರುಚಿಯಳಿಗೋಸುಗ ಕಪಟದುಗುಡಮನ್ನಂಗವಿಸಿ ಭೂನಾಥನು
ಮನೆಗೆ ತೆರಳಿದನಿತ್ತ ಬಾಣಂತಿ ಬಸಿದ ತನು
ವಿನಲಿ ಮುಸುಕಿದ ಹರಿದ್ರಾಲೇಪ ತಾಂಬೂಲ
ಘನತೆಯಿಂ ಕಿವಿಯಲಡಸಿದ ಹಿಂಗು ಹತ್ತಿಗಳಲಮರಿರ್ದಳುರೆ ಬಳುಕುತ ೮೫

ಝಳವಿಸಿಲಿಗಲಸಿದೆಳೆವಾಳೆ ಸುಳಿಯಂತೆ ಮೂ
ವಳಿಗಳೆಸೆದಿರಲು ಸುಳಿಗಾಳಿಯಿಂ ಕಂಪಿಸುವ
ನಳಿನ ಪತ್ರದ ತೆರದಲುದರಮದುರಲು ಜಘನ ಸುಕ್ಕಿನಿಂನಿರಿಗಟ್ಟಲು
ಕಳಲಿರ್ದ ಕದಳಿದೊಡೆಯುಮರಿರಲ್ ಕಲಶ ಕುಚ
ಗಳಲಿ ಪಾಲೊರೆವುತಿರೆ ಬಡನಡುವಿಗಂ ಬಿಗಿದ
ಬಳಸುಗಾಢಾಂಬರದ ಸುತ್ತಿನಿಂದೆಸೆವ ಬಾಣಂತಿ ಪರಿಶೋಭಿಸಿದಳು ೮೬

ತೊಟ್ಟ ಕರಿಗುಪ್ಪಸದ ಬಟ್ಟ ಚಂದಿರ ಪಣೆಯ
ಲಿಟ್ಟ ಕಸ್ತುರಿ ಚುಕ್ಕಿ ಬೊಟ್ಟ ಬಸಿಗದಪಿಲಳ
ವಟ್ಟ ಮಸಿಚುಕ್ಕಿಗಳ ದಿಟ್ಟ ನೈದಿಲೆಗಣ್ಣಲಿಟ್ಟ ಕಜ್ಜಳಕಳೆಗಳ
ಉಟ್ಟ ನೀಲಾಂಬರದ ಮೆಟ್ಟುಪಾದುಕೆಯ ತಲೆ
ಗಟ್ಟ ಸೆರಗಿನ ಕಾವುಗಟ್ಟು ತಾಯಿತದ ನುಂ
ಪಿಟ್ಟಯೇರಂಡರಸ ತೊಟ್ಟಿಡುವ ಬಾಲನಂ ನಿಟ್ಟಸುತಲೆಸೆದಿರ್ದಳು ೯೭

ಇಂತು ಪಸುಳೆಯ ಪಾಟವದ ಚೆಲ್ವ ನೋಡಿ ನೆರೆ
ಸಂತಸದಲೋಲಾಡುತಲಿ ಮೊಲೆಯನೂಡಿ ಮುದ
ದಿಂ ತೆಗೆದು ಬಿಗಿಯಪ್ಪಿ ಮುಂಡಾಡಿ ಮುದ್ದಿಟ್ಟು ಮೂರ್ಧ್ನಿಯನ್ನಾಘ್ರಾಣಿಸಿ
ಅಂತರಂಗದಲಿ ಶೇಷಾದ್ರಿ ವೆಂಕಟರಮಣ
ನಂತೆಸೆವ ಕೌಂಡಿಣ್ಯ ಗುರುವರ ಪದಾಬ್ಜಗಳ
ಚಿಂತನೆಯ ಬಿಡದೆ ಕಾಲವ ಕಳೆವುತಿರ್ದಳಂದಾತ್ಮಸಂಗತಿ ಸುನೀತಿ ೮೮

ಅಂತು ಅಧ್ಯಾಯ ೧೨ಕ್ಕಂ ಪದನು ೧೦೩೫ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ

೧೩. ಧ್ರುವರಾಯನಿಗೆ ಪದವಿ ಬಂದುದು

ಸೂಚನೆ:

ಉಪಮಾತೆಯಿಂ ತಿರಸ್ಕೃತನಾಗಿ ತದ್ಧ್ರುವಂ
ತಪದಲಚ್ಯುತನ ಮಚ್ಚಿಸಿ ತತ್ಪ್ರಸಾದದಿಂ
ದುಪಮೆಯಿರದೂರ್ಧ್ವ ಪದಮಂಡಲವ ಪಡೆದು
ಭೂಪಾಲನೆಯಲೆಸದನಂದು

ಭೂವರನೆ ಕೇಳಃ ಮೇಲ್ಗತೆಯನೊಮ್ಮಸನಾಗಿ
ಮಾವರಾಂಶೆಯ ಪುತ್ರನಿವನೆಂದು ಯತಿಯೋಗಿ
ಪಾವನಾತ್ಮಕರು ಪೇಳ್ದುದೆ ನೆನೆದು ಭಕ್ತಿಭಾವದಲಿ ಸಂತುಷ್ಟಳಾಗಿ
ಆ ವನಿತೆಯಾತ್ಮಜನ ನೋಡಿ ವಿಸ್ಮಿತಳಾಗಿ
ಕಾವುಗಟ್ಟುಗಳ ರಕ್ಷೆಯನಿಟ್ಟು ಪಿರಿದಾಗಿ
ಪಾವುಮಣಿ ಪಾಲ್ಮಣಿ ಸರಂಗಳನ್ನನುವಾಗಿ ಬಂಧಿಸಿದಳರ್ಭಕಂಗೆ ೧

ಸುತ್ತಾಪಥವನೆರೆದು ಸುಳಿಗೆಣ್ಣೆಯಂ ತೊಡೆದು
ಪೊತ್ತುಪೊತ್ತುಗಳರಿದು ಪಾಲ್ಗುಡಿಸಿ ತೂಪಿರಿದು
ಒತ್ತೆಣ್ಣೆಯಂ ಬಳಿದು ಬಜೆಬೆಣ್ಣೆಯಂ ತೆಯಿದು ಬಾಯ್ಗೆ ನುಂಪಿಸುತಪೊರೆದು
ಮತ್ತೆ ಸಂಜೆಗೆ ಜೋತಿ ರಕ್ಷೆಯನ್ನಿಡುತನ್ನ
ದುತ್ತಂ ನಿವಾಳಿಸುತಲೆಡೆಗೆಡೆಗೆ ಕಿಸುರುದೆಗೆ
ವುತ್ತ ಮೊಲೆಯನ್ನೂಡಿ ತೂಗುವಳ್ ತೊಟ್ಟಿಲೊಳಗಿಟ್ಟು ಜೋಗುಳವ ಪಾಡಿ ೨

ನಿಡುವೇಣಿ ಹಿಂಮುಡವನಲೆವುತಿರೆ ಗಳದ ಮಣಿ
ದೊಡರು ವಕ್ಷಗಳ ಮೇಲೊಲೆವುತಿರೆ ಕದಪು ಕ
ನ್ನಡಿಯೊಳಗೆ ಕುಂಡಲಗಳಲುಗುತಿರೆ ತನುವಲ್ಲಿ ನಸುವಾಗಿ ಲೋಲಾಡಲು
ತೊಡೆಗಳ್ಗೆ ತೂಳಮೋರ್ದಂತಮುರೆ ಪೊಂದೊಟ್ಟೆ
ಲುಡಿ ನೆರಿಯು ನೆರಗಿಯಪ್ಪಳಿಸುತಿರೆ ನೇಣುಗಳ
ಪಿಡಿದು ತೂಗಿದಳು ಪಾಡಿದಳು ಬಾಲಾಂಗದೊಳ್ ಕಣ್ಗದಿರ್ ನಟಿಸುತಿರಲು ೩

ಇಂತು ಷಣ್ಮಾಸಗಳ್ ಸರಿಯಲೊಡೆ ಮುಗುಚಿ ಫಣಿ
ಯಂತೆ ತಲೆಯಂ ನೆಗಪಿ ನೋಡುವಂ ಯೆದೆಯೂರಿ
ಮುಂತಳೆಯಲುದ್ಯೋಗಿಪಂ ಬೆರಳನಾವಗಂ ಚೀಪುತಂ ಚಪ್ಪರಿಪನು
ತೊಂತಿ ಕಕ್ಷದಲಿರುಂಕಲ್ಕೊಲೆಯನುಣುತ ನಿಜ
ದಂತಾಂಕುರಂಗಳಂ ನಾಂಟುವಂ ಸುರಿವ ಜೊಲ್
ಬೊಂತೆಗುರುಳಿಸೆವ ಬಿರಿನೋಟ ತುಂಬಿಯ ಮೊರೆಹಿನರ್ಭಕಂ ಶೋಭಿಸಿದನು ೪

ಒಂಬತ್ತು ತಿಂಗಳೊಳಬೊಗಲು ಮೊಳಗಾಲ್ಗಳಿಂ
ದಂಬೆಗಾಲಿಕ್ಕುವಂ ಕರೆದಲ್ಲಿಗೆರಗುವಂ
ಕಂಬ ಗೋಡೆಗಳ ಪಿಡಿದೇಳುವಂ ತಪ್ಪಡಿಯನಿಡುತ ಕೆಡೆಕೆಡೆದಳುವನು
ಮುಂಬರಿದು ದೀಪಗಳ ಪಿಡಿಯಲಡಹಾಯುವಂ
ತಂಬಿಗೆಗಳನ್ನುರುಳಿಪಂ ಜಲದಿ [1]ತನ್ನಿದಿರು[1]
ಬಿಂಬಮಂ ನೋಡಿ ಶಿಶುವೆಂದಾಡಲೆಳಸುವಚ್ಚರಿಯ ಬಾಲಕನೆಸೆದನು ೫

ಚಪ್ಪಗಾಯಾಡಿಸುತ ಚಂದಕ್ಕಿತೋರಿಸುತ
ಲಪ್ಪಾಲೆತಿರುಗಿಸುತಲಾನೆಯನ್ನಾಡಿಸುತ
ಚಪ್ಪಾಳೆಯಿಕ್ಕಿಸುತ ಲೆಂಣೆಗಾಸಾಡಿಸುತ ಹೊನ್ನಗುಬ್ಬಿಯನರುಪುತ
ಅಪ್ಪಚ್ಚಿದಟ್ಟಿಸುತ ದೂರಿಯಂ ದೂಗಿಸುತ
ಕಪ್ಪೆಗುಪ್ಪಳಿಕೆಯಾ ಕಣ್ಣಮುಚ್ಚಾಲೆಯಿಂ
ತಪ್ಪ ಬಹುಬಾಲ ಕೇಳಿಕೆಗಳಿಂ ನಲಿಸುತ್ತ ಹಿಗ್ಗುವಳ್ ನೋಡಿ ನೋಡಿ ೬

ಮಾಗಾಯಿ ಬುಲ್ಲಗಾಯರಳೆಲೆಯು ಕಿರುಗಂಟೆ
ಪೂಗಳುಡಿದಾರ ಪೊಂಗೆಜ್ಜೆ ಪೆಂಡೆಯ ತೋಳ
ನಾಗಮುರಿ ಮುಂಗೈಯ ಕಂಕಣಂಗಳ ಕೊರಳ ಪುಲಿಯುಗುರು ಸರಪಣಿಗಳ
ಮೇಗಡೆಯಲೆಳೆಗುರುಳ ಚೆಂಡಿಗಮುರಿದ ಮುಲಕ
ರಾಗರಂಜಿತ ರನ್ನದಾಯಿತದ ಸರಗಳ
ನ್ನಾ ಗರುವ ಡಿಂಭಕಂಗಳವಡಿಸಿ ಮಸಿಬೊಟ್ಟನಿಟ್ಟು ಹೆರೆಹಿಗ್ಗುತಿಹಳು ೭

---

೧. ತನ್ನ ಪ್ರತಿ.

ಇಂದುಕುಲದರಸ ನೇಳೀ ತೆರದಿ ಯಾಮಕೊಂ
ದೊಂದು ವರಸೆಯ ತೊಡವನಳವಡಿಸಿ ಪೊಸ ಪರಿಯ
ಕಂದನಂ ನೋಡಿ ನಲಿವುತ ಕಾಲಮಂ ಕಳೆದಳಿಂತೈದು ವತ್ಸರಗಳು
ಸಂದು ಪೋದವು ಮತ್ತೆ ನಿಜಜನಕನಂ ನೋಡಿ
ನಂದನೆಯನೊಪ್ಪಿಸುವೆನೆಂಬ ವಾಂಛೆಯು ಮತಿಗೆ
ಮುಂದುವರಿವುತ್ತಿರ್ದುದಿತ್ತಲುತ್ತಾನಪದನೊಡ್ಡೋಲಗವನಿತ್ತನು ೮

ಪವಳಸಾಲ್ಗಂಭಗಳ ಪಚ್ಚೆಯ ಕವಾಟಗಳ
ನವರತ್ನ ಮಲಕುಗಳ ನವ್ಯತಪ್ತತಳುಕುಗಳ
ರವಿರುಚಿರ ಕುಡ್ಯಗಳ ರನ್ನಸೋಪಾನಗಳ ಶಶಿಕಾಂತ ವೇದಿಕೆಗಳ
ಸುವಿಶೇಷ ಚಿತ್ರರಚನೆಗಳ ಸಾರಂಭದಿಂ
ದಿನದರಸನಾಸ್ಥಾನಕಿಮ್ಮಿಗಿಲು ಸೊಬಗಿನ ವಿ
ಭವ ಮಹಾಸಭೆಯಲನುರಿದ ಸಿಂಹಪೀಠದೊಳಗರಸ ಪರಿಶೋಭಿಸಿದನು ೯

ಮಂತ್ರಿಗಳ್ ಸಾಮಂತರುಗಳು ಗಾಯಕ ಭಟ್ಟ
ಜಂತ್ರವಾದ್ಯಕ ವೈದ್ಯ ಪಾರಿಹಾಸಕ ಮಲ್ಲ
ಮಂತ್ರಜ್ಞ ವೇಷಧಾರಕ ಕವಿ ನಿಯೋಗಿ ವಿದ್ವಾಂಸ ನರ್ತಕಿಗಳೆಸೆವ
ಯಂತ್ರಕೋವಿದರಿಂದ್ರ ಜಾಲಕರ್ಮಿಕ್ಕ ದೇ
ಶಾಂತ್ರ ಯಾಚಕರು ದೈವಜ್ಞರಿಂತಹ ಸರ್ವ
ತಂತ್ರವೇತ್ತರ ಗಡಣದಿಂದಲೊಪ್ಪುವ ಸಭೆಯಲರಸ ತಾನೆಸೆದಿರ್ದನು ೧೦

ತೋರ ಮೀಸೆಗಳ ಕೆಂಗಣ್ಣುಗಳ ಪಟ್ಟಸದ
ಲೇರಿಸಿದ ಹಸ್ತಗಳ ಬಿಗಿದ ಬಾಕುಗಳ ತೋ
¹ಳ್ಗೀರು ಗಂಧ¹ಗಳ ಚಂಚಲ ತುರಾಯಿಗಳ ಚಲ್ಲಣ ದಟ್ಟಿಯಮರಿಕೆಗಳ
ತೋರ ಭುಜಗಳ ಮಿಡಿವ ಪುರ್ಬುಗಳ ಬೊ²[ಬ್ಬಿ]²ಡುವ
ವೀರ ರಸದಾಜಾನು ಬಾಹುಗಳ ಪದಚರರ
ಭಾರಿಯೊಪ್ಪಿರ್ದುದಿದ್ದೆಸೆಯಲುನ್ನತ ಕೈದುಗಳನೊದರಿ ಬೊಬ್ಬಿರಿವುತ ೧೧

೧೧. 1. ಳ್ಕೀರುಗಂಡ ೩. ಟ್ಬಿ

ಕೊರ್ವಿ ಒ ಬ್ಬು ಕಂಧರಗಳಿಂ ಬಾಯ್ಗಳಲೊ
ಸರ್ವ ನೊರೆಯೊರತೆಗಳ ಬಿಳುಹಿನಿಂ ನಸುವಾಗು
ದೋರ್ವ ಮಸ್ತಕ ನಿಗುರುಗಿವಿಗಳಿಂ ತುದಿಬಾಲಕೇರ್ವ ಕೆಂಬಲತಿಗೆಗಳ
ಪಾರ್ವ ಪರಿಯುವ ವೇಗ ಬಲುಹಿನಿಂ ಕೆಂಧೂಳ
ಡರ್ವ ಪಟುಸುಯ್ಲ ಫೂತ್ಕಾರದಿಂದಚ್ಚರಿಯ
ಬೀರ್ವ ಪಿಡಿದೇಜಿಗಳ್ ನಿಂದಿರ್ವವಿಕ್ಕೆಲವಲುಚ್ಚೈಃಶ್ರವಂಗಳೆನಲು ೧೨

ದಾಟು ಧುಮುಕುಗಳ ಸವ್ಯಾಪಸವ್ಯದ ಸುತ್ತು
ಧಾಟಿಯಿಂ ಸರ್ಪನೆಡೆಯೊಯ್ಯಾಳಿ ಹಾರಿಕೆಗ
ಳೋಟದಿಂ ಮುರಿವ ಮುಂಬರಿವ ಹೊಳಪುಗಳ ನೃತ್ಯದ ಜಾತಿವರಸೆಯಿಂದೆ
ತೋಟಿಗೊದಗುವ ಲಾಗು ವೇಗ ತಿರುಮುರುವುಗಳ
ಸೂಟಿಯಿಂ ವಾಘೆತೊಡೆಗಳ ಸನ್ನೆಯಿಂ ನೃಪನ
ನೋಟಕಚ್ಚರಿಯು ಬೀರುವ ಕವನವೀರ ರಾಹುತರಾಜಿ ನೆರೆದಿರ್ದುದು ೧೩

ಬಂಧಿಸಿದ ಚೌಘಾಳ ಚಪ್ಪರದ ನಾಲ್ದೆಸೆಯ
ಲೊಂದಿಸಿದ ಬಿಲ್ಲು ಬತ್ತಳಿಕೆಗಳ ಮುಂಬಣೆಗೆ
ಸಂಧಿಸಿದ ಹರಿಗೆ ಸೂನಂಗಿಗಳ ಕೊಂಬುಗತ್ತಿಗಳ ಸುಂಡಲಕಮುರಿದ
ಬಂಧುರದ ಕಳವಾಳ ಸರಪಳಿಗಳನುವಿನಿಂ
ಗಂಧೇಭ ರಾಜಿಯೆಸೆದುದು ಚಲದಗ್ರಾವಗಳ
ಮಂದೆಯೆನಿಸಿರಲು ಬೃಹದಾಕೃತಿಗಳಿಂ ಜೋದರಂಕುಶದ ಸನ್ನೆಯಿಂದೆ ೧೪

ಸೂತ್ರಸನ್ನೆಗೆ ಕುಣಿವ ಕುದುರೆಗಳ ಪಿಡಿವಾಘೆ
ವೇತ್ರಗಳನಾಂತ ಸಾರಥಿಗಳಿಂ ನಾನಾ ವಿ
ಚಿತ್ರ ಪಟ ಕೇತು ಸರಗಂಟೆಯು ಪತಾಕಾತ ಪತ್ರ ಪರುಠವಗಳಿಂದೆ
ಮಿತ್ರಬಿಂಬವ ಪಳಿವ ರನ್ನಗಲಶಗಳಿಂ ಪ
ತತ್ರಿ ವೇಗವಲೊದಗಿಯೊಡೆಮುಗುಚುವಂಕೆಯುಸಿ
ಪತ್ರಸಂಪುತದ ಪೊಂದೇರ್ಗಳಳವಡೆದಿರ್ದವತಿರಥರ ಬಿಗುಹಿನಿಂದೆ ೧೫

ಒಂದೆಸೆಯಲಾನೆಗಾಳಗ ಮೇಷಯುದ್ಧ ಮ
ತ್ತೊಂದೆಸೆಯ ನಾಟ್ಯವರಸೆಯ ನೃತ್ಯ ಗೀತ ಮಿ
ನ್ನೊಂದೆಸೆಯ ವೇದಾಂತತತ್ತ್ವಾನುವಾದ ಮೇಣೊಂದೆಸೆಯ ಪರಿಹಾಸವು
ಒಂದೆಸೆಯ ತರ್ಕ ಮೀಮಾಂಸಪ್ರಸಂಗ ಮಗು
ಳೊಂದೆಸೆಯ ಮಲ್ಲಗಾಳಗಮಿನಿತು ಪೆಲ್ಲಮ
ನ್ನೊಂದು ಕಾಲದಲೆ ಮನನಂಗೈವ ಪ್ರಜ್ಞೆಯ ಸಭಾಕಾಂತನೆಸೆದಿರ್ದನು ೧೬

ಬಂದು ಕಾಣಿಕೆಯಿತ್ತು ನೃಪನಡಿಗಳಿಂಗೆ ನೆರೆ
ವಂದಿಸಿ ವಿನುತಿಗೈದು ಪೋಪ ಮಗುಳ್ವೈತಪ್ಪ
ಸಂದಣಿಯ ದೇಶಾಧಿನಾಯಕರ ಮಣಿಕಿರೀಟಂಗಳೊರಸೊರಸಿನಿಂದೆ
ಕುಂದಣದ ಧೂಳಿ ಕೆಡೆದಾವರಿಸೆ ವಸುಮತಿಯ
ದೆಂದೆನಿಸಿದುದು ಧರಣಿಯಂತು ಮೇರುವ ಮುಸುಕ
ಲಂದು ಕನಕಾದ್ರಿಯೆನೆ ಪೆಸರ್ವಡೆದು ದೆಂಬಿನಂ ತೋರ್ದುದತಿಶಯಮೆನಿಸಲು ೧೭

ಅರಿನೃಪರ ಕೀರ್ತಿ ಲತೆಯಂಕಿತ್ತು ಮರ್ದನಿಸಿ
ಶರಧಿಯೊಳ್ ಕಲಸಲದು ದುಗ್ಧಾಬ್ಧಿಯೆನಿಸೆ ತ
ತ್ತಿರಿದುವೇರ್ಗಳ ಕಿತ್ತು ದಂಡಾಗ್ರದೊಳ್ಬಿಗಿದು ಮನುಸುತಗೆ ಮಲೆತು ನಡೆವ
ಧರಣಿಪರಿಗೀ ಭವಣೆ ತಪ್ಪದೆನೆ ಕೈನೆಗಪಿ
ಬಿರುದ ಸಾರುವರೆನಿಸಲುಭಯ ಚಾಮರಗಳಂ
ತರುಣಿಯರ್ಚಿಮ್ಮುಮರ್ಶುಚಭರಕೆ ನಡು ಬಳುಕೆ ಕಂಕಣಧ್ವನಿ ಮೊಳಗಲು ೧೮

ಇಳೆಯನಾಳಿದ ಪೂರ್ವಗತ ಮಹಾರಾಯರಿಂ
ಗಳವಟ್ಟ ಕೀರ್ತಿಗಂಗಾಪ್ರವಾಹಂಗಳ
ನ್ನೊಳಗೊಂಡ ಮನುಸುತನ ಕೀರ್ತಿ ದುಗ್ಧಾಬ್ಧಿಯಿಂದೇಳ್ವ ಶಶಿಬಿಂಬದಂತೆ
ತಳೆದ ಧವಳಚ್ಛತ್ರಮೆಸೆದಿರಲ್ ಶತ್ರುನೃಪ
ಕುಳದ ಕೀರ್ತ್ಯಂಗನೆಯರೆಡ[1]ಮಿರದೆ[1] ಭೂಪನ
ಗ್ಗಳ ಭುಜಗಳಂ ಸಾರ್ದು ಭುಜಕೀರ್ತಿಪೆಸರ್ವಡೆದರಾಗಬೇಕೆನಿಸಿರ್ದುದು ೧೯

---

೧೯. 1. ಬಲದ.

ಕುಂಚ ಕಾಳಾಂಜಿಗೆಳನಾಂತಿರುವ ವೀಳ್ಯಗಳ
ಸಂಚಿ ಜಲಕಲಶಗಳ ಪಿಡಿದಿರುವ ಕರವೇತ್ರ
ದಿಂ ಚೆವರ್ವ ಜನರ ಪದಿಲಕೆ ತರುವ ಕೈನೆಗಪಿಯವಧಾನಮನ್ನರುಪುವ
ಮುಂಚೆ ಬಿರುದುಗಳ ವಕ್ಖಾಣಿಸುವ ತನುಬಾಗಿ
ಪೊಂಚಿ ನೇಮಕೆ ಹಸಾದವನೀವ ಸೇವಾನು
ಸಂಚನೆಯ ಪರಿಜನರ್ಬಳಸಿರ್ದರವರವರ ಸಹಜದೂಳಿಗವ ಧರಿಸಿ ೨೦

ಮುಂದೆ ರಣಭೇರೀಢಳಂಢಳವೊರ್ಳಗುತಿರೆ
ಧಿಂಧಿಮಿಕ್ಕೆನೆ ವಾರ ಸುಂದರಿಯರಾಡುತಿರೆ
ಚಂದದಿಂ ಡಿಂಕುತಕವೆಂದು ತಾಳಗಳಿಂ ಮೃದಂಗಸ್ವನಂಗಳಮರೆ
ಸಂದಣಿಸಿ ಧಿಳಿರು ಧಿಳಿರೆಂದು ವೀಣಾಜಂತ್ರ
ಮಂದದಿಂ ಸರಿಗಮ ಸ್ವರಗಳಿಂ ಪಾಡುತಿರ
ಲಂದು ಭೋಗದಲಿ ದೇವೇಂದ್ರಗಿಮ್ಮಿಗಿಲೆನಿಸಿ ಭೂನಾಥನೆಸೆದಿರ್ದನು ೨೧

ಈ ವಿಲಾಸದಲಿ ವೊಡ್ಡೋಲಗದಲೆಸೆದಿರ್ಪ
ಭೂವರನೆಸುತ್ತೆ ಕಂಡವರಿಂದ ಕೇಳಿ ಲ
ಕ್ಷ್ಮೀವರ ನಿಜಾಂಶಸಂಭವ ಲಸದ್ಧ್ರುವನು ನಿಜಪಿತನ ಕಾಣ್ಬೆಚ್ಚೈಯಿಂದೆ
ಸಾವಧಾನದಿ ಜನನಿಗರುಹಲದ ಕೇಳಿ ಹ
ರ್ಷಾವಹದಲಪ್ಪಿ ಮುಂಡಾಡಿ ಹರಕೆಯನಿತ್ತು
ದೇವಿ ಬೀಳ್ಕೊಡಲು ಪರಿಜನವೆರಸಿ ಬಂದನರಸನ ಕಾಣ್ಬ ತವಕದಿಂದೆ ೨೨

ಬರಬರಲು ಕಂಡನಿದಿರಿಲಿ ಸಭಾಮಧ್ಯ ಕೇ
ಸರಿಪೀಠನೆಲೆಯೊಳುತ್ತಮುವೆಸರಿನಿಂ ಮೆರೆವ
ಸುರಚೀಕುಮಾರನೆಡದೊಡೆಯ ಮೇಲೊಪ್ಪುತಿರೆ ಮುಂಡಿಸಿಹ ಭೂಪಾಲನಂ
ನೆರೆದ ಜನಜಾಲವೆಂಬಬ್ಧಿಯುಬ್ಬಿರಲು ತ
ತ್ಕರ ಕಮಲಗಳ್ ಮುಕುಳಮಾಗೆ ನಗೆ ಚಂದ್ರಿಕೆಯ
ಪರಪುತಾ ಪೂರ್ಣಚಂದ್ರಾನನವ ನೃಪಸಂಘ್ರಿಯೊಳ್ ಚಾಚಿದಂ ಮುದದೊಳು
೨೩

ತಳಿತ ಚಂದ್ರೋದಯದ ಮಹಿಮೆಯಿಂ ಪೊರೆದು ಪಾ
ಲ್ಬೊಳೆಯುಕ್ಕುವಂದದಿಂ ಮನುವಂಶ ಚಂದ್ರನ
ನ್ನಿಳೆಯರಸ ನೋಡಿ ಸಂತೋಷವಾರಿಧಿಯುಕ್ಕಿ ಮುರ್ಧ್ನಿಯನ್ನಾಘ್ರಾಣಿಸಿ
ಬಳಿಕ ಬಲದೊಡೆಯಾಸನವನಿತ್ತು ಕುಳ್ಳಿರಿಸಿ
ಸೆಳೆದು ಬಿಗಿಯಪ್ಪಿ ಮುದ್ದಿಸುವ ತದ್ವಾರ್ತೆಯಂ
ಕೇಳದಿಯರ್ಸುರುಚಿಗರುಹಿದಡೇರ್ದ ರೌದ್ರದಿಂದೈತಂದಳರಸನೆಡೆಗೆ ೧೪

ತೊಡೆಯ ಮೇಲಿರ್ದ ತರುಣನ ಕಂಡು ಕಂಗಳಿಂ
ಕಿಡಿಗಳುದುರಲ್ಕೆ ನುಡಿದಳ್ ಪತಿಯನೊಂದಿರುಳು
ತಡೆದು ಮುಂದೂರುತಪ್ಪಿಸಿಕೊಂಡು ಗುಪ್ತಗರ್ಭವನೊದಗಿಸಿದ ಸುನೀತಿ
ಪಡೆದ ಮಗನೆನ್ನ ಕಂದನ ಸರಿಸದೊಳ್ ನೃಪನ
ತೊಡೆಯನೇರ್ದಪನಃ ಗಡ ಶುಕಶಾಬಕಂ ಸೇನ
ನೊಡನುಂಬುದಂ ಕಂಡೆನೆಂದಾರ್ದು ಸೆಳೆದು ಬಿಸುಟಳ್ ಬಾಲಕಂ ಬಳಲಲು ೧೫

ಬೆರಗಾದನರಸನಾಸ್ಥಾನದೊಳ್ ಗಜಬಜದ
ಮೊರ[ಹು]ಲಂಬಿಸಿತು ಪುರಜನದ ಹಾಹಾ ಘೋಷ
ಮೆರಗಿ ದಿಗ್ವಲಯಮಂ ಮುಸುಕಿದುದು ನಿಖಿಲರ್ಗೆ ಗ್ರಹ ಸೋಂಕಿದಂತಾದುದು
ಪರಿಘಟಿಸಿದವಮಾನದಿಂದಲುದಿಸಿದ ರೋಷ
ಭರಿತದಿಂದಾ ಧ್ರುವಂ ಮನೆಗೈದಿ ಕಾರ್ಯಮ
ನ್ನರುಹಿ ಪಡೆದಳ್ಗೆರಗಿ ಹರಕೆಗೊಂಡೈದಿದಂ ನಿಲ್ಲದೆ ತಪೋವಿಪಿನಕೆ ೧೬

ಅಪ್ರತಿಮ ಬಾಲ ತಳೆದಾಭರಣಮನ್ನೂಚಿ
ವಿಪ್ರಾರ್ಭಕರ್ಗಿತ್ತು ತಾಯ ಹಂಬಲನು ಬಿಸು
ಟಪ್ರಮೇಯಾದ್ವಿತೀಯಾತ್ಮಾಭಿರಾಮ ನಾರಾಯಣನ ನೆನಹನಾಂತು
ಕ್ಷಿಪ್ರದಿಂ ಹಸಿವು ನಿದ್ರಾಲಸ್ಯದುರುಬೆಗಳ
ಸುಪ್ರಸಿದ್ಧದಲೊರಸಿ ದೇವ ದೇವೋತ್ತಮನ
ಸುಪ್ರಸಾದವನು ಪಡೆವಾತುರತೆ ಮುಂಕೊಳಲ್ ವಹಿಲದಿಂ ನಡೆದನಂದು ೧೭

ವೈಯ್ಯಳಲನರಿಯು ಮುಳ್ಳುರಿವುದನ್ನರಿಯನೆಳೆ
ದೊಯ್ವ ಪುಲಿಕರಡಿಗಳನರಿಯ ಕಡುವಲಸಿನಿಂ
ಸುಯ್ವ ಸೊಕ್ಕುವುದ ಮುನ್ನರಿಯನೇಳ್ವುದ ಬೀಳ್ವುದೆಡಹ ಮುಗ್ಗುವುದನರಿಯ
ದೆಯ್ದೆಸನೆಸಹಲ್ಲದನ್ಯವನರಿಯ ಹರಿಯ ನುತಿ
ಗೆಯ್ವುದಲ್ಲದೆ ನುಡಿಯಲರಿಯನಿಹಪರದಲಾ
ರೆಯ್ದೆ ಪರಮಾತ್ಮನೊಳ್ ಮತಿಯನುರೆ ಬಲಿದು ಬಾಹ್ಯವ ಮರೆದು
ಮುಂದಳೆದನು ೨೮

ನಡೆಯಲುಸುರುಳ್ಳನಿತು ಸಾಗಿದಂ ಬಳಲಿ ಹಿ
ಮ್ಮಡ ಕುಸಿದಡಲ್ಲಿಂದೆ ತೆವಳಿದಂ ಮತ್ತೆರಡು
ತೊಡೆ ನಡುಗಳಲಸಲ್ಕೆ ಪೊರಳಿದಂ ಜವಗುಂದಿ ಮೈಮರೆದೆಡೆಗೆ ಕೆಡೆದನು
ನುಡಿ ಮೊಳಗುವನ್ನೆಬರ ಪೊಗಳಿದಂ ನಾಲಗೆಯ
ಮಿಡಿಯೊಣಗಲೋಷ್ಠದಿಂ ಗೊಣಗಿದಂ ತುಟಿಗಳುಲು
ಹಡಗಿಡಡೆ ಭಾವನೆಯುಳಿರಗಿಸಂ ತನ್ಮಾನಸೈಕಾಗ್ರಬಲಮದೆಂತೋ ೨೯

ಜನಪ ಕೇಳಚ್ಚರಿಯನೈದುವರುಷದ ಪಸುಳೆ
ಜನನಿಜನಕರ ಮೇಲಣಾಸೆಯನ್ನೊರಸಿ ನಿ
ರ್ಜನದೇಶಮುದರೊಳಬ್ಬರಿಪ ಪುಲಿಕರಡಿಗಳ ಭಯಮೊಂದನುಂ ಗಣಿಸದೆ
ತನುವನಳಲಿಪ ಹಸಿವು ಶೀತೋಷ್ಣ ಬಾಧೆಯಾಂ
ತನುವನೂಹಿಸದೇಕಚಿತ್ತಮೆಸಗಿರಲಚ್ಯು
ತನು ಪೊರೆವುದದ್ಭುತಮೆ ಮುಂಗತೆಯ ಸಂಗತಿಯನೊರೆವೆ
ಕೇಳತಿಶಯವನು ೩೦

ಈ ರೀತಿಯಿಂ ಧ್ಯಾನಮೆಸಗಿ ಕೆಡೆದಿರಲಿತ್ತ
ಮೂರುಕಾಲಜ್ಞಾನಿಯನಿಶ ಮೂಲೋಕ ಸಂ
ಚಾರಿ ಸದ್ಭಾಗವತ ಮತದ ಚಿಂತಾರತ್ನಸಾರ್ತಜನ ಸುರಭೂಜನು
ವಾರಿಜಾಸನತನಯ ಹರಿಯ ಲೀಲಾಮೂರ್ತಿ
ನಾರದ ಬ್ರಹ್ಮನೈತಂದನಲ್ಲಿಗೆ ಮುಗಿಲ
ದಾರಿಯಿಂ ಧ್ರುವನ ಹೃದ್ವ್ಯಥೆಗೆ ಭೇಷಜವಾಗೆ ನಿರ್ವ್ಯಾಜದಿಂ ಚರಿಸುತ ೩೧

ನಡು ಪುರ್ಬಿನೊಳ್ಬಗಿದ ಲಕ್ಷ್ಯಗಳ ವಲ್ಲಕಿಯು
ಮಿಡಿಯ ಹರಿ ನಾಮ ಸಂಕೇತಗಳ ಪದ್ಮಾಕ್ಷಿ
ದೊಡವು ನಿಕ್ವಣವೇದ ಸೂತ್ರಗಳನಜಿನಾಂಬರಾವೃತದ ಗರಿಮುರಿಗಳ
ಒಡನೆ ಹಂಸೆಯನೇರ್ದ ಮೋಡಿಗಳ ತತ್ಪಕ್ಷ
ಮಿಡಿಯ ಲಸದುಪನಿಷತ್ಸೂಕ್ತಗಳನಾನಂದ
ಕಡಲೊಳೋಲಾಡುತವು ಬರುಬರುತ ಕಂಡನಿದಿರಿಲಿ ಕೆಡೆದ ಬಾಲಕನನು ೩೨

ಬಂದನಲ್ಲಿಗೆ ಭೂತಹಿತಚಿತ್ತನುರುಬಳಲಿ
ನಿಂದೆ ವೈಮರೆದಿರ್ದ ಬಾಲನಂ ಮೈದಡಹ
ಲಂದಮೃತಕರಸೋಂಕಿನಿಂದೆ ಸಂಜೀವನನನೆರೆದ ಪರಿಯಾಗಲದರಿಂ
ಕಂದೆರೆದು ಬಾಲಕಂ ಕಂಡನಿದಿರಲಿ ಬೆಳಗು
ವಿಂದು ತಂಪಿನ ಸೂರ್ಯರುಗಳ ನಿಜ ತೇಜಮಂ
ಪೊಂದಿದ ಮಹಾತ್ಮನಂ ಚಕಿತ ರೋಮಾಂಚದಿಂದಡಗೆಡೆದನಂಘ್ರಿಯುಗದಿ ೩೩

ಪಸುಳೆಯಂ ಪಿಡಿದೆತ್ತಿ ಮೈದಡಹಿ ಮೋಹದಿಂ
ಮುಸುಡನೀಕ್ಷಿಸಿ ಭವಿಷ್ಯದ್ವಿಶೇಷವನರಿದು
ಬಿಸಜಾಕ್ಷನಂಶಸಂಭೂತನೆಂದೊರೆವ ಸುಪ್ರೇಮದಿಂದಾಲಿಂಗಿಸಿ
ಅಸಮತಾಪಸ ಕೇಳ್ದನರ್ಭಕಗೆ ದಂದುಗವು
ಬೆಸೆದ ತನ್ಮೂಲಮಂ ಕುಲಗೋತ್ರ ಕುರುಹುಗಳ
ಕುಶಲಮನ್ನಾಗ ಬಿನ್ನವಿಸಿದಂ ಪರಿಭವವು ಹರಿವಾಗದಿರದೆನಿಸಿರೆ ೩೪

ಬೊಪ್ಪಗಿರ್ವರು ಸತಿಯರಾದುದನ್ನದರೊಳಗೆ
ಸುಪ್ರೇಮ ಸುರುಚಿಯೊಳ್ ಬಲಿದುದನ್ನವಳ ನುಡಿ
ಗೊಪ್ಪಿಯೆ ಸುನೀತಿಯನ್ನುಳಿದುದಂ ವಿಧಿವಶದಿ ತನ್ನುದ್ಭವವು ಮೊಳೆತುದಂ
ಅಪ್ಪನಂಕದ ಮೇಲೆ ಕುಳಿತುದಂ ಸುರುಚಿ ಮೊರೆ
ದಪ್ಪಳಿಸಿ ತೊಡೆಯಿಂದೆ ಸೆಳೆನುದಂ ವೈರಾಗ್ಯ
ಮುಪ್ಪರಿಸಿ ಹರಿಯನೊಲಿಸಕ್ಕೆ ತಾ ಬಂಮುದನ್ನೊರೆದನಾಮೂಲಾಗ್ರಮಂ ೩೫

ನಾರದಂ ಪಸುಳೆಗೆಡೆಗೊಂಡ ಪರಿಭವದಿರವ
ನಾರೈದು ಚಿತ್ತದೊಳ್ ಬಿಸುಸುಯ್ದು ತರಳನಿವ
ನಾರೆಂದು ಬಗೆದಿರ್ದೆವಿನ್ನೆಗಂ ವೊಮ್ಮನಿವನೆವಗೆ ಮನುವರಸೆಯಿಂದೆ
ನಾರೀಶಿರೋಮಣಿ ಸುನೀತಿಯ ಕುಮಾರನಿವ
ನಾರಡಿಯು ಪರಿಹರಿಪೆನೆಂದು ಕಾರುಣ್ಯದಿಂ
ನಾರಾಯಣಾಷ್ಟಾಕ್ಷರೀ ಮಹಾಮಂತ್ರವನನುಗ್ರಹಿಸಿದಂ ಕೃಪೆಯೊಳು ೩೬

ತರುಣ ಕೇಳೀ ಬೀಜವರ್ಣವೆಂಟರ ಪುರ
ಶ್ಚರಣೆಯನ್ನನವರತ ಮಾಳ್ಪುದೀ ಮಹಿಮೆಯಿಂ
ಕರಣ ಚಂಚಲನುಡಗಿ ಭಾವಸಂಭರಿತನಹೆಯದರಿಂದ ಮಾಲೋಲನ
ಕರುಣಮೇರ್ಗೊಂಡು ನಿನಗೊಲಿವನಿಹ ಸೌಖ್ಯ ವಿ
ಸ್ಫುರಣಮನ್ನೈದಿ ವರನುಂ ಪಡೆವೆಯೆನೆ ಮುನಿಯ
ಚರಣದೊಳ್ ತಲೆವಾಗಿ ನಡೆದ ಯಮುನೆಯ ತಡಿಯ ಮಧುವನಕೆ ಭಕ್ತಿ
ಮಿಗಲು ೩೭

ರಾಕೇಂದುರವಿರೋಚಿಗಳ ಮೂಲಸತ್ವಮಂ
ನೂಕಿ ಕತ್ತಲೆಗೆ ಸಲುಗೆಯನಿತ್ತು ವನಚರಾ
ನೀಕದೆಡೆಯಾಟಮಾತ್ರದ ಬೆಳಗುಗೈವ ಮದಕರಿ ಶಿರೋರತ್ನಂಗಳಿಂ
ಕೇಕಿಗಳ್ ಸೀಳ್ದ ಪಾವುಗಳ ಪೆಡೆಮಣಿಗಳಿಂ
ದಾಕಾಷ್ಠಜೋತಿ ಸಂತೃಣಜ್ಯೋತಿಬೆಳಗಾಂತ
ಕೀಕಾಟವಿಯ ಪೊಕ್ಕು ನಡೆತಂವನದ್ಭುತ ಮೃಗಾಳಿಯುಬ್ಬರ ಕಳುಕದೆ ೩೮

ಛಿದ್ರಮೆರಗದೆ ಕವಿದ ಮೆಳೆಗಳೊಳ್ ವಿಹರಿಸುವ
ಭದ್ರಗಜ ಘಟೆಯ ಮದ ಜಲಗಳೊಳ್ ಮುಳುಮುಳುಗಿ
ಯುದ್ರೇಕದಿಂದೆ ವೊರೆವಳಿಗಳೊಳ್ ಬಿಗಿಯೊಡೆವ ಪ್ರೂಹಸರದಿಂದೊಸರುವ
ಸದ್ರಸವ ಪಂಕಗಳ ಚಿಗುರಿನೊಳ್ ತಗುಲಿರುವ
ಗೃಧ್ರಸಾರಸ ಮುಖ್ಯ ವಿಹಗಗಳ್ ಪರಿಘಟಿಸಿ
ದದ್ರಿ ಪೊಲಸಟ್ಟು ಗಹ್ವರಗಳೊಳ್ ಬರುತಿರ್ದನಚ್ಯುತಾಂಘ್ರಿಯ ನೆನೆವುತ ೩೯

ಕಿಟದಂಷ್ಟ್ರ ಖನಿತಗರ್ತಗಳಿಂದೆ ಪರಿವ ಡು
ರ್ಘಟ ತುಹಿನ ಜಲದ ಮಡುಹುಗಳಿಂದೆ ಹರಿಗಳಾ
ರ್ಭಟದ ಮಾರ್ದನಿಗಳದ್ರಿಗಳಿಂದೆ ಕೆಂಡಗಣ್ಗಳ ಘೋರ ಮೃಗಗಳಿಂದೆ
ಲಟಕಟಿಪ ವೇಣುಕುಂಜಗಳಿಂದೆ ಪರಿವೃತಾ
ರ್ಭಟವಾಂತ ಲುಬ್ಧವರ್ಗಗಳಿಂದೆ ನಿಜಕರ್ಣ
ಪುಟದಳನಮಪ್ಪ ಘೋಷಗಳಿಂದೆ ಮೆರೆವ ಕಾನನದಲೈತರುತಿರ್ದನು ೪೦

ಪುಲಿಪಂದಿಗಲಹದುಪಟ್ಟಗಳಿಂ ತದ್ರಕ್ತ
ಜಲವೊಸರಿ ಕೆಸರೇರ್ದ ನೆಲಗಳಿಂ ಫಣಿಯು ಮುಂ
ಗುಲಿ ಸೀಳ್ದು ಸುರಿದ ವಿಷಮಲಗಳಿಂ ಹರಿ ಬಡಿದ ಕರಿಮಾಂಸಕಡಿಗಳಿಂದೆ
ಕಲಕಲಧ್ವನಿಯ ಖಗಕುಲಗಳಿಂ ಹರಿಣಗಳ
ಮೆಲುಕುಬಾಯ್ನೊರೆ ಸುರಿದ ಪೊಲಗಳಿಂ ಪುಚ್ಛಗಳ್
ಜ್ವಲಿಪ ವೃಶ್ಚಿಕಗಳಾವಳಿಗಳಿಂ ಭೀಕರವ ಬೀರ್ವ ವನದೊಳ್ ನಡೆದನು ೪೧

ಪ್ರಚುರದಿಂ ಶಾರ್ದೂಲಗಳ ಕಂಡ ಕಪಿಕುಲದ
ಕಿಚಕಿಚ ಧ್ವನಿಗಳಿಂ ಸೇನನೆರಗಿದ ವಿಹಗ
ನಿಚಯಗಳ ಚಿಳಿಚಿಳಿರು ರವಗಳಿಂ ಕಾಳಾಹಿಬರ್ಹಿಗಳ ಕಡುಸೆಳಸಿನ
ಕಚಪಚ ಸ್ವನಗಳಿಂ ವನವಹ್ನಿ ಬೆಳಸಿರ್ದ
ಸುಚಮುರಿಗಳರಚುತಿಹ ಚೀತ್ಕಾರನೊಳಗಿನಿಂ
ವಚಿಸಲೇನಾ ಬನದ ಘೋಷದಿಂ ಶ್ರವಣಗಳ್ ಕಿವುಡುಗೊಳಲೈತಂದನು ೪೨

ಫಲದಾಸೆಗಡರಿ ಬದರಿಯ ಗುಲ್ಮದೊಳ್ ಕೇಶ
ಸಿಲುಕಿ ಜೋಲ್ವರಿವ ಭಲ್ಲೂಕಗಳ ಲುಬ್ಧಕರ
ಬಲೆಗಳೊಳ್ ತಗುಲಿ ಪರಿಯಲ್ಕಜ್ಜುಗಂ ಗೈದು ಚೀರುತಿಹ ಖಗಮೃಗಗಳ
ಮೊಲಗಳ್ಗೆ ಪೊಂಚಿ ಮಾನವನಾಂತು ಮೆಳೆಗಳಂ
ಬಳಸುವ ವೃಕಾಳಿಗಳ ಕಂಡಳುಕಿ ಕಾಣಿಸದೆ
ನೆಲವನಂಟುವ ನಕುಲಮುಸುವಗಳ ಬವಣೆಯುಂ ನೋಡುತ್ತೈತರುತಿರ್ದನು ೪೩

ಕಚ್ಚಿ ಮೊಲೆಯುಂಡು ಹಾರುತ ನಲಿವ ಹುಲ್ಲೆಗಳ
ಕೆಚ್ಚಲಂ ಮುಸುಡಿನಿಂದಪ್ಪಳಿಪ ಗೋವುಗಳ
ಬೆಚ್ಚು ತಾಯಂಗಮನ್ನಾಚಿಕೊಂಡಿರ್ಪ ಕಪಿಗಳ ತಾಯ ಱೆಕ್ಕೆಗಳೊಳು
ಮುಚ್ಚಿ ಪೋಷಣೆವಡೆವ ಪಕ್ಕಿಗಳ ಬಾಯೊಳಗೆ
ಕಚ್ಚಿಕೊಂಡೆಡೆವರಿವ ಬೆಕ್ಕುಗಳ ಕೋಮಲ ಸು
ವತ್ಸಗಳ್ ಪರಿದಾಡಿಪವು ಮೋಹದಿಂ ಪಿಂತೆ ಪರಿಪರಿವ ತಾಯ್ಗಳೊಡನೆ ೪೪

ಸಲಗಗಳ್ ಮುಸುಡಿಂದಲಗೆದ ಮಣ್ಮೆದೆಗಳಂ
ಬಲುಗೋಡ್ಗಳಿಂ ಚಿಮ್ಮಿ ಕಾಲ್ಗೆರೆವ ವೃಷಗಳ
ನ್ನಲೆದು ಬೆಂಬತ್ತಿ ತೆವರುವ ಮದೇಭಂಗಳನ್ನಡಹಾಯ್ದು ನೆತ್ತಿಗಡರಿ
ಕೊಲಲು ತವಕಿಸುವ ಕೇಸರಿಡಿಂಭಕಂಗಳಂ
[1]ಬಲೆಗಳೆಯುಲುಜ್ಜುಗಿಪ ಶಬರವರ್ಗಂಗಳಂ
ಬಳಲುತ್ತಲೋಡುತಿಹ ಪಕ್ಷಿಬಳಗಂಗಳಂ[1] ನೋಡುತ್ತೈತರುತಿರ್ದನು ೪೫

ಕರಿಗಳಂ ಕೊಕ್ಕು ಕಾಲುಗುರ್ಗಳಿಂದಿರುಕಿ ಹೆ
ಗ್ಗಿರಿಗಳಂ ದೂಟಾಡಿಸುವ ಗಾಳಿಯಂ ಬೀರ್ವ
ಗರಿಗಳಂ ಬೀಸುತಡಹಾಯ್ವ ಭೇರುಂಡಗಳ ತತ್ತಿಯೆಪಡರ ಮಧ್ಯದ
ದರಿಗಳೊಳ್ ಖಗವಕ್ಕಿಗಳ್ ಗೂಡುಗಳ ಕಟ್ಟಿ
ಮರಿಗಳಂ ಮಾಡಿ ಸಂತಸಗಳಿಂ ನಲಿಯುವ
ಚ್ಚರಿಗಳನ್ನಾಂತ ಬನಸಿರಿಗಳಂ ನೋಡುತಿಂತುಱುಬಿನಿಂ ನಡೆತಂದನು ೪೬

ಪಸುರು ಪಾಚಿಗಳೇರ್ದ ನೆಲಗಳಂ ನೆಲಗಳಂ
ಬಿಸಿಲಂಟದೊಲ್ಕವಿದ ತರುಗಳಂ ತರುಗಳಂ
ಮುಸುಕಿ ಮುಂದೋರಿಸದ ಲತೆಗಳಂ ಲತೆಗಳನ್ನಾವರಿಸಿದುರುಸುಮಗಳ
ರಸಗರೆದು ನಿಂದ ಕೆಂಜಲಗಳಂ ಜಲಗಳಂ
ಬೆಸೆದು ಮುಳುಮುಳುಗಿ ಮೊರೆವಳಿಗಳನ್ನಳಿಗಳಂ
ಸಸಿನದಿಂ ಪೊರೆವ ಪಾದರಿಗಳಂ ದರಿಗಳಂ ನೋಡುತವೆ ನಡೆತಂದನು ೪೭

———

೪೫. 1. ನೆಳೆದೊಯ್ವುಡಾಯುಮಂ ನೋಳ್ಪ ಶರಭಂಗಳಂ ಬಲೆಗೆಳೆಯುಲುಜ್ಜುಗಿಪ ಶಬರ ವರ್ಗಂಗಳಂ.

ಹಿಂಗು ಹೇರಳೆ ತಪಸಿ ಮಾದಳ ದಳಂಗಳಂ
ತೆಂಗು ತೇರಣ ಹರೀತಕಿ ಬಕುಳ ಕುಳಗಳಂ
ರಂಗೆಸೆವ ಕುರವಕ ರಸಾಲ ಸಾಲಂಗಳಂ ಸೊಂಪೊಗೆವ ಸಂಪಗೆಗಳ
ಮುಂಗಡೆಯ ಪನಸ ತಿಂಥಿಣಿಯ ತಿಂಥಿಣಿಗಳಂ
ಶೃಂಗಾರ ವಟ ಕದಂಬಕ ಕದಂಬಂಗಳಂ
ಕಂಗೊಳಿಪ ಪಿಪ್ಪಲ ಕ್ರಮುಕ ಮುಖ ತರುಗಳಂ ನೋಡುತ್ತೈತರುತಿರ್ದನು ೪೮

ಮುತ್ತಿ ಮುಗಿಲೇರ್ವ ರಣಹದ್ದುಗಳ ಕರಿವೈಯ
ಕತ್ತಲೆಯ ಕಂಡು ಪೊರವಡುವ ಗೂಗೆಗಳ ಬಲ
ವತ್ತರದ ಗಾಳಿಯಿಂದೊರೆವ ಮಧುವನಿಗಳ್ಗೆ ಬಾಯ್ದೆರೆವ ಜಾತಕಗಳ
ಪತ್ತಿದ ದವಾಗ್ನಿಯಿಂ ಮುಗಿದ ಪೊಗೆಯಂ ನೋಡಿ
ನರ್ತಿಪ ಮಯೂರಗಳ ವಿಭ್ರಾಂತಿಗಂ ನಗುತ
ಮತ್ತೇಭಗಳ್ ತಲೆಯನೊಲೆವವೆಂಬಂತಿರಲ್ ಕಂಡನಾ ಮನುಜಾತನು ೪೯

ವರ ವಿಭೀಷಣನಾಗಿ ವಂಶಕಂಟಕಿಯೆನಿಸಿ
ಹರಿನಿಲಯಮಾಗಿಯೆ ಸುಪರ್ಣಸಂಶೋಭೆಯಿಂ
ಕರಿರಕ್ಷನಾಗಿ ಕಮಲಾಧಾರಿಯೆನಿಸುತಂ ಸುಮನೋನುರಾಗದಿಂದೆ
ಸುರಭಿ ಸಂಯುಕ್ತನಾಗಿ ವಜ್ರಧರಕೀರ್ತಿಯಿಂ
ನೆರೆ ಸದಾಶಿವನಾಗಿ ಸದ್ವಿಶಾಖಾದಿಯ ಸು
ತರುಗಳುನ್ನತಿವೆರಸಿ ರಂಜಿಸುವ ಮಧುರತರ ಮಧುವನವು ಚೆಲುವಾಂತುದು ೫೦

ಶಿವಗಣಗಳಿದೆಕೊ ಬೆಳ್ಗಿರಿಯಲ್ಲ ಮನ್ಮಥೋ
ದ್ಭವಸದನಮಹುದು ಸಿರಿಧರನಲ್ಲವರ್ಕ ಸಂ
ಭವದೆಡಮಿದರರೆ ಪ್ರಾಗ್ಗಿರಿಯಲ್ಲ ಕನಕಮಯಮಾಗಿ ಭೂಷಣಗಳಲ್ಲ
ಸುವಿಶಾಖೆಯಮರಿ ಸುದ್ವಿಜನಲ್ಲ ಸೋಮಕುಲ
ಭವನಮೆನಿಸಿರ್ದ ಕರಿಪುರಮಲ್ಲ ತಿಲಕವೈ
ಭವಗಳೆಡಮಹುದು ಸತಿಪುರುಷರಾನನಮಲ್ಲದೆನಿಸಿರ್ದುದಾ ಗಹನವು ೫೧

ಅಹಿತರುಗಳಾರಡಿಯ ಸುರಗಿಖಡ್ಗಗಳಲೆಯ
ಸಹಿಸುತಾ ಸುಮನೋವಿರಾಗನುಂ ವಂಚಿಸದೆ
ವಿಹಿತ ಗಾಯತ್ರೀ ಜಪಾನಂದಸದ್ವಂಶಜಾತ ಸಂಭ್ರಮ ಸಲುಗೆಯ
ಮಹಿಮೆಯಿಂ ಸುರಭಿ ಸಂರಕ್ಷಣೆಯ ಕೀರ್ತಿಯಂ
ವಹಿಸಿ ಹರಿಯಜಶಿವರ ಮೂರ್ತಿಗಳ ನೊಳಗಿಟ್ಟು
ಸಹಜಸಂಪದ್ವಶಿಷ್ಠ ಬ್ರಹ್ಮಸಂತೆಸೆವ ಕಾನನದಲ್ಲೈತಂದನು ೫೨

ಸುಮನಸ್ಸದನಮಾಗಿಯುಂ ಪಲಾಶಾಲಯಂ
ಕಮಲಾಂಚಿತದಲಿ ಶೋಭಿಸಿಯು ಮಧುಪೋಷಕಂ
ಸಮನಿಪ ವೃಕೋದರಂ ತಾನಾದಡುಂ ಕೀಚಕಾನ್ವಯವ ಪೊರೆವನೆನಿಸಿ
ವಿಮಲಾಹಿಭೂಷನಾಗಿಯು ಗಜಾಸುರಕೆಳೆಯೊ
ಳಮರಿ ವಜ್ರವ ಧರಿಸಿಯುಂ [1]ಬ[1]ಳಸ
ಕಮನೀಯ ಶಿವನಿಳಯುವಾಗಿ ಮಸ್ರಥನಿಳಯುವಾವ ಬನವೆಸೆದಿರ್ದುದು ೫೩

ಗಜದಾನಸಹಿತನಾಪಡು ಲುಬ್ಧಕಾಲಯಂ
ದ್ವಿಜವಂಶಗೃಹವಾಗಿ ಮಾತಂಗ ಮಂದಿರಂ
ಭುಜಗಜನ್ಮಸ್ಥಾನಮಾದಡು ಸುಪರ್ಣಜನ್ಮಸ್ಥಾನವೆನಿಸಿ ಮತ್ತೆ
ನಿಜಕೌಶಿಕಾಗಾರವೆನಿಸಿ ಜಸವಡೆದಡುಂ
ರಜನೀಚರಾಗಾರವೆನಿಸಿ ಪಲ್ಲವನಿಚಯ
ಭಜನೆಯುಮರಿರ್ದಡು ವಿರಾಗಮನ್ನಾಂತೆಸೆವ ವಿಪಿನಮತಿಚೆಲುವಾಂತುದು ೫೪

ಮುಂಬಿನೊಳ್ ಪರಿವ ಹರಿಣಂಗಳಂ ತೆವರುತವು
ಬೆಂಬತ್ತಿ ಪರಿವ ಕಾರೊಡಲುಗಳ ಲುಬ್ಧಕನಿ
ತಂಬಿನಿಯರುರು ಬೃಹತ್ಕುಚಗಳಿಂದಿಳಿವ ಸಂಸ್ವೇದಜಲಮಂ ಗಜಗಳ
ಕುಂಭಸ್ಥಳಂಗಳಿಂದೊರೆವ ಮಧುಧಾರೆಯೆಂ
ದೆಂಬ ಮೋಹದಲೆರಗಿ ಕಂಠಣಿಸಿ ಮರಳಿ ಬಹ
ತುಂಬಿಗಳ ನೋಡಿ ನಗುವಂತೆ ಪಲ್ಗಿರಿವ ಮರ್ಕಟರಾಜಿಯೆಸೆದಿರ್ದುದು ೫೫

---

೫೩ 1. ಬೆ

ಗರುಡಗಳೆರಂಗಿ ಸರ್ಪಂಗಳಂ ಕಾಲ್ಗಳಿಂ
ದಿರುಕಿ ಮೇಲಡಹಾಯ್ದು ಡೊಲೆವುತಿಹ ಫಣೆಗಳವು
ಸುರರ ಪರಿವಾರವೆಂದಭ್ರಮಂ ರಕ್ಕಸರ್ಮುಳಿದಿರಿಯೆ ಪೊರಸೂಸಿದ
ಕರುಳ ಮಾಲೆಗಳಂತೆ ತೋರ್ಪಡಲ್ ಮತ್ತದರ
ನೆರಳುಗಳ್ ನೆಲದ ಮೇಲೋಡುತಿರೆ ಬೆಂಬತ್ತಿ
ಪರಿವ ನವಿಲುಗಳಾತುರವ ನೋಡಿ ನಗುವಂತೆ ಕೀರ ಮೃದುರವಮೆಸೆದುದು ೫೬

ಡೊಂಬಿಯೊಳ್ ಕರಿಗಳಂ ಗಂಡವಕ್ಕಿಗಳು ಪಿಡಿ
ದಂಬರಕ್ಕಡರಲಾ ಪ್ರತಿಬಿಂಬ ಜಲಗಳೊಳ್
ಬಿಂಬಿಸಿದಡದ ನೋಡಿ ಕರಿಗಳೆನೆ ಕಾತರಿಸಿ ಸಿಂಹಗಳ್ ಮಡುಹ ಧುಮುಕೆ
ಕುಂಭಸ್ಥಳಗಳ ತನಿಮಿದುಳೆಂದು ಬಿಳಿಮಣ್ಗ
ಳಂ ಬಗಿದು ಸವಿವುದಂ ಲಸದಶೋಕೆಯ ನೆಳಲಿ
ನಂಬುವಂ ರಕ್ತಮೆನೆ ಪೀರ್ವುದಂ ನೋಡಿ ನಗುವಂತೆ ಪಿಕರವಮೆಸೆದುದು ೫೭

ಮಂದರದ ಮಂಥನಿಗೆ ಬಿಗಿದ ನೇಣೆಂಬಂತೆ
ಚಂದನದ ದ್ರುಮಗಳಂ ತೊಡರಿದಹಿಗಳ ನೋಡೆ
ಗಂಧವಹನೆರಗಿ ತತ್ಪರಿಮಳವನಪಹರಿಸದಂತೆ ರಕ್ಷಿಸುವಂತಿರೆ
ಮುಂದೆರಗಿದೆಳಗಾಳಿಯಂ ನುಂಗುತಿರಲು ಹಿತ
ದಿಂದೆ ಮನ್ಮಥಸೇನೆಯಬ್ಬರಿಸಿ ಬಿಡಿಸಲ್ಕೆ
ತಂದಪುದೆನಲ್ ಶುಕಪಿಕಾದಿಗಳ್ ಕೂಗುತಿರ್ದವು ಸರ್ಪಗಳನು ನೋಡಿ ೫೮

ತ್ರಿಜಗತ್ಸಮಸ್ತ ಜಂಗಮಕೆ ಚರಣಂಗಳಂ
ಸೃಜಿಸಿ ತನ್ನನ್ನುಳಿದನಸದರಿನಿಂ ಚರಿಸದು
ದ್ರುಜೆಯಡಸಿತೆಮಗೆ ಕೆಡೆದಿರ್ಪೆವೆಂದಜನೊಡನೆ ಖತಿವಿಡಿದು ತದ್ವೈರಿನ
ಅಜಗಳನ್ನೆಳೆದು ನುಂಗುವುವಾಗಬೇಕೆನಿಸ
ಲಜಗರಂಗಳ್ ತೋರುತಿರ್ದವಮುರಿದ ತೋರ
ಭುಜಗಳಂ ತರಿದುರುಳ್ಚಿದ ಮಹದಘಾಸುರನ ಕಾಯದನುವನ್ನರುಪುತ ೫೯

ಸುರಗಿಸಂಯುತನಹುದು ಸುರ ಗಿಸಂಯುತನಲ್ಲ
ವರಖಡ್ಗಧರನಹುದು ವರಖಡ್ಗಧರನಲ್ಲ
ಶರಜನ್ಮನೆಲೆಯಹುದು ಶರಜನ್ಮನೆಲೆಯಲ್ಲ ವನಮಹುದು ವನಮದಲ್ಲ
ಹರಿನಿಕೇತನಮಹುದು ಹರಿನಿಕೇತನಮಲ್ಲ
ಸುರಸಫಲದೆಡಮಹುದು ಸುರಸಫಲದೆಡಮಲ್ಲ
ಮೆರೆವ ದಶಕಂಧರನು ತಾನಹುದು ದಶಕಂಧರನುಮಲ್ಲವೆನಿಸಿರ್ಪುದು ೬೦

ಬಲಿದ ವಿದ್ರುಮಲತಾವಳಿಯನಾಂತರ್ಕಕುಲ
ತಿಲಕಶರಮುರುಬೆಯುನ್ನರೆ ಸಹಿಸಿ ಘನವಂಶ
ದಲೆಗಳಂ ತಡೆದು ಸೋಮನ ಪಡೆದು ಹರಿಗೆ ಸಂತತಸದನವಾಗಿ ಮತ್ತೆ
ಒಲುವೆಯಿಂ ಕಮಲಾಳಿಗೆಡೆಗೊಟ್ಟು ಸುಕ್ಷೀರ
ಜಲಧಿ ಮಹಿಮೆಯನಾಂತ ಕಾಂತಾರಮಂ ನೋಡಿ
ತಲೆದೂಗಿ ಸೋಜಿಗದಲೈತಂದನೇಕಚಿತ್ತದಲಿ ಹರಿಯಂ ನೆನೆವುತ ೬೧

ಪಾತಾಳಕಂಟಿರುವ ದರಿಗಳಿಂ ಗಿರಿಗಳಿಂ
ಕಾತು ಭುವಿಗಿಳಿದ ಪಣ್ಗೊನೆಗಳಿಂ ನನೆಗಳಿಂ
ಭೂತಳದಿ ಹರಹಿಪ್ಪ ಮುಳ್ಗಳಿಂ ಬಲ್ಗಿರಿಯ ಸಾಲ್ಗಳಿಂದೆ
ಶೀತಳದ ಮಂಜುಪನಿಯೊಸರ್ಗಳಿಂ ಕೆಸರ್ಗಳಿಂ
[1]ಪಾತ[1]ತರುಪರ್ಣಗಳ ಮೆದೆಗಳಿಂ ಪೊದೆಗಳಿಂ
ಭೀತಿವಿತ್ತಿನ ಘೋರಮೃಗಗಳಿಂ ಖಗಗಳಿಂದಚ್ಚರಿಯ ಬನಮೆಸೆದುದು ೬೨

ಕರಶೈತ್ಯವಾರಿಗಳ ಕಾಲ್ಪೊಗದ ದಾರಿಗಳ
ಪರಿಮಳಗಳಿಂಪುಗಳ ಪಾವು ಚೇಳ್ಗುಂಪುಗಳ
ಹರಿಣ ಸಲ್ಲೀಲೆಗಳ ಹರಿನಖಜ್ವಾಲೆಗಳಲಸುರ ಸುರರುಜ್ವಲಗಳ
ಭರಿತ ಪೂಹಸರಗಳ ಭಲ್ಲೂಕ ವಿಸರಗಳ
ಪರಿಪರಿಯ ಪಣ್ಣುಗಳ ಪುಲಿಗಳುರಿಗಣ್ಣುಗಳ
ಹರುಷ ಭಯ ಕೂಟಗಳ ಹರಹುತಿಹ ಮಾಟಗಳ ಚಕಿತಕರ ಬನಮೆಸೆದುದು ೬೩

---

೬೨ 1. ಪೂತ

ಇಂತೆಸೆವ ಘೋರಗಹ್ವರವೆಂಬ ಗಗನದೊಳ್
ಮುಂತಳೆವ ಬಾಲಭಾಸ್ಕರನಂತೆ ಸುರನಗರ
ಮಂ ತುಡುಕುವದ್ರಿಗಳನಡರುತಂ ಪಾತಳಗಡೆಯ ಗರ್ತಗಳಿಳಿವುತ
ನಿಂತು ನಾಲ್ದೆಸೆಗಳಂ ನೋಡುತಡಿಗಡಿಗೆ ದಿ
ಗ್ಭ್ರಾಂತಿಯಿಂ ಕಳವಳವನಾನುತವು ನಡೆದಡುಂ
ಚಿಂತನೆಯುಲಚ್ಯುತಾಂಘ್ರಿಗಳಿಗೆರಗಿದ ನೆನಹನಗಲ ದೈತರುತಿರ್ದನು ೬೪

ಕ್ರೂರ ವೃಗಗಳ್ ಕಂಡು ಜರುಗುವುವು ಭೇತಾಳ
ಘೋರ ಭೂತಗಳಂಜಿ ಸೊರಗುವುವು ಮಹಿಷ ಮದ
ವಾರಣಗಳಳುಕಿ ಹಿಂದಿರುಗುವುವು ದಾವಪಾವಕಮಾಲೆ ತಂಪೊಡೆವುವು
ಚೋರ ಲುಬ್ಧಕರ ಮನ ಮರುಗುವುವು ಸಾತ್ವಿಕತೆ
ಯೂರಿಯಸುರರ್ಗೆ ಹಿತವೆರಗುವುವು ಪರತರದ
ನಾರಾಯಣಷ್ಟಾಕ್ಷರಿಯ ಮಹಾಮಹಿಮೆಯಿಂ ಧ್ರುವನ ಮೂರ್ತಿಯ ಕಾಣಲು ೬೫

ಪರವಶವೆ ಪರವಶವನೈದಿದುದು ಹಶು ನಿದ್ರೆ
ಯುರುಬೆಗಳಿಗುರುಬೇಸರಡಸಿದುದು ವಂಚಿಸುವ
ಮರವೆಗತಿ ಮರವೆಯಾವಹಿಸಿದುದು ಶೋಕಭಯಗಳ್ಗೆ ಭಯಮೆಡೆಗೊಂಡುದು
ಹರುಷದೇಳಿಗೆಗೇಳ್ಗೆಯೊದಗಿದುದು ಮನನ ಭಾ
ಸುರಕೆ ಭಾಸುರತೆ ಸಂಘಟಿಸಿದುದು ಹರಿ ಮಂತ್ರ
ಸಿರಿಯ ಬಲುಹೆಂತುಟೋ ಶಿವಶಿವಾ ಸಕಲಸಂಭ್ರಮಕೆ ಸಂಭ್ರಮಮೇರ್ದುದು ೬೬

ಕಳೆಕಳೆದು ದುಷ್ಕರದ ಘಟ್ಟಗಳ ಬೆಟ್ಟಗಳ
ಕಳಕಳಂಗಳೊಳೆಸೆವ ವೃಗತತಿಯ ಖಗತತಿಯ
ಕಳಕಳಂಗಳ ನೋಡಿ ತೋಷಿಸುತ ಭೂಷಿಸುತ ಮರನುರಂಗಳನು ಮುಸುಕಿ
ಕಳಕಳನೆ ಮಿಂಚುತಿಹ ಮೊಗರುಗಳ ಹೊಗರುಗಳ
ಕಳ ಕಳಭ ಗುಂಪುಗಳ ಸೊಂಪುಗಳ ದಿತಿಯ ಮ
ಕ್ಕಳ ಕಳೆದನಂಶಸಂಭೂತ ಮನುಜಾತ ಸುತ ನೋಡುತೈತರುತಿರ್ದನು ೬೭

ಕಮಲಾರಿವಂಶಸಂಭೂತ ಕೇಳಿಂತು ಹೃ
ತ್ಕಮಲದೊಳಗಿಂದಿರಾನಂದವರ್ಧಕನ ಪದ
ಕಮಲಂಗಳಂ ಬಲಿದು ಬರುಬರುತ ಕಂಡನಿದಿರಿನಲಿ ಭೋರ್ವೋರೆದು ಪರಿವ
ಕಮಲಹಿತತನುಜೆಯಂ ಕಾಲಯಮನನುಜೆಯಂ
ಕಮಲಸಂಪೂರೆಯಂ ಕಲುಷಾಪಹಾರೆಯಂ
ಕಮಲಭವಪಿತೃತೆ ಸುರಸಮಿತೆಯಂ ತಾಪೋಪಶಮನೆ ಪಾವನೆ
ಯಮುನೆಯ ೬೮

ಆ ನದಿಗೆ ನಮಿಸಿ ಸನ್ನುತಿಗೈದು ಪೂಜಾ ವಿ
ಧಾನದಿಂದಾರಾಧನೆಯನೆಸಗಿ ಮತ್ತೆ ಸಂ
ಸ್ನಾನಮಂ ಮಾಡಿ ತತ್ತೀರದೊಳಗಿರುವ ಗುಹೆಯನ್ನೈದಿ ನೆರೆ ಮಂಡಿಸಿ
ಆ ನಾರದಂ ತನಗನುಗ್ರಹಿಸಿದಮಲ ಸಹ
ಜಾನಂದಮಂ ಸಾರ್ಚಿ ಸಲಹುವಷ್ಟಾಕ್ಷರೀ
ಧ್ಯಾನದೊಳ್ ಸಂಧಿಸಿದನೇಕದಿಂ ತನುಮನವು ತನ್ಮಯಾತ್ಮಕವಾಗಿರೆ ೬೯

ವಿಷಯಮನ್ನಿಂದ್ರಿಯಗಳಡಗಿಸಿದವಿಂದ್ರಿಯವ
ಬಸುರೊಳಡಸಿದುದು ಮನ ಮನದ ಚಾಪಲ್ಯಮ
ನ್ನಶನಗೊಂಡುದು ಮತಿಯು ಮತಿಯನೇ ತುತ್ತುಗೊಂಡುದು ನಿಜಾನಂದದರಿವು
ಎಸಗುವೀಡಾಪಿಂಗಳಗಳ ಗತಿಗಳನು ಬಂ
ಧಿಸಿದುದು ಸುಷುಮ್ನೆ ಕಂಡಲಿಯ ಬಾಯ್ಬಿಡಿಸಿ ರಂ
ಜಿಸಿತು ನಿಜತೇಜಸ್ಸದಾನಂದ ಸುಪ್ರಣವದೋಂಕಾರಮೊರಹಿನಿಂದೆ ೭೦

ನಾದರಸವೆಂಬ ತೈಲದಿ ಬಿಂದುವರ್ತಿಗಳ
ನಾದಿ ವಿಜ್ಞಾನಾಗ್ನಿ [1]ಯಂ[1] ರಚಿಸೆ ಬೆಳಗು ತಾ
ನಾದಡಾ ದೀಪ್ತಿಯಿಂದಜ್ಞಾನತಿಮಿರಮಂ ನೂಕಿದಾ ಬಲುಹಿನಿಂದೆ
ಮಾಧವನ ಸಗುಣಮೂರ್ತಿಯ ನೆನೆದು ತದ್ಬೀಜ
ಮಾದ ನಿರ್ಗುಣವ ಸಾಧಿಸಿ ನಿರ್ಗುಣಕೆ ಮೂಲ
ಮಾದ ಸಾಕ್ಷಿಸ್ವರೂಪಿನ ಪರಾನಂದ ನಾರಾಯಣನ ಭಾವಿಸಿದನು ೭೧

---

೭೧ 1. ಯಿಂ

ದಿವ್ಯ ಕೋಕನದ ಸಮಪದಗಳಂಯೋಗಿರಾ
ಡ್ಭವ್ಯ ಕಟಿವಕ್ಷ ದೇಶಂಗಳನ್ನನಿಶ ದಸು
ಜವ್ಯೂಹ ಭಂಜನಭುಜಂಗಳಂ ಕೇಯೂರಹಾರ ಕೌಸ್ತುಭಕಳೆಗಳಂ
ನವ್ಯ ಕುಲಿಶಾಭರದನಂಗಳಂ ಮುಖಕಮಲ
ರವ್ಯೇಂದುನಯನನಾಸಿಕಗಳಂ ಬಗೆಬಗೆವು
ತವ್ಯಯಾನಂದದಿಂದೆರಗಿ ಸದ್ಭಾವಕುಸುಮಂಗಳಿಂದರ್ಜಿಸಿದನು ೭೨

ಇಂತು ಬಹುವತ್ಸರವು ನಿಶ್ಚಲದ್ಭಾವದಿಂ
ದಂತರಂಗದಿ ಭಜಿಸೆ ಹರಿ ತುಷ್ಟನಾಗಿ ನಾ
ಗಾಂತಕನನೇರಿ ಮೂಲೋಕಮಂ ಬೆಳಗುತಿಹ ಪರಮ ಚಿತ್ತೇಜಸ್ಸಿನಿಂ
ಪಿಂತೆ ಮುಂದೆರಗಿದ ದಿವೌಕಸರ್ಮುನಿವರರ
ತೊಂತಿನುಘ್ಘಡ ವೊಳಗಲಭ್ರಪಥದಿಂ ರಮಾ
ಕಾಂತನಿಳಿತಂದನೇಂ ಧನ್ಯನೋ ಧ್ರುವನು ಗೋವತ್ಸಕನ್ಯಾಯಮುಮರೆ ೭೩

ಸ್ವರ್ಣವೆಸುಗೆಯ ನೀಲಮಣಿಯಂತೆ ಹೃತ್ಪದ್ಮ
ಕರ್ಣಿಕೆಯೊಳಾವಗವು ಪೊಳೆವ ಮೇಘ ಶ್ಯಾಮ
ವರ್ಣಮಾದಚ್ಯುತನ ಮೂರ್ತಿಯಂತರ್ಧಾನಮಾಗಿ ಕಾಣ್ಬಡದಿರಲ್ಕೆ
ನಿರ್ಣಯುವನರಿಯದೆವೆಯಂ ಬಿಚ್ಚಿ ನಿತ್ಯಪರಿ
ಪೂರ್ಣಸದ್ರೂಪನಮಲಸಚ್ಚಿದಾನಂದ ತೇ
ಜೋರ್ಣವ ಶ್ರೀಹರಿಯ ಮೂರ್ತಿಯನ್ನಿದಿರಿನೊಳ್ ಕಂಡು
ಮೈಮರೆದನಂದು ೭೪

ಉರದ ಕೌಸ್ತುಭಮಣಿಯೊ ಉದಿಸುವೆಳದಿನಮಣಿಯೊ
ನಿರಿಯ ಪೀತಾಂಬರವೊ ನಿಬಿಡರಕ್ತಾಂಬರವೊ
ಚರಣತಲದಮರಿಕೆಯೊ ಚೆಲ್ವ ಕೆಂದಾವರೆಯೊ ಮುಕುಟಕಾಂತಿಗಳೊ ಬಿಸಿಲೊ
ಮೆರೆವ ತನುರೋಚಿಗಳೊ ಮುಸುಕಿದಳಿಮಾಲೆಗಳೊ
ದರಹಾಸವೆಳಗುಗಳೊ ಬೆಳ್ಗಮುಲಧಾಲಗಳೊ
ಪರಿಕಿಸುವೊಡರಿದೆನಿಸಲೆಸೆವ ಸೂರ್ಯೋದಯದ ಮೇರೆಯಿಂ ಹರಿ ಮೆರೆದನು ೭೫

ಇತ್ತ ಕೇಳ್ವೈ ತನಯನಗಲಿದುರು ಚಿಂತೆಯಿಂ
ದುತ್ತಾನಪದನು ವೈರಾಗ್ಯದಿಂ ಸಾಮ್ರಾಜ್ಯ
ವೃತ್ತಿಯನ್ನುಳಿದು ನಿಯಮ ವ್ರತದಿಭಗವದಾರಾಧನೆಯ ಬಲುಹಿನಿಂದೆ
ಹೊತ್ತುಗಳೆವುತ ನಿಜಾತ್ಮಜನ ಗುಣರೂಪುಗಳ
ಚಿತ್ತದೊಳ್ ನೆನೆನೆನೆದು ಕುದಿವುತಿರಲನಿತರೊಳ್
ವೊತ್ತಿಗೈತಂದನಿದೊ ಧ್ರುವನೆಂದು ಬಿನ್ನವಿಸಿದರ್ ಕಂಡವರ್ ಮುದದೊಳು ೮೮

ಲುಪ್ತಚೇತನಕಳೇಬರವೆ ಸತ್ಪ್ರಾಣದಿಂ
ಜ್ಞಪ್ತಿಯಂ ವಹಿಸಿದಂತಾಗೆ ತದ್ದೂತರ್ಗೆ
ಸಪ್ತಾಂಗದಿಂ ಮನ್ನಣೆಯನೆಸಗಿ ಚತುರಂಗಬಲವಾದ್ಯವೆಸೆವ
ತಪ್ತ ಕಾಂಚನ ಸನ್ನಿಭಾಂಗಿಯರ ಕರತಲ
ವ್ಯಾಪ್ತ ಕನ್ನಡಿ ಕಳಶ ಸೊಬಗಿನುಪ್ಪಾರತಿಯ
ದೀಪ್ತಿ ಮಿಗಲವನೀಶ ಪೂರವಂಟನಾತ್ಮಜನನಿದಿರುಗೊಂಬುತ್ಸವದೊಳು ೮೫

ಪೊಳೆವ ನವರತ್ನತೋರಣಚಪ್ಪರಂಗಳಿಂ
ದಳವಟ್ಟ ಸಾಲ ಕರುವಾಡಗಳ ಪನ್ನೀರ
ಚಳೆಯದಿಂ ತಂಪಾದ ರಾಜವೀಧಿಯಲೆಸೆವ ಪಂಚವರ್ಣಿಗೆಗಳಿಂದೆ
ಪೊಳಲ ಸಿಂಗರಿಸಿ ಬಾಲನ ಕಾಣುವಾತುರದಿ
ದಳದುಳದೊಳೈತಪ್ಪ ಪುರಜನರ ಪದದುರುಬೆ
ಗಿಳೆ ನೆಗ್ಗದಿರದೆನಿಸಲೈದಿದುದು ಜಂಗಮಾಬ್ಧಿಯ ಸಡಗರವನರುಪುತ ೮೬

ಈ ರೀತಿಯಿಂ ಬರಲ್ ಭೂನಾಥ ಕಂಡನಾ
ಭೂರಿತೇಜೋಮರೀಚಿಯ ಸೂಸುತೆರಡನೆಯ
ನಾರಾಯಣನ ರೂಪಿನಿಂ ಬಪ್ಪ ತನಯನನ್ನಾಧ್ರುವಂ ಭಕ್ತಿ ಮಿಗಲು
ವಾರಿಜಂಗಳನು ರವಿಯಾಲಿಂಗಿಸುವ ಮಾಳ್ಕೆ
ತೋರುತಿರೆ ಪಿತನಂಘ್ರಿಕಮಲದೊಳ್ ಮಣಿಮುಕುಟ
ವೋರುಗುಡಿಸಲ್ ಮಣಿದೊಡೆತ್ತಿ ಬಿಗಿಯಪ್ಪಿ ಹೃತ್ತಾಪಮಂ ಕಡೆಗಡಿದನು ೮೭

ನುತ್ತೆ ಕೇಳ್ ಪುರಜನರ್ಕಂಡು ಕಾಣಿಕೆಗಳ
ನ್ನಿತ್ತು ಮರಳುವ ದಾಯಮದು ತೆರೆಗಳೆನಿಸಿ ತೋ
ರುತ್ತಿರಲ್ ಭಾರಿಗಟ್ಟಿದ ಜನರ್ತಡಿಯಂತೆ ಕಾಣ್ಬಡಲ್ ಬಹುವರ್ಣದ
ಸತ್ತಿಗೆಯ ಸಾಲ್ಗಳಂಬರದಿಂ ಕಡಲ್ಗೆ ಪರಿ
ವುತ್ತಲಿಳಿತಹ ಮೇಘವೆನಿಸಿರಲ್ ಭೂತಳವ
ಸುತ್ತಿಕೊಂಡಿಹ ಶರಧಿಯೆನಿಸಿತಾ ಜನಜಾಲಮವನಿಯಡಮುಬ್ಬದೆನಿಸಿ ೮೮

ಇಂದುಕುಲದರಸ ಕೇಳೀ ತೆರದ ಚತುರಂಗ
ಸಂದಣಿಯ ತೂರ್ಯವಾದ್ಯದ ಶುಭಧ್ವನಿಗಳಿಂ
ಬಂದನಾ ಪುರರಾಜವೀಥಿಯೊಳ್ ಮೆರೆವ ಗೋಪುರಗಳನ್ನಡರಿ ನೋಳ್ಪ
ಸುಂದರಾಂಗಿಯರ ಕುಡಿನೋಟದುಪ್ಪಾರತಿಗ
ಳಂದಮನ್ನಾನುತವೆ ಭಕ್ತಿಯಿಂ ಸುರುಚಿಯಳ
ಮಂದಿರಕೆ ನಡೆತಂದು ಚರಣದೊಳ್ ಮೈಯಿಕ್ಕಿನಿಂದು ಸನ್ನುತಿಗೈದನು ೮೯

ಆ ಯುವತಿ ನೋಡಿ ಬಾಲಕನ ಪಿಡಿದೆತ್ತಿ ನಿಜ
ದಾಯಾದ ಹರುಷದಿಂ ಹರಸಲ್ಕೆ ನುಡಿದನೆಲೆ
ತಾಯೆ ನೀನೆನಗೆ ಭಗವಚ್ಚರಣಮಂ ತೋರಿ ಪರಸಾಧನವನೇರುವ
ದಾಯವನ್ನನುಗೈದು ಸಲಹಿದೆ ಸುನೀತಿಯುಳ್
ತಾಯಲ್ಲವೆನಗೆ ಪರದೇವತೆಯೆ ನೀ ಕಣಾ
ಮಾಯಕದ ನುಡಿಯಲ್ಲ ತಥ್ಯಮಿವರನುವನಸುರಾರಿಯರಿದಪನೆಂದನು ೯೦

ವಿನಯದಿಂದಿಂತು ನುತಿಗೈದು ಬಲವಂದೆರಗಿ
ತೊನೆವ ಸಂತಸದಲಾಸ್ಥಾನಮಂಟಪಕೆ ಬರೆ
ತನಯನಂ ಕಂಡುದೇ ಶುಭಲಗ್ನಮೆಂದು ತಿಥಿ ವಾರ ತಾರೆಗಳೆಣಿಕೆಯ
ನೆನೆಯುದಾಕ್ಷಣ ಶಾಸ್ತ್ರಪದ್ಧತಿಗಳಿಂ ದೇವ
ಮುನಿ ವಿಪ್ರರುಗಳ ಕರಕಲಶಮಂತ್ರೋದಕದಿ
ವನಜಾಕ್ಷ ರೂಪನಾ ಧ್ರುವವರಗೆ ಪಟ್ಟಾಭಿಷೇಕವನ್ನನುಗೈದನು ೯೧

ಮಣಿ ಕನಕ ವಸ್ತ್ರ ವಾಹನಮಶ್ವಮತ್ತವಾ
ರಣ ಭೂ ವರೂಥ ಗೋಮಹಿಷಿ ಮೃದುವಸನ ಭೂ
ಷಣ ಗಂಧಮಾಲ್ಯಾದಿ ದಾನದಕ್ಷಿಣೆಗಳಿಂ ವಿಪ್ರಯಾಚಕರಾಸೆಯಂ
ದಣಿಸಿ ಸುರಯಕ್ಷದಿಗ್ದೇವತಾ ತುಷ್ಟಿಗಳ
ವಣಿತೆಯಂ ಪೂರವಿಸಿ ನಿಖಿಲ ಜನ ತೃಷ್ಣೆಯ
ನ್ನಣಗಿಸಿದನಮಲ ಶೇಷಾದ್ರಿ ವೆಂಕಟರಮಣ ಕೌಂಡಿಣ್ಯ ಗುರು ಪೊರೆಯಲು ೯೨

ಅಂತು ಅಧ್ಯಾಯ ೧೩ ಕ್ಕಂ ಪದನು ೧೧೨೭ ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ

೧೪. ಕುಬೇರನೊಡನೆ ಧ್ರುವರಾಯನು ಯುದ್ಧಕ್ಕೆ ಹೋದದ್ದು

ಸೂಚನೆ.—ಉತ್ತಮನೃಪಾಲನಂ ಯಕ್ಷಗಣಮಟವಿಯೊಳ್
ಮುತ್ತಿ ಸಂಹರಿಸಲಾ ಧ್ರುವರಾಜ ಮುಳಿದುತ
ದ್ವಿತ್ತೇಶನೊಡನೆ ಕಾದಲ್ಕೆ ನಿಜಸಮರ
ಸನ್ನಾಹದಿಂ ಪೊರಮಂಟನು.

ಕುಮುದ ಬಾಂಧವ ಕುಲಾಧೀಶ ಕೇಳ್ ಮೇಲ್ಗತೆಯ
ನಮಿತಸಾರಂಭ ಮಿಗೆ ನಿಜ ರಾಜ್ಯಭಾರವಾ
ದ್ಯುಮಣಿ ಸಂಕಾಶ ಮನುಜಾತ ಸುತಗಳವಡಲ್ ಸರ್ವತೋಭದ್ರಮೆನಿಸಿ
ಅಮರರ್ಗೆ ಹೆಚ್ಚಳಗಳಸುರರಿಂಗುಬ್ಬಸಗ
ಳಮಲದಿಂರೀಳಿಗೆಗಳಶುಭರೆಡೆಗಂ ಕೃಶಗ
ಳಮರಿ ಸಿರಿಗುನ್ನತಿಗಳವನಿಗಂ ಸಂತಸಗಳಾರೋಹಿಸಿದವರಿದೆನೆ ೧

ಸ್ನಾನ ಸುವ್ರತ ನೇಮ ಹರಿಪೂಜೆಯಿರದನ್ನ
ಪಾನಗಳ ಕೊಳ್ಳರಖಿಲಾಶ್ರಮಿಗಳುಂ ನಿತ್ಯ
ದಾನ ಹರಿವಾಸರ ದ್ವಾದಶಿಗಳನ್ನುಳಿಯರಿತರ ಜಾತಿಗಳಾದಡುಂ
ಧ್ಯಾನ ಸತ್ಯಾಚಾರ ಶಾಂತಂಗಳಿರದ ಬರಿ
ಮೌನಮನ್ನೊಲಿಯರ್ವಿರಾಗಿಗಳ್ ಸತ್ಕಥಾ
ಗಾನ ಸಚ್ಛಾಸ್ತ್ರ ಸಂವಾದಮಲ್ಲದ ವೃಥಾಲಾಪಮಿರದವನಿಳೆಯೊಳು ೨

ಅಖಿಲರುಂ ಗುಣಯುತರ್ ಬದ್ಧಜೀವಿಗಳಾಗ
ರಖಿಲರುಂ ಪುಣ್ಯಜನರಮರದೂಷಕರಾಗ
ರಖಿಲರುಂ ಗಂಭೀರ ಘನಸಹಿತರಮಲ ಮುನಿಗಳ್ಗೆ ಕೋಪವ ಬಲಿಯರು
ಅಖಿಲರುಂ ದಾನಿಗಳ್ ಹರಿವೈರಪರರಾಗ
ರಖಿಲರುಂ ಭೂತ ಹಿತ ಯುತರು ವಿಷ ಗಳರಾಗ
ರಖಿಲರುಂ ಹರಿ ಪದಾಶ್ರಿತರು ಸಂತಾಪಕರರೆನಿಸರಿನ್ನಾ ನಾಡೊಳು ೩

ಸುರರು ಕಲಕಿದ ದುಗ್ಧಶರಧಿಯುಂ ದಶಶಿರಂ
ನೊರೆದಲುಗಿ ಕಿತ್ತ ರಜತಾದ್ರಿಯುಂ ಕ್ಷಯರೋಗ
ನೆರಗಿರ್ಪ ಶಶಿಕಿರಣದೇಳ್ಗೆಯುಂ ಬಂಧಬವಣಿಯನಾಂತ ಸುರಕರಿಯನು
ಹರಜಟಾಬದ್ಧ ಸುರಗಂಗೆಯುಂ ಪೊರೆಯಾಂತು
ಕೊರಗುತಿಹ ಫಣಿರಾಜನಿರಿಕೆಯನ್ನರಂತವ
ರ್ಸರಿಸಮೆನಿಸಲಹುದೆ ಮನುಪೌತ್ರನನ್ವಯ ವಿಮಲ ಕೀರ್ತಿಗಂ ಪರಿಕಿಸಲ್ಕೆ ೪

ಸುರರ ಹೃತ್ಕುವಲಯಗಳರಳುತಿರೆ ವಿಮಲ ಭೂ
ಸುರರ ಸೌಭಾಗ್ಯಗಡಲುಬ್ಬುತಿರೆ ಶತ್ರುಭೂ
ವರರಾಸ್ಯಕಮಲಂಗಳಲಸುತಿರೆ ಜಾರ ಚೋರರ್ಗಳೆದೆ ಭುಗಿಲುಗೊಳಲು
ಶರಣ ಜನ ಸಂತಾಪಮುಣಗುತಿರೆ ದುಷ್ಟನಿ
[1]ಷ್ಠುರರೆಂಬ ಬೆಳ್ಗಮುಲಿ ಕೊರಗುತಿರೆ ದೋಷಗಳ್[1]
ಕರಗುತಿರಲಾ ಧ್ರುವನ ಕೀರ್ತಿ ಚಂದ್ರಿಕೆ ಪರಿವ್ಯಾಪಿಸಿತು ಮೂಲೋಕಮಂ ೫

ಧ್ರುವನ ಸತ್ಕೀರ್ತಿ ನಿರ್ಮಲತೆಯ ಸಗಾಢಮಂ
ಶಿವನೆರಗಲೆಳಸಿ ಭಸ್ಮವನು ಲೇಪಿಸಿದಡುಂ
ಧವಳತ್ವ ಸರಿಸಮಾಗದೆ ಶೇಷ ಭೂಷಣವನಾಂತು ಗಂಗೆಯನು ಧರಿಸಿ
ಭವನಮಂ ಶ್ವೇತಗಿರಿಯೊಳ್ ಕಟ್ಟಿ ಚಂದ್ರಖಂ
ಡವನು ನೌಳಿಯಲಾಂತು ನೋಡಿ ಸಮನಾಗದೆ ತ
ದವಮಾನದಿಂದೆ ವಿಷಮಂ ಕುಡಿದ ಪರಿಯಾಗದಿರದೆನಿಸಿ ಮುಸುಕಿತಂದು ೬

ಅರಿಜನರ ಖಡ್ಗಕರಬಂಧಗಳ್ ಪ್ರೌಢತರ
ತರುಣಿಯರ ನೀವಿಗಳ ಬಂಧಗಳ್ ಪೂರ್ವಗತ
ಧರಣಿಪಚರಿತ್ರಪ್ರಬಂಧಗಳ್ ಮಲಿನಮನುಜರನಲೆವ ಪ್ರತಿಬಂಧಗಳ್
ಮೆರೆವಾರ್ತರಾಶಾನುಬಂಧಗಳ್ ಮೂಢಪಾ
ಮರಲೋಕರಜ್ಞಾನಬಂಧಗಳ್ ತಮಗೆ ತಾ
ಜರುಗಿ ಕೆಡೆದಪವು ಭೂತಳಕೆ ತದ್ಧ್ರುವ ಮೂರ್ತಿಯುಂ ಕಂಡ ಮಾತ್ರದಿಂದೆ ೭

---

೫ 1. ಷ್ಠುರ ಜನರಹಂ ಕಾರವೆಂಬ ಚಂದ್ರೋತ್ಪಲವೆ.

ಭೇರಿಯ ಧಳಂಧಳರ್ಘನರವಗಳೆರಗಿ ರಿಪು
ನಾರಿಯರ ವಕ್ಷೋಜ ಗಿರಿ ತಟದೊಳನುನಾದ
ಮೇರುಗೊಳೆ ಕರವಾಳಚಪಲ ಮಾರ್ವೆಳಗವರ ಬೆದರು ನೋಟದಲೊಪ್ಪಿರೆ
ವೀರರಸವೃಷ್ಟಿಗಳ್ ಭಯದಲೋಡುವ ಶತ್ರು
ಭೂರಮಣರಂಗದೊಳ್ ಸ್ವೇದ ಧಾರೆಗಳಾಗಿ
ತೋರುತಿರೆ ಹೂಂಕಾರ ಗರ್ಜನದ ಘನಶೌರ್ಯ ಮುಸುಕಿತರಿಲೋಕಂಗಳ ೮

ಅಂಕಿತ ದರಿದ್ರ[1]ವಾದ್ರಿ[1]ಗಳೊಳ್ ಸದಾ ಕಠಿನ
ಮುಂ ಖಂಡನಾಯಾಸ ಪವಳದೊಳ್ ಬಂಧಗಳ್
ಸಂಕಲೆಯ ತೊಡರು ರತಿವರಸೆಯೊಳ್ ಲುಬ್ಧವೃತ್ತಿಗಳು ಘೋರಾಟವಿಯೊಳು
ಮುಂಕೊಂಬ ಚಂಚಲಾಗ್ರಹಗಳಾಕಾಶದೊಳ್
ಪಂಕಜಾತಗಳು ಮಧುಪಾಳಿಗಳ್ ಕೊಳಗಳೊಳ್
ಹುಂಕಾರ ಪಟುಶಬ್ದಗಳ್ ಭೂತವೈದ್ಯರೊಳ್ ತನ್ಮಹಿಯೊಳನ್ನಿರವಲಿ ೯

ಆಶಾನುವರ್ತಿಯಾದಡು ವಿರಾಗಾನ್ವಿತಂ
ನಾಶಾನುಬದ್ಧನೆನಿಸಿಯು ಚಿರಾಯುಷ್ಮತಂ
ದೋಷಾಪಹಾರಿಯಾದಡು ಕುವಲಯಾನಂದವರ್ಧಕಂ ಶಾಂತಕಳೆಯಿಂ
ಭಾಸಿಸುವ ರಾಜನಹುದಾದಡುಂ ಗುರುಹಿತಂ
ಶ್ರೀ ಸಹಿತನಾದಡುಂ ಪುಣ್ಯಜನಪೋಷಕಂ
ಜೈಸಿಯುಂ ಸಂಗರಾಟೋಪಮುಂ ಧರ್ಮಹಿತನೆನಿಸಿ ತದ್ಧ್ರುವನೆಸೆದನು ೧೦

ಶಯ್ಯಾಸನದ ಭಂಗ ಹರಿಗೆ ಹರಿವಾಗಲ್ಕೆ
ವೈಯ್ಯಾಳಿಯನನುಕೂಲತೆಯಿಂದ್ರಗಡಸಲ್ಕೆ
ಕೈಯ್ಯಾರ ಬರೆವ ಕೋಟಲೆ ಚಿತ್ರಗುಪ್ತರಿಂಗಳಿಯಲ್ಕೆ ಯಮಭಟರ್ಗೆ
ಒಯ್ಯುವೆಡೆಯಾಟಗಳ್ ಸಡಿಲಲ್ಕೆ ಶೋಧನೆಯ
ಗೈಯುವಾಯಾಸ ಯಮಗಳಿಯಲ್ಕೆ ಚಪಲಗುಣ
ಶ್ರೀಯರಸಿಗುಡುಗಿ ಚಿರಮಾಗಲ್ಕೆ ತದ್ಧ್ರುವಂ ಬೂಭಾರಮನ್ನಾಂತನು ೧೧

೯ 1. ಪಾದರಿ.

ಏಕವಿಕ್ರಮದಿ ಬಲಿನೃಪರಾಜ್ಯಪರಣವು
ನ್ನೇಕಮಾರ್ಗದಿ ನಡೆದು ದೋಷಾಪಹಾರವು
ನ್ನೇಕರಥಕೀರ್ತಿ ಮಿಗೆ ಶತ್ರುಘ್ನಲೀಲೆಯಿಂ ಸಂತಸವನಾಂತು ಮತ್ತೆ
ಏಕಮುಖದಿಂದೆ ಜಿತತಾರಕಯಶೋಂಚಿತದ
ಲೇಕಗಳದಿಂ ತ್ರಿಕೂಟಾಚಲಾಧಿಪನೆನಿಸಿ
ಏಕಮಸ್ತಕದಿಂದೆ ಬೂಭಾರಮಂ ವಹಿಸಿ ಮೆರೆವನಾ ಧ್ರುವಸರಿದೆಸೆ ೧೨

ನಿಜಚಾಪಟಂಕಾರದಬ್ಬರಕೆ ಶತ್ರುಭೂ
ಭುಜರೆದೆಗಳೊಡೆದು ಕಳವಳದಿಂ ಪಲಾಯನವ
ಭಜಿಸುತಂ ಗಿಡಗುಲ್ಮಗಳ ಕಂಡಡುಂ ಬೆಚ್ಚಿ ಧ್ರುವನಿದೆಕೊ ಬಂದನೆಂದು
ಗಜಬಜಿಸಿ ಗಿಡಗಳಿಂಗಡಗೆಡೆದು ಕೊಲದಿರೆಲೆ
ಸುಜನ ನಿನ್ನಡಿಗಳಂ ಮರೆಯೊಕ್ಕೆವೆಂದೆನಿಪ
ವಿಜಯ ವಿಕ್ರಮ ಕೀರ್ತಿಯಂ ಶತ್ರುಭೂಪರ್ಗೆ ಮುಸುಕಿ ಮುಂಬರಿದಿರ್ದನು ೧೩

ಪರಿಕಿಸಿದಡಾ ಧ್ರುವನ ಸದ್ವರ್ತನೆಗಳ ವಿ
ಸ್ತರಿಸಲಷ್ಟಾದಶ ಸ್ಮೃತಿ ಪುರಾಣಾದಿಗಳ್
ನೆರೆಯವೆಲೆ ಭೂಪ ನಾರಾಯಣ ಧ್ಯಾನತದ್ಗಾನ ಸಂಕೀರ್ತನೆಗಳ
ಮೊರಹುಗಳಿಗೆಂಟು ದೆಸೆಯುಬ್ಬದಿನ್ನೈಶ್ವರ್ಯ
ಹರಹಿಗೀ ಬ್ರಹ್ಮಾಂಡ ವಿಸ್ತಾರ ಕಿರಿದು ಗಡ
ವಿರಚಿಸುವಡುಳಿದವರ ಪಾಡೇನು ಶೇಷಗಸದಳಮೆನಿಪ್ಪದೇವೇಳ್ವೆನು ೧೪

ಈ ರೀತಿಯಿಂ ಸಾಂಗಧರ್ಮವೃತ್ತಿಯ ಸದಾ
ಚಾರದಿಂ ರಾಜ್ಯಭಾರದಲೆಸೆವ ತನಯನ
ನ್ನಾರೈದು ಸಂತಸದಲಾಗಲುತ್ತಾನಪದನುರುಮಂಗಳೋತ್ಸವದೊಳು
ಭೂರಿ ಶುಭ ದಿನ ಸನ್ಮುಹೂರ್ತದೊಳ್ ವರ ಶಿಂಶು
ಮಾರಕ ಜನೇಶ್ವರ [ನ] ತನಯಳ್ ಭ್ರಮೀವೆಸರ
ನಾರಿಯಳನಾಗ ನಿಜಜಾತಗೆ ವಿವಾಹಮಂಗೈದು ಸುಖಮಾಗಿರ್ದನು ೧೫

ಆ ಯುವತಿಯೊಡಗೂಡಿ ಸುಖದಲಿರುತಿರೆ ಮತ್ತೆ
ವಾಯುವಿನ ಪುತ್ರಿ ಈಡಾವೆಸರಿನಿಂ ಮೆರೆವ
ತೋಯಜಾಕ್ಷಿಯನು ಮದುವೆಯ ಮಾಡಲುಭಯ ಪತ್ನಿಯರೊಡನೆ ಕೇಳಿ ಮಿಗಲು
ಶ್ರೀಯಶಸ್ಸಂಪನ್ಮಹಾ ವಿಭವದಿಂದೆ ಧ್ರುವ
ರಾಯನೊಪ್ಪಿರುತಲೊಂದಿನ ಲೀಲೆಯಿಂದೆ ಕುಮು
ದಾಯತೇಕ್ಷಣೆಯಾ ಭ್ರಮೀದೇವಿಸಹಿತಲೇಕಾಂತ ಹರ್ಮ್ಯವನೇರ್ದನು ೧೬

ವ್ಯಾಪಕ ವಸಂತಕಾಲದ ಘರ್ಮಗಾಢತರ
ತಾಪಮನ್ನೇಳಿಸುವ ಚಂದನಾದ್ಯಮಿತಾಂಗ
ಲೇಪನ ದ್ರವ್ಯಮಂ ತಿಗುರಿ ಸನ್ಮಲ್ಲಿಕಾ ಶಯ್ಯಾಸನವನು ಸಾರ್ದು
ರೂಪವತಿಯೆನಿಪ ನಿಜಪತ್ನಿಯೊಳ್ ಸರಸ ಸ
ಲ್ಲಾಪದಿಂದಿರುತಿರಲ್ ಮುಂಬರಿವ ವಿರಹದೊಳ್
ದೀಪಿಸಿತು ಚಂದ್ರೋದಯವು ವಿರಹಸಸಿಗೆ ರಸಮನ್ನೆರೆದು ಪೋಷಿಪಂತೆ ೧೭

ರಾಗಮನ್ನೇರ್ಗೊಳಿಪ ಪೆಂಪ ಕಾಣ್ಬಡಿಪಂತೆ
ರಾಗ ವರ್ಣದೊಳುದಿಸಿ ವಿಷಯಮಂ ಜರಿವ ರವಿ
ರಾಗಮನ್ನೋಡಿಸುತ ಮುಂಬರಿದು ತಾರಕಾಂಗನೆಯರಂ ಬೆರೆಯಲಾಗ
ರಾಗಗುಣಮಡಗಿ ವಿಮಲತೆಯಿಂ ತಮಸ್ಸಿಗೆ ಸ
ರಾಗವಿಾಯದೆ ಶಾಂತನೆನಿಸಿದಂ ಭುವಿಯೊಳಾ
ರಾಗಲೇಂ ತಾರಕಾವೃತದಿಂದೆ ನಿರ್ಮಲವಿರಾಗಮನ್ನಾನದಿಹರೇ ೧೮

ಅರಸನಿಂಗುಪಹತಿ ಬರಲ್ ಗುಹೆಯ ಸಾರಿ ಯ
ಕ್ಕರದಿಂ ತಪಶ್ಚರಣೆಗೈದು ಮತ್ತೆಂದಿನೋಲ್
ವರವ ಸಾಧಿಸಿ ಕಾಂತಿಯಂ ಪಡೆದ ರಾತ್ರಿ ವೆಣ್ಣೈತರಲ್ ತತ್ಕಾಂತನು
ಪೊರೆದು ಗಾಢಾಲಿಂಗನವನೆಸಗಲಾ ಸತಿಯು
ಹೆರೆಹಿಗ್ಗಿ ಬಿಣ್ಪಾಗಲವಳ ಸಾಪತ್ನಿಯರ
ಗರುವಮಣಗಿದುದೆಂಬಿನಿಂದೆ ಮಸುಳಿದವು ತಾರೆಗಳು ಚಂದ್ರೋದಯದೊಳು ೧೯

ಜಾಣೆ ರತಿ ನಿಜಪತಿಗೆ ತಿಗುರನರೆವ ಸ್ಫಟಿಕ
ಸಾಣೆಯೆನಲೈರಾವತಕೆ ಬಿಗಿದ ಮುತ್ತಿನ ಗು
ರಾಣಿಯೆನಲಭ್ರಮಾರ್ಗದಿ ಗರುಡನೊಯ್ವ ನಿರ್ಮಲ ಸುಧಾಕಲಶವೆನಲು
ವಾಣಿ ನಿಜಪತಿಗೆ ವೀಳ್ಯವನೀವ ವಜ್ರಹರಿ
ವಾಣವೆನಲಿಂದ್ರನಿದಿರಲಿ ಶಚೀದೇವಿ ಬಿ
ನ್ನಾಣದಿಂ ಪಿಡಿದಿರ್ಪ ದರ್ಪಣದ ಬೆಡಗೆನಲ್ ಶಶಿ ಬಿಂಬವೆಸೆದಿರ್ದುದು ೨೦

ಮುಗಿಲೆಂಬ ಮುಗ್ಧಾಂಗಿಯಳ ವಜ್ರಪದಕವಿದು
ಬಗೆಯಲಂಬರವೆಂಬ ಕೊಳನ ಬೆಳ್ಗಮಲವಿದು
ಗಗನವೆಂದೆಂಬ ಕೃಷ್ಣನ ಕರದ ನವನೀತಘಟಿಕೆಯಿದು ತಿಳಿಗೊಳಲ್ಕೆ
ನಗವಿರೋಧಿಗೆ ಪಿಡಿದ ಶುಭ್ರಾತಪತ್ರವಿದು
ನೆಗಳಿ ವಿಬುಧರ್ಪೂಜಿಪ ಸ್ಫಟಿಕಲಿಂಗವಿದು
ಒಗುಮಿಗೆಯ ನಾಕದ ಯಶೋಲತಾಕಂದವೆನಲಿಂದುಮಂಡಲವೆಸೆದುದು ೨೧

ಕಡಲ ಕಡೆವಂದು ಮಂದರಗಿರಿಯ ಘಾತದಿಂ
ದೊಡಲೊಡೆದು ಕಲೆ ನಿಂದ ಕರಿದೈಸೆ ಕಾಳಾಹಿ
ಪಿಡಿದಗಿಯೆ ನಂಜೂರಿದಿರವೈಸೆ ರೋಹಿಣೀ ಪರಿರಂಭದುರುಬೆಯಿಂದೆ
ಎಡೆಗೊಂಡ ಚೂಚುಕದ ಕುರುಹೈಸೆ ಹರನೇತ್ರ
ವೆಡಗೆನಿಸಲಾ ಕನೀನಿಕವೈಸೆ ಕಮಲಕಳಿ
ಗೆಡುಕತೆಯ ಹೃದಯಕಲ್ಮಷವೈಸೆ ತಿಳಿಯಲೆನೆ ಶಶಚಿಹ್ನವೆಸೆದಿರ್ದುದು ೨೨

ನಿಶಿಯನೆಳೆದೊಳಗಿಟ್ಟ ಸಡಗರವೊ ಕೋಕಸಂ
ತಸಗಳಂ ಕಳೆದ ಕಲುಷಾಶ್ರಯವೊ ಪುಂಶ್ಚಲಿಯ
ರಸುರುಸುರ್ಝಳ ತಪ್ತಲಕ್ಷ್ಮಕವೊ ಮುನಿ ನೇಮುಗಡಿ ಕತಾಮಸ ಬೀಜವೊ
ಅಸಮಗುರುಶಾಪಗತಮಲಿನವೋ ಕ್ಷೀರನಿಧಿ
ಬಸುರ ಬಡಬಾಗ್ನಿಯುರಿಶೀಕರವೊ ತಾರಕೆಯ
ರೊಸೆಮು ಚುಂಬಿಸಲದ್ದ ಕಜ್ಜಳವೊ ತಿಳಿಯಲೆನೆ ಶಶಿಕಳಂಕೆಸೆದಿರ್ದುದು ೨೩

ಅರಸನುಚ್ಛ್ರೇಯಸವನಳಿಸಿದುರಿಯೊಡಲನಂ
ಚರಿಸಿದೆಡಮಪವಿತ್ರಮೆಂದೆನುತ ರಾತ್ರಿಸತಿ
ಪರಿಶುದ್ಧಿಯಂ ಮಾಳ್ಪೆನೆಂದುಜ್ಜುಗವನಾಂತು ಪೊಸ ಚೂರ್ಣಕರ್ದಮವನು
ಧರಣಿಗಗನಗಳಿಂಗೆ ಪೂಸಿ ಸದ್ವಿಜತೃಪ್ತಿ
ಕರವನೆಸಗಿದಳೆನಿಸಲಮಲಚಂದ್ರಿಕೆ ಜಗ
ದ್ಭರಿತವಾದುದು ಶುಭ್ರಕಳೆಯಿಂ ಚಕೋರಗಳ್ ಸವಿದು ಸಂತೃಪ್ತಿಗೊಳಲು ೨೪

ಮುಂಬರಿವ ಕರಚೇಷ್ಟೆಯಿಂ ರಾತ್ರಿವನಿತಾಸಿ
ತಾಂಬರದ ನೀವಿಯಂ ಸೆಳೆದು ಮೇಲ್ವಾಯ್ದು ಪರಿ
ರಂಭಿಸಿದ ಸೋಮನಂ ಕಂಡು ಹೆಚ್ಚಳದಿ ನಗುತಿರ್ಪ ಕುಮುದಿನಿಯರಿರವಂ
ಅಂಬಕ ವಮುಗಿದ ಪದ್ಮಿನಿಯರಂ ವಿರಹವಂವ
ಲಂಬಿಸಿದ ಚಕ್ರಗಳ ನೋಡಿ ಲಜ್ಜಿಸುತ ಧವ
ಳಾಂಬರವನಳವಟ್ಟ ರಾತ್ರಿಸತಿಯೆಂಬಿನಂ ಬೆಳುದಿಂಗಳೆಸೆದಿರ್ದುದು ೨೫

ತಳಿತ ಚಂದ್ರೋದಯದ ಮಹಿಮೆಯಿಂ ಕುಮುದ ಹೆ
ಚ್ಚಳಿಸಿ ತಲೆದೂಗಲ್ಕೆ ಪುಂಡರೀಕಂ ಬಹಳ
ಬಳಲಿನಿಂದಲಸಿ ತಲೆಗೊಡಹಲ್ಕೆ ಭೂತಳಮದೊಲೆದಾಡಲದರಿನಿಂದೆ
ತುಳುಕಿ ಸುಕ್ಷೀರನಿಧಿಯವನಿಯೊಳ್ ಹರಹಿ ದಿ
ಗ್ವಳಿಗಳಂ ಮುಸುಕಿತೆಂಬಂತೆ ಬೆಳ್ದಿಂಗಳೊ
ಬ್ಬುಳಿ ಮುಸುಕಿದುದು ಬಲಿದ ಬಣ್ಪಿನಿಂ ಭೂಮಿ ತಳಪಟಗೊಂಡುದೇಂ
ಚಿತ್ರಮೋ ೨೬

ಹೊಣಕೆಯಿಂ ರಾತ್ರಿಸತಿ ಪತಿಯನೊಡಗೂಡಿ ಗ
ರ್ಭಿಣಿಯಾಗಲಂಗ ಬಿಳಿದೇರ್ದುದೆನೆ ಮದನ ಬಿ
ಸ್ಸಣಗಾರನವನಿಗಂ ಮೋಹನಾವೇಶಭಸ್ಮವನು ಪೂರಿಸಿದನೆನಲು
ಎಣಿಸಲ್ ವಿರಾಗಿಯೋಗಿಗಳಿಗುಂ ವಿರಹವು
ಲ್ಬಣವಾಗೆ ತಾಮಸಾವೇಶದಿಂ ಸಾತ್ವಿಕ ಸು
ಗುಣವೆ ಪೊರಸೂಸಿ ಪರಿದೋಡುತಿಹುದೆಂಬಂತೆ ಕೌಮುದಿಯು
ಚೆಲುವಾಂತುದು ೨೭

ಇಂತು ಚಂದ್ರೋದಯದ ಬಲುಹಿನಿಂದವೆ ತೆರಳಿ
ಕಂತು ನಿಜ ಚಾಪದೊಳಗೈದಂಬನುಗಿದು ಕ
ರ್ಣಾಂತಮಾಗೆಳೆದೆಸೆಯಲಲರಳುಗಣೆಗಳ್ ನಾಂಟೆ ಜನಪನೆದೆ ಜರ್ಜರಿಸಲು
ಕಾಂತಾಮಣಿ ಭ್ರಮೀದೇವಿ ವೆಸರಾಂತ ನಿಜ
ಕಾಂತೆಯಂ ನೋಡಿ ಮೋಹಾವೇಶದಿಂದೆ ಭೂ
ಕಾಂತ ಮೇಲ್ವಾಯ್ದುಡಾಳಿಯುರವಿದು ತೊಲದದರ್ಪತಿಪತಿಗೆ ಸರಸಮುಮುರೆ ೩೬

ಎಣಿಸಲಂಗಜಕಳಾ ಶಾಸ್ತ್ರಮತ [1][ದಿಂಡೆ][1] ದಶ
ಗುಣಮಧಿಕಮೆನಿಸಿ ಚುಂಬನ ತಕ್ಕೆ ಬಂಧಗಳ
ಬಣಿತೆಯಿಂ ಸಪಸವೆರಸಿನ ಸಾಮರಸ್ಯಕುಶಲೋಕ್ತಿಗಳ ರವಗಳಿಂದೆ
ಪ್ರಣುತ ಮೋಹನ ಲಲ್ಲೆಗಳ್ ಪ್ರಣಯಮುಳಿಸಿನು
ಲ್ಬಣತೆಯಿಂ ಸುರತಸಾಮ್ರಾಜ್ಯದೊಳ್ ರಾತ್ರಿಯಂ
ಕ್ಷಣಿಕಮಾಗಿಯೆ ಕಳೆವನೆರಡನೆಯ ಹರಿಸಿರಿಗಳೆನಿಸಿ ಸಾತ್ವಿಕತೆ ಮಿಗಲು ೩೭

ಚಿತ್ತಶುದ್ಧಿಯಲಿರ್ವರಿಂತು ರತಿಸೌಖ್ಯಸಂ
ಪತ್ತಿನಿಂದಾನಂದಿಸಿವ ಬಳಿಕಲುರುಪುಣ್ಯ
ಬಿತ್ತಂಕುರವನಾಂತ ತೆರನಂತೆ ತದ್ಭ್ರಮೀದೇವಿ ಗರ್ಭವನಾನಲು
ಒತ್ತಿ ಬರಲೊಂಬತ್ತು ತಿಂಗಳುಗಳಾಗ ಪಿರಿ
ದುತ್ತಮದ ತಿಥಿ ವಾರತಾರೆಶುಭಲಗ್ನದೊಳ್
ಪೆತ್ತಳು ಕುಮಾರನಂ ಜಾತಕರ್ಮಾದಿ ವಿಭವೋತ್ಸವಂಗಳ್ ಬೆಳೆಯಲು ೩೮

ಬಲಿದ ತೇಜೋನ್ನತಿಯ ಶಿಶುವಾಗಲದರಿನಿಂ
ದೊಲಿದು ಲಸದುಲ್ಕಲಾಖ್ಯೆಯ ಪೆಸರನನುಗೈದು
ಸಲಹುತಿರಲೆರಡನೆಯ ಗರ್ಭದೊಳ್ ವತ್ಸನಾಮಕ ತನಯನಂ ಪಡೆದಳು
ಲಲನಾಶಿರೋರತ್ನಮೀಡೆಯೆಂಬೆರಡನೆಯ
ಕುಲಸತಿಗೆ ತನುಜರಿರ್ವರು ಜನಿಸಲಿಂತುಭಯ
ಜಲಜಾಕ್ಷಿಯರನು ಸಮಮಾಗಿ ಪರಿಪಾಲಿಸುತ ರಾಜ್ಯಭಾರದಲೆಸೆದನು ೩೯

---

೩೭ 1. ಕಿಂದೆ

ಮೆರೆವ ಸೌಭಾಗ್ಯ ವಿದ್ಯಾವಿತರಣಂಗಳೊಳ್
ಸರಿಯಿಲ್ಲವೆನಿಸಿ ಶೋಭಿಸುತಿರ್ದನಿತ್ತ ಕೇಳ್
ಸುರುಚೀಕುಮಾರನುತ್ತಮಭೂಪನೊಂದು ದಿನ ಮೃಗಯಾತ್ರೆಯನ್ನೆಳಸುತ
ಪರಿವಾರ ಬಲೆ ಬೇಂಟೆಕಾರ ಮುಖ ಸನ್ನಾಹ
ವೆರಸಿ ಮಿಗವಕ್ಕಿಗಳ ಸೋಹುತೊಳಬೊಗುತ ರವಿ
ಕಿರಣಗಳಿಗೆಡೆಗೊಡದ ಘೋರಾಟವಿಯ ಸಾರ್ದನೇನೆಂಬೆನಸದೆಸೆಯನು ೪೦

ಆ ಗಹ್ವರಕೆ ಯಕ್ಷಗಂಧರ್ವಕಿನ್ನರರ್
ಸೋಗೆಗಣ್ಣಬಲೆಯರ್ವೆರಸಿ ಸಂತಸ ಕೇಳಿ
ಗಾಗಿ ನಡೆತಂದು ವಿಹರಿಸುತಿರ್ದರಲ್ಲಿ ಸುರುಚೀ ಸುತನ ಸೇನೆಯೊದಗಿ
ಕೂಗಿ ಬೊಬ್ಬಿರಿದು ಮಿಗವಕ್ಕಿಗಳನಟ್ಟೆ ಪಟು
ವೇಗದಿಂದೊದಗಿ ಬರೆ ಯಕ್ಷ ಸತಿಯರ್ ಬೆದರಿ
ಪೋಗಿ ಯಕ್ಷರ್ಗೆ ದೂರಲ್ ಖತಿಯುನನುವಿಡಿದು ನಡೆತಂದರಿವರ ಮೇಲೆ ೪೧

ಕನಲಿ ಕೋಲ್‌ಗರೆವುತ್ತೈತಹ ಯಕ್ಷರಾಟೋಪ
ದನುವ ಮುಂಗೆಡಿಸಿ ಗರ್ಜಿಸಿ ನುಡಿದನೆಲವೊ ಸುಪ
ಜನಪದದ ಸೂಳೆಯರ ಪಿಂತೆ ತಾಳ ಮೃದಂಗ ತತ್ತಕಿಟ ನಾಟ್ಯಂಗಳ
ಘನತೆಯೊಳ್ ನಿಶಿತರೆಂಬುದನರಿವೆವೀಗೆಮ್ಮ
ಮೊನೆಗಣೆಯ ನಾಟ್ಯವರಸೆಯ ನೋಳ್ಪುದೆಂದು ಸಿಂ
ಜಿನಿಯೊಳಂಬಂ ತೊಡಚಿ ಕರೆದ ಶರ ವರ್ಷದೊಳ್ ನೆನೆಯದವರಿನಿಲ್ಲಿಸಲು ೪೨

ಮುತ್ತಿದುದು ಶರಜಾಲ ಯಕ್ಷರನಿದೆತ್ತಣ ವಿ
ಪತ್ತಡಸಿತೆಂದು ತಲ್ಲಣದಿ ಬಿಡುಮುಡಿಗಳಿಂ
ಪತ್ತಿತು ಪಲಾಯನವ ಯಕ್ಷಿಣಿಯರೊಡಲುಹೊಯ್ಲಿನ ಘೋಷಮೇರ್ಗ್ಗೊಳಲ್ಕೆ
ಪೊತ್ತ ರೌದ್ರದಲಿ ಖಡ್ಗವ ಸೆಳೆದು ಮೇಲ್ವಾಯ್ದು
ವಿತ್ತೇಶಸೇನೆಗಧಿನಾಯಕ ಸುಸೇನ ಮುಳಿ
ದುತ್ತಮನ ಮಸ್ತಕವನಿಳುಹಿ ನಿಜಬಲಸಹಿತ ಸರಿದನಳಕಾ ನಗರಿಗೆ ೪೩

ಸ್ವಚ್ಛತರವಾದ ಜೈವಾತೃಮಂಡಲವೆಂಬ
ಕೆಚ್ಚಲನ್ನಾಂತ ಮುಗಿಲೆಂಬ ಸುರಧೇನುವದು
ವಚ್ಚರೂಪಿನ ಚಕೋರಗಳಿಗಂ ಮೊಲೆಯೂಡಿ ಕರವೆಂಬ ಪಾಲ್ಲುಡಿಸಲು
ಉಚ್ಚಳಿಸಿ ಪರಿವ ಪಾಲವನಿದಿಗ್ವಳಿಗಳಂ
ಮುಚ್ಚಿದುದೆನಲ್ ಮೆರೆವ ಚಂದ್ರಿಕೆಯಲರಸನೆದೆ
ಬೆಚ್ಚಿದುದು ವಿರಹ ಸಂಭರಿತದಿಂ ಚಂದ್ರೋದಯದ ಮಹಾ ಮಹಿಮೆಯಿಂದೆ ೨೮

ಚಿಗಿಯೆ ಹಂಸಾಳಿ ಸಾಳಿಗಳ ಸಂದೋಹ ಮಿಗೆ
ಮುಗಿಯೆ ಕಂಜಗಳು ಜಗುಳಿದ ಕೈರವಕೆ ರಸ
ಬಿಗಿಯೆ ಮಿಥುನಾಖ್ಯ ಪಕ್ಕಿಗಳ ಮಿಥುನಗಳಡಗಿ ವಿರಹವಿಹ್ವಲತೆಯುಗಿಯೆ
ಬಗೆಯಲ್ ಚಕೋರ ಕೋರಿಕೆಗಳಾತುರತೆ ಹೆರೆ
ದೆಗೆಯೆ ನೀರಧಿಗಳವಧಿಗಳನುರೆ ಮಿರ್ದ್ದ ಪೆ
ಚ್ಚುಗೆಯಿಂದ ಪೊರೆಯೆ ಚಂದ್ರೋದಯವು ಚೆಲುವಾಂತುದಮಮ ವಿಟನಿಕರ
ನಲಿಯೆ ೨೯

ಶಂಕರನ ಮಕುಟಸ್ಥಿತಂಗೆ ದೋಷಾಕರ ಯ
ಶೋಂಕಿತಮೆವಿಮಲ ಸ್ವಭಾವಂಗೆ ಹೃದಯದಿ ಕ
ಳಂಕಮಾನಹಿಸುವುದೆ ಲಸದಮೃತರೂಪಂಗೆ ಕೃಶರೋಗವೆಡೆಗೊಂಬುದೇ
ಮುಂಕೊಂಬ ಶಾಂತರೂಪಂ ಬ್ರಹ್ಮವಸತಿಗಾ
ತಂಕಮನ್ನೂರುವನೆ ಚಿತ್ರಮಿದು ಮುನಿ ನೇಮ
ಮಂ ಕೆಡಿಪ ದೋಷಫಲಮಾಗದಿರದೆನಿಸಿರಲ್ ವಿಧುಬಿಂಬಮೇರ್ದುದಂದು ೩೦

ಮೈತ್ರಿಯಿಂ ಕುವಲಯವ ಪೊರೆವಂಗೆ ರಾಜತ್ವ
ಚಿತ್ರಮೇ ಮೃಗಧರಗೆ ಸೋಮತ್ವಮರಿದೇ ವಿ
ಚಿತ್ರ ಶಂತನು ಪಾಂಡುಕುಲಮೂಲಪುರುಷ ಶುಭ್ರಾಂಶುವಹುದಾಶ್ಚರ್ಯಮೇ
ಅತ್ರಿಋಷಿ ಜಾತಗೆ ಕಳಾನಿಧಿಯ ಪೆಸರದೇಂ
ಕೃತ್ರಿಮವೆ ವಿಷ್ಣುಪದಸೇವಿಗಂ ದ್ವಿಜರಾಜ
ವಾರ್ತೆಯೇನತಿಶಯಮೆ ಪೇಳೆಂದು ಪೊಗಳುತಿರ್ಪುವು ಚಕೋರಗಳೆನಿಸಿತು ೩೧

ನವಸುಧಾವಿಭವಂಗೆ ರಾಜತ್ವವೆಂತು ರತಿ
ಧವನ ಸಹಾಕಾರಿಯಂ ಸೋಮನೆನಲೇನು ತೋ
ರುವನಿಶಾಕಾಂತನಿವ ಶುಭ್ರಾಂಶುವಾರು ಜಡಜಂ ಕಳಾನಿಧಿಯಾವೊಲು
ನವೆದು ಪೆಚ್ಚುವ ಪಕ್ಷಯುತನಲಾ ದ್ವಿಜರಾಜ
ನಿವನಪ್ಪ ಪರಿಯೆಂತು ಸಾಕೆಂದಸೂಯದಿಂ
ದವೆ ಜರಿವ ಪರಿಯೆನಿಸಿ ಚಕ್ರವಾಕಗಳ ಕಳಕಳರವಗಳೆದೆದಿರ್ದವು ೩೨

ಸರಸಿಜಾರಾತಿ ಬಿಂಬೋದಯದ ಮಹಿಮೆಯಿಂ
ಶರಧಿಯುಕ್ಕುವುದೆಂಬುದನೃತ ಗಡ ಮುಂಬರಿವ
ವಿರಹದಿಂ ಯುವವಿಟರ್ಯುವತಿಯರ್ಗೀರ್ದ ಮನ್ಮಥಕದನದಲಸಿನಿಂದೆ
ಪರಿವ ವೈಬೆವರಿನಿಂದಂತು ರತಿಗಳ್ಗೆ ಮುಳಿ
ದೆರೆಯರಂ ನೆನೆದು ಹಂಬಲಿಪ ಜಾರೆಯರ ಕ
ಣ್ಣೊರತೆಗಳ ವಾರಿಯಿಂದಬ್ಧಿಯುಕ್ಕುವುದೆನಿಸೆ ಚಂದ್ರಿಕೆಯು
ಚೆಲುವಾಂತುದು ೩೩

ನುಂಗುನಂಗುತ ಮತ್ತೆ ಬಿಡುವಾ ವಿಧುಂತ ಸ
ರ್ಪಂಗೆ ಕಿವಿಕಾಲುಗಳ್ ಪೋಪುದಚ್ಚರಿಯೇ ತ
ದಂಗಕಳೆಗಳ ಪೀರ್ದು ಮತ್ತೀವ ವಿಬುಧರ್ಗೆ ನೆಟ್ಟಾಲಿ ಬೀಳದಿಹುದೇ
ಹಿಂಗದೆಯೆ ಸೂಡಿರುವ ಪುರಹರಗೆ ತಿರಿದುಂಬ
ಭಂಗವೆಡೆಬಿಡುವುದೇ ಸಾಕೆಂದು ಪತಿಗಳುಳಿ
ದಂಗನಾಳಿಯುರು ವಿರಹದಿ ಬಳಲುತಿರಲು ಚಂದ್ರೋದಯುವು ಬೆಡಗಾಂತುದು ೩೪

ಒಡಹುಟ್ಟಿದವಳೆನದೆ ವಸತಿಯಂ ಕಲಕುವಂ
ಕಡೆಯು ನಾರಿಯರಳಲನೆಣಿಸುವನೆ ಸಹಜದಿಂ
ದೊಡಲೊಳ್ ಕಳಂಕನುಂ ವಹಿಸಿದ ನಿಶಾಚಾರಿ ಭೂತಹಿತವುನ್ನರಿವನೇ
ಗಡಣಿಸದೆ ನಿಜಗುರುದ್ರೋಹಕಳುಕದ ಮತ್ತ
ಜಡಜಾತನಾರಿಗೇನುತ್ತಮನೆ ದಿನದಿನಕೆ
ಕೆಡಲಿ ತತ್ಕಳೆಗಳೆಂದರಸರುಳಿದಬಲೆಯರ್ ಶಪಿಸುತಿರಲೇರ್ದುದಂದು ೩೫

ಇಂತು ಚಂದ್ರೋದಯದ ಬಲುಹಿನಿಂದವೆ ತೆರಳಿ
ಕಂತು ನಿಜ ಚಾಪದೊಳಗೈದಂಬನುಗಿದು ಕ
ರ್ಣಾಂತವಾಗೆಳೆದೆಸೆಯಲಲರಳುಗಣೆಗಳ್ ನಾಂಟೆ ಜನಪನೆದೆ ಜರ್ಜರಿಸಲು
ಕಾಂತಾಮಣಿ ಭ್ರಮೀದೇವಿವೆಸರಾಂತ ನಿಜ
ಕಾಂತೆಯಂ ನೋಡಿ ಮೋಹಾವೇಶದಿಂದೆ ಭೂ
ಕಾಂತ ಮೇಲ್ವಾಯ್ದಡಾಳಿಯುರವಿದು ತೊಲದದವರ್ಸತಿಪತಿಗೆ ಸರಸಮುಮರೆ ೩೬

ಎಣಿಸಲಂಗಜಕಳಾ ಶಾಸ್ತ್ರಮತ '[ದಿಂಡೆ]' ದಶ
ಗುಣಮಧಿಕಮೆನಿಸಿ ಚುಂಬನ ತಕ್ಕೆ ಬಂಧಗಳ
ಬಣಿತೆಯಿಂ ಸಸಸವೆರಸಿನ ಸಾಮರಸ್ಯಕುಶಲೋಕ್ತಿಗಳ ರವಗಳಿಂದೆ
ಪ್ರಣುತ ಮೋಹನ ಲಲ್ಲೆಗಳ್ ಪ್ರಣಯಮುಳಿಸಿನು
ಲ್ಬಣತೆಯಿಂ ಸುರತಸಾಮ್ರಾಜ್ಯದೊಳ್ ರಾತ್ರಿಯಂ
ಕ್ಷಣಿಕಮಾಗಿಯೆ ಕಳೆದನೆರಡನೆಯ ಹರಿಸಿರಿಗಳೆನಿಸಿ ಸಾತ್ವಿಕತೆ ಮಿಗಲು ೩೭

ಚಿತ್ತಶುದ್ಧಿಯಲಿರ್ವರಿಂತು ರತಿಸೌಖ್ಯಸಂ
ಪತ್ತಿನಿಂದಾನಂದಿಸಿದ ಬಳಿಕಲುರುಪುಣ್ಯ
ಬಿತ್ತಂಕುರವನಾಂತ ತೆರನಂತೆ ತದ್ಭ್ರಮೀದೇವಿ ಗರ್ಭವನಾನಲು
ಒತ್ತಿ ಬರಲೊಂಬತ್ತು ತಿಂಗಳುಗಳಾಗ ಪಿರಿ
ದುತ್ತಮದ ತಿಥಿ ವಾರತಾರೆಶುಭಲಗ್ನದೊಳ್
ಪೆತ್ತಳು ಕುಮಾರನಂ ಜಾತಕರ್ಮಾದಿ ವಿಭವೋತ್ಸವಂಗಳ್ ಬೆಳೆಯಲು ೩೮

ಬಲಿದ ತೇಜೋನ್ನತಿಯ ಶಿಶುವಾಗಲದರಿನಿಂ
ದೊಲಿದು ಲಸದುಲ್ಕಲಾಖ್ಯೆಯ ಪೆಸರನನುಗೈದು
ಸಲಹುತಿರಲೆರಡನೆಯ ಗರ್ಭದೊಳ್ ವತ್ಸನಾಮಕ ತನಯನಂ ಪಡೆದಳು
ಲಲನಾಶಿರೋರತ್ನಮೀಡೆಯೆಂಬೆರಡನೆಯ
ಕುಲಸತಿಗೆ ತನುಜರಿರ್ವರು ಜನಿಸಲಿಂತುಭಯ
ಜಲಜಾಕ್ಷಿಯರನು ಸಮಮಾಗಿ ಪರಿಪಾಲಿಸುತ ರಾಜ್ಯಭಾರದಲೆಸೆದನು ೩೯

---

೩೭ 1. ಕಿಂದೆ

ಮೆರೆವ ಸೌಭಾಗ್ಯ ವಿದ್ಯಾವಿತರಣಂಗಳೊಳ್
ಸರಿಯಿಲ್ಲವೆನಿಸಿ ಶೋಭಿಸುತಿರ್ದನಿತ್ತ ಕೇಳ್
ಸುರುಚೀಕುಮಾರನುತ್ತಮಭೂಪನೊಂದು ದಿನ ಮೃಗಯಾತ್ರೆಯನ್ನೆಳಸುತ
ಪರಿವಾರ ಬಲೆ ಬೇಂಟೆಕಾರ ಮುಖ ಸನ್ನಾಹ
ವೆರಸಿ ಮಿಗವಕ್ಕಿಗಳ ಸೋಹುತೊಳಬೊಗುತ ರವಿ
ಕಿರಣಗಳಿಗೆಡೆಗೊಡದ ಘೋರಾಟವಿಯ ಸಾರ್ದನೇನೆಂಬೆನಸದೆಸೆಯನು ೪೦

ಆ ಗಹ್ವರಕೆ ಯಕ್ಷಗಂಧರ್ವಕಿನ್ನರರ್
ಸೋಗೆಗಣ್ಣ ಬಲೆಯರ್ವೆರಸಿ ಸಂತಸ ಕೇಳಿ
ಗಾಗಿ ನಡೆತಂದು ವಿಹರಿಸುತಿರ್ದರಲ್ಲಿ ಸುರುಚೀ ಸುತನ ಸೇನೆಯೊದಗಿ
ಕೂಗಿ ಬೊಬ್ಬಿರಿದು ಮಿಗವಕ್ಕಿಗಳನಟ್ಟೆ ಪಟು
ವೇಗದಿಂದೊದಗಿ ಬರೆ ಯಕ್ಷಸತಿಯರ್ ಬೆದರಿ
ಪೋಗಿ ಯಕ್ಷರ್ಗೆ ದೂರಲ್ ಖತಿಯುನನುವಿಡಿದು ನಡೆತಂದರಿವರ ಮೇಲೆ ೪೧

ಕನಲಿ ಕೋಲ್ಗರೆವುತೈತಹ ಯಕ್ಷರಾಟೋಪ
ದನುವ ಮುಂಗೆಡಿಸಿ ಗರ್ಜಿಸಿ ನುಡಿದನೆಲವೊ ಸುಪ
ಜನಪದದ ಸೂಳೆಯರ ಪಿಂತೆ ತಾಳ ಮೃದಂಗ ತತ್ತ ಕಿಟ ನಾಟ್ಯಂಗಳ
ಘನತೆಯೊಳ್ ನಿಶಿತರೆಂಬುದನರಿವೆವೀಗೆಮ್ಮ
ಮೊನೆಗಣೆಯ ನಾಟ್ಯವರಸೆಯ ನೋಳ್ಪುದೆಂದು ಸಿಂ
ಜಿನಿಯೊಳಂಬಂ ತೊಡಚಿ ಕರೆದ ಶರ ವರ್ಷದೊಳ್ ನೆನೆಯದವರಿನಿಲ್ಲಿಸಲು ೪೨

ಮುತ್ತಿದುದು ಶರಜಾಲ ಯಕ್ಷರನಿದೆತ್ತಣ ವಿ
ಪತ್ತಡಸಿತೆಂದು ತಲ್ಲಣದಿ ಬಿಡುಮುಡಿಗಳಿಂ
ಪತ್ತಿತು ಪಲಾಯನವ ಯಕ್ಷಿಣಿಯರೊಡಲುಹೊಯ್ಲಿನ ಘೋಷಮೋರ್ಗ್ಗೊಳಲ್ಕೆ
ಪೊತ್ತ ರೌದ್ರದಲಿ ಖಡ್ಗವ ಸೆಳೆದು ಮೇಲ್ವಾಯ್ದು
ವಿತ್ತೇಶಸೇನೆಗಧಿನಾಯಕ ಸುಸೇನ ಮುಳಿ
ದುತ್ತಮನ ಮಸ್ತಕವನಿಳುಹಿ ನಿಜಬಲಸಹಿತ ಸರಿದನಳಕಾ ನಗರಿಗೆ ೪೩

ಒಂದಿಗೆಯ ಸೇನೆ ಪರಿದೈತಂದು ಸುರುಚಿಗಂ
ಕಂದನಳಿವನ್ನರಿಪಲಾ ಸುದತಿ ಚಿತ್ತದೊಳ್
ನೊಂದು ಸುತಮೋಹದಿಂದೊರ್ವರುಂ ತಿಳಿಯದಂತಗ್ನಿಪ್ರವೇಶಮಾಡೆ
ಕಂದೆರವೆಯಿಂದದಂ ಧ್ರುವರಾಜ ಕೇಳ್ದು ಮನ
ದಂದುಗವನಾಂತು ಯಕ್ಷರ ಕುಲವ ಸಂಹರಿಸ
ಲೆಂದು ನಿಜಸಮರಸನ್ನಾಹದಿಂ ಪೊರಮಂಟನೆಂಟುದೆಸೆ ಕಳವಳಿಸಲು ೪೪

ಕರಸಿದಂ ಕದನರೇವಂತ ಕಟ್ಟಾಳ್ಗಳಂ
ಬರಿಸಿದಂ ಮನ್ನೆಯರ್ಗಳ ಮಂತ್ರಿಮುಖ್ಯರಂ
ತರಿಸಿದಂ ನಾನಾವಿಚಿತ್ರಶಸ್ತ್ರಂಗಳನ್ನತಿರಥ ಮಹಾರಥಿಕರಂ
ನೆರಸಿದಂ ಕುದುರೆ ಕಾಲಾಳು ಮದಗಜಗಳಂ
ಧರಿಸಿದಂ ತಾಂ ವಜ್ರ ಕವಚ ಸೀಸಕಗಳಂ
ಸ್ಮರಿಸಿದಂ ಚಿತ್ತದೊಳ್ ಹರಿಪದಾಬ್ಜಂಗಳನ್ನವಿರಳಾನಂದದಿಂದೆ ೪೫

ಕಡಲೇಳರೈಕ್ಯಮನ್ನೈದಿಸುವ ಕುಲಶೈಲ
ಪೊಡವಿಗಳ ಬೆಸುಗೆಯುಂ ಭಿನ್ನಿಸುವ ಮೆರೆವ ರಿಪು
ಗಡಣದೆದೆಗೆಚ್ಚುಗಳ ಕರಗಿಸುವ ಗಿರಿಗಿರಿಗಳಂ ತಾಕುನೂಕುಗೊಳಿಪ
ಜಡಿದು ವಿಶ್ವವನು ಮಾಟಾಡಿಸುವ ಮೊರೆವ ಬರ
ಸಿಡಿಲಬ್ಬರವ ಸೂಕಿ ಮುಂಬರಿವ ಧಂಧಳಿ
ರ್ವಡೆದ ರಣಭೇರಿಗಳ ಸನ್ನೆಯಿಂ ನೆರೆಮುದಾಹವನಿಪುಣ ಧೀರಭಟರು ೪೬

ಕೆಂಗಣ್ಣ ಕುಣಿವ ಮೀಸೆಯ ಮಿಡಿವ ಪುರ್ಬುಗಳ
ಮುಂಗೈಯಲೇರ್ದ ಹರಿಗೆಯಖಡ್ಗ ಝಳಪುಗಳ
ರಂಗೆಸೆವ ಸಬಳಭಲ್ಲೆಯುಪರಶುಶಕ್ತಿಗಳ ಮುಸಲ ಗದೆಡೊಂಕಣಿಗಳ
ಅಂಗ ಕವಚಂಗಳಮರಿದ ಸೀಸಕಾದಿಗಳ
ಲಂಗಿಸುವ ದಾಟುಮರಸೆಯ ಪದನ್ಯಾಸಗಳ
ಸಂಗರಾಸಂಪ ಸೌರಂಭದ ಪದಾತಿ ನೆರೆದುದು ಭೂಮಿಯುಬ್ಬದೆನಿಸಿ ೪೭

ಪವನನುರುಬೆಯ ವೋಟಧಾಟಿಯಿಂದರಿಗಳಂ
ತಿವಿದು ತೇಲ್ಗೊಂಬ ತಿರುಮುರುಹಿನಿಂ ಖುರಸನ್ನೆ
ಬುವಿಯನಂಟದ ದಾಟುಧುಮುಕಿನಿಂ ಪರರಿರಿತವಂ ತಟ್ಟುಬಡಿನಂತೆಯಾ
ಪವಣಿನಿಂ ಪೆಸರೇರ್ದ ರಾಹುತರ ತಂಡಗಳ್
ತವಕದಿಂದೈತಂದುದಶ್ವಗಳ ವೈಲಿಳಿವ
ಬೆವರಿನ ಸಮುದ್ರದೊಳ್ ತೋರ್ಪ ಶಂಖದ ಸರಿಗಳೆನಿಸುತಿರೆ ಬಾಯ್ನೊರೆಗಳು ೪೮

ವಾತಪಟದುಲುಹಿನಂತೆಡೆವರಿವ ಹೂಟಗಳ
ಕೇತು ಪಟ ಸುಪತಾಕೆಯುಮುರಿದೊಲೆದಾಟಗಳ
ಸೂತ ಜನಸನ್ನೆಯಿಂ ಸುಳಿಸುಳಿವ ಘೋಟಗಳ ಪೊಸ ಪೊನ್ನಕಲಶಂಗಳ
ಭೂತಳವ ಸೋಂಕದೆರಗುವ ಬಿರುಹಿನೋಟಗಳ
ಭೀತಿಯಂ ಬೀರ್ವ ರಥಿಕರ ಬಿರುಬುನೋಟಗಳ
ಲೀ ತೆರದ ರಥರಾಜಿಯೊದಗಿದವನೇಕಮೆನಲರಿಗಳೆದೆ ಜರ್ಝರಿಸಲು ೪೯

ಕಂಗೊಳಿಪ ಚೌಘಾಳಚಪ್ಪರದ ಸಾಲ್ಗಳೇ
ಶೃಂಗಮೆನಿಸಲು ಕರ್ಣಕುಹರಗಳೆ ಗುಹೆಗಳೆನೆ
ವಿಂಗಡಿಸಿ ತೋರ್ವಡಲ್ ಕುಂಭಸ್ಥಳಂಗಳೆಡೆ ಗುಂಡೆನಿಸಿ ತೋರುತಿರಲು
ಸಂಗಡಿಪ ಮದಧಾರೆಗಳ್ ಝುರಿಗಳೆನಿಸಿ ಸಾ
ರಂಗಗಳ ಸಾಲ್ಗಳೆಸೆದವು ವಜ್ರದಲೆಯಿರದ
ಜಂಗಮಾದ್ರಿಗಳ ಬಳಗಂಗಳೆನೆ ಪದಘಟ್ಟನದಲಿ ಭೂತಳಮದುರಲು ೫೦

ತುಡುಕಿ ಕಾಲಾಂತಕನ ಕದಲಿಸಲ್ ಮೃತ್ಯುವಂ
ಹೆಡಗುಡಿಯ ಕಟ್ಟಿ ಪಿಸೆದೆಳೆತರಲ್ ಭೈರವನ
ಕಡುಹನಣಗಿಸಿ ಕೋರೆಯಲುಗಿಸಲ್ ವೀರಭದ್ರನ ವಿಕ್ರಮವ ಕಲಕಲು
ಬಿಡುಗಣ್ಣರರಸನಂ ಭೇದಿಸಲ್ ಪುರಹರನ
ಕಿಡಿಗಣ್ಣಿಸುರಿಯನುರೆ ತಣ್ಣಿಸಲ್ ವಹಿಲದಿಂ
ಕೊಡು ವೀಳೆಯವನೆನುತ್ತಾರ್ಭಟಿಪ ವೀರಭಟರೈತಂದರಗಣಿತಮೆನೆ ೫೧

---

೫೧ 1. ತಂಬಿ

ಈ ರೀತಿಯಿಂ ನಡೆವ ಸೇನಾಸಮಗ್ರತೆಯ
ಭಾರಮನ್ನಾನಲಮ್ಮದೆ ಪಿತಾಮಹನಿಗಂ
ದೂರುಗೈಯಲ್ ಪೋಪುದವನಿಯಾಕಾಶಕೆನೆ ಕೆಂಧೂಳು ಮುಗಿಲೇರಲು
ಮೇರೆಯಿಲ್ಲದ ಪಟಹ ಭೇರಿ ನಿಸ್ಸಾಳ ಘೋಂ
ಕಾರೆರವಮೆರಗಿ ಶೇಷನ ಕಿವುಡುಗೊಳಿಸಿ ಹೊಗ
ರೇರಿ ದಿಗ್ಗಜಗಳ್ಗೆ ಮತ್ತತೆಯ ಬಲಿದು ಮೂಲೋಕಮಂ ಮೋಹಿಸಿದುದು ೫೨

ಪಡೆಯು ಪಟು ಭಾರದಿಂದಿಳೆ ಕುಸಿಯೆ ನಾಗಕುಲ
ದೊಡಲು ಕಡಿಗೊಂಡಿಳಿವ ರಕ್ತದಿಂ ಕೆಂಪೇರ್ದ
ಪೆಡೆಗಳಿಂ ಪಾತಾಳವಾಸಮನ್ನುಳಿದೂರ್ಧ್ವಲೋಕಮನ್ನೀ ಸೇನೆಯ
ತೊಡಕಿರದ ನಿರುಪಾಧಿಕಸ್ಥಾನಮಪ್ಪುದ
ಲ್ಲಡಗಿ ಜೀವಿಸಲೆಂದು ನಾಗಕುಲವೊಲಸೆಯಂ
ನಡೆದ ಪರಿಯೆನಿಸುತಿರೆ ದಂಡಾಯುಮಾನದಿಂ ಕೆಂಧೂಳು ಮುಗಿಲೇರ್ದುದು ೫೩

ಧರಣಿಯ ತಪಃಫಲದ ಮಹಿಮೆಯಿಂದವೆ ಸತ್ಯ
ಪುರುಷನಹ ಧ್ರುವನು ಭೂವರನಾದನದರಂತೆ
ಹರಿಯು ಬಲಗೊಂಡು ತನ್ನಲಿ ಮಂಡಲಾಧಿಪತಿಯಂ ಮಾಳ್ಪೆನೆಂಮ ಹುರುಡಿಂ
ನೆರೆ ಭಕ್ತಿಯಿಂ ಮುಗಿಲುವೆಣ್ಣು ಕಾವಿಯನುಟ್ಟು
ವರ ಪರಿವ್ರಾಜಿಕೆಯಳಾಗಿಯೆ ರಜೋಗುಣವ
ಪೊರವಡಿಸುತಿಪ್ಪದೇವತೆಯ ಭಜಿಪಂತೆ ಕೆಂಧೂಳ್ ಮುಗಿಲ ಮುಸುಕಿರ್ದುದು ೫೪

ಮಿತ್ರಮಂಡಲವನೀಕ್ಷಿಸುವೆನೆಂದೆನಲಾತ
ಪತ್ರರಾಜಿಯ ಮುಸುಕುದೆರಪಿಲ್ಲವಪ್ಪದಿ
ಗ್ಗೋತ್ರಬನತರುಗಳಂ ನೋಡಲೆನಲುನ್ನತವರೂಥಸಾ[1]ಲ್ಪಿಡತೆಯಿಲ್ಲ[1]
ಧಾತ್ರಿಯಂ ನೋಳ್ಪೆನೆನಲೆಲ್ಲಿಯುಂ ನಿಬಿಡ ಜನ
ಜಾತ್ರೆಯಿರಪೆಡಮಿಲ್ಲ ಪರಿವ ತೊರೆಕೆರೆಸರಿ
ತ್ಪಾತ್ರಗಳನರಿಯಬೆನಲೇಕದಿಂ ಧೂಳ್ಕವಿದು ಸಮತಳದ ನೆಲನೆನಿಸಿತು ೫೫

೫೫. 1. ಲ್ಮರೆಗಳೆಲ್ಲ.

ತುರಗ ಖುರಸರಬರ ಸ್ವನಗಳಿಂ ಪರಿವ ಪದ
ಚರರ ಕೋಲಾಹಲಸ್ವನಗಳಿಂ ಮೆರೆವ ಮುದ
ಕರಿಘಂಟೆ ಡಂಢಣಧ್ವನಿಗಳಿಂ ರಥಚಕ್ರಗರ್ಗರಾರವಗಳಿಂದೆ
ಮೊರೆವ ಭೇರಿಯ ದಂಧಳಿಗರ್ಗಳಿಂ ಕಹಳಾದಿ
ಯುರುಬೆ ತುತ್ತುರುರುಘೋಷಂಗಳಿಂ ಪಟಹ ಗ
ಗ್ಗರೆಯ ಜಂಝಣಝಣನಿನಸದಿಂ ದಿಗ್ವಳಿಯು ದಿವ್ಮಿಸಿದವೇವೇಳ್ವೆನು ೫೭

ತಿಳಿಯಲಿವು ಕಾಲ ಸರ್ಪನ ನಂಜುನಾಲಿಗೆಯು
ಸುಳಿವುಗಳೊ ರಣಭೈರವನ ಹೊನಲುದಾಡೆಗಳ
ಹೊಳಪುಗಳೊ ಮೃತ್ಯುವೆಂದೆಂಬ ಕೇಸರಿಯ ನಖಬೆಳವುಗಳೊ ರಿಪುವರ್ಗದ
ಅಳಿವಿನೌತಣಕೆ ಬಾಯ್ದೆರೆವ ಭೂತಗಳ ಪ
ಲ್ಬೆಳಿವುಗಳೊ ಮೆರೆವ ಡಾಕಿನಿಯ ಕುಡಿನೋಟ ಚಂ
ಚಳವುಗಳೊ ಪಟುಭಟರ ಖಡ್ಗಝಳಪುಗಳೊ ಬಗೆಗೊಳಲೆನಲ್
ತೋರ್ದುದಂದು ೫೭

ಸೂಡ್ಗಳಿಂ ಹೊಗತೆನೊಗತೆಗಳ ಲಾಘವದ ಸರಿ
ಜೋಡ್ಗಳಿಂ ಹಿಂಚುಮುಂಚುಗಳ ಹೊಳಪಿನ ಪಂಥ
ಪಾಡ್ಗಳಿಂ ನಿಖಿಲ ಶಸ್ತ್ರಾಸ್ತ್ರಗಳ ಸಾಧನೆಯ ಜಾಡ್ಗಳಿಂದರಿಭೂಪರ
ನಾಡ್ಗಳಿಂಗುರು ಭೀಕರವ ಬೀರ್ವ ಪಟುಭಟರ
ಬೀಡ್ಗಳಿಂಗಡಲಂತೆ ನಡೆದುದಹಿತರ ವಂಶ
ಗಾಡ್ಗಳಿಂಗಡರುವ ದವಾಗ್ನಿಯೋ ನಿಜ ವಿಕ್ರಮಾಗ್ನಿಯೋ ತಿಳಿಯದೆನಿಸಿ ೫೮

ಪೂಳದೊತ್ತೊತ್ತಿನಿಂ ನಡೆವ ಮನ್ನೆಯರ ಮಕು
ಟಾಳಿಯೊರಸೊರಸಿನಿಂದವನಿಗುದುರಿದ ರತ್ನ
ಧೂಳಿಯುಶ್ವಗಳ ಘೊತ್ಕಾರಪಟುಪವನನಿಂ ಮುಗಿಲೇರ್ವುದಲ್ಲದಿರಲು
ಆಳುಕುದುರೆಗಳ ಮೈ ಬೆವರೊರತೆಯುಹ ಜಲದೊ
ಳಾಳಿ ಕರ್ದಮರೂಪನಾಂತ ಧರೆಯಿಂದೆ ಕೆಂ
ಧೂಳಮನಲೆತ್ತಣದು ಪುಸಿಯೆಂಬ ತೆರನಾಗೆ ಪಡೆ ನಡೆದುದದ್ಭುತನೆನೆ ೫೯

ಛತ್ರಗಳ್ ಕೇತುಪಟಗಳ್ ಮುಗಿಪ ಧೂಳಿಗಳ್
ಮಿತ್ರಕಿರಣಗಳನಡ್ಡವಿಸಿ ಕತ್ತಲೆಗೊಳಿಸಿ
ಧಾತ್ರಿಗಂ ಸಂಧ್ಯಾಗಮಪ ತೋರಿ ಮನ್ನೆಯರ ಕೊರಳ ಬಿಲ್ಲೆಯ ಸರಗಳೇ
ಚಿತ್ರತರ ನಕ್ಷತ್ರಗಣದಂತೆ ತೋರಲ್ ಪ
ತತ್ರಿಗಳ್ ಪರಿವುತಿರೆ ಜನಮನಕೆ ತೋರ್ದುದೀ
ರಾತ್ರಿಯೊಳ್ ರವಿವೆಳಗದೆಲ್ಲಿ ಸೆಳೆಗತ್ತಿಗಳ ಬೆಳಗಾಗದಿರದೆನ್ನುತ ೬೦

ಪಟಹಭೇರಿಗಳ ತಮ್ಮಟಡಿಂಡಿಮೆಗಳ ಗು
ಮ್ಮಟಿಮೃದಂಗಗಳ ಜಾಗಟೆಯಾನಕಗಳ ಸಂ
ಘಟಿತಕಹಳೆಗಳ ಪಟು ಭಟರಾಲಿಕೆಗಳ ಲಟಕಟಿಪ ರಥಚಕ್ರಂಗಳ
ಕಟಕಮೊರಹುಗಳ ಗಜಘಟೆಯ ಘಂಟೆಗಳ ಪದ
ಕಟಕ ಝಣಝುಗಳ ವುಬ್ಬಟೆಯ ಢಕ್ಕೆಗಳ ಸೂ
ತ್ಕಟನಾದವೆರಗಿ ದಿಕ್ತಟವೊಡೆದು ಬ್ರಹ್ಮಾಂಡಘಟವುಳಿವುದರಿದೆನಿಸಿರೆ ೬೧

ಬಳಸಿದ ತುರಂಗಗಳ್ ಬೆಚ್ಚಿದ ಕುರಂಗಗಳ್
ಚಲಿಪ ಮದ ದಂತಿಗಳ್ ಚರದದ್ರಿಹಂತಿಗಳ್
ಬಲಿದ ರಥಸಾಲುಗಳ್ ಭುವಿಯ ವನಮಾಲೆಗಳ್ ದಿವ್ಯಳಿಯನಾವರಿಸಿದ
ಕಲಿಭಟರ ಕೆಚ್ಚುಗಳ್ ಕೆರಳ್ದ ಕಾಡ್ಗಿಚ್ಚುಗಳ್
ಒಲೆವ ಸು ಪತಾಕೆಗಳ್ ವ್ಯೋಮತರು ಶಾಖೆಗಳ್
ಸೆಳೆವ ಕರವಾಳಗಳ್ ಶತ್ರು ಗೋಣ್ಗಾಳಗಳ್ ಬಗೆಗೊಳಲ್ ಪೆರ್ಬಲದೊಳು ೬೨

ಘನಸರಕನಾಂತ ಪೆರ್ಗಾಲಿಗಳ ಸಾಲುಗಳ
ನಿನದವಾರದ ಕಲಭ ಗಂಟೆಗಳವೊಂಟೆಗಳ
ತನತನಗೆ ಪರಿವ ರಥರಾಜಿಗಳ ವಾಜಿಗಳ ಸವಚರರ ಪರುಠವಗಳ
ಮೊನೆಗಣೆಯಮರ್ದ ಸಿಂಗಾಡಿಗಳ ಮೋಡಿಗಳ
ಕನಕಮಣಿಬಂಧುರಾಂದೋಳಗಳ ಮಾಲೆಗಳ
ಕೊನೆಗಾಣಿಸದ ಪಡೆಯ ಪೊಗಹುಗಳ ಬಿರುಹುಗಳಲಾ ಸೇನೆ
ನಡೆದುದಂದು ೬೩

ಮುತ್ತಿ ಮೊರೆದಿಂತು ಪಡೆ ನಡೆವುತಿರೆ ಚೂಣಿಗ
ರ್ವಿತ್ತೇಶರಾಜ್ಯಮಂ ಸೂರೆವಿಡಿವನಿತರೊಳ್
ಬತ್ತಿದುವು ತಾವರೆಯ ಹಂತಿಗಳ್ ನೈದಿಲೆಗೆ ಮುಗುಳುನಗೆ ಮುಂದೋರಲು
ಎತ್ತ ನೋಡಿದಡತ್ತ ನಿಬಿಡಜನಸಮುಯವಾಗಿ
ಬಿತ್ತರದಿ ಮುಸುಕಿತೀ ಧ್ರುವಬಲವು ಸುರಗಿರಿಯ
ಸುತ್ತಲೆನಿತಿಹುದೊ ನೋಡುವೆನೆಂದು ತರಣಿ ಪಡುಗಡಲ ತಪ್ಪಲನೈದಿದನು ೬೪

ಬಂದ ಸನ್ಮಿತ್ರನನ್ನಿದಿರುಗೊಳಲಪರದಿ
ಕ್ಸುಂದರಿಯು ಕೆಂಬಟ್ಟೆಯನ್ನುಟ್ಟು ಹರ್ಷ ಮಿಗೆ
ಸಿಂಧೂರಮಂ ತಿಗುರಿ ವಿಕಚ ಕೈರವವೆಂಬ ಶಶಿಕಾಂತಹರಿವಾಣದಿ
ಒಂದಿಸಿದ ಕೇಸರಂಗಳ ಬೆಳಗುಗೈದು ಮಕ
ರಂದದೋಕುಳಿಯ ಪೂರವಿಸಿ ಕವಲಾರತಿಯ
ತಂದು ಬೆಳಗುವ ಪರಿಯಿದೆಂಬಂತೆ ಸಾಯಾಹ್ನ ಸಂಧ್ಯಾಗಮವು ತೋರ್ದುದು ೬೫

ಬಳಸಿದುವು ತಾರಕಿಗಳಭ್ರಮನ್ನಾಗಲು
ನ್ಮಳಿಸಿದವು ಕೋಕಗಳ್ ವಿರಹದಿಂದೆರಗಿ ಕಂ
ಗೊಳಿಸಿದವು ಕೌಶಿಕಗಳಲ್ಲಲ್ಲಿ ಪತಿಗಳುಳಿದಂಗನೆಯರೆದೆ ಭುಗಿಲೆನೆ
ಹಳಚಿದುವು ಮಾರನಂಬುಗಳು ಮುಂಬರಿದು ಕಳ
ವಳಿಸಿದವು ಕಾದಲರ್ಗಳ ಮನೋವೃತ್ತಿ ಹೆ
ಚ್ಚಳಿಸಿದವು ಜಾರೆಯರ ಹೃದಯಗಳ್ ರವಿಬಿಂಬವಸ್ತಮಿಸಲೀ
ಭುವಿಯೊಳು ೬೬

ಧರೆಗೆ ಮುಸುಕಿರ್ದ ದೋಷಾಳಿಯನ್ನೊರಸಿ ಶುಭ
ಕರ 1 ಬ್ರಹ್ಮ [1] ವಸತಿಗೇಳಿಗೆಯಿತ್ತು ಕಂಪನವ
ಪರಿದಾರಡಿಗಳನಾಂತವರ ಬಂಧನಗಳಂ ಬಿಡಿಸಿ ಪಂಕವ ಶೋಷಿಸಿ
ಎರವಿರದೆ ಸತತ ಹರಿಪದಸೇವೆಯೊಳ್ ಸಂದ
ವರಮಂಡಲಾಧೀಶನಸ್ತಮಿಸಲುಬ್ಬಸದಿ
ಮರುಗದೇ ದ್ವಿಜಕುಲಮೆನಲ್ ಚಕ್ರವಾಕಗಳ್ ಕಳಲಿದುವು ಕಡು
ವಿರಹದಿಂ ೬೭

---

೬೭ 1. ವಿಧಿಯ

ಧಾರಿಣಿಗೆ ಮಾರವಿಷಮೇರಿದಂತಾ ರಜನಿ
ಭಾರಿಸಲ್ ಚಾರುತರತಾರಕಿಗಳೋರಣಿಸೆ
ಭೂರಮಣನಾರೈವುತಾ ರಾತ್ರಿ ವಾರಿಧಿಯ ತೀರದೊಳ್ ಬೀಡುವಿಡಿಸಿ
ಭೋರಿಡುವ ಭೂರಿವಾದ್ಯಾರವಮೆ ಚೀರುತಿರೆ
ತೋರುವ ಗುಡಾರದ ಹಜಾರಮಂ ಸಾರಿ ಲ
ಕ್ಷೀರಮಣ ಮೂರುತಿಯ ಸಾರೆ ನೆನೆವುತ್ತಲುಬ್ಬೇರಿ ಕುಳ್ಳಿರ್ದನಂದು ೬೮

ಬಳಿಕ ಮಜ್ಜನಭೋಜನಾದ್ಯುಪಚಾರಮಂ
ತಳೆದು ತದನಂತರದಲಖಿಲ ಸಾಮಂತರಂ
ಕಳುಹಿ ತಂತಂನಿವಾಸಂಗಳ್ಗೆ ವರಹಂಸತೂಲಿಕಾ ಪರಿಯಂಕದಿ
ಕುಳಿತು ಕರ್ಪೂರವೀಳ್ಯಮಂ ಸವಿದು ಹೃತ್ಪದ್ಮ
ನಿಳಯದೊಳ್ ಶೇಷಗಿರಿ ವೆಂಕಟೇಶ್ವರನಂತೆ
ಬೆಳಗುತಿಹ ಕೌಂಡಿಣ್ಯ ಗುರುವರನ ಭಾವಿಸುತ ನಿದ್ರಾರತಿಯನಾಂತನು ೬೯

ಅಂತು ಅಧ್ಯಾಯ ೧೪ಕ್ಕಂ ಪದನು ೧೧೯೬ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ

೧೫. ಧ್ರುವರಾಯನು ಕುಬೇರನನ್ನು ಗೆದ್ದದ್ದು

ಸೂಚನೆ:

ಮುಂಬಿನೊಳ್ ಯಕ್ಷರನ್ನಳವಳಿಸಿ ಕಳನೊಳ್ ತ್ರಿ
ಯಂಬಕಾಪ್ತನ ಜಯಿಸಿ ಪೆಸರ್ವಡೆದ ನಿಜಕೀರ್ತಿ
ಯಂ ಬೀರ್ದು ಮನುವಿನಾಜ್ಞೆಯನಾಂತು ತದ್ಧ್ರುವಂ
ತೆರಳಿದಂ ನಿಜನಗರಿಗೆ

ಇಂದುಕುಲದರಸ ಕೇಳಾ ಧ್ರುವಂ ಸುಖನಿದ್ರೆ
ಯಿಂದಿರ್ದನನಿತರೊಳ್ ವೀರರೇಳ್ವುದು ಸಮರ
ಕೆಂದು ಸಾರುವ ತೆರದಿ ತಾಮ್ರಚೂಡಂಗಳೆದ್ದುಬ್ಬಿನಿಂ ಸ್ವರಗೈಯಲು
ಪೊಂಡೇರ್ಗಳಾನೆ ಕುದುರೆಗಳು ಹಲ್ಲಣಿಸಿ ಬರ
ಲೆಂದುಸುರುವಂತೆ ಪತ್ರಿಗಳ ಕಲಕಲಮೆಸೆಯ
ಲಂದು ಮೂಡಲು ಕೆಂಪು ತೋರಿದುದು ಮುಂದಪ್ಪ ರಣಭೂಮಿ
ಸೂಚಕಮೆನೆ ೧

ಬಿಗಿದ ಕತ್ತಲೆಯೊಡ್ಡನಿರಿವುತ್ತ ಬಾಗಿಲಂ
ಮುಗಿದಬ್ಜಗಳಿಗಭಯಮೀವುತ್ತ ಕೋಕಂಗ
ಳಗಲಿಕೆಯ ಜತೆಗಳಂ ಬೆಸೆವುತ್ತ ಹಂಸಗಣ ಸಂತಸವನೇರ್ಗೊಳಿಸುತ
ನಗುತಿರ್ದಕುಮುದಗಳ ಕಳಲಿಸುತ ಕೌಶಿಕಗ
ಳೊಗುಮಿಗೆಯ ದೃಷ್ಟಿಗಳ ಬಂಧಿಸುತ ಬಾಲ ಕಿರ
ಣಗಳವನಿಯಂ ಮುಸುಕಲಡರಿದಂ ದಿನನಾಥನುದಯಾದ್ರಿಮಸ್ತಕವನು ೨

ಸೃಷ್ಟಿಯೊಳಗುಳ್ಳಖಿಲ ಜೀವರಿಂಗೇಕಸಹ
ದೃಷ್ಟಿರೂಪಂ ಕರ್ಮಸಾಕ್ಷಿಕಂ ಹರಿಹರ
ಸ್ರಷ್ಟಸ್ವರೂಪನುದಯಸಲರಳಿದವು ನೇತ್ರಕಮಲಗಳ್ ಧ್ರುವನಿಗಾಗ
ದೃಷ್ಟಿಸುತ್ತಂಗೈಯ ಮೈಮುರಿದು ವಿಮಲ ಪರ
ಮೇಷ್ಟಿಪಿತನಂ ನೆನೆದು ನಿತ್ಯದಾನಾದಿಯಿಂ
ತುಷ್ಟಿಯಂ ವಿಭುದರಿಂಗನುಗೈದು ಹರಿಪೂಜೆಯಿಂದೆ ಪರಿಶೋಭಿಸಿದನು ೩

ಮತ್ತೆ ಷಡ್ರಸ ಭೋಜನಂಗಳಿಂ ಪೊರೆದ ಬಳಿ
ಕೆತ್ತಲುಂ ರಣಭೇರಿಗಳ್ ಮೊಳಗಲವನಿಯಂ
ಮುತ್ತಿದುದು ಚತುರಂಗಮಾಗ ಕಲಿಭಟರ ಕೋಲಾಹಲ ಧ್ವನಿ ಮಸಗಲು
ಎತ್ತಿ ಬಹ ಕೇತುಪಟಗಳ ಲಂಬಿಸಿದ ಸಾಲು
ಸತ್ತಿಗೆಗಳಿಂ ಮುಸುಕುಗಳೆದು ಚಿಮ್ಮುವ ಬಿಚ್ಚು
ಗತ್ತಿಗಳ ರಾಹುತರ್ಪರಿಸಿದರ್ತೇಜಿಗಳನೆಂಟುದೆಸೆ ಕಳವಳಿಸಲು ೪

ತೋರುತೋರೆಲ್ಲಿನಮ್ಮುತ್ತಮ ನೃಪಾಲನಂ
ಚೋರತನದಿಂದಿರಿದ ಯಕ್ಷರನ್ನವರಸುವ
ಹೀರಿ ತನಿರಕ್ತಮಂ ಭೂತನಿವಹಕೆ ಚೆಲ್ಲಿ ನಿಡುದೊಂಡೆಗರುಳನುಗಿದು
ಮಾರಿಗುಣಬಡಿಸಿ ತನ್ಮಾಂಸಮಂ ಕಡಿಕಡಿದು
ಭೂರಿ ಜಂಬುಕ ಗೃಧ್ರ ವಾಯಸಾದಿಗಳಿಗೊಲಿ
ದೂರೌತಣವನೆಸಗಿ ಸಂಟುತನಮಂ ಬಳಸದಿಹೆವೆ ತೋರೆನುತಿರ್ದರು ೫

ಕ್ಷೋಣಿಯುನ್ನಾವರಿಸಿ ನಡೆವ ಪೆರ್ಬಲಗಳೊಳ್
ಚೂಣಿಗರ್ಮುಂಬರಿದು ವಿತ್ತಪತಿಯುದ್ಯಾನ
ತಾಣಂಗಳನ್ನೊರಸಿ ತೋಟಗಾವಲ ಭೃತ್ಯರಡ್ಡವಿಸಲವರನೆರಗಿ
ಗೋಣುಗಳನುತ್ತರಿಸಿ ಯಕ್ಷಕಿನ್ನರರ ನಿಜ
ರಾಣಿವಾಸಂಗಳಂ ಸೆರೆವಿಡಿ [1][ಯೆಯ][1] ಕ್ಷಗಣ
ನಾಣುಗೆಟ್ಟೋಡಿ ಪಟುಭೀತಿಯಿಂ ದೂರಿದರ್ಧನನಾಥಗೀ ಹವನನು ೬

ಬಡಗಲಾಳಿದನೆ ಮೊರೆಯನ್ನಾಲಿಸೈ ಧ್ರುವನ
ಪಡೆಯ ವಿಕ್ರಮವೆಂಬ ದಾವಪಾವಕ ಮುಸುಕಿ
ನಡವಿಯಾದುದು ನಿಮ್ಮ ರಾಜ್ಯಸಿರಿ ಗಂಧರ್ವ ಯಕ್ಷ ಕಿನ್ನರವಳಗದ
ಮಡದಿಯರ್ಸೂರೆಯೋದರ್ಮೇಲು ಕಾರ್ಯಮ
ನ್ನೊಡೆಯ ನೀನರಿವೆಯೆನಲಾಲಿಸುತ ಕಂಗಳೊಳ್
ಕಿಡಿಯುದುರೆ ಪಲ್ಮೊರೆದು ರೋಷಭೀಷಣತೆಯಿಂ ಧನನಾಥನಿಂತೆಂದನು ೭

---

೬ 1. ಡೆಕ್ಷ. ರಕ್ಷ

ಅರರೆ ಚಿತ್ರವ ಕೇಳ್ದೆವಿಂದಿನಲಿ ವಿಷ್ಣುರಥ
ನರಮನೆಯ ಬೀಯಗವನೆಳಸಿ ಸುಸಿಪಾವುಗಳ
ಮರಿಗಳೈತಂದುದಂ ಮೂರವಸ್ಥೆಯಲಾಳಿ ಜನನಮರಣಾರ್ಣವಗಳ
ತೆರೆಬೊಯ್ಲಿನಿಂದಲಳವಳಿದು ಮುಗ್ಗುವ ದೀನ
ನರರೆಮ್ಮ ತೋಟಿಯುಂ ಬಯಸಿದರೆ ಲೇಸೆಂದು
ಮೊರೆವ ರಣದುಂದುಭಿಗಳಬ್ಬರದಿ ಪೊರವಂಟನಾ ಧನಪ ಸೇನೆಸಹಿತ ೮

ಗಂಧರ್ವ ಯಕ್ಷ ಕಿನ್ನರ ಗುಹ್ಯಕಾದಿಗಳ
ಸಂದಣಿಯ ಮೊರಹಿನಾರ್ಭಟದಿಂದಲೈದುವ
ರ್ಥೇಂದುಧರಮಿತ್ರನಿಂಗೆರಗಿ ಬಿನ್ನವಿಸಿದಂ ಚಿತ್ರರಥನುಬ್ಬಿನಿಂದೆ
ಇಂದುದಿಸಿದೆಳೆಲತೆಯನರಿಯಲ್ಕೆ ಕುಲಿಶ ಬೇ
ಕೆಂಡೆಡಪಹಾಸಮೆನಿಸದೆ ಜೀಯ ಪುಲು ನರರ
ಮುಂಪುಗೆಡಿಸಲ್ಕೆ ನೀನೈದಲೇಕೆನಗನುಜ್ಞೆಯನಿತ್ತು ಕಳುಹೆಂದನು ೯

ಚಿತ್ರರಥ ಕೇಳು ಹರಿಯೊಲ್ಮೆಯುನ್ನತಿಯು ಮನು
ಪೌತ್ರನಿಂಗೆರಗಿಹುದು ನಿಖಿಲರಂದದಿ ಮನುಜ
ಮಾತ್ರದವನೆನ್ನದಿರು ನಿನ್ನುಪಮೆಗಳ್ ಮೆರೆಯುವವನ ರಣರಂಗಕೆನಲು
ರಾತ್ರಿ ರವಿಯುಂ ಗೆಲ್ವುದೆಂದು ಮಿತಿಗೈಯುವ ವಿ
ಚಿತ್ರಮಂತಿರಲಿ ಕಳುಹೆನ್ನ ನಿನ್ನಾಜ್ಞೆಯುಹ
ಸೂತ್ರದಿಂ ಧ್ರುವನ ಬಿಗಿದೆಳೆದೊಪ್ಪಿಸದೆ ಮಾಣ್ದಡೆನ್ನ ಪೆಸರೇಕೆಂದನು ೧೦

ಎನಲು ನಿಶ್ಚಯಮೆಂದು ಮುಂಬಳಿವಂ ಧನಪನಿ
ತ್ತನಲನನ್ನಳ್ಳಿರಿವ ಯಕ್ಷಗಣ ಸಾಯಕದ
ಹೊನಲಿನಿಂ ಹೊಗೆ ಮುಸಗೆ ಗಜಘಟೆಯ ಘಟ್ಟನೆಯಲವನಿಯೊಲೆದಾಡುತಿರಲು
ಮೊನೆಗಣೆಗಳಂ ಕರೆದು ತೋರು ತೋರೆಲ್ಲಿ ಬಡ
ಮನುಜಕೀಟಗಳನೆಂದಬ್ಬರಿಸಿ ಪಲ್ಮೊರೆದು
ಕನಲಿ ಕರವಾಳಗಳ ಚಿಮ್ಮುತಲಿ ಚಿತ್ರರಥ[1]ಸನ್ನೆ[1]ಯಿಂದೈತಂದುದು ೧೧

೧೧. 1 ಸೇನೆಯಿಂತೈ

ಒತ್ತಿ ಬಹ ಯಕ್ಷರುರುಬಂ ನಿಲಿಸಿ ಚೂಣಿಯೊಳ್
ಮುತ್ತಿ ತದ್ಧ್ರುವ ಭಟರ್ಪರಶು ತೋಮರ ಕುಂತ
ಮೆತ್ತಿದ ಗದಾಸಿ ಡೊಂಕಣಿ ಖಡ್ಗ ಮುಸಲಾದಿ ವಿವಿಧಾಯುಧಂಗಳಿಂದೆ
ಹತ್ತಾಹತಿಯಬೊದಗಿ ತೊಡರಿ ರಿಪುವೀರರ
ನ್ನೊತ್ತರಿಸಿ ತೊಂತು ತೊಡಕಿನ ಯುದ್ಧವರಸೆಗಳ
ಭಿತ್ತಿಯಿಂ ಪರಬಲಕೆ ಭೀಕರವ ಬಿತ್ತಿದರ್ಮುಂಬರಿದು ಕೊಳುಗುಳದೊಳು ೧೨

ಪೆಚ್ಚಿದರ್ ಪಾಡುಪಂಥಗಳಿಂದಲೆದೆಗಳ್ಗೆ
ಚುಚ್ಚಿದರ್ ಸಬಳಮನ್ನೆಸೆವ ಚಕ್ರಂಗಳಿಂ
ಕೊಚ್ಚಿದರ್ ಗೋಣುಗಳ ಸುರಗಿಯಿಂದವಯವಂಗಳ ಕೊರೆದು ಕೋಲ್ಗಳಿಂದೆ
ಮುಚ್ಚಿದರ್ ವಪುಗಳಂ ಭಲ್ಲೆಯಂಗಳಲಿರಿದು
ಬಿಚ್ಚಿದರ್ ತನಿಗರುಳನಾಗ ಧ್ರುವಭಟರದಕೆ
ಬೆಚ್ಚದಿರಿದಾಡಿದರ್ ಗಂಧರ್ವಯಕ್ಷಗಣದೆದೆಗೆದೆಗಳನ್ನಮರ್ಚಿ ೧೩

ಬಿಲ್ಗಡಿಯೆ ಹಲಗೆ ಖಡ್ಗದಲೆರಗಿ ಖಡ್ಗಮಂ
ಕೂಲ್ಗಡಿಯೆ ಮುಷ್ಟಿಯಿಂದವೆ ತೊಡಗಿ ಮುಷ್ಟಿಯಂ
ಬೀಳ್ಗಡಿಯೆ ಮೊಂಡುದೋಳ್ಗಳಲೊದಗಿ ತೋಳ್ಗಡಿಯೆ ಕಾಲ್ಗಳಿಂದೊದೆದುಕೆಡಹಿ
ಕಾಲ್ಗಡಿಯೆ ಮೈಬೊರಳಿನಿಂದೊರಸಿ ಮೈಯು ಮ
ಗ್ಗಿಲ್ಗಡಿಯೆ ಪಲ್ಗಳಿಂ ಚಪ್ಪರಿಸಿ ಪಲ್ಲಿರು
ಸಾಲ್ಗಳುಮುರಿದೊಡೆ ಮೊರೆದಬ್ಬರಿಸಿ ಕಾದಿದರ್ಕಿನ್ನರ ಮಹಾವೀರರು ೧೪

ಮುರಿದು ಕೆಡೆದಿರ್ಪ ತೇರ್ಬಂಡಿಗಳನಳವಿಯೊಳ್
ಕೊರಳು ಕಳಚಿದು ಬಿದ್ದ ಮುಂಡಗಳನಸ್ತ್ರದಿಂ
ಕೊರೆದು ಹರಹಿದ ಕೈದುತುಂಡುಗಳನುತ್ತರಿಸಲುರುಳಿದ ಕಪಾಲಂಗಳ
ತರಿದ ಕರುಳಸ್ಥಿನರಖಂಡಗಳನುರೆ ಕಡಿದು
ಪೊರಳುತಿಹ ಕೈಕಾಲು ಮುಂಡಗಳನೆತ್ತೆತ್ತಿ
ಕರಗಳಿಂ ಬೀರ್ದು ಪರಬಲವ ನೆಗ್ಗೊತ್ತಿದರ್ಕಿಂಪುರುಷ ಕಲಿವೀರರು ೧೫

ತೆಗಸಿದರ್ ಪರರೊಡ್ಡನಿರಿದು ನೀರ್ಕೊಳಗಳಂ
ಪುಗಿಸಿದರ್ [1]ಪಟು[1]ಭಟರ ಪುತ್ತುವನಡರ್ಚಿ ಪು
ಲ್ಲಗಿಸಿದರ್ ಬಾಯೊಳಗೆ ಕಡಿದು ಕಾಲಾಳುಗಳ್ ವೀರರಾಹುತರುಮುಸಗಿ
ಒಗಿಸಿದರ್ ತಸಿಮಿಮುಳ ಗಜಮಸ್ತಕಂಗಳೊಳ್
ಸುಗಿಸಿದರ್ ಕೂರ್ಗಣೆಯನತಿರಥರ್ ಯಕ್ಷರ್ಗೆ
ಮುಗಿಸಿದರ್ ಪರಬಲವನುತ್ತಾಸಪಾದಜನ ಚಮುರಂಗಮುರಿದೆನಿಸಲು ೧೬

ಪರಿದ ಕೈಕಾಲೊಡೆದ ಕಾಯಗಳ ಗಾಯಗಳ
ಲೊರೆವ ತನಿಕೆನ್ನೀರ ಧಾರೆಗಳ ಘೋರಗಳ
ಲಿರದೆ ಜೋಲುವ ದೊಂಡೆಗರುಳುಗಳ ಕುರುಳುಗಳ ಕೆದರುಬೊದರಿನ ತಲೆಗಳ
ಹರಿದ ಕಿವಿ ಮೂಗು ಭುಜ ಪಕ್ಕೆಗಳ ಡೊಕ್ಕೆಗಳ
ಲೆರಗಿ ನಾಂಟಿರುವ ವಿವಿಧಾಸ್ತ್ರಗಳ ಶಸ್ತ್ರಗಳ
ಪರಿಘಾತದುರುಬೆಯಿಂದೆಡೆಗೆಟ್ಟು ಪುಡಿಪಟ್ಟುದೆಕ್ಷಗಣ ಮಾಕ್ಷಣದೊಳು ೧೭

ಐಸಲೇ ಸಾಕುಬ್ಬುಗೊಬ್ಬಿನಿಂದೀ ನರರ
ಜೈಸಲೆನಿತೇದಹಂಕಾರದಿಂದೈತಂದು
ಪೊಯ್ಸಿ ರಿಪುಖಡ್ಗಗಳಿಗೆಮ್ಮನಾಹುತಿಯಿತ್ತು ಯಕ್ಷಕಿನ್ನರ ಗೋಣ್ಗಳ
ಕೊಯ್ಸಿ ಕುಲಗಡುಕನೆನಿಸಿದ ಚಿತ್ರರಥನ ಕರೆ
ವ್ಯೆಯ್ಸಿರಿಯ ನೋಡಹೇಳಿಲ್ಲಿ ಪುಲುಮನುಜರಂ
ಜೈಸಹೇಳೀಗಲೆಂದೆನುತ ಯಕ್ಷರ ಪಲಾಯನವ ಪಲ್ಲವಿಸಿತಂದು ೧೮

ಜೋಲ್ವ ಕೇಶಂಗಳಿಂ [1]ಕಿಡಿ[1]ಯೊಡೆದ ಮೆಯ್ಗಳಿಂ
ಚೆಲ್ವ ರಕ್ತಂಗಳಿಂ ಕಡಿದ ಕೊರಳೆಳೆವ ಕೈ
ಕಾಲ್ವಿಕಾರಂಗಳಿಂ ತೇಲುಮೇಲ್ಗಣ್ಗಳಿಂದರೆದೆರೆದ ಬಾಯ್ಗಳಿಂದೆ
ಸೊಲ್ವ ತಬ್ಬಿಬ್ಬುನುಡಿ ಕಡೆವಾಯ್ಗಳಿಂದಿಳಿವ
ಜೊಲ್ಲಿನೋದಂಗಳಿಂ ಯಕ್ಷಗಣಮುಳವಳಿದು
ಜೆಲ್ವರಿದುದೆಂಟುದೆಸೆಗಿದೊ ನರರ್ಬಂದರಿದೊ ಬಂದರೆನೆ ಭೀಕರದೊಳು ೧೯

---

೧೬. 1 ಪ್ರತಿ. ೧೯. 1. ಕಿಡೆ

ಬಲ ಬಲಮುಡುಂಗಿ ಕಳವಳದಿ ಕಾಲ್ದೆಗೆವುದಂ
ಕಲಿಕಲಿಗಳೆದೆಯಾರಿ ಕೈಮರೆದು ಬೀಳ್ವುದಂ
ತಲೆತಲೆಗಳನ್ನರಿಭಟರ್ತರಿದು ಪುಟಚೆಂಡನಾಡಿ ಮೊರೆದಬ್ಬರಿಪುದಂ
ಮುಲಿಮುಲಿವ ಮನ್ನೆಯರ್ಮೂರ್ಛೆಯಿಂ ಕೆಡೆವುದಂ
ತೊಲತೊಲಗದರಿವೀರರೊದಗೊದಗಿ ಪೊಯ್ಯುದ
ನ್ನೊಲಿದೊಲೆದು ಚಿತ್ರರಥನೀಕ್ಷಿಸುತ ರೋಷಭೀಷಣತಯಿಂ ಮೊರೆದೆದ್ದನು ೨೦

ಭುಜವನಪ್ಪಳಿಸಿ ಮುಂದೌಡುಗಚ್ಚುತ ಕೆದರಿ
ನಿಜಧನುವ ಸೆಳೆದು ತಿರುವಂ ತೊಡಚಿ ತವಕದಿಂ
ಗಜಬಜಿಸಿ ಪುರ್ಬುಗಳ್ ಗಂಟಿಕ್ಕಿ ಕಣ್ಣುಗಳ್ ಕಡಿ ಕುಡಿಮೀಸೆ ಕುಣಿಯೆ
ವಿಜಯ ರಣಭೈರವನ ವೇಗದಿಂದೊದಗಿ ಫಡ
ನುಜುಗುನರರೆಲ್ಲಿ ತೋರುತ್ತಾನಪಾದಜನ
ನಜನು ಬೆಂಗೊಂಡಡುಂ ಬಿಡುವೆನೇ ಸಾಕೆಂದು ಕೋಲ್ಗರೆವುತ್ತೈತಂದನು ೨೧

ಎಲ್ಲಿಯುಂ ಚಿತ್ರರಥನಸ್ತ್ರಗಳ್ ಮುಸುಕಿ ರಣ
ಮಲ್ಲರಂ ಮುಂಗೆಡಿಸಿ ಬಳಲಿಸಲ್ ಧ್ರುವಸೇನೆ
ಚೆಲ್ಲಿದುದು ನಾಲ್ದೆಸೆಗೆ ಯಕ್ಷನ್ನೇಕೆ ಕೆಣಕಿದರೆಂದು ಹಂಬಲಿಸುತ
ನಿಲ್ಲು ಹೋ ಪರಿಯದಿರಿ ಭಯವನಣಗಿಪೆನೆನಿಸಿತು
ತಲ್ಲಣಮದೇಕೆ ತಾನಿರಲೆಂದು ಕೈ ನೆಗಹು
ತೆಲ್ಲರಂ ಸಂತೈಸಿ ಬಣ್ಣಗೋಲ್ಗರೆವುತಿದಿರೇರ್ದನಾಧ್ರುವನರಿದೆನೆ ೨೨

ಸಂದಿರದೆ ಕವಿದಿರ್ದ ಚಿತ್ರರಥನಂಬುಗಳ
ದುಂದುಗವ ಪರಿಸಿ ಮುಗುಳೆಚ್ಚನಾ ಧ್ರುವನದಂ
ಗಂಧರ್ವನಾಥನೆಡೆಮಾರ್ಗದೊಳ್ ಕತ್ತರಿಸಿ ಮುಗುಳಸ್ತ್ರವಂ ಬೀರಲು
ಕುಂದಿರದೆ ಕುಂಭಜನ ತೆರದಿ ಬಾಣಾಂಬುಧಿಯ
ನೊಂದುನಿಮಿಷಕೆ ಪೀರ್ದು ಮತ್ತೆಸೆಯಲವನೊರಸು
ತೊಂದಕಿನ್ಮಡಿಯಾಗಿ ಚಿತ್ರರಥನೇರಿಸಿದನಮುಗರಣ ಪೊರೆದುಬ್ಬಲು ೨೩

ತಡೆಗಡಿವನೀ ತೆರದಿ ಚಿತ್ರರಥನಂಬುಗಳ
ನೆಡೆಮಾರ್ಗದೊಳ್ ಧ್ರುವಂ ಧ್ರುವನೆಸುವ ಕಣೆಗಳಂ
ಕಡಿದು ಕೆಡಪುವನಂತು ಮಧ್ಯದೊಳ್ ಚಿತ್ರರಥನೀ ತೆರದಿ ಕತ್ತರಿಸಿದ
ಕಡಿಗಳದ್ರಿಯ ತೆರದಿ ಮರೆಯಾದಡಲ್ಲಿಂದೆ
ಕಡೆದೊಲಗಿ ಕಾದುತವು ಮತ್ತೆ ಮರೆಯಾಗೆ ಜೇ
ರೆಡೆಗೈದಿ ಪೊಣರುತವು ಬರಬರಲ್ ರಣಭೂಮಿ ಬಾಣಾದ್ರಿಮಯಮೆನಿಸಿತು ೨೪

ಇಂತಿರ್ಪರಳವಿ ಸಮವಾಗಿ ಬರಲಾಗ ಕಾ
ಲಾಂತಕನ ಕಾಹುರವನಂಗವಿಸಿ ತದ್ಧ್ರುವಂ
ನಿಂತು ಲಸದರ್ಧಚಂದ್ರಾಕೃತಿಯ ನಾರಾಚಮಂ ಕಾರ್ಮುಕದಲನುರ್ಚಿ
ಮುಂತಳೆದು ಬಿಡಲು ಮೊರೆದೆರಗಿ ಗಂಧರ್ವಪತಿ
ಯಾಂತಿರ್ದ ಜೋಡು ಸೀಸಕ ಕವಚ ರಥ ಧನುಗ
ಳಂ ತರಿದುದುಳ್ಳಲಾಶ್ಚರ್ಯದಿಂ ಕಳನೊಳ್ ವಿರಥನಾಗಿ ನಿಂದನಂದು ೨೫

ಮತ್ತೆ ಪಡಿರಥವ ಮಾರ್ಧನುವ ಕೊಳುವನಿತರೊಳ್
ಕತ್ತರಿಸಿ ನೆಲಕೆ ಕೆಡಹುತಲಿಂತು ಮಿತಿಗೊಳಲ್
ಪತ್ತುಸೂರ್ ತೇರುಗಳನಿಕ್ಕಡಿಸಲಾಶ್ಚರ್ಯದಿಂದೆ ಜವಗುಂದಿ ಬಳಿಕ
ವಿತ್ತೇಶ ಮುನ್ನ ತನಗೊರೆದುದಂ ನೆನೆದು ನರ
ವೃತ್ತಿಯುವನಿಪನಲ್ಲ ಸಹಜಮಿದ ಪರಿಕಿಸದೆ
ಬಿತ್ತರಿಸಿದೆವು ವೃಥಾಡಂಬರವನೆಂದು ತನ್ನೊಳಗೆ ತಾ ಲಜ್ಜಿಸಿದನು ೨೬

ನಿಂದು ನಿರ್ವಿಣ್ಣತೆಯುಲಮರಿರ್ದ ರಿಪುವೀರ
ನಂದಮಂ ನೋಡಿ ಕೈತಡೆದು ನುಡಿಸಿದನರರೆ
ಮುಂದನುತಿ ಕೇಳ್ವುದಸ್ತ್ರಾಗಮದ ಸೂತ್ರಮಿದು ಸರಿಗಮಪದ ಸ್ವರಗಳ
ಗಂಧರ್ವವೇದ ತಂತ್ರಗಳಲ್ಲ ವೀರರಸ
ಮೊಂದಿದ ದನುರ್ವೇದಮುತ ಕಣಾ ಸಮರ ನಿ
ನ್ನಿಂದ [1]ನೂಕದು[1] ವಿತ್ತನಾಥನಂ ಬರಿಸು ನಿನ್ನನು ಕೊಲ್ಲೆವಾವೆಂದನು ೨೭

೨೭ 1. ಮಾಗದು

ಎನಲು ಕಡು ಮುಳಿಸಿನಿಂ ನುಡಿದನೆಲೆ ಭೂಪ ನ
ಮ್ಮನುವ ಪರಿಕಿಸದಿಂತು ಪೇಳ್ವೆಯಾದಡು ಕವಚ
ಧನುಗಳಳಿಯಲ್ಕೆ ಕಲಿಮನದ ಕೆಚ್ಚಳಿಡಪುದೆ ಜಲದಿಂದಲಗ್ನಿ ನಸಿಯೆ
ವನಧಿಗತಬಡಬಾಗ್ನಿಯಡಗುವುದೆ ಕಟಕಿವಾ
ತಿನ ಮೊನೆಗೆ ವೀರರೆದೆಯಲುಗುವುದೆ ಧನಪನಂ
ನೆನೆಯಲೇಕೀಗ ನೋಡೆಂದು ಪಲ್ಮೊರೆದು ಪೆರ್ಗದೆಯನಾಂತಿದಿರೇರ್ದನು ೨೮

ಕೊರ್ವುಗೆಡದಿವಗೆ ಸಮರವ ಗೆಲ್ವೆನೆಂದೆಂಬ
ಗರ್ವಮನ್ನಡಗಿಸುವೆನೆಂದೆನುತಲಾಗ ಮುಗಿ
ಲೇರ್ವಡಿಸುತಿಹ ಮಹಿಮೆಯುಮರಿದ ಮಹಾಸ್ತ್ರಮಂ ಪೂಡಿ ಮೊರೆದಾರ್ದೆಸೆಯಲು
ಉರ್ವಿಯಿಂದೆತ್ತಿ[1]ಕೊಂಡೊಯ್ದು[1] ವಿತ್ತಾಧಿಪನ
ಪರ್ವಿದ ಮಹಾಸಭೆಯಲಿಳುಹಲತಿ ಬೆರಗಿನಿಂ
ನಿರ್ವಿಣ್ಣರಾದರೆಲ್ಲಾ ಜನರ್ ಧ್ರುವನ ಭುಜಬಲದುನ್ನತಿಯ ಪೊಗಳುತ ೨೯

ಕೆಡೆದ ಗಂಧರ್ವಪತಿಯಂ ನೋಡಿ ಯಕ್ಷಪತಿ
ನುಡಿಸಿದಡೆ ಬಲ್ಮೊರ್ಛೆಯಿಂದವಂ ನುಡಿಯದಿರೆ
ತೊಡರಿದುರುರೌದ್ರದಿಂ ನರನ ಬಲುಹಂ ಕಾಣಲಹುದೆಂದು ಬಲ ಸಹಿತದಿ
ಒಡೆಯದಿರದಿಂದು ದಿಕ್ತಟಗಳೆಂಬಳತೆಯು
ಗ್ಗಡದ ರಣಭೇರಿಗಳ ಮೊರಹಿನಿಂ ಸಿಂಜಿನಿಯ
ಮಿಡಿದು ಚಾಪವನೊವರಿ ಪೊರವಂಟನುತ್ತಾನಪದನಣುಗನಾವನೆನುತ ೩೦

ಕಂಡನೀ ತೆರದಬ್ಬರದಿ ಬರುವ ಭುಜಬಲೋ
ದ್ದಂಡ ಧನಪನ ಬಲಸಮುದ್ರಮುನ್ನಿದಿರಿನೊಳ
ಖಂಡವಿಕ್ರಮದಿಂದೆ ಘಟಜನಾಯತವಾಗಿ ಪೊಸಮಸೆಗಳಿಂ ಪೆಚ್ಚಿದ
ಚಂಡಬಡಬನ ಪೋಲ್ವ ಕೋಲ್ಗಳಿಟ್ಟೆಡೆಗೆ ಬ್ರ
ಹ್ಮಾಂಡವೆಡಮುಬ್ಬದೆನಲಸಮಸಂಧಾನದಿಂ
ದಿಂಡುರುಳ್ಚಿದ ಯಕ್ಷ ಸೇನೆಯಂ ಮನುಪೌತ್ರನಿದಿರೇರ್ದು ಬೀದಿವರಿಸಿ ೩೧

೨೯. 11 ಡ್ಯೆದಿ

ಶೊಡರಿ ತಟ್ಟುಗಿದು ಬಗಿದಾವರಿಸಿ ಡಾವಸಿರಿ
ಕಡಿದು ತೆರಿದೂರಿ ಬಳ್ಪೋಳ್ಗೈದು ಸೀಳ್ಗೈದು
ತಡೆದು ಕೊರೆದಿಡಿದು ಮೊರೆದಬ್ಬರಿಸಿ ಗಬ್ಬರಿಸಿ ತುಡುಕಿ ತುಂಡಿಸಿ ಖಂಡಿಸಿ
ಪಿಡಿದಿಕ್ಕಡಿಸಿ ಕವರಿಯುಪ್ಪರಿಸಿ ಚಪ್ಪರಿಸಿ
ಜಡಿದು ಬಂಧಿಸಿ ಸವರಿಕೊಯ್ಕೊಯ್ದು ಪೊಯ್ಪೊಯ್ದು
ಸಿಡಿದು ಕಬಳಿಸಿ ಕಚ್ಚಿ ಬಲವ ಬರಿಗೈದವಾ ಧ್ರುವನ ಕೆಂಗರಿಗೋಲ್ಗಳು ೩೨

ಇಬ್ಬಾಗೆಯಾದ ಗಜಸೀಳುಗಳ್ ಮೇಲ್ವಾಯ್ದು
ಗಬ್ಬರಿಸಲುರುಳ್ದ ರಥ ಚಕ್ರಗಳ್ ಚಿಗಿಚಿಗಿದು
ದಬ್ಬಿದಡೆ ಕೆಡೆದು ಸಾಲ್ಗುದುರೆಗಳ್ ಚಿಮ್ಮುತಿಹ ಖುರಘಾತದುರುಬೆಯಿಂದೆ
ನಿಬ್ಬರದಿ ಬೀಳ್ವ ಪೇರೊಂಟೆಗಳ್ ತಳಕೆ ಕೆಡೆ
ದುಬ್ಬಸದಲಳಿವ ಕಾಲಾಳುಗಳ್ ತನಿರಕ್ತ
ಕೊಬ್ಬುಗಳ ಮಡುಹಿನಿಂದುರುಭಯಂಕರವಾದುದೇನೆಂಬೆನದ್ಭುತವನು ೩೩

ಕರಿಪೋಳ್ಗಳೆರಗೆ ಕುದುರೆಗಳನಪ್ಪಳಿಸಿದವು
ತುರುಗಖಂಡಗಳು ಕಾಲಾಳ ನೆಗ್ಗೊತ್ತಿದುವು
ಮೆರೆವಾಳ್ಗಳಟ್ಟೆಗಳ್ ರಥಗಳಂ ಮಗುಚಿದವು ರಥಚಕ್ರಪೋಳ್ಗಳುರುಬಿ
ಕರಖಡ್ಗಚಾಪಾಯುಧಂಗಳಂ ಸವರಿದವು
ಮುರಿದಾಯುಧಗಳೇರ್ದು ಬಲವ ಸಂಹರಿಸಿದವು
ಪರಿಯನೇವಣ್ಣಿಸುವೆ ಯಕ್ಷನಾಥನ ಸೇನೆ ಪುಡಿವಟ್ಟುದಾ ಕ್ಷಣದೊಳು ೩೪

ಒಡನೊಡನೆ ತೊಡತೊಡರ್ಚಿಡುವ ಧ್ರುವನಸ್ತ್ರಗಳ್
ಎಡೆವಿಡದೆ ಘುಡುಘುಡಿಸಿ ಕಿಡಿಗಳಂ ಕರೆದು ರಿಪು
ಪಡೆಗಡರಿಯೊಡಲುಗಳನೊಡೆದೊಡೆದು ಕೆಡಹುತಿರಲಡಿಗಡಿಗೆ ಕಡುವೀರರು
ನಡುನಡುಗಿ ನಡೆಗೆಟ್ಟು ಪಿಡಿದ ಕೈಖಡುಗಗಳ್
ಸಡಿಸಡಿಲಿ ಕೆಡೆವುತಿರೆ ಕಡುಹಡಗಿ ಕಾಯದೊಳ್
ತೊಡತೊಡರುವಂಬಿನಿಂ ಕಡೆಯೊಡೆದು ವೀರಭಟರೆಡೆಗೆಟ್ಟುದಾಕ್ಷಣದೊಳು ೩೫

---

೩೫. 1 ರಿ ನಡು

ಕಾರ್ದವು ಕರುಳ್ಗಳನ್ನಶ್ವಗಳ್ ತನಿ ಮಿದುಳು
ಸೋರ್ದವು ಮದೇಭ ಮಸ್ತಕಗಳೊಳ್ ಜಾಳಾಂಧ್ರ
ಮೇರ್ದವು ಮಹಾರಥಿಕರಂಗದೊಳ್ ನಾಕನಾರಿಯರ ಪರಿರಂಭಗಳೊಳು
ತೋರ್ದವು ಮಹಾವೀರರಸುವುಗಳ್ ಪರಿಮಿತವ
ಮೀರ್ದವು ಪದಾತಿಕುಲದಳಿವುಗಳ್ ನಿಂದೆಡೆಯೆ
ಜಾರ್ದವು ಪಿತಾಮಯೋದ್ಧರುಸುರುಗಳ್ ಮನುಪೌತ್ರನೆಸುಗೆಯಿಂ ಸಂಗರದೊಳು ೩೬

ಮುರಿದ ಕೈ ಕಾಲ್ಗಳನ್ನೆಳೆವುತಂ ಕಂಗಳಂ
ಬಿರಿಬಿರಿನೆ ಬಿಡುತ ಬಾಯೊಣಗುತಂ ಗಾಯದಿಂ
ಸೊರಗಿ ಸೊಕ್ಕುತ ಬೀಳುತೇಳುತಂ ಕೆದರುಮುಂಡೆಗಳ ಕೇಶಗಳೊಲೆವುತಂ
ಹರಹಿರ್ದ ಕುಣಪಗಳನೆಡಹುತಂ ಮಲ ರಕ್ತ
ಕರುಳು ಮಿದುಳೊಳ್ ಜಾರಿ ಕೆಡೆವುತಂ ದೆಸೆದೆಸೆಗೆ
ಪರಿದು [1][ದಾಯಕ್ಷ][1] ಬಲಜೀವದುಳಿವಂ ಕೋರಿ ವಾಸಿ ಪಂಥಗಳನುಳಿದು ೩೭

ಕೆಡೆದ ಮುರಿಗೈದುಗಟ್ಟುಗಳೇರಿ ಕೊಳಗುಳುದಿ
ಮಡಿದ ಗಜ ದುರ್ಗದಿರುಬಿಲಿ ತೂರಿ ಮಲ ರಕ್ತ
ಮೊಡೆವೆರೆದ ತನಿಗೆಸರಿನೊಳ್ ಜಾರಿ ಮುರಿದಂಬುಮುಳ್ಗಳಂಗಾಲಿಲೇರಿ
ತೊಡರುವ ಕರುಳ್ಬಳ್ಳಿಗಳ ಮೀರಿ ಮೆದೆಗೆಡೆವ
ಕೊಡೆ ದಂಡ ಗುಲ್ಮ ಮರೆಯುಂ ಸಾರಿ ರಣಭೂಮಿ
ಯಡವಿಯೊಳ್ ದೆಸೆಗೆಟ್ಟು [1][ಯಕ್ಷಭಟರೋಡಿದುದು][1]
ಹರಣದುಳುಮೆಗಳ ಕೋರಿ ೩೮

ಕೋಲ್ಗಳೇ ಶಿವಶಿವಾ ಶಾಕಿನಿಯ ಪಟುದಂತ
ಸಾಲ್ಗಳಲ್ಲದೆ ವಿಲಯ ಶಿವನ ಕಿಡಿಗಣ್ಣಿನುರಿ
ಮಾಲ್ಗಳಲ್ಲದೆ ಕಾಲಭೈರವನ ಸಿಡುದಾಡೆ ಪಲ್ಗಲ್ಲದೆ ರವಿಜನ
ಮೇಲ್ಗಯ್ಯ ನರಕ ಪರಿಕರವೆನಿಸುವಸಿಪತ್ರ
ಜಾಲ್ಗಳಲ್ಲದೆ ಮೃತ್ಯುವೆಂಬ ವೃಶ್ಚಿಕನ ತುದಿ
ಬಾಲ್ಗಳಲ್ಲದೆ ಸಾಕುಸಾಕೆಂದು ಹವ್ಯ್ಯಸಿ ಪರಿದರೆಕ್ಷರ್ಕಳನೊಳು ೩೯

---

೩೭. 1 ದೆಕ್ಷೇಶ. ೩೮. 1 ಪರಿದುದೆಕ್ಷೋಭಟರ್

ಮುಂಬರಿದು ನಿಜವಿಕ್ರಮದಿ ಕಾದಿ ಮಡಿದ ಭಟ
ರಂಬರವನಡರುತಿರಲವರ ತನುಗಳನಿಲ್ಲಿ
ಜಂಬುಕಂಗಳ್ತಿನ್ನಲೀಕವರ ಪಿಂತೆ ನಾಕವನೈದಲೆಂದು ಧ್ರುವನು
ಅಂಬಿನಿಂ ಮುಗಿಲೇರಿಸಿದಡಲ್ಲಿ ನಿರ್ಜರ ನಿ
ತಂಬಿನಿಯರೋಸರಿಸಿ ನೂಕಲದರಿಂದೆ ರಣ
ಕುಂಭಿನಿಗುರುಳ್ದುವೆನೆ ಮುಗಿಲೇರಿದಟ್ಟೆಗಳ್ ಕೆಡೆವುವಿನ್ನದ್ಭುತಮೆನೆ ೪೦

ಕಡಲಂತೆ ಶರವಿಮುಕ್ತಾಸುಕಂಧರಮುಯವು
ಪೊಡವಿಯೊಲು ಗಂಧರ್ವಖಂಡ ಜನಪದಮುಯವು
ಮೃಡವಸತಿಯಂತೆ ಶಿವಗಣ ಭೂತಗಣಮುಯವು ಸರ್ಪಸಂಕುಲದಂತಿರೆ
ಅಡಸಿರ್ದ ಭೂರಿ ಸಂಗರಮುಯವು ಪರಿಘಟಿಸಿ
ದುಡುರಾಶಿಯಂತೆ ಹಸ್ತ ಶ್ರವಣ ತನ್ಮಯವು
ಸಡಗರದ ಚೈತ್ರವನದಂತೆ ಸದ್ರಕ್ತಮುಯವಾಗಿ ರಣಮೆಸೆದಿರ್ದುದು ೪೧

ಭೂತ ಗಣ ಕೋಲಾಹಲದಲಮರಿ ಕಡಿಯೊಡೆದು
ಭೂತಳಕುರುಳ್ದ ಕರಿ ಚರ್ಮಮಂ ಪೊದೆದು ವಿ
ಖ್ಯಾತರಹ ವೀರ ಭಟ ಮಸ್ತಕಂಗಳ ರುಂಡಮಾಲೆಯಂ ವಹಿಸಿ ಮತ್ತೆ
ಪಾತತನಿಮಿದುಳೆಂಬ ಭಸ್ಮಲೇಪನದಿಂ ಮ
ಹಾತಿಶಯಕರ ಕಪಾಲವ ಧರಿಸಿ ರಣಮೆ ಸಾ
ಕ್ಷಾತು ಲಯ ರುದ್ರನಿರವಂ ಪೋಲ್ದು ಪಟುಭಯಂಕರಮಾಗಿ
ಕಂಗೊಳಿಸಿತು ೪೨

ವಿಶಿಖಾಳಿಯೆರಗಿ ದಾವಾಗ್ನಿ ತಾನಲ್ಲ ರಂ
ಜಿಸೆ ರಥಾಂಗಾಳಿಗಳ್ ಕಾಸಾರಮಲ್ಲ ಕಡು
ಹೆಸರದಿಂ ಸುರಗಿಖಡ್ಗಗಳ ಸಂಚಲನಮುಮರಿರ್ದು ವನ ದೇಶಮಲ್ಲ
ಪೊಸ ರಾಗ ರಸವೊಪ್ಪಿ ರಾಜಸಭೆಯಲ್ಲ ಶೋ
ಭಿಸುವ ಕಡುಗಲಿ ಕಬಂಧಂಗಳನುವಿದ್ದು ಪೊ
ಹಸರ ತಾನಲ್ಲಮೆನಿಸಿರ್ದುದಾ ರಣಭೂಮಿ ಭೀಕರದ ಬೀಡೆನಿಸುತ ೪೩

ಉದ್ರೇಕದಿಂದಲಿದಿರೇರ್ವ ಮನ್ನೆಯರುಗಳ
ಸದ್ರತ್ನ ಮಕುಟಗಳ್ ಧ್ರುವನೆಸುಗೆಯಿಂ ಜಗಿಯೆ
ತದ್ರಚಿತ ರತ್ನಗಳ್ ಕೆಡೆವವುವು ಸುರರು ಕೆಂಜಾಜಿ ಪೂವಳೆಗರೆವರೋ
ತದ್ರ ಹಸ್ಯವನರಿವಡರಿದೆನಿಸೆ ಶವಗಳಂ
ಗೃಧ್ರಂಗಳೆತ್ತಿ ಮುಗಿಲೇರ್ದು ಚಂಚೂಪುಟದಿ
ಛಿದ್ರಿಸಿವಡೊರೆವ ರಕ್ತದ ಬಿಂದುಮಾಂಸ ಕಡಿಗಳ್ತೋರ್ದುವಾ ಕಳನೊಳು ೪೪

ಒಡಲಿನಿಂ ಪೊರಸೂಸಿ ತೋರ್ಪ ತನಿಗರುಳ್ಗಳಂ
ತೊಡರಿ ರಣಹದ್ದುಗಳ್ ಮುಗಿಲೇರ್ಪಡದರಿನಿಂ
ನಡುವೆ ಜೋಲುವ ಶವಗಳಂಗಮಂ ಪರಿಕಿಸಲು ತಮತಮಗೆ ಹರಕೆವಿಡಿದು
ಒಡೆಯ ಧನಪತಿಯ ಹರಣವನುಳುಹ ಬೇಕೆನುತ
ಕಡುಭಕ್ತಿಯಿಂ ಚಂಡಿಕಾ ದೇವಿಯಂ ಕುರಿತು
ಸಿಡಿಯನಾಡುವ ಪರಿಯಿದಾಗದಿರದೆನಿಸಿರ್ದುದೇನೆಂಬೆನಚ್ಚರಿಯನು ೪೫

ಹರಹರಾ ಇದುವೆ ಬಲ್ ರಣಮೊ ಮಾರಣದೆಡವೊ
ಪರಿಕಿಸಲ್ ಕಾಳಗದ ಕಳವೊ ಹೆರೆ[1]ಹೆಕ್ಕಳ[1]ಮೊ
ಮೆರೆವ ಘನಶರದ ಸಂಗರವೊ ಗರದಾಗರವೊ ಸಿಡಿಲ ಬಿಂಕದ ಸದನವೊ
ಅರಿವಡಿದು ಭೂರಿ ಕೊಳುಗುಳವೊ ರೌಕುಳ ಕುಳವೊ
ನರನಿವಂ ಧ್ರುವನೊ ಕಲಿಜವನೊ ರಣಭೈರವನೊ
ತರಹರಿಸಲಾರೆವಿನ್ನೆಂದು ಮೊರೆಯೇ [2][ರಿಪುದು ಯಕ್ಷಬಲದೆಲ್ಲೆ][2]ಡೆಯೊಳು ೪೬

ಈ ತೆರದಲಿದಿರಾಂತ ಕಲಿಗಳೆಲ್ಲರು ಬಾಣ
ಘಾತಿಯಿಂ ಕೆಡೆಯಲ್ಕೆ ಕಾದಲೊರ್ವರ ಕಾಣ
ದಾತುರದಲರಸುತಬ್ಬರದಲೈತರುವ ತದ್ಧ್ರುವನಬ್ಬಟೆಯ ಕಾಣುತ
ವೀತಿಹೋತ್ರಂಗಾಜ್ಯಧಾರೆಯಿಂ ಪೂರಿಸಿದ
ರೀತಿಯಿಂ ಹೊಗರೇರ್ದ ರೋಷಾಗ್ನಿಯುರುಬೆಯಿಂ
ಭೂತಳವೆ ಕಾಹಿಡಿಯಲಸಮ ಚಾಪವ ಮಿಡಿವುತೈತಂದನಾ ಧನಪನು ೪೭

---

೪೬. 1. ಹೇಕಳ. ೨. ದುರ್ದೆಕ್ಷೋಬಲದಲಾವ

ಬಂದು ಕೂರ್ಗಣೆಗಳಂ ಕರೆವುತವೆ ಸಮ್ಮುಖದಿ
ನಿಂದ ಲಸದಳಕಾಧಿನಾಥನುರು ಸಾಯಕದ
ದಂದುಗವನೆಡೆಮಾರ್ಗದೊಳ್ ಪರಿದು ಮತ್ತೆ ಕೆಂಗೋಲ ತಿರುಹಿಗೆ ತೊಡರ್ಚಿ
ವಂದನಮಿದೇ ವಿತ್ತಪತಿಗಳ್ಗೆ ಮಖಪೂಜ್ಯ
ರೆಂದೆನಿಸಿ ಸಭೆಯೊಳ್ ಹವಿರ್ಭಾಗಮಂ ಕೊಂಬು
ದೊಂದು ಯೋಗ್ಯಮೆ ಸಾಕು ಚಾಪವಿದ್ಯಂಗಳನುಚಿತವು ತಮಗೆಂದೆಚ್ಚನು ೪೮

ಆಗಲಿನ್ನಹುದು ತಪ್ಪಲ್ಲ ನುಡಿ ಭಕ್ತಿಯಿಂ
ಯಾಗದಿಂ ಬಲಗೊಂಬ ನಿಮಗಿನ್ನು ರಂಭಾದಿ
ಭೋಗಮನ್ನನುಗೈಯದಿರಲು ನೀವೆಮ್ಮನರ್ಚಿಸಲೇಕೆ ತತ್ಫಲವನು
ಈಗ ನಿನಗೊದವಿಸಿ ಮಖಾದಿಪೂಜ್ಯತೆಯ ಪಿರಿ
ದಾಗಿ ಪಡೆದಪೆವಿದಂ ಕೊಳ್ಳೆನುತ ಮೊರೆದು ಬಲ್
ಮೇಘಾಸ್ತ್ರಮಂ ಪೂಡಿ ತೆಗೆದೆಚ್ಚನಾ ಕುಬೇರಂ ಸೇನೆ ಕಳವಳಿಸಲು ೪೯

ಕರೆವ ಕಲ್ಲೊರೆವ ಮಳೆಯುರಿವ ಬಡಬಾಗ್ನಿ ಭೋ
ರ್ಗರೆವ ಸಿಡಿಲುಗಳು ಬಾಯ್ದೆರೆವ ಭೂತಗಳು ಮೈ
ಗೊರೆವ ತುಂಬಿಗಳು ನಂಜುರಿವ ಪಾವುಗಳು ಗೋಣ್ಮುರಿವ ಪೆರ್ಮಕರಂಗಳು
ಪರಿವ ನದಿಗಳ್ ಧೂಳ್ಗಳೆರೆವ ಬಿರುಗಾಳಿ ಮುಂ
ಬರಿವ ಕತ್ತಲೆಗಳಿಂತೆರಗಲಾ ಧ್ರುವ ಸೇನೆ
ಮುರಿದು ಕಂಗೆಟ್ಟು ತತ್ತರಗೊಂಡು ದೆಸೆದೆಸೆಗೆ ಪರಿದುದಿನ್ನೇನೆಂಬೆನು ೫೦

ಅಳಿದುದೈ ಧ್ರುವನ ಬಲ ಯಕ್ಷರೊಳ್ ಕದನಮಂ
ಬಳಸಿ ಹರಣವ ಕೊಂಡರೆಂದೆಂಬ ಜಂಗುಳಿಯ
ಕಳಕಳಗಳಂ ನಿಲಿಸೆ ಪವನಾಸ್ತ್ರಮಂ ಪೂಡಿ ಮನುಪೌತ್ರನಾರ್ದೆಸೆಯಲು
ಬಳಸಿರ್ದ ಮೇಘಾಸ್ತ್ರಮುರುಬನಪಹರಿಸಿ ನಿ
ಚ್ಚಳಗೊಂಡು ನಿಮಿಷದೊಳ್ ನಿಖಿಲ ಸೇನೆಯನು ಪೊರೆ
ಗಳೆದ ಪಾವೆನಿಸಿ ಧನಪನ ಪುಷ್ಪಕವನಭ್ರಮಂಡಲಕ್ಕೇರ್ಗೊಳಿಸಿತು ೫೧

ಆಕ್ರಮಿಸಿ ಬಿರುಗಾಳಿಯಭ್ರಪಥದಿ ಕುಲಾಲ
ಚಕ್ರದಂತಾ ರಥವ ತಿರುಗಿಸುತ ಮೇಲ್ವರಿದು
ಶಕ್ರಪುರಮಂ ತೋರಿ ಬಳಯಿಸಲ್ ಬೆರಗೊಂದಿ ತದ್ಧ್ರುವನ ಮಂತ್ರಾಸ್ತ್ರದ
ವಿಕ್ರಮವ ಪೊಗಳಿ ಧನಪತಿಯು ಸರ್ಪಾಸ್ತ್ರವನು
ಪಕ್ರಮಿಸಿ ಬಿಡಲು ವಾಯವ್ಯಾಸ್ತ್ರ ನಿಜಬಲಕೆ
ವಕ್ರಮಂ ಗೈದು ಧರೆಗಿಳುಹಲ್ಕೆ ಮತ್ತೆ ಕೆಂಗೋಲ್ಗರೆವುತಿದಿರಾಂತನು ೫೨

ಕಳವಳಿಸುತಿದಿರ್ಗೈದುವನಿತರೊಳ್ ಮಾರ್ಗಣವ
ಸೆಳೆದು ಬಿಡಲಾರ್ಭಟಿಸುತೆರಗಿವಡೆ ರಥವೆ ಹಿಂ
ದಳೆದು ದಶಯೋಜನಕ್ಕೆರಗೆ ನಿಜ ಸತ್ವದಿಂ ಧನಪ ಮತ್ತಿದಿರೇರಲು
ತಳುವದೀ ತೆರದಿಂದೆ ಮೇಲೆ ಮೇಲೆಸೆಯೆ ಹಿಂ
ದಳವುತವು ಮತ್ತೆ ಬಂದೊದಗುತವು ಹಾಸಿಡುವ
ಕೋಳವಿಯಂತೆಡೆಯಾಡುತಿರ್ದುದರೆಯಾಮ ಪರಿಯಂತ ರಥಮದ್ಭುತಮೆನೆ ೫೩

ಪ್ರೂತುರೇ ಧ್ರುವ ಧನುರ್ವಿದ್ಯಾ ರಹಸ್ಯದೊಳ್
ಚಾತರ್ಯಶೀಲನಹೆ ಗುಣಕೆ ಮತ್ಸರವೆ ಮನು
ಜಾತಸುತನೆಂದು ಕೈತಡೆದೆವಿನ್ನೆಗಮೀಗಲಾದಡು ಸಜೀವದಿಂದೆ
ನೀ ತೆರಳು ನಿಜಪುರಿಗೆ ವಿಜಯಮಂ ಪಡೆವೆನೆಂ
ಬಾತುರವ ಮರೆದು ಕಳೆ ಕಾದಲೆಳಸುವಡೆ ನಿಜ
ಮಾತಾಪಿತರ ನೆನೆದು ತನುವಿನಾಸೆಯುಸುಳಿದು ನಿಲ್ಲೆನುತ ತೆಗೆದೆಚ್ಚನು ೫೪

ಆರರೆ ತಪ್ಪೇನಶನ ¹ಮಕ್ಕಿ¹ದುರು ಗರ್ವದಿಂ
ಗರವನುಣಲಹುದು ಗಡ ಕಪಟದಿಂದಡವಿಯೊಳ್
ಸುರುಚೀ ಕುಮಾರನನ್ನಿರಿದ ಸೊಕ್ಕಿಂದಲೆಮ್ಮೊಳು ಸೆಣಸಲಿಚ್ಛೈಸಿದ
ಪರುಠವಕೆ ಕೈಗುಣವ ಕಾಣ್ಬಡಿಸಿ ಬಳಿಕೆಮ್ಮ
ಗುರು ಹಿರಿಯರಡಿಗಳಂ ನೆನೆವುತವು ವಿಜಯದಿಂ
ತೆರಳುವೆವು ನಿಜಪುರಿಗೆ ಭವದಾಜ್ಞೆಯಂ ಮೀರೆವೆಂದೆನುತ ತೆಗೆದೆಚ್ಚನು ೫೫

---

೫೫. 1. ದಕ್ಕ.

ಎಚ್ಚ ಸರಳೆರಗಿ ಕೈವಿಲ್ಲು ಕವಚಂಗಳಂ
ಕೊಚ್ಚಿ ರಥವಾಜಿ ಸಾರಥಿ ಕೇತು ಪಟಗಳಂ
ನಿಚ್ಚಳಿಸಿ ಮತ್ತೆ ಶಂಕರ ಮಿತ್ರನಂಗದೊಳ್ ಜಾಳಾಂಧ್ರಮಂ ರಚಿಸಲು
ಉಚ್ಚರಿಸಲೇನು ಜವಗುಂದಿ ರಿಪುಸತ್ವಕಂ
ಬೆಚ್ಚಿ ಮೌಸವನಾಂತು ಗೆಲುವಾತುರವ ನೂಕಿ
ಹುಚ್ಚುಗೊಂಡಂತೆ ಮುಮ್ಮಾರ್ಗವಳವಡದೆ ಪದ ಚರನಾಗಿ ನಿಂದಿರ್ದನು ೫೬

ಧನಪನೆಸುವಸ್ತ್ರಂಗಳೆಡೆ ಮಧ್ಯದೊಳ್ ಧ್ರುವನ
ಘನ ವಿಕ್ರಮಾಗ್ನಿಗೆ ಸಮಿತ್ಪ್ರಾಯವಾಗುತಿರೆ
ಕನಲಿ ಮನುಪೌತ್ರನಿಡುವಂಬುಗಳ್ ವಿತ್ತೇಶ ಬಲ ಸಮುದ್ರವನೀಂಟುವ
ಹೊಸಲು ಬಾಡಬನ ಕಿರಣಂಗಳೆನಿಸಿಸಲದ
ನ್ನನಿಮಿಷರ್ನೋಡಿ ತಲ್ಲಣಿಸುತಿರೆ ದಿಕ್ಪಾಲ
ತನಕೂಣೆಯವು ಬಾರದಿರದೆಂದು ಸುರ ಮಂತ್ರಿಯೊಡನಿಂದ್ರ ನಿಂತೆಂದನು ೫೭

ಆಚಾರ್ಯ ಕೇಳ್ ಕುಬೇರನ ವಿಕ್ರಮಾಗ್ನಿಯದು
ಸೂಚಿಪುದು ಹೋಮಾಂತ ಪಾವಕನ ಮಹಿಮೆಯಂ
ಲೋಚನತ್ರಯ ಸಖನ ಶೌರ್ಯ ರುಚಿಯಪರ ದಿಗ್ರವಿ ಕಿರಣಮೆನಿಸಿರ್ಪುದು
ಗೋಚರಿಸದಿದರ ನಿಷ್ಕೃತಿಯು ಪರಿಹಾರಮ
ನ್ನಾಚರಿಪುದಾವ ಮುಖದಿಂದೆನಲ್ ಮಂತ್ರಮಂ
ವಾಚಸ್ಪತಿಯು ನುಡಿದನಜನ ಮುಖದಿಂದಲ್ಲದಿದುವೆ ಹರಿವಾಗದೆನುತ ೫೮

ಎನಲಾಗ ಸಪ್ತಋಷಿಗಳನನಿಲ ವೇಗದಿಂ
ವನಜಾಸನನ ಪೊರೆಗೆ ಕಳುಹಲವರೈತಂದು
ವಿನಯದಿಂ ಬಿನ್ನವಿಸಿದ ಧ್ರುವ ಧನೇಶರ್ಗೆ ಬಲಿದ ಸಂಗರವನುವನು
ಕೊನೆ ಮೊದಲನಾರೈದು ಹರಿಯ ಪೂರ್ಣಾಂಶೆಯಿಂ
ತನುವಿಡಿದ ತತ್ಸುನೀತ್ಯಾತ್ಮಜನ ಪರಿಕಿಸದೆ
ಮನುಜನೆಂದೆಣಿಸಿ ಸೆಣಸಿದನಾ ಕುಬೇರನೆಂದಾತ್ಮಭೂ ಚಿಂತಿಸಿದನು ೫೯

ಒಲ್ಮೆಯಂ ಪಡೆದು ಹರಿಯಡಿಗಳಂ ಕಂಡ ನಿ
ಷ್ಕಲ್ಮಷ ವಿಶಾಲ ಹೃದಯರಸಮರರಾದಡುಂ
ಬಲ್ಮೆಯಿಂ ಗೆಲಲಹುದೆ ರವಿ ಭುವಿಗೆ ಮಿತ್ರನೆನಿಸಲ್ ಕತ್ತಲೆಗೆ ಮಿತ್ರನೆ
ಕಲ್ಮಹಾ ಮಳೆಯಿಂದೆ ನೆನೆದು ಮೃದುವಾಗುವುದೆ
ಪುಲ್ಮನುಜರಂತೆ ಹರಿಶರಣರಳುಕುವರೆ ಸಲಿ
ಸಲ್ ಮನುವನಟ್ಟದಲ್ಲದೆ ನೆರೆಯದೆಂದು ವಿಧಿ ಮನದಿ ನಿಶ್ಚಯಗೊಂಡನು ೬೦

ಪುತ್ರನಹ ಮನುವ ಕರೆವಜನು ನಿಯಮಿಸಿದ ಹದ
ಮಿತ್ರಪುರಿಗೈದಿ ನಯ ನೀತಿಯಿಂ ನಿನ್ನ ನಿಜ
ಪೌತ್ರನಂ ತಿಳುಹಿ ಕದನವ ನಿಲಿಸಿ ಮತ್ಸರವ ಮರೆಸಿ ಧನಪನ ಮನ್ನಿಸಿ
ಧಾತ್ರಿಯೊಳ್ ವಿಖ್ಯಾತಿವಡೆವುದೆನಲಾ ಮನುವಿ
ಧಾತ್ರಗಭಿನಮಿಸಿ ಪುಷ್ಕರ ಪಥದಲೆರಡನೆಯ
ಮಿತ್ರನುದಯಿಸಿದಂತೆ ಸಮರಭೂಮಿಯ ಸರಿಸಕೆಳೆದ ಮುನಿನಿಕರ ಸಹಿತ ೬೧

ಇತ್ತಲಾ ಧ್ರುವನು ರಣ ಭೂಮಿಯೊಳ್ ಮಾರಾಂತ
ವಿತ್ತಪತಿಹರಣಮಂ ಕೊಂಬ ದಿವ್ಯಾಸ್ತ್ರಮಂ
ಬತ್ತಳಿಕೆಯಿಂದೆ ಸೆಳೆವನಿತರೊಳ್ ದಿಗ್ವ್ಯಾಪ್ತ ತೇಜೋ ಮರೀಚಿಯಿಂದೆ
ಸುತ್ತಲೆರಗಿದ ದೇವಋಷಿಗಳಿಂ ಸದ್ರತ್ನ
ತೆತ್ತಿಗೆಯ ಬೆಳಗಿನ ವಿಮಾನದಿಂ ರಣಭೂಮಿ
ಯೊತ್ತಿನೊಳಗಿಳಿದು ನಡೆತಂದನಾಗುಭಯಬಲ ಜಯಜಯ ಧ್ವನಿ
ಮೊಳಗಲು ೬೨

ಗಜಬಜಿಸಿ ಬಂದು ನಮಿಸುವರ ಮನ್ನಿಸುತ ಪ
ದ್ಮಜ ತನಯನಾ ಧ್ರುವನ ಸರಿಸಕೈತರಲವಂ
ನಿಜ ಚಾಪಮಾರ್ಗಣಂಗಳನಿಳುಹಿ ಭಕ್ತಿಯಿಂ ಬದ್ಧಾಂಜಲಿಗಳಮರಲು
ಭಜಿಸುತಂ ಜಯಜಯ ನಿನಾದಮನ್ನೇರ್ವಡೆದ
ಭುಜಗಳಿಂದಮರಿ ಬಲವಂದು ಮನುವಿನ ಪದಾಂ
ಬುಜಗಳ್ಗೆ ಮಸ್ತಕವನೊಂದಿಸಿದ ಮನುಮಹಾತ್ಮನ ಮನವು ಪೊರೆದುಬ್ಬಲು ೬೩

ಸಲ್ಲಲಿತ ಹರ್ಷದಿಂ ಪೌತ್ರನಂ ಪಿಡಿದೆತ್ತಿ
ಗಲ್ಲಮನವುಂಕಿ ಮುದ್ದಿಸಿ ಮೋಹದಿಂ ಸರಸ
ಸಲ್ಲಾಪ ಮಿಗಲು ಕುಶಲಂಗಳಂ ಬೆಸಗೊಂಡು ಕಲಹಮೆರಗಿದ ಮೂಲಮಂ
ಫುಲ್ಲನಾಭಂ ಸುಪ್ರಸನ್ನನಾದಾ ಕಥನ
ಮೆಲ್ಲಮಂ ಕೇಳ್ದು ಮದ್ವಂಶ ಜಾತರ ಪಂಕ್ತಿ
ಯಲ್ಲಿ ನಿನ್ನಂದದ ಮಹಾತ್ಮರಿನ್ನಾರಕಟ ಧನ್ಯತಮರಾವೆಂದನು ೬೪

ಕೆರಳಿ ಸಭೆಯಿಂ ಸೆಳೆದು ನೂಂಕಿದುಪಮಾತೆಯನೆ
ಗುರುವೆಂದು ಬಾಲ್ಯಮೇ ವಾರ್ಧಕ್ಯಮೆಂದು ದು
ಸ್ತರ ಕಾನನಮೆ ರಾಜ ಗೃಹಮೆಂದು ತನುನಿಗ್ರಹವೆ ರಾಜಭೋಗವೆಂದು
ದೊರೆತನಮೆ ತಪವೆಂದು ಸಿಂಹ ಭೇರುಂಡ ಪುಲಿ
ಕರಡಿಗಳ್ ಬಲಮೆಂದು ಹರಿಯೊಲ್ಮೆಯೇ ನಾಶ
ವಿರದ ಬೊಕ್ಕಸಮೆಂದು ಬಗೆದ ಮಹಿಮನು ನಿನಗೆ ರಿಪುಗಳವನಿಯಲಿಪ್ಪರೆ ೬೫

ಬಾಲತ್ವದಲೆ ಬಂಧುಬಳಗ ಮಮತೆಯ ಮೋಹ
ಜಾಲ ಬಂಧನವ ಪರಿದುಗ್ರತಪದಿಂದೆ ಸಿರಿ
ಲೋಲನಂ ಸುಪ್ರಸನ್ನತೆಗೊಳಿಸಿ ಸಶರೀರದಿಂದಬ್ಜ ಭವ ಲೋಕದ
ಮೇಲುಭಾಗದಲಿ ಸುಸ್ಥಿರ ಮಂಡಲವ ಪಡೆದ
ಶೀಲಕಿನ್ನಿದಿರುಂಟೆ ಹರಿಯಾಜ್ಞೆಯಿಂದಲೀ
ಭೋಲೋಕ ಸಿರಿಗೆ ಮನವನ್ನಿತ್ತುದಲ್ಲದಿವರಾಗು ಹೋಗಿರದೆಂದನು ೬೬

ಪೋತ ಕೇಳ್ ಸಚರಾಚರಗಳ ಪೆಸರಾಂತ ಬಹು
ಭೂತಂಗಳೆಂಬ ಮಣಿಗಣಕೆ ಸೂತ್ರಾಯತದಿ
ಶ್ರೀ ತರುಣಿಯರಸ ಚೇತನರೂಪಿನಿಂದೆ ಚೇಷ್ಟಿಸುತಿರಲಖಂಡವಾಗಿ
ನೀ ತಳೆವೆ ಖತಿಯನಾರೊಡನೆ ಪಗೆಯಾರು ನೀ
ಘಾತಿಸುವೆ ಯಾವರಂ ನೋಡಲುನ್ನತ ಪದದ
ಭೂತಹಿತಮಂ ಮರಸಿ ಮಲಿನರಾಗದ್ವೇಷಮಾವಹಿಸಿತಕಟೆಂದನು ೬೭

ಪೆತ್ತವಳನೋಸರಿಸಿ ದಾಸಿಯಂ ನೆಮ್ಮಿದರ
ವೃತ್ತಿಯನ್ನನುಸರಿಸಿ ಪಾರಮಾರ್ಥಿಕದನುವ
ನೊತ್ತರಿಸಿ ಮಲಿನ ಮಾಯಾ ಮೋಹ ಜಂಜಡದ ರಾಗರಂಜನೆಯ ವಹಿಸಿ
ಉತ್ತಮನ್ನಪಾಲನಂ ಯಕ್ಷರುಗಳಿರಿದವ
ಮರ್ತ್ತವರ ನಾ ಕೊಲುವೆನೆಂಬ ಪಿರಿಪಜ್ಞಾನ
ಮೊತ್ತಲಿಸಿತಹಹ ನಿನ್ನಂದದ ಮಹಾತ್ಮನ ವಿವೇಕವುಂ ಭಳಿರೆಮಾಯೆ ೬೮

ಕೊಲುವುದೇ ಪ್ರಾರಬ್ಧ ಜನ್ಮಕರ್ಮಂಗಳಂ
ಗೆಲುವುದೇ ವಿಜ್ಞಾನ ನಿಖಿಲ ಬಂಧಂಗಳಂ
ಬಲಿವುದೇ ಮಮಕಾರವಖಿಲ ದುಃಖಂಗಳಂ ಪರಿವುದೇ ಗುರುಕರುಣವು
ನಿಲುವುದೇ ಪರ ತತ್ವ ಭಯ ಶೋಕಗಳ ಬಲೆಗೆ
ಸೆಳೆವುದೇ ತನು ಮೋಹ ಪರಮಾರ್ಥ ನಿಶ್ಚಯವ
ತಿಳಿವುದೇ ಸುವಿವೇಕಮಿಂತಿರಲು ಕೊಲುವರಿನ್ನಾರು ಹರಿಯಾಜ್ಞೆಯಿರದೆ ೬೯

ಅರಿಯಲಿನ್ನಾರ ಚೇತನಬಲದಲೊಡಲು ಸಂ
ಚರಿಸುವುದದಾರ ತೇಜೋಬಲದಲಿಂದ್ರಿಯಗ
ಳೆರಗುತಿಹವಾರ ಸುಪ್ರಜ್ಞೆಯಿಂ ಕರಣಗಳ್ ಸ್ಫುರಿಸುತಿಹವಾ ಪ್ರಕೃತಿಯು
ಮರೆಸಿ ಸಹಜಾರ್ಥಮನ್ನಾರ ಬಲುಹಿಂದಲಾ
ವರಿಸಿಹಳ್ ಮೂಲೋಕಮಂ ತಿಳಿದು ನೋಡಲಾ
ಹರಿಯೇ ಸ್ವತಂತ್ರಿ ನಾಟಕ ಸೂತ್ರಧರನಲ್ಲದನ್ಯರಿಂಗೊಡಬಡುವುದೆ ೭೦

ಕಲ್ಪಿಸುವನಖಿಲಭೂತಂಗಳನ್ನಾವಗಂ
ಶಿಲ್ಪಿಯಂದದಲಿ ಪರಮೇಷ್ಟಿ ರೂಪಿಂದಲಹಿ
ತಲ್ಪ ರೂಪಿಂದೆ ಪಾಲನೆಗೈವನೆಸೆವ ಗಿರಿಜಾ ಕಾಂತ ರೂಪಿನಿಂದೆ
ಕಲ್ಪಾವಸಾನಮನ್ನೊಂದಿಸುವನಮಲ ಸಂ
ಕಲ್ಪನಹ ನಾರಾಯಣನ ಸೂತ್ರಮಲ್ಲದಿ
ನ್ನಲ್ಪ ಜೀವಿಗಳು ಕೊಲ್ವರು ಕಾವರೆಂದು ಬಗೆವುದು ಮೂಢ ಮತಮೆಂದನು ೬೧

ಪ್ರಕೃತಿಯನ್ನೊಡ್ಡಿ ತನ್ಮುಖದಿಂದೆ ಬಹುಭೂತ
ವಿಕೃತಿಯಂ ತೋರ್ಪಡಿಸಿ ಬೇರುಬೇರಾಗಿ ತ
ತ್ಸುಕೃತ ದುಷ್ಕೃತದೆಸಕಮಂ ಬಲಿದು ತದನುಸಾರದ ಗತಿಗಳಂ ಕಲ್ಪಿಸಿ
ವಿಕೃತಿಯಿರದ ಪರಾತ್ಮಕಳೆಯನೇ ಜೀವನೆನೆ
ಪ್ರಕೃತದೊಳ್ ಕಾಣ್ಬಡಿಸಿ ಮೋಹಪಾಶದಿ ಬಿಗಿವ
ಪ್ರಕೃತಿಯಂ ಸುಳಿಸುವವನುಳಿಸುವವನಳಿಸುವವನರಿಯೆ ಹರಿಯಲ್ಲದಿಹರೆ ೭೨

ಭೂತದಯದಿಂದಧಿಕ ಪುಣ್ಯ ಸಾಧನಮಿರದು
ಭೂತ ಹಿಂಸೆಯ ಮೀರ್ದ ಪಾಪ ಕರ್ಮಗಳಿರವು
ಭೂತೇಶಗಿಂ ಪಿರಿದು ದೈವಮಿನ್ನೊಂದಿರದು ಭೂತಿಗಿಂ ತಪೂಮಿರದು
ಭೂತಳವನುಳಿದು ಕೃಷಿ ಕರ್ಮಕೆಡಮಿರದಂತೆ
ಭೂತಹಿತಮಿರದೆ ಪರಗತಿಯೊದಗದದರಿನಿಂ
ಭೂತಗೊಲೆಯೆನಿಪ ಸಂಗ್ರಾಮಮಂ ಬಿಡುವುದಲೆ ತನಯ ನೀನೀಗೆಂದನು ೭೩

ಕೇಲಿಪಂ ಸೃಷ್ಟಿಯಂ ಸ್ರಷ್ಟರೂಪಿಂದೆ ಪರಿ
ಪಾಲನೆಯನೆಸಗುವಂ ವಿಷ್ಣುರೂಪಿಂದೆ ಕಡೆ
ಗಾಲಮನ್ನೈದಿಪಂ ರುದ್ರರೂಪಿಂದೆ ತನ್ನನು ವಿಭಾವಿಪ ಮಹಿಮರ
ಶೀಲದೊಳ್ ಬೆರೆದಿಹಂ ಭಾವರೂಪಿಂದೆ ಜನ
ಜಾಲಮಂ ಚೇಷ್ಟಿಪಂ ಜೀವರೂಪಿಂದೆ ಸಿರಿ
ಲೋಲನಲ್ಲದೆ ಚರಾಚರಕೆ ನಿಜ ಚೇಷ್ಟೆ ಸಲ್ವುದೆ ಪರಿಕಿಸುವಡೆಂದನು ೭೪

ಪರರ ಕೊಲೆ ಪಾಪನೆಲೆ ಮುರಿವ ಮೃತ್ಯುವಿನ ಬಲೆ
ಪರನಿಂದೆ ಭವಬಂಧ ದುರಿತ ರಾಶಿಯ ಬೃಂದ
ಪರರಲಸು ಜವನ ಮುಳಿಸಘಸಂತತಿಯ ಬೆಳಸು ಪರತಾಪ ನರಕಕೂಪ
ಪರರಳಲುಪಟಿದೆಳಲು ಕೊಲುವಂತಕನ ಹೊಳಲು
ಪರಶೋಕ ಕಾಲಮುಖ ಪಚಿಪ ಕುಂಭೀಪಾಕ
ಪರರಸಿರಿವಾತುರವ ಪಿರಿದದರಿನಿಂ ದಯಾಪರತೆಯಂ ಬಗೆಗೊಂಬುದು ೭೫

ಬಹುಭೂತ ಹಿಂಸೆಯಾದೀ ಸಂಗರವು ನಿನಗೆ
ವಿಹಿತಕೃತ್ಯಮದಲ್ಲ ಯಕ್ಷಮಾರಣ ಮತವ
ವಹಿಸದಿರು ಮತ್ಸರವ ಮರೆದು ಕಳೆವುದು ನಮ್ಮ ಮೇಲಾಣೆ ನಿನಗೆನಲ್ಕೆ
ಅಹಹ ತಪ್ಪಾದುದೆನ್ನಿಂದಲವಿವೇಕದಿಂ
ಸಹಜವೃತ್ತಿಗಳ ಮರೆದಪಚಾರಕಂಗವಿಸಿ
ದಿಹಪರಕೆ ಬಾಹ್ಯನಾದಜ್ಞಾನಿಯಂ ಕಾಯಬೇಕೆಂದು ಮಣಿದನಂದು ೭೬

ಧಾತ್ರೀಶ ತನದ ಮದಮೇರ್ಗೊಂಡು ರಾಜಸವು
ಕ್ಷಾತ್ರತಾಮಸಗಳೇಕಿಭವಿಸಿ ಸುವಿವೇಕ
ಸೂತ್ರಮಂ ಪರಿದು ರಾಗದ್ವೇಷಮಂ ಬಲಿದು ವಿಜ್ಞಾನರೂಪಮಾದ
ನೇತ್ರಮಂ ಬಂಧಿಸಿದಡದರಿನಿಂದುತ್ತಮನ
ಗಾತ್ರಮಂ ಕೆಡಹಿದರ್ಯಕ್ಷರವರಂ ನಿಮಿಷ
ಮಾತ್ರದೊಳ್ ನಾ ಕೊಲುವೆನೆಂದೆರಗಿದಜ್ಞಾನಿಯಂ ಕ್ಷಮಿಸಿ ಸಲಹೆಂದನು ೭೭

ಅಣುಗ ಕೇಳ್ ನೀನಲ್ಲದುಳಿದ ನೃಪರ್ಯಕ್ಷರಂ
ಕೆಣಕಿ ಬಾಳ್ದಪರೆ ಧನಪನ ಬಲವ ಹಿಂಗೊಳಿಸಿ
ಪೊಣರ್ವ ಸಾಹಸಿಗಳಿನ್ನಿದ್ದಪರೆ ಸುರ ನರಾದ್ಯರಲಿ ನೋಡಲು ಮಿಕ್ಕಿನ
ಬಣಗುಗಳ ಪಾಡೇನು ನಿನ್ನ ವಿಕ್ರಮದೇಳ್ಗೆ
ಗೆಣೆಗಾಣೆವಿನ್ನು ಮೂಲೋಕದೊಳ್ ಸಾಕೊಂದು
ಕ್ಷಣಮಾತ್ರಮೀ ಕೀರ್ತಿಯೆಂದು ನುತಿಗೈದು ವಿತ್ತೇಶನೆಡೆಗೈತಂದನು ೭೮

ಬಂದು ಮನು ವೈಯಿಕ್ಕಲಾಗಲಳಕೇಶ ಮಗು
ಳ್ದಂದನೆಯನೆಸಗಿ ತದ್ಧ್ರುವನೆರಗಲಪ್ಪಿ ಬಲ
ವಂದು ಋಷಿವರ್ಗಕಭಿನಮಿಸಿ ಹರಕೆಯನಾಂತು ನುತಿಸಿ ಕುಳ್ಳಿರ್ದ ಬಳಿಕ
ಇಂದುಶೇಖರ ಮಿತ್ರ ನುಡಿದನೀ ಧ್ರುವನ ಬಲ
ಕೆಂದ್ರಾದ್ಯರಿದಿರೆ ಬಾಲತ್ವದೊಳ್ ಚಿತ್ತದೊಳ್
ತಂದು ಹರಿಯಂ ಬಿಗಿದ ಮಹಿಮನೆಮ್ಮನು ಗೆಲ್ವುದರಿದೆ ಮಚ್ಚಿದೆವೆಂದನು ೭೯

ಅಸಮಬಲರಾದ ತವ್ಮೊಡನೆ ಸೆಳಸಿದ ದುರುಳ
ಪಸುಳೆಯಪರಾಧಮಂ ಮರೆದು ರಕ್ಷಿಪುದೆಂದು
ಬಿಸಜಾತತನಯನಾ ಧ್ರುವನ ಕರಮಂ ಪಿಡಿದು ಧನನಾಥಗೊಪ್ಪಿಸಲ್ಕೆ
ಒಸರುವಾನಂದ ಮಿಗೆ ಹರಿಶರಣನಂ ತೊಡರಿ
ಯಸುರಾರಿ ವರಪುತ್ರ ನೀನು ಚಿರಕಾಲಮೀ
ವಸುಮತಿಯನಾಳ್ದು ಸಜ್ಜನರ ಪೋಷಿಪುದೆಂದು ಹರಸಿ ಬೀಳ್ಕೊಟ್ಟನಂದು ೮೦

ಮನುವಿಗಭಿನಮಿಸಿ ತತ್ಪೌತ್ರನಂ ಬೀಳ್ಕೊಂಡು
ಧನಪನಳಕಾವತಿಗೆ ಸೈವರಿದ ಯಕ್ಷಗಣ
ಮನುಮಹಾತ್ಮಕನು ಬಂದೆಮ್ಮ ಹರಣವ ಕಾಯ್ದನೆಂದು ತಮತಮಗೆ ಪೊಗಳಿ
ವಿನಯದಿಂ ತೆರಳಿದರ್ನಿಜಪುರಂಗಳಿಗಿತ್ತ
ಲನುವಿನಿಂ ಪೌತ್ರನಂ ಹರಸಿ ಬೀಳ್ಕೊಂಡು ವಿಧಿ
ತನಯ ತೆರಳಿದನಭ್ರಮಾರ್ಗದೊಳ್ ಸತ್ಯಪುರಿಗಂ ಸದಾನಂದ ಮಿಗಲು ೮೧

ಧನಪನಂ ಜಯಿಸಿ ಮನುವಂ ಪ್ರಸನ್ನತೆಗೊಳಿಸಿ
ಘನತೆಯಂ ಮೆರೆದ ಮಹಿಮೆಗೆ ಮಚ್ಚಿ ಸುರರು ಪೂ
ವಿನ ಮಳೆಯ ಕರೆದಡಾನಂದದಿಂ ನಡೆತಂದು ನಿಜನಗರಿಯನ್ನೈದಲು
ಕೊನರುವತಿಹರ್ಷದಿಂ ಸೌಧಾಗ್ರದಿಂ ನೋಳ್ಪ
ಕನಕಲಲಿತಾಂಗಿಯರು ಕಣ್ವೆಳಗಿನಾರತಿಗ
ಳನುವಿನಿಂದಂಗಕೆ ನಿವಾಳಿಯನ್ನೆರುಪುತಿರಲಸಮ ಬಲನೈತಂದನು ೮೨

ಮೇರೆಯಿಲ್ಲದ ತೂರ್ಯ ವಾದ್ಯ ಘನ ದುಂದುಭಿಗ
ಳಾರವಂಗಳ್ ಮೊಳಗೆ ಗಾಯಕರ ಗಾನ ಕೈ
ವಾರ ಜನದುಗ್ಗಡಣೆಯೊಪ್ಪುತಿರೆ ತತ್ತಕಿಟ ನಾಟ್ಯವರಸೆಗಳಮರಿದ
ವಾರಕಾಂತೆಯರ ಸಂದಣಿ ಮಿಗಲು ನಿಜ ಗೃಹ
ದ್ವಾರಮನ್ನೊಳ ಪೊಗುತಲೊಂದಿಗೆಯ ನಿಖಿಲ ಪರಿ
ವಾರಕಪ್ಪಣೆಯಿತ್ತು ನಿಜ ಮಾತೆಯಂಘ್ರಿಗಳಿಗೆರಗಿ ಸನ್ನುತಿಗೈದನು ೮೩

ಬಳಿಕಾ ಸುನೀತಿ ತನುಜಾತನ ನ್ನಪ್ಪಿಮಂ
ಗಳದೀಪವೆರೆದ ಕದಲಾರತಿಯನೆತ್ತಿ ಹೆಂ
ಗಳ ಮಣಿ ಭ್ರಮಿಯಿಾಡೆಯುರು ಸಹಿತ ಪಸೆಯನೇರಿಸಿ ಒಸಗೆಯಂ ಸಮನಿಸಿ
ಇಳೆಯ ವಿಪ್ರರ್ಗೆ ಬಹು ದಾನದಕ್ಷಿಣೆಗಳಂ
ನಲವಿನಿಂದಿತ್ತು ಸಂತಸದ ಬಲುಹಿಂದೆ ಮನ
ದೊಳಲನೊತ್ತರಿಸಿ ಮಜ್ಜನಭೋಜನಾದಿಯಿಂ ಸಂತುಷ್ಟಿವಡೆದರಂದು ೮೪

ಧ್ರುವಚರಿತ್ರಾಮೃತವನುಂಡು ಸಂಭ್ರಮವೆರೆದ
ಸುವಿವೇಕಿಗಳಿಗೆ ದೀರ್ಘಾಯುರಾರೋಗ್ಯ ವೈ
ಭವ ಪುತ್ರಪೌತ್ರಾಭಿವೃದ್ಧಿಗಳ್ ಸಂಪತ್ಸದಾನಂದ ವಿದ್ಯಾದಿಗಳ್
ಅವಘಟಿಸಿ ಮತ್ತೆ ಲಸದಪವರ್ಗಸೌಖ್ಯ ಗೌ
ರವಗಳೊದಗುವುವಮಲ ಶೇಷಾದ್ರಿವರ ರಮಾ
ಧವ ವೇಂಕಟೇಶ ಕೌಂಡಿಣ್ಯಗುರು ಕರುಣದಿಂ ತಥ್ಯಮೆಂದಾಲಿಸುವುದು ೮೫

ಅಂತು ಅಧ್ಯಾಯ ೧೫ಕ್ಕಂ ಪದನು ೧೨೮೧ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ

ಸದ್ಗುರು ಪರಬ್ರಹ್ಮಣೋ ನಮಃ ಸಮಸ್ತ
ಸನ್ಮಂಗಳಾನಿ ಭವಂತು